NAVAYUGA



JAWAHAR

Standard Diesel Engines and Pumping sets

ಜವಾಹರ್

ಸ್ಟೇಂಡರ್ಡ್ ಡಿಸಿಲ್ ಇಂಜಿನುಗಳು
ಮತ್ತು ಪಂಪುಸೆಟ್ಟುಗಳ

'JAWAHAR' 5 H P Pumping Set

ಅನುಭವಸ್ಥ ರೈತನ ಪ್ರಥಮ ಆಯ್ಕೆ 'ಜವಾಹರ' ಡಿಸಿಲ್ ಎಂಜಿನುಗಳು - ಯಾಕೆಂದರೆ ?

* 'ಜವಾಹರ್' ಕರಳವಾಪ ಮುಚ್ಚಿದ್ದ "ಪೀಟರ್" ತರಹ ಉತ್ತಮ ಸಂಶೋಧನೆಯ ಇಂಜಿನು.
* 'ಜವಾಹರ್' ತಾಂತ್ರಿಕ ತಜ್ಞರ ಕಟ್ಟುನಿಟ್ಟಾದ ಮೇಲ್ವಿಚಾರದಲ್ಲಿ ತಯಾರಿಕೆ.
* 'ಜವಾಹರ್' ಕಾರ್ಖಾನೆಯಿಂದ ಮಾರುಕಟ್ಟೆಗೆ ಬರುವ ಮುಂಚೆಯೇ ದೀರ್ಘಕಾಲದ ವೈಜ್ಞಾನಿಕ ಪರೀಕ್ಷೆಗೆ ಒಳಪಟ್ಟಿರುತ್ತದೆ.
* 'ಜವಾಹರ್' ಅತಿ ಸುಲಭದಲ್ಲಿ ಸ್ಟಾರ್ಟು ಆಗುವಂತೆ ಅಳವಡಿಸಿರುತ್ತದೆ.
* 'ಜವಾಹರ್' ಡಿಸಿಲ್ ಖರ್ಚು ಅತಿ ಕಡಿಮೆ.
* 'ಜವಾಹರ್' ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಲನುಕೂಲವಾಗಿ ನಾಲ್ಕು ಗಾಲಿಗಳ ಟ್ರೋಲಿಯು ಮೇಲೂ ದೊರೆಯುವುದು.
* 'ಜವಾಹರ್' ಕಿರುಕುಳವಿಲ್ಲದ ದೀರ್ಘ ಕಾಲದ ಸೇವೆಯಿಂದಾಗಿ ರೈತನ ಮೆಚ್ಚುಗೆಯ ಸ್ಥಾನಗಳಿಸಿದೆ.

GEECO

Electric Motors, Pumps and Monoblocs.

ಜೀಕೊ

ಇಲೆಕ್ಟ್ರಿಕ್ ಮೋಟಾರುಗಳು,
ಮೊನೊಬ್ಲೋಕುಗಳು ಮತ್ತು ಪಂಪುಗಳು.
ತಾಂತ್ರಿಕ ತಜ್ಞರಿಂದಲೂ, ಅನುಭವಸ್ಥ
ರೈತರಿಂದಲೂ ಮೆಚ್ಚುಗೆಯನ್ನು ಪಡೆದು
ದೇಶದಲ್ಲೆಲ್ಲಾ ಖ್ಯಾತಿಗೊಂಡ ಹೆಸರು ಜೀಕೊ

* ತಯಾರಿಕೆಯ ಸ್ಥಿತಿ ಹಂತದಲ್ಲೂ ವೈಜ್ಞಾನಿಕ ಮೇಲ್ವಿಚಾರಣೆ.
* ಕನ್ನ ಪರಿಮಿತಿಗೊಳಪಟ್ಟ ಕೆಲಸ ಮಾಡುವ ಬಗ್ಗೆ ಪ್ರತಿ ಮೋಟಾರು ಪರೀಕ್ಷೆಗೆ ಒಳಪಟ್ಟೇ ಕಾರ್ಖಾನೆಯಿಂದ ಮಾರುಕಟ್ಟೆಗೆ ಬರುವುದು.
* ಅತೀ ಕಡಿಮೆ ವಿದ್ಯುತ್ ಬಳಕೆಯಿಂದಾಗಿ ಹಣದ ಉಳಿತಾಯ.
* ಮೋಟಾರು ಬಿಸಿಯಾಗದಂತೆ ಉತ್ತಮ ಕರದ ವಿಶೇಷ ವ್ಯವಸ್ಥೆ.
* ಕನ್ನ ಕಾರ್ಯದಕ್ಷತೆಯಲ್ಲಿ ಎಲ್ಲಕಿಂತ ಮಿಗಿಲೆನಿಸಿದೆ.
* ಬ್ರಿಟಿಷ್ ಸ್ಟಾಂಡರ್ಡ್‌ಗನುಗುಣವಾಗಿ ತಯಾರಿಕೆ.



'GEECO' Monobloc Pumpset.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು.

ವಿಕ್ಟರ್ ಟ್ರೇಡಿಂಗ್ ಕೋರ್ಪೊರೇಶನ್, ಫಳನೀರ್ ರೋಡ್, ಮಂಗಳೂರು-1.

ದೀಪಾವಳಿಯ ಶುಭಾಶಯಗಳು !

ಎಸ್. ಸಿ. ಎಸ್. ಮೋಟಾರ್ ಸರ್ವಿಸು

ಮಂಗಳೂರು

ಪ್ರಯಾಣಿಕರ ಸೌಕರ್ಯಕ್ಕಾಗಿ ನಮ್ಮ ಬಸ್ ಸರ್ವಿಸುಗಳನ್ನು ಕೆಳಗಿನಂತೆ ನಡೆಸುತ್ತಿದ್ದೇವೆ.

ಗ್ರಾಮಾಂತರ ಪ್ರದೇಶಗಳಿಗೆ

ಮಂಗಳೂರಿನಿಂದ— ಹೊಸ್ಕಾರ್
ಮಂಗಳೂರಿನಿಂದ— ಕುಪ್ಪೆಪದವು
ಮೂಡಬಿದ್ರಿಯಿಂದ— ಬಿ. ಸಿ. ರೋಡು

ಸಿಟಿ ರೂಟುಗಳು

ಮಂಗಳೂರು	—	ಬಜ್ಪೆ ಸಿಟಿ ರೂಟ್ ನಂಬ್ರ	22
ಹಂಪನಕಟ್ಟೆ	—	ನೀರು ಮಾರ್ಗ "	21
ಹಂಪನಕಟ್ಟೆ	—	ನೀರು ಮಾರ್ಗ "	21
ಹಂಪನಕಟ್ಟೆ	—	ಮರಪ್ಪೂರು "	17
ಹಂಪನಕಟ್ಟೆ	—	ತಲಪಾಡಿ "	43

S. C. S. MOTOR SERVICE

MANGALORE-1

ಸರ್ವರಿಗೂ ದೀಪಾವಳಿಯ ಶುಭಾಶಯಗಳು

ನವಯುಗ

ಸಂಪುಟ ೪೭ ದೀಪಾವಳಿ ಸಂಚಿಕೆ ೧೯೬೭ ಸಂಚಿಕೆ ೯

ಸ್ಥಾಪಕರು: ದಿ. ಎ. ಬಿ. ಶೆಟ್ಟರು ಸಂಪಾದಕ: ಕೆ. ಹೊನ್ನಯ್ಯ ಶೆಟ್ಟಿ

ಬಹುರಂಗೀ ಕುರುಡು ದೀಪಮಾಲೆ

ಪ್ಲವಂಗ ನಾಮ ಸಂವತ್ಸರದ ದೀಪಾವಳಿ ಬಂದಿದೆ. ಮನೆ ಮನೆಯಲ್ಲೂ ಸೊಡರಿನ ಹಬ್ಬ ಆಚರಿಸಲಾಗುತ್ತಿದೆ—ಎಣ್ಣೆ ಬೆಣ್ಣೆ, ಕಾಳುಕಡ್ಡಿ, ಧವಸಧಾನ್ಯ, ಬಟ್ಟೆ ಬರೆ—ಒಂದೇ ಎರಡೇ? ಎಲ್ಲವುಗಳ ಬೆಲೆಯೂ ಗಗನ ಮುಟ್ಟಿದ್ದು ಮೊತ್ತವಲ್ಲ, ಸೂರ್ಯನನ್ನೇ ಹಿಡಿಯ ಹೋದ ಅಂಜನಾಸುತನಂತೆ ಸ್ವರ್ಗ ಲೋಕವನ್ನೂ ದಾಳಿ ಮಾಡಲು ಮೇಲೆ ಮೇಲೆ ಏರುತ್ತಿವೆ, ಇದು ಭಾರತದ ಕಥೆ--ನೈಜ ವೃತ್ತಿ. ಉತ್ಪಾದನೆಯಲ್ಲಿ ಭಾರತೀಯರು ಎಡವಿ ಬಿದ್ದರು; ವಿತರಣೆಯಲ್ಲಿ ಮುಗ್ಗರಿಸಿ ಬಿದ್ದರು, ಕಾಳ ಮಾರುಕಟ್ಟೆಯ ಲಾಭಬಡಕ ಕದೀಮರ ಕೈಯಲ್ಲಿ ಸಿಕ್ಕಿ ಬಿದ್ದು ಕುಸಿದು ಹೋದರು, ಅಂಧಕಾರವೇ ಕವಿದಿದೆ ಅವರಕಣ್ಣುಂದೆ. ಅಧಾವದ ಕಾಲದಲ್ಲಿಯೂ ಇದ್ದುದನ್ನು ಹಂಚಿ ಉಣ್ಣುವ ಸಹೃದಯತೆಯನ್ನಾದರೂ ನಮ್ಮ ಜನಕ್ಕೆ ಕೂಡಿಬಪ್ಪ ಎಂದು ಈ ದೀಪಾವಳಿಯಂದು ಮುರುಕು ದೀಪದ ಹಿಂದೆ ಅಡಗಿರುವ ಭಗವಂತನನ್ನಲ್ಲಿ ಬಡಭಾರತೀಯ ಬೇಡುತ್ತಾನೆ. ಈ ವರ್ಷದ ಸುಗ್ಗಿ ಉತ್ತಮವಾಗಿದೆ,ನಮ್ಮ ಆಹಾರ ಸಮಸ್ಯೆಬಹುಪಾಲು ದೂರವಾಗುತ್ತಿದೆ ಎಂಬ ವಿಶ್ವಾಸನ ಏನುಗ್ರಹಿಸೂಡನ ಸರಕಾರದ ತೀವ್ರ ಕ್ರಮಗಳೂ ಇದಕ್ಕೆ ಕಾರಣವೆನ್ನುವುದಕ್ಕೆ ಆಹಾರ ಮಂತ್ರಿಗಳದ್ದೂ; ಅಮೆರಿಕೆಯ ರಾಯಭಾರಿ ಚೆಸ್ಟರ್ ಬೌಲ್ಸ್ ಅವರದ್ದೂ, "ಅನ್ನದಾತ ಈ ಆತ್ಮವಿಶ್ವಾಸಪೂರ್ಣ ಅಭಯದಾನದಿಂದ ಬಲಿಷಕ್ರಪರ್ತಿಯನ್ನು ಸಂತೃಪ್ತಗೊಳಿಸುವಲ್ಲಿ ಮೈಮರೆಯ ಬಹುದು--ಮುಂದಿನ ವರ್ಷ—ಭಗವಂತನಿಗೂ ಭಕ್ತ ಅಶಾಸನೆ ನೀಡಬಹುದೇನೋ!

ದೇಶದ ಬೆಲೆಯುಬ್ಬರಕ್ಕೆ ಅತಿಪ್ರಮುಖ ಕಾರಣವೂ ಅತಿ ಪ್ರಸರಣಕ್ಕೆ ಕೊರತೆ ಧನವಿನಿಯೋಗವೂ ಒಂದು ಕಾರಣವೆಂಬುದೀಗ ಎಲ್ಲರಿಗೂ ತಿಳಿದಿದೆ. ೧೯೬೨ ರಿಂದಾಚೆಯು ಈ ಮೂರನೆತ್ತು ವರ್ಷಗಳಲ್ಲಿ ತನ್ನ ೧೪ ಆನೆ ಬೆಲೆಯನ್ನು ಕಳೆದುಕೊಂಡಿದೆಯೆನ್ನುತ್ತಾರೆ ಅರ್ಥ ಶಾಸ್ತ್ರಜ್ಞರು. ಅತಿ ಪ್ರಸರಣವೇ ಬೆಲೆಯೇರಿಕೆಗೆ ನಾಂದಿಯೆಂಬುದು ಏಕೆ. ಆದುದರಿಂದ ಬೆಲೆಯಿಳಿಸುವ ಕ್ರಮದಂಗವಾಗಿ ಕೊರತೆ ಧನವನ್ನು ವಿನಿಯೋಗಿಸದಿರಲು ಮೊದಲು ದೃಢ ನಿರ್ಧಾರ ಮಾಡಿದ್ದರೂ ಈ ವರ್ಷಾರಂಭದಲ್ಲಿ ಸುಮಾರು ೩೦೦ ಕೋಟಿ ಯಷ್ಟು ಹೊಸ ನೋಟು ತಯಾರಿಸಲೇ ಬೇಕಾಗಬಹುದು! ರಾಜ್ಯ— ಕೇಂದ್ರ ಸರಕಾರಗಳು ಜನತೆಗೆ ಭೂ ಕಂದಾಯವೇ ಮೊದಲಾದ ವಿನಾಯತಿ ನೀಡುವುದರಿಂದ ಈ ಕೊರತೆ ಅನಿವಾರ್ಯವಂತೆ! ಧನಲಕ್ಷ್ಮಿ ಕಾಗದದ ಹುಲಿಯ ಬೆನ್ನ ಮೇಲೋ! ಪರಮಳವಿಲ್ಲದ ಕಾಗದದ ಕಮಲದ ಮೇಲೆಯೋ ಆಸೀನಳಾಗಿ ಸಂಚರಿಸಲಾಪಳೆ? ಅಂದವಿರಬಹುದು, ಬಲವಿಲ್ಲದ ಹುಲಿಯೊಂದು; ಚಂದವಿರಬಹುದು, ಗಂಧವಿಲ್ಲದ ಹೂವೊಂದು — ಇಂತಿರುವ ಭಾರತೀಯ ರೂಪಾಯಿಯಲ್ಲಿ ಬಲವನ್ನೂ ಗಂಧವನ್ನೂ ಪ್ರತಿಷ್ಠಾಪನೆ ಮಾಡವ್ಕೂ ಎಂದು ಭಾರತೀಯ ಧನಲಕ್ಷ್ಮಿಯ ಮುಂದೆ ಎರಡೂ ಕೈ, ಹಣ್ಕಾಲಿಬೆರಳು ಕೂಡಿಸಿ ಬೇಡುತ್ತಾನೆ.

ಜಾತ್ಯತೀತ ರಾಷ್ಟ್ರ ಭಾರತದಲ್ಲಿ ಗೋಹತ್ಯೆಯನ್ನು ಪ್ರತಿಬಂಧಿಸುವ ಸಂಬಂಧದಲ್ಲಿ ಶಾಸನವಿದೆ. ಪುರಿಯ ಜಗದ್ಗುರುಗಳು ಗೋಹತ್ಯಾ ಪ್ರತಿಬಂಧ ಶಾಸನವನ್ನು ಮಾಡಬೇಕೆಂದು ನಿರಶನ ವ್ರತ ಕೈಕೊಳ್ಳುವುದಕ್ಕೆ ಮೊದಲಿಂದಲೇ ಇಂತಹ ಶಾಸನವಿತ್ತು. ಈ ಶಾಸನದ ಬಲದಿಂದಲೇ ಇತ್ತೀಚೆಗೆ ಕುಂದಾಪುರದ ಖಳ ಹಂತಕರನ್ನು ಹಿಡಿಯಲಾಯಿತು. ಗೋವಮತೆಯನ್ನು ಭಕ್ತಿ ಪುರಸ್ಸರವಾಗಿ ಪೂಜಿಸುವವರೂ ಗೋಮಾಂಸ ಭಕ್ಷಕರೂ ಒಂದಾಗಿರುವ ಈ ದೇಶದಲ್ಲಿ ಪರಸ್ಪರ ತಿಳುವಳಿಕೆ ಹೆಚ್ಚುವುದರಿಂದಲೇ ಗೋಮಾತೆಗೆ ರಕ್ಷಣೆಯೊದಗೀತು. ಎರಡೂ ಪಂಗಡಗಳು ಒಬ್ಬರು ಇನ್ನೊಬ್ಬರ ಮನೋಭಾವನೆಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು— ದ್ವೇಷ—ಜಿದ್ದುಗಳಿಂದ ಆಸಿಷ್ಟ ಪರಿಣಾಮ. ಆದುದರಿಂದಲೇ ಗೋಪೂಜಕನು ಬೇಡುತ್ತಾನೆ—ಅಮ್ಮಾ, ಗೋಮಾತೆ, ಎಲ್ಲ ಭಾರತೀಯರೂ ಸೌಹಾರ್ದದಿಂದ ಬಾಳುವಂತೆ ಒಬ್ಬರನ್ನೊಬ್ಬರನ್ನು ಹೆಚ್ಚು ಹೆಚ್ಚು ತಿಳಿದುಕೊಳ್ಳುವಂತೆ ಅನುಗ್ರಹಿಸವ್ಕಾ. ಇದರಿಂದಲೇ "ಒಂದು ದೇಶ,ಒಂದು ಗುರಿ,ಒಂದೇ ದಾರಿ" ಎಂಬ ಮಾತು ಸತ್ಯವಾಗುವುದನ್ನೂ....

ರಾಜಕಾರಣಿಗಳಲ್ಲಿ ಅಧಿಕಾರದಾಹಾಂಧಕಾರ ತುಂಬಿದೆ. ಲಾಭಬಡಕ ಸಮಯಸಾಧಕ ನರಕಾಸುರ ಸ್ವರ್ಗಕ್ಕೆ ಲಗ್ಗೆಯಿಡುವಷ್ಟೂ ಕೊಬ್ಬಿದ್ದಾನೆ. ಧನಧಾನ್ಯಲಕ್ಷ್ಮಿ ಗಾಳಿ ತುಂಬಿದ ಬೀಲದಂತೆ ಅಂಕೆ ಸಂಖ್ಯೆಗಳಲ್ಲಿ ಹಿಗ್ಗಿ ವಿಜೃಂಭಿಸಿದ್ದಾಳೆ- ಸರಕಾರಗಳು ಹಿಂದೂ ಹೋಗದೆ ಮುಂದೆಯೂ ನಡೆಯದೆ ಇದ್ದಲ್ಲೇ ಕೊಳೆಯು ಹತ್ತಿನೆ- ಯುದಕ್ಕೂ ಧೈಯವಿಲ್ಲ. ಬಿಟ್ಟಕ್ರಮಕೈಗೊಳ್ಳುವುದಾದರೆ, ಅಧಿಕಾರಕ್ಕೆರವಾಗ ಬೇಕಾದೀತೆಂಬ ಭಯ—ದೇಶದಲ್ಲಿ ನಾನಾ ಬಗೆಯ ಬಣ್ಣ ಬಣ್ಣದ ಸರಕಾರಗಳು ಅಭದ್ರವಾಗಿವೆ. ಇವೆ. ಈ ವರ್ಷ ದೀಪಾವಳಿಯ ದೀಪ ಮಾಲೆಯೇ ಈ ವಿಕರಂಗೀ ಬಹುರಂಗೀ ಸರಕಾರಗಳು--ಎಣ್ಣೆಯಿಲ್ಲದೆ ಕರಟಿದ ಬತ್ತಿ ಕುರುಡು ಮಂದ ಬೆಳಕು ಚೆಲ್ಲುತ್ತಿವೆ. ಭಾರತೀಯರು, ಪ್ಲವಂಗ ದೀಪಾವಳಿಯನ್ನೂ ಹೀಗೆಯೇ ಆಚರಿಸುವುದು ಅನಿವಾರ್ಯ.

ಮುಂದಾದರೂ ಒಳ್ಳೆಯ ದಿನಗಳನ್ನು ಕರುಣಿಸಪ್ಪ ಎಂಬ ಇಂದಿನ ಭಾರತೀಯನ ಸುದ್ಗಾರ ಮೂಮೂಲಿನದ್ದಲ್ಲ; ಆತನ ಹೃದಯಾಂತರಾಳವನ್ನು ಛೇದಿಸಿ ಹೊರಬಂದುದು. ಇದನ್ನು ಭಗವಂತ ಕವಿಗೆ ಹಾಕಿಕೊಳ್ಳುತ್ತಾನೆ ಎಂಬುದು ಶ್ರೀಸಾಮಾನ್ಯನ ತತ್ವ ವಿಶ್ವಾಸ. ದೇವರು ಕೊಟ್ಟರೂ ಪೂಜಾರಿ ಕೊಡಬಿಡ ಬೇಕಲ್ಲಾ ಎಂಬ ಭಯವೂ ಅತನಲ್ಲಿದೆ.ಇದನ್ನು ದೂರವಾಡ ಬೇಡವೆ?

ಶುಭಾಶಯಗಳು

"ದೀಪಾವಳಿ"ಯ ದಿನ ಇರಬೇಕಾದ ಉತ್ಸಾಹ ಜನತೆಯಲ್ಲಿಲ್ಲ; ತುಟ್ಟಿಯು ಕಾಲದಲ್ಲಿ ಇದು ಸಹಜವೇ. ಆದರೂ ಭವಿಷ್ಯದ ಭವ್ಯ ಕಲ್ಪನೆಯಿಂದ ಹೆಬ್ಬ ಅಡಿಯಿಸುತ್ತೇವೆ.ಈ ಸಂದರ್ಭದಲ್ಲಿ "ನವಯುಗ" ವೂ ತನ್ನ ವಿಶೇಷ ಸಂಚಿಕೆಯನ್ನು ನಿಮ್ಮ ಕೈಗಳಿಗಿಟ್ಟು ಬುದ್ಧಿಗೊಂದು ಅಧಿಕಾರ ವಿತ್ತಿದೆ. ಇದು ಪ್ರಕಾಶವೂ ಶ್ರೇಯವೂ ಆಗಬಹುದೆಂದು ನಿಮ್ಮ ವಿಶ್ವಾಸ

ಈ ಸಂಚಿಕೆಯನ್ನು ಸಿದ್ಧಪಡಿಸುವಲ್ಲಿ ನಿರತನಾದವರು ಹಲವರು. ಲೇಖಕರು ಅಮೂಲ್ಯ ಲೇಖನಗಳನ್ನು ಕಳಿಸಿ ಸಹಕರಿಸಿದ್ದಾರೆ. ಜಾಹಿರಾತುದಾರರು ಆರ್ಥಿಕ ಭಾರ ಹೊರುವಲ್ಲಿ ಸಹಭಾಗಿಯೊಗಿದ್ದಾರೆ. ಶ್ರೀ ಕೆ. ಜಗದೀಶರಾಯರು ಅತ್ಯೀಯತೆಯಿಂದ ಹಲವು ಜಾಹೀರಾತುಗಳನ್ನು ಸಂಗ್ರಹಿಸಿ ಕಳಿಸಿ ಈ ಸಂಚಿಕೆಯ ಗುರಿಶಸ್ವಿಗೆ ನೆರವಾಗಿದ್ದಾರೆ. ಮುದ್ರಣಾಲಯದ ಬಂಧುಗಳು ತಮ್ಮ ಹೊಣೆಯನ್ನು ನಿರ್ವಹಿಸಿದ್ದಾರೆ. ನಮ್ಮ ಚಂದಾದಾರರು ಎಂದಿನಂತೆಯೇ ಸಹಕಾರ ಮನೋಭಾವ ತೋರಿದ್ದಾರೆ. ಇವರೆಲ್ಲರನ್ನೂ ಶುಭ ಸಮಯಗಳಲ್ಲಿ ಸ್ಮರಿಸಿ, ಎಲ್ಲರಿಗೂ ದೀಪಾವಳಿಯ ಶುಭಾಶಯಗಳನ್ನು ಸಲ್ಲಿಸುತ್ತೇವೆ.



ಶ್ರೀ ಕೆ. ಜಗದೀಶರಾಯರು

ನವಯುಗದ ಹಿತೈಷಿ ಬಂಧುಗಳಾದ ಶ್ರೀಯುತರು ನಮ್ಮ ಜಿಲ್ಲೆಯವರೇ ಆಗಿದ್ದು ಸೇವಾನಿವೃತ್ತರಾಜಾದಿನಲ್ಲಿ ಉದ್ಯೋಗದಲ್ಲಿದ್ದಾರೆ.

ನವಯುಗ

ವಾರ್ಷಿಕ ಚಂದಾ:

ಪ್ರಜಾರಾಜ್ಯ, ಸ್ವಾತಂತ್ರ್ಯ ಮತ್ತು ದೀಪಾವಳಿ ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

With best compliments

from

M. KRISHNA

Proprietor

SRI KRISHNA
MOTOR SERVICE

HASSAN (MYSORE STATE)

Phone 247

With best compliments from

SRI
DURGA BHAVAN

High Class Vegetarian

Boarding Restaurant

NAMPALLY,

HYDERABAD

Phone : **34757**

THANK YOU

ದೀಪಾವಳಿಯ ಶುಭಾಶಯಗಳು!

—o—

14 ಕೆರೆಟ್ ಚಿನ್ನದ ಆಭರಣ, ಡೈಮಂಡ್ ಬೆಳ್ಳಿಯ ವಿವಿಧ ಆಭರಣ ಸಾಮಾನು ಇತ್ಯಾದಿಗಳಿಗೆ

ಶ್ರೀ ಕೃಷ್ಣಾ ಜುವೆಲರೀ ಮಾರ್ಟ್

ತೆಂಕಪೇಟೆ— (Phone 66) —ಉಡುಪಿ

•

ರೇಡಿಯೋ, ಟ್ರಾನ್ಸಿಸ್ಟರ್, ಇಲೆಕ್ಟ್ರಿಕಲ್ ಸಾಮಾನು, ಸ್ಟೈನ್‌ಲೆಸ್ ಸ್ಟೀಲ್, ಸ್ಟೀಲ್ ಕೆಬಿನೆಟ್, ಸೋಫಾ ಕಂ-ಬೆಡ್ ಇತ್ಯಾದಿಗಳಿಗೆ ವೈವಿಧ್ಯಪೂರ್ಣ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

•

ಸುಲಭ ಕಂತುಗಳಲ್ಲಿ ಸಾಮಾನುಗಳನ್ನು ಪಡೆಯುವ ಜನಪ್ರಿಯವಾದ ನವೀನ ಯೋಜನೆಗೆ

ಶ್ರೀ ಕೃಷ್ಣಾ ಗಿಫ್ಟ್ ಸ್ಕೀಮ್

•

ದಕ್ಷ ಹೊಸ ಆಡಳಿತದಲ್ಲಿ ಜನಪ್ರಿಯತೆ ಗಳಿಸಿಗ

ಗೋಪಾಲಾಶ್ರಮ

(Phone No. 266)

ಶುಚಿ-ರುಚಿ ಊಟ ಮತ್ತು ಫಲಾಹಾರ ಮಂದಿರ

ಹೆಡ್ ಪೋಸ್ಟ್ ಆಫೀಸು ರೋಡು ,ಉಡುಪಿ.

Hearty Deepavali Greetings

From

KAMAT HOTEL

Restaurant & Boarding

SHESHADRIPURAM,

BANGALORE-20

ಅತ್ಯಲ್ಪ ಕಾಲದಲ್ಲಿ ಸರ್ವರ ಪ್ರೀತ್ಯಾದರಗಳಿಗೆ ಪಾತ್ರವಾಗಿ ಎಲ್ಲರಿಂದಲೂ ಪ್ರಶಂಸಿಸಲ್ಪಟ್ಟಿರುವ—
ಇದೀಗ ಮೂರನೇ ವರ್ಷದಲ್ಲಿ ವಾದಾರ್ಪಣ ಮಾಡುತ್ತಿರುವ ಸುಸಂದರ್ಭದಲ್ಲಿ

ನಮ್ಮ ಗ್ರಾಹಕರಿಗೆಲ್ಲಾ
ದೀಪಾವಳಿಯ ಶುಭಾಶಯ ಸಲ್ಲಿಸುತ್ತೇನೆ

ಕಾಮತ್ ಹೊಟೆಲ್

ಉತ್ತಮ ಫಲಾಹಾರ ಮತ್ತು ಭೋಜನ ಮಂದಿರ

ಶೇಷಾದ್ರಿಪುರಂ, ಬೆಂಗಳೂರು-20

ರುಚಿಕರ ತಿಂಡಿ ತಿನಸುಗಳು! ಶುಚಿಕರ ಪೇಯ ಪಾನೀಯಗಳು!

ಏನಯಶೀಲ ಉತ್ಸಾಹಿ ಮೆನೇಜರರ ಮೇಲ್ವಿಚಾರಣೆ ದಕ್ಷ ಸೇವಿಸಾಳರ್ಯ

Phone: 29012 R. B. Kamath, *Proprietor*

ದಿವ್ಯ ಜ್ಯೋತಿ

೧

ಭವ್ಯ ಭಾರತ ದಿವ್ಯ ಜ್ಯೋತಿಯು
ವಿಶ್ವ ಮೂತೆಯ ಬೆಳಗಿದೆ
ಬೆಳಗಿ ನಭದಲಿ ನಿತ್ಯವಾಗಿಹ
ಸತ್ಯ ಲೋಕವ ಸಾರಿದೆ

೨

ವ್ಯಾಸ ಭಾರತ ದಾಸ ಕನಕರು
ಕನ್ನಡಾಂಬೆಯ ತಿಲಕವೈ
ದಾಸ ಮೋಹನ ಕರಮಚಂದರು
ವಿಶ್ವ ಮೂತೆಯ ಮುಕುಟವೈ

೩

ದಾಸ್ಯ ರೂಪಕ ಅಂಕುಶರಡೆಡೆ
ಹಾಸ್ಯ ಮೂಡಿದ ತಂದ್ರದ
ರಂಗ ಭೂಮಿಯ ನಿಂದು ಮಧ್ಯದಿ
ಕರೆದ ಮಂತ್ರ ಸ್ವತಂದ್ರದ

೪

ನಿಟನು ಖಂಡಿಹ ನಾಗ ವೇಷದಿ
ತಾತಪಾಗಿಹ ತನ್ಮಯ
ನಿಮಿಷದಲಿ ವಿಷ ಸರ್ಪ ಕಚ್ಚಲು
ಕೊಚ್ಚಿ ಹೊರಟನು ತಾತನು

೫

ಮುಗ್ಧ ನುನುಜನು ದಗ್ಧವಾಗಿಹ
ದುಗುಡಾತಪೆ ನುಸುಳಿದೆ
ನುಸುಳಿ ನೋಗಲಿ ಭಾರತಾಂಬೆಯ
ದಿವ್ಯ ತಾರೆಯು ತೊಲಗದೆ

೬

ಪರಮ ವೇದದ ದೇವ ಪೇಳಿದ
ಸಂಭವಾಮಿ ಯುಗೆ ಯುಗೆ
ಹರುಷದಲಿ ನಾವಿಂದು ಕಾಯುವ
ಮತ್ತೆ ತಾತನ ಆತ್ಮಗೆ

ಬಿ. ಯಂ. ಜಡಗೀರ್‌ದಾರ್, ಬಿ.ಎ.

ಸಾಲು ದೀಪ ಬೆಳಗಲಿ

೧

ಎನಿತು ಕಾಲ ತಾಳ ಬಲ್ಲೆ
ಮೂಕ ಕೋಕ ವೇದನೆ?
ವ್ಯಸನ ವಸನ ಕರಿಸಿ ಚೆಲ್ಲೆ
ಮೂಡಿ ಬಾ ಪ್ರಜೋದನೆ

೨

ದೇವ ಗುಡಿಯ ಕರಿಣ ಶಿಲೆಗೆ
ಮರುಕ ತಾಪ ತಿಳಿಯದು
ಕೃದಯದೊಳಗಿನಾತ್ಮ ಸೆಲೆಗೆ
ಮನದ ಮೌನ ಸಹಿಸದು

೩

ಕೊರಡು ಗಂಧ ತೇದು ತೇದು
ಮೂರ್ತಿ ಬೊಗಕೆ ಮೆತ್ತಿದೆ |
ಬರಡು ದೇಹ ಸವೆದು ಸವೆದು
ಯಾವ ಕಂಪು ಹತ್ತಿದೆ?

೪

ದುಡಿಮೆ ನೊಗಕೆ ಹೆಗಲನೊಡ್ಡಿ
ಕರ್ಮ ಭೂಮಿ ಪುತ್ತಿರೆ |
ಬಳಿವ ದೀಪ ಸೊರಗಿ ಕಡ್ಡಿ
ಯಾಯ್ತು ಚಿಂತೆ ಹತ್ತಿದೆ

೫

ಬಾಳ ಬಾನ ಕರಿಯ ಮೋಡ
ಬಿಸನದಿಂದ ಕವಿದಿದೆ |
ಭಾಗ್ಯ ರವಿಯು ವುದಯ ನೋಡ—
ತಿಳಿನಿ ಕಾಲ ಕಳೆದಿದೆ

೬

ಹಸಿದ ಹೊಟ್ಟೆ ಬೆನ್ನಿಗಂಟೆ
ಎಲುಬು ಗೂಡ ತೋರಿದೆ |

ನೌಕೆತೀರತಲುಪಲಿ!

ವೀಣೆ ನುಡಿಯಲಿ ಗಾನಹರಡಲಿ
ಹೃದಯ ಬಾಗಿಲು ತೆರೆಯಲಿ
ಲತೆಯು ನಾಚಲಿ ಮುಗುಳು ಬಿರಿಯಲಿ
ಗಂಧ ಸುತ್ತಲೂ ತೇಲಲಿ

ರಜನಿ ಮುಡಿಯಲಿ ಚಿಕ್ಕೆ ಅರಳಲಿ
ಚಂದ್ರಹೆನ್ನೇ ಕರೆಯಲಿ
ಶಶಿಯು ಮೂಡಲಿ ಹಾಲು ಹರಿಯಲಿ
ಶ್ವೇತರಜನಿಯೊಗಲಿ!

ಹಾಲು ಗಡಲಲಿ ನಾವಿಕ ಸಾಗಲಿ
ಅಲೆಯು ಜೊತೆಯ ಲಿ ನಲಿಯಲಿ!
ವ.ಧುರ ಪ್ರೇಮದ ರಸಿಕ ಜೋಡಿಯು
ನಾವಿಕಯಲ್ಲಿಯೇ ಸಾಗಲಿ!

ಕಮಲ ಕರೆಯಲಿ ಹಂಸ ಸಾಗಲಿ
ತೆರೆಯು ಮಿಂಚುತ ಹೊಳೆಯಲಿ!

ಎಡರು ತೊಡರ ಮುಳ್ಳಗುಂಟ
ಬದುಕ ಬಯಲಪೂರಿತೆ

೭

ಬಾಳಿನುದ್ದ ಕಹಿಯ ಸುಂಬ
ಶಾಪವೆಂತೊ ತಟ್ಟಿದೆ |
ಗಾನ ಲಹರಿ ನುಡಿಪೆನೆಂಬ
ವೀಣೆ ತಂತಿ ಕೆಟ್ಟಿದೆ

೮

ಮನುಷಕೊಂದು ಹೆಬ್ಬ ಬರಲಿ
ಸಾಲವೆಲ್ಲ ತೀರಲಿ
ದುಗುಡ ಕಳೆದು ಹರುಷ ತರಲಿ
ಸಾಲು ದೀಪ ಬೆಳಗಲಿ

—ಪಿ. ಶ್ಯಾಮ ಭಟ್,
ಪೆರಡಾಲ,

ಕಡಲ ಒಡಲಲಿ ಮೀನು ಸುಳಿಯಲಿ
ಒಮ್ಮೆ ನೀರನು ಚಿಮ್ಮಲಿ!
ಪಿಕವು ಹಾಡಲಿ ಶುಕವು ಉಲಿಯಲಿ
ತೆಂಗು ತಲೆಯನು ತೂಗಲಿ!
ಕಡಲ ತೀರದ ಸೊಬಗು ಹೆಚ್ಚಲಿ
ದೋಣಿ ಚಂದದಿ ಸಾಗಲಿ

ರಸಿಕ ಜೋಡಿಯ ರಾಗ ಹರಡಲಿ
ಹೃದಯ ವಲ್ಲಿಗೆ ಅರಳಲಿ!
ಕೆನ್ನೆ ಮಿಂಚಲಿ ಕಣ್ಣು ಹೊಳೆಯಲಿ
ಜೀವನವು ಮೇರೆ ಮೀರಲಿ!

ಹಾಲು ಜೇನು ಹಣ್ಣು ಸವಿಯಲಿ
ಸರಸದೀ ಕೊರಳಪ್ಪಲಿ!
ಅಮರ ಪ್ರೇಮದ ಜತೆಯು ಸಾಗಲಿ
ಬಾಳು ಸುಂದರವಾಗಲಿ!

ಅವನು ಕೊಳಲನು ಊದಿ ನಲಿಯಲಿ
ಅವಳು ಹಾಡನು ಹಾಡಲಿ
ರಸಿಕ ಜೋಡಿಯು ಬೆಡಗು ಹೆಚ್ಚಲಿ
ಈಶ ನಗುತಲಿ ನೋಡಲಿ!

ತೇನೆ ಹಕ್ಕಿಯು ಹಾಡು ಹಾಡಲಿ
ನಾದ ಬಾನು ತುಂಬಲಿ!
ಬಾನು ಭೂಮಿ ಬೆರೆಕು ನೋಡಲಿ
ಅವರ ನೆನಪು ಉಳಿಯಲಿ!

ಹರಿಯ ತೆರೆಗಳು ಬಾರದಿರಲಿ
ನೌಕೆ ತೀರಕೆ ಸಾಗಲಿ!
ಕೆಟ್ಟಗಾಳಿಯು ಬೀಸದಿರಲಿ
ದೇವ ಜೊತೆಯನು ಕಾಯಲಿ!

—ಪುಂಡಲೀಕ ಹಾಟೇಲ

With best compliments from:

Taj Mahal Group of Hotels

Leading vegetarian hotels in the twin Cities of

Hyderabad & Secunderabad.

(A. P.)

TAJ MAHAL HOTEL

88, Sarojini Devi Road, SECUNDERABAD

Grams:- "CURTESY"

Phones:- 73171 (Office)
70105—5 lines.
Connecting all rooms.

TAJ MAHAL HOTEL

King Kothi Road
(Abid Road)
HYDERABAD.

Grams: - "CURTESY"
Phones:- 35591 (Office)
38451—10 lines
Connecting all rooms.

TAJ MAHAL CAFE

University Road,
Himayathnagar,
HYDERABAD.

Grams.- "TAJCAFE"
Phones.- 33446 (Office)
32136—3 lines
Connecting all rooms.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು:

ಕೋರ್ಟು ರೋಡ್, ಉಡುಪಿ.

ಸ್ಥಾಪನೆ: 1920

(ಶೆಡ್ಯೂಲ್ಡ್ ಬ್ಯಾಂಕ್)

1967ರ ದೀಪಾವಳಿಯ ಹಾರ್ದಿಕ ಶುಭಾಶಯಗಳು!

ನಿಮ್ಮ ಯಾವತ್ತೂ ಬ್ಯಾಂಕಿಂಗ್ ವ್ಯವಹಾರಗಳಿಗೆ ನಮ್ಮ ಮೈಸೂರು ರಾಜ್ಯದಲ್ಲಿರುವ 21 ಹಾಗೂ ಕೇರಳ ರಾಜ್ಯದಲ್ಲಿರುವ 3 ಶಾಖೆಗಳು ಸದಾ ಸಿದ್ಧವಾಗಿವೆ.

ಸರ್ವರಿಗೂ ವಿಶೇಷ ಪ್ರಕಾರದ ಸೌಜನ್ಯ ಸೇವೆಯೇ ನಮ್ಮ ವೈಶಿಷ್ಟ್ಯ.

ಶ್ರೀ ಸಂಜೀವ ಲಕ್ಷ್ಮೀಶ್ವರ

ಒಂದು ಆತ್ಮ ನಿವೇದನೆ

ಬರಹಗಾರನ ಜೀವನದಲ್ಲಿ ಅಸ್ವೀಕೃತಿ ಪತ್ರ ಸಾಮಾನ್ಯವೇ. ಸ್ವೀಕೃತಿ ಪತ್ರ ಆಧಿಕೃತವಾಗಿ ಬಂದ ಮೇಲೆ ಅನಧಿಕೃತ ಅಸ್ವೀಕೃತಿಯಿಂದ ಆತ ನೋಯುವುದಾದ್ದಾನೆಯೆ? ಇಂತಹ ಒಂದು ಅನಪೇಕ್ಷಿತ ಘಟನೆಯಿಂದ ಬರೆಯುವುದನ್ನೇ ನಿಲ್ಲಿಸಿದ ಲೇಖಕರ ಲೇಖನವು ಹರಿಯುವೇ ಬೇಕಾಗಿ ಬಂದೇ ಬಂದಿತು— ಇದು ಹೇಗೆ?

ಮನುಷ್ಯನ ಜೀವನದಲ್ಲಿ ಒಂದು ಚಿಕ್ಕ ಘಟನೆಯು ಸಹ ಎಂಥ ವಿಪರೀತ ಪರಿಣಾಮ ಮಾಡೀತು ಎಂದು ಹೇಳಲಾಗುವದಿಲ್ಲ. ಆರ್ಥಾತ್ ಅವರವರ ಮಾನಸಿಕ ಗುಣಧರ್ಮಕ್ಕನುಸಾರವಾಗಿ ಅದರ ಪರಿಣಾಮ ಹೆಚ್ಚು ಕಡಿಮೆ ಅವಲಂಬಿಸಿರುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಕೆಲವರಿಗೆ ಅದೇ ಒಂದು ಮನೋವೇದನೆಯೂ ಆದರೆ, ಇನ್ನು ಕೆಲವರು ಅದನ್ನು ನಿರ್ಲಕ್ಷಿಸಲು ಬಹುದು.

ಈಗ ಸುಮಾರು ೩ ವರ್ಷಗಳ ಹಿಂದಿನ ಮಾತು. ಜನಪ್ರಿಯ ಲೇಖಕರೂ, ಕತೆಗಾರರೂ, ಒಳ್ಳೆ ವ್ಯಕ್ತಿ ಚಿತ್ರಕಾರರು ಎಂದು ಹೆಸರಾದ ಶ್ರೀ ದ. ಬಾ. ಕುಲಕರ್ಣಿಯವರು ಅಕಾಲ ನಿಧನರಾಗಿ ಒಂದು ವರುಷ ಸಲ್ಲುವದರಲ್ಲಿದ್ದಿತು. "ದ. ಬಾ. ಕುಲಕರ್ಣಿ"ಎಂದು ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾದ ಅವರು ಅನೇಕ ವಿತ್ರಂಗೆ 'ದತ್ತಣ್ಣ' ಎಂದು ಆತ್ಮೀಯರಾಗಿದ್ದರು. ಅಂಥವರಲ್ಲಿ ನಾನೂ ಒಬ್ಬ. ಇನ್ನೂ ಶಾಲೆಯ ವಿದ್ಯಾರ್ಥಿಯಿರುವಾಗಲೇ ಅವರ ಪರಿಚಯವಾಗಿ, ಅವರಿಂದ ಪ್ರೋತ್ಸಾಹ ಮಾರ್ಗದರ್ಶನ ಪಡೆಯುವ ಭಾಗ್ಯ ನನ್ನದಾಗಿದ್ದಿತು. ಹೀಗಾಗಿ ಅವರ-ನನ್ನ ಸ್ನೇಹವು ಅನೇಕ ವರ್ಷಗಳಿಂದ ಅವ್ಯಾಹತವಾಗಿ ನಡೆದು ಬಂದಿದ್ದಿತು. ಆವರ ನಿಧನದ ವಾರ್ತೆ ಕೇಳಿ ಕರ್ನೂಲ್‌ನಲ್ಲಿ ನಾನೂ ಒಬ್ಬ.

ಕಾಲನ ಚಕ್ರವು ತಿರುಗುತ್ತಲೇ ಇದ್ದಿತು. ಹಾ ಹಾ ಎನ್ನುವದರಲ್ಲಿ ಅವರು ತೀರಿ ಒಂದು ವರ್ಷ ಆಯುವದರಲ್ಲಿದ್ದಿತು. ದತ್ತಣ್ಣನಿಂದ ಪಡೆದ ಪ್ರೋತ್ಸಾಹ ಮಾರ್ಗದರ್ಶನಕ್ಕಾಗಿ ನಾನು ಅವರಿಗೆ ಯಾವರೀತಿಯಿಂದಲೂ ಏನನ್ನೂ ಕೊಡಲಾರದವನಾಗಿದ್ದೆ. ಅವರು ನಿಧನ ಹೊಂದುವ ಸೊದಲು ೧೯೬೨ರ ಮೇ ರಜೆಯಲ್ಲಿ ನಾನು ಧಾರವಾಡಕ್ಕೆ-ಹೋದಾಗ್ಗೆ "ನಿಮ್ಮ ವ್ಯಕ್ತಿ ಚಿತ್ರ ಬರೆಯಬೇಕೆಂಬ ನನಗೆ ಆಶೆ ಇದೆ. ಆದರೆ ವ್ಯಕ್ತಿ ಚಿತ್ರ ಬರೆಯುವದರಲ್ಲಿ ನಿಷ್ಣಾತರಾದ ನಿಮ್ಮ ಬಗ್ಗೆ ಬರೆಯುವುದು ನನ್ನಂಥವನಿಂದ ಆದೀತೆ? ಎಂದು ಬಿಟ್ಟಿದ್ದೇನೆ" ಎಂದು ಹೇಳಿದ್ದೆ. ಅದಕ್ಕೆ ಅವರು ನಕ್ಕು, ಬರೆಯುತ್ತ ಹೋದಂತೆ ಎಲ್ಲರೂ ಸಿದ್ಧ ಹಸ್ತರಾಗುತ್ತಾರೆ. ಧೈರ್ಯವಾಗಿ ಬರೆಯಿರಿ ಎಂದು ಅಂದಿದ್ದರು. ಆದರೂ ನನಗೆ ಧೈರ್ಯವಿರಲಿಲ್ಲ. ಮುಂದೆ ಮೂರೇತಿಂಗಳಿನಲ್ಲಿ ಅವರು ಕಾಲವಾದರು. ಆದರೆ ಅವರ ಈ ಮಾತು ನನ್ನನ್ನು ಪ್ರಜ್ಞೋದಿಸುತ್ತಲೇ ಇದ್ದಿತು.

ಆದಕ್ಕೆಂದೇ ಆವರ ಮೊದಲ ವರ್ಷಾಂತಿಕದ ಸಮಯಕ್ಕೆ ೧೯೬೪ ಪ್ರಕಟಿಸಲೆಂದು ಅವರ ಬಗ್ಗೆ ಒಂದು ಲೇಖನ ಅಥವಾ ಒಂದು ನೆನಪಿನ ಸುರುಳಿ ಬರೆದು ಕಾರ್ಯಾಟಕದ ಒಂದು ಉಜ್ಜ್ವಲ ವಾರ ಪತ್ರಿಕೆಗೆ ಕಳುಹಿಸಿದ್ದೆ. ಆದರೆ ಆದರ ಸಂಪಾದಕರಿಗೆ ಅದು ತಮ್ಮ ಪತ್ರಿಕೆಯ ಸ್ಥಾನಮಾನಕ್ಕೆ ಅಲ್ಪವೆಂದು ಕಂಡಿತೆಂದೂ ಏನೊ ಅದು ಪ್ರಕಟವಾಗಲಿಲ್ಲ. ಲೇಖಕನ ಜೀವನದಲ್ಲಿ "ಅಸ್ವೀಕೃತ" ಎಂಬ ಶಬ್ದವು ಆಘಾತಕರವಾಗಿರಬಾರದು. ಒಂದಿಲ್ಲ ಒಂದು ದಿನ ಅಸ್ವೀಕೃತದಲ್ಲಿಯ 'ಅ' ಇಲ್ಲದಾದೀತು ಎಂಬ ಆಶೆಯಿಂದಲೇ ನಡೆಯ ಬೇಕು ನಿಜ, ಆದರೆ ನಾನು ಒಂದು ವಿಶಿಷ್ಟ ಭಾವನೆಯಿಂದ ಒಂದು ವಿಶಿಷ್ಟ ಪ್ರಸಂಗಕ್ಕಾಗಿ ಬರೆದುದನ್ನೂ- ಮುಂದಿನ ವಾರದ ಸಂಚಿಕೆಯಲ್ಲಿ ಪ್ರಕಟವಾಗುವದೆಂದು ಹೇಳಿ-ಪ್ರಕಟಿಸದಿದ್ದರೆ ಯಾರಿಗೆ ತಾನೆ ಆಘಾತವಾಗಲಿಕ್ಕಿಲ್ಲ? ಆದ್ದರಿಂದ ಇನ್ನು ಮೇಲೆ ಬರೆಯಲೇ ಬಾರದೆಂದು ನಿರ್ಧರಿಸಿದೆ. ಬರೆಯಲೂ ಇಲ್ಲ. ನಾನು ಬರೆಯುವದನ್ನು ಬಿಟ್ಟದರಿಂದ ಯಾರಿಗೂ, ನನಗೂ ನಷ್ಟ-ಹಾನಿಯಾಗಿಲ್ಲವೆಂದು ಧೈರ್ಯವಾಗಿ ಹೇಳಬಲ್ಲೆ. ಆದರೆ ದ. ಬಾ. ಅವರ ಬಗ್ಗೆ ನನಗಿದ್ದ ಪೂಜ್ಯ ಭಾವನೆಯ ಮೂಲಕ ಅರ್ಪಿಸಬೇಕೆಂದಿದ್ದ ತಿಲಾಂಜಲಿ ಹಾಗೆಯೇ ಉಳಿದು ಹೋಯಿತಲ್ಲ ಎಂಬ ಕೊರಗು ಕೊನೆಯವರೆಗೂ ಉಳಿಯುವದರಲ್ಲಿ ಸಂದೇಹವಿಲ್ಲ.

ಹಾಗಾದರೆ ಈಗ ಬರೆದದ್ದೇಕೆ? ಎಂಬ ಪ್ರಶ್ನೆ ಉದ್ಭವಿಸುವುದು. ಮೂರು ವರುಷಕ್ಕೂ ಮೇಲ್ಪಟ್ಟು ಏನನ್ನೂ ಬರೆಯದೆಯೂ ಪತ್ರಿಕೆಯೊಂದಿಗೂ ಸಂಪರ್ಕವಿಟ್ಟುಕೊಳ್ಳದೆ ಅಜ್ಞಾತವಾಸದಲ್ಲಿದ್ದಂತಿದ್ದ ನನಗೆ ಒಂದು ದಿನ 'ನವಯುಗ'ದ ಸಂಪಾದಕರ ಓಲೆ ಬಂದಿತು. ದೀಪಾವಳಿ ಸಂಚಿಕೆಗಾಗಿ ಒಂದು ಲೇಖನ ಕೋರಿದ್ದರು. ಈ ಅಜ್ಞಾತ ವಾಸದಲ್ಲಿಯೂ ನನ್ನನ್ನು ಸ್ಮರಿಸಿದ್ದಕ್ಕಾಗಿ ಅಭಿಮಾನವಾಯಿತು. ನಾನೊ ಬ್ಬ ಅಪ್ರಸಿದ್ಧ ಸಾಮಾನ್ಯ ಮನುಷ್ಯ, ಆದರೂ "ನವಯುಗ"ದ ಸಂಪಾದಕರಿಗೆ ನನ್ನಲ್ಲಿ ಏನು ವಿಶೇಷ ಕಂಡಿತೋ ನಾನರಿಯೆ. ಅದರೂ ನನ್ನನ್ನು ಸ್ಮರಿಸಿ ಪತ್ರ ಬರೆದಿದ್ದಕ್ಕಾಗಿ ಹಿಂದಿನ ಕಷ್ಟಾದಕರ ಘಟನೆಯಿಂದಾದ ಕರಿಛಾಯೆಯನ್ನು ಶಿಥಿಲವಾಯಿತು. ಒಂದು ತರದ ಕೃತಜ್ಞತಾ ಭಾವವು ಉದಯಿಸಿತು. ಇನ್ನೂ ಕಾಲೇಜ ವಿ

(ಮೂವತ್ತನೇ ಪುಟ ನೋಡಿರಿ)

When you are in Guntur

Please Visit—

"Udipi New Krishna Bhavan"

(Restaurant & Boarding)

Opp: Vijaya Talkies,

KOTTAPET,

GUNTUR-2

For Quality food & delicious dishes
Prompt and Courteous Service

An Ideal Surrounding
Makes Everyone Happy

Prop: Krishnamurthy Acharya

The Hindustan Engineering Corporation

C. I. SLUICE VALVES,
RELIEF AIR VALVES,
WATER METER, STEAM VALVES,
C. I. PIPE SPECIALS

AND

KAYCEL WATER METER,
SLUICE VALVES,
I. S. S. TESTED

Please Contact:

THE
HINDUSTAN ENGINEERING
CORPORATION

152, RASTRAPATHY ROAD,
SECUNDERABAD, A. P.

ಶ್ರೀ ಶಿವಮುಂಜ ಪರಾರಿ.

ಕೇಳಿದ ಕತೆಗಳು

ಜನ ಜೀವನದಲ್ಲಿ ಅನೇಕ ಘಟನೆಗಳು ನಡೆಯುತ್ತವೆ — ಅವು ಪುಟ್ಟ ವಿರಲೂ ಬಹುದು. ಆದರೆ, ಆ ಘಟನೆಗಳನ್ನು ತಿಳಿದು ಯೋಚನೆಗೊಂದಿಷ್ಟು ಆಹಾರ ನೀಡಿದರೆ, ನಮ್ಮ ಹೃದಯಾಂಧಕಾರವೂ ದೂರವಾಗಬಹುದು.

ಒಮ್ಮೆ ಒಬ್ಬ ತರುಣನು ಸಿಂಹೂಲದಾ ಸ್ಟೇಶನ್‌ನಿಂದ ಬಲ್ಲಡಿಯೂದ ತನಕದ ರಿಟರ್ನ್ ಟಿಕೇಟನ್ನು ತಗೊಂಡನು. ಸಂಯೋಗವಶಾತ್ ಅವನು ಪ್ರಯಾಣ ಮಾಡಿದ ರೈಲು ಫಾಸ್ಟ್ ಗಾಡಿಯೂದ ಕಾರಣ ಅದು ಬಲ್ಲಡಿಯೂದಲ್ಲಿ ನಿಲ್ಲದೆ, ಮೂರು ಸ್ಟೇಶನ್ನು ಮುಂದೆ ಹೋಗಿ ಟಿಟಾಗಡದಲ್ಲಿ ನಿಂತಿತು. ಟಿಟಾಗಡದಸ್ಟೇಶನ್ ಮಾಸ್ತರ ಸುಲಕರುಣನಿಂದ ಟಿಕೇಟು ಪಡಕೊಂಡುದಲ್ಲದೆ, ಬಲ್ಲಡಿಯೂದಿಂದ ಟಿಟಾಗಡದ ತನಕದ ದಂಡವನ್ನೂ ವಸೂಲು ಮಾಡಿ, ಬೇರೆ ಟಿಕೇಟು ಪಡೆದು ಬಲ್ಲಡಿಯೂಕ್ಕೆ ನಂತರದ ರೈಲಿನಲ್ಲಿ ಹಿಂತಿರುಗಲು ಸಲಹೆಯಿತ್ತನು. "ಟಿಕೇಟು ಪಡೆಯಲು ನನ್ನ ಬಳಿ ಒಂದು ಬಿಲ್ಲೆ ಕೂಡ ಉಳಿದಿಲ್ಲ." ಎಂದು ಉತ್ತರಿಸಿದ ಯುವಕ.

ಸ್ಟೇಶನ್ ಮಾಸ್ತರನು ತರುಣನ ಹೆತ್ತರ ಬಂದು—"ಏಲ್ಲ ತಮ್ಮಾ, ಹಣವಿಲ್ಲದ್ದರೇನಾಯಿತು? ಟಿಕೇಟಿಲ್ಲದೇ ಹೋಗು. ನಿನ್ನ ಒಂದೆರಡು ಕಾಸು ಸಿಗದೇ ಹೋದೀತೆ, ಸರಕಾರ ದಿನಾಳಿಯೇನೂ ಆಗಲಾರದು. ಸ್ವಲ್ಪ ಬುದ್ಧಿವಂತಿಕೆಯಿಂದ ವರ್ತಿಸು. ರೈಲಿನಲ್ಲಿ ಟಿ. ಸಿ. ಯೂ ಇಲ್ಲ. ಇನ್ನು ನನ್ನ ಬಗ್ಗೆ ನಿನಗೆ ಹೆದರಿಕೆ ಬೇಡ. ನಾನು ನೋಡಿಯೂ ನೋಡದವರಂತೆ ಇದ್ದು ಬಿಡುತ್ತೇನೆ." ಎಂದನು.

"ಇಲ್ಲ ಸಾರ್, ಕೆಲವು ಕಾರಣಗಳಿಗಾಗಿ ಸರಕಾರಕ್ಕೆ ವೇಗ ಮಾಡುವುದಕ್ಕಿಂತ, ಬಲ್ಲಡಿಯೂದ ತನಕ ನಡೆದುಕೊಂಡು ಹೋಗುವುದೇ ನನಗೆ ಹೆಚ್ಚು ಪ್ರಯವಾಗಿದೆ." ಎಂದ. ಉತ್ತರಿಸಿ ಆ ತರುಣ ಬಲ್ಲಡಿಯೂದ ಮಾರ್ಗದತ್ತ ತೀವ್ರವಾಗಿ ಮುಂದುವರಿದನು.

ಂ ಂ ಂ

ಕೈದೋಟಪೊಂದರಲ್ಲಿ ಬೆಳೆದು ನಿಂತಿದ್ದ ಎರಡು ಮಾಗಳು ಒಂದು ದಿನ ತಮ್ಮ ತಮ್ಮಲ್ಲಿಯೇ ಮಾತಾಡುತ್ತಿದ್ದವು. "ಎಲ್ಲಾದರೂ ದೂರ ಹೋಗಿ ಬಿಡಬೇಕು ಅನಿಸುತ್ತದೆ. ಈ ಬಂಧು ವಿಯೋಗವನ್ನು ಸಹಿಸಿ ಸಹಿಸಿ ಮನಸ್ಸು ರೋಸಿ ಹೋಗಿದೆ" ಎಂದಿತು ಒಂದು ಮಾರ. "ಏಲ್ಲಿಯಾ ಕಾಡಿಗೆ ಹೋದರೂ ಅಪಾಯ ತಪ್ಪಿದ್ದಲ್ಲ. ಕಟ್ಟಿಗೆ ಮಾರುವವರು ಇದ್ದಕ್ಕಿದ್ದಂತೆಯೇ ನುಗ್ಗಿ ಬಂದು ಅಕಸ್ಮಾತ್ತಾಗಿ ನಮ್ಮನ್ನು ಕಡಿದುರುಳಿಸುತ್ತಾರೆ. ಏಲ್ಲಿ ಸ್ವತಂತ್ರವೂ ಗಂಡಾಂತರ ಕಾದಿರುತ್ತದೆ. ಅಂದ ಬಳಿಕ, ಅಂತಹ ದುರ್ಮರಣವನ್ನು ಏಕೆ ಆಪ್ಪಬೇಕು?" ಎಂದಿತು ಎರಡನೆಯ ಮಾರ.

"ಅದೇನೋ ಸರಿಯೆ, ಆದರೂ ಇಲ್ಲಿ ಜೀವನವೇ ಬೇಸರವಾಗಿದೆ. ಇಲ್ಲಿಯ ಹಗಲು, ಇಲ್ಲಿಯ ರಾತ್ರಿ ಎಲ್ಲವೂ ಏಕರಸ ಅನಿಸುತ್ತಿದೆ. ಕಾಡಿಗಲ್ಲಾದರ ನಮ್ಮ ಸಂಬಂಧಿಕರು ತುಂಬ ಇದ್ದಾರೆ."

"ಸರಿ. ಆದರೂ, ನಮ್ಮನ್ನು ನೆಟ್ಟು, ನೀರು ಹಿಂಪಡಿಸಿ, ಲಾಲಿಸಿ—ಪಾಲಿಸಿದ ಮನುಷ್ಯನನ್ನು ನಮ್ಮ ಶೀತಲವಾದ ನರಳಿನಿಂದ ಸಂತೋಷಗೊಳಿಸುವುದು ಬೇಡವೇ? ಅವನ ಆಯುಸವನ್ನು ಹರಹಿಸುವುದು ನಮ್ಮ ಕರ್ತವ್ಯವಲ್ಲವೇ? ಅವನ ಸೇವೆಯು ಸಂದರ್ಭ ಬಂದಾಗ ಸ್ವಾರ್ಥಿಗಳಂತೆ ಅವನನ್ನು ಬಿಟ್ಟು ದೂರ ಹೋಗುವುದು ಸರಿಯೂದೀತೇ? ಅವನ ಪಂಶ್ರ ವಕ್ಕೆ ಈ ಬಗೆಯ ಬಹುಮಾನವೀಯುವುದು ತಪ್ಪು ಎಂದು ನಿನಗೆ ಅನಿಸುವುದಿಲ್ಲವೇ? ಇಲ್ಲ ಇಲ್ಲ, ನಮ್ಮ ಪೂರ್ವಜರು ಎಂದೂ ಇಂತಹ ಭ್ರಾತಕತನವನ್ನು ಮಾಡಿಲ್ಲ. ನಮ್ಮ ಜಾತಿಯ ಪರಂಪರೆಯಲ್ಲಿ ಇಂತಹ ಘಟನೆಯೆಂದೂ ನಡೆದ ದಿಲ್ಲ. ಬಂಧೂ, ನಾವು ಇಲ್ಲಿಯೇ ಬದುಕಿ ಒಂದು ದಿನ ನಮ್ಮ ಯಜಮಾನನ ಒಲೆಯ ಉರಿಸುವುದಕ್ಕೆ ನೆರವಾಗುವುದರಲ್ಲಿಯೇ ನಮ್ಮ ಜೀವನದ ಸಾರ್ಥಕತೆಯಿದೆ" ಎಂದಿತು ಎರಡನೆಯ ಮಾರ.

ಂ ಂ ಂ

ಕಾಂಗ್ರೇಸಿನ ಅಧಿವೇಶನ ಮುಗಿಯುವ ಹೊತ್ತಿಗೆ ಸರಿಯಾಗಿ ಧಾರಾಕಾರವಾಗಿ ಮಳೆ ಸುರಿಯತೊಡಗಿತು. ಸಭಾಭವನದಿಂದ ನಾಯಕರೆಲ್ಲರೂ ಒಬ್ಬೊಬ್ಬರಾಗಿಯೇ ಹೊರಟು ಹೋಗಲಾರಂಭಿಸಿದರು. ಒಂದು ಮೂಲೆಯಲ್ಲಿ ಶ್ರೀ ವೆಂಕಟೇಶ ನಾರಾಯಣ ತಿವಾರಿ ಅವರು, ಮಳೆಯು ಅಬ್ಬರ ತಾಳು ಕಡಿಮೆಯಾಗುವುದನ್ನು ಕಾಯುತ್ತಾ ನಿಂತಿದ್ದರು.

ಎಷ್ಟೋ ಮಂದಿ ಮುಂದಾಳುಗಳು ಆವರ ಮುಂದಿನಿಂದಲೇ ಹಾದು ಹೋದರು. "ಏನಪ್ಪಾ ವೆಂಕಟೇಶ್, ಕೊಡೆ ತರಲಿಲ್ಲವೆ?' ಎಂದು ವಿಚಾರಿಸುತ್ತಲೇ ಅವರೆಲ್ಲರೂ ಮುಂದುವರಿದಿದ್ದರು.

ಕೊನೆಗೆ ಪಂ. ಮದನ ಮೋಹನ ಮಾಲವೀಯರು ಸಭಾ ಭವನದಿಂದ ಹೊರ ಬಂದರು. ಮೂಲೆಯಲ್ಲಿ ಮುದುಡಿ ನಿಂತಿದ್ದ ತಿವಾರಿಯವರನ್ನು ಕಂಡ ತಕ್ಷಣ ಅವರು "ಏನೇ ವೆಂಕಟೇಶ, ನೀನು ಇಲ್ಲಿ ನಿಂತಿದ್ದಿಯಾ, ಬಾ ಕೊಡೆಯೊಳಗೆ" ಎಂದರು.

ತಿವಾರಿಯವರಿಗೆ ತುಂಬ ಸಂಕೋಚವಾಯಿತು. ಅವರು ಒಂದು ಕ್ಷಣ ಹಾಗೇ ನಿಂತು ಬಿಟ್ಟರು. ಕೂಡಲೇ ಮಾಲವೀಯ ಅವರು ತಿವಾರಿಯವರ ರಟ್ಟೆ ಹಿಡಿದು ಕೊಡೆಯೊಳಗೆ ಎಳೆದುಕೊಂಡು, ಮಂದಸ್ವರ ಹೆಜ್ಜೆಯಿಡುತ್ತಾ—"ಏಲ್ಲಯ್ಯಾ, ಸಂದರ್ಭದಲ್ಲಿ ಉಪಕಾರವಾಗದಿದ್ದರೆ ಈ ಕೊಡೆ ಇರುವುದಾದರೂ ಏಕೆ ಮತ್ತೆ?" ಎಂದರ.

ಂ ಂ ಂ

ಒಂದು ಊರಿನ ಒಬ್ಬ ದುಷ್ಟ ರಾಜನ ತನ್ನ ಹಳ್ಳಿಯ ಜನರ ಹೆತ್ತರವಿರುವ ಕತ್ತೆಗಳನ್ನು ಹಿಡಿದು ತಂದು, ತನ್ನ ಬಿಟ್ಟೀ ಕೆಲಸಗಳಿಗಾಗಿ ಉಪಯೋಗಿಸುತ್ತಿದ್ದನು. ಹೇಳದೆ ಕೇಳದೆ ತಮ್ಮಿಷ್ಟು ಸಂಪತ್ತನ್ನು ಅಪಹರಿಸುವ ರಾಜನಿಂದಾಗಿ ಪ್ರಜಾ ಜನರು ತುಂಬ ದುಃಖಿತರಾಗಿದ್ದರು.

ಒಂದು ದಿನ ಆ ಊರಿನ ಬೇಟೆಗೂಡಲು ಕಾಡಿಗೆ ಹೋದನು. ಕಾಡಿನಲ್ಲಿ ದಾರಿ ತಿಳಿಯದೆ ಇಡಿ ದಿನ ಸುತ್ತಾಡಿ ಸಾಯಂಕಾಲದ ಹೊತ್ತು ಅವನು ತನ್ನ ರಾಜ್ಯದ ಒಂದು ಹಳ್ಳಿಗೆ ಬಂದನು. ಅಲ್ಲಿ ಒಬ್ಬ ರೈತ ತನ್ನ ಕತ್ತೆಯನ್ನು ಮನೆ ಬಂದಂತೆ ಹೊಡೆಯುತ್ತಿದ್ದನು. ಕತ್ತೆಯ ಅರಚುವಿಕೆ ಕಂಡು ರಾಜನ ಮನಸ್ಸು ಕರಗಿತು. ಅವನು ಸಿಟ್ಟಿನಿಂದ—"ಏಯ್ ಕಟುಕಾ, ಯಾಕಯ್ಯಾ ಹಾಗೆ ಹೊಡೆಯುತ್ತಾ ಇದ್ದಿ ಕತ್ತೆಗೆ? ನಿನಗೆ ಶಕ್ತಿಯಿದ್ದರೆ ಅದನ್ನು ನೀನು ಈ ಬಾಯಿಬಾರದ ಪಶುವಿನ ಮೇಲೆ ತೋರಿಸಬೇಕೇ?' ಕೆರುಚಿ ಕೊಂಡನು.

ರೈತ ಒಮ್ಮೆ ಗಟ್ಟಿಯಾಗಿ ನಿಗಾಡಿದ ಆನಂತರ—"ತಮ್ಮಾ, ನೀನೆಲ್ಲೋ ಬೇರೆ ದೇಶದವನಾಗಿರಬೇಕು. ನಿನಗೆ ಏನೂ ತಿಳಿಯದು. ನಮ್ಮ ದೇಶದ ರಾಜ ಗಟ್ಟಿ ಮುಟ್ಟಾಗಿರುವ ಕತ್ತೆಗಳನ್ನು ತನ್ನ ಬಿಟ್ಟೀ ಕೆಲಸಗಳಿಗಾಗಿ ಹಿಡಿದು ತರಿಸುತ್ತಾನೆ. ಇದರ ಕೈಕಾಲು ಮುರಿಯಲಿ ಎಂದು ನಾನು ಇದನ್ನು ಹೊಡೆಯುತ್ತಿದ್ದೇನೆ. ಏಕೆಂದರೆ ಅನಂತರ ರಾಜ ನನ್ನ ಕತ್ತೆಯನ್ನು ಕೊಂಡು ಹೋಗಲಾರ. ರನಿಷ್ಟಪಕ್ಷನನ್ನ ಕತ್ತೆ ನನ್ನ ಬಳಿ ಇದೆ ಎಂಬಷ್ಟಾದರೂ ಸಂತೋಷ ನನ್ನ ಪಾಲಿಗೆ ಉಳಿಯುವುದಲ್ಲಾ?" ಎಂದು ಬಿಟ್ಟನು.

ರಾಜನಿಗೆ ತುಂಬ ನಾಚಿಕೆಯಾಯಿತು. ಅಂದಿನಿಂದ ಅವನು ಯಾರಿಂದಲೂ ಯಾವುದೇ ರೀತಿಯ ಬಿಟ್ಟೀ ಕೆಲಸವನ್ನು ಸ್ವೀಕರಿಸಲಿಲ್ಲ.

ಂ ಂ ಂ

ಬೆಟ್ಟದ ಮೇಲಿದ್ದ ಯುದ್ಧ ಶಿಬಿರದಲ್ಲಿ ಕುಳಿತು ನೆಪೋಲಿಯನ್ ಬೋನಾಪಾರ್ಟನು ತನ್ನ ಸೈನ್ಯ ಸಂಚಾಲನೆ ಮಾಡುತ್ತಿದ್ದನು. ಸುಸಂಘಟಿತ ವೀರರ ವಿಶಾಲ ಶತ್ರು ಸೈನ್ಯದ ಮುಂದೆ ನೆಪೋಲಿಯನ್ನನ ಸೇನೆ ಸೋಲಿನ ಹೆಬ್ಬಾಗಿಲಿನಲ್ಲಿ ನಿಂತಿತ್ತು. ಶತ್ರು ಸೈನ್ಯದೆದುರು ತನ್ನ ಸೇನೆ ವೀರ್ಯವಾಗಿ ಹೋರಾಡುತ್ತಿರುವುದನ್ನು ಗಮನಿಸಿದ ಉಪ ಸೇನಾಪತಿ—"ಈಗ ಯುದ್ಧ ನಿಲ್ಲಿಸುವುದೇ ಸರಿಯೂದೀತು. ಏಕೆಂದರೆ ಇಂದಿನ ಯುದ್ಧದಲ್ಲಿ ಜಯಗಳಿಸುವುದು ಅಸಾಧ್ಯ' ಎಂದುಕೊಂಡು ನೆಪೋಲಿಯನ್ನನ ಕೂಡಿ ವಿಚಾರ ವಿಮರ್ಶೆ ನೈಯಲು ಶಿಬಿರಕ್ಕೆ ಬಂದನು.

ದಾರಿಯಲ್ಲಿ ಅವನು ಬಗ ಬಗೆಯ ಸಿಗರೇಟುಗಳನ್ನು ಒಂದು ಪಕೇಟಿನಲ್ಲಿ ಜೋಡಿಕೊಂಡು ಒಂದು ನೆಪೋಲಿಯನ್ನನ ಗಮನವನ್ನು ತನ್ನತ್ತ ಆಕರ್ಷಿಸಲಿಕ್ಕಾಗಿ ಪಕೇಟನ್ನು ಅವನ ಮುಂದೆ ಚಾಚಿವನ್ನು. ಮುಖದ್ದರಂಗಿಂದ ತಪ್ಪಿ ದೃಷ್ಟಿ ಕೀಳದೇನೆ ನೆಪೋಲಿಯನ್ನ ಪಕೇಟಿನಲ್ಲಿದ್ದ ಒಳ್ಳೆಯ ಸಿಗರೇಟನ್ನು ಆರಿಸಿ ತೆಗೆದನು. ಉಪ ಸೇನಾಪತಿಯನ್ನು ಅವನು ಗಮನಿಸಲೇ ಇಲ್ಲ.

ಉಪ ಸೇನಾಪತಿ ಒಂದು ಮೂಕನೂ, ಆಡಪೆ ಉತ್ಸಾಹ ಪೂರ್ವಕವಾಗಿ ಹಿಂತಿ

(ಇಪ್ಪತ್ತೆಂಟನೇ ಪುಟ ನೋಡಿರಿ)

'HUB'

Modern Sound Projector

It's Rugged and Reliable
It's Tough and Thrifty
It's Your Best Buy

Having only three big sprockets

Dealers in.

Cinema Carbons,
Spares for all types of Projectors
Tungar Bulbs, Projection lamps,
Exciters, Screen, Valves etc. etc.

Contact:

RAMBHAI PATEL & SONS

7, RASHTRAPATI ROAD,

SECUNDERABAD-3 A. P.

H. O: BANGALORE

Branch: VIJAYAWADA

ಪ್ರಿನ್ಸಿಪಾಲ್ ಪಿ. ಗುರುರಾಜ ಭಟ್ಟ

ಬಾರಕೂರಿನ ಪ್ರಾಚೀನತೆಯನ್ನು ತಿಳಿಸುವ ಶಿಲಾಮೂರ್ತಿಗಳು

ತುಳುನಾಡಿನ ಐತಿಹಾಸಿಕ ಮಹತ್ವದ ಬಾರಕೂರು ದೇಗುಲಗಳ ಊರೇ ಆಗಿತ್ತು ಎಂದು ಐತಿಹ್ಯವಿದೆ. ಇಲ್ಲಿ ದೊರೆಯುವ ಅನೇಕ ಶಿಲಾಮೂರ್ತಿಗಳು ಬಾರಕೂರಿನ ಪ್ರಾಚೀನತೆಯನ್ನು ತಿಳಿಸುತ್ತವೆ. ಪ್ರತಿಮಾ ವಿಜ್ಞಾನದ ದೃಷ್ಟಿಯಿಂದಲೂ ಈ ಶಿಲಾಮೂರ್ತಿಗಳು ವಿಶಿಷ್ಟ ಸ್ಥಾನವನ್ನು ಹೊಂದಿವೆ.

ಬಾರಕೂರು ತುಳುನಾಡಿನ ಐತಿಹಾಸಿಕ ಕೇಂದ್ರ. ಶಾಸನಗಳಲ್ಲಿ ಇದು 'ಬಾರಕನೂರು' 'ಬಾರಕನ್ಯಾಪುರ' 'ಬಾರಕನ್ಯಾಪುರ' ಎಂಬುದಾಗಿ ಉಲ್ಲೇಖಿಸಿಗೊಂಡಿದೆ. ಸ್ಥಳಪುರಾಣ ಪ್ರಕಾರ 'ವಾರಕೂರು' ಎನ್ನಿಸಿಕೊಂಡಿದೆ. ಇಷ್ಟರ ತನಕ ದೊರಕಿದ ದಾಖಲೆ ಪ್ರಕಾರ 'ಬಾರಕನೂರು' ಎಂಬುದೇ ಈ ಊರಿನ ಅತಿ ಪ್ರಾಚೀನ ಹೆಸರು. ಇದನ್ನೊಳಗೊಂಡ ಶಾಸನವು ಸುಮಾರು ಕ್ರಿ. ಶ. 9—10 ನೇ ಶತಕಗಳಿಗೆ ಅನ್ವಯಿಸಿದ್ದೆಂದು ಹೇಳಬಹುದು. ಈ ಬಾರಕೂರಿನ ಕ್ಷೇತ್ರ ವಿಸ್ತಾರವು ಈಗಣ ಹಂಗಾರಕಟ್ಟೆಯ ವರೆಗೂ ಇತ್ತೆಂದು ತಿಳಿಯಲವಕಾಶವಿದೆ.

ಬಾರಕೂರಿನ ಪ್ರಾಚೀನತೆಯ ಕುರಿತಾಗಿ ಹಲಕೆಲವು ದಂತಕತೆಗಳಿವೆ. ಅದರಂತೆಯೇ ತುಳು ನಾಡಿನಲ್ಲಿ ಎಲ್ಲಾ ವಿಶೇಷವಾಗಿ ಗಮನದಲ್ಲಿರುವ 'ಭೂತಾಳ ಪಾಂಡ್ಯನ ಕಲಿಯೂ ಅಳಿಯ ಸಂತಾನದ ಕಟ್ಟುಕಟ್ಟಳೆಗಳೂ ಬಾರಕೂರಿನ ಇತಿಹಾಸಕ್ಕೇನೇ ಸಂಬಂಧಿಸಿದುವಾ.ವೆ. ಆದರೆ ಜನಜನಿತವಾದ ಈ ಭೂತಾಳಪಾಂಡ್ಯನ ಕತೆಗೆ ನಮಗಿಷ್ಟರ ತನಕ ಆಧಾರವಾಗಿ ಯಾವ ಶಿಲಾ ಶಾಸನವೂ ತಾಮ್ರ ಶಾಸನವೂ ದೊರಕದುದು ಆತ್ಯಾಶ್ಚರ್ಯಕರವಾಗಿದೆ. ಬಾರಕೂರಿನಲ್ಲಿ ಈಗ ನಮಗೆ ದೊರಕುವ ಶಿಲ್ಪದ ಅವಶೇಷಗಳನ್ನು ಪರಿಶೀಲಿಸಿದರೆ ಈ ಊರಿನ ಪ್ರಾಚೀನತೆಯ ಪರಿಚಯವು ಸ್ವಲ್ಪ ಮಟ್ಟಿಗಾಗಬಹುದು.

ಬಾರಕೂರಿನ ಹತ್ತು ಕೇರಿಗಳಲ್ಲಿ ಜಾಳಿಗೇರಿ ಒಂದಾಗಿದೆ. ಈ ಕೇರಿಯಲ್ಲಿ ಒಂದು ಗಣಪತಿ ದೇವಾಲಯವಿದೆ. ಒಂದು ಶಿವಾಲಯವೂ ಇದೆ. ಈ ಎರಡು ದೇವಾಲಯಗಳೂ ಒಂದರ ಒತ್ತಿಗೆ ಇನ್ನೊಂದಿದ್ದು ಜೋಡಿಯಾಗಿವೆ. (Twin temples) ಈದೇಗುಲಗಳ ಎದುರುಗಡೆ ದೀರ್ಘವಾದ ಒಂದು ಗೋಪುರವು ಕಗ್ಗಲ್ಲಿನಿಂದ ನಿರ್ಮಿತವಾಗಿದೆ. ಈ ಕಟ್ಟಡಗಳೆಲ್ಲಾ ವಿಜಯನಗರ ಕಾಲದ್ದಾಗಿವೆ. ಆದರೆ ಗಣಪತಿ ಮಂದಿರದ ಒಳಗಿರುವ ಮೂಲ ಸ್ಥಾನ ದೇವತೆಯಾದ ಶ್ರೀ ಗಣೇಶನ ವಿಗ್ರಹವು ಬಹು ಪ್ರಾಚೀನವಾಗಿದ್ದು ಎಂದರೆ ಸುಮಾರು ಕ್ರಿ. ಶ. 7—8ನೇ ಶತಕಗಳಷ್ಟು ಹಿಂದಿನದ್ದೆನ್ನಬಹುದು. ಐತಿಹ್ಯ ಪ್ರಕಾರ ಈ ವಿಗ್ರಹವು ಜಾಳಿಕೇರಿಯ ಕೆರೆಯಲ್ಲಿ ಹುದುಗಿತ್ತೆಂದೂ ಆದರ ಕೆಲವನ್ನು ತೆಗೆಯುವಾಗ ಸಿಕ್ಕಿತೆಂದೂ ತಿಳಿದು ಬರುತ್ತದೆ. ಈ ಹೇಳಿಕೆಯು ಸತ್ಯವಾಗಿರಲೂ ಬಹುದು. ಕಾರಣ ಶ್ರೀ ಗಣೇಶ ವಿಗ್ರಹವು ದ್ವಿಬಾಹು ವಾಗಿದ್ದು ಕೇರಟೆ ವಿರಹಿತವಾಗಿದೆ. ಪ್ರಭಾವಳಿ ವಿರಹಿತವಾಗಿದೆ. ಶಿಲ್ಪ ಲಕ್ಷಣವು ಬಹು ಪ್ರಾಚೀನ. ಹಿಂದೊಮ್ಮೆ ಈ ವಿಗ್ರಹವು ಒಂದು ಗುಡಿಯಲ್ಲಿದ್ದು ಆ ಗುಡಿಯು ನಾಶವಾದ ಅನಂತರದಲ್ಲಿ ಕೆರೆಗೆ ಬಿಸುಟಲ್ಪಟ್ಟಿರಬೇಕು. ಪುನರುಜ್ಜೀವನಾ ಕಾರ್ಯ ಮತ್ತೆನ್ನೆಯ ವಿಜಯನಗರದ ಅಳ್ವಿಕೆಯಲ್ಲಿ ನಡೆದಿದ್ದಿರಬೇಕು.

ಬಾರಕೂರಿನಲ್ಲಿ ಕಂಡು ಬರುವ ಪ್ರಾಚೀನ ವಿಗ್ರಹಗಳಲ್ಲಿ ಕೋಟೆಕೇರಿಯಲ್ಲಿರುವ ಬಟ್ಟೆ ವಿನಾಯಕನ ಮೂರ್ತಿಯು ಇನ್ನೊಂದಾಗಿದೆ. ಐತಿಹ್ಯ ಪ್ರಕಾರ ಈಗಿರುವ ಈ ದೇಗುಲದ ಸ್ಥಳವು ಬಹಳ ಕೆಳಮಟ್ಟದಲ್ಲಿತ್ತೆಂದು ತಿಳಿದು ಬರುತ್ತದೆ. ದೇಗುಲದ ಈಗಿನ ರಚನೆಯೂ ವಿಜಯನಗರದ ಕಾಲಕ್ಕೆ ಅನ್ವಯಿಸಿದ್ದಾಗಿದೆ. ಆದರೆ ವಿನಾಯಕ ಮೂರ್ತಿಯು ದ್ವಿಬಾಹುವಾಗಿದ್ದು ಸುಮಾರು ಕ್ರಿ. ಶ. 9—10ನೇ ಶತಕದವ್ದಾದರೂ ಪ್ರಾಚೀನವಾದ ಶಿಲ್ಪವನ್ನು ಹೊಂದಿಕೊಂಡಿದೆ. ಪ್ರಭಾವಳಿಯು ವಿರಹಿತವಾಗಿದ್ದು ಟೊಪ್ಪಿಯಾಕಾರದ ಕಿರೀಟ ಮಾತ್ರವಿದೆ. ಸುಂದಿಲ ರೀತಿ ಮತ್ತು ಉದರ ಬಂಧ ಪಟ್ಟಿಕೆಗಳಿಂದಲೂ ವಿಗ್ರಹದ ಪ್ರಾಚೀನತೆಯನ್ನು ನಿಶ್ಚಯಿಸಬಹುದು. ಬಟ್ಟೆ ವಿನಾಯಕನೆಂದರೆ ವಿದ್ವಾರಿಯಲ್ಲರುವ, ಹೆದ್ದಾರಿಯ ಅಧಿಷ್ಠಾಯಕನಿರುವ ವಿನಾಯಕನೆಂದರ್ಥವಾಗುವುದು. ಬಾರಕೂರಿನಲ್ಲಿ ಈ ವಿನಾಯಕನಿಗೆ ವಿಶೇಷವಾದ ಸೇವೆ ದೊರೆಯುತ್ತದೆ.

ಪಂಜಲಿಂಗೇಶ್ವರ ದೇಗುಲದ ಗರ್ಭಗೃಹವು ಎಷ್ಟೆಂದರೂ ಕ್ರಿ. ಶ. ಸುಮಾರು 8—9ನೇ ಶತಕಗಳಷ್ಟು ಹಿಂದಿನದು. ಈ ದೇಗುಲದ ನವರಂಗದಲ್ಲಿ ಒಂದು ಗಣೇಶನ ವಿಗ್ರಹವೂ ಇನ್ನೊಂದು ಮಹಿಷಮರ್ದಿನಿಯ ವಿಗ್ರಹದ ಉಬ್ಬು ಶಿಲ್ಪವು relief ಕಂಡುಬರುತ್ತವೆ. ಗಣೇಶನ ವಿಗ್ರಹವು ಪಂಜಲಿಂಗೇಶ್ವರ ದೇಗುಲದ ಗರ್ಭಗೃಹದಷ್ಟೇ ಹಳೆಯದು. ಸುಮಾರು 18" ಎತ್ತರವುಳ್ಳ ಈ ವಿಗ್ರಹವು ಚತುರ್ಬಾಹುವಾಗಿದ್ದು ವಿಶಾಲವಾದ ಕಿರೀಟವೆಂದಲೂ ಸ್ವಾಭಾವಿಕ ಆನೆಯ ಮುಖವು ಹೋಲುವ ಮುಖದಿಂದಲೂ ನೋಡುಗರಿಗೆ ಇಳಿದು ಎಣಿಕೆಗೆ ತಿರುಗಿ ಮಧ್ಯದಲ್ಲಿರುವ ಕಲಶವನ್ನು ಹಿಡಿದು ಕೊಂಡಿರುವ ಸೊಂಡಿಲಿನಿಂದಲೂ ಕೂಡಿ ಕೊಂಡಿದ್ದು ಪ್ರಭಾವಳಿ ವಿರಹಿತವಾದ ಶಂಖುವಾಕಾರದ ಕಿರೀಟವನ್ನು ಧರಿಸಿರುವ ಮೂರ್ತಿಯಿದು.

(ಇಪ್ಪತ್ತೇಳನೇ ಪುಟ ನೋಡಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ
ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್



ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ನುತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್ ಮುಂತಾದ

ಸುಗಂಧದ್ರವ್ಯಗಳೂ ಸಹಾ

ಉತ್ತಮ ರೀತಿಯಲ್ಲಿ ಪ್ರೆಸಿಸಿತ್ಯವೂ ಕಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್, ನಂಜನಗೂಡು.
(ಮೈಸೂರು ಸ್ಟೇಟ್)

ಶಾಖೆಗಳು: ಬೆಂಗಳೂರು, ಮಂಗಳೂರು, ಮೈಸೂರು.

ಶ್ರೀ ಯ. ನಾ. ಉಡುಪ, ವಿದ್ವಾನ್

ಧರ್ಮ ಸಂಸ್ಥಾಪನಾರ್ಥಾಯ...

ಶ್ರೀ ಶಂಕರಾಚಾರ್ಯರು ಮಂಡನ ಮಿಶ್ರರನ್ನು ಶಾಸ್ತ್ರಾರ್ಥದಲ್ಲಿ ಸೋಲಿಸಿ ತಮ್ಮ ಅದ್ವೈತವಾದವನ್ನು ಎತ್ತರಕ್ಕೇರಿಸಿದರು; ಧರ್ಮ ಸಂಸ್ಥಾಪನೆ ಮಾಡಿ, ಗೀತಾಚಾರ್ಯನ ಉಕ್ತಿಗೆ ಪ್ರತ್ಯಕ್ಷ ನಿದರ್ಶನರಾದರು. ಭಾರತದಲ್ಲಿ ಈ ಬಗೆಯ ಆಚಾರ್ಯಪುರುಷನ ಆವಶ್ಯಕತೆ ಎಂದಿಗಿಂತ ಇಂದು ಹೆಚ್ಚಿದೆ ಎನಿಸುವುದಿಲ್ಲವೆ?

ಭಗವಾನ್ ಶ್ರೀಕೃಷ್ಣನಿಂದ ಭಗವದ್ಗೀತೆಯು ಬೋಧಿಸಲ್ಪಟ್ಟ ಸಲವು ಶತಮಾನಗಳ ವರೆಗೆ ಸಮಗ್ರ ಭಾರತವು ಶಾಂತಿ ಪ್ರದೀಪದ ತಂಬೆಳಕಿನಲ್ಲಿ ಸುಖಸುಭಿಕ್ಷೆಗಳಿಂದ ನಲಿಯುತ್ತಿತ್ತು. ಆ ಕಾಲವು ಭಾರತದ ಸುವರ್ಣಯುಗವಾಗಿತ್ತು. ಮುಂದೆ ಅನ್ಯ ಜನಾಂಗದವರ ಆಕ್ರಮಣದಿಂದ ಭಾರತದಲ್ಲಿ ಧರ್ಮಗ್ಲಾನಿಯಾಗುತ್ತಾ ಬಂತೋ, ಅಥವಾ ಭಾರತೀಯರ ಒಲವು ವಾತಾವರಣದ ದೋಷದಿಂದ ಅಧರ್ಮದ ಕಡೆಗೆ ಹರಿದು ಪರಕೀಯರ ಆಕ್ರಮಣವಾಯಿತೋ— ಅಂತೂ ಅಧರ್ಮದಿಂದ ಜನರ ಕಷ್ಟ ಪರಂಪರೆಗಳು ಹೆಚ್ಚಾದುವು; ಸತ್ಕರ್ಮಗಳು ಲೋಪವಾಗಿ ದುಷ್ಕರ್ಮಗಳು ಪ್ರಬಲವಾದುವು. ಹಿಂದೆ ಯಜ್ಞಯಾಗಾದಿಗಳಲ್ಲಿ ಮಾತ್ರ ಇದ್ದ ಪಶುವಧೆಯು ಮುಂದೆ ಸಮಸ್ತ ದೇವ ದೇವತೆಗಳ ಪ್ರಸನ್ನತೆಗಾಗಿ, ಗುಡಿಗೋಪುರಗಳಲ್ಲೂ, ಗುರುಮಂದಿರ ವಿದ್ಯಾಮಂದಿರಗಳಲ್ಲೂ ಪ್ರಾಣಿಬಲಿಗಳೊಡನೆ ಅಪರೂಪವಾಗಿ ನರಬಲಿಗಳೂ ನಡೆಯಲಾರಂಭಿಸಿದುವು. "ಜೀವೋ ಜೀವಸ್ಯ ಜೀವನಂ' ಜೀವಗಳಿಗೆಲ್ಲಾ ಆತ್ಮಾರ್ಪಣೆಯೇ ಜೀವನವಿಧಿಯಾಯಿತು. ಹೀಗೆ ಜಗತ್ತು ಹಿಂಸೆಯಿಂದ ತಲೆಭಾರವೆನ್ನಿಸಿದಾಗ, ಭಗವಾನ್ ಬುದ್ಧನು ಜನ್ಮವೆತ್ತಿ 'ಅಹಿಂಸಾ ಪರಮೋಧರ್ಮಃ' ಎಂದು ಆಸೇತುಹಿಮಾಚಲ ಪರ್ಯಂತ ಮಾರ್ಮೊಳಗುವಂತೆ ಘೋಷಿಸಿದನು. ಆಗ ಅಸಂಖ್ಯ ಭಾರತೀಯರು ಬುದ್ಧ ದೇವನ ವ್ಯಕ್ತಿತ್ವಕ್ಕೆ ಶರಣಾಗಿ ಬೌದ್ಧ ಸನ್ಯಾಸಿಗಳಾದರು. ಆಗ ಯಜ್ಞದ ವೀರಸಿಗಿಂತ ಪಡ್ಡೆಯರಿಗೇ ಜೇಕೃವಿನ ಉದಾತ್ತ ಸ್ಥಾನ ದೊರಯಿ ತೊಡಗಿತು; ಉತ್ಸಮ ಐಶ್ವರ್ಯವೇ ತೃಪ್ತಿ ಎನಿಸಿತು; ಓಜಸ್ವಿಯಾದ ದೈಧ ಉದ್ಯೋಗಿಯು ಜೀವನದ ಪ್ರತಿದಿನವೂ ಅಮೌಲ್ಯವೆನ್ನಿಸಿತು. ಸಾರಭವಿಲ್ಲದ ಪುಚ್ಚದಂತೆ ಮಡಿಯಿಂಚಿ ನಡೆಯಲ್ಲದ ಮಾನವರ ಜಾಳು ಹಗುರವೆನ್ನಿಸಿತು. ಆದರೆ ಸನಾತನ ವೇದವನ್ನು ಮನ್ನಿಸುವುದು ತಪ್ಪಿತು. ಶ್ರೌತ ಕರ್ಮಗಳಾದ ಯಜ್ಞಯಾಗಗಳು ಕೇವಲ ಪ್ರಾಚೀನ ಶಾಸ್ತ್ರಗಳಲ್ಲಿ ಮಾತ್ರ ಓದುವ ವಿಷಯವಾಯಿತು. ಕ್ರಮೇಣ ದೇವರ ಅಸ್ತಿತ್ವಕ್ಕೂ ಭಂಗ ಬರತೊಡಗಿತ್ತು. ಇದರಿಂದ ನಾಸ್ತಿಕ ಮತಗಳು ಭಾರತದಲ್ಲಿ ಹಾಸು ಹೊಕ್ಕಾಗಿ ಕಾಲು ಚಾಚಿದುವು. ಭಾರತೀಯರಿಗೆ ಮನಃ ದಿಕ್ಕು ತೋಚದಂತಾದಾಗ, ಸುಬ್ರಹ್ಮಣ್ಯನ (ಸು=ಒಳ್ಳೆಯದಾಡ, ಬ್ರಹ್ಮಣ್ಯ= ಕರ್ಮಮಾರ್ಗವನ್ನು ಸ್ಥಾಪಿಸಿದವನ) ಅವತಾರವೆನ್ನಿಸಿದ ಕುಮಾರಿಲ ಭಟ್ಟರು (ಭಟ್ಟಪಾದರು) ಬೌದ್ಧ ಮತವನ್ನು ಖಂಡಿಸಿ, ವೇದಕ್ಕೆ ಪ್ರಾಮಾಣ್ಯವನ್ನು, ಕರ್ಮಮಾರ್ಗಕ್ಕೆ ನವ ಚೇತನವನ್ನೂ ಊಡಿಸಿ ಹಿಂದೂ ಧರ್ಮವನ್ನು ಎತ್ತಿ ಹಿಡಿದರು. ಆದರೂ ಮುಂದೂ ಶೂಕವುಳ್ಳ ಸನಾತನ ಧರ್ಮವನ್ನು ಗಗನದೆತ್ತರಕ್ಕೆ ಎತ್ತಿ ಹಿಡಿಯುವ ವ್ಯಕ್ತಿತ್ವ ಇಸರಲ್ಲಿ ಇಲ್ಲದಾಯಿತು. ಆಗ ಸಾಧುಗಳ ಪರಿತ್ರಾಣಕ್ಕಾಗಿ ಸುನಃ ಭಾರತ ಮಾತೆಯು ದೇವಂ ದೇವನನ್ನು ಮರಿ ಹೊಕ್ಕಳು. ಆಗ ಧರ್ಮ ಸಂಸ್ಥಾಪನಾರ್ಥವಾಗಿ ಅವತರಿಸಿದವರೇ ಶ್ರೀ ಶ್ರೀ ಶಂಕರಾಚಾರ್ಯರು!

ಂ ಂ ಂ

ಶ್ರೀ ಶಂಕರಾಚಾರ್ಯರು ಭಟ್ಟಪಾದರ ಆಜ್ಞೆಯಂತೆ ಪ್ರಯಾಗ ಕ್ಷೇತ್ರದಿಂದ ಹೊರಟು ನರ್ಮದಾ ಮತ್ತು ಮಾಹಿಷ್ಮತಿ ನದಿಗಳ ಸಂಗಮಸ್ಥಾನದಲ್ಲಿದ್ದ ಮಾಹಿಷ್ಮತೀ ಪುರವನ್ನು ಸೇರಿ ಆಲ್ಲಿ ವಿಹಾಪಂಡಿತನಾದ ಮಂಡನ ಮಿಶ್ರನ ಮನೆಯನ್ನು ವಿಚಾರಿಸುತ್ತಾ ಬಂದರು. ಈ ನಗರ ಈಗ ಮಧ್ಯ ಭಾರತದ ಇಂದೂರು ಜಿಲ್ಲೆಯ ನರ್ಮದಾ ನದಿಯ ತೀರದಲ್ಲಿ ಮಾಂಧಾತಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅಲ್ಲಿ ನದಿಯಲ್ಲಿ ಆಚಾರ್ಯರು ತಮ್ಮ ನಿತ್ಯಾಹ್ನಿಕಗಳನ್ನು ನಿರ್ವರ್ತಿಸಿಕೊಂಡು, ಮಧ್ಯಾಹ್ನದ ವೇಳೆ ಮಂಡನ ಮಿಶ್ರನ ಮನೆಯ ಕಡೆಗೆ ಬರುತ್ತಿರುವಾಗ, ನವಿಗೆನೀರಿಗಾಗಿ ಹೋಗುತ್ತಿರುವ ಸ್ತ್ರೀಯರನ್ನು ಕಂಡು— 'ಮಂಡನ ಮಿಶ್ರನ ಮನೆ ಎಲ್ಲಿ?" ಎಂದು ವಿಚಾರಿಸಿದರು. ಆಗ ಆ ಸ್ತ್ರೀಯರು – 'ಎಲೈ ಸನ್ಯಾಸಿಯೇ, ವೇದವಾಕ್ಯವು ಸ್ವತಃ ಪ್ರಮಾಣವೆ? ಅಥವಾ ಅನ್ಯ ಗ್ರಂಥಗಳಿಂದ ಪ್ರಮಾಣಿಸಲ್ಪಡಕ್ಕುದೆ? ಪ್ರಾಣಿಗಳಿಗೆ ಸುಖ ದುಃಖಗಳನ್ನುಂಟು ಮಾಡುವುದು ಕರ್ಮವೆ? ಅಥವಾ ಪರಮಾತ್ಮನೆ? ಜಗತ್ತು ನಿತ್ಯವೆ? ಅನಿತ್ಯವೆ? ಎಂದು ಯಾವ ಮನೆಯಲ್ಲಿ ಗಿಳಿಗಳು ವಾದ ಮಾಡುತ್ತಿರುವುವೋ ಅದೇ ಮಂಡನ ಪಂಡಿತರ ಮನೆ" ಎಂದು ನದಿಯ ಕಡೆಗೆ ಹೊರಟು ಹೋದರು. ಆಚಾರ್ಯರು ಆ ಸ್ತ್ರೀಯರ ಚಾತುರ್ಯಕ್ಕೆ ಮೆಚ್ಚಿ, ಅವರು ಜೇಳಿದ ಗುರುತನ್ನೇ ಹಿಡಿದು ಮಂಡನ ಪಂಡಿತನ ಮನೆಗೆ ಬಂದಾಗ ಅದರ ಬಾಗಿಲು ಮುಚ್ಚಿತ್ತು. ಆಗ ಆಚಾರ್ಯರು ಯೋಗ ಮಹಿಮೆಯಿಂದ ಆಕಾಶ ಮಾರ್ಗವಾಗಿ ಆ ಮನೆಯನ್ನು ಪ್ರವೇಶಿಸಿದರು. ಆ ಮನೆಯು ಸಂಸ್ಕೃತೀ ನಿಲಯವಾಗಿದ್ದರೂ ವೈಕುಂಠದಂತೆ ಸಂಪತ್ಸಮೃದ್ಧವಾಗಿತ್ತು.

ಮಂಡನ ಮಿಶ್ರರು ಮೀಮಾಂಸಾ ಶಾಸ್ತ್ರವನ್ನು ಪ್ರಚಾರ ಮಾಡಿ, ದೇಶದಲ್ಲಿ ಧಾರ್ಮಿಕ ಕ್ರಾಂತಿಯನ್ನುಂಟುಮಾಡಿದ ಭಟ್ಟ ಪಾದರ ನೂರಾರು ಪ್ರಮುಖ ಶಿಷ್ಯರಲ್ಲೊಬ್ಬರು. ಇವರಲ್ಲಿ ಭಟ್ಟ ಪಾದರ ಪಟ್ಟಶಿಷ್ಯರಾದ ಪ್ರಭಾಕರರು ಮೀಮಾಂಸ ಶಾಸ್ತ್ರದ ತಳಹದಿಯ ಮೇಲೆ ಗುರು ಮತವೆಂಬ ನವೀನ ಮತವನ್ನು ಪ್ರಚಾರ ಮಾಡಿದರು. ಇವರ ಅಲೌಕಿಕ ಪ್ರತಿಭೆ ಕುಮಾರಿಲ ಭಟ್ಟರಿಗೂ ಬೆರಗನ್ನುಂಟು ಮಾಡಿತ್ತು. ಎರಡನೆಯ ಶಿಷ್ಯರಾದ ಮಂಡನ ಮಿಶ್ರರ ಹುಟ್ಟು ಹೆಸರು ವಿಶ್ವರೂಪನೆಂದು. ಈತನು ಪಂಡಿತ ಮುರಲಿಯ ಮಂಡನ (ಅಲಂಕಾರ) ಸ್ವರೂಪನಾಗಿದನು. ಆ ಕಾಲದಲ್ಲೇ ಈತನು ಕರ್ಮಕಾಂಡದಲ್ಲಿ ವಿಷ್ಣುತ ಪಂಡಿತ; ಕರ್ಮಮೀಮಾಂಸೆಯಲ್ಲಿ ಅದ್ವಿತೀಯ ವಿದ್ವಾಂಸ. ಈತನ ಪಾಂಡಿತ್ಯ ಪ್ರತಿಭೆಗಳಿಂದ ಈತನು ಬ್ರಹ್ಮನ ಅವತಾರವೆಂಬ ಸಂಪೂರ್ಣ ಆರ್ಯಾವರ್ತದಲ್ಲೇ ಜನಜನಿತವಾಗಿತ್ತು. ಇವನ ಪತ್ನಿ ಭಾರತಿಯು (ಅಂಬಾ, ಉಂಬಾ) ಶಾಸ್ತ್ರಾರ್ಥದಲ್ಲಿ ಬಹಳ ನಿಪುಣೆಯೊದುದರಿಂದ ಆಕೆಯನ್ನು ಸರಸ್ವತಿಯ ಅವತಾರವೆಂದು ನಂಬಿದ್ದರು. ಮಂಡನ ಮಿಶ್ರರಿಗೆ ದ್ವೈತ ಮಾರ್ಗದಲ್ಲಿ ಮಾತ್ರ ಅಗ್ರಹವಿದ್ದರೂ, ಆವರ "ಬ್ರಹ್ಮಸಿದ್ಧಿ' ಎಂಬ ಗ್ರಂಥದಿಂದ ಶ್ರೀ ಶಂಕರಾಚಾರ್ಯರಂತೆ ಇವರೂ ಅದ್ವೈತವಾದಿಗಳೆಂದು ಸ್ವಪ್ನವಾಗುತ್ತದೆ. ಆದರೆ ಶಂಕರಾಚಾರ್ಯರಿ ಅದ್ವೈತವು ಉಪನಿಷತ್ತುಗಳನ್ನ ವಲಂಬಿಸಿತ್ತು; ಮಂಡನರ ಅದ್ವೈತವಾದವು ಉಪನಿಷದ್ವಿರುದ್ಧವಾಗಿತ್ತು.

ಶ್ರೀ ಆಚಾರ್ಯರು ಮಂಡನ ಪಂಡಿತನ ಮನೆಯನ್ನು ಪ್ರವೇಶಿಸಿದ ದಿನ ಆತನ ತಂದೆಯ ಶ್ರಾದ್ಧವಾಗಿತ್ತು. ಆತನು ಮನೆಯ ಬಾಗಿಲನ್ನು ಮುಚ್ಚಿ, ವ್ಯಾಪಕನ್ನು ಪಿತೃಸ್ಥಾನದಲ್ಲಿಯೂ, ಜೈವಿನಿಗಳನ್ನು ವಿಶ್ವೇದೇವಸ್ಥಾನದಲ್ಲಿಯೂ, ಲಕ್ಷ್ಮೀನಾರಾಯಣ ಸಾಲಿಗ್ರಾಮವನ್ನು ವಿಷ್ಣು ಸ್ಥಾನದಲ್ಲಿಯೂ ಇಟ್ಟು ಅರ್ಚಿಸುತ್ತಿದ್ದನು. ಮನೆಯೊಳಗೆ ಅಕಸ್ಮಾತ್ತಾಗಿ ಆಚಾರ್ಯರನ್ನು ಕಂಡ—ಸನ್ಯಾಸ ವಿರೋಧಿಯಾದ ಮಂಡನ ಮಿಶ್ರನಿಗೆ ಎಲ್ಲಿಲ್ಲದ ಸಿಟ್ಟು ಬಂತು. ಅವನು ಆಚಾರ್ಯರನ್ನು ಕಂಡು ತಿರಸ್ಕಾರದಿಂದ—"ಕುತೋ ಮುಂಡೀ?" "ಸನ್ಯಾಸಿ ಎಲ್ಲಿಂದ ಬಂದವನು?" ಎಂದು ಆಚಾರ್ಯರನ್ನು ಕೇಳಲು, ಅವರು ನೇರವಾಗಿ 'ಕ.ತಃ' ಶಬ್ದಕ್ಕೆ "ಎಲ್ಲಿಯವರೆಗೆ' ಎಂದೂ, "ಮುಂಡೀ" ಪದಕ್ಕೆ "ಬೋಳ" ಎಂಬ ಅರ್ಥವನ್ನು ಇಟ್ಟುಕೊಂಡು— "ಆಗಳಾನ್ಕುಂಡೀ" "ಕಪ್ಪಿನಿಂದ ಮೇಲೆ ಬೋಳ" ಎಂದರು. ಆಗ ಮಂಡನನು ಈತನಿಗೆ ತನ್ನ ಮಾತಿನ ಅರ್ಥ ತಿಳಿಯಲಿಲ್ಲವೆಂದು—'ಪಂಥಾಸ್ತೇ ಕೃಚ್ಛ್ರತೇ ವ್ಯಯಾ' "ನಿನ್ನ ಮಾರ್ಗವು ನನ್ನಿಂದ ಕೇಳಲ್ಪಟ್ಟಿತು" ಎಂದನು. ಆಚಾರ್ಯರು ಆ ವಾಕ್ಯಕ್ಕೆ "ನಿನ್ನನ್ನು ಕೇಳಿದುದಲ್ಲ; ನೀನು ಬಂದ ಮಾರ್ಗವನ್ನು ಕೇಳಿದುದು' ಎಂದು ಅರ್ಥ ಕಲ್ಪಿಸಿಕೊಂಡು— 'ಕೇವಹಿ ಪುಂಥಾಃ?" "ದಾರಿಯು ಏನು ಹೇಳಿತು?" ಎಂದರು. ಆಚಾರ್ಯರ ಮಾತನ್ನು ಕೇಳಿ ಪಂಡಿತನಿಗೆ ಸಿಟ್ಟು ನೆತ್ತಿಗೇರಿತು. ಅವನು ಹೆಲ್ಲು ಕಡಿಯುತ್ತಾ —ಪ್ರನ್ಯಾತಾ ಮುಂಡಾ ಇತ್ಯಾದಿ" "ನಿನ್ನ ತಾಯಿ ಮುಂಡೆ

ಇದೀಗಲೇ ಹೊಸತಾಗಿ ತೆರೆಯಲ್ಪಟ್ಟಿದೆ.

ನೇತ್ರ ರಕ್ಷಣೆಗಾಗಿ—

ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ—

ಅತ್ಯಾಧುನಿಕ ಆಕರ್ಷಕ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)

Phone: 26 1 48

The only Qualified optometrist of South

Shetty's Optics & Contact Lens Clinic

London Qualified Optometrists

೭ ಈ' ಗೆನ್ ಬೋಸ್ಟ್ರೀಟ್, ಬಾರ್ಬೂರ್ ಗೇಟ್ ಪೋಸ್ಟ್ ಆಫೀಸಿನ ಎದುರು

ಬೊಂಬಾಯಿ-೧.

ಲಂಡನ್ ಕಾರ್ಪೋರೇಶನ್ ಮಾನ್ಯತೆ ಪಡೆದ ಅನುಭವಿಗಳ ನೇತೃತ್ವದಲ್ಲಿ ನೇತ್ರ ತಜ್ಞರಿಂದ ನೇತ್ರ ಪರೀಕ್ಷೆ.

ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು.

ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವರ್ ಗಳ ಅವಶ್ಯಕತೆಯಿರುವ 'ಸೆಲೆಕ್ಟ್ ಲೆನ್ಸ್'ನ ತಜ್ಞರು.

ಎಂದಿತು" ಎಂದನು. ಫೆನ ಏದ್ವಾಂಗನಾದ ತಾನು ಶ್ರೀ ವ್ಯಾಸ ಜೈಮಿನಿಗಳ ಮುಂದೆಯೇ ಗ್ರಾಮ್ಯ ಶಬ್ದಗಳನ್ನಾಡುವುದು ತನ್ನ ನ್ಯಕ್ಕೆನ್ನೇ ಜಂಗವಲ್ಲ ಎಂದು ಆತನಿಗೆ ಜೊತೆಯದಿದ್ದದು ಆರವೂ ಶ್ಚರ್ಯ! ಆಚಾರ್ಯರಿಗಂತೂ ಮಂಡನನ್ನು ಕೆರಳಿಸುವ ಕುತೂಹಲ ಹೆಚ್ಚಿತು. 'ತಥೈವಹಿ | ಪಂಡಾನಂ ಶ್ವಮ ಶೃಚ್ಚ ಸ್ತ್ರಾಂ ಪಂಥಾಃ ಪ್ರತ್ಯಾಹ ಮಂಡನ' 'ಎಲ್ಲಿ ವಂಡನನೇ, ಆಡೇ ನಿಜ. ದಾರಿಯನ್ನು ಕರಿತು ನೀನು ಕೇಳಿದವನಾದುದರಿಂದ ದಾರಿಯನು ಕೊಟ್ಟು ಉತ್ತರವೂ ನಿನಗೇ ಆಯಿತು.ಆಚಾರ್ಯರ ನೂತಿನಿಂದ ಮಂಡನನ ಮೋರೆಯು ಕೆಂಪು ಕೆಂಪಾಯಿತು. 'ಅಹೋ ಪೀತಾಕೆಮು ಸುರಾ?' 'ಎಲಾ, ಒಂದು ಕೇಳಿದರೆ ಒಂದು ಹೇಳುತ್ತಿಯಲ್ಲ; ಮದ್ಯಪಾನ ಮಾಡಿರುವೆಯೊ?' ಮಂಡನನು ಬೆದರು ಕಚ್ಚಿ ಕೇಳಿದನು. ಆಚಾರ್ಯರು ಮಂಡನನ ಪ್ರಶ್ನೆಯಲ್ಲಿ 'ಪೀತಾ' ಎಂಬುದಕ್ಕೆ 'ಹಳದಿ ಬಣ್ಣ' ಎಂದು ಅರ್ಥ ಕಲ್ಪಿಸಿ—'ನೈವ ಶ್ವೇತಾ ಯತಃ ಸ್ಮರ' 'ಎಲಾ ಹೆಂಡವು ಬೆಳ್ಳಗಿದ್ದರೂ ಹಳದಿಯೆನ್ನುವಿಯಲ್ಲ; ನಿನ್ನ ಅನುಭವವನ್ನು ಜ್ಞಾಪಕಕ್ಕೆ ತಾ" ಎಂದು ನಕ್ಕರು. ಮಂಡನಮಿಶ್ರನಿಂದ ಒಮ್ಮೆನಡುಗಿದನು. 'ಕಂ ತ್ವಂ ಜಾನಾಸಿ ತದ್ಬ್ರಾಂ?' 'ಮದ್ಯದ ಬಣ್ಣವನ್ನೂ ನೀನು ತಿಳಿದಿರುವೆಯಾ?" ಆಚಾರ್ಯರನ್ನು ಮಂಡನನು ಪುನಃ ಕೆಣಕಿದನು. ಆಚಾರ್ಯರು ಆತನ ಮೊತ್ತನ್ನು ಪುನಃ ಅತನ ಕಡೆಗೇ ಹೊರಳಿಸಿದರು. 'ಅಹಂ ವರ್ಣಂ ಭವಾನ್ ರಸಂ' 'ನಾನು ಬಣ್ಣವನ್ನು ಮಾತ್ರ ತಿಳಿದವನು; ನೀನು ಅದರ ಸವಿಯನ್ನೂ ತಿಳಿದಿರುವೆ". ಮಂಡನನು ಆಚಾರ್ಯರ ಈ ಮಾತನ್ನು ಕೇಳಿ ಹುಚ್ಚಾದನು. 'ಮತ್ತೋ ಜಾತಃ ಕಲಂಜಾತೀಃ ವಿಪರೀತಾನಿ ಭಾಷಸೇ' 'ಎಲಾಂಗ ಭಕ್ಷಕನೂ ವಕ್ತು ಮತ್ತನೂ ಆಗಿರುವುದರಿಂದಲೇ ಈ ವ್ಯತ್ಯಾಸದ ಮಾತುಗಳನ್ನಾಡುತ್ತೀಯೆ?'ಎಂದು ಮಂಡನನು ಮರ್ಮ ಭೇದಕಗಳಾದ ಮಾತುಗಳನ್ನಾಡಲು, ಆಚಾರ್ಯರು 'ಮತೀಸ್ತೀ ಜಾತಃ" ಎಂಬುದಕ್ಕೆ 'ನಿನ್ನಿಂದ ಹುಟ್ಟಿದವನು' ಎಂದು ಅರ್ಥ ಕಲ್ಪಿಸಿ—'ಸಕ್ಯಂ ಪ್ರವೀಷಿ ಪಿತೃವತ್ಕ್ವತ್ತೋ ಜಾತಃ ಕಲಂ ಜ ಭುಕ್' 'ನೀನು ಹೇಳಿದುದು ನ್ಯಾಯವೇ. ನೀನು ಮಂಡ ಭಕ್ಷಕನಾದ ಕಾರಣ ನಿನ್ನ ಮಗನೂ ಮಾಂಸ ಭಕ್ಷಿಕನೇ". ಆಚಾರ್ಯರು ಹೀಗೆ ಹೇಳಿ ಮಂಡನನ ಉತ್ತರ ಪ್ರತೀಕ್ಷೆ ಮಾಡತೊಡಗಿದರು.

ಮಂಡನನು ಈ ವಿಷಯವನ್ನು ಮುಂದರಿಸಿ ಮಾತಾಡಲಾರದೆ, ಆಚಾರ್ಯರನ್ನು ಹೊಸ ವಿಷಯದಿಂದ ತೆಗಳಿದನು. 'ಕಂ ಧಾಂ ವಹಸಿ ದುರ್ಬುದ್ಧೇ ಗರ್ದಭೇನಾ ಪಿದುರ್ಮಹೇ| ಶಿಖಾಯಜ್ಞೋಪವೀತಾಭ್ಯಾಂ ಕಸ್ತೇ ಧಾರೋ ಭವಿಷ್ಯತಿ||' "ಎಲೈ ಮೂಢನೇ, ಕತ್ತೆಯಿಂದಲೂ ಹೊರಲಸಾಧ್ಯವಾದ ಕಂತೆಗಳನ್ನು ಹೊತ್ತಲಿವ ನಿನಗೆ ಜುಟ್ಟು ಜನಿವಾರಗಳಿಂದ ಭಾರವಾಯಿತೆ?' ಆಚಾರ್ಯರು ನಿಗುತ್ತಿನ್ನೂ ತಿನಿಂದ ಮಂಡನನನ್ನು ಪುನಃ ಹಣಿದರು. "ಕಂಥಂ ವಹಾಮಿ ದುರ್ಬುದ್ಧೇ ತವ ಪಿತ್ರಾಪಿ ಮರ್ಘರಿತಾಮ್। ಶಿಖಾಯಜ್ಞೋಪವೀತಾಭ್ಯಾಂ ಶ್ರುತೇರ್ಭಾರೋ ಭವಿಷ್ಯತಿ||' 'ಎಲೈ ಮೂಢನೇ, ತಂದೆಯಿಂದ ಪಡೆದ ಶಿಖಾ ಯಜ್ಞೋಪವೀತಗಳಿಂದ ಶ್ರುತಿಭಾರವಾಗುವುದೆ?' ಆಚಾರ್ಯರು ಮಂಡನನ ಮಾತುಗಳಿಗೆ ಪ್ರತ್ಯುತ್ತರ ಕೊಟ್ಟರು. 'ಕಥಂ ಸ್ತ್ರೀಣಾಂ ಪ್ರಸಂಗೇನ ದುರ್ಬುದ್ಧೇ ನಾವಬುಧ್ಯಸೇ| ಅಪಾರೇ ಕರ್ಮಸಂಸಾರೇ ಕಸ್ತೇ ಪಾರಂ ಗಮಿಷ್ಯತಿ||' 'ಎಲೈ ಮೂಢನೇ, ಸ್ತ್ರೀಯರೊಡನೆ ರಮಿಸುತ್ತಿರುವ ನಾದುದರಿಂದ, ನಿನ್ನ ಘೋರವಾದ ಕರ್ತೃಯಿಂದಲೂ ಹೊರಲಸಾಧ್ಯವಾದ ಕಂತೆಯನ್ನು ಹೊತ್ತು, ನೀದದಿಂದ ತಿರಸ್ಕೃತವಾದ ಜುಟ್ಟು ಜನಿವಾರಗಳನ್ನು ತ್ಯಾಗಮಾಡಿದ್ದೇನೆ' ಮಂಡನ ಮಿಶ್ರನು ಆಚಾರ್ಯರ ಸನ್ಯಾಸವನ್ನೇ ನೇರವಾಗಿ ತಿರಸ್ಕರಿಸತೊಡಗಿದನು.'ತ್ಯಕ್ತ್ವಾ ವಾಣಿಗೈ ಹೀತಾಂ ಸ್ವಾಂ ಆಶಾಸ್ತಾ ಶರೀರಕ್ಷಜೇ। ಶಿಷ್ಯ ಪುಸ್ತಕ ಭಾಗೀಚ್ಛೋಃ ವ್ಯಾಖ್ಯಾತಾ ಬ್ರಹ್ಮಸಿದ್ಧಿ ಕಾ||" "ಎಲೈ ಮೂರ್ಖನೇ, ತಂದುನೆಯಾದ ಹೆಂಡತಿಯನ್ನು ಅನ್ನ ವಸ್ತ್ರಗಳಿಂದ ರಕ್ಷಿಸಬೇಕಾಗುತ್ತದೆಂದು ತಿಷ್ಯರನ್ನೂ ಪುಸ್ತಕಗಳನ್ನೂ ಹೊರಲು ಬಯಸಿರುವ ನಿನ್ನ ಬ್ರಹ್ಮನಿಷ್ಠೆಯು ಚೆನ್ನಾಗಿ ತಿಳಿದೇ ಇರುವುದು". ಆಚಾರ್ಯರೂ ಮಂಡನದ ಅಳಿಗೆ ಜುಜ್ಜುವ ಮಾತನ್ನೇ ಆಡಿದರು. 'ಗುರು ಶುಶ್ರೂಷಣಾ ಲಸ್ಯಾತ್ ಸಮೂಲಕರ್ಷ ಗುರೋಃ : ಕುಲಾತ್ | ಸ್ತ್ರಿಯಃ ಶುಶ್ರೂಷಮಾಣಸ್ಯ ವ್ಯಾಖ್ಯಾತಾ ಕರ್ಮನಿಷ್ಠತಾ||' 'ಗುರು ಶುಶ್ರೂಷೆಯಲ್ಲಿಷ್ಟವಿಲ್ಲದೆ ಸಮೂಲವರ್ತನೆ ಎಂಬ ನೆವದಿಂದ ಹೆಂಗಸರನ್ನು ಸೇವಿಸುತ್ತಿರುವ ನಿನ್ನ ಕರ್ಮನಿಷ್ಠೆಯು ವ್ಯಕ್ತವಾಗಿಯೇ ಇದೆ'. ಮಂಡನನಿಗೂ ಈಗಜಿ ಚಾರ್ಯರನ್ನು ಗೆಲ್ಲುವ ಅತುರ ಬಲವಾಯಿತು 'ಸ್ಥಿತೋಸಿಯೋಷಿತಾಂ ಗರ್ಭೇ ತಾಭಿರೇವ ವಿವರ್ಧಿತಃ | ಅಹೋಕೃತಘ್ನೇ ತಾ ಮೂರ್ಖಿಕಥಂತಾ ವಿವನಿಂದಸಿ||' 'ಹೆಂಗಸರ ಗರ್ಭದಲ್ಲೇ ಬಳೆದು, ಅವರಿಂದಲೇ ವರ್ಧಿಸಲ್ಪಟ್ಟು ಈಗ ಅದನ್ನು ಮರೆತು ಆವರನ್ನು ನಿಂದಿಸುವ ನೀನು ಕೃತಘ್ನನೇ ಸರಿ'. ಆಚಾರ್ಯರು ಮಂಡನ ಪಂಡಿತನ ಜ್ಞಾನವನ್ನು ಒಮ್ಮೆಗೇ ಗಾಳಿಗೆ ಹಿಡಿದರು. 'ಋಣಾನಾಂ ಸ್ತನ್ಯಂ ತ್ವಯೂಪೀತಂ ಯಾಸಾಂ ಜಾತೋಸಿ ಯೋನಿತಃ | ತಾಸು ಮೂರ್ಖಿತಮಸ್ತ್ರೀಷು ಶಬ್ದವದ್ಯಮಸೇಕಥಂ?' || 'ಯಾವ ಸ್ತ್ರೀಯು ನೊಲೆ ಹಾಲು ಕುಡಿದು ಬಳೆದೆಯೋ, ಯಾವ ಸ್ತ್ರೀಯು ಯೋನಿಯಿಂದ ಜನನ ಹೊಂದಿದೆಯೋ, ಆ ಸ್ತ್ರೀಯರಲ್ಲೇ ಪಶುಜಾತಿಯಂತೆ ರಮಿಸುವ ನಿನ್ನ ಮೂರ್ಖತನಕ್ಕೇನೆನ್ನಬೇಕು?' ಮಂಡನನಿಗೆ ಈಗ ತನ್ನ ವಾದಭೂಮಿಯಲ್ಲಿ ತನ್ನನ್ನು ರಕ್ಷಿಸಿಕೊಳ್ಳುವುದಾಸಾಧ್ಯವಾಯಿತು. 'ವೀರಹತ್ಯಾವ ವಾಹ್ಮೀಕಿ ವಹ್ನೀನುದ್ವಾಸ್ಯಯತ್ನತಃ' 'ನೀನು ಗಾರ್ಹಪತ್ಯಾಗ್ನಿ ಪರಿತ್ಯಾಗ ಮಾಡಿರುವುದರಿಂದ ನೀರಹತ್ಯಾ ದೋಷಕ್ಕೆ ಪಾತ್ರನಾದೆ' ಆಚಾರ್ಯರು ಪಂಡಿತನ ಮಾತುಗಳಿಗೆಲ್ಲವನ್ನು ಕೇಳಿ ಆತ್ಮಹತ್ಯಾ ದೋಷವನ್ನು ಅತನ ಕೊರಳಿಗೆ ಕಟ್ಟಿದರು. 'ಆತ್ಮಹತ್ಯಾಮವಾಪ್ತಸ್ತ್ವಮುದಿತಶ್ಚಿತ್ತಾ ಸಂಪ ದಂ'. 'ನೀನು ಏನೂತ್ತನ ಸ್ವರೂಪವನ್ನರಿಯದೆ ಕರ್ಮಾನಿಷ್ಠನಾಗಿ ಆತ್ಮಹತವೆನ್ನು ಮೂಡಿಕೊಂಡ ಸರಿಯು ನಾತಿಕೆಯಾದೆಯಲ್ಲ!' ಮಂಡನ ಪಂಡಿತನು ಈ ವಾದದಲ್ಲೂ ಮೂಕನಾದನು.

ಪುನಃ ತನ್ನ ಕೀರ್ತಿಯನ್ನಳಿಸಿಕೊಳ್ಳುವ ಆಸೆಯಿಂದ ಮಂಡನನು ಇನ್ನೊಮ್ಮೆ ವಾದ ಭೂಮಿಯಲ್ಲಿ ಹೂಣರ ತೊಡಗಿದನು. "ದೌವಾರಿಕಾನಾಂ ವಂಚಯಿತ್ವಾ ಕಥಂ ಸ್ತೇನವದಾಗಚಿಃ' 'ಎಲೈ, ಬಾಗಿಲು ಕಾಯುವವರನ್ನು ವಂಚಿಸಿ ಹೇಗೆ ಒಳ ಬಂದಿ?" ಈ ಪ್ರಶ್ನೆಯು ಮಂಡನನ ಕೊರಳಿಗೆ ಉರುಳಾಯಿತು. ಮಧ್ಯಾಹ್ನ ಕಾಲದಲ್ಲಿ ಬಂದ ಅತಿಥಿ ಅಭ್ಯಾಗತರ ಸೇವೆಯಿಂದ ತಪ್ಪಿಸಿಕೊಳ್ಳಲು, ಬಾಗಿಲು ಮುಚ್ಚಿಕೊಂಡು ಶ್ರಾದ್ಧ ಕರ್ಮ ನಡೆಸುತ್ತಿದ್ದ ಗೃಹಸ್ಥಾಶ್ರಮಿಯಾದ ಮಂಡನನ ಪ್ರಶ್ನೆಗೆ ಆಚಾರ್ಯರು ನಕ್ಕರು; ಆ ಮೇಲೆ ಗಂಭೀರರಾದರು; ಅನಂತರ ಮೇಘದಂತೆ ಗುಡುಗಿದರು. "ಭಿಕ್ಷುಭೈಕ್ಷಾರ್ಥಿನ್ನ ಮದತ್ತಾತ್ಕ್ಷಂ ಶ್ರೇಣವದ್ಬ್ರೂತೇ ಕಥಂ?' 'ಗೃಹಸ್ಥಾಶ್ರಮಿಯಾಗಿ ಮಧ್ಯಾಹ್ನ ಕಾಲದಲ್ಲಿ ಬಂದ ಭಿಕ್ಷುಕರಿಗೆ ಅನ್ನ ಹಾಕದೆ ಗಿಡುಗನಂತೆ ಹೇಗೆ ಅನ್ನ ತಿನ್ನುವೆ?" ಮಂಡನ ಪಂಡಿತನು ಪುನಃ ನಿರುತ್ತರನಾದನು. 'ತರ್ಮಕಾಲೇನ ಸಂಭಾಷ್ಯಃ ಬಹಿಮೂರ್ಖೇಣ ಸಂಪ್ರತಿ' 'ಕರ್ಮ ಮಾಡತಕ್ಕ ಕಾಲದಲ್ಲಿ ನಾನು ಮೂರ್ಖರೊಡನೆ ಮಾತಾಡಲಾರೆ" ಮಂಡನನು ಗೊಣಗಿದನು.

ಶ್ರೀ ಆಚಾರ್ಯರು ಮಂಡನ ಪಂಡಿತನ ವಾಕ್ಯಜಲ್ಲಿದ್ದ ಯತಿ ಭಂಗದೋಷವನ್ನು ಎತ್ತಿ ಹೇಳಿದರು. 'ಅಹೋ ಸ್ಫುಟಿತಂ ಜ್ಞಾನಂ ಯತಿಭಂಗೇನ ಭಾಷಿಣಾ' "ಯತಿ ಭಂಗದಿಂದ ಮಾತನಾಡಿದ ನಿನ್ನ ಮಾತಿನಲ್ಲಿ ನಿನ್ನ ಜ್ಞಾನ ಪ್ರಕಟವಾಯಿತು." ಮಂಡನನು ಆದಕ್ಕೆ ಸಮರ್ಥಕವಾದ ಉತ್ತರವನ್ನೇ ಕೊಟ್ಟನು. 'ಯತಿ ಭಂಗೇ ಪ್ರವೃತ್ತಸ್ಯ ಯತಿ ಭಂಗೋ ನದೋಷಭಾಕ್' 'ಯತಿ ಭಂಗವಲ್ಲೇ ತೊಡಗಿರುವನಿಗೆ ಯತಿ ಭಂಗದೋಷವಿಲ್ಲ' ಆಚಾರ್ಯರು ಮಂಡನ ಮಿಶ್ರನ ವಾಕ್ಯದ 'ಯತಿ ಭಂಗೇ ಪ್ರವೃತ್ತಸ್ಯ" ಎಂಬಲ್ಲಿ ಯತಿಭಂಗ ಶಬ್ದದ ಷಷ್ಠೀ ತತ್ಪುರುಷಕ್ಕೆ ಬದಲಾಗಿ ಪಂಚಮೀ ತತ್ಪುರುಷವನ್ನೇ ಕಲ್ಪಿಸಿಕೊಂಡು 'ಯತಿಭಂಗೇ ಪ್ರವೃತ್ತಸ್ಯ ಪಂಚಮ್ಯಂತಂ ಸಮಸ್ಯತಾಂ" 'ಯತಿಯು ದಿನೆಯಿಂದ ಅಪಜಯ ಹೊಂದತಕ್ಕವನಿಗೆ ಪತ್ಯಗತವಾದ ಯತಿ ಭಂಗವು ದೋಷಕಾರಿಯಾಗದು' ಎಂದರು. ಮಂಡನ ಪಂಡಿತನು ಈ ವಾದನನ್ನು ಮುಂದರಿಸಿ ಸಮರ್ಥಿಸಲಾರದೆ ಹೋದನು.

ಮಂಡನ ಮಿಶ್ರನು ಈಗ ಸನ್ಯಾಸಾಶ್ರಮದ ಮೇಲೆ ಉಂಡ ಬಿದ್ದನು. 'ಕ್ವಚ್ಚ ಕ್ವಚಿದ ದುರ್ಮೇಧಾಃ ಕ್ವಿಶನಸ್ಯಾಂ: ಕ್ವ ವಾಕಲಿಃ। ಸನ್ಯಾಸ್ತ್ವನ್ನ ಭಕ್ಷೋಮೇನ ವೇ ಪೋಯಂ ಯೋಗಿನಾಂಧೃತಃ||' 'ಎಲೈ, ನಿನ್ನಂತಹ ದುರಾಚಾರಿ, ಕ್ವಾಗ್ನಿ ಹೋತ್ರಂ ಕ್ವವಾಕಲಿ! ಮನ್ಯೇ ವೈಧುನ ರಾಮೇನ ವೇಷೋಽಯಂ ಕರ್ಮಣಾಂಧೃತಃ||" "ಎಲಾ, ನಿನ್ನಂತಹ ದುರಾಚಾರಿಗೆಲ್ಲಿ? ಸದ್ಗ ವೆಲ್ಲಿ? ಕಲಿಯುಗವೆಲ್ಲಿ? ನಿನ್ನ ಅಗ್ನಿ ಹೋತ್ರವೆಲ್ಲಿ? ವೈಧುನಾಖಿಲಾಷೆಯಿಂದ ಕರ್ಮಿಷ್ಠರ ವೇಷವನ್ನು ಧರಿಸುತ್ತೀಯಿ?'

ಮಹಾವಿದ್ವಾಂಸರಿಬ್ಬರ ತತ್ವ ಪ್ರತಿಷ್ಠಾಪನೆಯು ಹೋರಾಟಕ್ಕೆ ಮಣ್ಣಾಡಿಯಾದ ಈ ವಾದವು ಶ್ರೀ ಆಚಾರ್ಯರ ಸಿದ್ಧಾಂತ ಪ್ರಚಾರಕ್ಕೆ ಅವಶ್ಯವಾಗಿದ್ದರೂ, ಪ್ರತಿವಾದಿಯ ಪಾಂಡಿತ್ಯದ ಪ್ರಮಾಣ ನುತ್ತು ಮೂತಿನ ಕಂಡುಮನವನ್ನು ಅವರಿಗೆ ತೂಕ ಹಾಕಲು ಸಾಧ್ಯವಾಯಿತು. ಶ್ರೀರಾಮನ ಲಂಕಾಭಿಯೋಗದ ನೊಪ್ಪಲು ಹನ ಮನೇ ಲಂಕಾದಹನದ ಮೂಲಕ ರಾವಣನ ಬಲವನ್ನು ತೂಕ ಹಾಕಿ ಬಂದಂತಾಯಿತು. ಆಚಾರ್ಯರ ವಾದದ ಈ ಮೊದಲಿನ ವಿಧ್ಯಾಗು!

ಹೀಗೆ ಮಹಾವಿದ್ವಾಂಸರಿಬ್ಬರಲ್ಲಿ ಬಹಳ ಕಾಲ ವಕ್ಕೋಕ್ತಿ ಯುಕ್ತವಾದ ವಿವಾದಗಳು ನಡೆಯಲು, ಅಲ್ಲಿದ್ದ ಜೈಮಿನ್ಯಾದಿ ಮಹರ್ಷಿಗಳು ಮಂಡನ ಮಿಶ್ರನನ್ನು ಸಮಾಧಾನ ಪಡಿಸಿ— "ನಿನಗೆ ಬಂದ ತಿಥಿಯನ್ನು ವಿಷ್ಣು ಸ್ವರೂಪನೆಂದು ಆರಾಧಿಸು" ಎನ್ನಲು, ಮಂಡನ ಮಿಶ್ರನು ಆಚಾರ್ಯರನ್ನು ವಿಷ್ಣು ಸ್ಥಾನದಲ್ಲಿ ಕೂತು ಕೊಳ್ಳುವಂತೆ ಪ್ರಾರ್ಥಿಸಿದನು. ಆದರೆ ಆಚಾರ್ಯರು—'ನಾನು ಅನ್ನ ಭಿಕ್ಷಾರ್ಥಿಯಾಗಿ ಬಂದವನಲ್ಲ; ವಾದ ಭಿಕ್ಷಾರ್ಥಿಯಾಗಿ ಬಂದಿದ್ದೇನೆ. ನೋತವರ. ಗದ್ದವರ ಮತವನ್ನು ಸ್ವೀಕರಿಸಿ ಅವರ ಶಿಷ್ಯರಾಗುವ ಪಣವನ್ನಿಟ್ಟು ವಾದ ಮಾಡೋಣ. ನಾನು ವೇದಾಂತ ಮತೋದ್ಧಾರದಲ್ಲಿ ಪ್ರವೃತ್ತನಾದವನು. ನಾನು ಅದನ್ನೇ ಹಿಡಿದು ನಿನ್ನೊಡನೆ ವಾದ ಮಾಡುತ್ತೇನೆ. ನೀನು-ನಿನ್ನ ಮೆಚ್ಚಿನ ಕರ್ಮಮಾರ್ಗವನ್ನೇ ಹಿಡಿದು ವಾದ ಮಾಡು' ಎನ್ನಲು, ಮಂಡನ ಮಿಶ್ರನು ನಗುತ್ತಾ—'ಎಲೈ ಯತಿಯೇ, ನಿನ್ನೊಡನೆ ವಾದ ಹೂಡುವುದಿಲ್ಲ! ಸಾಕ್ಷಾತ್ ಶೇಷನನ್ನೂ ವಾದದಲ್ಲಿ ಹಿಂದೆ ಮುಂದೆ ಮಾಡುವ ಮಂಡನ ಪಂಡಿತನ ಯಶಸ್ಸನ್ನು ಕೇಳಿಲ್ಲವೆ? ಆಗಲಿ, ನಾಳೆಯಿಂದ ನಾದ ಮಾಡೋಣ' ಎಂದನು. ಶ್ರಾದ್ಧಕ್ಕೆ ಬಂದ ವೈಷ್ಣವೈಮಿನಿಗಳು ಇವರ ವಾದಕ್ಕೆ ಮಂಡನ ಪಂಡಿತನ ಪತ್ನಿಯೂದಲಾಳುವ, ಭಾರತಿಯನ್ನೇ ಮಧ್ಯಸ್ಥೆಯಾಗಿ ನಿಯಮಿಸಿ ಹೊರಟು ಹೋದರು. ಆಚಾರ್ಯರು ರೇವಾನ ದೀಕ್ಷಿತರದ ಕದಂಬ ವನದ ದೇವತಾಲಯಕ್ಕೆ ನಡೆದರು.

೨

ಮರುದಿನ ಖ್ಯಾತಿಕಾಲದಲ್ಲಿ ಆಚಾರ್ಯರು ತಮ್ಮ ನಿತ್ಯ ಕರ್ಮಗಳನ್ನು ಪೂರೈಸಿ ಶಿಷ್ಯರೊಡನೆ ಮಂಡನ ಮಿಶ್ರನ ಮನಗೆ ತೆರಳಿದರು. ಆಗ ಈ ವಾಗ್ವಾದವನ್ನು ನೋಡಲು ನೂರಾರು ವಂದಿ ವಿದ್ವಾಂಸರು ಮಂಡನ ಪಂಡಿತನ ಮನೆಯಲ್ಲಿ ಸಭೆ ಸೇರಿದ್ದರು. ಆಚಾರ್ಯರ ಜೀವನಗತ್ಯ ಅ ಲ್ಪಭಾಷಣ ಯತೋಮಯಂ ಸಪ್ರಥಾಭವಾಗಿತ್ತು. ಅಂದಿನ ವಾಗ್ವಾದಕ್ಕೆ ಜೈಮಿನ್ಯಾದಿಗಳ ಸೂಚನೆಯಂತೆ ಉಭಯ ಭಾರತಿಯೇ ಮಧ್ಯಸ್ಥೆಳಾಗಿ ಕೂತುಕೊಳ್ಳಬೇಕೆತ್ತ. ಇದರ ಲಕೆಗೆ ಗೃಹಕಾರ್ಯವು ನಿಮಿತ್ತ ಅಲ್ಲಿಯೇ ಕುಳಿತಿರಲಾಗದುದರಿಂದ ಭಾರತಿಯು ಪತಿ ಮತ್ತು ಯತಿಯ ಜೊತೆಗೆ ಒಂದೊಂದು ಹೂಮಾಲೆಯನ್ನು ಹಾಕಿ, ಯಾರ ಕೊರಳಿನ ಪುಷ್ಪ ಮಾಲಿಕೆಯು ಮೊದಲು ಬಾಡುವುದೋ ಅವರು ಸೋತರು—ಎಂದು

(ಇಪ್ಪತ್ತೈದನೇ ಪುಟ ನೋಡಿರಿ)

ವೈಜ್ಞಾನಿಕ ಶೋಧನೆ ಹಾಗೂ ಸಂಶೋಧನೆಗಳು ಬಹು ಕಾಲದ ವರೆಗೆ ಪರಿಣಾಮ ಬೀರುವ ಅನೇಕ ಮಹತ್ವದ ಫಲಿತಾಂಶಗಳನ್ನು ಪಡೆದಿದೆ. ಇದರಿಂದ ಕೃಷಿ ವ್ಯವಸಾಯದಲ್ಲಿ ಎಷ್ಟೋ ವಿಧಿ ವಿಧಾನಗಳು ಆಮೂಲಾಗ್ರವಾಗಿ ಬದಲಾವಣೆಗಳನ್ನು ಹೊಂದಿವೆ. ಸ್ವಲ್ಪದರಲ್ಲಿಯೇ ಹೇಳುವುದಾದರೆ ನಿಜವಾಗಿಯೂ ವಿಜ್ಞಾನದಿಂದ ಕೃಷಿ ವಿದ್ಯೆಯಲ್ಲಿ ಒಂದು ಕ್ರಾಂತಿಯೇ ಆಗಿದೆಯೆನ್ನಬಹುದು. ಕೃಷಿಯ ವಿಧಾನಗಳಲ್ಲಿ ದೈಹಿಕ ದುಡಿಮೆಯೇ ಬಹು ಮಟ್ಟಿಗೆ ಕಡಿಮೆಯಾಗುತ್ತ ಬಂದಿದೆ. ಇದಕ್ಕೆ ಕಾರಣ, ವಿಜ್ಞಾನದೊಸಹಸಾಧನೋಪಕರಣಗಳು ಹಾಗೂ ಯಂತ್ರಗಳನ್ನು ನಿರ್ಮಿಸಿದೆ. ಮೊದಲು ದೈಹಿಕ ಶ್ರಮವೆಂಬುದು ಅತ್ಯಲ್ಪವಾಗಿರುತ್ತದೆ. ಮೇಲಾಗಿ ಯಂತ್ರಗಳು ಮನುಷ್ಯರಿಂದ ಹೆಚ್ಚು ನಿಖರ ಹಾಗೂ ಪರಿಪೂರ್ಣವಾಗಿ ಕಾರ್ಯ ಮಾಡುತ್ತವೆ. ಸಹಜವಾಗಿಯೇ ಇದರಿಂದ ಹೆಚ್ಚಿನ ಕಾರ್ಯ ಸಾಮರ್ಥ್ಯ ಹಾಗೂ ಹೆಚ್ಚಿನ ಉತ್ಪಾದನೆಯೂ ಸಾಧ್ಯವಾಗುತ್ತದೆ. ಭೂಮಿಯು ಸಂಪನ್ಮೂಲಗಳು ಯಂತ್ರೋಪಕರಣಗಳ ಬಳಕೆಯಿಂದ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದು ಸಾಧ್ಯವಷ್ಟೇ ಅಲ್ಲ, ಅನೇಕ ವಿಧದಲ್ಲಿ ಉಂಟಾಗುವ ವ್ಯರ್ಥವನ್ನೂ ತಡೆಗಟ್ಟಬಹುದು. ಮೋಟರು ವಾಹನಗಳನ್ನು ಉಪಯೋಗಿಸುವುದರಿಂದ ಒಕ್ಕಲುತನದ ಉತ್ಪನ್ನಗಳ ಸಾಗಾಣಿಕೆಯು ಕೂಡ ಹೆಚ್ಚು ಸಾಮರ್ಥ್ಯವುಳ್ಳದ್ದಾಗುತ್ತದೆ. ಆಹಾರ ಧಾನ್ಯಗಳನ್ನು ಸಂಗ್ರಹಿಸಿಡುವಿನ ಮತ್ತು ಕಾಯ್ದಿಡಿಡ ಇದು. ಇನ್ನುಗಳಿಲ್ಲ ವೈಜ್ಞಾನಿಕ ವಿಧಾನಗಳು ಹೆಚ್ಚು ಅನುಕೂಲಕರಗಳನ್ನು ಒದಗಿಸಿವೆ.

ಒಕ್ಕಲುತನದ ಉತ್ಪನ್ನಗಳಾದ ಗೋಧಿ, ಜೋಳ, ಹತ್ತಿ, ಕಬ್ಬು ಮುಂತಾದ ಬೆಳೆಗಳ ಸುಧಾರಣೆಗೆ ವಿಜ್ಞಾನವು ಹೊಸ ಹೊಸ ಹಾದಿಗಳನ್ನು ಹುಡಕಿದೆ. ಬೆಳೆಗಳು ಸಮರ್ಪಕವಾಗಿ ಬರಬೇಕಾದರೆ ಉತ್ತಮ ಗುಣಗಳುಳ್ಳ ಬೀಜಗಳನ್ನೇ ಬಳಸುವುದವಶ್ಯವೆಂದು ವಿಜ್ಞಾನ ಮತ್ತು ಕೃಷಿಕನ ಅನುಭವ ಸಾರಿ ಸಾರಿ ಹೇಳುತ್ತದೆ. ನಿಸ್ಸಾರ ಅಥವಾ ನಿಷ್ಪ್ರಯೋಜಕವೆನಿಸಿದ ಜಾಗಗಳನ್ನು ಉತ್ತು ಬಿತ್ತಿ ಬೆಳೆಯಲು ಇಂದಿನ ವೈಜ್ಞಾನಿಕ ವಿಧಾನಗಳಿಂದ ಸಾಧ್ಯವಾಗುತ್ತಿದೆ. ಕೇಂದ್ರ ಟ್ರಾಕ್ಟರ್ ಸಂಸ್ಥೆಯು ನಮ್ಮ ದೇಶದಲ್ಲಿರುವ ನಿಕೃಷ್ಟ ಅಥವಾ ನಿರುಪಯೋಗಿಯೆನಿಸಿದ್ದ ಮತ್ತು ಬೇರು ಕಂಠಕಗಳಿಂದ ತುಂಬಿ ಕೃಷಿಗೆ ಅಯೋಗ್ಯವಾದ ಜಾಗಗಳನ್ನು ಮತ್ತು ವ್ಯವಸಾಯಕ್ಕೆ ಅನುಕೂಲವಾಗುವಂತೆ ಮಾಡಲು ಅತಿ ಉಪಯುಕ್ತ ಕಾರ್ಯ ಮಾಡುತ್ತಿದೆ.

ಅನೇಕ ಬಗೆಯ ಯಂತ್ರೋಪಕರಣಗಳನ್ನು ಒದಗಿಸುವುದರ ಜತೆಗೆ ವಿಜ್ಞಾನವು ಇನ್ನೂ ಅನೇಕ ವಿಧಗಳಲ್ಲಿ ಕೃಷಿರಂಗಕ್ಕೆ ಸೇವೆ ಸಲ್ಲಿಸಿದೆ. ರಾಸಾಯನಿಕ ಗೊಬ್ಬರವನ್ನು ಬಳಸುವುದು ಈಗ ವಿಜ್ಞಾನದಿಂದ ಹೆಚ್ಚು ಸಾಧ್ಯವಾಗುತ್ತಿದೆ. ರಾಸಾಯನಿಕ ಗೊಬ್ಬರಗಳು ಭೂಮಿಯ ಸಾರವನ್ನೂ ಉತ್ಪಾದನಾ ಸಾಮರ್ಥ್ಯವನ್ನೂ ಹೆಚ್ಚಿಸಬಲ್ಲವು. ಈ ರೀತಿ ಭೂ ಸಾರವನ್ನು ಹೆಚ್ಚಿಸುವ ರಾಸಾಯನಿಕ ಗೊಬ್ಬರವನ್ನು ಬಿಡಾರದ ಸಿಂಧ್ರಿಯ ಗೊಬ್ಬರ ಕಾರ್ಖಾನೆಯು ಉತ್ಪಾದಿಸುತ್ತಿದೆ. ಗೊಬ್ಬರದ ಉತ್ಪಾದನೆಯು ಇನ್ನೂ ಉದ್ದೇಶಿತ ಗುರಿಯನ್ನು ಮುಟ್ಟಿಲ್ಲವೆಂಬುದು ನಿಜವೇ ಆದರೆ ಭಾರತದ ಕೃಷಿರಂಗದ ಪ್ರಗತಿಯ ಚಿಹ್ನೆಗಳು ಮಾತ್ರ ಆಶಾದಾಯಕವಾಗಿವೆ.

ಮಳೆ, ಬೆಳೆ, ಬಿಪ್ಪನೆ, ಕೊಯ್ಲು ಇತ್ಯಾದಿಗಳ ಬಗ್ಗೆ ಕೃಷಿಕರಿಗೆ ಕಾಲ ಕಾಲಕ್ಕೆ ಸಂದೇಶ ಸಲಹೆ ಸೂಚನೆ ಇತ್ಯಾದಿ ನೀಡುವ ವಿಧದಲ್ಲಿಯೂ ವಿಜ್ಞಾನವು ಸಹಕರಿಸುತ್ತಿದೆ. ರೇಡಿಯೋ ಮೂಲಕ ಪ್ರಸಾರವಾಗುವ ಇಂತಹ ಬೇಸಾಯದ ಸಲಹೆಗಳು ಕೃಷಿಕರಿಗೆ ಅತಿ ಅಧುನಿಕ ಸೂಚನೆಗಳನ್ನು ಉಪಯುಕ್ತ ಮಾಹಿತಿ ಅಥವಾ ಮಾರ್ಗದರ್ಶನವನ್ನು ನೀಡುತ್ತಿವೆ. ಇಂತಹ ವಿಶಿಷ್ಟ ವಿಧಾನಗಳು ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಮತ್ತು ಐರೋಪ್ಯ ದೇಶಗಳಲ್ಲಿ ಈಗಾಗಲೇ ಸಾಕಷ್ಟು ಪ್ರಸಿದ್ಧಿಪಡೆದಿವೆ. ನಮ್ಮ ದೇಶದಲ್ಲಿಯೂ ಇದನ್ನು ಈಗೀಗ ಬೆಳೆಬೆಚ್ಚುಜಾಗಿಗೆ ತರಲಾಗುತ್ತಿದೆ. ಯು.ಕ್ರಾಪ್ಯಂಥೆದ ಒಂದು ಅಂಗವಾದ ಆಹಾರ ಮತ್ತು ಒಕ್ಕಲುತನ ಸಂಸ್ಥೆಯು ಬೇಸಾಯಗಾರರಿಗೆ ನೇರವಿಂದ ಮೇಲೆ ಕೃಷಿ ಸಂಬಂಧದ ಸೂಚನೆಗಳನ್ನು ಕೊಡಲು ಪ್ರಯತ್ನಿಸಿದೆ. ಈ ರೀತಿ ರೇಡಿಯೋ ಮೂಲಕ ಒದಗಿಸುವ ಸೂಚನೆ ಹಾಗೂ ಮಾರ್ಗದರ್ಶನಗಳನ್ನು ಗ್ರಾಮೀಣ ಜನರು ಮತ್ತು ಬೇಸಾಯಗಾರರು ಕೇಳಿ ಲಾಭ ಪಡೆಯುವಂತೆ ಅನುಕೂಲವಾಗುವಂತೆ ಅಗ್ಗದರದ ರೇಡಿಯೋ ಸೆಟ್ಟುಗಳು ಮತ್ತು ಟ್ರಾನ್ಸಿಸ್ಟರುಗಳನ್ನು ಒದಗಿಸುವ ಪ್ರಯತ್ನಗಳು ನಡೆಯುತ್ತಿವೆ.

ಜಗತ್ತಿನಲ್ಲಿ ಆಹಾರದ ಅಭಾವವಿರುವ ಹಾಗೂ ಅರೆಹೊಟ್ಟೆಯಿಂದ ಜನರಿರುವ ಪ್ರದೇಶಗಳಲ್ಲಿ ಹೆಚ್ಚೆಚ್ಚು ಆಹಾರ ಧಾನ್ಯಗಳನ್ನೂ ಕಾಡಾ ಕಾಯಿಪಲ್ಲೆ ಹಾಗೂ ಹಣ್ಣುಹಂಪಿಯಗಳನ್ನೂ ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುವ ವಿಧಾನಗಳನ್ನೂ; ಬೆಳೆಗಳು ನಾಶವಾಗಬಹುದೆಂಬ ಭೀತಿಯಿಲ್ಲದೆ ಬೆಳೆಸುವುದರ ಕ್ರಮಗಳನ್ನು ವಿಪರೀತ ಆಳಿನ ಖರ್ಚಿಲ್ಲದೆ ರಾತ್ರಿ ಮಾಡುವುದಕ್ಕೂ ಸೈರುಗಳ ಉತ್ಪಾದನಾ ಸಾಮರ್ಥ್ಯವನ್ನು ಪರಮಾಣು ಬಳಕೆಯಿಂದ ಹೆಚ್ಚಿಸುವುದಕ್ಕೂ ವಿಶ್ವವ್ಯಾಪಿ ಹಸಿವೆಗಳು ರೋಗಗಳಿಂದ ಸಂಭವಿಸಬಹುದಾದ ಶತ್ರು ಪಡೆಯನ್ನು ನಾಶಮಾಡಲು ಪ್ರಯೋಗ ಶಾಲೆ ಹಾಗೂ ವಿಜ್ಞಾನ ಮಂದಿರಗಳಲ್ಲಿ ಸತತವಾಗಿ ಹಲವಾರು ಪ್ರಯೋಗಗಳು ನಡೆಯುತ್ತಲೇ ಇವೆ. ಸಂಗ್ರಹಿಸಿಟ್ಟಾಗ ಮತ್ತು ಡಬ್ಬಿಗಳಲ್ಲಿ ತುಂಬಿಟ್ಟಾಗ ಆಹಾರ ಪದಾರ್ಥಗಳು ತಮ್ಮಲ್ಲಿ ಗುಣಗಳನ್ನು ಕಾಪಾಡಿಕೊಂಡು

(ಇಪ್ಪತ್ತನಾಲ್ಕನೇ ಪುಟ ನೋಡಿರಿ)

ಪ್ರೊ। ಎಂ ಎಸ್. ಎಸ್. ರಾವ್, ಎಮ್. ಎಸ್‌ಸಿ.

ವಿಜ್ಞಾನ ಮತ್ತು ಕೃಷಿ

ಸಂಸತ್ತಿನ ಸಾಪ್ತಾಹಿಕೆಯಲ್ಲೇ ಪವಡಿಸಿರುವ ಅಮೆರಿಕ-ರಷ್ಯಗಳ ಆಹಾರ ಸ್ವಾವಲಂಬನೆಯ ಗುಟ್ಟು ವಿಜ್ಞಾನದ ಬಳಕೆ. ಭಾರತದ ಕೃಷಿರಂಗದ ಎಲ್ಲಾ ಹಂತಗಳಲ್ಲೂ ವಿಜ್ಞಾನವನ್ನು ಬಳಸಿಕೊಳ್ಳುವುದು ಅಸಾಧ್ಯ, ಅಹಿತ ಅನುಚಿತ. ಆದರೂ ಹಿತ ಮತ್ತು ಉಚಿತವಾದ ಹಂತಗಳಲ್ಲಿ ವಿಜ್ಞಾನವನ್ನು ಪರಿಪೂರ್ಣವಾಗಿ ಬಳಸಿ ಆಹಾರ ಸ್ವಾವಲಂಬನೆಯನ್ನು ನಾವು ಸಾಧಿಸಲಾರೆವೆ?



ಸ್ವತಂತ್ರವಾದ ಯಾವ ದೇಶವಾದರೂ ಇತಿಹಾಸ ಪರಂಪರೆ ಹಾಗೂ ಇಂದಿನ ಪರಿಸ್ಥಿತಿಗಳಿಗೆ ಅನುಗುಣವಾಗಿ ತನ್ನ ಶಿಕ್ಷಣ ಪದ್ಧತಿಯನ್ನು ಮೂರ್ತಾಟು ಮಾಡಬೇಕು. ಭಾರತವು ಈ ದೃಷ್ಟಿಯಲ್ಲಿ ಯಾವ ದಿಟ್ಟತನದ ಹೆಜ್ಜೆಯನ್ನಿಟ್ಟಲ್ಲವೆಂಬುದು ಒಂದು ನಿತ್ಯದ ಮಾತಾಗಿತ್ತು. ಇಂದೀಗ ರಾಷ್ಟ್ರೀಯ ಶಿಕ್ಷಣದ ಪುನರ್ ರಚನೆಯು ಅವಕಾಶ ಬಂದಿದೆ. ಅಂತಹ ಅವಕಾಶ ಬಂದಿರುವಾಗಲೇ ಬಹಳ ದೊಡ್ಡದಾದ ಅನಿಶ್ಚಿತ ವಾತಾವರಣ. ಅನಾವಶ್ಯನಾದ ಗೊಂದಲ ಹಾಗೂ ಅರ್ಥವಿಲ್ಲದ ವಿಷಯಗಳ ಪ್ರಸ್ತಾಪಗಳೆದ್ದಿವೆ. ಪ್ರಾದೇಶಿಕ ಭಾಷೆಗಳ ಮಾಧ್ಯಮದಿಂದ ವಿಶ್ವವಿದ್ಯಾಲಯಗಳಲ್ಲಿನ ಶಿಕ್ಷಣ ಮಟ್ಟವು ಇಳಿಮುಖವಾಗುವುದು. ರಾಷ್ಟ್ರೀಯ ಬಿಕ್ಕಟ್ಟು ಉಂಟಾಗುವುದು. ದೇಶವೇ ಅದಾವುದೋ ಅನಾಹುತಕ್ಕೆ ಬಲಿಯಾಗುವುದೆಂಬ ಭಯವನ್ನು ದೇಶದಲ್ಲಿ ಉಂಟುಮಾಡಲಾಗಿದೆ. ಇಂಗ್ಲಿಷ್ ಮಾಧ್ಯಮವನ್ನು ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ತ್ಯಜಿಸುವ ನಿರ್ಧಾರವು ರಾಜಕೀಯ ಒತ್ತಡದಿಂದ ಉಂಟಾಗಿದೆಯೆಂದೂ, ಅವಸರದ ಘೋಷಣೆಯೆಂದೂ ಹೇಳಲಾಗಿದೆ.

ಶಿಕ್ಷಣವು ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯ ಒಂದು ಮುಖ್ಯ ಸಾಧನವೆಂಬುದನ್ನು ಸಮಾಜ ಶಾಸ್ತ್ರಜ್ಞರು ತಿಳಿದಿರುವರು. ಆದುದರಿಂದಲೇ ಆರ್ಥಿಕ ಬದಲಾವಣೆಯನ್ನು ಮಾಡುತ್ತಿರುವ ಭಾರತವು ಅದರ ಶಿಕ್ಷಣ ಪದ್ಧತಿಯನ್ನು ಪುನರ್ ರಚನೆ ಮಾಡದಿರುವುದು ಅಸಾಧ್ಯ. ಶಿಕ್ಷಣ ಪದ್ಧತಿಯ ಪುನರ್ ನಿರ್ಮಾಣ ದೇಶದ ಆರ್ಥಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪುನರುತ್ಥಾನಕ್ಕೆ ಅತಿ ಅಗತ್ಯವಾದ ಪೂರಕ ಶಕ್ತಿಯಾಗಿದೆ.

ಭಾರತೀಯ ಶಿಕ್ಷಣ ಪದ್ಧತಿಯು ಬ್ರಿಟಿಷ್ ಆಡಳಿತೆಯ ಕಾಲದಲ್ಲಿ ಇಂಗ್ಲೆಂಡಿನ ವಿಶ್ವವಿದ್ಯಾಲಯಗಳ ಮಾದರಿಯಲ್ಲಿ ರಚಿಸಲ್ಪಟ್ಟಿತು. ಅದು 1835—1854 ರ ಪರಿಸ್ಥಿತಿಯಲ್ಲಿ ಸ್ಥಾಪನೆಗೊಂಡ ಪದ್ಧತಿಯಾಗಿ ಬೆಳೆಯಿತು. ಮೊದಲ ಮಹಾಯುದ್ಧ ಕಾಲದವರೆಗೆ ಭಾರತೀಯ ಶಿಕ್ಷಣ ಪದ್ಧತಿಯು ಲಂಡನ್ ವಿಶ್ವ ವಿದ್ಯಾಲಯದ ಪಡಿಯಚ್ಚಾಗಿ ಬೆಳೆಯಿತು. ಕಾಲೇಜುಗಳು ಕೇವಲ ಪರೀಕ್ಷೆಗೆ ತಯಾರಿಸುವ ಪರೀಕ್ಷೆಗಾಗಿ ಕಲಿಸುವ ಕೇಂದ್ರಗಳಾಗಿಯೇ ಬೆಳೆದು ಬಂದವು. ಅವುಗಳ ಶಿಕ್ಷಣ ಧ್ಯೇಯಗಳೂ ಪಾಶ್ಚಾತ್ಯ ಶಿಕ್ಷಣ ಪದ್ಧತಿಯಿಂದ ಪ್ರಭಾವಿತವಾಗಿದ್ದುವು. ಬೋಧನಾ ಕ್ರಮಗಳೂ ಕೇವಲ ಅನುಕರಣೆಯ ಕ್ರಮಗಳಾಗಿದ್ದುವು.

1882ರ ಹಂಟರ್ ಆಯೋಗವೂ ಆನಂತರದ ಅನೇಕ ಆಯೋಗಗಳೂ ಭಾರತೀಯ ಶಿಕ್ಷಣ ಪದ್ಧತಿಯ ಅನೇಕಾನೇಕ ನ್ಯೂನತೆಗಳನ್ನು ಪುನಃ ಪುನಃ ಎತ್ತಿತೋರಿಸಿದರೂ ಅವುಗಳನ್ನು ಸರಿಪಡಿಸಲುಯಾವ ಪಟ್ಟುತನದ ಕಾರ್ಯಕ್ರಮವನ್ನು ಸರಕಾರ ಕೈಗೊಳ್ಳಲಿಲ್ಲ. ಅನಂತರ ದ್ವಿತೀಯ ಮಹಾಯುದ್ಧ ನಡೆಯಿತು. ಸ್ವಾತಂತ್ರ್ಯ ಬಂದಿತು. ದೇಶದ ಸೆಕೆಂಡರಿ ಶಿಕ್ಷಣದ ಪದ್ಧತಿಯ ರೂಪ ರೇಖೆ ಹೇಗಿರ್ಬೇಕೆಂಬುದನ್ನೂ ಅದನ್ನು ಯಾವ ರೀತಿಯಲ್ಲಿ ಪುನರ್ ರಚಿಸಬೇಕೆಂಬುದನ್ನೂ

ಶ್ರೀ ಮು. ರಾಜೇವ, ಎಂ. ಎ.; ಬಿ. ಟಿ.; ಎಂ. ಎಡ್.

ರಾಷ್ಟ್ರೀಯ ಶಿಕ್ಷಣ ಪದ್ಧತಿಯ ಪ್ರಶ್ನೆ

ಶಿಕ್ಷಣ ಮಾಧ್ಯಮದ ಬದಲಾವಣೆಯೆಂದರೆ ಆಕಾಶದೇ ಉರುಳಿ ಬಿದ್ದಂತೆ ಎನ್ನುವವರು ತನ್ನ ಅವಿವೇಕದಿಂದ ದೇಶವನ್ನು ಹಿಂದೆ ತಳ್ಳುತ್ತಿದ್ದಾರೆ. ರಾಷ್ಟ್ರೀಯ ಶಿಕ್ಷಣ ಪದ್ಧತಿಯ ಪ್ರಶ್ನೆಯನ್ನು ಉತ್ತರಿಸದೆ ನಮಗಿಂದು ಗತಿಯಿಲ್ಲ. ಪ್ರಾದೇಶಿಕ ಭಾಷಾ ಮಾಧ್ಯಮದಿಂದ ಯಾವ ಪಾತಾಳಕ್ಕೂ ನಾವು ಇಳಿಯುವುದಿಲ್ಲ; ಸ್ವರ್ಗವೇರದೆ ಇದ್ದರೂ ಭಾರತದಲ್ಲಿಯೇ ಉಳಿಯುತ್ತೇವೆ, ಖಂಡಿತ.

ಶ್ರೀ ಲಕ್ಷ್ಮಣಸ್ವಾಮಿ ಮುದಲಿಯಾರರ ಮುಂದಾಳ್ತನದಲ್ಲಿ ನೇಮಕಗೊಂಡ ಸಮಿತಿಯು ವಿವೇಚಿಸಿತು. ಆ ನೊದಲೇ ದೇಶದ ವಿಶ್ವ ವಿದ್ಯಾಲಯಗಳಲ್ಲಿ ಶಿಕ್ಷಣವು ಹೇಗಿರಬೇಕೆಂಬುದನ್ನು ಡಾ| ರಾಧಾಕೃಷ್ಣನ್‌ರವರ ನೇತೃತ್ವದಲ್ಲಿ ನೇಮಕಗೊಂಡ ವಿಶ್ವವಿದ್ಯಾಲಯ ಶಿಕ್ಷಣ ಆಯೋಗವು ರಾಷ್ಟ್ರೀಯ ಶಿಕ್ಷಣದ ರೂಪ ರೇಖೆಗಳ ಕಡೆಗೆ ಗಮನ ಹರಿಸಿತ್ತು.

ಆದರೆ ಬೇರೆ ವರ್ಷಗಳಲ್ಲಿ ಶಿಕ್ಷಣದ ಬೇರೆ ಬೇರೆ ಹಂತಗಳ ಬಗ್ಗೆ ಮಾತ್ರ ಬೇರೆ ಬೇರೆ ಆಯೋಗಗಳು ತನ್ನ್ಮೂಗವನ್ನು ಹರಿಸಿದ್ದುವು. ರಾಷ್ಟ್ರೀಯ ಶಿಕ್ಷಣದ ಎಲ್ಲಾ ಹಂತಗಳ ಶಿಕ್ಷಣದ ಸಮಸ್ಯೆಗಳ ಬಗ್ಗೆ ಯಾವ ರಾಷ್ಟ್ರೀಯ ಶಿಕ್ಷಣ ಆಯೋಗವೂ ಪರಿಶೀಲನೆ ನಡೆಸಿದ್ದಿಲ್ಲ. ಅಂತಹ ರಾಷ್ಟ್ರೀಯ ಶಿಕ್ಷಣ ಆಯೋಗವು 1964ರಲ್ಲಿ ನೇಮಕಗೊಂಡಿತು. ಅದು ಇಪ್ಪತ್ತೊಂದು ತಿಂಗಳಲ್ಲಿ 678 ಪುಟಗಳನ್ನೊಳಗೊಂಡ ತನ್ನ ವರದಿಯನ್ನು 1966ರಜೂನಿನಲ್ಲಿ ಸರಕಾರಕ್ಕೊಪ್ಪಿಸಿತು. ವರದಿಯ ಬಗ್ಗೆ ಇದೀಗ ರಾಜ್ಯ ಸಭೆಯಲ್ಲಿ ಚರ್ಚೆಯುಮುಗಿದಿದೆ. ಲೋಕ ಸಭೆಯಲ್ಲಿ ಚರ್ಚೆ ನಡೆಯಲಿದೆ. ಪಾರ್ಲಿಮೆಂಟಿನ ಚರ್ಚೆಯ ಬಳಿಕ ರಾಷ್ಟ್ರೀಯ ಶಿಕ್ಷಣ ಧೋರಣೆಯು ರೂಪುಗೊಳ್ಳಲಿದೆ.

ಕಳೆದ ನೂರು ವರ್ಷಗಳಿಂದ ಅನೇಕ ಆಯೋಗಗಳು ಭಾರತದ ಶಿಕ್ಷಣ ಪದ್ಧತಿಯ ಬೇರೆ ಬೇರೆ ಅಂಶಗಳ ಬಗ್ಗೆ ಅಧ್ಯಯನ ನಡೆಸಿವೆ, ಪರಿಶೀಲನೆ ಮಾಡಿವೆ. ಸರಕಾರಕ್ಕೆ ಉಪಯುಕ್ತ ಸಲಹೆಗಳನ್ನೂ ಮಾಡಿವೆ. ಅವರ ಅನೇಕ ಸೂಕ್ತ ಸಲಹೆಗಳು ಕಾರ್ಯರೂಪಕ್ಕೆ ಬಾರದೆ ಹಾಗೆಯೇ ಹೋಳುಬಿದ್ದಿವೆ. ಹಿಂದೆ ವಿದೇಶೀ ಸರಕಾರವಿತ್ತು. ಇಂದೀಗ ಇಪ್ಪತ್ತು ವರ್ಷಗಳಲ್ಲಿ ನಾವು ಸ್ವತಂತ್ರವಾಗಿದ್ದೇವೆ. ಇಂದೀಗ ರಾಷ್ಟ್ರೀಯ ಶಿಕ್ಷಣದ ಕೂಲಂಕಷ ಪರಿಶೀಲನೆಯು ವರದಿ ಸರಕಾರಕ್ಕೊಪ್ಪಿಸಲ್ಪಟ್ಟಿದೆ. ಆದು ದೇಶದ ಶ್ರೇಷ್ಠ ಅಂಗಗಳಲ್ಲೊಂದಾದ ಶಾಸಕಾಂಗದೆದುರು ಬಂದಿದೆ. ಈ ಅವಕಾಶವನ್ನು ದೇಶದ ಜನರ ಅಭಿವೃದ್ಧಿಯ ದೃಷ್ಟಿಯಿಂದ ಉಪಯೋಗಿಸುವುದು ಅದಂ ಮುಖ್ಯ ಕರ್ತವ್ಯವಾಗಿದೆ.

ಬ್ರಿಟಿಷ್ ಆಡಳಿತೆಗಾರರ ತಪ್ಪುಗಳನ್ನು ತಿದ್ದುವುದೇ ಬೇಡ, ಅದರ ತಳಹದಿಯನ್ನೆ ನಾವು ಉಪಯೋಗಿಸಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಬ್ರಿಟಿಷರು ಈ ದೇಶದಲ್ಲಿ ಇಂಗ್ಲಿಷ್‌ನ್ನು ಶಿಕ್ಷಣ ಮಾಧ್ಯಮ ಮಾಡುವ ನಿರ್ಧಾರವನ್ನು ಅವರ ಆಡಳಿತೆಯ ಅನುಕೂಲತೆಯ ದೃಷ್ಟಿಯಿಂದ ಕೈಗೊಂಡರು. ಬ್ರಿಟನ್ನಿನಲ್ಲಿ ಕೂಡಾ ಆಗಲೂ ಆ ಧೋರಣೆಯು ಸೂಕ್ತವಾದುದಲ್ಲವೆಂದು ಅನೇಕರು ಮನಗಂಡಿದ್ದರು. ಈ ಪ್ರಮಾದದಿಂದಾಗಿ— ವಿಶ್ವವಿದ್ಯಾಲಯಗಳು, ಅದರಿಂದಾಗಿ ಭಾರತೀಯ ಬುದ್ಧಿಜೀವಿಗಳು ರಾಷ್ಟ್ರೀಯ ಜೀವನದ ಬುಗ್ಗೆಗಳಿಂದ ದೂರವಾಗಿಯೇ ಉಳಿದರು. ಅಷ್ಟು ಮಾತ್ರವಲ್ಲದೆ ನಮ್ಮ ಸಮೂಹದಲ್ಲಿಯೇ ಶಿಕ್ಷಣ ಹೊಂದಿದವರು ಬೇರೆಯೇ ಒಂದು ವಿಶಿಷ್ಟ ವರ್ಗವಾಗಿ ಉಳಿದರು. ವಿಶ್ವವಿದ್ಯಾಲಯಗಳು ಸಮಾಜದ ನೈತಿಕದಿನ ಕಮಸ್ಯೆಗಳ ಬಗ್ಗೆ ಯಾವ ಆಸಕ್ತಿಯನ್ನೂ ತೋರಿಸಲಿಲ್ಲ. ಸುಮ್ಮ ಮಲೆನಾಡಿನ ಪ್ರದೇಶದ ಜನರಿಗೂ, ಜನರ ಭಾಷೆಗೂ ಶಿಕ್ಷಣದ ಮಾಧ್ಯಮಕ್ಕೂ ಸಂಬಂಧವಿಲ್ಲದೆ ಹೋಯಿತು. ಶಿಕ್ಷಣ ಸಂಸ್ಥೆಗಳು ಇದು ಮಹತ್ವದ ಪ್ರಶ್ನೆಯೆಂಬ್ನೇ ಮನಗಾಣಲಿಲ್ಲ. ಇಂದು ಈ ವಿಷಮತೆಯಿಂದ ಹೊರಬರುವ ಅವಕಾಶ ಭಾರತೀಯರ ಮುಂದಿದೆ. ಇಂದೀಗ ನಾವು ಕೇವಲ ಚಾರಿತ್ರಿಕ ಪ್ರಮಾದಕ್ಕೆ ಬಲಿಬಿದ್ದು, ತಪ್ಪು ನಿರ್ಣಯ ಕೈಗೊಂಡರೆ ಮತ್ತೊಮ್ಮೆ ದೇಶದ ಬೌದ್ಧಿಕ ಹಾಗೂ ಸಾಂಸ್ಕೃತಿಕ ದಾರಿದ್ರ್ಯಕ್ಕೆ ದಾರಿದೂಡಿ ಕೊಟ್ಟಂತಾಗುವುದು.

ದೇಶದ ಮುಂದಿರುವ ಮುಖ್ಯವಾದ ಶಿಕ್ಷಣ ಪ್ರಶ್ನೆಯು ಆದಷ್ಟು ಬೇಗನೆ ಈ ದೇ ತರನಾದ ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ಕಾರ್ಯರೂಪಕ್ಕೆ ತರುವುದಾಗಿದೆ. ಇಂದಿರುವ ಹಲವಾರು ಕ್ರಮಗಳನ್ನು ಒಮ್ಮೆಯೇ ಬದಲು ಮಾಡಲು ಆಗುವುದಿಲ್ಲ. ಭಾರತದಂತಹ ದೊಡ್ಡ ದೇಶದಲ್ಲಿ ಆದೂ ಕೂಡಾ ವಿವಿಧ ಜನ ಸಂಗಡಗಳಿರುವ ಜನಾಂಗದಲ್ಲಿ, ವಿಘ್ನನ್ನ ಭಾಷಾ ವರ್ಗಗಳಿರುವ ದೇಶದಲ್ಲಿ ಇಂತಹ ರಾಷ್ಟ್ರೀಯ ಪದ್ಧತಿಯನ್ನು ಕಾರ್ಯರೂಪಕ್ಕೆ ತರಲು ಶಿಕ್ಷಣ ಆಯೋಗವು ಇಪ್ಪತ್ತು ವರ್ಷಗಳ ಅವಧಿಯನ್ನು ಸೂಚಿಸಿದೆ. ಆವರೆಗೆ ಆದಿಸೆಯಲ್ಲಿ 1967-68ರಲ್ಲಿ ಕಾರ್ಯಪ್ರವೃತ್ತರಾಗುವ ಕಾರ್ಯಕ್ರಮಗಳಿಯುವ ಆವಶ್ಯಕತೆಯನ್ನು ಡಾ| ತ್ರಿಗುಣ ಸೆನ್‌ರವರು ಪುನಃ ಪುನಃ ಹೇಳಿಕೊಂಡಿದ್ದಾರೆ. ಅವರು ಹೇಳುವಂತೆ ಆಯೋಗಗಳ, ವರದಿಗಳ ನಿರ್ಣಯಗಳನ್ನು ನಾವು ಕಾರ್ಯರೂಪಕ್ಕೆ ಇಳಿಸ ಬೇಕಾಗಿದೆ.

ಇಂದು ದೇಶದ ಮುಂದಿರುವ ಪ್ರಧಾನ ಪ್ರಶ್ನೆ ಶಿಕ್ಷಣಕ್ಕೂ ಸಮಾಜಕ್ಕೂ ಇರುವ ದೂರದ ಅಂತರವನ್ನು ಹೋಗಲಾಡಿಸುವುದಾಗಿದೆ. ಆ ಅಂತರವು ಬ್ರಿಟಿಷ್ ಆಡಳಿತೆ ಕಾಲದಲ್ಲಿ ಹೋಗಲಾಡಿಸಲ್ಪಡದೆ ಉಳಿದಿದೆ. ಅದಕ್ಕೆ ಮುಖ್ಯ ಕಾರಣವು ಶಿಕ್ಷಣದ ಮಾಧ್ಯಮವಾಗಿತ್ತು. ಬ್ರಿಟಿಷರು ಪ್ರಥಮವಾಗಿ ಮಟ್ಟದಲ್ಲಿ ಮಾತ್ರ ಶಿಕ್ಷಣದ ಮಟ್ಟವನ್ನು ಪ್ರಾದೇಶಿಕ ಭಾಷೆಯನ್ನಾಗಿ ಮಾಡಿದರು. ಸ್ವಾತಂತ್ರ್ಯಾನಂತರ ರಾಜ್ಯ ಸರಕಾರಗಳು ಸೆಕೆಂಡರಿ ಶಿಕ್ಷಣ ಮಟ್ಟದಲ್ಲಿ ಮಾತ್ರ ಮಾಧ್ಯಮವು ವ್ಯಾದೇಶಿಕ ಭಾಷೆಯನ್ನಾಗಿ ಮಾಡಿದುವು. ಇಂದೀಗ ಅದನ್ನು ವಿಶ್ವವಿದ್ಯಾಲಯಗಳ ಮಟ್ಟದಲ್ಲಿಯೂ ಪ್ರಾದೇಶಿಕ ಭಾಷೆಗೆ ಪರಿವರ್ತಿಸುವ ಪ್ರಸಂಗವು ಬಂದಿದೆ. ಇದು ಅನಿವಾರ್ಯ.

ಶಿಕ್ಷಣದ ಮಾಧ್ಯಮ ಪ್ರಶ್ನೆಯನ್ನು ಮತ್ತೆ ತಂ ಸಣ್ಣ ಸಮಸ್ಯೆಗಳ ಬಗ್ಗೆ ವಿವೇಚನೆ ಇಂದು ಅನಾವಶ್ಯಕ. ಭಾರತದಲ್ಲಿ ಶಿಕ್ಷಣ ಪಡೆಯುವವರು ಅತಿಶಯವಾಗಿ ಮಂದಿ. ಅಲ್ಪ ಪ್ರಮಾಣದ ಜನಸಂಖ್ಯೆಯಿಂದಾಗಿ ಅವಿದ್ಯಾವಂತರಿರುವ ಜನಸಂಖ್ಯೆಯಿಂದಾಗಿ

(ಇಪ್ಪತ್ತನೂರನೇ ಪುಟ ನೋಡಿರಿ)

ಕ್ಷಾಮ ನಿವಾರಣೆಗಾಗಿ
ಇಂದೇ
ಉದಾರ ಸಹಾಯ ನೀಡಿರಿ

"ಇದೀಗ ಕೇವಲ ಒಂದೆರಡು ಪ್ರದೇಶಗಳಿಗಷ್ಟೇ ಸೀಮಿತವಾದ ಸಮಸ್ಯೆಯಲ್ಲ; ಭಾರತದ ಸಮಸ್ತ ಜನತೆಗೆ ಎದುರಾಗಿರುವ ಕಷ್ಟ. ಇಂತಹ ಹೊತ್ತಿನಲ್ಲಿ ಎಲ್ಲಾ ಜನರೂ ತನು ಮನ ಧನಗಳಿಂದ ಸಹಾಯ ಮಾಡಬೇಕಂಬುದಾಗಿ ನಾನು ನಿಮ್ಮೆಲ್ಲರಲ್ಲಿ ಅರಿಕೆ ಮಾಡುತ್ತೇನೆ.

ಈಗಾಗಲೇ ಕಾಣಿಕೆ ನೀಡಿರುವವರು ಇನ್ನೂ ಹೆಚ್ಚು ನೀಡಿರಿ. ಈ ತನಕ ಕೊಡದ ಇರುವವರೂ ಉದಾರವಾಗಿ ಕೊಡಿರಿ. ನೀಡುವವರೆಲ್ಲ ಈಗಲೇ ನೀಡಿರಿ."

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣ.

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ಈ ನಿಧಿಗೆ ಕಳುಹಿಸುವ ಯಾವ ಮೊತ್ತ ಸಾಮಗ್ರಿಗಳ ಬಗ್ಗೆ ಸಹ ಆದರ್ಶ ಶುಲ್ಕ, ಅಂಚೆ ವೆಚ್ಚ ಮತ್ತು ರೈಲ್ವೆ ಶುಲ್ಕಗಳನ್ನು ಕೇಂದ್ರ ಸರಕಾರವೇ ಭರಿಸಲಾಗುತ್ತಿದೆ. ಆದುದರಿಂದ ಎಲ್ಲಾ ಉದಾರ ದಾತೃಗಳಿಗೆ ಸಾಮಗ್ರಿಗಳನ್ನು ವಿಮಾನ ಮೂಲಕ ಉಚಿತವಾಗಿ ಸಾಗಿಸಲಾಗುತ್ತದೆ. ಅಂಚೆ, ವಿಮಾನ ಸಾಗಾಣಿ, ಮತ್ತು ರೈಲ್ವೆ ವೆಚ್ಚಗಳು, ವರ್ತಮಾನ ತೆರಿಗೆ, ಅಬಕಾರಿ ಮತ್ತು ಸುಂಕ ಇತ್ಯಾದಿಗಳನ್ನೆ ರಿಯಾಯಿತಿ ತೋರಿಯುತ್ತದೆ.

ಪ್ರೈಮ್ ಮಿನಿಸ್ಟರ್ಸ್ ಡ್ರಾಟ್ ರಿಲೀಫ್ ಫಂಡ್,
ಕ್ಯಾಬಿನೆಟ್ ಸೆಕ್ರೆಟೇರಿಯೆಟ್, ರಾಷ್ಟ್ರಪತಿ ಭವನ, ನ್ಯೂ ಡಿಲ್ಲಿ—1

ಮಹಾ ರೋಗಗಳು ಆಂಟಿಕೊಂಡಾಗ ಆರಂಭದಲ್ಲಿಯೇ ಹೆಚ್ಚು ಜಾಗ್ರತೆ ವಹಿಸುವುದು ಅವಶ್ಯ. ಇಲ್ಲದಿದ್ದರೆ ಅದು ತೀವ್ರವಾಗಿ ವ್ಯಾಪಿಸಿ ಶಸ್ತ್ರಕ್ರಿಯೆಗಳಿಂದಲೂ ಪರಿಹರಿಸಲು ಸಾಧ್ಯವಾಗದೇ ಇರುವಂಥ ರೀತಿಯಲ್ಲಿ ಬೆಳೆದುಕೊಳ್ಳುತ್ತದೆ. ಕೆಲವು ಸಾರಿ ಆ ಶರೀರವನ್ನೇ ಆಹುತಿಯಾಗಿ ತೆಗೆದುಕೊಳ್ಳುವುದೂ ಇದೆ.

ಇಂಥದೇ ಒಂದು ಮಹಾ ರೋಗ ಇದೀಗ ನಮ್ಮ ಸರಕಾರದ ಆಡಳಿತಕ್ಕೆ ಅಂಟಿಕೊಂಡುದಿನ ದಿನಕ್ಕೂ ಪುಕ್ಕಟ್ಟೆಯಾಗಿ ಬೆಳೆಯ ತೊಡಗಿದೆ. ಎಲ್ಲಾ ಅಂಗಾಂಗಗಳಲ್ಲೂ ಅದರ ಪ್ರಭಾವ ವಿರುತ್ತಿರುವುದನ್ನು ಕಜ್ಜಾರು ತೋರಿಸಿಕೊಟ್ಟು ಎಚ್ಚರಿಕೆ ನೀಡಿದರೂ ಸರಕಾರ ಅದನ್ನು ಹೋಗಲಾಡಿಸಿಕೊಳ್ಳಲು ಸಾಕಷ್ಟು ಮನಸ್ಸು ಮಾಡದೇ ಮುಂಜಾಗ್ರತೆ ವಹಿಸದೇ ಇದ್ದುದು ಆಶ್ಚರ್ಯ ಕ್ರಮೇಣ ಇದು ಹೀಗೆಯೇ ಬಿಟ್ಟರೆ "ಆಡಳಿತ ಪಕ್ಷದ ವಿಮೋಚನೆ"ಯಂಥ ಶಸ್ತ್ರಕ್ರಿಯೆಯೂ ಬೇಕಾಗಬಹುದೆಂಬುದನ್ನು ಬಲ್ಲವರು ಆಡಿಕೊಳ್ಳುತ್ತಿದ್ದಾರೆ. ಈ ಮಹಾ ರೋಗವೆಂದರೆ ನಮ್ಮ ಎಲ್ಲಾ ವ್ಯವಹಾರಗಳಲ್ಲೂ ಆಗುತ್ತಿರುವ "ವಿಲಂಬ" ಅಥವಾ 'ಮಂದಗತಿ'

ರಾಜ್ಯದ ಯಾವುದೇ ಶಾಖೆಯ ವ್ಯವಹಾರದಲ್ಲೂ ಅನಿರ್ಬಂಧವಾಗಿ ಬೆಳೆದಿರುವ, ಬೆಳೆಯುತ್ತಿರುವ ವಿಲಂಬಕ್ಕೆ ಇತಿಮಿತಿಯೇ ಇಲ್ಲದಾಗಿದೆ. ಯಾವ ಯಾವ ವ್ಯವಹಾರಗಳನ್ನು ಎಷ್ಟೆಷ್ಟು ದಿನ,ಕಾಲ, ಅವಧಿಯಲ್ಲಿ ಮುಕ್ತಾಯಗೊಳಿಸಬೇಕೆಂಬುದಕ್ಕೆ ನಿಯಮ ನಿರ್ಬಂಧಗಳೇ ಇಲ್ಲದೇ ಅದರಿಂದಾಗಿ ಸರಕಾರಕ್ಕೂ—ಜನತೆಗೂ ಆಗುತ್ತಿರುವ ಕಷ್ಟ-ನಷ್ಟಗಳು, ಮಾನ-ಅಪಮಾನಗಳು ಹೇಳ ತೀರದಷ್ಟಾಗಿವೆ.

ಸಾಮಾನ್ಯ ಸಣ್ಣಪುಟ್ಟ ವ್ಯವಹಾರಕ್ಕೂ ಒಂದು ಅರ್ಜಿ ಮಾಡಿದರೆ ಅದರ ನಿಜ್ಪತ್ತಿಗೆ ನಾಲ್ಕೈದು ವರ್ಷಗಳು ಹಿಡಿದ ಉದಾಹರಣೆ ಅನೇಕ ಇವೆ. ಆಫೀಸಿನಿಂದ ಆಫೀಸಿಗೂ ಟೇಬಲ್ಲಿನಿಂದ ಟೇಬಲ್ಲಿಗೂ ಸಾಗುತ್ತಿರುವ ವೇಗದ ಪ್ರಮಾಣವನ್ನು ಗಮನಿಸಿದಾಗ ಬಹುಶಃ ಕೆಲವು ಮಹತ್ವದ ವಿಷಯಕ್ಕೆ ನಮ್ಮ ಆಯುಷ್ಯವೇ ಸಾಕಾಗಲಾರದೆಂದು ಅಫಿಸು ತ್ತದೆ. ಆದರ ನಿರ್ಣಯ ಸಿಗುವಾಗ ನಾವು ಮತ್ತೊಂದು ಜನ್ಮತಾಳಿ ಬಂದೇಬಾ ಗುತ್ತದೋ ಏನೋ! ಇದು ನಮ್ಮ ಮಹಾ ದರಿದ್ರ ಆಡಳಿತದ ಒಂದು ರೀತಿ!

ಅಧಿಕಾರ ಎನ್ನುವ ಹೆಸರು ಬಂದೊಡನೆ ಆ ಸ್ಥಾನ ದೊರಕಿದೊಡನೆ ಅದೊಂದು ಜನಸೇವೆಯ ದೀಕ್ಷೆ ಎಂದು ತಿಳಿಯುವ ಬದಲು ಜನತೆಯನ್ನು ಅಳುವದಕ್ಕೇ ಆರಂಭಿಸುವ ಈ ಜನಗಳಿಂದಲೇ ದಕ್ಷತೆ ಎನ್ನುವದಕ್ಕೆ ತಿಲಾಂಜಲಿ ಬೀಳುತ್ತದೆ. ಆದರಿಂದಾಗಿಯೇ ಆಡಳಿತದಲ್ಲಿ ಶೈಥಿಲ್ಯ ತಲೆದೋರುತ್ತದೆ. ಇಂದು ಆಗಬೇಗಾದ ಕೆಲಸಗಳೆಷ್ಟು, ನಾಳೆ ನಡೆಯುವ ಕಾರ್ಯಗಳೆಷ್ಟು, ಇವುಗಳ ತಾರತಮ್ಯತೆಯೇ ಇಲ್ಲದಾಗುತ್ತಿದೆ.

ಯಾವದೇ ಅಧಿಕಾರಿಯ ಹತ್ತಿರ ಹೋದರೂ ಒಂದು ಕೆಲಸವನ್ನು ತೀವ್ರ ಮುಗಿಸುವದಕ್ಕೆ ಮನಸ್ಸು ಮಾಡುವದಿಲ್ಲ. ಅದನ್ನು ಎಷ್ಟು ದಿನಗಳವರೆಗೆ ಇಟ್ಟು ಕೊಳ್ಳಲು ಸಾಧ್ಯವೋ ಅಷ್ಟು ದಿನಗಳ ವರೆಗೆ ಇಟ್ಟು ಕೊಂಡು ಅನಂತರ ಅದನ್ನು ಫೈಲಿನಿಂದ ಹೊರಗೆ ತೆಗೆಯುತ್ತಾರೆ. ವಂತರ ಜಾಕಡಿಯ ನಾಟಕಕ್ಕೆ ಕೆಲವು ದಿನ; ಜಾಕಡಿ ಆದನಂತರ ಮತ್ತೆ ಕೆಲವು ದಿನ ವಿಶ್ರಾಂತಿ. ಹೀಗೆಲ್ಲಾ ಕಳೆದ ಮೇಲೆ ಎರಡು ನಾಲಿನ ನಿರ್ಣಯ ಹೊಮ್ಮುತ್ತ. ಕಛೇರಿಯಿಂದ ಹೊರ ಬೀಳುತ್ತದೆ. ಆದರೆ ಪ್ರಕರಣದ ಗಾತ್ರ ಮಾತ್ರ ಬೆಳೆದಿರುತ್ತದೆ.

ಎಷ್ಟೋ ಸಂದರ್ಭಗಳಲ್ಲಿ ಇದರಿಂದ ಆಗುತ್ತಿರುವ ಹಾನಿಯಷ್ಟು ಸಂಬಂಧ ಪಟ್ಟ ಖಾತೆಯವರು ಗಮನಿಸುತ್ತಿಲ್ಲವಾಗಿದೆ. ಮನೆಗೆ ಬೆಂಕಿ ಹತ್ತಿದಾಗ "ನೀರು ಮೋಟರು" ಬೇಕೆಂದು ಕೇಳಿದರೆ ಅರ್ಜಿಕೊಡಿರಿಂದ್ರೂ ಅರ್ಜಿಕೊಟ್ಟರೆ ಎಷ್ಟೋದಿನಗಳನಂತರವಿಚಾರಣೆ ಆಗುತ್ತಿರುವಂಥ ರೀತಿಯ ವಿಚಿತ್ರ ವ್ಯವಹಾರಗಳು ನಡೆಯುತ್ತಿದ್ದರೂ ಅದನ್ನು ಫೈಲಿರುವದಕ್ಕಾಗಲೀ ಆ ರೀತಿ ನಡೆಸುವವರ ಮೇಲೆ ನಿಯಂತ್ರಣ ಹೇರುವದಕ್ಕಾಗಲೀ, ಯಾಕೆ ಮನಸ್ಸು ಮಾಡದಿದೆಯೋ ತಿಳಿಯದು.

ಕಳವಿನ ಎಮ್ಮೆಯ ಕುರಿತಾಗಿ ವಿಚಾರಣೆಯಾಗಬೇಕೆಂದು ಒಬ್ಬರು ಅರ್ಜಿ ಸಲ್ಲಿಸಿದರು. ಎಮ್ಮೆಯ ಪತ್ತೆಯೂ ಆಯಿತು. ನಂತರ ಆ ಪ್ರಕರಣ-ಏನು ತಿಂಗಳ ವರೆಗೆ ನಡೆಯಿತು. ಅಷ್ಟರ ವರೆಗೆ ಸರಕಾರೀ ಖರ್ಚನಿಂದಲೇ ಎಮ್ಮೆಯ ಸೇವಿಸಿಕೊಂಡು ಕೊನೆಗೆ ಎಮ್ಮೆಯ ಮೂಲಕ ಮ್ಮತ್ತಿಗಿಂತಲೂ ಸಾಕುವ ವಿಚಿತ್ರ ಹೆಚ್ಚಾಯಿತು. ಇದರಿಂದ ನ್ಯಾಯ ಸಿಕ್ಕರೂ ವಿಲಂಬಕ್ಕಾಗಿ ನ್ಯಾಯದ ಪ್ರಯೋಜನ ಶಪ್ಪಿ ಹೋಗುತ್ತದೆ.

ಕಳವು, ಖೂನಿ, ಮುಂತಾದವುಗಳನ್ನು ವಿಚಾರಿಸಿ ತೀರ್ಪು ಕೊಡುವದಕ್ಕೆ ನಾಲ್ಕೈದು ವರ್ಷಗಳಷ್ಟು ವಿಲಂಬವಾಗಿದೆ. ಇದರಿಂದ ನ್ಯಾಯ ಖಾತೆಗೆ ಬರುತ್ತಿರುವ ಖರ್ಚು ಏನು ಸಣ್ಣದೇ?—ಇದು ಯಾರ ಹಣ? ಒಂದು ಪ್ರಕರಣದಲ್ಲಿ ನಾನು ಸಾಕ್ಷಿಗಾರನಾಗಿದ್ದೆ. ಸಂಜೆ ನಾಮೆಗೂ-ನನ್ನ ದಸ್ಕತ್ತು ಇತ್ತು. ಆದರೆ ಅದು ಯಾಕೆ, ಯಾರ ಕುರಿತಾಗಿ, ಎಂದು ಇತ್ಯಾದಿ ಮಾಹಿತಿ ನನಗೇ ನೆನಪಿರಲಿಲ್ಲ. ಸಾಕ್ಷಿಗಾಗಿಯೂ ಹಾಗೆಯೇ; ಸಾವೂರ್ಯ ನಾಲ್ಕು ವರ್ಷಗಳಲ್ಲಿ ಇಪ್ಪತ್ತರಷ್ಟು ದಿನ ಕೋರ್ಟಿಗೆ ನಾನು ಹೋಗಿದ್ದೇನೆ. ಕೊನೆಯಲ್ಲಿ ನನ್ನಿಂದ ಪಡೆದುದು—"ಇದಕ್ಕೆ ನೀವು ದಸ್ಕತ್ತು ಹಾಕಿದ್ದೀರಾ?" 'ಇದು ನಿಮ್ಮದು ಅಲ್ಲವೇ'ಎಂದು. ನನ್ನ ಜೊತೆಯಲ್ಲಿ ಅನೇಕರು ಸಾಕ್ಷಿದ ಸಲುವಾಗಿಯೇ ಬರುತ್ತಿದ್ದರು. ಎಲ್ಲರಿಗೂ ಸರಕಾರೀ ಭತ್ತೆ ಕೊಡಲಾಗುತ್ತಿತ್ತ. ಆದರೆ ಇಷ್ಟೆಲ್ಲ ದೀರ್ಘಾವಧಿಯ ಕಾಲ ಏಕೆ ಹಿಡಿಯುತ್ತದೋ ತಿಳಿಯದು. ಎಲ್ಲರನ್ನೂ ಒಮ್ಮೆಲೇ ಕರೆದು ವಿಚಾರಿಸುವದಕ್ಕಿಂತ ಅವಶ್ಯ ವಿದ್ದಷ್ಟೆ ಜನರನ್ನು ಬರಮಾಡಿಕೊಂಡು ಸಾಕ್ಷ್ಯ ಪಡೆಯುವದು ಸೂಕ್ತವಲ್ಲವೇ? ಕೆಲವು ಪ್ರಕರಣಗಳಿಗೆ ಮಾಹಿತಿ ಸಂಗ್ರಹಕ್ಕಾಗಿ ವಿಲಂಬವಾಗುತ್ತದೆಯೆಂದು ಹೇಳುತ್ತಾರೆ. ಆದರೆ ಅವನ್ನು ಎಷ್ಟು ಕಾಲದಲ್ಲಿ ಒದಗಿಸಿಕೊಳ್ಳಬೇಕೆಂಬ ನೀತಿಯೂಗಲೀ, ಒತ್ತಾಯವಾಗಲೀ, ಇಲ್ಲವೇ?

ಬಹು ದೀರ್ಘಾವಧಿಯ ತನಕ ವಿಚಾರಣೆ ಮುಂದುವರಿದರೆ, ಅಥವಾ ತೀರ್ಪು ಕೊಡಲು ತಡವಾದರೆ ಕಾನೂನಿನ ಭಯ ಜನಕ್ಕೆ ಉಳಿಯುವದಿಲ್ಲ. ಮೂಲ ಪ್ರಕರಣದ ಮೇಲೆಮತ್ತೊನಾದರೂವಿಷಯಾಸಕ್ತ ಮಾಡುವ ಪ್ರಯತ್ನಗಳೂ ನಡೆಯಲು ಅನುವಾಗುತ್ತದೆ. ಇದರ ಉದಾಹರಣೆ ಸರಕಾರೀ ವ್ಯವಹಾರದಲ್ಲಿ ಕಂಡು ಬರುತ್ತದೆ. ಮದ್ಯಪಾನ, ಕಳವು ಮುಂತಾದವುಗಳು ಬಹಳಷ್ಟು ಅಯಶಸ್ವಿಯಾಗುವದಕ್ಕೆ ಇದೇ ಕಾರಣವೆಂದರೆ ತಪ್ಪಾಗಲಾರದು. ಆರೋಪಿಯನ್ನು ಜಾಮೀನಿನ ಮೇಲೆ ಬಿಟ್ಟ ನಂತರ ಎಷ್ಟೋ ವರ್ಷಗಳ ವರೆಗೆ ವಿಚಾರವಿಲ್ಲದೇ ಉಳಿಯುತ್ತದೆ. ಆಗ ಗುನ್ಹೆಯ ಸಾಮಗ್ರಿಗಳ ಹಾಳಾಗುವದೂ ರೂಪಾಂತರ ಹೊಂದುವದೂ ಸಾಧ್ಯವಿದೆ. ಇದರಿಂದಾಗಿ ಮತ್ತು ಮೂಲ ಸಾಕ್ಷ್ಯಗಾರರಿಗೆ ಮರನೆಯಾಗಿ ಎಷ್ಟೋ ಪ್ರಕರಣ ನಿರ್ಜೀವಿಯಾಗುವ ಸಂಭವವುಂಟು.

ಇತ್ತೀಚೆಗೆ ರಿಟ್ ಅರ್ಜಿಗಳ ಹಾವಳಿ ಹೆಚ್ಚಾಗ ತೊಡಗಿದೆ. ಈ 'ರಿಟ್'ಗಳಿಗೆ ಎಷ್ಟು ಅವಧಿ ಕೊಡಬೇಕೆಂಬ ನಿಯಮವೂ ಇಲ್ಲವೆಂತ ಕಾಣುತ್ತದೆ. ನಿಪಾಲೆಯಲ್ಲಿ ತರದೇ ಎಷ್ಟೋ ಕಾಲ ಅದು ಹಾಗೆಯೇ ಉಳಿಯಬಹುದು. ಚುನಾವಣೆ ಕಕರಾರಿನ ಅರ್ಜಿಯನ್ನು ಒಬ್ಬರು ಸಲ್ಲಿಸಿದರೆ ಮತ್ತೊಂದು ಚುನಾವಣೆ ಬರುವಲ್ಲಿಯವರೆಗೂ ಅದರ ವಿಚಾರಣೆ ನಡೆಯುವದಿಲ್ಲವೆಂದರೆ ಅದಕ್ಕೇನೆನ್ನಬೇಕು? ಸಣ್ಣ ಸಣ್ಣ ವಿಷಯಕ್ಕು ನಾಲ್ಕೈದು ತಿಂಗಳು ಕಳೆದರೂ ವಿಚಾರವಾಗುವದಿಲ್ಲ.ಇದರಿಂದ ರಾಜ್ಯದ ಎಷ್ಟೆಲ್ಲ ಕಾರ್ಯಕಲಾಪಗಳು, ಅಭಿವೃದ್ಧಿ ಯೋಜನೆಗಳು, ನಿಂತುಕೊಳ್ಳುತ್ತವೆ. ಇಂಬುಕೊಳ್ಳುವ ಅರ್ಹತೆ ಇದೆಯೇ—ಇಲ್ಲವೇ?" ಎಂಬುದಕ್ಕೆ ತೀರ್ಪಿನ ಅವಧಿ ಇಷ್ಟೆಲ್ಲ ಬೆಳೆದರೆ ಇನ್ನಿತರ ಅತಿ ಮಹತ್ವದ ಪ್ರಕರಣಕ್ಕೆ ನಮ್ಮ ಜನ್ಮಾಂತರ ಅವಸ್ಥಾಂತರಗಳೂ ಸಂಕಾಗಲಿಕ್ಕಿಲ್ಲವಲ್ಲವೇ?

(ಇನ್ನಷ್ಟನ್ನು ಪುಟ ನೋಡಿ)

For Preparing Most Delicious

And Best Coffee

Use Always

Pure and Genuine

POPULAR COFFEE POWDER

Best and Choicest Coffee Seeds Are Used

Manufacturers:

POPULAR COFFEE WORKS

GHASMANDY ROAD,

SECUNDERABAD. A. P.

Phone No. 76196.

ಈ ಮಹಾ ರೋಗಕ್ಕೆ ಯಾವ ಮದ್ದು ಕೊಡಬೇಕು?

ಪ್ರಜಾರಾಜ್ಯ ಭಾರತದಲ್ಲಿ ವಿಲಂಬ ಅಥವಾ ಮಂದಗತಿಯ ರೋಗ ಉಲ್ಬಣಾವಸ್ಥೆಗೇರಿದೆ. ಇದಕ್ಕೆ ಸಾವೂರ್ಯ ಪುದ್ದನ್ನು ಜನತೆ ಆಗಾಗ ನೀಡುತ್ತಿದೆ; ಆದರೆ, ಇಷ್ಟಂದಂದೇ ಅದು ವಾಸಿಯಾಗದ್ದರಿಂದ ವಿಶೇಷ ಚುಚ್ಚು ಮದ್ದನ್ನೇ ಶೋಧಿಸಬೇಕಲ್ಲವೆ?

ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.

ಜಾನಪದ ಚಾರಿತ್ರ

ತಾವರೆ ಹೂಗಾಯ್ತೇನೆ ‡

ರಾಮರಾಜ ಕ್ಷತ್ರಿಯರೆಂಬ ಕೋಟಿಯವರಲ್ಲಿನ ಜಾನಪದ ಕತೆಯಿದು. ಜಾನಪದ ಗೀತೆಯು ರೂಪದಲ್ಲಿರುವ ಈ ಅಮೂಲ್ಯ ಸಂಪತ್ತನ್ನು ಕನ್ನಡಿಗರೆಲ್ಲರೂ ಬಳಸಿಕೊಳ್ಳಬೇಕು. ಜೆನ್ನಿನ ತ್ಯಾಗದ ಪ್ರಭಾವವೇ ಇಲ್ಲಿ ದುರ್ಬಿಸಮತ್ತಾಗಿ ಮೂಡಿಬಂದಿದೆ.

ಲೇಖಕರು

ರಾಮರಾಜ ಕ್ಷತ್ರಿಯರು ತಾಲೂಕಿನ ದಕ್ಷಿಣದಲ್ಲಿ ನೆಲಸಿರುವ ರಾಮರಾಜ ಕ್ಷತ್ರಿಯರೆಂಬ ಕೋಟಿಯವರಲ್ಲಿ ಅನೇಕ ಜಾನಪದ ಗೀತೆಗಳು ರೂಢಿಯಲ್ಲಿವೆ. ಅವುಗಳಲ್ಲಿ 'ತುಂಬೆ ಹಾಡು'ಗಳೆಂಬವು ತುಂಬಾ ಪ್ರಸಿದ್ಧ. ಮನೆಯ ಹಿರಿಯ ಹೆಂಗುಸರು ಯಾವುದೋ ಕಥೆಯನ್ನು ಹಾಡುತ್ತಾ ಹೇಳುವಾಗ, ಸೊಲ್ಲಿನಕೊನೆಗೆ 'ತುಂಬೆತುಂಬಿ' ಎಂದು ಸೇರಿಸುತ್ತಾರೆ. ತುಳು ಪಾಡ್ದನಗಳಲ್ಲಿ 'ಓ ಬೇಲೆ' ಇದ್ದ ಹಾಗೆ. ಅಂತಹ ಹಾಡುಗಳನ್ನು, ಹೇಳುವ ಹಾಡುಗಾರ್ತಿ ಹಿರಿಯ ಹೆಂಗುಸರ ಸುತ್ತು ಕಟ್ಟಿ ಮನೆಯ ಸಣ್ಣ ಮಕ್ಕಳು ಕುಳಿತು ಅಲಿಸುತ್ತಾ ಹಾಡಿನ ಸವಿಸವಿಯುತ್ತಾರೆ.

ಅಂತಹ ಹಾಡುಗಳಲ್ಲಿ ಈ ಕೆಳಗೆ ಒಂದನ್ನು ಕುರಿತು ಏವರಣೆ ನೀಡಲಾಗಿದೆ. ಇದರ ಕಥಾಸಾರ ಇಂತಿದೆ:

'ಜನಕರುಗಳಿಗೆ ನೀರಿಲ್ಲದಾಯಿತು; ಜನ ಜಾನುವಾರು ಕಷ್ಟದಲ್ಲಿ ಬಿದ್ದಾಗ, ಕೆರೆ ಬಾವಿ ತೋಡಿಸಿದರು. ಆದರೆ ಅದರಲ್ಲಿ ನೀರು ನಿಗಲಿಲ್ಲ. ಮನೆಯು ಹಿರಿ ಸೊಸೆ ಹೊನ್ನಮ್ಮ; ಪತಿವ್ರತೆ. ಆಕೆಯ ಆಹುತಿ ಕೊಟ್ಟರೆ ನೀರು ಆದೀತು ಎಂದು ಪಂಚಾಂಗದಲ್ಲಿ ಕಂಡಿತು. ಆದರೆ ಬಂಗಾರ ದಂತಹ ಹಿರಿ ಸೊಸೆಯನ್ನು ಹೇಗೆ ಆಹುತಿ ಕೂಡಲಿ!

ಹೊನ್ನಮ್ಮ ಒಂದು ದಿನ ನೇರೆಮನೆಗೆ ಹೋಗಿ ನೀರು ತಂದು ಅಡಿಗೆ ಮಾಡಿದಳು. ಊಟಕ್ಕೆ ಏಳಲು ಹೇಳಿದರೆ, ಅತ್ತೆ ಮಾವಂದಿರು ಚಿಂತೆಯಿಂದ ಊಟ ಮಾಡಲೊಲ್ಲರು; ಗಂಡನೂ ಉಣಲೊಲ್ಲ.

ಹೊನ್ನಮ್ಮನಿಗೆ ಒಂದು ಕೆಟ್ಟ ಸ್ವಪ್ನ ಬಿತ್ತು. ಅಣ್ಣಂದಿರು ಏಳು ಮಂದಿ ಕಡಿದಾಡಿ ಸತ್ತು ಹೋದರು, ಅವರ ಹೆಂಡಂದಿರು ಕೆಂಡ ಹಾಯ್ದರು. ತವರು ಮನೆಗೆ ಹೊನ್ನಮ್ಮ ಹೋದಳು. ಹೊರಡುವಾಗ ದುಶ್ಶಕುನಗಳೇ ತೋರಿದುವು. ತವರು ಮನೆಗೆ ಮುಟ್ಟಿದರೆ ಅಲ್ಲಿಯೂ ದುಶ್ಶಕುನಗಳೇ, ಅಕ್ಕ ಏನು ನೋಡಿದರೂ ಹೊನ್ನಮ್ಮನಿಗೆ ದುಃಖ ಬರುತಿತ್ತು. ಅಣ್ಣಂದಿರ ಜತೆಗೆ ಊಟಕ್ಕೆ ಕುಳಿತಳು. ಊಟ ಮಾಡುವಾಗಲೂ ಅಪಶಕುನಗಳೇ ಕಂಡವು. ಅಲ್ಲಿಂದ ಅವರ ಆಶೀರ್ವಾದ ಪಡೆದು ಗಂಡನ ಮನೆಗೆ ಬಂದಳು.

ಎಲ್ಲರನ್ನೂ ಕರೆಸುತ್ತ ನಿಲ್ಲಿಸಿದಳು. ತಾನು ಕರಿಗ ಇಳಿಯುತ್ತೇನೆ ಆತ್ಮಾಹುತಿ ಕೂಡುತ್ತೇನೆ; ತಂವರಿ ಹೂಗಾಗುತ್ತೇನೆ. ಆ ಹೂವನ್ನು ಕೈಯಾರ ತಂದು ಗಿಂಡಿ ಪೂಜೆ ಮಾಡಿರಂದಳು.

ಕರೆ ಪೂಜೆ ಮಾಡಿ ಆಕೆ ಕರೆಗೆ ಇಳಿದಳು. ಒಂದು ಮೆಟ್ಟಿಲಿಳಿವಾಗ ಪಾದ ಮುಳುಗಿತು; ಎರಡು ಮೆಟ್ಟಿಲಲ್ಲಿ ಮೊಣಕಾಲು ಮುಳುಗಿತು; ಹೀಂಗೆ ಕರೆಯಲ್ಲಿ ನೀರು ಉಕ್ಕುತ್ತಾ ಬಂತು.

ಸತಿ ಹೊನ್ನಮ್ಮ ತಾವರೆ ಹೂವಾದಳು ಆದನ್ನು ಕೈಯಾರ ತಂದು ಗಿಂಡಿ ಪೂಜೆ ಮಾಡಿದರು!'

ಕರೆಬಾವಿಗಳಲ್ಲಿ ನೀರು ತುಂಬಿ ಊರು ಸಮೃದ್ಧಿಯಾಯಿತು.

ಜನಗಳಿಗೆ ನೀರಿಲ್ಲ ತುಂಬೆ ತುಂಬೆ
ಧರುಮಳಿಗೆ ನೀರಿಲ್ಲ.....
ಇರುವ ಎಂಭತ್ತು ಕೋಟಿಗಿಲ್ಲ.....
ಕರೆಬಾವಿತನಿ ನಿಲ್ಲಿಗ...

ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.

ಜಾನಪದ ಚಾರಿತ್ರ

ತಾವರೆ ಹೂಗಾಯ್ತೇನೆ ‡

ರಾಮರಾಜ ಕ್ಷತ್ರಿಯರೆಂಬ ಕೋಟಿಯವರಲ್ಲಿನ ಜಾನಪದ ಕತೆಯಿದು. ಜಾನಪದ ಗೀತೆಯು ರೂಪದಲ್ಲಿರುವ ಈ ಅಮೂಲ್ಯ ಸಂಪತ್ತನ್ನು ಕನ್ನಡಿಗರೆಲ್ಲರೂ ಬಳಸಿಕೊಳ್ಳಬೇಕು. ಜೆನ್ನಿನ ತ್ಯಾಗದ ಪ್ರಭಾವವೇ ಇಲ್ಲಿ ದುರ್ಬಿಸಮತ್ತಾಗಿ ಮೂಡಿಬಂದಿದೆ.

ಹಿರಿಯರಿಗೆ ಹುಣ್ಣಿಯಾಯತ್ತ...
ಕೆರೆಬಾವಿತೆಗೆ ನ್ವಾಗ....
ನೀರು ಕಾಣುವುದಿಲ್ಲ. .....
ಈ ರೀತಿ ಹಾಡಿನ ಧಾಟಿ ಪ್ರಾರಂಭವಾಗುತ್ತದೆ: ಮನೆಯ ಜನಕರುಗಳಿಗೆ ಜನಗಳಿಗೆ ಯಾರಿಗೂ ನೀರಿಲ್ಲದಾಗಲು ಕೆರೆ ಬಾವಿ ತೋಡಿಸಿದರು. ಆದರೆ ನೀರು ನಿಗಲಿಲ್ಲ. ಯಾವ ಕಾರಣ ಹೀಗೆ ಆಯಿತು ಎಂದು—

ಜೋಗಿ ಶ್ರೀಗೆ ಕರೆಸಾರು....
ಪಂಚಾಂಗ ಓದಿಸಾರು....
ಹಿರಿ ಸೂಸೆ ಹೊನ್ನಮ್ಮಗೆ
ಆಹುತಿ ಕೇಳ್ವನೆ...

ಹೀಗೆ ಪಂಚಾಂಗವಿಟ್ಟು ಜೋಗಿ ಶ್ರೀ ಹೇಳಿದರೆ, ಮನೆಯ ಮಂದಿಗೆ ಅದು ಒಪ್ಪಲಿಲ್ಲ; ಹೇಗೆ ತಾನೇ ಒಪ್ಪೀತು ಅದ್ದರಿಂದ ಅವರು—

ನಾಕಪ್ಪ ಪಂಚಾಂಗ....
ಕಟ್ಟಪ್ಪ ಪಂಚಾಂಗ....
ಹೀಗೆ ಹೇಳಿ ಆತನ ಪಂಚಾಂಗ ಕಟ್ಟಿ ಇಡರು!

ಹೊನ್ನಮ್ಮ ಈ ಮಾತು ಕೇಳಿದಳು; ಚಿಂತೆಗೆ ಒಳಗಾದಳು.

ಅಲ್ಲಿಂದ ಎದ್ದಾಳು...
ಪಟ್ಟೆ ಮಂಚದ ಮೇಲೆ ..
ಸೆರಗ್ವಾಸಿ ಮಲಗಾಳು...

ಚಿಂತೆಯಿಂದ ಹೀಗೆ ಮಲಗಿದರೂ, ತನ್ನ ಗೃಹಿಣಿಯ ಕರ್ತವ್ಯ ನೆನಪಾಗಬೇಕಷ್ಟೆ? ಹೀಂಗಾಗಿ ತವರಿಂದ—

ಬಾಡು ಬಾಡು ಸಿಯೆದ್ದಾಳು....
ಬೆನ್ನದ ಕೂಡಪ್ಪ ತಕ್ಕೊಂಡ್ಲು....
ಬೆಳ್ಳಿ ತಗನೆ ಯಪ್ಪು ತೆಕೊಂಡ್ಲು....
ನೆರ್ಮನೆ ನೀರಿಗೆ ಹೋದ್ಲು...
ನೀರುನ್ನೆ ತಂದಾಳು....
ಅಡಿಗೇನೇ ಮಾಡಾಳು....

ಅಡಿಗೆ ಆದ ಮೇಲೆ ಚಿಂತೆಯಿಂದ ಸುಮ್ಮನೇ ಕುಳಿತಿದ್ದ ಅತ್ತೆಯು ಬಳಿಗೆ ಹೋಗಿ ಊಟಕ್ಕೆ ಕರೆದಳು.

ಅತ್ತೆಮ್ಮ ಅತ್ತೆಮ್ಮ....
ಅಡಿಗೆ ಆಗೇತಲ್ಲ...
ಊಟಕ್ಕೇಳ್ಬೇಬಾರ್ದೆ...

ಅತ್ತೆಗೆ ಊಟ ಮಾಡುವ ಮನಸ್ಸೇ ಇಲ್ಲ; ತೋಡಿದ ಕೆರೆ ಬಾವಿಗಳಲ್ಲಿ ನೀರಿಲ್ಲ; ನೀರಿಲ್ಲದೆ ಜನ ಜಾನುವಾರು ಕಷ್ಟಕ್ಕೆ ಗುರಿಯಾಗಿದೆ. ಫೀರು ಆಗಬೇಕಾದರೆ ಹಿರಿ ಸೊಸೆಯ ಆಹುತಿಯಾಗಬೇಕೆಂದು ಪಂಚಾಂಗದಲ್ಲಿ ಕಂಡಿದೆ. ಇಂತಹ ಚಿಂತೆಯಲ್ಲಿ ಇರುವಾಗ ಊಟ ಬೇಕಾದೀತೆ?

ನನಗೆಂತ ಊಟ ಸೊಸೆ....
ಮೂವಾಜಿಗೆ ಹೇಳೆಂದ್ರು....

ತಾನು ಊಟ ಮಾಡೋದಿಲ್ಲ; ನಿನ್ನ ಮೂವ ಮಾಡಲಿ, ಅವಂಗೆ ಹೇಳು ಎಂದು ಅತ್ತೆ ಹೇಳಿದಂತೆ—

ಮೂವಾಜಿ ಮೂವಾಜಿ .
ಅಡಿಗೆ ಆಗೇತಲ್ಲ....
ಊಟಕ್ಕೇಳ್ಬೇಬಾರ್ದೆ...

ಎಂದು ಮೂವನೊಡನೆ ಸೊಸೆ ಕೇಳಿದಳು.

ಮನೆಯವರಿಗೆಲ್ಲ ಒಂದೇ ಚಿಂತೆ; ಊಟ ಆತನಿಗೂ ಬೇಡ

ನನಗಂತ ಊಟ ಸೊಸೆ....
ನಿಂದೊರೆ ರಾಯಗೆ ಹೇಳೆಂದ್ರು ..

ಮೂವನ ಮಾತನಂತೆ ಆಳೆ ಬಂದು ತನ್ನ ದೊರೆ ರಾಯನಿಗೆ ಹೇಳುತ್ತಾಳೆ.

ಪಟ್ಟೆ ಹಚ್ಚಡ ದೊರೆಯೆ ...
ಮುತ್ತಿನ ಒಂಟೆ ದೊರೆಯೆ...
ಅಡಿಗೆ ಆಗೇತಲ್ಲ...
ಊಟಕ್ಕೇಳ್ಬೇಬಾರ್ದೆ....

ದೊರೆರಾಯನಿಗೂ ಊಟ ಬೇಡವಾಗಿ ತ್ತು; ಆತನೂ ಹೇಳಿದ

ನನಗೆಂತ ಊಟ ಹೊನ್ನೆ?
ನನಗೆಂತ ಊಟ ಹೆಣ್ಣೆ
ಯಾರೂ ಊಟ ಮಾಡಲೊಲ್ಲರು. ತಾನಾದರೂ ಏಕೆ ಊಟ ಮಾಡಬೇಕು?

ಅಲ್ಲಿಂದ ಎದ್ದಾಳು. .
ಸಾಲ ಮಂಚದ ಮೇಲೆ...
ಸೆರಗಾಸಿ ಮಲಗಾಳು...

ಮಲಗಿದರೂ ಆಕೆಗೆ ಹೇಗೆ ಸುಖನಿದ್ರೆ ಬರಬೇಕು; ಕೆಟ್ಟ ಸ್ವಪ್ನ ಬಿತ್ತು ಅತ್ತೆಯ ಹತ್ತಿರ ಬಂದು—

ಅತ್ತೆಮ್ಮ ಅತ್ತೆಮ್ಮ...
ಕೆಟ್ಟ ಸ್ವಪ್ನ ಬಿತ್ತು .
ಅನಿಷ್ಟ ಸಕನ ಬಿತ್ತು...
ಏಳ್ಮಂದಿ ಅಣ್ಣಂದಿರು...
ಕಡಿದಾಡಿ ಸಾಯೂಲು ಕಂಡೆ....
ಏಳ್ಮಂದಿ ಅತ್ತಿಗೆದ್ರು ..
ಕೆಂಡ ಹಾಯೂದು ಕಂಡೆ...

ಹಾಗೆ ತವರು ಮನೆಯಲ್ಲಿ ಅನರ್ಥ ರಾತಿಯೇ ಆದ ಸ್ವಪ್ನ ಕಂಡದ್ದರಿಂದ ಒಮ್ಮೆ ತಾನು ಅಲ್ಲಿಗೆ

ಹೋಗ್ಬರಲೆ ಅತ್ತೆಮ್ಮ...

ಅತ್ತೆ ಒಪ್ಪಿಗೆ ಕೊಡಲೊಲ್ಲಳು; ಮೂವನೊಡನೆ ಕೇಳೆಂದಳು.

ಹೋಗ್ಬರಲೆ ಮೂವಾಜಿ...
ಕಟ್ಟ ಸ್ವಪ್ನ ಬಿತ್ತು....
ಅನಿಷ್ಟ ಸಕನ ಬಿತ್ತು....
ಏಳ್ಮಂದಿ ಅಣ್ಣಂದಿರು ....
ಕಡಿದಾಡಿ ಸಾಯೂಲು ಕಂಡೆ....
ಏಳ್ಮಂಏ ಅತ್ತಿಗೆದ್ರು....
ಕಂಡ ಹಾಯೂದು ಕಂಡೆ...
ಹೋಗ್ಬರಲೆ ಮೂವಾಜಿ....

ಮೂವನೂ ಒಪ್ಪಿಗೆ ಕೊಡಲೊಲ್ಲನು; ಕಂಡ ನನ್ನೇ ಕೇಳೆಂದರು.

ನನ್ನಹತ್ರ ಕೇಬ್ಯೇಡ ---
ನಿಂದೊರೆ ರಾಯರತ್ರ ಕೇಳು....

ಸತಿ ಹೊನ್ನಮ್ಮ ದೊರೆಯಿಂದ ಮುಖಬಳಗೆಬಂದು ಅಪ್ಪಣೆ ಕೇಳಿದಳು.

ಪಟ್ಟೆ ಹಚ್ಚಡ ದೊರೆಯೆ....
ಮುತ್ತಿನಸಂಟೆ ದೊರೆಯೆ....
ಕೆಟ್ಟ ಸ್ವಪ್ನ ಬಿತ್ತು....
ಅನಿಷ್ಟ ಸಕನ ಬಿತ್ತು....
.....
ಹೋಗ್ಬರಲೆ ದೊರೆಯೆ...

ಹೆಂಡತಿಗೆ ತವರು ಮನೆಗೆ ಹೋಗ ಬೇ

(ಇಪ್ಪತ್ತೊಂದನೇ ಪುಟ ನೋಡಿರಿ)

‡ ಶ್ರೀ ಬೇಳಲ ರಾಮ ನಾಯಕರ ಸಂಗ್ರಹದ ಹಾಡುಗಳಿಂದ.

—: ಶಿವಮಂಜೆ ವರಾರಿ :—
ಅವರ ಹೊಸ ಕಾದಂಬರಿ

ಸಿರಿ ಮರದ-
-ಕಿರಿ ಹಣ್ಣು

ಪ್ರಕಾಶಕರು :-
ಮನುಕುಲ
ಮುಂಬಯಿ.

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್

ಪ್ರಚಂಡ ವೀರ ಪುತ್ರ

"ರಾಷ್ಟ್ರ ರಕ್ಷಣೆಯೇ ನಮ್ಮ ಜೀವನ! ರಾಷ್ಟ್ರ ರಕ್ಷಣೆಯೇ ನಮ್ಮ ಧ್ಯೇಯ! ನಮ್ಮ ರಾಷ್ಟ್ರದ ಮೇಲೆ ಪರಕೀಯರ ಆಕ್ರಮಣವಾದರೆ ಅದನ್ನು ನಾವು ಸಹಿಸಲಾರೆವು!" ಎಂಬ ಈ ವೀರ ಘೋಷಣೆಯನ್ನು ಕಾರ್ಯರೂಪಕ್ಕೆ ತಂದ ಒಂದು ಕುಟುಂಬದ ವೀರೇತಿಹಾಸ... ಇಲ್ಲಿದೆ. ಭಾರತೀಯರಿಗೆ ವೀರಾವೇಶದ ಸಂದೇಶ ನೀಡುತ್ತಿದೆ.

ಅಕ್ಬರ್ ಬಾದಶಹನು ಭಾರತವನ್ನು ಆಳುತ್ತಿದ್ದ ಆ ಕಾಲದಲ್ಲಿ ನಡೆದ ಅನೇಕ ಘಟನೆಗಳಲ್ಲಿ ಇದೊಂದು ವೀರೆದುರಂತ. ಮೊಗಲ್ ಬಾದಶಹರ ಕರಂಜಿಗೆ ಅಂಟಿಕೊಂಡೇ ಬಂದಿದ್ದ ಸ್ವಾಮ್ರಾಜ್ಯ ವಿಸ್ತಾರದ ದಾಹ ಅಕ್ಬರನನ್ನೂ ಬಿಟ್ಟಿರಲಿಲ್ಲ.

ಅಕ್ಬರನು ಚಿತ್ತೂರನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕಾಗಿ ಒಂದು ದೊಡ್ಡ ಸೈನ್ಯವನ್ನು ಕಳುಹಿಸಿಕೊಟ್ಟನು. ಚಿತ್ತೂರನ್ನು ಕಲುಪಿದ ಆ ಸೈನ್ಯವು ಯಾವ ಮುನ್ಸೂಚನೆಯೂ ಇಲ್ಲದೆ ಅನಿರೀಕ್ಷಿತವಾಗಿ ಚಿತ್ತೂರಿಗೆ ನುಗ್ಗಿತು. ಆ ಕಾಲದಲ್ಲಿ ರಾಣಾ ಉದಯಸಿಂಹನು ಚಿತ್ತೂರನ್ನು ಆಳುತ್ತಿದ್ದನು.

ಅನಿರೀಕ್ಷಿತವಾಗಿ ಮುತ್ತಿಗೆ ಹಾಕಿದ ಅಪಾರವಾದ ಸೇನಾ ಸಾಗರವನ್ನೇ ಕಂಡ ಉದಯ ಸಿಂಹನು ಉಪಾಯವಾಗಿ ಚಿತ್ತೂರಿನಿಂದ ಹೊರಗೋಡಿ, ಪಲಾಯನ ಗೈದರೆ ಮತ್ತೆ ಸೇಡು ತೀರಿಸಿ ಬಹುದೆಂದು ಅಡಗಿ ಕುಳಿತು ಬಿಟ್ಟನು! ಆದರೆ ಉದಯಸಿಂಹನ ಸೇನಾಪತಿಯಾಗಿದ್ದ ಜಯಮಲ್ಲನು ದಿಟ್ಟತೆಯಿಂದ ರಾಷ್ಟ್ರ ರಕ್ಷಣೆಯಲ್ಲಿ ನಿರತನಾದನು. ಆದರೆ, ಅಕ್ಬರನ ಸೈನಿಕರು ಮೋಸದಿಂದ ಗುಂಡುಯೊಡೆದು ಜಯಮಲ್ಲನನ್ನು ಉರುಳಿಸಿ ಬಿಟ್ಟರು! ಈ ವಾರ್ತೆ ಪ್ರಜಾಜನರಿಗೆ ತಿಳಿದಾಕ್ಷಣವೇ ಎಲ್ಲರೂ ಗಾಬರಿಗೊಂಡರು. ಈ ಸಂದರ್ಭದಲ್ಲಿ ಚಿತ್ತೂರಿನ ಓರ್ವ ತರುಣನು ತೋರಿಸಿದ ಧೈರ್ಯ, ಪರಾಕ್ರಮ ಹಾಗೂ ರಾಷ್ಟ್ರ ಭಕ್ತಿ, ಇತಿಹಾಸದ ಪುಟಗಳಲ್ಲಿ ರಕ್ತರಂಜಿತ ಇತಿಹಾಸವಾಗಿ ರಂಜಿಸುತ್ತಿದೆ!

ಈ ಪ್ರಚಂಡ ವೀರನ ವಯಸ್ಸು ಕೇವಲ ಹದಿನಾರು ಮಾತ್ರವೇ ಆಗಿತ್ತಾದರೂ ವ್ಯಾಯಾಮ, ಗರಡಿಗಳಲ್ಲಿ ನುರಿತ ಆತನ ಅಂಗ ಸೌಷ್ಠವ ಬಲಿಷ್ಠರಾದ ಇತರ ಯುವಕರನ್ನು ನಾಚಿಸುವಂತಿದ್ದಿತು. ಈತನ ಧೈರ್ಯ ಸಾಹಸಗಳ ಮುಂದೆ ಹಿರಿಯರೂ ತಲೆ ತಗ್ಗಿಸಬೇಕಾಗಿತ್ತು. ಇಂತಹ ವೀರ ತರುಣನು ದೇಶ ರಕ್ಷಣೆಗಾಗಿ ಸೊಂಟಕಟ್ಟಿದನು.

ಆ ಕಾಲದಲ್ಲಿ ಬಾಲ ವಿವಾಹ ಪ್ರಚಲಿತವಿತ್ತು. ಕುಡಿ ವಿಸೆಯ ಕಟ್ಟು ಮನಸ್ತಾದ ಈ ತರುಣನಿಗೆ ಆಗಲೇ ಮದುವೆಯೂ ಆಗಿತ್ತು. ಆತನಿಗೆ ತಕ್ಕ ಯೋಗ್ಯತೆಯ ವೀರ ಕಿಶೋರಿ, ಪತ್ನಿಯಾಗಿ ದೊರಕಿದ್ದಳು, ಚಿತ್ತೂರಿನ ತನ್ನ ಮನೆಯಲ್ಲಿ ತಾಯಿ, ತಂಗಿ, ಮತ್ತು ಹೊಸ ಹೆಂಡತಿಯೊಡನೆ, ತರಣ ಪುತ್ರನು ಬಡತನದಿಂದಲೇ ತನ್ನ ಪರಿವಾರದ ಜೀವನವನ್ನು ಸಾಗಿಸುತ್ತಿದ್ದನು. ಆದರೆ, ರಾಷ್ಟ್ರಕ್ಕೆ, ತನ್ನ ಮಾತೃಭೂಮಿಗೆ ಒದಗಿಬಂದ ಗಂಡಾಂತರದ ಎದುರು ತನ್ನ ಸುಖ ಕ್ಷುಲ್ಲಕವೆಂದು ಖಡ್ಗದ—ವೀರ ಪುತ್ರನು ಮಾತೃಭೂಮಿಯ ರಕ್ಷಣೆಗಾಗಿ ಈ ಸಂದರ್ಭದಲ್ಲಿ ಯುದ್ಧ ಭೂಮಿಗಿಳಿದನು.

ಪುತ್ರನ ವೀರ ಮಾತೆ, ತನ್ನ ಮಗನಿಗೆ ಸಂತೋಷದಿಂದ ಆಜ್ಞೆಯಿತ್ತುದಲ್ಲದೆ, ತಾನೂ ಸಹ, ಸೊಸೆ, ಮತ್ತು ಮಗಳೊಂದಿಗೆ ಕೈಯ್ಯಲ್ಲಿ ಕರವಾಲನ್ನು ಹಿಡಿದು, ದೇಶ ರಕ್ಷಣೆಗಾಗಿ ರಣ ಕಣಕ್ಕೆ ಇಳಿಯುವ ದೃಢ ನಿರ್ಧಾರ ಮಾಡಿದಳು. ಪುತ್ರನ ಹೆಂಡತಿಯೂ, ತಂಗಿಯೂ ಸಹ ಸಂತೋಷದಿಂದ ಇದಕ್ಕೆ ಒಪ್ಪಿಗೆಯಿತ್ತರು.

ಚಿತ್ತೂರನ್ನು ವಶಪಡಿಸಿಕೊಳ್ಳಲು ಬಂದ ಅಕ್ಬರನ ಸೈನ್ಯವನ್ನು ಎದುರಿಸುವವರೇ ಇಲ್ಲದ ಆ ವೇಳೆ, ವೀರ ಪುತ್ರನು ಖಡ್ಗ ಧಾರಿಯಾಗಿ ರಣಾಂಗಣಕ್ಕಿಳಿದು ವೈರಿಗಳಿಗೆ ಆಹ್ವಾನವಿತ್ತನು. ಒಂದು ಕಡೆಯಿಂದ ವೀರ ತರುಣ ಪುತ್ರ! ಮತ್ತೊಂದು ಕಡೆಯಿಂದ ಅತನ ತಾಯಿ, ಪತ್ನಿ ಮತ್ತು ತಂಗಿ! ಹೀಗೆ ಯುದ್ಧ ರಂಗಕ್ಕಿಳಿದಾಗ ಆ ಬೃಹತ್ ಸೈನ್ಯದ ಆ ಅಸಂಖ್ಯಾತ ಸೈನಿಕರಿಗೆ ಇದೊಂದು ಆಶ್ಚರ್ಯಕರವಾದ ದೃಶ್ಯವಾಗಿ ತೋರಿತು. ಏಕೆಂದರೆ, ಮಹಾ ಪ್ರವಾಹದಿಂದ ಮುಂದೊತ್ತುತ್ತಿರುವ ನದಿಯನ್ನು ದಾಟಲು ಒರ್ವ ಚಿಕ್ಕ ಹುಡುಗನು ಸಾಹಸ ಸವೆಸಗುತ್ತಿರುವಂತೆ, ಅಲ್ಲಿಯ ಪರಿಸ್ಥಿತಿಯಾಗಿತ್ತು.

ಇಂತಹ ಪರಿಸ್ಥಿತಿಯಲ್ಲಿಯೂ ವೀರಪುತ್ರನು ಹೋರಾದುತ್ತಾ ಹತ್ತಾರು ಮಂದಿ ವೈರಿಗಳನ್ನು ತಂದು ನೆಲಕ್ಕುರುಳಿಸಿ ಬಿಟ್ಟನ! ಇತ್ತ ಈ ವೀರಾಂಗನೆಯರೂ ಆ ಸೈರನ ಸೈನಿಕರು ಎಂಥ ಮುಗ್ಧರಾಗುವಂತಹ ಸಾಹಸವನ್ನು ತೋರಿಸುತ್ತ ಹಲವರನ್ನು ಗಾಯಗೊಳಿಸಿ ಉರುಳಿಸುತ್ತಿದ್ದಳು ವೀರ ಪುತ್ರನು ತನಗಿದಿರಾದ ಸೇನೆಯನ್ನು ತರಿದಿಕ್ಕುತ್ತ, ತನ್ನ ಮನೆಯುವರಿಗೆ ಸಹಾಯಕರಾಗಿ ಈ ವೀರಾಂಗನೆಯರು ಸಮಿಪಕ್ಕೆ ಬರುತ್ತಿರುವಷ್ಟರಲ್ಲಿಯೇ ವೀರ ಪುತ್ರನ ಪ್ರೀತಿಯ ಹಂಗಿಯು, ವೈರಿಯ ಪ್ರಹಾರಕ್ಕೆ ಕುತ್ತಾಗಿ ಭೂಮಿಗುರುಳಿದಳು! ಆವೇ ವೇಳೆಗೆ-ಈ ವೀರನ ಮಾತೆಯೂ, ಪತ್ನಿಯೂ ವೈರಿಗಳ ಗುಂಡಿನೇಟಿಗೆ ಬಲಿಯಾಗಿ ಭೂಮಿಗುರುಳಿದರು! ಗುಂಡಿನೇಟಿನಿಂದ ವಿಲವಿಲನೆ ಒದ್ದಾಡುತ್ತ ರಕ್ತದೊಕುಳಿಯಲ್ಲಿ ಬಿದ್ದಿರುವ, ತನ್ನ ಮಾತೆ ಹಾಗೂ ಹೆಂಡತಿ

(ಇಪ್ಪತ್ತನೇ ಪುಟ ನೋಡಿರಿ)

ಇವೆಲ್ಲವೂ ನಮ್ಮಲ್ಲಿ ಸದಾ ಮಾರಾಟಕ್ಕಿವೆ....

- ರ್ಯಾಲಿಸ್ 'ಮಾರಬಾಪ್' ಕೃಷಿ ಗೊಬ್ಬರಗಳು ಮತ್ತು 'ಜಾಜಾಫಿಗಾನ್' ಕೀಟನಾಶಕಗಳು.
- ಕೃಷಿಯಾಂತ್ರಿಕ ನೇಗಿಲುಗಳು ಮತ್ತು ನೀರಾವರಿ ಪಂಪುಸೆಟ್ಟುಗಳು.
- ಜ.ಇ.ಸಿ. ಮತ್ತು ಬೀಕೊ ಇಲೆಕ್ಟ್ರಿಕ್ ಮೋಟಾರುಗಳು ಮತ್ತು ಪಂಪು ಸೆಟ್ಟುಗಳು.
- ಸಿಲ್ವರ್ ಎಕ್ಸ್‌ಪ್ರೆಡ್ ಬ್ಯಾಟರಿಗಳು.
- ಜಿ.ಇ.ಸಿ. 'ಎವರೆಸ್ಟ್' ಸೀಲಿಂಗ್ ಫ್ಯಾನ್‌ಗಳು.
- L.T.-L.K. ಮೋಟಾರು ಸ್ಟಾರ್ಟರುಗಳು; ಸ್ಟಾರ್ಟರು ಸ್ವಿಚ್ಚುಗಳನ್ನೊಳಗೊಂಡ 'ಇರಿಗೇಷನ್ ಪೆನಲ್'ಗಳು ಮತ್ತು ಸ್ವಿಚ್-ಫ್ಯೂಸ್ ಯೂನಿಟ್ಟುಗಳು.
- ಜ.ಇ.ಸಿ. ರೇಡಿಯೋ ಟ್ರಾನ್ಸಿಸ್ಟರ್, ರೆಫ್ರಿಜರೇಟರ್, ನೀರು ಕುಡಿಸುವ ಸಾಧನಗಳು, ಏಸಿ-ಡಿಸಿ ಬಲ್ಬುಗಳು, ಇತರ ಇಲೆಕ್ಟ್ರಿಕ್ ಉತ್ಪನ್ನಗಳು ಮತ್ತು ಸಾಧನಗಳು.
- 'ಮಾಫೇರ್ ಏರ್ ಕಂಡೀಷನರ್'ಗಳು.
- 'ವರ್ಥಿಂಗ್‌ಟನ್ ಸಿಂಪ್ಸನ್' ಮೊನೊಬ್ಲಾಕ್ ಪಂಪು ಸೆಟ್ಟುಗಳು.
- 'ಬೆಸ್ಟ್ ಎಂಡ್ ಕಂ.' ತರ್ಪಾಲುಗಳು.
- 'ಕಲ್ಯಾಣ್' ಜಾಸಿಗೆಗಳು.
- 'ಶಾಲಿಮಾರ್' ಪೇಯಿಂಟ್‌ಗಳು ಮತ್ತು ಡೇ ಲೈಟ್ ಫಿಟ್ಟಿಂಗ್ಸ್‌ಗಳು.

ವಿವರಪೂರ್ಣ ಮಾಹಿತಿಗಳಿಗೆ ವಿಚಾರಿಸಿ.

ಮಣಿಪಾಲ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್

ಮಾರಾಟ ವಿಭಾಗ:

ಬಾವಟೆಗುಡ್ಡೆ ರಸ್ತೆ, ಮಂಗಳೂರು-೧.

ಫೋನ್ ನಂ. 4834

WHILE AT GUNTUR

STAY IN OUR

COMFORTABLE MODERN

HOTEL SANKAR

3rd & 4th Line Brodipet,

GUNTUR-2

Close to Railway Station

AIR CONDITIONED DINING HALL

Clean and Airy Rooms

HOT & COLD WATER RUNNING IN ALL ROOMS

RESTAURANT ATTACHED

PHONE: 712

ALWAYS INSIST ON.....

'ANCHOR' BRAND QUALITY SEAFOODS

CANNED MACKERELS, SARDINES, PRAWNS/SHRIMPS

: Packers :

Coronet Canning Company,

MALPE (SOUTH INDIA.)

Packers & exporters of Canned & Frozen Shrimp.

Manufacturers & exporters of Sardine Fish oil and Fishmeal.

Approved Suppliers to DEFENCE & MILITARY CANTEEN STORES, GOVT. OF INDIA.

Proprietors:

CORONET ICE PLANT & QUICK FREEZING PLANT, MALPE.

CORONET FISHMEAL & OIL COMPANY, MALPE.

Grams: 'CORONET' Malpe. Cables: 34 / 33 } Malpe.

ದೀಪಾವಳಿಯ ಶುಭಾಶಯಗಳು

ಮನೋಲ್ಲಾಸಕರ ಪ್ರವಾಸಗಳಿಗೆ
ಮದುವೆ ಇತ್ಯಾದಿ ಶುಭ ಕಾರ್ಯಗಳಿಗೆ
ಪ್ರಸಿದ್ಧ ಯಾತ್ರಾಸ್ಥಳ ಸಂದರ್ಶನಕ್ಕೆ

ಸುಸಜ್ಜಿತವಾದ ನಮ್ಮ ಬಸ್ಸುಗಳು

ಯಾವಾಗಲೂ ಸಿದ್ಧವಿರುತ್ತವೆ.

ವಿ. ಸೂ: ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸಗಳಿಗೆ ವಿಶೇಷ ರಿಯಾಯಿತಿ ಕೊಡಲಾಗುವುದು.

ವಿವರಗಳಿಗೆ ಬರೆಯಿರಿ:

ಭಾರತ್ ಮೋಟರ್ ಸರ್ವಿಸ್,

ಮೈದಾನ್ ಕ್ರಾಸ್ ರೋಡ್, ಮಂಗಳೂರು-1.

ಫೋನ್: 3446

ಬಯಲಾಟ, ದಶಾವತಾರ ಅಥವಾ ಯಕ್ಷಗಾನವೆಂದು ಜನ ಜನಿತವಾದ ಅಪೂರ್ವ ಜಾನಪದ ಕಲೆ ತುಳುನಾಡಿನ ಕೊಡುಗೆ. ದಕ್ಷಿಣ ಕನ್ನಡ ಜಿಲ್ಲೆ ಇದರ ಮೂಲಭೂಮಿ. ವಿವಿಧ ಕಲೆಗಳಲ್ಲಿ, ಶಿಲ್ಪಿವೊಂದನ್ನು ಬಿಟ್ಟು ಬಿಟ್ಟರೆ ಪ್ರಾಯಃ ಶ ಯಕ್ಷಗಾನಕ್ಕೆ ಸರಿಸಾಟಿಯಾದ ಮತ್ತು ಸರ್ವಾದರಣೀಯವಾದ ಕಲೆ ಬೇರೊಂದಿಲ್ಲ! ಯಾಕೆಂದರೆ ಯಕ್ಷಗಾನ ಬರೇ ಒಂದು ಕಲೆಯಲ್ಲ. ನೃತ್ಯ, ಸಂಗೀತ, ವೇಶ—ಭೂಷ, ತರ್ಕ-- ಮೊತಕಲೆಗಳ ಚಮತ್ಕಾರಿಕ ಕಲಾ ಸಂಗಮ. ಬಯಲಾಟ ಬರಹ ಬಲ್ಲವಂಗೆ ಮಾತ್ರ ಪ್ರಿಯವಲ್ಲ. ನಿರಕ್ಷರ ಕುಕ್ಷಿ ಬಾಲ ವೃದ್ಧರಿಗೆಲ್ಲ.

ತೋರಿಕೆಗೆ ಈ ಆಟ ಸಾಮಾನ್ಯನೆಂದು ಕಂಡು ಬಂದರೂ ಈ ಕಲಾ ಸಂಪ್ರದಾಯ ಗರ್ವ ಶ್ರೇಷ್ಠವಾದುದು. ಜನ ಸಾಮಾನ್ಯರ ಕಲಾಭಿರುಚಿಯನ್ನು ಕೆರಳಿಸಿ, ಜನ ಜಾಗ್ರತಿಯನ್ನು ಹುಟ್ಟಿಸಲು ಇದರ ಹೊರತು ಬೇರೆಂದು ಸರಳವೂ ಸುಲಭವೂ ಆದ ಕಲಾ ಸಾಧನ ಮಾರ್ಗವಿಲ್ಲ.

ಉಗಮ

ಅದೀಗ ಈ ಅನುಪಮವಾದ ಕಲೆ ಎಲ್ಲಿ ಹುಟ್ಟಿತು? ಹೇಗೆ ಜನಿಸಿತು? ಎಂತು ಬೆಳೆಯಿತು—ಮಂತಾಗಿ ಇದರ ಚಾರಿತ್ರ್ಯವನ್ನು ತಿಳಿಯಲು ಜನರು ಕಾತರಪಟ್ಟಿಲ್ಲ. ಆದರಲ್ಲೂ ಮಹತ್ತಾದ ಆಶ್ಚರ್ಯವಿಲ್ಲ! ಈ ಬಗ್ಗೆ ಪತ್ತಾರು—ವಿಕೆ ನೂರಾರು ನಿದರ್ಶನಗಳನ್ನು ಕೊಡಬಲ್ಲವಾದರೂ ನಿರ್ದಿಷ್ಟವಾದ ಒಂದು ಸಮಯ ಸೃಷ್ಟಿಯ ನಿಷ್ಕರ್ಷೆ ಇನ್ನು ಆಗಿಲ್ಲ. ನದ್ಯ ಆದರ ಆವಶ್ಯಕತೆಯೂ ಹೆಚ್ಚಿನ ಮಟ್ಟಿಗೆ ಇವಗೆ ಬೇಕಾಗಿಲ್ಲ.

ಮಾನವ ಒಂಟಿ ಜೀವಿಯಲ್ಲ ತಾನೆ? ಸಮೂಜ ಪ್ರಿಯನಾತ. ತನ್ನ ಬೇಸರವನ್ನು ಕಳೆಯಲು ಮೊತ್ತ ಮೊದಲು ಆತ ಒಬ್ಬನೇ ಹಾಡಿರಬಹುದು. ಆದರೆ ತನ್ನ ಹರ್ಷವನ್ನು ಪ್ರಕಟಿಸಲು ಆತ ಕುಣಿದಿರಲೇ ಬೇಕು. ತಾನು ಕುಣಿದುದು ಮಾತ್ರವಲ್ಲ, ತನ್ನ ಸಂಗಾತಿಯನ್ನೋ, ಸಹಕಾರಿಯನ್ನೋ ಹಿಡಿದು ಕುಣಿದಿರಬೇಕು. ಕುಣಿತ ಸಂಗೀತಗಳ ನಡುವೆ ಮೂತುಗಳನ್ನು ಪೋಣಿಸಿರಬೇಕು. ರಸವತ್ತಾದ ವಸ್ತು ವಿಷಯಗಳಿಂದ ಇದು ಪ್ರಾರಂಭವಾಗಿರಬೇಕು. ಈ ತೆರನಾಗಿ ಯಕ್ಷಗಾನ ಅಥವಾ ಬಯಲಾಟದ ಮೂಲವನ್ನು ಹುಡುಕಾಡ ತೊಡಗಿದರೆ ಇದು ಏನ್ನೆ ನೊನ್ನೆಯದಲ್ಲ. ಶತಮಾನ ಹಿಂದಿನದು. ಅನಾದಿಯದು. ಈ ಪರಂಪರೆ ಇದು ವರೆಗೆ ಉಳಿದು ಬಂದುದು ನಮ್ಮೆಲ್ಲರ ಭಾಗ್ಯ. ಇದನ್ನು ಅನೂಚಾನವಾಗಿ ಉಳಿಸುವುದು ನಮ್ಮ ಕರ್ತವ್ಯ. ಪುಣ್ಯ ಭಾಗ.

ವಿಶೇಷತೆ

ಜನ ಜೀವನದ ಧರ್ಮ, ಕರ್ಮ, ವಿಧಾನ, ವಿಧಿ ಕ್ರಮಗಳನ್ನು ಪ್ರಚುರಗೊಳಿಸಲು ಯಕ್ಷಗಾನ ವಿಶಿಷ್ಟ ಸಾಧನ. ಇಂದು ಜನ ಸಾಮಾನ್ಯರಲ್ಲಾ ರಾಮಾಯಣ ಮಹಾಭಾರತಗಳ ಸತ್ವ— ಸಾರಾಂಶಗಳು ಉಳಿದಿರಬೇಕಾದರೆ ಯಕ್ಷಗಾನದ ಪಾತ್ರ ಕೆಲಸ ಸಲ್ಲಬೇಕು. ಬಯಲಾಟಕ್ಕೆ ಈ ಕೀರ್ತಿ ಸಲ್ಲಬೇಕು. ನಮ್ಮವರ ಪೀಳಿಗೆಗೆ ಬೆಳಕು ಚೆಲ್ಲುಗಳನ್ನು, ಧಾರ್ಮಿಕ ಜಿಜ್ಞಾಸೆಯಲ್ಲಿ ಬಂಧಿಸಿ, ಬೌದ್ಧಿಕ ವಿಕಸನಕ್ಕೆ ಸಾಮಾನ್ಯ

ಶ್ರೀ ಕೆ. ಜಿ. ಹೆಗಡೆ

ಕರ್ನಾಟಕಕ್ಕೆ ತುಳುನಾಡಿನ ಕೊಡುಗೆ—

ದಕ್ಷಿಣ ಕನ್ನಡದ ದಶಾವತಾರ

ದಶಾವತಾರ ಒಂದು ವಿಶಿಷ್ಟ ಪ್ರದೇಶದ ಕಲೆಯಾಗಿ ಹುಟ್ಟಿ ಇಂದು ಇಡಿಯ ಕರ್ನಾಟಕದಲ್ಲಿ ಪಸರಿಸಿದೆ. ಇದನ್ನು ಅಂತಾರಾಷ್ಟ್ರೀಯ ಪಂಕ್ತಿಗೆ ಒಯ್ಯುವುದರಿಂದ ದೇಶಕ್ಕೆ ಗೌರವ ಪ್ರಾಪ್ತವಾಗುತ್ತದೆ; ಅದಕ್ಕೂ ಉಚಿತ ಸ್ಥಾನ ದೊರೆತಂತಾಗುತ್ತದೆ ಬಂಡವಳ ವಿನಿಯೋಗಿಸಿ ಬಲ್ಲವರು ಇದಕ್ಕಾಗಿ ಮುಂದೆ ಬರಬೇಕು ಎಂದು ಕರೆ ನೀಡುತ್ತಾರೆ ಶ್ರೀ ಹೆಗಡೆಯವರು.

ತಿಕ ಪುನರುತ್ಥಾನಕ್ಕೆ ದಶಾವತಾರ ತುಂಬಾ ಸಹಾಯ ಮಾಡಿದೆ. ಈ ಸೇವೆ ಅಪಾರವಾದುದು. ಭಾರತೀಯ ಧಾರ್ಮಿಕ ಸಂಪ್ರದಾಯವನ್ನು, ರಾಮಾಯಣ—ಭಾರತಗಳ ಕಥಾಭಾಗಗಳನ್ನು ಎಲ್ಲರೂ ಮರೆಯದಂತೆ ಮಾಡಿದ ಉಪಕೃತಿಕೆ ಬಯಲಾಟಕ್ಕೆ ಸಲ್ಲಬೇಕು.

ವೈಶಿಷ್ಟ್ಯ

ಯಕ್ಷಗಾನದ ಪ್ರತಿಯೊಂದು ಅಂಗವೂ ತನ್ನದೇ ಆದ ಒಂದು ವೈಶಿಷ್ಟ್ಯದಿಂದ ಕೂಡಿದೆ. ಅದರ ಸಂಗೀತ, ಇಲ್ಲವೆ ಹಾಡುಗಾರಿಕೆ ನಾಟಕದ ಸಂಗೀತದಂತಲ್ಲ. ಮೂತುಗಾರಿಕೆಯೂ ಸರ್ವ ಸಾಧಾರಣವಾದುದಲ್ಲ ವಾಕ್ಚಾತುರ್ಯದಿಂದ ಕೂಡಿದುದಾಗಿದೆ. ವೇಶ ಭೂಷಣಗಳಂತೂ ಕಣ್ಮನಗಳನ್ನು ತಣಿಸುವಂತಹುವೇ, ಸುಲಭದಲ್ಲೇ ತಿಳಿಯ ಹೇಳುವುದಾದರೆ ಬಯಲಾಟ ಬ್ರಹ್ಮನಿಗೂ, ಅಂದರೆ ದೇವರಿಗೂ ಪ್ರಿಯವಾದುದು ಎಂದೇ ಇದಕ್ಕೆ ಧರ್ಮದೇಗುಲಗಳ ಆಸರೆ ಮತ್ತು ಪ್ರೋತ್ಸಾಹ ಸಿಕ್ಕಿರಬೇಕು. ನಗುವ ಮನೋಹರವಾದ ನೃತ್ಯ, ಕರ್ಣಾನಂದಕರವಾದ ಹಾಡುಗಾರಿಕೆ, ಕಣ್ಮನಗಳನ್ನು ತಣಿಸುವ, ರಣಿಸುವ ವೇಶಾಡಂಭರ, ಎಲ್ಲಾ ದೃಷ್ಟಿಯಿಂದಲೂ ಉತ್ಕೃಷ್ಟವಾದ ಕಲೆ ಯಕ್ಷಗಾನ. ಕಣ್ಣಿಗೆ ಹಬ್ಬ, ಕಿವಿಗೆ ಆನಂದ, ಮನಸ್ಸಿಗೆ ರಂಜನೆ-ಹೀಗೆ ಬಹುಮುಖ ಶ್ರಸ್ತಾರದ ಕಲಾ ಸಾಧನ ಯಕ್ಷಗಾನ.

ಪ್ರಗತಿ

ಈ ಬಯಲಾಟ ಅಥವಾ ಯಕ್ಷಗಾನ ಮೊತ್ತ ಮೊದಲು ದಕ್ಷಿಣ ಕನ್ನಡದಲ್ಲಿ ಮಾತ್ರ ಬಳಕೆಯಲ್ಲಿತ್ತು. ಕ್ರಮೇಣ ಇದು ಉತ್ತರ ಕನ್ನಡ ಜಿಲ್ಲೆಗೂ ಪಸರಿತು. ದಶಾವತಾರ ದರ್ಶನ—ಶ್ರವಣಗಳು ಕಾಲ ಕ್ರಮೇಣ ಘಟ್ಟದ ಮೇಲಣ ಜಿಲ್ಲೆಗಳಲ್ಲೂ ಪ್ರಾರಂಭವಾದುವು. ಅದೀಗ ಯಕ್ಷ

With Best Compliments From:

M.B.T.Co.(East)

BIGGEST CARGO MOVERS

H.O. MADRAS-1

BRANCHES: ALL OVER INDIA.

"THANK-YOU

ಗಾನ ಬರೇ ಕರ್ನಾಟಕದಲ್ಲಿ ಮಾತ್ರವಲ್ಲ; ಕನ್ನಡಿಗರಿದ್ದ ದೇಶದೆಲ್ಲೆಡೆಗಳಲ್ಲಿ, ಒಂದಲ್ಲ ಒಂದು ದಿನ ಯಾವುದಾದರೊಂದು ಕೂಟ, ಪಂಗಡ ಅಥವಾ ಮಂಡಲದಿಂದ ಕಾರ್ಯಕ್ರಮ ಜರಗದಿಲ್ಲ. ಹೀಗೆ ಇದು ಬರೇ ಕರ್ನಾಟಕದಲ್ಲಿ ಮಾತ್ರವಲ್ಲ, ಸನುಗ್ರ ಭಾರತದಲ್ಲೇ. ಒಂದು ಉತ್ಕೃಷ್ಟವಾದ ಜಾನಪದ ಕಲೆಯೆಂದು ಹೆಸರು ಹೊಂದಿದೆ. ಹಿಂದೀ ಸಿನೆಮಾ ಮತ್ತು ದೇಶೀ ನಾಟಕಗಳು ಭಾರತಾಧ್ಯಂತ ಜನಪ್ರಿಯವಾಗಿರುವಂತೆ ಯಕ್ಷಗಾನವನ್ನು ವಿವಿಧ ಭಾಷೆಗಳಲ್ಲಿ ಆಳವಡಿಸಿಕೊಂಡಿಕೆ ಇದೊಂದು ಅಸಾಧಾರಣ ಜನಪ್ರಿಯತೆಯನ್ನು ಗಳಿಸುವುದರಲ್ಲಿ ಸಂಶಯವಿಲ್ಲ. ಪ್ರಗತಿ ಪಥದಲ್ಲಿ ಬಯಲಾಟವನ್ನು ವಿಶೇಷಗಳಲ್ಲಿ ಪ್ರಚಾರಗೊಳಿಸಲೂ ಸಾಧ್ಯವಿದೆ.

ಪ್ರಸಿದ್ಧಿ

ಕಲಾ ವಾಸನೆ ಸಂಸ್ಕೃತಿಯ ಒಂದು ಅಂಗ. ಜನ ಸಾಮಾನ್ಯ ಎಲ್ಲೇ ಇರಲಿ, ಅಂದರೆ ಹುಟ್ಟಿರಿನಿಂದ ಎಲ್ಲೇ ದೂರದಲ್ಲಿರಲಿ, ಊರುದೇ ಭಾಗದಲ್ಲಿರಲಿ. ಜೀಕಾದರೆ ಎಂತೇ ಇರಲಿ, ತನ್ನ ತಾಯಿ ನುಡಿ, ತಾಯಿ ಸಂಸ್ಕೃತಿ ಮತ್ತು ಕಲಾ ಪರಂಪರೆಯನ್ನು ಮರೆಯಲಾರ; ಮರೆಯಲಾಗದು. ಹೀಗಾಗಿ ಕನ್ನಡಿಗನೊಬ್ಬ ಮುಂಬಯಿಯಲ್ಲೇ ಇರಲಿ, ದೆಹಲಿ ಕಲ್ಕತ್ತಗಳೇ ಆದಲಿ ಒಲ್ಲೆಂದು ಒಲ್ಲೆನಂದು ಕನ್ನಡ ಸಂಘವನ್ನೋ, ಕರ್ನಾಟಕ ಮಂಡಲವನ್ನೋ ರಚಿಸಿ ಹನ್ನಿಂದಾದಷ್ಟು ಕನ್ನಡತನವನ್ನು ಉಳಿಸಲು ಬೆಳೆಸಲು ಯತ್ನಿಸುವನು. ಈ ಹಿನ್ನೆಲೆಯಲ್ಲಿ ಕನ್ನಡ ಕಲೆ ಯಕ್ಷಗಾನಕ್ಕೆ ಪ್ರೋತ್ಸಾಹ ಸಿಕ್ಕೇ ಸಿಗುತ್ತದೆ. ಆದರೆ ವ್ಯಾವಹಾರಿಕ ದೃಷ್ಟಿಯುಳ್ಳ ಯಕ್ಷಗಾನ ಕೂಟಗಳನ್ನು ದೇಶದಾದ್ಯಂತ ನಾಗಿಸುವುದು ಸುಲಭವಲ್ಲ.

ಇದಕ್ಕೆ ಪ್ರಸಿದ್ಧಿಯೂಗಬೇಕು. ಪ್ರಸಿದ್ಧಿಗೆ ಪ್ರಚಾರಬೇಕು. ಪ್ರಚಾರಕ್ಕೆ ಪರಿಪೂರ್ಣವಾದ ಕಲಾಕ್ಷೇತ್ರವಿರಬೇಕು. ಪರಿಪೂರ್ಣ ಕಲಾಕ್ಷೇತ್ರಕ್ಕೆ ವಿಜಾರವಂತ ಮತ್ತು ವಿಧ್ಯಾವಂತ ಪಾತ್ರಧಾರಿ ಮತ್ತು ಕುಶಲ ವ್ಯವಹಾರಿ ಕಲಾವಂತರ ಕೂಟದ ನೆರವು ಇರಬೇಕು. ಕಲೆ ಬರೇ ಕಲೆಗಾಗಿ ಎಂಬ ಮಂಳು ಧಾವನೆ ತೊಲಗಿ ಕಲೆ ಜನರಿಗಾಗಿ, ಮನೋರಂಜನೆಗಾಗಿ, ಮಾನವ ಕಲ್ಯಾಣಕ್ಕಾಗಿ, ಜೀವನ ವಿಕಸನಕ್ಕಾಗಿ ಎಂಬ ಸದ್ಭಾವನೆ ಜನರಲ್ಲಿ ಮೂಡಿ ಬರಬೇಕು. ಆಗ ದಶಾವತಾರ ದಶ ದಿಕ್ಕುಗಳಲ್ಲಿ ಪ್ರಚಾರವಾಗುವುದು. ಕಲೆಯ ಪುನರುತ್ಥಾನವಾಗುವುದು.

ಆರ್ಥಿಕ ವಿಶೇಷಗಳಲ್ಲಿ ಪ್ರತಿಯೊಂದು ಕಲೆಯೂ ಒಂದು ಜೀವನ ಮಾರ್ಗವೆಂಬೀ ರೀತಿಯಲ್ಲಿ ಬೆಳೆಸುವಂತೆ, ಯಕ್ಷಗಾನವನ್ನು ಒಂದು ಉದ್ಯಮ ರೂಪವಾಗಿ ಕೈಗೊಂಡು ಕಲಾಕ್ಷೇತ್ರವನ್ನು ಕಟ್ಟುವ ಧೀಮಂತರು ಮುಂದೆ ಬರಬೇಕು. ಇದೂ ಒಂದು ಉದ್ಯಮ. ಇದನ್ನು ಸಿನಿಮಾ ಮಾದರಿಯಲ್ಲಿ ಬೃಹತ್ ಪ್ರಮಾಣದಲ್ಲಿ ಹುಲುಸಾಗಿ ಬೆಳೆಸಿ, ಅಸಿ ಕಟ್ಟಲು ಸಾಧ್ಯವಿದೆಯೆಂದು ಕನಸು ಕಾಣುವ, ದೂರ ದೃಷ್ಟಿಯುಳ್ಳ, ಕಲಾ ಪ್ರಿಯ ಬಂಧುವಳ ಗಾರರು ಮುಂದೆ ಬರಬೇಕು.

ಸಮಾಪ್ತವಲ್ಲ "ಇಪಲಿ" ಮಳ್ಳ "ಜೋ

(ಪದಿನೆಂಟನೇ ಪುಟ ನೋಡಿರಿ)

ಅಂಧಕಾರ, ಅಂ

++ ++ ಶ್ರೀ ಶಿವಶಂಕರ ++ ++

ಬಿಡುವಿಲ್ಲದ ದಿನಗಳು ಹಿಂದಿನ ವಿಷಯ. ಖಾ ಸಹಾಕಾರ ಅಚ್ಚರನು ತನ್ನ ಸ್ನೇಹಿತರಿಗೆ ಪಾರ್ಟಿ ಕೊಡಲಿಕ್ಕಾಗಿ ತನ್ನ ಮಹಲಿನಲ್ಲಿ ಒಂದು ಘಂಟೆಯನ್ನು ಕೂಗಾಡಿಸಿದ್ದನು. ಯಾರಿಗಾದರೂ ನ್ಯಾಯ ದೊರಕಬೇಕಾದಲ್ಲಿ ಅವನು ಬಂದು ಆ ಘಂಟೆಯನ್ನು ಬಾರಿಸಬೇಕು.

ಅದೊಂದು ಜ್ಯೇಷ್ಠ ಮಾಸದ ಬಿಸಿಲಿನ ದಿನಗಳು. ಅಚ್ಚರನು ತನ್ನ ರಂಗಮಹಲಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದನು. ಇದ್ದಕ್ಕಿದ್ದಂತೆ ಘಂಟೆ ಜೋರಾಗಿ ಶಬ್ದ ಕೇಳಿ ಬಂತು. ಒಡನೆ ಅದನ್ನು ಕೇಳಿದ ಅಚ್ಚರನು, ಅದು ಯಾರೆಂದು ನೋಡಿ ಬರಲು ಪೌಕರನೊಬ್ಬನನ್ನು ಕಳುಹಿಸಿದನು. ಕೆಲಸದವನು ಬಂದು ನೋಡಿದಾಗ ಅಲ್ಲಿ ಮನುಷ್ಯರ್ಯಾರೂ ಇರಲಿಲ್ಲ. ಅಲ್ಲಿ ಒಂದು ಎತ್ತು ಬಾಯಲ್ಲಿ ಹಗ್ಗವನ್ನು ಕಚ್ಚಿಕೊಂಡು ಎಳೆಯುತ್ತಿತ್ತು. ನೌಕರನು ಅದನ್ನು ಜೊಡಿದೋಡಿಸಿದನು. ಅದನ್ನು ಹಾಗೆಯೇ ಅಚ್ಚರನಿಗೆ ತಿಳಿಸಿದನು.

ಸ್ವಲ್ಪ ಸಮಯ ಕಳೆದ ಮೇಲೆ ಪುನಃ ಅದೇ ರೀತಿ ಶಬ್ದ ಕೇಳಿ ಬಂತು. ಅದೇ ಎತ್ತು ಬಂದು ಹಗ್ಗವನ್ನು ಎಳೆಯುತ್ತಿತ್ತು. ನೌಕರನು ಅದನ್ನು ಜೆನ್ನಾಗಿ ಜೊಡೆದು: ಬಹಳ ದೂರ ಓಡಿಸಿದನು.

ಆದರೆ ಸ್ವಲ್ಪ ಸಮಯದ ನಂತರ ಪುನಃ ಘಂಟಾನಾದ ಕೇಳಬಂತು. ಘಂಟೆ ಬಾರಿಸಿದವರು ಅದ್ಯಾರಿದ್ದರೂ ಸರಿ. ಅವರನ್ನು ಹಿಡಿದು ಕೊಂಡು ಕರಲು ಅಚ್ಚರನು ಆಜ್ಞೆಕೊಟ್ಟನು. ಆಜ್ಞಾಪಾಲಕ ನೌಕರನು ಹೋರಿಯ ಕೊಂಬುಗಳಿಗೆ ಹಗ್ಗ ಕಟ್ಟಿ ಅದನ್ನು ರಾಜದರ್ಬಾರಿಗೆ ತಂದನು. ಅಲ್ಲಿದ್ದವರ ಬಳಿ ಅಚ್ಚರನು ಆ ಹೋರಿ ಏ ದೇನು ಹೇಳುತ್ತದೆಂದುದು ಗೊತ್ತೇನೆಂದು ಕೇಳಿದನು. ಅಲ್ಲಿದ್ದವರಿಗೂ ಬಸವನ ಭಾಷೆ ಬರುತ್ತಿರಲಿಲ್ಲ. ಆಗ ಬೀರಬಲನು ಅಲ್ಲಿರಲಿಲ್ಲ. ಒಡನೆ ಅವನನ್ನು ಕರೆಯಲು ನೌಕರನನ್ನು ಕಳುಹಿಸಲಾಯಿತು. ಬೀರಬಲನು ಬಂದನು. ಅವನು ಬಸವನ ಬಳಿಗೆ ಹೋಗಿ ಪ್ರೀತಿಯಿಂದ ಆದರ ಮೈ ತಿ ಕ್ಕಿದನು. ಹೀಗೆ ಸ್ವಲ್ಪ ಹೊತ್ತು ಹೋದ ಮೇಲೆ ಅವನು ಅಚ್ಚರನ ಸಮೀಪಕ್ಕೆ ಬಂದು ಹೇಳಿದನ : "ಜಹಾಂಪನಾಹ ಚಕ್ರವರ್ತಿಯೇ ಈ ಹೋರಿ ಈಗ ಮುದಿಯಾಗಿದೆ. ಹಿಂದೆ ಯಾವನದ ಕಾಲದಲ್ಲಿ ಬಹಳ ಕಷ್ಟಪಟ್ಟು ಅದರ ಒಡೆಯನು ಕೊಟ್ಟ ಎಲ್ಲಾ ಕೆಲಸಗಳನ್ನೂ ಮಾಡುತ್ತಿತ್ತು. ಆಗ ಅದರ ಮಾಲಿಕನು ಅದಕ್ಕೆ ಒಳ್ಳೆಯ ರೀತಿಯಲ್ಲಿ ಆಹಾರ ಕೊಡುತ್ತಿದ್ದನು. ಚೆನ್ನಾಗಿ ನೋಡಿ ಕೊಳ್ಳುತ್ತಿದ್ದನು. ಈಗ ಅದು ಮುದಿಯೂ ಆಗಿದೆ, ಶಕ್ತಿಯೂ ಇದೆ. ಅದರಿಂದ ಒಡೆಯ ಧನವನ್ನು ತೃಪ್ತಿ ಪಡಿಸಲು ಅದಕ್ಕೆ ಅಸಾಧ್ಯವಾಗಿರುತ್ತದೆ. ಆಕ್ಷಪ್ತ ಒಡೆಯನು ಅದನ್ನು ಹೊರಗಟ್ಟಬಿಟ್ಟಿದ್ದಾನೆ."

ಅದನ್ನು ಲಾಲಿಸಿದ ಅಚ್ಚರನು ಎತ್ತಿನ ಮಾಲಿಕನನ್ನು ಕರೆಯಿಸಿದನು. ಹೋರಿಯ ಒಡೆಯನು ಒಬ್ಬ ಸಾಹುಕಾರನು. ಅವನ. ಬಂಸೊಡನೆ ಅಚ್ಚರನು ಕೇಳಿದನು-

"ಇದು ನಿನ್ನ ಎತ್ತೇನು?'

'ಹೌದು, ಮಹಾರಾಜಾ,' ಸಾಹುಕಾರನು ಉತ್ತರ ಕೊಟ್ಟನು.

"ಇದನ್ನು ನೀನೇತಕ್ಕೆ ಹೊರಗೋಡಿಸಿರುವದು?"

"ಅದೇನೂ ಕೆಲಸಕ್ಕೆ ಉಪಯೋಗವಾಗುವದಿಲ್ಲ, ಮಹಾ ಸ್ವಾಮಿ."

"ಹಾಗಾದರೆ, ನಿನ್ನ ಮನೆಯಲ್ಲಿ ಯಾರಾದರೂ ಮುದುಕರಾದಾಗ, ಅವರಿಂದ ಕೆಲಸ ಮಾಡಲು ಅಸಾಧ್ಯವಾಹಾಗೆ, ಅವರನ್ನು ನೀನು ಮನೆಯಿಂದ ಹೊರಗಟ್ಟಿ ಬಿಡುವೆ ಏನು?"

"ಇಲ್ಲ, ಹುಜೂರ್!"

"ಹಾಗಾದಲ್ಲಿ ಮತ್ತೆ ಈ ಹೋರಿಯನ್ನೇತಕ್ಕೆ ಓಡಿಸಿರುವದು? ಅದು ತನ್ನ ಯೌವ್ವನ ಕಾಲದಲ್ಲಿ ಹಸಿವು—ದಾಹವನ್ನು ಸಹಿಸಿಕೊಂಡೂ ಹೇಗೆ ದುಡಿದಿತ್ತು, ಅಲ್ಲವೇನು?"

ಸಾಹುಕಾರನು ಏನೂ ಹೇಳಲಿಲ್ಲ.

"ನೋಡು, ಈ ಹೋರಿಯನ್ನು ಸರಕಾರೀ ಪಿಂಜರಾಪೋಲಿಗೆ ಕಳುಹಿಸುತ್ತೇವೆ. ಅದರ ಖರ್ಚಿಗಾಗಿ ನೀನು ಐನ್ನೂರು ರೂಪ್ಯಾ ದಂಡ ಕೊಡಬೇಕಾಗುತ್ತದೆ."

"ಮಹಾ ಪ್ರಭೋ! ಐನ್ನೂರು ರೂಪ್ಯಾ ಬಹಳ ದೊಡ್ಡ ಮೊತ್ತ ಇದೆ. ಈ ಬಸವನಾದರೋ ಬಹಳ ದಿನ ಬದುಕುವ ಹಾಗೆ ಕಂಡು ಬರುವುದಿಲ್ಲ. ಅದನ್ನು ತಾವು ಆಜ್ಞೆ ಕೊಟ್ಟಲ್ಲಿ ನಾನೇ ಕೊಂಡು ಹೋಗಿ ನೋಡಿಕೊಳ್ಳುತ್ತೇನೆಂದು" ಸಾಹುಕಾರನು ಹೇಳಿದನು.

"ಇಲ್ಲ, ಅದು ಸಾಧ್ಯ ಇಲ್ಲ. ನೀನು ಏನೂರು ರೂಪ್ಯಾ ದಂಡ ಕೊಡಲೇಬೇಕು. ಇಲ್ಲವಾದಲ್ಲಿ ಆರು ತಿಂಗಳ ಕಾಲ ಕಾರಾಗೃಹವಾಸವನ್ನು ಅನುಭವಿಸಬೇಕಾಗುತ್ತದೆ."

ಸಾಹುಕಾರನು ಏನ್ನೂರು ರೂಪ್ಯಾ ದಂಡತೆತ್ತನು.

ಇದು ಅಕ್ಬರ್ ದಿ ಗ್ರೇಟ್‌ನ ವಿಷಯದಲ್ಲಿ ಹೇಳಲ್ಪಡುವ ಕಥೆ ಇದೆ. ಅಕ್ಬರನ ಕಾಲದಲ್ಲಿ ಘಂಟೆ ಇತ್ತೋ, ನಿಜವಾಗಿ ಈ ಘಟನೆ ನಡೆದಿತ್ತೋ ಎನ್ನುವಂತಹ ಪ್ರಶ್ನೆಗಳು ಸ್ವಾಭಾವಿಕವಾಗಿ ಯಾರಾದರೂ ಕೇಳಬಹುದು; ಬೀರಬಲನ ವಿಷಯದಲ್ಲಿ ಇಂತಹ ಹಲವಾರು ಕಥೆಗಳನ್ನು ಹೇಳಲಾಗುತ್ತದೆ. ಇವು ನೈಜ ಸಂಭವಗಳಲ್ಲ. ಕಾಲ್ಪನಿಕ ಹಾಗೂ ವಿನೋದದ ಕಥೆಗಳಿವೆ. ಅಕ್ಬರನ ವಿಷಯದಲ್ಲಿ ಈ ರೀತಿಯ ಕಥೆ ಕಟ್ಟಲ್ಪಡಬೇಕಾಗಿದ್ದಲ್ಲಿ ಹಿಂದೆ ಅಂತಹದ್ದೇ ಒಂದು ನೈಜ ಘಟನೆ ನಡೆದಿರಲೇ ಬೇಕು. ಅಕ್ಬರನ ಹೊಗಳು ಭಟ್ಟನು ಆದನ್ನು ತನ್ನ ಏಕಾಂಡಿತ್ಯಕ್ಕನುಸಾರವಾಗಿ ಬದಲಾಯಿಸಿ ಅಕ್ಬರನನ್ನು ಒಬ್ಬ ದೊಡ್ಡ ನ್ಯಾಯದಾನಿಯೆನ್ನುವ ರೀತಿಯಲ್ಲಿ ವರ್ಣಿಸಿರುವ ಇಂತಹ ಹೊಗಳುಭಟ್ಟರು ಅಕ್ಬರನ ಆಸ್ಥಾನದಲ್ಲಿ ಬಹಳ ಮಂದಿ ಇದ್ದರು. ಅವನ ಮುನಿಸ್ಯತೆ ಗೈದೇ ಜೀವನ ನಡೆಸಿ ಕೊಂಡಿದ್ದವರು ನಂಬ್ಕೆಗೇನೂ ಕೊರತೆ ಇರಲಿಲ್ಲ. ಇಂತಹ ಹೊಗಳುಭಟ್ಟರು ಅಕ್ಬರನ ಆಸ್ಥಾನದಲ್ಲಿ ಮಾತ್ರವಲ್ಲ ಹೆಚ್ಚಿನ ರಾಜರ ದರ್ಬಾರುಗಳಲ್ಲಿರುತ್ತಿದ್ದರು. ಘಂಟೆ ಕಟ್ಟಿದ್ದ ನ್ಯಾಯ ದಾನವೂ ಇರುವ ನೈಜ ಘಟನೆ ಎಲ್ಲಾದರೂ ಇದೆಯೇ?

ತಮಿಳ್ನಾಡಿನ ಪ್ರಸಿದ್ಧಿಗೆ ಚೋಳರ ಆಳ್ವಿಕೆಯ ಕಾರಣ ಇದೆ. ಬೃಹದೀಶ್ವರ ದೇವಸ್ಥಾನವು ಇದಕ್ಕೊಂದು ಉತ್ತಮ ನಿದರ್ಶನ. ಇವರಲ್ಲಿ ಮನು ನೀತಿ ಚೋಳರಾಜನು ಪ್ರಸಿದ್ಧ ರಾಜರಲ್ಲಿ ಒಬ್ಬನು. ಇವನು ಮಹಾವೀರನಿದ್ದಂತೆ ಮಹಾದೈವಭಕ್ತನಾಗಿದ್ದನು. ಆದುದರಿಂದ ನ್ಯಾಯಪಕ್ಷಪಾತಿಯೂ ಆಗಿದ್ದನು. ಆದುದರಿಂದಲೇ ಅವನನ್ನು ಮನುನೀತಿ ಚೋಳನೆಂದೇ ಚರಿತ್ರೆ ಕರೆಯುತ್ತಿದೆ. ಅವನಿಗೊಬ್ಬನೇ ಒಬ್ಬ ಮಗನಿದ್ದನು. ಮುದ್ದಿನ ರಾಜಕುಮಾರನು ಒಂದು ದಿನ ರಥದ ಮೇಲೆ ಕೂತು ಕೊಂಡು ವಿಹರಿಸುತ್ತಿದ್ದನು. ಆಗ ಆಕಸ್ಮಾತ್ ಒಂದು ದನದ ಕರು ರಥದಡಿಯಲ್ಲಿ ಸಿಕ್ಕಿ ಬಿದ್ದು, ಸತ್ತು ಹೋಯಿತು. ಆನಂದದಲ್ಲಿ ಮೈಮರೆತಿದ್ದ ರಾಜಕುಮಾರನಿಗೆ ಆ ಸಮಯದಲ್ಲಿ ಮಾಡಿದ ಪಾತಕ ಕೃತ್ಯವನ್ನು ತಾನು ನಡೆಸಿರುವೆನೆಂಬುದು ಗೊತ್ತಾಗಲಿಲ್ಲ. ಕರುವನ್ನು ಕಳೆದುಕೊಂಡ ದನ ಅರಮನೆಗೆ ಬಂತು. ಈ ರಾಜನ ಅರಮನೆಯಲ್ಲಿ ಒಂದು ಘಂಟೆ ತೂಗಾಡಿಸಿದ್ದರು. ನ್ಯಾಯ ಅಪೇಕ್ಷಿಗಳು ಆ ಘಂಟೆಸುನ್ನು ಬಾರಿಸುತ್ತಿದ್ದರು. ಒಡನೆ ಪ್ರಧಾನರೂ, ರಾಜನೂ ಬರುತ್ತಿದ್ದರು. ನ್ಯಾಯ ವಿಚಾರಣೆ ನಡೆಯುತ್ತಿತ್ತು. ಅರಮನೆಗೆ ಬಂದ ಹಸುವು ಇದೇ ಘಂಟೆಯ ಹಗ್ಗವನ್ನು ಎಳೆಯಿತು. ಒಡನೆ ರಾಜ ದರ್ಬಾರು ಕೂಡಿತು. ಕ್ಷಣ ಹೊತ್ತಿನಲ್ಲಿ ರಾಜಕುಮಾರನ ರಥದಡಿಗೆ ಕರು ಸಿಕ್ಕಿ ಬಿದ್ದಿದ್ದ ಸಮಾಚಾರವು ಗೊತ್ತಾಯಿತು. ನ್ಯಾಯ ಪಕ್ಷಪಾತರಾಜನು ಯೋಚಿಸಿದನು. ಮತ್ತು ತನ್ನ ಮಗನಿಗೆ ಶಿಕ್ಷೆ ಕೊಟ್ಟನು- ಆ ಕರುವಿನ ಸ್ಥಾಲಿ ಅದಂತಾ. ತೇರು ಹೋಗಿತ್ತೋ ಅದೇ ರೀತಿ ರಾಜ ಕುಮಾರನ ಮೇಲೂ ರಥವನ್ನೋಡಿಸುವಂತೆ ಮಾಡಿಸಿದನು. ಆ ಮೂಲಕ ಸ್ವತಃ ಮನು ನೀತಿ ಚೋಳನೆ ರಥವನ್ನೋಡಿಸಿದನು. ಅವನ ನ್ಯಾಯಪರತೆಗೆ ಮೆಚ್ಚಿದ ದೇವರು ಕರುವನ್ನೂ, ಅವನ ಮಗನನ್ನೂ ಪುನಃ ಬದುಕಿಸಿದರೆಂದೂ ಹೇಳಲಾಗುತ್ತದೆ.

ಇಲ್ಲಿ ನಮ್ಮ ಗಮನಕ್ಕೆ ಬರುವ ಮೂರು ವಿಷಯಗಳಿವೆ. ದೀಪಾವಳಿಯು ಸಮಯದಲ್ಲಂತೂ ನಮ್ಮ ಗಮನಕ್ಕೆ ಬರಲಾರವು. ದೀಪಾವಳಿ ಹಬ್ಬವಾದರೋ ಅನ್ಯಾಯದ ಅಂತ್ಯವಾಗಿ, ನ್ಯಾಯದ ಸ್ಥಾಪನೆಯ ಹಾರಿಸಿದ ಸಂಕೇತವಾಗಿದೆ. ವಾಮನ ಮಹರ್ಷಿಯು ಬಲಿಯು ದ್ವಾರಪಾಲಕನಾಗಬೇಕಾಯಿತು. ಮನು ನೀತಿ ಚೋಳನ ನ್ಯಾಯ ನಿಷ್ಠುರತೆಯೂ ಮಗನ ಮೇಲೆ

ಭಾರತೀಯರು ನಾವು - ಮಕ್ಕಳೀ ಮನೆಗೆ

ರ

ಕಡಲ ತಡಿ ತೆಂಕಗಡಿಯಡಿಗಳಂ ತೊಳೆಯುತಿರೆ
ಮುಡಿಗೆ ಮಲ್ಲಿಗೆಯ ಮುಡಿಸಿಹನು ಹಿಮವಂತ
ಉಡಿಗೆ ಜೊಡಿಗೆಗಳೇನು ಬೇರೆ ಬೇಕಾಗಿಲ್ಲ
ಒಡಲ ತುಂಬಿಹನು ಸಿರಿಯಿಂದ ಭಗವಂತ.

ತೆರೆಗೈಗಳಂದಲಾತರ್ವದಿಸಿ ಜನರ ಶಾಂ
ಮೆರೆಯುತಿಹ ವೆಂಗರೆಯುತಿಹ ಸಿರಿರಾಜ ಸಿಂಧು
ಹರಿಯುತಿಹ ನೆಲನ ಪಾವನಗೊಳಿಸಿ ಕಡಲೊಡನೆ
ಬೆರೆಯುತಿಹ ಪುಣ್ಯ ವಾರಿಯು ಗಂಗೆ ಸಿಂಧು.

ತೆಂಕ ಕಡಲಂ ನೋಳ್ಪ ಬೆಡಗಿಂದನಿಂದಿಹುದು
ನಡುವೊಡಲಿ ಗೊಡವೆಯೆನಿ ವಿಂಧ್ಯಾದ್ರಿ ಶಿಖರ
ಮೂಡು ಪಡು ದೆಸೆಗಳಂ ಬೆಸೆಯುವೊಗೆಯೊಳಿದೋ
ನೀಡಿಹವು ಪೂರ್ವ ಪಶ್ಚಿಮ ಶಿಖರ ನಿಕರ

ಹಲವು ನದಿಗಳು ಹಲವು ಬಯಲುಗಳು ಬೆಟ್ಟಗಳು
ಹಲವು ಕಾನನಗಳೊಂದಾಗಿರ್ಪುವಿಂತು
ಹಲವೊಂದು ಗೂಡು ತೀ ನೆಲವಾಗ್ಮು ನವ ಗೆಲ್ಲ
ನೆಲೆಬೀಯುತ್ತು ಎನುವ ಸತ್ಯವ ಪೊರೆವುದೆಂತು?

ಹಲವು ಜಾತಿಯ ಜನರು ಹಲವು ಭಾಷೆಯ ಜನರು
ಹಲವು ನಡೆ ನುಡಿಗಳೊಂದಾಗಿರ್ಪುವಿಲ್ಲಿ
ಹಲವು ಮಕ್ಕಳ ತಾಯಿಯೊಲವಿನಿಂ ಪೋಷಿಸಲು
ಮೊಲೆ ಹಾಲ ಚಿಣ್ಣಾರಲಿ ಭೇದವಿನ್ನೆಲ್ಲಿ?

ಏಕದಿಂದಲನೇಕನೇಕದಿಂದಲೆ ಏಕ
ಈ ಕೃತಿಕೆ ಕೃಷ್ಟಿಯೇ ಗುರುವಲ್ತೆ ನಮಗೆ
ಭಿನ್ನತೆಯೊಳೈಕ್ಯತೆಯ ಬೆಳಿಸಿ ಬಾಳ್ ಬೆಳಗೋಣ
ಭಾರತೀಯರು ನಾವು ಮಕ್ಕಳೀ ಮನೆಗೆ

ಡಾ। ರವೀನಾನಂದ ಬನಾರಿ, ಮಂಜೇಶ್ವರ

ಎಲ್ಲಿ, ಎಲ್ಲೆಲ್ಲೂ . .

ದೀಪಾವಳಿಯು ಹೊತ್ತಿನಲ್ಲೂ ಅಂಧಕಾರ ಕರಾಳವಾಗಿ ವ್ಯಾಪಿಸಿದೆ. ಭಾರತದ ಒಳ ಮನದಲ್ಲಿ ತಾಂಡವವಾಡುವ ಈ ವಿಷಮಾಂಧಕಾರವನ್ನು ಹೊಡೆದೋಡಿಸಲು ಪ್ರಕಾಶವೆಂಬ ಬೇಕು. ಭಾರತ ಅಂದರೆ, ಪ್ರಕಾಶ, ಇಂತಹ ದೀಪವು ಬೆಳಗಿದಾಗಲೇ ನಾವು ನೈಜ ಭಾರತೀಯರಾಗುತ್ತೇವೆ.

ದಂತಹ ಘಟನೆಯೇ ಇದೆ. ಸ್ವಂತ ಮಗನ ಮೇಲೆ ಸ್ವತಃ ತಾನೇ ರಥವನ್ನೋಡಿಸಿದನು! ಇಂದು ಈ ರೀತಿಯ ನ್ಯಾಯವು ನಮಗೆ ಸಿಗುತ್ತದೆ ಏನು? ಇಂದು ಅದೆಷ್ಟು ಕರುಗಳ ಕೊಲೆ ನಡೆಯುತ್ತಿರುವ ದಿಲ್ಲ?

ದೀಪಾವಳಿಯ ಸಮಯ ನಡೆಯುವ ಮುಖ್ಯ ಪೂಜೆಗಳಲ್ಲಿ ಗೋಪೂಜೆಯೂ ಒಂದು. ಭಾರತೀಯರು ದನವನ್ನು ಗೋ ಮಾತೆಯೆಂದು ಪೂಜಿಸುವರು. ಆದರೆ ಇಂದು! ಅದೇ ಗೋವಿನ ಕೊಲೆ ಸರಾಗವಾಗಿ ನಡೆಯುತ್ತಿದ್ದು, ಭಾರತೀಯರದ್ದೇ ಆದ ಸರಕಾರವು ಲಕ್ಷೋಪ ಲಕ್ಷ ರೂಪ್ಯಾಗಳನ್ನು ಖರ್ಚುಮಾಡಿ ತೀರ್ಥಕ್ಷೇತ್ರ ತೆಯಷತೆಯೆಲ್ಲೇ ಕೊಲೆ ಮನೆಯನ್ನು ಕಟ್ಟಲು ಪ್ರಯತ್ನಿಸುತ್ತಿದೆ! ಕನ್ಯಾ ಕುಮಾರಿಯಿಂದ ಕಾಶ್ಮೀರದ ವರೆಗೂ ಇರುವ ಭಾರತೀಯ ಗೋಭಕ್ತರೆದ್ದು 'ಗೋವಧೆ ನಿಷೇಧಿಸಿರೆಂದು ಕೇಳಿಕೊಂಡ ಮೇಲೆ ಇದೀಗ ಸ್ವಲ್ಪ ಬುದ್ಧಿ ಬರುವ ಹಾಗೆ ಕಂಡು ಬರುತ್ತಿದೆ. ಗೋವಧೆ ನಿಷೇಧಿಸಲು ಸಾಧ್ಯವೋ, ಅದೆಂತು ನಿಷೇಧಿಸುವ ದೆಂದೆಲ್ಲಾ ಯೋಚಿಸಲು ಒಂದು ಸಮಿತಿಯನ್ನು ನೇಮಿಸಲಾಗಿದ್ದು ಅದರಲ್ಲಿ ಆಚಾರ್ಯ ಶ್ರೀರಾಮ ಶರ್ಮಾ ಶ್ರೀ ಶ್ರೀ ಶಂಕರಾಚಾರ್ಯ, ಪರಮ ಪೂಜನೀಯ ಮಾಧವ ಸದಾಶಿವರಾವ್ ಗೊಳ್ವಲ್ಕರ್, ಮಾಜಿ ನ್ಯಾಯಾಧೀಶ ರಾಮ ಪ್ರಸಾದ ಮುಖರ್ಜಿ ಮುಂತಾದ ಗೋಭಕ್ತರೂ ಇದ್ದಾರೆ. ಈ ಸಮಿತಿಯು ತೀರ್ಮಾನ ಆದೆಂದು ಸ್ಪಷ್ಟವಾಗುತ್ತದೋ, ಅದಕ್ಕೆ ಸರಕಾರ ಸಮ್ಮತಿಸುತ್ತದೋ ಇಲ್ಲವೋ...! ಇವೆಕ್ಕಿಂತಲೂ ಹಾಸ್ಯದ ವಿಷಯವೆಂದರೆ ಒಂದೆಡೆ ಈ ಸರಕಾರ ಗೋವಧೆಗೆ ಭಾರೀ ಪ್ರೋತ್ಸಾಹ ಕೊಡುತ್ತಿದ್ದು, ಇನ್ನೊಂದೆಡೆ ದೀಪಾವಳಿಗಾಗಿ (ಗೋಕುಲಾಷ್ಟಮಿಗೆ) ರಜೆಯನ್ನೂ ಕೊಡುತ್ತಿದೆ! ಎರಡೂ ವಿಷಯ ಇದು ಅನ್ಯಾಯ---ನ್ಯಾಯ ಒಟ್ಟೊಟ್ಟಿಗೆ ಹೋಗಲು ಹೇಗೆ ಸಾಧ್ಯ?

ತನ್ನ ಬಂಧನವನ್ನು ಕೊಂದದ್ದಕ್ಕಾಗಿ ನ್ಯಾಯ ಅಪೇಕ್ಷೆಯಲು ದನ ಯೋದಾಪತಿ ನ್ಯಾಯ ಸಂಘ ಮನು ನೀತಿ ಜೋಳನ್ನು ತನ್ನ ಮನವ ಮೇಲೆ ರಥವನ್ನೋಡಿಸಿದನು. ಪ್ರಜೆಯಿತ ಸರಕಾರದ ಬಳಿ ಅದೇ ರೀತಿ ಗೋಪೂಜೆ ಹೊಡಾಗ, 'ನಿನ್ನ ಕರುವ ನ್ನು ಪೂಜ್ಯನಲ್ಲ, ನಿನ್ನನ್ನೇ ಕೊಂದು ಬಿಡುತ್ತೇವೆಂದು ಬೆಂಕಿ ಕೊಲೆ ಮನಗೆ ಬೇರಾವುವ ಮಂಡಿ ಬಯ್ದದ ಕ್ರೂರ ಯಂತ್ರಗಳನ್ನು ಅನ್ಯ ದೇಶದಿಂದ ತಂಸಲು ಸರಕಾರ ಲಜ್ಜೆ ಕೊಡುತ್ತಿದೆ! ಇಂತಿ ಪ್ರತಿ ಫಲವನ್ನು ಎಲ್ಲೆಲ್ಲೂ ಕಾಣಬಹುದು. ತನ್ನ ಜೀವನವೂ ಜೀವ್ಯೆಯ ನೈಜ ಅಮೂಲ್ಯ ವಸ್ತುವನ್ನು ರಕ್ಷಿಸಲಾರದ ಸ್ಥಿತಿ, ಇತರ ಜನತೆಯನ್ನು ರಕ್ಷಿಸುವ ದುಂಟೇ? ಆ ಪಕ್ಷವನ್ನು ಯಾರಾದರೂ ರಕ್ಷಿಸಿಯಾರೇ? ದುರಾದೃಷ್ಟವಶಾತ್ ಕಾಂಗ್ರೆಸ್ಸಿಗೆ ಇನ್ನೂ ಬುದ್ಧಿ ಬಂದಿಲ್ಲ. ಅದು ತನ್ನ ಜುನಾವಣಾ ಜೆನ್ಲೆಯನ್ನಾದರೂ ಬದಲಾಯಿಸಬಹುದು, ಆದರೆ ಗೋವಧೆಯನ್ನು ನಿಷೇಧಿಸುವ ಲಕ್ಷಣ ಕಂಡು ಬರುತಿಲ್ಲ. ಇದು ಪ್ರಜಾ ಪ್ರಭುತ್ವ ಕಾಲವಿದೆ. ಅದುದರಿಂದಲೇ ಗೋಹತ್ಯೆ ನಡೆಸುತ್ತಿರುವ ಕಾಂಗ್ರೆಸ್ಸಿನ ಮೇಲೆ ತನ್ನ ದನುನ ರಥವನ್ನು ಜನತೆ ಓಡಿಸುತ್ತಿದೆ.

ದೀಪಾವಳಿ ಕೇವಲ ಧನಾಧಿಪತಿಗಳ ಹಬ್ಬ ಇರುವದಿಲ್ಲ. ಎಣ್ಣೆ ಸ್ಥಾನ, ಪಟಾಕಿ ಸುಡುವದು..... ಇತ್ಯಾದಿ ಭೋಗಗಳಿಗಾಗಿಯೇ ಆ ಹಬ್ಬ ವಿಲ್ಲ, ಆ ಭಾರತದ ಬೆನ್ನೆಲುಬು ರೈತನ ಧಾರ್ಮಿಕ ಉತ್ಸವ ಇದೆ. ಅಂದು ಲಕ್ಷ್ಮಿಗೆ ಮಾತ್ರ ಪೂಜೆ ಸಲ್ಲುವದಲ್ಲ, ಬದಲು ಲಕ್ಷ್ಮಿ ಗೋಮಾತೆಗೂ ಪೂಜೆ ಸಲ್ಲುತ್ತದೆ. ಆದಿಲ್ಲವಾದಲ್ಲಿ ದೀಪಾವಳಿ ಅಪೂರ್ಣವೇ ಸರಿ. ಗೋವಾತೆಗೂ ಭೂಮಾತೆಗೂ ನಿಕಟ ಸಂಬಂಧ. ಗೋಮಾತೆಯನ್ನು ಪೂಜಿಸುವಾತನು ಭಾರತ ಮಾತೆಯನ್ನು ಪೂಜಿಸದಿರಲಾರನು. ಗೋಮಾತೆಯ ಮೇಲೆ ಭಕ್ತಿ ಇದ್ದಲ್ಲಿ ಅವನು ಭಾರತದ ಮೇಲೆ ಅಕ್ರಮಣವನ್ನು ಸಹಿಸಲಾರನು. ಈ ವಿಷಯಗಳೆಲ್ಲಾ ಒಂದಕ್ಕೊಂದು ಹಾಸು ಹೊಕ್ಕಾಗಿ ಇವೆ. ಆದುದರಿಂದಲೇ ನಮ್ಮ ಮಹಾನ್ ಪೂರ್ವಜರು ಈ ದೀಪಾವಳಿಯ ಪೂರ್ವಕಾಲದಲ್ಲಿ ಭೂಮಿ ಪೂಜೆ, ಲಕ್ಷ್ಮಿ ಪೂಜೆ, ಗೋಪೂಜೆಗಳನ್ನು ಮಾಡಬೇಕೆಂಬ ನಿಯಮವನ್ನು ಬಳಕೆಗೆ ತಂದಿರುವರು. ಈ ಪೂಜೆಗಳ ತ್ರಿವೇಣಿ ಸಂಗಮವೇ ದೀಪಾವಳಿ ಇದೆ. ಈಗ ನಡೆಯುತ್ತಿರುವ ಕಾಮಾಸೆಯು ಸಂಪತ್ತಿಯಿಂದರೆ ಒಂದೂಗಳ ಮನಪೂರಿಸಲಿಕ್ಕಾಗಿ, ಅವರ ಮಕಗಳನ್ನ ಗಟ್ಟಿಸಿಕೊಳ್ಳಲಿಕ್ಕಾಗಿ, ಪ್ರಜಲಿತ ಸರಕಾರವು ದೀಪಾವಳಿಯಂದು ರಜೆ ಕೊಡುತ್ತಿದೆ. ಹಿಂದೂಗಳೇತರರು ಮತ ಪಡೆದುಕೊಳ್ಳಲಿಕ್ಕಾಗಿ ಗೋವಧೆಯೂ ವಿರ್ವಾಹು ನಡಿಸುತ್ತಿದೆ. ಅನ್ಯದೇಶದ ವ್ಯಾಪಾರ ರಾಷ್ಟ್ರಗಳ ಮನಪೂರಿಸಲಿಕ್ಕಾಗಿ ಇಲ್ಲಿಯ ಹಣದ ಮೌಲ್ಯವನ್ನು ಕಮ್ಮಿ ಗೊಳಿಸಲಾಗಿದೆ. ಹಾಗೆಯೇ ಅಕ್ರಮಣಕಾರಿ ರಾಷ್ಟ್ರಗಳ ಕೃಪೆಪಡೆಗಾಗಿ ಭೂಪ್ರದೇಶಗಳನ್ನು ಚೈನಾಕ್ಕೂ, ಪಾಕಿಸ್ತಾನಕ್ಕೂ ಬಿಟ್ಟುಕೊಡಲಾಗುತ್ತಿದೆ. ಜೊಗದ್ದೆಯೂ ದೀಪಾವಳಿಯನ್ನಾಚರಿಸಲಾಗುತ್ತಿದೆ!

ಮೂರನೆಯ ವಿಷಯ ರಾಷ್ಟ್ರೀಯ ಸ್ವಾಭಿಮಾನಕ್ಕೆ ಮಸಿಬೆರೆಯುವ ಅಂಧಕಾರವಿದೆ. ಮನ ಭೀತಿ ಜೋಳನ ಜೀವನ ಕಾಲದಲ್ಲಿ ನಡೆದ ಘಟನೆಯನ್ನು ಅಕ್ಬರ ಸ್ವತಃ ಪಾರಿಸಿ ಬದಲಾಯಿಸಿ ಅನ್ಯಧರ್ಮೀಯರ ಅಂಧಕಾರವನ್ನು ಸ್ಪಷ್ಟಪಡಿಸಿದ್ದಾರೆ. ಕೇವಲ ತನ್ನ ಕ್ಷುಲ್ಲಕ ಭೋಗ---ವಿಲಾಸ, ಅಗ್ಗದ ಕ್ಷಣಿಕ ಖ್ಯಾತಿಗಳಿಗೆ ಮಾರುಳಾಗಿ ಅವರು ತಮ್ಮ ಮೆದುಳನ್ನು ಮಾರಿಕೊಂಡಿರುವರು. ಅವರು ಅಕ್ಬರನಲ್ಲಿ ದೇವತ್ವವನ್ನು ಕಂಡು ಕೊಂಡರು! ಈ ಅಂಧಕಾರದಲ್ಲಿಂದು ಜನತೆ ತತ್ತರಿಸುತ್ತಿದೆ. ಅವರಿಗೆ ಮನು ನೀತಿ ಜೋಳ ರಾಗೆ ಮೂಡಿದ್ದನೆಂದಲ್ಲಿ ನಗ ಬರುತ್ತದೆ. ದನ ಅರಮನೆಗೆ ನ್ಯಾಯ ಬೇಡಿಕೊಂಡು ಬರುವದುಂಟೇ, ಒಂದು ಘಂಟೆಯಿದ್ದಲ್ಲಿಗೆ ಹೋಗಿ, ಘಂಟೆ ಬಾರಿಸುವದುಂಟೇ? ದನದ ಭಾಷೆಯನ್ನು ಜನರು ಅರ್ಥ ಮಾಡಿಕೊಳ್ಳುವದುಂಟೇ? ಅರ್ಥವಾದರೂ ದನಕ್ಕೆ ನ್ಯಾಯ ಸಿಗುವದುಂಟೇ? ಇಗೆ ಪ್ರಶ್ನೆಗಳ ಆಲೆಗಳನ್ನೇ ಈಗಿನವರು ಕೇಳುತ್ತಾರೆ. ಆದರೆ ಅದೇ ಮನುನೀತಿ ಜೋಳನ ಹೆಸರನ ಬದಲು ಅಕ್ಬರನೆಂದಲ್ಲಿ ಪ್ರಶ್ನೆಗಳನ್ನು ಯಾರೂ ಕೇಳುವದಿಲ್ಲ. ಅದು ಬದಲು ಅಕ್ಬರನ ನ್ಯಾಯ ನಿಷ್ಠುರತೆಯನ್ನು ಹೊಗಳುವವರೇ ಆಗಿ ಬಿಡುತ್ತಾರೆ. ಅವರ ಖಾಲಿಗಂತೂ ಅಕ್ಬರನು ಅಕ್ಕುತ್ತಮ ಮಹಾತ್ಮ ಹಾಗೂ ವಹಾನ್ ಶಾಂತಿ ಪ್ರಿಯನಿದ್ದಾನೆ-ಅದರೆ ಮಹಾರಾಣಾ ಪ್ರತಾಪನು ಜಗಗಂಟ ಹಾಗೂ ಕ್ರೂರಿ ಅಷ್ಟಿದೆ ಧಾರ್ಮಿಕ ದುರಂಭಮಾನ! ನಮ್ಮ ರಾಷ್ಟ್ರೀಯ ಸ್ವಾಭಿಮಾನದ ಮಟ್ಟ ಅಲ್ಲಿಯ ವರೆಗೆ ಪಾತಾಳಕ್ಕಿಳಿದಿರುತ್ತದೆ. ಅದುದರಿಂದಲೇ ದೀಪಾವಳಿಯೆಂದರೆ ನಮಗೆ ಕೇವಲ ಪದ್ದಗಳನ್ನು ಸುಡುವ, ಪಟಾಕಿ ಹಾರಿಸುವ, ಪುಸ್ಕಳ ಭೋಜನ ವಡಿಡುವ ಹಬ್ಬದ ದಿನವಾಗಿ ಬಿಟ್ಟಿದೆ. ಧಾತೃತ್ವ ಬದಿಗಿಗೆ ಅಲ್ಲಿ ಅರ್ಥವೇ ಇಲ್ಲ, ಗೋಪೂಜೆ "ಇತ್ಯೇ"ಯಾಗಿರುತ್ತದೆ. ಕಲ್ಲು, ಮುಳ್ಳು, ಮಣ್ಣು, ತುಂಬಿರುವ ಭೂಮಿಯನ್ನು ಪೂಜೆ ಮಾಡುವದಂತೂ ಕ್ರಿ. ಪೂ. ಇಪ್ಪತ್ತನೇ ಶತಮಾನಕ್ಕೆ ಹೇಳಿ ಸಿದ್ದಾಗಿರುತ್ತದ!

ಇಲ್ಲಿ ಅಕ್ಬರನ ಭಕ್ತಿ ಒಂದು ಉದಾಹರಣೆ ಇದೆ ಅಷ್ಟೆ. ಹೆಚ್ಚಿನ ವಿಷಯಗಳಲ್ಲಿ ನಮಗೆ "ಬಿಸ್ಕಲ ಗಿಡ ಮದ್ದಲ್ಲ"ವಾಗಿರುತ್ತದೆ. ಆಂಗ್ಲೇಯರು ಆಕ್ರಮಣ ಪಡೆಸುವದಕ್ಕಿಂತ ಮುಂಚೆ ನಾವೊಂದು ರಾಷ್ಟ್ರವಾಗಿರಲಿಲ್ಲವಂತೆ! ಬ್ರಿಟಿಷರು ದೈವವಶಾತ್ ಬಂದು ನಮ್ಮನ್ನೊಂದುಗೂಡಿಸಿ ರಾಷ್ಟ್ರವನ್ನಾಗಿ ಮಾಡಿ ಪುಣ್ಯ ಕಟ್ಟಿ ಕೊಂಡರಂತೆ! ಬ್ರಿಟಿಷರು ಬರುವ ಸಹಸ್ರಾರು ವರ್ಷಗಳ ಹಿಂದಿನಿಂದಲೂ ಭಾರತದ ಜನತೆ ಒಂದಾಗಿರಲಿಲ್ಲವೇನು? ದೀಪಾವಳಿ ದಿನದಂದು ವಿಮಾನದಲ್ಲಿ ಕುಳಿತು ಕೊಂಡು ಭಾರತ ದರ್ಶನ ಮಾಡಿದಲ್ಲಿ ಗೊತ್ತಾಗುತ್ತಿತ್ತು---ಆಸೇತು ಹಿಮಾಚಲದ ಇರುವ ಈ ಭೂಪ್ರದೇಶ ದೀಪಾವಳಿಯ ಪರ್ವಕಾಲದಲ್ಲಿ ಜಗಮಗಿಸುತ್ತಿತ್ತು. ಭಾರತವು ಒಂದು ರಾಷ್ಟ್ರವಾಗಿದಿದ್ದಲ್ಲಿ ಇಂತಹ ಸಾಧ್ಯ? ಹಿಮಾಲಯದಲ್ಲಿರುವವರೂ ಅದೇ ದಿನ ದೀಪಾವಳಿ ಆಚರಿಸುತ್ತಾರೆ, ತಾವೆಲ್ಲ ಭೂ ಭಾಗಕ್ಕೆ ಮಾತೆಯ ರಕ್ಷಣೆಯನ್ನು ವ ಸ್ವಪ್ನ ಅಭಿಪ್ರಾಯ ಮನೋಭಾವನೆ ಅವರಲ್ಲುತ್ತು. ಅದುದರಿಂದಲೇ ಅವರು ಭಿನ್ನಭಿನ್ನವಣಾದೆ ನಿಷ್ಠಾವಂತಿಯನ್ನು ಭೂಮಿಪೂಜೆ, ಲಕ್ಷ್ಮಿಪೂಜೆ, ಗೋಪೂಜೆ ಆಚರಿಸುತ್ತಿದ್ದರು.ನಾವಂದನ್ನು ಅಂದಶ್ರದ್ಧೆಯಿಂದು ಅನ್ಯಲಾರಂಭಿಸಿದಿಂದೇ ಭಾರತದ ಭೂಭಾಗಗಳನ್ನು ಬಿಟ್ಟು ಕೊಡಲಾರಂಭಿಸಿ, ಆದು ನಮಗೆ ಸೇರಿದ್ದಲ್ಲವೆನ್ನುವಷ್ಟು ಮುಂದರಿದಿದ್ದೇವೆ! ಹಿಂದೆಯೂ ಆಕ್ರಮಣಕಾರರು ಬಂದಿದ್ದರು. ದಾಸ್ಯದ ನೊಗ ಇತ್ತು, ಆದರು ಜನತೆ ದೀಪಾವಳಿಯನ್ನು ನೈಜಅರ್ಥದಲ್ಲಿಆಚರಿಸುತ್ತಿದ್ದ ಕಾರಣ,ಆನರಹೃದಯ ಹಣತೆಯಕ್ಕರಾಸ್ಫೂರ್ತಿಯ ಜ್ಯೋತಿ ಬೆಳಗುತ್ತಿತ್ತು. ಆದುದರಿಂದಲೇ ಆವರು ಆಕ್ರಮಣಕಾರರನ್ನು ಹೊರಗಟ್ಟಿ ಬಿಟ್ಟರು. ಇದಕ್ಕೆ ವಿಕ್ರಮ ಶಕವೇ ಪ್ರಿದರ್ಶನವಿದೆ. ಅದುವೇ ನೈಜ ದೀಪಾವಳಿ ಇದೆ. ಆಕ್ರಮಣಕಾರರು ನಮ್ಮ ಧಾರ್ಮಿಕ ತರ್ಕ ರಾಷ್ಟ್ರೀಯತೆಯ ಜ್ಯೋತಿಯನ್ನಲ್ಲಿ ನಂದಿಸಿರುವರು, ಅದನ್ನುರಿಸುವದು ನಮ್ಮ ಆದ್ಯ ಕರ್ತವ್ಯ ಇದೆ. ಅದನ್ನ ದೀಪಾವಳಿ ಜ್ಞಾಪಕ ಪಡಿಸುತ್ತದೆ.

ದೀಪಾವಳಿ ಅದೇನೋ ಜ್ಞಾಪಕ ಪಡಿಸುತ್ತದಾದರೂ ಛಿದ್ರಿಸ್ಟ್ರಿಯತೆ ಅಂಧಕಾರ ಇಂದೆಲ್ಲೆಲ್ಲೂ ಆವರಿಸಿರುತ್ತದೆ. ಅದರಲ್ಲಿ ನಾವು ತೊಳಲಾಡುತ್ತಿದ್ದೇವೆ. ನಮ್ಮ ರಾಷ್ಟ್ರವೆದ್ದು ಅಂದರೆ ನಮ್ಮಗೇಕೋ 'ಹಗಾಂ'ವಾಗಿ ಬಿಡುತ್ತದೆ. ಮತೀಯ ವಿಚಾರವೇ ಇರಲಿ, ಭಾಷೆಯ ವಿಷಯವೇ ಇರಲಿ, ಸಾಂಸ್ಕೃತಿಕ ವಿಷಯವೇ ಇರಲಿ, ಅವು ದೇಶದ್ದೆಂದರೆ ತಲೆಯಿಲ್ಲುಟ್ಟುಕೊಳ್ಳುವಂತಹದ್ದಾಗಿರುತ್ತದೆ! ಭಾರತದ ಮತೀಯ ವಿಚಾರಗಳು ಅಂಧಶ್ರದ್ಧೆಯ ಗೊಡ್ಡು ಸಂಪ್ರದಾಯಗಳವೆ! ಇಲ್ಲಿಯ ಭಾಷೆ ಕಾಡುಜನರ ಭಾಷೆ ಇದೆ, ಸಂಸ್ಕೃತಿಗೆ ಬೆಲೆಯೇ ಇಲ್ಲ!

ಈ ಅಂಧಕಾರದಿಂದ ನಮಗೆ ಮುಕ್ತಿ ಇಲ್ಲವೇನು? ಆರೇ! ಭಾರತವಲ್ಲಿರುವವರಿಗೆ ನೇ ಮುಕ್ತಿ ಇಲ್ಲವೆಂದಲ್ಲ ಇನ್ನಾರಿಗೆ ಮುಕ್ತಿ ದೊರಕೀತು? "ಭಾರತ" ಪದದ ಅರ್ಥವೇ "ಬೆಳಕು"-"ಪ್ರಕಾಶ"ವೆಂದಿದೆ. ಈ ಪದವನ್ನು ಆರಿತುಕೊಂಡರೆ ಒಡನೆ ನಮಗೆ ಬೆಳಕಿನ ದರ್ಶನವಾಗುತ್ತದೆ. ಅದುವೇ ಭಾರತದರ್ಶನ ಇದೆ. ಆಗ, ಆಗ ನೂತ್ರ ಪ್ರಕಾಶದತ್ತ ಕಾತರತೆಯಿಂದ ನೋಡುತ್ತಿರುವ ಪ್ರಶಂಗಳಿಗೆ ಬೆಳಕಿನ ದರ್ಶನವಾಡಲು ಸಾಧ್ಯವಾದೀತು. ಆಗ,ಆಗ ಮಾತ್ರ ವೇ ಹಿಂದೂ ದೇಶವು ನೈಜ 'ಭಾರತ'ವಾದೀತು. ಇಲ್ಲವಿದ್ದಲ್ಲಿ ಅದು ಕೇವಲ ಇಂಡಿಯಾವೇ [INDIA] ಸರಿ. ಇದೇ ಅವರ ಪಾಲಿಗ ಸಂತೃಪ್ತ ಸಂಗಂದಿ. ಇಲ್ಲದೀಪಾವಳಿ ಆಚರಿಸುವದರಲ್ಲಿ ಅರ್ಥವೇ ಇರವದಿಲ್ಲ.

ಅಂದೂರ್ವ ವಿಕ್ರಮಾದಿತ್ಯನು ಬಂದು ಆಕ್ರಮಣಗಾರ ಶಕನನ್ನು ಹೊಡೆದಟ್ಟಿ ವಿಜಯೋತ್ಸವದಿಂದ ದೀಪಾವಳಿಯನ್ನಾಚರಿಸಲು ಸೌಕರ್ಯಗಳನ್ನೊದಗಿಸಿದನು. ಇನ್ನೆನ್ನುವ ವಿಕ್ರಮ ಪುರುಷನು ಬಂದು ರಾಷ್ಟ್ರೀಯತೆಯ ಅಂಧಕಾರವನ್ನಟ್ಟಿ ನೈಜ್ಯ ದೀಪಾವಳಿಗೆ ವಿಸರ್ಜಿಸಿ ಮಾಡಿದಾನೇನೋ? ಇಂಯ ಆ ಕಲಶ ಒಬ್ಬ ವಿಕ್ರಮಾದಿತ್ಯನಿಂದ ಆಗುವಂತಹದ್ದಲ್ಲ. ಅದಕ್ಕೆ ಸುಸಂಘಟಿತ ಜಂದಾ ಶಕ್ತಿಯೇ ಬೇಕಾಗಿರುತ್ತದೆ.

ಸಂತತ್ವನ ವ್ಯಮು ಹಾಸಗೆಯಲ್ಲಿ ಅನೇಕ ರಾಷ್ಟ್ರಗಳೇ ನಾಶಗೊಂಡಿವೆ, ಮತ್ತೆ ಮನುಷ್ಯನ ಕತೆ ಕೇಳಬೇಕೆ?

ದಕ್ಷಿಣ ಕನ್ನಡದ ದಶಾವತಾರ

(ಹಿನ್ನೆಲೆಗೇ ಹಾಟದಿಂದ)

ಸೆ"ಗಿಂತ ಮಿಗಿಲಾದ ವ್ಯವಹಾರ ಬೇರೊಂದಿಲ್ಲವೆಂದು ಮಾತ್ರ ತಿಳಿಯಬಲ್ಲ. ಸಣ್ಣ ಹುಟ್ಟು ಚತುರ ವ್ಯವಹಾರಿ ಬಯಲಾಟ ಕಲಾ ಉದ್ಯಮಕ್ಕೆ ಕೈಯಿಕ್ಕ ಬಾರದು ಈ ಕಲೆ ದೇಶ ವಿದೇಶಗಳಲ್ಲಿ ಮನ್ನಣೆಗಳಿಸಲು ಸಾಧ್ಯವಿದೆ. ಖ್ಯಾತಿ ಪಡೆಯಬಲ್ಲುದು.ಆದರೆ ಸದ್ಯ ದೇಶದ ಪರಿಸ್ಥಿತಿ, ಆರ್ಥಿಕ ಪರಿಸ್ಥಿತಿ ಸುಧಾರಿಸದೆ ಕಲೆಯು ಬೆಳವಣಿಗೆ ಸಾಧ್ಯವಿಲ್ಲ.

ಅನ್ನ ಆಹಾರದ ಸಮಸ್ಯೆಗಳೇ ಪೆಡಂಭೂತವಾಗಿದ್ದ ಈ ದೇಶದಲ್ಲಿ ಕಲೆಯು ಬೆಳವಣಿಗೆ ಹೇಗೆ ಸಾಧ್ಯವಾದೀತು?

ಸುಧಾರಣೆ

ಅದಾಗ ಸುಧಾರಣೆಯು ಸೋಗಿನಲ್ಲಿ ಬಯಲಾಟ ಬಯಲು ರಂಗಸ್ಥಳವನ್ನು ಬಿಟ್ಟು, ರಂಗ ಮಂಟಪ, ನಾಟಕ ಶಾಲೆ, ಸಿನೆಮಾ ಗೃಹಗಳಲ್ಲಿ ಪ್ರದರ್ಶನವಾಗುತ್ತಿದೆ. ಈ ಬದಲಾವಣೆಯು ಸಮಯದಲ್ಲಿ ಸಿನೆಮಾ ನಾಟಕಗಳ ಸುಂಟರ ಗಾಳಿ ಪ್ರಭಾವ ಯಕ್ಷಗಾನಕ್ಕೆ ಸೇರಿದ ಇತರ ಹೀಗೆ ಪ್ರಗತಿ ಸುಧಾರಣೆಯ ಹೆಸರಿನಲ್ಲಿ ಯಕ್ಷಗಾನ ಯಕ್ಷಿಣಿಯಾಗಲು ಪ್ರಾರಂಭವಾಗಿದೆ. ತನ್ನ ಸ್ವಂತ್ರ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಕೊನೆಗೆ ಇದು ನಾಟಕವೂ ಅಲ್ಲ; ಸಿನೆಮವೂ ಅಲ್ಲ, ಬಯಲಾಟವೂ ಅಲ್ಲ, ದಶಾವತಾರವೂ ಅಲ್ಲದ "ವಿಷಮ ಗಾನ"ವಾಗುತ್ತಿದೆ. ನವರಸ ಕಚ್ಚಾಯದ ಬದಲು "ದಶಮೂಲಾರಿಷ್ಟ"ದಂತಹ ಕಷಾಯವಾಗುತ್ತಿದೆ. ನನ್ನರೆ ಸವಿಯದೆ ನಿಜ. ಆಬಾಲವೃದ್ಧರಿಗೆ ಪ್ರಿಯವಾದುದು ಹೌದು; ಸಹಜ. ಆದರೆ ಉಪ್ಪಿನ ಕಾಯಿಗೆ ಸಕ್ಕರೆ ಹಾಲು ಜೇನು ಶುಶ್ರೂಷೆಗಳನ್ನು ಬೆರಸಿದರೆ ಅದು ಪಂಚಾಮೃತವಾಗದು. ಈ ಪಕ್ವದಿಂದ ದೇಹಕ್ಕೆ, ಆರೋಗ್ಯಕ್ಕೆ ಏನೂ ಹಾನಿಯಿಲ್ಲ. ಆದರೆ ಪಾಕ ಶಾಸ್ತ್ರಕ್ಕೆ ವಿರುದ್ಧವಾದ ಏನೋ ಒಂದು ವಿಚಿತ್ರ ಖಾದ್ಯವಾಗುತ್ತದೆ.

ಅಂತೆಯೆ ಯಕ್ಷಗಾನಕ್ಕೊಂದು ನಿಯಮವಿದೆ. ಶಾಸ್ತ್ರ ಸಂಪ್ರದಾಯಗಳ ಪರಂಪರೆಯಿದೆ. ಈ ನಿಯಮಗಳಲ್ಲಿ ಹಿದ್ದುಪಡಿಗಳಾಗಬಾರದೆನ್ನುವುದು ಸರಿಯಲ್ಲ. ಆದರೆ ಈ ಬದಲಾವಣೆ ಅಥವಾ ಸುಧಾರಣೆಯು ಹಿತಮಿತವಾದರೆ ಮಾತ್ರ ಜೆನ್ನು ಎಂಬುದು ಸೂಕ್ಷ್ಮವಾದ ಸಂದೇಶ; ಇಲ್ಲವೆ ಸಂಕಟ ಖಂಡಿತ.

ಉದಾಹರಣೆಗೆ ಪೂರ್ವದಿಂದಲೂ ಬಯಲು ರಂಗಸ್ಥಳವನ್ನು ಎರಡು ದೀವಟಿಗೆಗಳಿಂದ ಬೆಳಗಿಸುತ್ತಿದ್ದರು. ಇವುಗಳಿಗೆ ಹೊನ್ನೆಣ್ಣೆಯ ಬದಲು ಎಳ್ಳೆಣ್ಣೆಯನ್ನೋ, ತೆಂಗಿನಎಣ್ಣೆಯನ್ನೋ ಬಳಸ ಬಹುದು. ಆದರೆ ಮಣ್ಣೆಣ್ಣೆ (ಚಿಮಣಿ ಎಣ್ಣೆ)ಯಿಂದ ಉರಿಸಿದರೆ ಹೇಗಾದೀತು? ವಿದ್ಯುಚ್ಛಕ್ತಿ ಸರಬರಾಯಿ ಎಲ್ಲೆಡೆಗಳಲ್ಲಿ ಸಿಗುವ ಈ ಕಾಲದಲ್ಲಿ ದೀವಟಿಗೆಗಳನ್ನು ಉರಿಸಬೇಕೆಂದಿಲ್ಲ. ಬದಲು ನೂರು ಕ್ಯಾಂಡಲುಗಳ ನಾಲ್ಕು ಬಲ್ಬುಗಳನ್ನು ಉಪಯೋಗಿಸಿದರೆ ಯಾರಿಗೂ ಬೇಸರವಿಲ್ಲ.

ವೇಶಧಾರಿಗಳು ಆಕ್ಕಿಯ ಹಿಟ್ಟು, ಅರಸಿನ ಕುಂಕುಮಗಳ ಬದಲು ಸುಗಂಧ ಪೌಡರ್, ವ್ಯಾಸಲೀನು ರೋಟ್‌ಲಿವ್‌ಸ್ಟಿಕ್‌ಗಳನ್ನು ಆಳವಡಿಸ ಬಹುದು ಏನಾ ಆಧುನಿಕತೆ ಮತ್ತು ಬದಲಾವಣೆಯು ನೋಗಿನಲ್ಲಿ ಸ್ತ್ರೀವೇಶ ಧಾರಿಯೊಬ್ಬ ಮಿಸ್ ರ್ಗಿಂತ ರಂಗಸ್ಥಳದಲ್ಲಿಬಂದುನಿಂತುಬಿಟ್ಟರೆ ಅದುಯಕ್ಷಗಾನದ ಬದಲು ಫ್ಯಾನ್ಸೀ ಡ್ರೆಸ್ ಆಗಬಹುದು, ಇಂಗ್ಲೆಂಡಿನಲ್ಲಿ ಛಳಿ ಹೆಚ್ಚು; ಶೀತಲದೇಶ ಅಲ್ಲಿ ಪ್ಯಾಂಟು ಕೋಟು, ಸೂಟು, ಬೂಟುಗಳ ಅವಶ್ಯಕತೆಯಿದೆ. ಆದರೆ ಆ ವೇಶ ಭೂಷಣಗಳನ್ನು ನಾವು ಬಳಸಿದರೆ ಬಯಲಾಟಹುಚ್ಚಾಟವಾದೀತು.

ನಮ್ಮ ದಶಾವತಾರದ ಉಡುಗೆತೊಡಿಗೆಗಳು, ಪ್ರಗತಿ ವಿಕಸನಗಳ ಪರಿಪೂರ್ಣತೆಯ ಪ್ರತೀಕಗಳಾಗಿವೆ. ಯಕ್ಷಗಾನದ ಕಿರೀಟ, ಕಂಠಾಭರಣ, ಕಂಕಣ ಬೈ-ಕೈ ತೊಡಿಕೆಟ್ಟುಗಳು- ಮುಂತಾದುವೆಲ್ಲ ಕಲಾಸ್ಯ ರಸಿಕ ಶ್ರೇಷ್ಠರ ಮನ್ನಣೆಯನ್ನು ಪಡೆದಿವೆ. ಇವನ್ನೆಲ್ಲ ಕೆಂಚಿಕ್ಕಾದರೂ ಬದಲಿಸಿದಲ್ಲಿ ಹೆಮ್ಮರದ ಕಾಯಿಬೇರನ್ನೆ ಕಡಿದಂತೆ ಈ ನಗ್ನತೆಯನ್ನು ತುಂಬಲಾಗದು.

ಬಯಲಾಟಕ್ಕೆ ಜನರನ್ನು ಆಕರ್ಷಿಸಲು ಊರು ಕೇರಿ ಹಳ್ಳಿಪಳ್ಳಿಗಳ ಜನರನ್ನು ಕರೆಯಲು ಚೆಂಡೆ ಬಾರಿಸುವ ಸಂಪ್ರದಾಯವಿದೆ. ಆವಶ್ಯಕತೆಯಿದೆ. ಸಂಜೆಯಾದೊಡನೆ ಚೆಂಡೆಯು ಧ್ವನಿ ದಿಗ್ದಿಗಂತಗಳಲ್ಲಿ ಮೊಳಗಿದಾಗಿ, ಮರುಧ್ವನಿ, ಪ್ರತಿಧ್ವನಿಯಾದಾಗ ಹಿರಿಯ ಕಿರಿಯರೆಲ್ಲ ಊಟ ಗಿಟ ಬೇಗ ಬೇಗನೆ ತೀರಿಸಿ ನಾಲ್ಕೈಂಟು ವೈಲು ದೂರದಿಂದಲಾದರೂ ರಂಗಸ್ಥಳಕ್ಕೆ ಧಾವಿಸುತ್ತಾರೆ. ಈ ಕರೆಯನ್ನು ಮುಂಬಯಿಯಂತಹ ಮಹಾ ನಗರಗಳಲ್ಲಿ, ಊರು ಪೂರದರಿಯಲ್ಲೇ ಬಡೆದು ಬಾರಿಸಬೇಕೆಂದಿಲ್ಲ. ಕಾರಣ ಇಲ್ಲಿ ವೃತ್ತ ಪತ್ರಿಕೆ ಯೂ ಕರಪತ್ರಗಳ ಜಾಹೀರಾತನ್ನು ಕಂಡು ಪ್ರೇಕ್ಷಕರು ಬೆರೆಯುತ್ತಾರೆ. ಮುಂಗಡ ಬದಲು ದಾಮೋದರನಿಯಿಂದ ಶ್ರುತಿ ವಿಸರ್ಜನವಾಗದು. ತಾಳದ ಬದಲು ಜಾಗಟೆ, ಜಾಗಟೆ ಯ ಬದಲು ತಾಳ ಸಾಧ್ಯವಾಗುದು. ಆದರೆ ತಪ್ಪಿಟ್ಟೆ ಹೇಳುವುದಲ್ಲ. ಹೀಗೆ ಹಲವಾರು ಪರಿವರ್ತನೆಗಳನ್ನು ನೀಡಬಹುದು.

ಡಾ. ಶಿವರಾಮ ಕಾರಂತರ ಪ್ರಯೋಗ

ಡಾ. ಕಾರಂತರು ಇಂಥಾದ, ಇದನ್ನೆಲ್ಲ ಅಸಾಧ್ಯವೆಂಬ ಪದ ಅವರ ಶಬ್ದ ಕೋಶದ ವಿಚಾರ ಲಹರಿಯಲ್ಲಿಲ್ಲ. ತಾನು ಕಂಡ ಸ್ವಪ್ನಗಳಿಂದ ಕಲಾನಿರ್ಮಿತಗಳನ್ನು ನಿರ್ಮಿಸಬಲ್ಲ ಜಾಣ, ಛಲವಾದಿ.

(ಮೂಲಪತ್ರಿಕೆಯ ಪುಟ ನೋಡಿರಿ)

While in SECUNDERABAD

Please Visit

NEW MEENAKSHI BHAVAN

(High Class Vegetarian Boarding & Restaurant)

(Near Gandhi Hospital and Market)

RENOWNED FOR

Quality, cleanliness and taste.

Please visit and satisfy yourselves.

Lodging section to be opened shortly.

Prop: K. MAHABALA RAO.

When you are at GUNTUR

Please visit at once

(1) **Udipi Coffee House** (Vegetarian Restaurant) Eilore Bazzar GUNTUR–1

AND

(2) **UDIPI WELCOME COFFEE HOUSE** (Vegetarian Restaurant) Patna Bazar, GUNTUR

Prop: **Maliya Venkat Rao**

AND

(3) **UDIPI COFFEE HALL** (Vegetarian Restaurant) R–Agraharam, GUNTUR.

Prop. **K. Govind Rao.**

With Compliments

from

NIVAS & SONS

Watch Dealers.

Sales & Service

Estd. 1918 **MANGALORE–1**

At Vijayawada

Stay at

SRI DURGA BHAVAN

(Near Bus Stand Ellore Road)

Air conditioned Rooms With Phone & attached Bath Rooms.

— AND —

SATKAR

Air Con'd. deluxe Restaurant for Vegetarian Specialities at the same premises.

ನಿಮ್ಮ ನೆಚ್ಚಿನ ಮೈಸೂರು ಗಂಧದ ಸಾಬೂನು

ಈಗ ಹೊಸ ರೂಪದಲ್ಲಿ ಬಂದಿದೆ,

ಅತ್ಯಾಧುನಿಕ ಸ್ವಯಂಚಾಲಿತ ವ್ಯಾಕುಮ್ ಸೋಪ್ ಪ್ಲ್ಯಾಂಟ್

ಈ ಸಾಬೂನಿಗೆ ಮೊದಲಿನ ಗೋಲಾಕಾರದ ಬದಲು
ಚೌಕಾಕಾರದ ರೂಪವನ್ನು ನೀಡಿದೆ. ಆಕಾರದಲ್ಲಿಯ
ಬದಲಾವಣೆಯಿಂದ ಅಳತೆ ಕುಗ್ಗಿಲ್ಲ ಮತ್ತು ಸುವಾಸನೆ ಬದಲಾಗಿಲ್ಲ

ಮೈಸೂರು ಸರಕಾರದ ಸಾಬೂನು ಕಾರ್ಖಾನೆ,

ಬೆಂಗಳೂರು.

THE UNITED STORES

Administrative Office :
"Sea View" Court Hill Road,
MANGALORE-3.

Grams: "UNISTORES" *Telephone:* Office 3962
Personal: 3996
Residence: 3561

BRANCHES AT:

Mangalore, Puttur, Mercara, Virajpet, Suntikoppa, Kushalnagar, Mysore, Bangalore, Madras, Bombay, Udipi, Coondapoor, Karkal, Moodbidri, Hassan, Chickmagalur, Calicut and Kasaragod.

Agents and Associates:
Throughout the important towns in South India.

Full Lorry loads to small parcels carried with zeal and care.

If transport is a problem to you, we are at your door to solve it.

ಈ ಮಹಾ ರೋಗಕ್ಕೆ ಯಾವ ಮದ್ದು ಕೊಡಬೇಕು?

[ಹಿನ್ನೆಯಿಂದ ಮುಂದುವರಿದ]

ಹಿಂದೆ ಕೆಲವು ಕಡೆ ಕಾಫಿ, ಗೋಡಂಬಿ ಬೆಳೆಸುವ ಯೋಜನೆಗಳು ಬಂದವು. ಸಾವಿರಾರು ಆರ್ಜಿಗಳು ಸ್ಥಾಪಿಸಿದಂದ ಅಲಂಕೃತವಾಗಿ ಸರಕಾರದ ಬೊಕ್ಕಸ ಸೇರಿದವು. ವಿಚಾರಣೆ ಮಹಜರುಗಳ ನಾಟಕಗಳು ನಡೆದು ಗಾತ್ರ, ಗಾತ್ರಗಳಾಗಿ ಬವು ಪರಿಸುವ್ವೂ ಆದನ್ನೆ. ಆದರೆ ಕೊನೆಯಲ್ಲಿ ಎಲ್ಲರಿಗೂ ಒಂದೇ ಉತ್ತರ 'ಕೊಡಲು ಬರುವದಿಲ್ಲ' ಎಂದು. ಇಷ್ಟು ಉತ್ತರ ಬರೆಯಲು ಮೂರು ನಾಲ್ಕು ವರ್ಷಗಳು ಏಕೆ ಬೇಕಾಗುವವೋ ದೇವರೇ ಬಲ್ಲ!

ಆರ್ಜಿಗಳಿಗೆ ನೂವು ಸ್ಟ್ಯಾಂಪು ಅಂಟಿಸುತ್ತೀವೆ, ಆದರಿಂದಾಗಿ ನಮಗೆ ತೀವ್ರ ಉತ್ತರ ದೊರೆಯು ಬೇಕಾದದ್ದು ಅವಶ್ಯ. ಹಾಗಿದ್ದರೂ ಸರಕಾರ ಏಲಂಬ ಧೋರಣೆಯನ್ನು ಅನುಸರಿಸಿ ಜನತೆಯು ಹೇಳಿಕೆ ಕೇಳಿಕೆಯನ್ನು ಅಲಕ್ಷಿಸುವದು ಸಾಧುವಾಗಲಾರದು.

ಆಡಳಿತವು ಸತ್ಯ ನಿಷ್ಠುರವಾಗಿರಬೇಕು. ಕಟ್ಟು ನಿಟ್ಟುಗಳ ಹಾದಿಯಲ್ಲೇ ಸಾಗಬೇಕು. ಯಾವುದಕ್ಕೆ ಎಷ್ಟುಕಾಲ ಬೇಕೋ ಅಷ್ಟರಲ್ಲೇ ಅದಕ್ಕೆ ತೀರ್ಮಾನ ಸಿಗಬೇಕು, ಇದಕ್ಕೆ ಭಂಗ ತರುವ ಅಧಿಕಾರಿಯನ್ನು ದಂಡಿಸಬೇಕು. ಇಲ್ಲವಾದರೆ ದಕ್ಷತೆ ಉಟೋಗಲಾರದು. ಈ ಮಹಾರೋಗದ ಉಚ್ಚಾಟನೆಯೂ ಅಪಲಾರದು.

ಅನಾವಶ್ಯಕ ವಿಲಂಬದಿಂದಾಗಿ ಸರಕಾರಕ್ಕೆ ಲಕ್ಷಾಂತರ ರೂ.ಗಳ ಹಾನಿ ಸಂಭವಿಸುತ್ತಿದೆ. ಪ್ರಕರಣಗಳನ್ನು ಉದ್ದುದ್ದವಾಗಿ ಬೆಳೆಸಿ, ಸಂಬಂಧಿಸಿದವರಿಗೆಲ್ಲಾ ಭತ್ತೆ ತೆರುವದು ಎಷ್ಟಾಗುತ್ತಿದೆಯೆಂದು ನಮ್ಮ ಪ್ರತಿನಿಧಿಗಳು ಪ್ರಶ್ನೆ ಕೇಳಬೇಕು. ಜನತೆಗೂ ಆಗುತ್ತಿರುವ ಅಪಾರ ತೊಂದರೆಯನ್ನು ತಿಳಿಸಬೇಕು.

ಪ್ರಜಾರಾಜ್ಯ ಬಂತೆಂದು ಬರೀ ಹೆಮ್ಮೆ ಪಡುವದರಿಂದ ಯಾವ ಯುರುಷಾರ್ಥವೂ ಸಾಧ್ಯವಾಗುವದಿಲ್ಲ ರಾಜ್ಯಕ್ಕೆ ಬೇಕಾದಷ್ಟು ಪ್ರತಿನಿಧಿಗಳನ್ನು ಆರಿಸಿ ಸಮರ್ಥ ಸರಕಾರವನ್ನು ಸ್ಥಾಪಿಸುವದೂ ಪ್ರಜೆಯ ಹೊಣೆಯಾಗಿರುತ್ತದೆ. ಇದನ್ನು ಅರಿತು, ಈ ಬಗೆಯಾದ ಮನೋಧರ್ಮವನ್ನು ಪಡೆದ ಪ್ರಜೆಗಳಿಂದಲೇ ಪ್ರಜಾರಾಜ್ಯ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ "ಯಾವ ರಾಜ್ಯ ಬಂದರೂ ಚೋರೆ ಗೌಡನಿಗೆ ರಾಗೀ ಬೀಸುವದು ತಪ್ಪಿದ್ದಲ್ಲ' ಎಂಬಂತಾಗುತ್ತದೆ.

ಪ್ರಚಂಡ ವೀರ ಪುತ್ರ

(ಪದಿವ್ಯಾರನೇ ಪುಟದಿಂದ)

ದನ್ನು ಕಂಡ ವೀರ ಪುತ್ರನ ಹೃದಯವೇ ಒಡೆದಂತೆ ಭಾಸವಾಗಿ, ದುಃಖ ರೋಷಗಳಿಂದ ಬತನು ಹಂತಪ್ಪನಾದನು. ಗದ್ಗದಿತನಾಗಿ ನಿಂತು ಬಿಟ್ಟನು!

ತನ್ನ ಪ್ರಿಯ ಪುತ್ರನ ಶೋಚನೀಯ ಸ್ಥಿತಿಯನ್ನು ಗನುನಿಸಿದ ಆ ವೀರ ಮಾತೆಯು, ಮೂರ್ಖನಾಡಲಾಗದಿದ್ದರೂ, ಅಂತಿಮ ವಾಕ್ಯವಾಗಿ—"ಮಗು! ನಾವು ಮೂವರೂ ನವ್ಯ ಮಾತೃ ಭೂಮಿಯ ರಕ್ಷಣೆಗಾಗಿ ಹೋರಾಡುತ್ತ ಇದೀಗ ನೀರ ಸ್ವರ್ಗಕ್ಕೆ ಹೊರಟಿದ್ದೇವೆ! ನೀನುನಿನ್ನ ಶೇಷದ ಬದುಕಿನಲ್ಲಿ ಪ್ರಾಣವಿರುವ ತನಕವೂ ಮಾತೃ ಭೂಮಿಗಾಗಿ ಹೋರಾಡು! ಆ ಬಳಿಕ ನಮ್ಮೊಡನೆ ಬಂದು ಸೇರಿಕೋ! ಮಗು!' ಎಂದು ಹೇಳಿ ಕೊನೆಯ ಉಸಿರೆಳೆದಳು! ಪುತ್ರನ ವೀರ ಪತ್ನಿ ಹಾಗೂ ಸಹೋದರಿ ಇವರಿಬ್ಬರೂ, ಭೂಮಾತೆಯನ್ನಪ್ಪಿಕೊಂಡೇ ವೀರ ಸ್ವರ್ಗವನ್ನು ಹೊಂದಿದರು! ಈ ವೀರ ದುರಂತ ದೃಶ್ಯ! ಮುಗಿದ ಕೈ! ಮುಚ್ಚಿದ ಕಣ್ಣು! ರಕ್ತದೊಕುಳಿ! ಇದನ್ನು ಕಂಡ ಪುತ್ರನ ದೇಹದಲ್ಲಿ ವಿದ್ಯುತ್ ಸಂಚಾರವಾದಂತಾಯಿತ! ನೈವ-ಳೈದ್ದಿತು! ಹೃದಯ ಕಲ್ಲಾಯಿತು! ಕಣ್ಣು ಕೆಂಡ ಕಾರಿತು! 'ಮಾತೃಭೂಮಿ ನನೋನ್ನನಃ' ಎಂಬ ಪುತ್ರನ ಹೃದಯದಿಂದ ಹೊರಟ ವೀರ ಭಕ್ತಿ ಘೋಷ, ಮರಳಿ ಮರಳಿ ಮೂರ್ದನಿಗೊಟ್ಟಿತು!

ಮತ್ತೆ ಆಲ್ಲಿ ಒಂದು ನಿಮಿಷವೂ ನಿಲ್ಲದೆ, ವೀರ ಪುತ್ರನು ವೀರಮಾರುತಿಯಂತೆ ವೈರಿ ಸೈನ್ಯದ ಮೇಲೆ ಹಾರಿ—'ಹರ ಹರ ಮಹಾದೇವ!" ಎಂಬ ಶಾರದ ಮಂತ್ರ ದೊಡನೆ, ವೈರಿಗಳನ್ನು ತರಿತರಿದು ನೆಲಕ್ಕುರುಳಿಸುತ್ತ ಕೊನೆಗೆ ತಾನೂ ನೆಲಕ್ಕುರುಳಿ ವಿರಮ್ಯ ಭೂಮಿಯ ಸೇವೆಯಲ್ಲೇ ವೀರಸ್ವರ್ಗವನ್ನು ಹೊಂದಿದನು!

"ವಿಶಾಲ ಭೂಮಿಗಿಂತ ಮಿಗಿಲಾದುದು ಬೇರೊಂದಿಲ್ಲ!" ಎಂಬ ಉದಾತ್ತ ಭಾವನೆಯನ್ನು ಕಾರ್ಯರೂಪಕ್ಕೆ ತರಿಸಿ, ಮಾತೃ ಭೂಮಿಯ ರಕ್ಷಣೆಯಲ್ಲಿಯೇ ವೀರ ಸ್ವರ್ಗವನ್ನು ಹೊಂದಿದ ಈ ಕುಟುಂಬದ ಕಥೆ ಭಾರತದ ರಕ್ತ ಸಿಕ್ತ ಇತಿಹಾಸದಲ್ಲಿ ಅಮರವಾಗಿದೆ!

ಪ್ರಕೃತಿ ಮಾತೆಯ ಮಂದಿರ!

ನಿತ್ಯ ನೂತನ ಸುಂದರ!
ಪ್ರಕೃತಿ ಮಾತೆಯ ಮಂದಿರ!!
ಫಲಗ ಗಗನದಿ ಚಂದಿರ!
ಕೆಂಚ.—ಬಿಳುಪಿನ ಮಂದಾರ!!
ರಂಗು ರಂಗಿನ ಚಿತ್ತಾರ!
ಮಧುರ ನೀಡುವ ಕೇದಾರ!
ಡೊಂಕು ಡೊಂಕಿನ ಕುಂಜರ!
ತಾಳೆ—ಬಾಳೆಯ ಕವಿಯುಂಗುರ!
ತಾಯಿ ದೇವಿಯ ಭಂಡಾರ!!
ನಿತ್ಯ ನೂತನ ಸುಂದರ!
ಪ್ರಕೃತಿ ಮಾತೆಯ ಮಂದಿರ!!

—"ಮಲ್ಲಾರಿ"

ಭೂಕೆಂದಾಯ—ಸೆಂದಾಯ

ಭೂಕಂದಾಯ ರದ್ದತಿಯ ಘೋಷಣೆಯಾಗಿರುವದು. ಬಾಕಿ ಕಂದಾಯ ಕರಲೆಂದು ಹಾರಿ ಹುದು ಹಿದ್ದು. ಬಡ ಜನತೆಯನ್ನೆಲಿಸಿ ಮಾಡಿದೆವು ಅಕ್ಷ ಪವನಿ ದಕ್ಕಿದ ಮೇಲೆ ಕಾಗದಪತ್ರ ಕಾಣ

ಪಂಚ ತಾರೆ

ನಗರದಲಿ ಎಲೆ ಎಷ್ಟುವುದು ಪಂಚ ತಾರೆ
ಹಗಣವು ಬೀಡ ಆಕ್ಷಿರಲಿ ಮದ್ಯವು ಬೇಕೆ
ತಾರೆಗಳು ಎಷ್ಟಾದರೇನು ನವ.ಗಿನ್ನು
ಕ್ಷೀರದಾ ಇದಲಿಮುಗೆ ಮದ್ಯವೇ ಚೆನ್ನು.

MODERN GARAGE

Estd. 1948

UDIPI

With

Service Station

attached

Undertakes

Overhauling & Maintenance of BENZ Vehicles

By Benz specialists

And all types of CARS and TRUCKS

By qualified Engineers

Phone 65 234 Residence 180

Telegram "LODGE" Phone: 181

While in Guntur

Stay at

— UDIPI —

SRI KRISHNA BHAVAN

Restaurant

(Boarding & Lodging)

STATION ROAD,

GUNTUR - 1

An Ideal place for

Homely Comforts
Modern Amenities
And
Pleasing Services

Car parking Provided

Surely

A befitting Place to stay

centrally located

A Fine Environment.

ತಾಂಬೆರೆ ಹೂಗಾಯ್ತೇನೆ

(ಹಸ್ಸೆರಡನೇ ಪುಟದಿಂದ)

ಕೆಂದಿರುವಾಗ ಗಂಡ ಏಕೆ ಅಡ್ಡ ಬರಬೇಕು—ಆತ ಸಮ್ಮತಿಯಿತ್ತ—

ಅನೆ ಕುದುರೆ ತೆಕ್ಕ....
ಓಲಗ ತಾಳ ತೆಕ್ಕೆ....
ದಾಯಿಯರ ಗೌಡೇರ ಕರಕ....
ಶಂಕು ಜಾಗಟೆ ತಕ್ಕ....

ಆದರೆ ತನಗೆ ಅಂತಹ ಸಂಭ್ರಮ ಆವಾವುದೂ ಬೇಕಾಗಿಲ್ಲ; ತಾನು ಸಂತೋಷದ ಸುದ್ದಿ ಕೇಳಿ ಹೊರಟವಳಲ್ಲ—

ಅನೆ ಕುದುರೆ ಬೇಡ...
ಶಂಕು ಜಾಗಟೆ ಬೇಡ....
ಒಬ್ಬಳೇ ಹೋಯ್ತೇನೆ....
ಒಬ್ಬಳೇ ಬರುತ್ತೇನೆ....

ಹೀಗೆ ಸತಿ ಹೊನ್ನಮ್ಮ ಮನೆಯಿಂದ ಹೊರಟಳು—

ಒಂದು ಮೆಟ್ಟಿಲಿಳಿವಾಗ....
ಸರ್ಪ ಅಡ್ಡ ಬಂತು...

ಇದನ್ನು ನೋಡಿ ಅತ್ತೆ ಕೇಳಿದಳು.

ಇದೇನೇ ಎಲೆ ಸೊಸೆ...
ಲಕ್ಷಣಾ ಕಾಣ್ತಾದೆ....
ಕಾಡಿಗೆ ಹೋದ ಸರ್ಪ
ಹುತ್ತಿಗೆ ಬರುವಾಗ....
ಅದೊಂದು ಲಕ್ಷಣವೆ?....

ಸತಿ ಹೊನ್ನಮ್ಮ ಆಮೇಲೆ ಮುಂದೆ ಒಂದು ಹೆಜ್ಜೆಯಿಟ್ಟಳು.

ಎರಡು ಮೆಟ್ಟಿಲಿಳಿವಾಗ...
ಬೆಕ್ಕು ಅಡ್ಡ ಬಂತು....
ಇದೇನೇ ಎಲೆ ಸೊಸೆ—
ಹೆರ್ಗೆ ಹೋದ ಬೆಕ್ಕು....
ಒಳ್ಗೆ ಬರುವಾಗ...
ಅದೊಂದು ಲಕ್ಷಣವೆ?...

ಹೊನ್ನಮ್ಮ ಮೂರನೆ ಮೆಟ್ಟಿಲಿಳಿದಳು.

ಮೂರು ಮೆಟ್ಟಿಲಿಳಿವಾಗ....
ನಾದಿ ಅಡ್ಡ ಬಂತು....
ಇದೇನೇ ಎಲೆ ಸೊಸೆ...
ಲಕ್ಷಣಾ ಕಾಣ್ತಾದೆ...
ಕಾಡಿಗೆ ಹೋದೋರು....
ನಾದಿ ಹೊತ್ಕೊಂಡೋದ್ರೆ....
ಅದೊಂದು ಲಕ್ಷಣವೆ?...

ಮತ್ತೆ ನಾಲ್ಕನೆಯ ಮೆಟ್ಟಲಿಳಿದಳು—

ನಾಲ್ಕು ಮೆಟ್ಟಿಲಿಳಿವಾಗ...
ಹೊಸ್ಕಡ್ಗೆ ಅಡ್ಡ ಬಂತು....
ಇದು ಏನೆ ಎಲೆ ಸೊಸೆ....
ಲಕ್ಷಣಾ ಕಾಣ್ತಾದೆ...
ಕುಂಬಾರ್ರ ಮನೆಗೆ ಹೋದೋರು....
ಹೊಸ್ಕಡ್ಗೆ ಹೊತ್ಕೊಂಡು ಹೋದ್ರೆ....
ಅದು ಒಂದು ಲಕ್ಷಣವೆ?...

ಇಪ್ಪೆಲ್ಲಾ ಅಪಶಕುನಗಳನ್ನು ಗಮನಿಸಿಯೂ ಆಕೆ ತವರು ಮನೆಗೆ ಹೊರಟು ಹೋದಳು. ಅಲ್ಲಿಗೆ ತಲಪುವಾಗ ಅವಳನ್ನು ಆಕೆಯ ಅತ್ತೆಗಂದಿರು ನೋಡಿದರು—

ಅಲ್ಲಿಂದ ಎದ್ದಾಳು...
ತೌರಿಗೆ ಹೋದಾಳು....
ಲಕ್ಷಣಾ ಕಾಣ್ತಾವೆ....
ಅಪ್ಪನ ಕಾಲದ ದಾರಿಂದ್ರ...
ಅದು ಸರ್ದು ಹೋದ್ರೆ....
ಅದೊಂದು ಲಕ್ಷಣವೇ...

ಮಂಚದಲ್ಲಿ ಕುಂಡ್ರುವಾಗ....
ಮಂಚದ ಕಾಲು ಕುಂಡಾಯ್ತು....
ಇದು ಏನೆ ಎಲೆ ಮಗಳೆ....
ಲಕ್ಷಣಾ ಕಾಣ್ತಾವೆ....
ಅಜ್ಜನ ಕಾಲ್ದ ಮಂಚ....
ಅದು ಕಾಲ್ತುಂಡಾದ್ರೆ....
ಅದೊಂದು ಲಕ್ಷಣವೇ....

ಹೀಗೆ ಹೋದ ಹೋದಲ್ಲಿ ಅಪಶಕುನ ಆಗುತ್ತಿದ್ದರೂ, ಹೊನ್ನಮ್ಮ ತನ್ನ ಎದೆಯ ಆಳಲನ್ನು ಯಾರೊಡನೆಯೂ ಹೇಳಲೊಲ್ಲಳು.

ಅಲ್ಲಿಂದ್ಲು ಎದ್ದಾಳು....
ಕಂಚಿ ಬುಡಕೆ ಹೋಗಾಳು....
ಕಡ್ಗಣ್ಣ ನೀರು ತೆಗೆದಾಳು...

ಅತ್ತಿಗೆಯ ದುಃಖ ನೋಡಿ ಮನೆ ಹೆಂಗುಸು ಪ್ರಶ್ನಿಸುತ್ತಾಳೆ:

ಇದು ಏನು ಅತ್ಗೆಮ್ಮ....
ಕಣ್ಣಿಗೆ ನೀರು ಬರುತೇತೆ?....

ಅವಳಿಗೇನೋ ಉತ್ತರವೀಯುತ್ತಾಳೆ:

ಅಜ್ಜನ ಕಾಲ್ದ ಕಂಚಿ ನೋಡ್ವಾಗ
ಕಣ್ಣಿಗೆ ನೀರು ಬರುತೇತೆ...

ಆ ಮೇಲೆ—

ಅಲ್ಲಿಂದು ಹೋಗಾಳು....
ನಿಂಬೆ ಬುಡ್ಕೆ ಹೋಗಾಳು...
ಕಡ್ಗಣ್ಣ ನೀರು ತೆಗೆದಾಳು....
"ಇದೇನು ಅತ್ಗೆಮ್ಮ ...
ಕಣ್ಣಿಗೆ ನೀರು ಬರುತೇತೆ'....
ಅಜ್ಜನ ಕಾಲ್ದ ನಿಂಬೆ ನೋಡ್ವಾಗ...
ಕಣ್ಣಿಗೆ ನೀರು ಬರುತೇತೆ....

ಮತ್ತೆ—

ಅತ್ತಿಂದು ಬಂದಾಳು....
ಅತ್ಗೆಮ್ಮ ಬಾಯಿತ್ತಾರೆ...

ಎಂದು ಕೆಲವರು ತವಕಪಟ್ಟರೆ, ಕೆಲವರಂದರು—

ಅತ್ಗೆಮ್ಮ ಆಗಿದ್ರೆ....
ಓಲಗ ತಾಳವಿರುತಿತ್ತು....

ಒಬ್ಬಳೇನೆಂದಾಳು....
ಅತ್ಗೆಮ್ಮ ಆಗಿದ್ರೆ....
ಆನೆ ಕುದ್ರೆ ಇರುತಿತ್ತು—
ಒಬ್ಬಳೇನೆಂದಾಳು:
ಅತ್ಗೆಮ್ಮ ಆಗಿದ್ರೆ....
ಶಂಕು ಜಾಗಟೆ ಇರ ಲಿತ್ತು ...
ಒಬ್ಬಳೇನೆಂದಾಳು....
ಅತ್ಗೆಮ್ಮ ಆಗಿದ್ರೆ...

ಓಲಗ ತಾಳ ಇರುತಿತ್ತು....
ಒಬ್ಬಳೇನೆಂದಾಳು....
ಅತ್ಗೆಮ್ಮ ಆಗಿದ್ರೆ...
ದಾಯಿಯರು ಗೌಡೇರು ಇರುತಿದ್ರು...
ಒಬ್ಬಳೇನೆಂದಾಳು:
ಸಿಟ್ಟಿನಲಿ ಬರುತಾರೊ...
ಕೋಪದಲಿ ಬರುತಾರೊ....

ಹೀಗೆ ತಮ್ಮ ಕಪ್ಪೊಳಗೆ ನೂತನಾಡುತ್ತಿದ್ದಂತೆ ಹೊನ್ನಮ್ಮ ತವರು ಮನೆಗೆ ಮುಟ್ಟಿದಳು. ಮನೆ ಹೆಂಗುಸರಲ್ಲಿ ಒಬ್ಬಳು ಬಂದು ಹಾಲ್ಕೀರು ಕೊಟ್ಟಳು—

ಅತ್ತಿಂದು ಬಂದಾಳು....
ಹಾಲ್ಕೀರು ತೆಕ್ಕೋಡ್ಲು...
ಹಾಲ್ಕೀರು ತೆಗಿವಾಗ...
ಹೆಂವಾಣ ನಿಗ್ತೇನಾಯ್ತು....
ಕಾಲಿಗೆ ನೀರು ಹಾಕ್ವಾಗ...
ಗಿಂಡಿ ನಿಗ್ತೇನಾಹುತ್ತು...
ಇದು ಏನು ಲಕ್ಷಣವೆ?...
ಒಳ್ಗೆಗೆ ಹೋಗ್ವಾಗ—
ದಾಂಬ್ರ ಜರದಾವು...

ಇದನ್ನೆಲ್ಲಾ ನೋಡಿದ ಆಕೆರು ತಾಯಿಗೆ ವ್ಯಥೆಪಡುಯಿತು:

ಇದು ಏನೆ ಎಲೆ ಮಗಳೆ ...
ದನಗಳ ಹಟ್ಟಿಗೆ ಹೋದಾಳು....
ಕಡ್ಗಣ್ಣ ನೀರು ತೆಗೆದಾಳು ..
'ಇದು ಏನು ಅತ್ಗೆಮ್ಮ...
ಕಣ್ಣಿಗೆ ನೀರು ಬರುತೇತೆ'....
ಅಪ್ಪನ ಕಾಲ್ದ ದನಗಳು ನೋಡ್ವಾಗ..
ಕಣ್ಣಿಗೆ ನೀರು ಬರುತೇತೆ...

ಮುಂದೆ—

ಅಲ್ಲೀದ ಬಂದಾಳು....
ಕೋಣ್ಗೋಳ ಹಟ್ಟಿಗೆ ಹೋದಾಳು...
ಕಡ್ಗಣ್ಣ ನೀರು ತೆಗೆದಾಳು...
'ಇದೇನು ಅತ್ಗೆಮ್ಮ...
ಕಣ್ಣಿಗೆ ನೀರುಬರ್ತೇತೆ.."
"ಅಜ್ಜನ ಕಾಲ್ದಕೋಣ ನೋಡ್ವಾಗ...
ಕಣ್ಣಿಗೆ ನೀರು ಬರ ತೇತೆ...

ಹೀಗೆ ಎಲ್ಲಿ ನೋಡಿದರೂ ಯಾವುದನ್ನು ನೋಡಿದರೂ ತವರುಮನೆಯಲ್ಲಿ ಆಕೆಗೆ ಕಣ್ಣೀರೇ ಹರಿಯಿತು: ಮತ್ತೆ ತಂಗಿ ಅಣ್ಣಂದಿರು ಊಟಕ್ಕೆ ಕುಳಿತರು:

ಅಲ್ಲಿಂದು ಒಂದಾಳು...
ಎಳ್ಕಂದಿ ಅಣ್ಣಂದಿರನು...
ತಂಗಿಯವ್ವನು ಊಟಕೆ
ಕುಳಿತಾರು....
ಒಂದು ತುತ್ತುಯಿವಾಗ....
ತಲೆ ಕೂದ್ಲು ಬಂದೀತು....
'ಇದು ಏನೆ ಎಲೆಮಗಳೆ....

ಒಕ್ಕಾಣಿ ಕಾಣ್ತಾವೆ....
ಅಕ್ಕೀನೇ ತೊಳೆವಾಗ....
ಕೂದ್ಲೂನೇ ಹಾರೋದ್ರೆ....
ಅದೊಂದು ಲಕ್ಷಣವೇ"....
ಎರಡು ತುತ್ತುಣ ವಾಗ...
ಮಸಿ ಕೆಂಡ ಬಂದೀತು...
'ಇದು ಏನೇ ಎಲೆ ಮಗಳೇ....
ಲಕ್ಕಾಣಾ ಕಾಣ್ತಾವೆ.
ಬೆಂಕೀನೆ ಬಟ್ಟುವಾಗ ...
ಮಸಿ ಕೆಂಡ ಹಾರೋದ್ರೆ....
ಅದೊಂದು ಲಕ್ಷಣವೇ"....
ಮೂರು ತುತ್ತುಣವಾಗ...
ಬತ್ತಾನೇ ಬಂದೀತು....
"ಇದು ಏನೆ ಎಲೆ ಮಗಳೇ...
ಲಕ್ಷಣಾ ಕಾಣ್ತಾವೆ
ಅಕ್ಕಿ ಯೊಳಗಿನ ಬತ್ತ....
ಸರಿಯಾಗಿ ಹೆಕ್ಕಿದ್ರೆ...
ಅದೊಂದ ಲಕ್ಷಣವೇ'....
ನಾಲ್ಕು ತುತ್ತುಣವಾಗ....
ಕಲ್ಲಾದ್ರು ಬಂದೀತು....
"ಇದು ಏನೇ ಎಲೆ ಮಗಳೇ...
ಲಕ್ಷಣಾ ಕಾಣ್ತಾವೆ....
ಅಕ್ಕಿಯೊಳಗಿನ ಕಲ್ಲು...
ಅದೂನೇ ಹೆಕ್ತಾದ್ರೆ....
ಅದು ಒಂದು ಲಕ್ಷಣವೇ"

ಹೀಗೆ ಹೇಗೋ ಊಟದ ಶಾಸ್ತ್ರ ಮುಗಿಯಿತು. ಮನದಲ್ಲಿ ಎಲ್ಲರಿಗೂ ದುಗುಡವೇ. ತಂಗಿ ಗಂಡನ ಮನೆಗೆ ಹೊರಟಾಗ—

ಎಳ್ಕಂದಿ ಅಣ್ಣಂದಿರಿಗೂ...
ಕಾಲಿಗೆ ಬಿದ್ದಾಳು....
ಆಯುಷ್ಮಂತಾಳಾಗ್ತೆಂಗೀ....
ಆಯುಷ್ಯವೃಳ್ಳವಳಾಗು....
ನಮ್ಮಾಯುಷ್ಯ ನಿನಗಾಗ್ಲಿ....
ನಿಮ್ಮಾಯುಷ್ಯ ಳಿನವಾಗ್ಲಿ....

ಹೀಗೆ ಅಣ್ಣಂದಿರು ತಂಗಿಯನ್ನು ಹರಸಿದರು; ಆಕೆಯೂ ಅವರ ಆಯುಷ್ಯ ಳಿನವಾಗಲೆಂದು ದೇವರನ್ನು ಬೇಡಿಕೊಂಡಳು. ಅನಂತರ

ಎಳ್ಕಂದಿ ಅತ್ಗೆಗೆದಿರಿಗು...
ಕಾಲಿಗೆ ಬಿದ್ದಾಳ ...
ಆಯುಷ್ಮಂತಾಳಾಗಿ ಅತ್ಗೆಮ್ಮ....
ಆಯು.ಷ್ಮಳ್ಳವಂತಾಗಿ....
ನಮ್ಮಾಯುಷ್ಯ ನಿಮಗಾಗ್ಲಿ...
ನಿಮ್ಮಾಯುಷ್ಯ ಳಿನವಾಗ್ಲಿ....

ಅನಂತರ ಮಗಳು ತಾಯಿಗೆ ಪೊಡಮಟ್ಟಳು

ತಾಯವ್ವ ಕಾಲಿಗೆ ಬಿದ್ದು...
ಆಯುಷ್ಮಂತಳಾಗು ಮಗಳೇ....
ಆಯುಷ್ಯವೃಳ್ಳವಳಾಗು...
ನಮ್ಮಾಯುಷ್ಯ ನಿನಗಾಗ್ಲಿ....
ನಿಮ್ಮಾಯುಷ್ಯ ಳಿನವಾಗ್ಲಿ...

ಹೀಗೆ ಹರಕೆ ಪಡೆದು ಬೀಳ್ಕೊಟ್ಟ ಹೊರಟವಳ ಜತೆಗೆ ಎಳ್ಕಂದಿ ಅಣ್ಣಂದಿರೂ ಬಂದರು. ಅನೆ, ಕುದುರೆ ವಾಲಗ ಸಹಿತ ತಂಗಿ ಜತೆಯಲ್ಲಿ ಬಂದರು.

ಎಳ್ಕಂದಿ ಅಣ್ಣಂದಿರಿಗು ಕರ್ಕೊಂಡ್ಲು...
ಮನೆಗಾದ್ರು ಬಂದಾಳು....
ಆನೆ ಕುಳ್ಗೆ ತೆಕ್ಕೋಡ್ಲು...
ಶಂಕು ಜಾಗಟೆ ತೆಕ್ಕೊಂಡ್ಲು....
ಓಲಗ ತಾಳ ತೆಕ್ಕೊಂಡ್ಲು...
ದಾಯಿಯರು ಗೌಡೇರು ಕರ್ಕೊಂಡ್ಲು

ಇಂತು ಸಂಭ್ರಮದಿಂದೆ ಬಂದು ನೀರಿಲ್ಲದ

V. M. Hegde, Bijjal
P. O Wajgod, Tq. Siddapur (N. K)

ರಬ್ಬರ್ ಸ್ಟಾಂಪುಗಳು!!

ನಿಮಗೆ ಬೇಕಾಗುವ ಎಲ್ಲಾ ನಮೂನೆಯ
ಅಂದವಾದ ರಬ್ಬರ್ ಸ್ಟಾಂಪುಗಳಿಗೆ
ನವ್ಮಲ್ಲಿ ವಿಚಾರಿಸಿರಿ:-

VINAYAKA STAMPS

ಇಂಗ್ಲೀಷ್, ಕನ್ನಡ, ಹಿಂದಿ, ತಮಿಳು ಭಾಷೆಗಳಲ್ಲಿ

ನಿಮ್ಮ ಮನ ಒಪ್ಪುವಂತೆ ಒದಗಿಸುವ್ರೇವೆ.
ವಿವರಗಳಿಗೆ ರಿಪ್ಲೈ ಕಾರ್ಡು ಇಟ್ಟು ಸೀಲಿನ ವಿಳಾಸಕ್ಕೆ ಬರೆಯಿರಿ.

ಐ. ಮಸರಿತಕಮಾರಿ, ಬಿ. ಎಸ್‌ಸಿ.

ಸಮಾಜದ ಏಳಿಗೆಯಲ್ಲಿ ಸ್ತ್ರೀಯ ಪಾತ್ರ

ಗೃಹಿಣಿಯಾದವಳು ಮನೆಯ ಸರ್ವತೋಮುಖ ಏಳಿಗೆಗಾಗಿ ಗೃಹಸ್ಥನಿಗೆ ಸಮಜೋಡಿಯಾಗಿ ದುಡಿಯಬೇಕಲ್ಲದೆ, ಸಂಸಾರವನ್ನು ಅಧಃಪತನಕ್ಕೆ ಗಾ ಡಿ ಪಡುವಂತೆ ವಿಲಾಸ—ಭೋಗ ವಸ್ತುಗಳನ್ನು ಬಳಸುವುದಲ್ಲ. ದೇಶ—ಸಮಾಜಗಳನ್ನು ಅರಿತು ಸರಿದಾರಿಯಲ್ಲಿ ಸಂಸಾರವನ್ನು ನಡೆಸುವಲ್ಲಿ ಪುರುಷ—ಸ್ತ್ರೀಯರು ಒಂದಾಗಿ ದುಡಿಯಬೇಕು.

ಸಂಸಾರಜವು ಹಲವು ಸಂಸ್ಕೃತ ಸಂಸಾರ ಗಳ ಕೂಟ. ಜೀವನ ಸಂಗ್ರಾಮದಲ್ಲಿ ಸಂಸಾರವೊಂದು ರಥ. ಇದರಲ್ಲಿ ಪುರು ಷನು ರಥಿಕ; ಸ್ತ್ರೀಯು ಸಾರಥಿ. ರಥದ ನಾಲ್ಕು ಕುದುರೆಗಳು ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಪುರು ಷಾರ್ಥಗಳು. ಇವರ ನಾಲ್ಕು ಚಕ್ರಗಳು ಸಾಮ, ದಾನ, ಭೇದ, ದಂಡಗಳೆಂಬ ಚತುರೋಪಾಯ. ಸ್ನೇಹವೇ ಭಾರತೀ ಯ ಸಂಸ್ಕೃತಿಯನ್ನು ಪೋಷಿಸುವ ಗ್ರಂ ಥರಾಶಿ. ದಂಪತಿಗಳು ಇವುಗಳ ಬೆಂಬಲ ದಿಂದ ಜೀವನ ಸಮರದಲ್ಲಿ ಜಯಶಾಲಿ ಗಳಾಗಬೇಕು. ಇದುವೇ ಜೀವನ! ಈ ಗುರಿಯನ್ನು ಪೋಷಿಸುವ ಸಮಾಜವೇ ಸಶ್ಯಮಾಜ!

ಸಂಸಾರವು ಸುಖಮಯವಾಗಬೇಕಾ ದರೆ ರಥಿಕ—ಸಾರಥಿಗಳಾದ ದಂಪತಿ ಗಳು ಶ್ರೀಕೃಷ್ಣಾರ್ಜುನರಂತಿರಬೇಕು; ಸ ಮತ್ವದಲ್ಲಿ ನರನಾರಾಯಣರಂತಿರಬೇ ಕು; ಶಲ್ಯ ಕರ್ಣರಂತಿರಬಾರದು. ಇಲ್ಲಿ ಸಾರಥಿಯ ಸ್ಥಾನ ಕೆಳಗೆ, ರಥಿಕನ ಮಟ್ಟ ಮೇಲಿನದೆಂದಿಲ್ಲ. ಸಾರಥಿಯ ದೌರ್ಬಲ್ಯ ದಿಂದ ಕರ್ಣಾರ್ಜುನಾದಿಯಾದಂತೆ ಸ್ತ್ರೀಯ ಅಸಂಸ್ಕೃತಿಯಿಂದ ಸಂಸಾರದ ಅಧಃಪ ತನವಾಗುವುದು. ರಥಿಕನ ಯಶಸ್ಸಿಗೆ ಸಾರಥಿಯೇ ಮುಖ್ಯ ಕಾರಣ. ಇಲ್ಲಿದ್ದಿ ರೆ ಗೃಹಸ್ಥನ ಕರ್ತವ್ಯದಕ್ಷತೆಯು ನೀರಿ ನಲ್ಲಿ ಪೂಡಿದ ಹೋಮದಂತಾಗುವುದು. ಮನುವು ಆದಕ್ಕಾಗಿಯೇ 'ಗೃಹಿಣೀ ಗೃಹ ಮುಚ್ಯತೇ' ಎಂದು ಘೋಷಿಸಿದುದು.

ಸಮಾಜದ ಉನ್ನತಿಗೆ ಪ್ರತಿ ಯುಗದ ಲ್ಲೂ ಕೆಲವು ತೊಡಕುಗಳಿದ್ದುವು. ಹಿಂದೆ ಬಾಲ್ಯವಿವಾಹ, ಸತೀ ಸಹಗಮನ, ಬಹು ಪತ್ನಿತ್ವಗಳು ಸಮಾಜದ ತಲೆ ತಿನ್ನುವ ಕೆಲವು ರೋಗಗಳಾಗಿದ್ದರೆ, ಇಂದು ಬಡ ತನ, ವರದಕ್ಷಿಣೆ ಅತಿ ಸಂತಾನಗಳೆಂಬಹ ಪೆಡಂಭೂತಗಳು ಇದನ್ನು ಬೆದರಿಸುತ್ತಿ ವೆ. ಈ ದುಷ್ಟ ಶಕ್ತಿಗಳನ್ನು ಹಡೆಗಟ್ಟಲು ಇಂದು ಸಂಘಶಕ್ತಿ—ಸುಶಿಕ್ಷಿತ ಸ್ತ್ರೀಯರ ನ್ನು ಸಂಘಟಿಸುವುದರಿಂದ ಮಾತ್ರ ಸಾಧ್ಯ. ಕಾನೂನುಗಳಾಗಲೀ, ಲೇಖನ ಭಾಷಣ ಗಳಾಗಲೀ ಈ ಸಮಾಜದ ಬಾಲಗ್ರಹಕ್ಕೆ ಸಾಕಷ್ಟು ಉತ್ತಮ ಔಷಧಗಳಾಗಲಾರ ವು. ಸ್ತ್ರೀಯರು ಭಾರತ ಸಂಸ್ಕೃತಿಯ ದು ರ್ಗದ ಹಿಡಿತದಲ್ಲೇ ಬಾಳುವೆಯನ್ನು ಸಾ ಗಿಸುವುದು ಇಂದು ಮುಖ್ಯವಾದದ್ದು. ಈ ಗ ಬಾಹ್ಯಾಡಂಬರಕ್ಕೆ ಮನಸೋತ ಸ್ತ್ರೀ ಶೃಂಗಾರ ಸಾಧನಗಳಿಗಾಗಿ ಹಣವನ್ನು ಹೊಳೆಯಂತೆ ಹರಿಯಿಸತೊಡಗಿದ್ದಾಳೆ. ಸಿ ನೆಮಾ ನಟಿಯರನ್ನೋ, ಅಥವಾ ಕೆಲವು ಬುದ್ಧಿಗೇಡಿಗಳನ್ನೋ ಅನುಸರಿಸ ಹೋ ಗಿ ಇಂದಿನ ಹಲವು ಸ್ತ್ರೀಯರ ಸಂಸಾರ ನಾಕೆಗಳೇ ಬುಡಮೇಲಾಗ ತೊಡಗಿವೆ. ಸಾರಾಂಶ—ಸ್ತ್ರೀಯು ಪತಿಯ ಆದಾಯ ವನ್ನು ಗಮನಿಸದೆ ಮಯೂರ ಜೀವನವ ನ್ನು ನಡೆಸಲು ಹೋಗಿ ಆವನನ್ನು ಸಮಾ ಜದಲ್ಲಿ ಹಸುರಗೊಳಿಸುತ್ತಿದ್ದಾಳೆ. ಸಂಸಾ ರದಲ್ಲಿ ಸ್ವಲ್ಪವಾದರೂ ಶಾಂತಿ ದೊರಿಸು ಲೆಂದು ಬೇಕಾದ ಹಣಕ್ಕಾಗಿ ಪತ್ನಿಯು ಉತ್ತೇಜನದಿಂದ ಧರ್ಮ, ನ್ಯಾಯ, ನೀತಿಗ ಳನ್ನು ಮೂಲೆಗೊತ್ತಬೇಕಾಗುತ್ತದೆ. ಇಂ ದು 'ಆಡಂಬರದ ಬೀರಿ'ಗಳಿಗಾಗಿಯೇ ಪ ಡೆದ ಸಾಲದ ಪರಿಣಾಮದಿಂದ ಬೆಳೆಯು ವ ಬೇಂಕುಗಳನ್ನು ಕಂಡು ಯಾರಿಗೆ ದುಃ ವೆನಿಸದು?

ಹಲವರು ವಿದ್ಯಾವತಿಯರಾದ ಸ್ತ್ರೀ ಯರು ಕಮ್ಮಿ ಪೋಜಿನ ಜೀವನವನ್ನು ಕುಂಬಲು ದುಡಿಮೆಗೆ ತೊಡಗಿರುವರು. ಕೆ ಲಸ ಸ್ತ್ರೀಯರು ದುಡಿಯಲಾರದೆ ಪೋ ಜಿನ ಜೀವನವನ್ನು ಪೂರ್ತಿ ಹಾಳ್ಮೆ ಸಿ ಪು ರುಷರ ಜೀವನದಲ್ಲಿ ಕಷ್ಟಗಳ ಪರಂಪರೆ ಯನ್ನೆ ಹೆಚ್ಚಿಸುತ್ತಿರುವರು. ಆದರೆ ನರಕ ಜೀವನ ಈ ಸಂಕ್ರಮಣ ಕಾಲದಲ್ಲಿ ಬೇ ಯುವ ಸ್ತ್ರೀಯರು ದುಡಿಮೆಯ ರಂಗಕ್ಕೆ ಧುಮುಕಲು ಮಿನ ಮೇಷವನ್ನೆಣಿಸಬಾ ರದು. ಸದ್ಯ ಭಾರತಕ್ಕೆ ಧನವೇ ದೇವರು ಸಂಸತ್ತೇ ಸಾಖವಾಗಿದೆ. ಈ ಸಂಪಾದನೆ ಯೂ ಧರ್ಮದ ಕಟ್ಟುಪಾಡನ್ನು ವಿಂರ ಬಾರದು.

ಇಂದಿನ ಸ್ತ್ರೀ ಸಮಾಜದ ಅಶ್ಯಪ್ತಿಗೆ ಹಲವು ಸ್ತ್ರೀಯರ ಮೈಮೇಲಿರುವ ಅಸಂ ಖ್ಯ ಸ್ವರ್ಣಾಭರಣಗಳೂ ಒಂದು ಕಾರಣ. ಇದು ದೀನ ದಲಿತ ಸ್ತ್ರೀಯರ ಅಶಾಂತಿಗೆ ಕಾರಣ ಮಾತ್ರವಲ್ಲದೆ ಆರ್ಥಿಕ ದೃಷ್ಟಿ ಯಿಂದ ಕೊಳೆಯುವ ಧನವಾಗಿದೆ. ಇವ ನ್ನು ಸ್ವಂತ ಇಚ್ಛೆಯಿಂದಲೇ ಉತ್ತಮ ಉ ದ್ಯಮಗಳಿಗೆ ಬಳಸಿದರೆ ದೇಶದ ಆರ್ಥಿಕ ದಾರಿದ್ರ್ಯಕ್ಕೆ ಉತ್ತಮ ಚಿಕಿತ್ಸೆಯೂದಂ ತಾಗುವುದು. ಅದಕ್ಕಾಗಿ ಇಂದಿನ ವಿದ್ಯಾ ವತಿಯರಾದ ಸ್ತ್ರೀಯರು ಸ್ತ್ರೀ ಸಮಾಜದ ನೈಮ್ಮದಿಗಾಗಿ ಸಾಧ್ಯವಾದಷ್ಟು ಕಡಿಮೆ ಆಭರಣಗಳನ್ನು ಧರಿಸುವುದುತ್ತಮ. ಇ ದೂ ವರ್ತಮಾನ ಕಾಲದ ಸ್ತ್ರೀಯರ ಒಂ ದು ಸೇವೆ.

ವರದಕ್ಷಿಣೆಯು ಇಂದು ಕಾನೂನಿ ನಿಂದ ಬಹಿಷ್ಕರಿಸಲ್ಪಟ್ಟಿದ್ದರೂ ವರಪಿಗೆ ಬಹುಮಾನವೆಂಬ ಹೆಸರಿನಿಂದ ಅದು ವೇ ಷ ಮಾರಿಸಿ ತಲೆ ಎತ್ತಿದೆ! ಸರಕಾರ ಎಷ್ಟೇ ನಿರ್ಬಂಧಗಳನ್ನು ಸಮಾಜದ ಮೇಲೆ ಹೇ ರಿದರೂ ಸಮಾಜವು ನೇಪಾಂತರದಿಂದ ತಪ್ಪ ಬೇಳೆಯನ್ನು ಬೇಯಿಸಿಕೊಂಡೇ ತೀ ರುವುದು. ವರದಕ್ಷಿಣೆ ತೆರಲಾರದೆ ಎ ಷ್ಟೋ ಮಂದಿ ಕನ್ಯೆಯರು ಕಾಲನರಮ ನೆ ಗೆ ಅತಿಥಿಗಳಾಗುತ್ತಿರುವರು. ಎ ಷ್ಟೋ ಕನ್ಯೆಯರ ಪೂರ್ತಾಪಿತರು ದುಃಖ ಸಾಗರದ ತಳದಲ್ಲಿ ಹೊತ್ತು ಹೊಗಿ ಆತ್ಮ ಹತ್ಯೆಗೆ ಸಿದ್ಧರಾಗುತ್ತಿದ್ದಾರೆ. ವಿವಾಹ ನೇದಿಕೆಯನ್ನೇರಿದ ವರರೇ ನೀವು ಪೌರು ಷವುಳ್ಳವರಂದುದರಿಂದಲೇ ಪುರುಷರೆಂದು ಕರೆಯಲ್ಪಡುವಿರಂತೆ! ನೀವು ಗಾಂಧೀಜಿ ಮತ್ತು ನೆಹರುಗಳ ಅನುಯಾಯಿಗಳಂತೆ! ಕಾಲೇಜಿನಲ್ಲಿ ಸಮಾಜೋದ್ಧಾರದ ಕು ತು ಹಲವು ಭಾಷಣಗಳನ್ನು ಬಿಗಿದವ ರು! ಲೇಖನಗಳ ದ್ವಾರಾ ಭಾರತವನ್ನ ಮೇಲೆತ್ತಲು ಪಣತೊಟ್ಟವರಂತೆ! ಸ್ತ್ರೀ ಯ ಹಣಕ್ಕಾಗಿ ನಿಸ್ಸಂಕೋಚದಿಂದ ಕೈ ನೀಡುವ ನಿಮಗಾಗಲೀ, ನಿಮ್ಮ ಹಿರಿ ರಿಗಾಗಲೀ ಏನೆನ್ನಲಿ? ಒಂದು ಗುಂ ತೂರವಾದರೂ ಪೌರುಷವಿದ್ದವನು ಸ್ತ್ರೀ ಯಿಂದ ಹಣವನ್ನು ಕೈನೀಡಿ ಪಡೆಯುತ್ತ ನೇ? ಓದುವುದು ಶಾಸ್ತ್ರ, ಡಾಕುವುದ ಗಾಳ.

ಇಂದು ಸಮಾಜದ ಅಶಾಂತಿಗೆ ಹಣ ಆಥವಾ ಒಂದು ಶ್ರುಥಲ ಕಾರಣವೆನ್ನಲ ಸಂದೇಹವಿಲ್ಲ. ಇದಕ್ಕೆ ಸ್ತ್ರೀಯು ಉ ದ್ಯೋಗವನ್ನಾಶ್ರಯಿಸುವುದರಿಂದಲೂ, ಸ್ವ ಗೃಹ ಕಾರ್ಯಗಳನ್ನು ತಾನೇ ಪ ರೈಸಿಕೊಳ್ಳುವುದರಿಂದಲೂ ಪರಿಹರಿಸ ಸಾಧ್ಯವಿದೆ. ಜೆಲುವಿನಬೀಬಿಯಜೀವನ ಸಂಸಾರದದಾರಿದ್ರ್ಯಕ್ಕೆಂದುಕಾರಣ ಟ್ಟುವುದು, ಒಗೆಯುವುದು, ಪಾಕಕಾ ರ್ಯ—ಇವೆಲ್ಲಾ ಸ್ತ್ರೀಯರ ಉತ್ತಮ ವ್ಯಾಯಾಮಗಳು.

ಸಂಸಾರದಲ್ಲಿ ದುಂದುವೆಚ್ಚಗಳ ವ್ಯ ಪಕತೆಗೆ ಸ್ತ್ರೀಯರೇ ಕಾರಣ. ಸ್ತ್ರೀ ಯರ ಸಂಯಮ ಜೀವನದಿಂದ ಸಂಸಾ ದ ಎಷ್ಟೋ ಕಷ್ಟಸಷ್ಟಗಳು ಪರಿಹಾ ರವಾಗುವುವು. ಮದುವೆ, ಉಪನಯ ಮೊದಲಾದ ಕಾರ್ಯಗಳಲ್ಲಿ ಕಮ್ಮಿ ಲೋಪ ಬಾರದಂತೆ ಹಿತಮಿತವಾಗಿ ಚ್ಚ ಮಾಡುವುದರಲ್ಲಿ ಸ್ತ್ರೀಯ ಸಲ್ಲ ಯ ಶಂಬಾ ಪ್ರಯೋಜನಕರವಾ ದುದು.

ಇನ್ನೊಂದು ಭಾರತದ ಕ್ಲಿಷ್ಟ ಸ ಸ್ಯೆಯೇ ಅತಿಸಂತಾನ. ಈ ಕುರಿತು ಸ ಕಾರವು ಹಲವು ಯೋಜನೆಗಳನ್ನೇರ್ಪಡಿ ಸಿದೆ. ಈ ಯೋಜನೆಯಿಂದ ಭಾರತ ಮೇಲೆ ದುಷ್ಪರಿಣಾಮವಾಗಲಿದೆ ಎಂದ ಬಲ್ಲವರು ಹೇಳುತ್ತಾರೆ. ಈ ಸಂತ ನಿಯಂತ್ರಣವನ್ನು ಇಂದು ಭಿಕ್ಷುಕರು ಮುಸ್ಲಿಮರೂ, ಕ್ರೈಸ್ತರೂ ಒಪ್ಪದಾ ದ್ದಾರೆ. ಯೂರು ಇಂದಿನ ವ್ಯಕ್ಯಳ ಪಕ್ಷ ವಾಲಷ್ಟು ಹೆಚ್ಚಾದರೂ ಎದೆಗೆಡಬೇಕಾ ಲ್ಲವೋ ಆ ಸ್ತ್ರೀ ಪುರುಷರೇ ಇಂದು ಸಂ ತಿ ನಿಯಂತ್ರಣದ ಮುಂದಾಳಾಗಿದ್ದಾರೆ ಯೂರು ಉಪವಾರವನವಾಗಳಿಂದ ದಿ ನೂಕಾತ್ತಿದ್ದಾರೋ ಅವರು ಮಕ್ಕಳಿಂ ಮನೆ ತುಂಬಿಸಿ ಕೊಳ್ಳತ್ತಿದ್ದಾರೆ. ಭಾರತಷ್ಟು ಸುಸಂಸ್ಕೃತ ಮೇಧಾವಿ ನಾಂಗದ ಸಂತಾನ ನಿಯಂತ್ರಣ ಕಸುವ ಬದಲಿಗೆ, ದೀನ ದಲಿತರ ಕಡೆ ಪ್ರಥಮ ಗಮನ ಹರಿಬೇಕಿತ್ತು. ವಿ ವು ಮೇಧಾವಿಗಳ, ಪ್ರತಿಭಾವಂತರ ಸಂಖ್ಯೆತೆಯಿಂದ ಕಿಕ್ಕಿರಿದಷ್ಟೂ ದೇಶ ಹಿತವೇ ಆಗುವುದು. ಈ ಭಾಗದಲ್ಲಿ ಭಾರತವು ಜಪಾನಿನಂತೆ ನೋಡುವ ಸ್ತ್ರೀಯರನ್ನೇ ಹೊಂದಿಕೊಂಡಿದೆ.

ಧರ್ಮ ನೀತಿಗಳನ್ನು ಮೂಲೆಗೊತ್ತ ಭಾರತದಲ್ಲಿ ಇಂದು ಯಾವ ಯೋಜನೆ ಯೂ ಸಫಲವಾಗುತ್ತಿಲ್ಲ!

ಕೆರೆಸುತ್ತು ಅವರನ್ನು ನಿಲ್ಲಿಸಿದಳು. ಊರ ವರೆಲ್ಲಾ ಬಂದು ಸೇರಿದರು.

ಎಲ್ಲಂದಿ ಅಣ್ಣಾದಿರಿಗೂ...
ಕೆರೆ ಸುತ್ತು ಸಿಲಿಸಾಳು....

ಎಲ್ಲವನ್ನು ಕರೆದು, ದೇವರನ್ನು ನೆನೆದು ಹೇಳುತ್ತಾಳೆ.

ತಾವರೆ ಹೂಗಾಯ್ತೀನೆ....
ತಾವರೆ ಹೂಗಾದ್ವಾಗ....
ಅದು ಕೈಕೊಂಡ್ಹೋಗಿ....
ಗಿಂಡೀ ಪೂಜೆ ಮಾಡಿ....

ಹೀಗೆ ಮಾಡಿದಲ್ಲಿ ನೀರು ತುಂಬುತ್ತದೆ ಯೆಂದು ಹೇಳಿದವಳೇ ಆತ್ಮಹುತಿಗೆ ಸಿದ್ಧ ಳಾಗಿ—

ಹಾಗಾದ್ರು ಹೇಳಾಳು....
ಕೆರೆ ಪೂಜೆ ಮಾಡಾಳು....

ಕೆರೆ ಪೂಜೆಮಾಡಿ ಆ ಕೆರೆಗೆ ಇಳಿದಳು:

ಒಂದು ಮೆಟ್ಟಲಿಳಿವಾಗ....
ಪಾದಾನೆ ಮುಳುಗಿತ್ತು....
ಎರಡು ಮೆಟ್ಟಲಿಳಿವಾಗ....
ಕಣ ಕಾಲು ಮುಳುಗಿತ್ತು...
ಮೂರು ಮೆಟ್ಟಲಿಳಿವಾಗ....
ಮೊಣ ಕಾಲಿಗೆ ಬಂದಾವು....
ನಾಲ್ಕು ಮೆಟ್ಟಲಿಳಿವಾಗ...
ಸೊಂಟದ ಪಟ್ಟಿ ಕಂಡ್ತು....
ಐದು ಮೆಟ್ಟಲಿಳಿವಾಗ...
ಎದೆಗಾಮ್ರು ಬಂದಿತು....
ಆರು ಮೆಟ್ಟಲಿಳಿವಾಗ...
ಕುತ್ಗೆ ಪದ್ಮ ಕಂಡ್ತು...
ಏಳು ಮೆಟ್ಟಲಿಳಿವಾಗ...
ತಲೆದಾಗಟೆ ಕಂಡ್ತು....

ಆ ಮೇಲೆ ಆಕೆ ಮಾಯವಾದಳು—ಆ ಕೆರೆಯ ಮೇಲಕ್ಕೆ ಒಂದು ಸುಂದರ ಸಹ ಸ್ರ ದಳ ತಾವರೆ ಹೂವಿಳಿ ನಿಂತಿತು.

ತಾವರೆ ಹೂಗಾಗೀತು...
ಅದು ಕೈಕೊಂಡೋಗಿ....
ಗಿಂಡಿ ಪೂಜೆ ಮಾಡಿದ್ರು....

ಅದರ ನಂತರ ಆ ಕೆರೆಯಲ್ಲಿ

ದನಗಳಿಗೆ ನೀರ್ ಬಂತು...
ಕರುಗಳಿಗೆ ನೀರ್ ಬಂತು...
ಇರುವ ಎಂಬತ್ತು ಕೋಟಿಗೆಲ್ಲ....
ಕೆರೆ ತುಂಬ ನೀರ್ ಬಂತು...

ಇಂತು ಸತಿಯ ಪಾತಿವ್ರತ್ಯದ ಪ್ರಭಾ ವದಿಂದ, ಆಕೆಯ ಆತ್ಮಹುತಿಯ ಫಲದಿಂ ದಕೆರೆ ತುಂಬ ನೀರಾಗಿ ಜನ ಜಾನುವಾರುಗ ಳುಸಮೃದ್ಧಿಯಾಗುವುದೆಂಬುದು ನಮ್ಮ ಜಾನ ಪದ ಜೀವನದ ಉತ್ಕೃಷ್ಟ ಆದರ್ಶವಾಗಿದೆ.

ಇಂತಹ ಸಾಹಿತ್ಯರತ್ನ ಮರುಭೂಮಿಯ ಗ ನಿಯಲ್ಲಿ ಇಂದು ಎಷ್ಟು ಅಡಗಿದೆಯೋ ಯಾರು ಬಲ್ಲರು?

Please Patronize Our Advertise

ಫೋನಿನ ಗಂಭೀರ ಗೌರವಯುಕ್ತ ಭಾವದಿಂದ ಟೆಲಿಫೋನ್‌ನ ರಿಸೀವರನ್ನು ರಮೇಶನು ಕೈಗೆತ್ತಿಕೊಂಡ ಅದೊಂದು ವಿಶಿಷ್ಟ ವಿಧಾನದಲ್ಲಿಯೇ ಸಾವಧಾನವಾಗಿ ಅದನ್ನು ತನ್ನ ಬಾಯಿಯತ್ತು ಕೆವಿಗೆ ಸಮೀಪ ಹಿಡಿದಷ್ಟರೊಳಗೇ ಕಚೇರಿಯ ಕೊರಡಿಯನ್ನು 'ಕಣೀಂ' ಶಬ್ದ ಆವರಿಸಿರುತ್ತದೆ.

"ನಂಬರ್ ಪ್ಲೀಸ್...."—ಗಾಜಿನ ಬಳೆಗಳು ತಂತಮ್ಮೊಳಗೇ ತಿಕ್ಕಾಡಿದಾಗ ಉಂಟಾಗುವಂತಹ ಆ ಶಬ್ದ ಕೇಳಿದೊಡನೇ ರಮೇಶನಿಗೆ ಎಲ್ಲಿಲ್ಲದ ಸಂತೃಪ್ತಿ—ಕುತೂಹಲ—ಆಶ್ಚರ್ಯ. ಹೆಚ್ಚಾಗಿರುವ ಅಪ್ಪಕ್ಕೇ—ಶ್ರವಣಾನಂದಕ್ಕಾಗಿ ಮಾತ್ರ ವೇ ರವೇ ಫೋನ್ ಉಪಯೋಗಿಸುತ್ತಿದ್ದುದೂ!

"ನಂಬರ್ ಪ್ಲೀಸ್..."

'4—8—3—7 "

"ಫೋರ್ ಎಯಿಟ್ ತ್ರೀ ಸೆವೆನ್?

..ಹಾಗೊಂದು ನಂಬರೇ ಇಷ್ಟವಲ್ಲಾ...."

"ಸೋರಿ....ಫೋರ್ ಎಯಿಟ್.... ನಂಬ್ರ ಸರಿಯಾಗಿ ನೆನಪಿಲ್ಲ...."

"ಫೋರ್ ಎಯಿಟೋ?...."

"ಏಲ್ಲ; ಸರೀ ನೆನಪಿಲ್ಲಾ..."

'ಏನಾಗೇನಾಗಬೇಕ ? ಯಾರೊಂದಿಗೆ ಮಾತಾಡಬೇಕು?... ಇಷ್ಟೆಲ್ಲಾ ಪರಿಭ್ರಾಂತಿಯೇಕೆ?...."

'ಹೇಳಿದರೆ ನಿಮಗೆ ಕಷ್ಟವೋ ಬೇಸರವೋ ಆಗದು ತಾನೆ?..."

'ಕಷ್ಟವೇನಿಲ್ಲ.... ನಂಬರ್ ಹುಡುಕಿ ಫೋನ್ ಮಾಡಬಹುದು; ಮತ್ತೆ ಬೇಸರವೇಕೆ?..."

ಶ್ರೀ ಎಚ್. ಎಂ. ನಾರಾಯಣ ಭಟ್.

ಬದಲಿದ ವಧು

"ನಂಬರ್ ಪ್ಲೀಸ್ ಎಂಬ ಕೋಕಿಲ ವಾಣಿಯಿಂದ ಅಂಕುರಿಸಿತು ಪ್ರಣಯ ರಮೇಶನಲ್ಲಿ. ಅತನ ನಿರಾಡಲೂ 'ಆದೇ' ಕೋಕಿಲ ವಾಣಿಯೊಡನೆಯೇ ಉಳಿಯತ್ತ ನನ್ಮತಿಯಿಂದಲೇ ನಡೆಯಿತು—ಆದರೆ,ವಧೂ ಮಾತ್ರ ಬದಲಿ ಹೋಗಿತ್ತು—ಹೇಗೆ?

"....."

"ಹೇಳಿ ಯಾರು ಬೇಕು?...."

"ನಿನ್ನೊಂದಿಗೇ ಮಾತಾಡ ಬೇಕಾದುದು ರಿಸೀವರ್ ಕೆಳಗಿರಿಸುವ ಸದ್ದು ಮಾತ್ರವೇ ಕೇಳಿಸಿತು.

ರಮೇಶ ನಿರಾಶನಾಗಲಿಲ್ಲ. ಎಷ್ಟಾದರೂ ರೋಬರ್ಟ್ ಬ್ರೂಸ್‌ನ ಕಥೆ ಓದಿದವನಲ್ಲವೆ? ಇಂಗ್ಲೀಷ್ ಬರೆಹಗಾರರಿಗೆ ಧನ್ಯವಾದಗಳು! ಆ ಕಥೆಯನ್ನು ಪಾಠಪಟ್ಟಿಯಲ್ಲಳವಡಿಸಿದ ವಿದ್ಯಾ ಖಾತೆಯವರನ್ನು ಮರೆಯುವಂತೆಯೇ ಇಲ್ಲ. ಅತನು ಏಳು ಬಾರಿಯೂ ಯುದ್ಧದಲ್ಲಿ ಪರಾಜಿತನಾದರೂ ನಿರಾಶನಾಗಲಿಲ್ಲ.

ಆದರೆ ರೋಬರ್ಟ್ ಬ್ರೂಸ್‌ನಷ್ಟು ಸಹಪೆ ರಮೇಶನಿಗೆ ಬೇಕಾಗಿ ಬರಲಿಲ್ಲ. ಮೂರನೇ ಸಿದ್ಧತೆಯಪ್ರಯತ್ನದಲ್ಲಿಯೇ ರಮೇಶನ ಮನದ ಬಯಕೆಯ ಬಳ್ಳಿ ಚಿಗುರಿದಂತೆ ತೋರಿತು. ಅಂದೂ ರಮೇಶ ರಿಸೀವರ್ ಎತ್ತಿ ಸನ್ನದ್ಧನಾದ. ಯಾಕೆ ಹಿಂಜರಿಯಬೇಕು? ಮಾತಾಡಲಿಕ್ಕೆ ತಾನೇ ಫೋನ್? ಫೋನ್ ಮೂಲಕ ಮಾತಾಡಲು ಸಾಧ್ಯವಿರುವ ಯಾರೊಂದಿಗೂ ಮಾತಾಡುವ ಸ್ವಾತಂತ್ರ್ಯವಿಲ್ಲವೆ?

"ಕಿಣೀಂ..."

'ಯಾರು? ನಂಬರ್ ಪ್ಲೀಸೇ?...'

"ನನ್ನ ಹೆಸರು ನಂಬರ್ ಪ್ಲೀಸೆಂದಲ್ಲ. ಹಾಗೆ ಕರೆಯುವುದೂ ಉಚಿತನಲ್ಲ...."

"ದಯಮಾಡಿ ಕ್ಷಮಿಸಿರಿ .....ಮತ್ತೆ ನಿಮ್ಮ ಹೆಸರು?..."

"ನನ್ನ ಹೆಸರು?__'

"ಹಾದು...."

"....." (ಮೌನ)

'ಹೇಳೋಣಾಗಲಿ...."

"ಅನಿತಾ..."

"ಓ, ಹಾಗಾದರೆ, ಅನಿತಾ ಪ್ಲೀಸ್!'

"ಆಗಲಿ..."

'ಮೊನ್ನೆ ನಾನು ಮಾತಾಡಲಾರಂಭಿಸಿದಾಗಲೇ ರಿಸೀವರ್ ಕೆಳಗಿರಿಸಿದ್ದೇಕೆ?... ಅಷ್ಟು ಬೇಗ ಬಿಸಿಯಾಯ್ತೆ?...

ಲೇಖನವು ಕಂದಾಗಿದ್ದು ಹಿಂದಕ್ಕರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಭಿಪ್ರಾಯ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ತಿಂಗಳ ಇಪ್ಪತ್ತರ ಒಳಗಾದರೂ ಜಮೆ ಮಾಡುವ ಸೌಕರ್ಯವಿರುವುದು.

ಮುಖಪುಟ ಚಿತ್ರ:

ಗಣೇಶ ಚತುರ್ಥಿ ಕಳೆದು ಬಹು ದಿನಗಳಾದ ಮೇಲೆ ಫಿಮಗೆ ಮತ್ತೆ ದರ್ಶನವೀಯುತ್ತಿರುವ

ಮಹಾಗಣಪತಿ

(ಪಡಿಯಚ್ಚು ಶ್ರೀ ಕೃಷ್ಣಾಪುರ ಮಠದ ಕೃಪೆಯಿಂದ)

ನವಯುಗ

ಸಂಪುಟ ೪೭ | ಉಡುಪಿ | Vol. 47
ಸಂಚಿಕೆ ೧೦ | ೯—೧೧—೧೯೬೨ | No. 10

ಮಹಾಜನರ ವರದಿ

ಮಹಾಜನ ಆಯೋಗದ ವರದಿಯೊಂದಿಗೆ ಅಧಿಕೃತವಾಗಿ ಪ್ರಕಟವಾಗಿದೆ. ಅನಧಿಕೃತವಾಗಿ ತಿಳಿದು ಬಂದ ಸಂಗತಿಗಳಿಗೂ ಇದೀಗ ತಿಳಿದು ಬಂದ ವಿಷಯಗಳಿಗೂ ಹೆಚ್ಚಿನ ಅಂತರವೇನೂ ಇರುವುದಿಲ್ಲ. ಸರ್ವ ಸಾಮಾನ್ಯವಾಗಿ ಆಯೋಗವು ಯಾರ್ಯಾವ, ಪ್ರಭಾವಕ್ಕೂ ಒಳಗಾಗದೆ ಎಲ್ಲ ಪಕ್ಷಗಳಿಗೂ ನ್ಯಾಯ ಒದಗಿಸುವ ಪ್ರಯತ್ನವನ್ನು ಮಾಡಿದೆ. ಮಹಾರಾಷ್ಟ್ರ ಸರಕಾರ ಮತ್ತು ಅಲ್ಲಿನ ಪ್ರಭಾವಿ ಮಹಜ್ಞೇಯರ ಅಗ್ರಹದ ಮೇಲೆ ರಚಿತವಾದ ಈ ಏಕ ಸದಸ್ಯ ಆಯೋಗವು ಕೆಲವೊಂದು ತಕ್ಷಗಳನ್ನು ಅಂಗೀಕರಿಸಿ ವರದಿಯನ್ನು ತಯಾರಿಸಿದೆ. (೧) ಭಾಷಾವಾರು ರಾಜ್ಯ ನಿರ್ಮಾಣವಾದದ್ದರಿಂದ ಭಾಷೆಯೇ ಮುಖ್ಯ ಆಧಾರವಾದರೂ ಭೌಗೋಳಿಕ, ಆಡಳಿತಾತ್ಮಕ ಮೊದಲಾದ ಇತರ ಅನುಕೂಲಗಳನ್ನೂ ಸಂಪೂರ್ಣ ಪಲಕ್ಷಿಸುವಂತಿಲ್ಲ (೨) ಕನಿಷ್ಟ ೨೦೦೦೦ ಜನ ಸಂಖ್ಯೆಯಿದ್ದು, ಇಲ್ಲಿ ಒಂದು ಭಾಷೆಯ ನಾಡುವವನ ಸಂಖ್ಯೆ ಗಣನೀಯವಾಗಿದ್ದರೆ ಮಾತ್ರ ಗಡಿ ವಿವಾದವನ್ನು ಇತ್ಯರ್ಥ ಮಾಡಬೇಕು. (೩) ವರ್ಗಾಯಿಸುವ ಪ್ರದೇಶವು ಇನ್ನೊಂದು ರಾಜ್ಯಕ್ಕೆ ಸಮೀಪವಿರಬೇಕು. [೪] ಶೇಕಡಾ ಒಂದೆರಡು ಬಹುಮತಗಳು ಅಲ್ಪ ಕಾಲದಲ್ಲೇ ನಿಷ್ಕ್ರಿಯವಾಗಬಹುದಾದುದರಿಂದ ಸಾದಾ ಬಹುಮತವನ್ನು ಗಣನೆಗೆ ತೆಗೆದುಕೊಳ್ಳಬಾರದು. (೫) ಜನಾವಣಾ ಫಲಿತಾಂಶವು ಜನತೆಯ ಇಚ್ಛೆಯನ್ನೇ ಪ್ರತಿಬಿಂಬಿಸುತ್ತದೆ ಎಂದು ನಂಬಲಾಗದು.

ಅತ್ಯಂತ ಜಟಿಲ ರೋಗಕ್ಕೆ ತಂದುಕೊಳ್ಳಲಾಗಿದ್ದ ಮಹಾರಾಷ್ಟ್ರ—ಕರ್ನಾಟಕ ಗಡಿ ಪ್ರಶ್ನೆಯನ್ನು ಆಯೋಗವು ಬಹಳ ಸ್ಪಷ್ಟ ಪರಿಶೀಲನೆ ನಡೆಸಿದೆ. ಗಡಿ ಹೊಂದಾಡಿಕೆಯ ದೃಷ್ಟಿಯಿಂದ ಆದು ಅನುಸರಿಸಿದ ತತ್ವಗಳು ಸಕಾಲಿಕವೂ ನ್ಯಾಯೋಚಿತವೂ ಆಗಿವೆಯೆಂದು ಪ್ರತ್ಯೇಕ ಸಿಷ್ಪಕ್ಷಪಾತಿಯೂ ಒಪ್ಪಬೇಕು. ಬೆಳಗಾವಿ — ಕಾರವಾರ ನಗರಗಳು ನುತ್ತಿತರ ಲಗಳಿ ಗ್ರಾಮಗಳನ್ನು ಮಹಾರಾಷ್ಟ್ರವು ಕೇಳಿತ್ತು. ಆದರೆ ಆಯೋಗವು ಕೂಡಮೂಡಿದ್ದು ನಿಪ್ಪಾಣಿ, ಕಾನಾಪುರ ಮತ್ತು ೨೬ ಗ್ರಾಮಗಳು ಮಾತ್ರ- ಈಯೆಲ್ಲ ಪ್ರದೇಶಗಳ ವಿಸ್ತೀರ್ಣ ೬೫೬.೩ ಚ. ಮೈಲಿಗಳು; ಇವನ ಸಂಖ್ಯೆ ೨,೮೧,೦೦೦. ಇಲ್ಲಿ ಮರಾಠಿ ಮಾತನಾಡುವವರು ಸೇ. ೬೯.೧ ಕರ್ನಾಟಕವು ಸೊಲ್ಲಾಪುರವನ್ನೂ ಕೇಳಿತ್ತು. ೨೪೭ ಗ್ರಾಮಗಳನ್ನು ಕರ್ನಾಟಕಕ್ಕೆ ವರ್ಗ ಮಾಡಲು ಆಯೋಗ ಸಿಫಾರಸು ಮಾಡಿದೆ. ಇದರ ವಿಸ್ತೀರ್ಣ ೧೩೬೮ ಚ. ಮೈಲಿಗಳು. ಜನ ಸಂಖ್ಯೆ ೩,೫೦೦೦೦ ಕನ್ನಡ ಮಾತನಾಡುವವರು ಸೇ. ೭೬.೯. ಇದನ್ನು ಪರಿಶೀಲಿಸುವಾಗ ಆಯೋಗವು ನ್ಯಾಯವೊದಗಿಸಲು ಮಧ್ಯವರ್ತಿ ದಾರಿಯನ್ನು ಹಿಡಿದಿರುವಂತೆ ಭಾಸವಾಗುತ್ತದೆ ಚಂದ್ರಗಿರಿ ಹೊಳೆಯು ಉತ್ತರದ ಈಗಿನ ಬೇರಳೆ ರಾಜ್ಯದ ಕಾಸರಗೋಡು ತಾಲೂಕಿನ ಭಾಗವು ಕರ್ನಾಟಕಕ್ಕೆ ಸೇರಬೇಕೆಂಬುದೂ ವರದಿಯಲ್ಲಿನ ಮುಖ್ಯಾಂಶ. ವರದಿಯು ಈಗಾಗಲೇ ಮೂರೂ ರಾಜ್ಯಗಳ ನಮ್ಮಿ ಮಂತ್ರಿಗಳ ಬೈ ಸೇರಿದೆ. ಅವುಗಳತಮ್ಮ ಅಭಿಪ್ರಾಯಗಳನ್ನು ಕೇಂದ್ರಕ್ಕೆ ತಿಳಿಸಿಲ್ಲವಾದರೂ ಹೊರಗಡೆ ರಣಾಡಂಗುರ ಹಾಕಿಸಿದ್ದಾರೆ. ಆಯೋಗ ನೇಮಕದ ವೇಳೆ ಕೇರಳದಲ್ಲಿ ಜನಪ್ರಿಯ ಸರಕಾರವಿಲ್ಲದ್ದರಿಂದ ಅದರ ವರದಿಯು ತನ್ನ ಸರಕಾರಕ್ಕೆ ಬಂಧನಕಾರಿಯಲ್ಲ— ಇದು ನಂಬೂದರಿಪಾಡರ ಏಕಪಕ್ಷೀಯ, ಅಧಿಕಾರ ಉಳಿಸಿಕೊಳ್ಳುವ ತಂತ್ರ. ಆಯೋಗದ ವರದಿಯನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ— (ಏಕೆಂದರೆ, ನಾವು ಅಂಗೈ ಹೋರಿಸಿ ಆವಲಕ್ಷಣ ಹೇಳಿಸಿಕೊಂಡಿದ್ದೇನೆ) ಇದು ನಾಯಕರ ಆಂತರಾತ್ಮನ ಉದ್ಗಾರ. ವರದಿಯು ಸಂಬಂಧಪಟ್ಟವರಿಗೆ ಬಂಧನಕಾರಿಯಾಗಬೇಕೆಂದೇ ಮೊದಲಾ ಆಂದಿದ್ದೇವೆ. ಇಂದೂ ಅನ್ನುತ್ತೇವೆ, ಮುಂದೆಯೂ ಅನ್ನುತ್ತೇವೆ—ಇದು ನಿಜಲಿಂಗಪ್ಪನವರ ಏಕನಾದ. ಇಂತಹ ಮನಮ್ಮುವಿದ ಪತ್ರಿಕ್ರಿಯೆಯನ್ನು ಒಮ್ಮುಖವಾಗಿಸುವುದು ಯಾರಿಂದ ಹಾನೇ ಸಾಧ್ಯ?

ಪ್ರಧಾನಿ ಇಂದಿರಾಗಾಂಧಿ — ಗೃಹ ಮಂತ್ರಿ ಚೌನರಬ್ಬರೊಂದಿಗೆ ಇದು ಚರ್ಚಿಸಲ್ಪಟ್ಟಿರುವ ಹುಳ. ಮಹಾರಾಷ್ಟ್ರದ ನಾಯಕರ ಒತ್ತಾಯಕ್ಕಾಗಿಯೇ ಆಯೋಗದ ನೇಮಕವಾದರೆ, ಈಗ ಅವರೇ ಆಯೋಗದವರದಿಗೆ ವಿರೋಧಿಯಾಗಿದ್ದಾರೆ. ವಿವಾದ ತೀರ್ಮಾನಕ್ಕೆರುವ ದಾರಿಯನ್ನು ಸುಸೂತ್ರವಾಗಿ ಮಾಟ್ಟಿದೆ ಇದ್ದರೆ, ಇದಕ್ಕೆ ಪರಿಹಾರವಾದರೂ ಯಾವುದು? ಆಯೋಗ ನಿಯುಕ್ತಿಯ ವೇಳೆಯೇ ನಾಯಕರು ವರದಿಯು ಬಂಧನಕಾರಿಯೆಂದು, ಈಗ ಮುಖಸೊಟ್ಟ ನೋಡುವುದು ಎಂದರೆ, ಗಡಿ ಪ್ರಶ್ನೆ ಇತ್ಯರ್ಥ ಮಾಡುವುದು ಹೇಗೆ? ಸರ್ಕಾರ ಸೂತ್ರಶಕ್ತಿಗಳಿಂದ ಬಗೆಹರಿಯದ್ದರಿಂದ ತಾನೇ ಆಯೋಗದ ರಚನೆಯಾಯಿತು? ಮಹಾರಾಷ್ಟ್ರ—ಕರ್ನಾಟಕ ಗಡಿಯಲ್ಲಿ ಸುರಂಗಿಗರು ಪುಂಡಾಟಿಕೆಗೆ ಮನಸೋತಿದ್ದಾರೆ. ಮಹಾಜನ ಆಯೋಗ ವರದಿಯನ್ನು ಕಾರ್ಯರೂಪಕ್ಕೆ ತಂದರೆ, ಮಹಾರಾಷ್ಟ್ರ-ಕೇರಳಗಳಲ್ಲಿ ಬೃಹತ್ ಪ್ರಮಾಣದ ಹೊಸ ಪ್ರದರ್ಶನ ಮೊದಲಾಗುವುದು ನಿಜ

> **ವಚನ ಸುಧೆ**
>
> ಅಸ್ಮದಸ್ವಾನಿ ಕಾರ್ಯಾಣಿ
> ಯೋ ಮೋಹಾದನು ತಿಷ್ಠತಿ
> ಸ ತೇಷಾಂ ವಿಪರಿಜ್ಞಂಕಾದ್
> ಭ್ರಂಶ್ಯತೇ ಜೀವಿತಾ ದಪಿ॥
>
> ಮೋಸಗವಶನಾಗಿ ದುಷ್ಕರ್ಮ ಮಾಡುವವನು, ಆ ಕಾರ್ಯಗಳು ವಿಪರೀತ ಪರಿಣಾಮ ನೀಡಿದಾಗ, ತನ್ನ ಜೀವನದಿಂದಲೇ ಕೈ ತೊಳೆದುಕೊಳ್ಳುತ್ತಾನೆ.

ದಾವಂತ...! ಇವೆಲ್ಲವುಗಳ ಅರ್ಥವೇನು? ರಾಜ್ಯ—ಭಾಷೆಯೆಂಬ ಸಂಕುಚಿತ ಪ್ರವೃತ್ತಿ. ಈ ಪ್ರವೃತ್ತಿ ಶ್ರೀ ಸಾಮಾನ್ಯನಲ್ಲಿದ್ದರೆ, ಅಧಿಕಾರ ಹಕ್ಕಿಸಿಕೊಳ್ಳುವ ಪ್ರವೃತ್ತಿ ನಾಯಕರದ್ದು. ನ್ಯಾಯ ಮತ್ತು ಸಂಕುಚಿತತೆಗಳು ಒಂದೆಡೆಯಲ್ಲೇ ನಿಲ್ಲಲಾರವು. ಮಹಾರಾಷ್ಟ್ರದ ಏಕೈಕ ಮಹಾನಾಯಕರೆನಿಸಿರುವ ಚವನರು ತನ್ನ ರಾಜ್ಯದ ಜನರಿಗೆ, ನಾಯಕರಿಗೆ ನ್ಯಾಯದ ಪ್ರಥಮ ಪಾಠವನ್ನು ಕಲಿಸ ಬೇಕು; ವಿವಾದಕ್ಕೆ ಪೂರ್ಣವಿರಾಮ ಹಾಕುವಲ್ಲಿ ಸಹಕರಿಸಬೇಕು. ಇನ್ನು ಜನಪ್ರಿಯ ಸರಕಾರವಿಲ್ಲವೆಂಬ ಕಾರಣದಿಂದ ಕೇರಳ ಸರಕಾರ ಆಯೋಗದ ವರದಿಯನ್ನು ನಿರಾಕರಿಸುವುದು ಎಂದಿಗೂ ನ್ಯಾಯುವಲ್ಲ. ಕೇಂದ್ರ ಸರಕಾರವು ನೇಮಿಸಿದ್ದ ಆಯೋಗವದು. ನಂಬೂದರಿಪಾಡರು ತಮ್ಮ ಮೂಲ ತ್ರಿರುವ ಕೇರಳಕ್ಕೆ ಕಾಸರಗೋಡೆಂದು ಆಧಾರವೆಂದು ತಿಳಿದಿದ್ದರೆ, ಅದು ಕಂಡಿಷಕ್ಕೂ ಸುಳ್ಳು. ಇಂದಿರಾ ಗಾಂಧಿಯವರು ರಾಜ್ಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸಹೋದ್ಯೋಗಿಗಳನ್ನು ಒಲಿಸಿ ಮಹಾಜನ ಆಯೋಗದ ವರದಿಯನ್ನು ಅಂಗೀಕರಿಸಿದರೆ, ಅವರ ಮುತ್ಸದ್ದಿತನ ವ್ಯಕ್ತವಾಗುವುದು.

ರಾಜ್ಯ ಪಕ್ಷಪಾತ

ಮಣಿಪುರದ ಪಕ್ಷ— ಪಕ್ಷಾಂತರ ಪಕ್ಷಪಾತದಿಂದ ಅಲ್ಲಿ ಕೊಟ್ಟ ಕಾನೆಗೆ ರಾಷ್ಟ್ರಪತಿ ಆಳಿಕೆಯ ಅನಿವಾರ್ಯವಾಯಿತು. ಇದೀಗ ಹರಿಯಾನಾ ರಾಜ್ಯಕ್ಕೂ ಇದೇ ಬಗೆಯ ಪಕ್ಷಪಾತ ಬಡಿಯು ತೊಡಗಿದೆ. ಸಂಯುಕ್ತ ರಂಗದ ಗಣಿವರು

(ಗತ್ತನೇ ಪುಟ ನೋಡಿರಿ)

ನರಸಣ್ಣನ ನರಸ



'ಕಾಂಗ್ರೆಸ್ ಅಧ್ಯಕ್ಷೆಯಾಗಿ ಬನ್ನಿ ಎಂದು ಸ್ವಾಗತಿಸುವಾಗ ನಿಜಲಿಂಗಪ್ಪನವರು ಊಹ್ಞೂಂ ಎಂದರೆಂತೆ—ಕಾಸು ಆ ಹುದ್ದೆಗೆ ಆಯೋಗ್ಯ—ಅಚ್ಚು, ಯೋಗ್ಯನಲ್ಲ—ಎಂದು ನನ್ನನ್ನಾದರೂ ತರೆಯುತ್ತಿದ್ದರೆ, ಬಾಡಿಗೆ ಇಲ್ಲವೆ ಮನೆಯಾದರೂ ಸಿಗುತ್ತಿತ್ತು, ದಿಲ್ಲಿಯಜ್ಞಿ!'

ಕಥಾ ಪ್ರಪಂಚ

ಉದಾರಹಸ್ತ

ಬರೆದವರು:—ಶ್ರೀಮತಿ ರಮಾ ನಾಗೇಶ್.

'ಕಳ್ಳ'

"ಏನ್ ಕದ್ದೆ?"

'ನಿನಗೆ ಗೊತ್ತಿಲ್ಲವೆ?"

'ಏನು ಹೇಳು. ಸುಮ್ಮನೆ ಬೈದದ್ದೆಲ್ಲಾ ಕೇಳಲು ನಿನ್ನ ಅಪ್ಪನ ಮಗಳಲ್ಲ ನಾನು'

'ನನ್ನ ಅಪ್ಪನ ಮಗಳೇ ನೀನು. ನಿನ್ನ ಬಾಯಿಯಿಂದಲೇ ಬಂತಲ್ಲಾ ಸಾಕು'

ಎನ್ನುವಾಗಲೇ ಸುಮತಿ ಗೋಳೋ ಎನ್ನುತ್ತಾ ದೊಡ್ಡ ಸ್ವರದಿಂದ ಏಂಕಲು ಆರಂಭಿಸಿದಳು. ಬೈಸಿಕೊಳ್ಳುವಾಗ ಸುಮ್ಮನಿದ್ದ ಹುಡುಗಿಯರೆಲ್ಲಾ ಮುತ್ತಿಗೆ ಹಾಕಿ ಇಬ್ಬರನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದರು. ಆದರೆ ವತ್ಸಲಾ ಮಾತ್ರ ಸುಮ್ಮನಿರದೆ ಸುಮತಿಯ ಮೇಲಿದ್ದ ತನ್ನ ಎಲ್ಲಾ ಸಿಟ್ಟೆನ್ನು ಸಾಲ್ಕು ಹುಡುಗಿಯರ ಎದುರು ಕಾರಿ ಮುಯ್ಯಿ ತೀರಿಸಿಕೊಳ್ಳಲು ಪ್ರಯತ್ನಿಸುತಿದ್ದಳು. ಸುಮತಿ ಮಾತ್ರ ಲಜ್ಜೆ, ದುಃಖವನ್ನೆ ತಡೆಯಲಾರದೆ ಏಂಕಳುತಲೇ ಇದ್ದಳು.

ಂ ಂ ಂ

ಸುಮತಿ ವತ್ಸಲಾ ಬರೀ ಕ್ಲಾಸ್ ಮೇಟ್ಸ್ ಮಾತ್ರವಲ್ಲ; ಒಂದೇ ಪಾತ್ರದ ಅನ್ನವನ್ನು ಉಂಡ ಸಂಬಂಧಿಕರು ಕೂಡಾ ಹೌದು. ಬುದ್ಧಿವಂತಿಕೆಯೊಂದಿಗೆ ಇಬ್ಬರಿಗೆ ರೂಪವೂ ಇತ್ತು. ಉಪಾಧ್ಯಾಯರೆಲ್ಲರ ಹೊಗಳಿಕೆಗೆ ಪಾತ್ರರೂ ಆಗಿದ್ದರು. ಇಬ್ಬರೂ ತರಗತಿಯಲ್ಲಿ ರೇಂಕ್ ಪೈಗೆಯುವವರೇ. ಆದರೆ ಯಾರಿಗೂ ಇವರಲ್ಲಿನ್ನ ವೈಮನಸ್ಸು ತಿಳಿದಿರಲಿಲ್ಲ. ಈವೊಂದು ಸಂದರ್ಭ ಆಲ್ಲದಿದ್ದರೆ ಮನೆತನಸ್ಥರಾದ ಇವರ ಗುಟ್ಟು ಹೊರ ಬರುತ್ತಲೂ ಇರಲಿಲ್ಲ.

ಇಂಥ ದಿನಗಳಲ್ಲೇ ಶಾಲಾ ವಾರ್ಷಿಕೋತ್ಸವ ನಡೆಯುವುದೆಂದು ನಿರ್ಣಯಿಸಲ್ಪಟ್ಟಿತು. ನಾಟಕ, ವಿವಿಧ ವಿನೋದಾವಳಿ, ಆಟ ಓಟಗಳ ಸ್ಪರ್ಧೆ, ಲೇಖನ ಸ್ಪರ್ಧೆ ಅಲಂಕಾರ ಎಂದು ನೂರಾರು ಕಾರ್ಯಧಾಗಗಳು ಹಂಚಲ್ಪಟ್ಟವು. ವಹಿಸಿಕೊಂಡ ಉಪಾಧ್ಯಾಯರು ಕೆಲಸದಲ್ಲಿ ತೊಡಗಿದರು. ನಾಟಕದ ಭಾರ ವಹಿಸಿಕೊಂಡ ನಯನಾ ಟೀಚರ್ ಪಾತ್ರಗಳಿಗಾಗಿ ಮಕ್ಕಳನ್ನು ಆರಿಸಿ ಅವರಿಗೆ ಹೇಳಿ ಕಳುಹಿಸಿದರು. ಹಾಗೆ ಕರೆ ಕಳುಹಿಸಿದವರಲ್ಲಿ ಸುಮತಿ, ವತ್ಸಲಾ ಇಬ್ಬರೂ ಸೇರಿದ್ದರು. ಬೆಳಿಗ್ಗೆಯಷ್ಟೇ ಬೈಸಿಕೊಂಡವರವರು.

"ಏನ್ ಟೀಚರ್, ಬರಲು ಹೇಳಿದಿರಿ?" ಎಂದು ದೃಢತೆಯಿಂದಲೇ ಕೇಳಿದಳು ವತ್ಸಲಾ.

"ಶಾಲಾ ವಾರ್ಷಿಕೋತ್ಸವ ಎಂದು ನಿರ್ಣಯಿಸಿದ್ದು ನಿಮಗೆಲ್ಲಾ ಗೊತ್ತಲ್ಲಾ. ನಿಮಗೆಲ್ಲಾ ಪಾರ್ಟ್ ಮಾಡಲು ಮನಸ್ಸಿದೆಯಾ ಎಂದು ಕೇಳೋಣ ಎಂದು ಕರೆದ" ಎಂದರು ನಗುತ್ತಾ ನಯನಾ ಟೀಚರ್ ವತ್ಸಲೆಯ ದೃಢತೆಯನ್ನು ತಿಳಿಯೂಗಿಸುತ್ತಾ.

"....."

"ಯಾರೂ ಮೊತನಾಡದಿದ್ದರೆ ಹೇಗೆ? ಮನಸ್ಸಿದ್ದವರು ತಿಳಿಸಿರಿ" ಎಂದರು ಇನ್ನೊಮ್ಮೆ ಎಲ್ಲರ ಮುಖವನ್ನು ನೋಡುತ್ತಾ.

"ನಮ್ಮ ಮನಸ್ಸಿಗೂ ಮನೆಯವರ ಒಪ್ಪಿಗೆಗೂ ಗಂಟು ಟೀಚರ್" ಎಂದಳು ವಿನೋದವಾಗಿ ವಿನೋದ.

"ನಾಟಕ ಯಾವುದು ಟೀಚರ್?" ಎಂದಳು ವತ್ಸಲಾ.

"ಮೊದಲು ಪಾರ್ಟು ಮಾಡುವವರು ಯಾರು ಎಂದು ತಿಳಿಯಲಿ" ಎಂದರು ಸ್ವಲ್ಪ ಒರಟಾಗಿ ಟೀಚರ್.

"ನಾಟಕ ಯಾವುದೆಂದು ತಿಳಿದರೆ ಮನೆಯವರ ಒಪ್ಪಿಗೆ ಪಡೆಯಲು ಸುಲಭ" ಎಂದಳು ಶುಲಭ ಹರಿದಾಸ.

"ನಿನ್ನ ಪೆಸರೇ ಶುಲಭ. ಕೆಲಸವೂ ಸುಲಭವಾಗದೀರಲ್ಲವೇ ನಿನಗೆ?" ಎಂದು ಹಾಸ್ಯ ಮಾಡುತ್ತಾ ನೋಡಿದರು ಶುಲಭಳನ್ನು.

"ಹೇಳಿ ಟೀಚರ್ ಯಾವ ನಾಟಕ?" ಎಂದು ಕೇಟಲೆ ಮಾಡಿದಳು ಇನ್ನೊಮ್ಮೆ ವಿನೋದ.

"ಇವತ್ತೇ ಹೇಳಬೇಕೆ?— ನೀವ್ಯಾರೂ ಪಾರ್ಟು ಮಾಡಲು ಒಪ್ಪಲಿಲ್ಲವಲ್ಲಾ?"—ಎಂದರು ಇನ್ನೊಮ್ಮೆ.

"ಹೇಳಿ ಟೀಚರ್, ಹೇಳಿ ಟೀಚರ್"—ಎಂದು ಒಮ್ಮೆಲೆ ಒತ್ತಾಯ ಹೊರಟಿತು.

"ಪಾರ್ಟು ಮಾಡುತ್ತೀರಲ್ಲ— ಹೇಳಿ ನೊದಲು"

"ಮನೆಯವರನ್ನು ಒಪ್ಪಿಸುತ್ತೇವೆ ಪ್ರಯತ್ನ ಮಾಡಿ, ನಾಟಕ ಯಾವುದು ಟೀಚರ್?"

"ನೂರ್ ಜಹಾನ್" ಎಂದರು.

ಒಮ್ಮೆಲೇ ಚಪ್ಪಾಳೆಯಿಂದ ಹರ್ಷ ಸೂಚಿಸಿ ಮೌನ ಕವಿಯಿತು. ಉತ್ಸಾಹಶಾಳಿಲಾರದೆ ಶುಲಭ 'ಷಹದ ಹಾನ್ ಯಾರು?' ಎಂದು ಕೇಳಿಯೇ ಬಿಟ್ಟಳು.

"ವತ್ಸಲಾ ಒಪ್ಪಿದರೆ ಅವಳು'

"ನೂರಜಹಾನ್ ಯಾರು?"

'ಹೇಗಿದ್ದರೂ ಸುಮತಿಯೇ ವಹಿಸಿ ಬೇಕು" ಎಂದರು ಸುಮತಿಯನ್ನು ನೋಡುತ್ತಾ, ಆದರೆ ಆಕೆಗೆ ಸಂತೋಷವಾಗುವ ಬದಲು ಕಣ್ಣೀರು ಬಂದಿತ್ತು. ಆಗಲೇ ವತ್ಸಲಾ—

'ನಾನು ಪಾರ್ಟು ಮಾಡುವುದಿಲ್ಲ"ಎಂದಳು ದೃಢತೆಯಿಂದ.

'ಯಾಕೆ? ಇದೀಗ ನುನಿಸುವರನ್ನು ಕೇಳಬೇಕೆಂದಿರೆಲ್ಲ'

"ಸುಮತಿಯೊಡನೆ ನಾನು ಪಾರ್ಟು ಮಾಡುವುದಿಲ್ಲ' ಎನ್ನುವ ಸ್ವರ ಧಾರ ಕೇಳಿಯೇ ನಯನಾ ಟೀಚರ್ ಬೇಸರಗೊಂಡರು. ಆದರೂ

"ಯಾಕೆ?' ಎಂದು ಆಷ್ಟೇ ಮೃದುವಾಗಿ ಕೇಳಿದರು.

ಆದರೂ 'ನಾನಿನ್ನು ಬರುತ್ತೇನೆ ಟೀಚರ್, ಬೇರೆ ಯಾರನ್ನಾದರೂ ಆರಿಸಿ, ಕ್ಷಮಿಸಿ' ಎಂದವಳೇ ರಭಸದಿಂದ ಹೊರಟು ಹೋದಳು. ಹುಡುಗಿಯರಿಬ್ಬರೂ ಬಾಯಿ ಬಿಡಲಿಲ್ಲಿ. ಕೊನೆಗೆ ಸುಮತಿ

"ನಾನು ಹುಟ್ಟಲೇ ಬಾರದಿತ್ತು. ನನ್ನನ್ನು ಕಂಡರೆ ವತ್ಸಲೆಗಾಗದು" ಎಂದಳು ಬಿಕ್ಕುತ್ತಾ.

"ನೀನು ಪಾರ್ಟು ಮಾಡಲು ಮನಸ್ಸು ಮಾಡು" ಎಂದು ಮಾತನ್ನು ಮುಗಿಸಲು ಕಾರ್ಯಕ್ಕೆ ತೆರಲು ಹವಣಿಸಿದರು.

'ನಾಳೆ ಹೇಳುತ್ತೇವೆ' ಎಂದು ಒಟ್ಟಾಗಿ ಹೇಳುತ್ತಾ ಹುಡುಗಿಯರು ಅಂದಿನ ಪ್ರಕರಣಕ್ಕೆ ಪೂರ್ಣ ವಿರಾಮವನ್ನು ಹಾಕಿ ಅಲ್ಲಿಂದ ಚದರಿ ಹೋದರು.

ಂ ಂ ಂ

ಸುಮತಿ ವತ್ಸಲೆಯ ಮೂವನ ಮಗಳು. ವತ್ಸಲೆಯು ತಾಯಿ, ಮನೆಯ ಹಿರಿಯ ಸೊಸೆ ಹಾಗೂ ಯಜಮಾನಿ. ಹುಟ್ಟು ಸಂಕಷ್ಟಿಯಂದ ಆಕೆ ಪೂರ್ಣವಾನಂ ಬುತ್ತೀರಲಿಲ್ಲ. ಚಿಕ್ಕದೆ ದುಡುಕು ಸಿಟ್ಟು ಆದರೊಂದಿಗೆ ಪಡೆದವರು ಅವರು. ಆಕೆ ಮದುವೆಯಾಗಿ ಬಂದ ಆರು ತಿಂಗಳಲ್ಲೇ ಮದುವೆಯಾಗಿ ಬಂದವರು ಸುಮತಿಯ ತಾಯಿ. ಅವಳ ರೂಪವನ್ನು ಕಂಡಾಗಲೇ ಮಸ್ಸಂಸಿದ ಅವರು ಸುಮತಿಯ ತಾಯಿಯನ್ನು ಹೊರಗಟ್ಟುವ ವರೆಗೆ ನೆಮ್ಮದಿ ತಳೆದಿರಲಿಲ್ಲ.

ಸುಮತಿಯ ತಂದೆ ರಾಮರಾಯರೂ, ವತ್ಸಲೆಯ ತಂದೆ ವರದರಾಯರೂ ಮನೆ ಬೇರಾದರೂ ಮನ ಒಂದೇ ಆಗಿ ಬಾಳನ್ನು ಸಾಗಿಸುತಿದ್ದರು. ಇದು ವತ್ಸಲೆಯ ತಾಯಿಯ ಮನಸ್ಸಿಗೆ ಬಾರದ ವಿಷಯವಾಗಿತ್ತು. ಇದರ ಕುರಿತು ವತ್ಸಲೆಯು ಮುಂದೆ ಆಗಾಗ ವಿಷ ಕಾರುತಿದ್ದರು. ತಿಳುವಳಿಕೆಗೆ ನಿಲುಕದ ವಿಷಯವಾದರಿಂದ ಶುಲನಾತ್ಮಕವಾಗಿ ತಾಯಿ ಹೇಳುವ ವಿಚಾರವನ್ನು ತಿಳಿಯಲಾರದೆ ಸುಮತಿಯನ್ನು ಅಪರಾಧಿಯೂಗಿ ಕಾಣುತಿದ್ದಳು ವತ್ಸಲೆ. ಪರಿಣಾಮವಾಗಿ ಸುಮತಿಯನ್ನು ಆಗೊಮ್ಮೆ ಈಗೊಮ್ಮೆ ಕೆಣಕುತ್ತಲೂ ಇದ್ದಳು.

ಸಾತ್ವಿಕರಾದ ವರದ್ರಾಯರಿಗೆ ಈ ವಿಚಾರಗಳೆಲ್ಲವೂ ತಿಳಿದಿದ್ದರೂ ಹೆಂಡತಿಯನ್ನು ಹಿಡಿತದಲ್ಲಿಟ್ಟು ಕೂಳ್ಳಲಾಗದೆ ಒದ್ದಾಡುತಿದ್ದರು. ಸಮಯಾನುಸಮಯದಲ್ಲಿ ಸಿಡಿಯುತ್ತಲೂ ಇದ್ದರು. ಅಂಥ ಒಂದು ಸಮಯದಲ್ಲೇ ಈ ನಾಟಕದ ಪ್ರಕರಣವು ಇನ್ನೂ ಬೆಂಕಿ ಹೆಚ್ಚುವಂತೆ ಮಾಡಿತು.

ಶಾಲೆಯಿಂದ ತಡವಾಗಿ ಬಂದ ವತ್ಸಲೆಯನ್ನು ವಿಚಾರಿಸುವಾಗ

"ನಮ್ಮ ಶಾಲೆಯ ವಾರ್ಷಿಕೋತ್ಸವ ಅಮ್ಮಾ. ಆದಕ್ಕಾಗಿ ನಯನಾ ಟೀಚರ್ ನಮ್ಮ ಕೆಲವು ಮಂದಿಗೆ ನಿಲ್ಲಲು ಹೇಳಿ ಕಳುಹಿಸಿದರು' ಎಂದಳು ನಿರ್ಲಿಪ್ತತೆಯಿಂದ.

"ಏನು ನಾಟಕ?"

"ನೂರ ಜಹಾನ್'

"ನಿನಗೇನು ಪಾರ್ಟು?"

"ಷಹಜಹಾನ್ ಎಂದು ಟೀಚರ್ ಹೇಳಿದರು" ಎಂದು ಏನೋ ಆಲೋಚನೆಗೆ ಆರಂಭಿಸಿದಳು.

"ಅದಕ್ಕೇಕೆ ಅಷ್ಟೊಂದು ಆಲೋಚನೆ?"

"ಆಲೋಚನೆ ಏನಿಲ್ಲ. ಸುಮತಿ ನಾಟಕದಲ್ಲಿ ನನ್ನ ಹೆಂಡತಿ ಪಾರ್ಟು ಹಾಕುತ್ತಾಳೆ. ಅಷ್ಟೆ" ಎಂದು ತೇಲಿಸಿ ಮಾತನಾಡಿದಳು.

ಹಾಗಿರಲಾಗ ನೀನೇಕೆ ಪಾರ್ಟು ಮಾಡಲು ಒಪ್ಪಿದೆ?' ಎಂದು ಗುಡುಗಿದರು ಅವಳ ತಾಯಿ.

"ಇಲ್ಲಮ್ಮಾ ಒಪ್ಪಿಲ್ಲ; ಬಿಡಿತಾ ಒಪ್ಪಿಲ್ಲ.' ಎಂದಳು ತಾಯಿಯನ್ನು ಅನುಮಾನಿಸುವವಳಂತೆ.

"ಒಳ್ಳೇದಾಯಿತು, ಅವಳಂಥವಳ ಸಹವಾಸವೇ ಬೇಡ. ಅವಳ ತಾಯಿಯಿಂದಾಗಿಯೇ ನನಗೆ ಈ ಅವಸ್ಥೆ, ನಿನ್ನ ಅಪ್ಪನಿಗೆ ನನ್ನ ಕಂಡಾಗದು. ಏನು ಮಾಡ್ದ್ದಾ ಅವರ ಹೊಟ್ಟೆಗ ಬಿದ್ದಿದಯೋ ಏನೋ? ಯಾವಾಗಲೂ ನನ್ನ ಮೇಲೆ ಉರಿದು ಬೀಳುವುದು ನಿನಗೆ ಕಾಣಿಸುವುದಿಲ್ಲವೇ? ನೀನು ಅವಳೊಟ್ಟಿಗಾದರೆ ಪಾರ್ಟು ಮಾಡುವುದಿಲ್ಲವೆಂದು ಖಂಡಿತಾ ಹೇಳು' ಎಂದು ಬೋಧಿಸಿದರು.

'ಅಲ್ಲ ಅಮ್ಮ, ನೀನು ಹೇಳುವುದು ಸತ್ಯನೇ? ಅಪ್ಪ ದಾನಿಗಳವರೆಂದು ನನಗೇ ಯಾರೂ ಕಾಣಿಸುವುದಿಲ್ಲ. ನಾವು ಸಂಬಂಧಿಕರಾಗಿರುವಾಗ ರೂಪ ಒಂದೇ ಇದ್ದರೆ ಅದು ಅವಳ ಅಮ್ಮನ ತಪ್ಪಾ? ಅವಳ ತಾಯಿ

(ಹನ್ನೊಂದನೇ ಪುಟ ನೋಡಿರಿ)

ಸುಭದ್ರವಾದ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 85 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ ೩% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೨

47ನೇ ವರ್ಷ
Telephone 226.

ನವಯುಗ

ಸ್ವಮುಖ ಕನ್ನಡ ವಾರಪತ್ರಿಕೆ
ಉಡುಪಿ, ದ. ಕನ್ನಡ.

++

ಸ್ಥಾಪನೆ: 1921
ಸ್ಥಾಪಕರು
ದಿ। ಎ. ಬಿ. ಶೆಟ್ಟರು.
ಸಂಚಾಲಕ—ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

++

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಂಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಧಾರಿತ, ಅನುವಾದಿತವಾದರ ಅವುಗಳ ಮೂಲವನ್ನೂ ತಿಳಿಸಿಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಬಾಬಲಿಗನ್ನಾಗಲೀ ಸಂಬಂಧಿಸಿದ್ದು ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಸಮಯ ಇಲ್ಲವೆ 'ನವಯುಗ'ದ ಹೆಸರಿಗೆ ಜಮ ಮಾಡುವ ಸಾಕಷ್ಟು ಸಾಕಷ್ಟು.

ಮುಖಪತ್ರದಲ್ಲಿ:

ಗಣೇಶ ಚತುರ್ಥಿ ಕಳೆದು
ಬಹು ದಿನಗಳಾದ ಮೇಲೆ
ನಿಮಗೆ ಮತ್ತೆ ದರ್ಶನವೀಯುತ್ತಿರುವ
ಮಹಾಗಣಪತಿ
(ಪಡಿಯಚ್ಚು ಶ್ರೀ ಕೃಷ್ಣಾಪುರ ಮಠದ ಕೃಪೆಯಿಂದ)

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೧೦	೯—೧೧—೧೯೬೨	No. 10

ಮಹಾಜನರ ವರದಿ

ಮಹಾಜನ ಆಯೋಗದ ವರದಿಯೊಗ ಅಧಿಕೃತವಾಗಿ ಪ್ರಕಟವಾಗಿದೆ. ಅವಧಿ ಕೃತವಾಗಿ ತಿಳಿದು ಬಂದ ಸಂಗತಿಗಳಿಗೂ ಇದೀಗ ತಿಳಿದು ಬಂದ ವಿಷಯಗಳಿಗೂ ಹೆಚ್ಚಿನ ಅಂತರವೇನೂ ಇರುವುದಿಲ್ಲ. ಸರ್ವ ಸಾಮಾನ್ಯವಾಗಿ ಆಯೋಗವು ಯಾರೆ, ಯಾವ, ಪ್ರಭಾವಕ್ಕೂ ಒಳಗಾಗದೆ ಎಲ್ಲ ಪಕ್ಷಗಳಿಗೂ ನ್ಯಾಯ ಒದಗಿಸುವ ಪ್ರಯತ್ನವನ್ನು ಮಾಡಿದೆ. ಮದ್ರಾಸಾವ್ಯ ಸರಕಾರ ಮತ್ತು ಅಲ್ಲಿನ ಪ್ರಭಾವಿ ಮಹನೀಯರ ಆಗ್ರಹದ ಮೇಲೆ ರಚಿತವಾದ ಈ ಏಕ ಸದಸ್ಯ ಆಯೋಗವು ಕೆಲವೊಂದು ಶಿಫಾರಸ್ಸುಗಳನ್ನು ಅಂಗೀಕರಿಸಿ ವರದಿಯನ್ನು ತಯಾರಿಸಿದೆ. (೧) ಭಾಷಾವಾರು ರಾಜ್ಯ ನಿರ್ಮಾಣವಾದದ್ದರಿಂದ ಭಾಷೆಯೇ ಮುಖ್ಯ ಆಧಾರವಾದರೂ ಭೌಗೋಳಿಕ, ಆಡಳಿತಾತ್ಮಕ ಮೊದಲಾದ ಇತರ ಅನುಕೂಲಗಳನ್ನೂ ಸಂಪೂರ್ಣ ಕಡೆಗಣಿಸುವಂತಿಲ್ಲ. (೨) ಕನಿಷ್ಠ ೨೦೦೦೦ ಜನ ಸಂಖ್ಯೆಯೆಂದ್ದು, ಇಲ್ಲಿ ಒಂದು ಭಾಷೆಯನ್ನಾಡುವವರ ಸಂಖ್ಯೆ ಗಣನೀಯವಾಗಿದ್ದರೆ ಮಾತ್ರ ಗಡಿ ವಿವಾದವನ್ನು ಇತ್ಯರ್ಥ ಮಾಡಬೇಕು. (೩) ವರ್ಗಾಯಿಸುವ ಪ್ರದೇಶವು ಇನ್ನೊಂದು ರಾಜ್ಯಕ್ಕೆ ಸಮೀಪವರ್ತಿಯಾಗಿರಬೇಕು. [೪] ಶೇಕಡಾ ಒಂದೆರಡು ಬಹುಮತಗಳು ಅಲ್ಪ ಕಾಲದಲ್ಲೇ ನಿಷ್ಕ್ರಿಯವಾಗಬಹುದಾದುದರಿಂದ ಸಾಧಾರಣ ಬಹುಮತವನ್ನು ಗಣನೆಗೆ ತೆಗೆದುಕೊಳ್ಳಬಾರದು. (೫) ಚುನಾವಣಾ ಫಲಿತಾಂಶವು ಜನತೆಯ ಇಚ್ಛೆಯನ್ನೇ ಪ್ರತಿಬಿಂಬಿಸುತ್ತದೆ ಎಂದು ನಂಬಲಾಗದು.

ಅತ್ಯಂತ ಜಟಿಲ ಸಮಸ್ಯೆಕ್ಕೆ ತಂದುಕೊಳ್ಳಲಾಗಿದ್ದ ಮದ್ರಾಸಾವ್ಯ—ಕರ್ನಾಟಕ ಗಡಿ ಪ್ರಶ್ನೆಯನ್ನು ಆಯೋಗವು ಬಹಳ ಸ್ಪಷ್ಟ ಪರಿಶೀಲನೆ ನಡೆಸಿದೆ. ಗಡಿ ಹೊಂದಾಣಿಕೆಯ ದೃಷ್ಟಿಯಿಂದ ಅದು ಅನುಸರಿಸಿದ ತತ್ವಗಳು ಸಕಾಲಿಕವೂ ನ್ಯಾಯೋಚಿತವೂ ಆಗಿದೆಯೆಂಬ ಪ್ರತ್ಯೇಕ ನಿಷ್ಪಕ್ಷಪಾತಿಯೂ ಒಪ್ಪಬೇಕು. ಬೆಳಗಾವಿ — ಕಾರವಾರ ನಗರಗಳು ಮತ್ತಿತರ ಅನೇಕ ಗ್ರಾಮಗಳನ್ನು ಮದ್ರಾಸಾವ್ಯವು ಕೇಳಿತ್ತು. ಆದರೆ, ಆಯೋಗವು ಕೊಡಮಾಡಿದ್ದು ನಿಪ್ಪಾಣಿ, ಕಾನಾಹರಿ ಮುಕ್ತ ಬೆಳಗಾವಿ ಗ್ರಾಮಗಳು ಮಾತ್ರ. ಈಯೆಲ್ಲ ಪ್ರದೇಶಗಳ ವಿಸ್ತೀರ್ಣ ೬೫೬.೫ ಚ. ಮೈಲಿಗಳು; ಜನ ಸಂಖ್ಯೆ ೨೨೪೧೦೦. ಇಲ್ಲಿ ಮದ್ರಾಸಾವ್ಯ ಮಾತನಾಡುವವರು ಸೇ. ೭೯.೧ ಕರ್ನಾಟಕವು ಸೊಲ್ಲಾಪುರವನ್ನೂ ಕೇಳಿತ್ತು. ೪೬೬ ಗ್ರಾಮಗಳನ್ನು ಕರ್ನಾಟಕಕ್ಕೆ ವರ್ಗ ಮಾಡಲು ಆಯೋಗ ಸಿಫಾರಸು ಮಾಡಿದೆ. ಇದರ ವಿಸ್ತೀರ್ಣ ೧೩೬೮ ಚ. ಮೈಲಿಗಳು. ಜನ ಸಂಖ್ಯೆ ೩,೫೦೦೦೦ ಕನ್ನಡ ಮಾತನಾಡುವವರು ಸೇ. ೫೭.೯. ಇದನ್ನು ಪರಿಶೀಲಿಸುವಾಗ ಆಯೋಗವು ನ್ಯಾಯವೊದಗಿಸಲು ಮಧ್ಯವರ್ತಿ ದಾರಿಯನ್ನು ಹಿಡಿದಿರುವಂತೆ ಭಾಸವಾಗುತ್ತದೆ ಚಂದ್ರಗಿರಿ ಹೊಳೆಯ ಉತ್ತರದ ಈಗಿನ ಕೇರಳ ರಾಜ್ಯದ ಕಾಸರಗೋಡು ತಾಲೂಕಿನ ಭಾಗವು ಕರ್ನಾಟಕಕ್ಕೆ ಸೇರಬೇಕೆಂಬುದೂ ವರದಿಯಲ್ಲಿನ ಮುಖ್ಯಾಂಶ. ವರದಿಯು ಈಗಾಗಲೇ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳ ಕೈ ಸೇರಿದೆ. ಅವುಗಳಮ್ಮತ ಮತ್ತು ಅಭಿಪ್ರಾಯಗಳನ್ನು ಕೇಂದ್ರಕ್ಕೆ ತಿಳಿಸಿಲ್ಲವಾದರೂ ಹೊರಗಡೆ ಪ್ರಕಾಶಗೊಂಡಿದ್ದಾರೆ. ಆಯೋಗ ನೇಮಕದ ವೇಳೆ ಕೇರಳದಲ್ಲಿ ಜನಪ್ರಿಯ ಸರಕಾರವಿಲ್ಲದ್ದರಿಂದ ಅದರ ವರದಿಯು ತನ್ನ ಸರಕಾರಕ್ಕೆ ಬಂಧನಕಾರಿಯಲ್ಲ— ಇದು ನಂಬೂದರಿಯವರ ಏಕಪಕ್ಷೀಯ, ಅಧಿಕಾರ ಉಳಿಸಿಕೊಳ್ಳುವ ತಂತ್ರ. ಆಯೋಗದ ವರದಿಯನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ— (ಏಕೆಂದರೆ, ನಾವು ಅಂಗೈ ತೋರಿಸಿ ಅವಲಕ್ಷಣ ಹೇಳಿಸಿಕೊಂಡಿದ್ದೇವೆ) ಇದು ನಾಯಕರ ಅಂತರಾತ್ಮನ ಉದ್ಗಾರ. ವರದಿಯು ಸಂಬಂಧಪಟ್ಟವರಿಗೆ ಬಂಧನಕಾರಿಯಾಗಬೇಕೆಂದೇ ಹೊದಲಾ ಅಂದಿದ್ದೇನೆ. ಇಂದೂ ಅನ್ನುತ್ತೇನೆ— ಮುಂದೆಯೂ ಅನ್ನುತ್ತೇನೆ— ಇದು ನಿಜಲಿಂಗಪ್ಪನವರ ಏಕಾಭಿಪ್ರಾಯ. ಇಂತಹ ವಿಷಮ ಸ್ಥಿತಿಯ ಪರಿಸ್ಥಿತಿಯನ್ನು ಒಮ್ಮುಖವಾಗಿಸುವುದು ಯಾರಿಂದ ತಾನೇ ಸಾಧ್ಯ?

ಪ್ರಧಾನಿ ಇಂದಿರಾಗಾಂಧಿ — ಗೃಹ ಮಂತ್ರಿ ಚವ್ಹಾಣರಿಬ್ಬರಿಗೂ ಇದು ತಲೆಕೊರೆಯುವ ಹುಳ. ಮಹಾರಾಷ್ಟ್ರದ ಪ್ರಾಯಕರ ಒತ್ತಾಯಕ್ಕಾಗಿಯೇ ಆಯೋಗದ ನೇಮಕವಾದರೆ, ಈಗ ಅವರೇ ಆಯೋಗದ ವರದಿಗೆ ವಿರೋಧಿಯಾಗಿದ್ದಾರೆ. ವಿವಾದ ತೀವ್ರಾವಸ್ಥೆಕ್ಕೆರುವ ದಾರಿಯನ್ನು ಸುಸೂತ್ರವಾಗಿ ನೆಟ್ಟಿದೆ ಇದ್ದರೆ, ಇದಕ್ಕೆ ಪರಿಹಾರವಾದರೂ ಯಾವುದು? ಆಯೋಗ ನಿಯುಕ್ತಿಯು ವೇಳೆಯೇ ನಾಯಕರು ವರದಿಯು ಬಂಧನಕಾರಿಯೆಂದು, ಈಗ ಮುಖಭಂಗವಾಗಿ ಮಾತನಾಡುವುದು ಎಂದರೆ, ಗಡಿ ಪ್ರಶ್ನೆ ಇತ್ಯರ್ಥ ಮಾಡುವುದು ಜೇಗೆಹರಿಸುವ ಮಾತುಕತೆಗಳಿಂದ ಬಗೆಹರಿಯದ್ದಂದು ಖಚಿತ. ಆಯೋಗದ ರಚನೆ ಸೂದು ದುಃ ಮಹಾರಾಷ್ಟ್ರ—ಕರ್ನಾಟಕ ಗಡಿಯಲ್ಲಿ ಸಂದರ್ಶಿಗರು ಪುಂಡಾಟಿಕೆಗೆ ನಿಸ್ಸಹಕರಿಸಿದ್ದಾರೆ. ಮಹಾಜನ ಆಯೋಗ ವರದಿಯನ್ನು ಕಾರ್ಯರೂಪಕ್ಕೆ ತಂದರೆ, ಮಹಾರಾಷ್ಟ್ರ-ಕೇರಳಗಳಲ್ಲಿ ಬ್ರಹ್ಮ ಪ್ರಮಾಣದ ಮತ ಪರ್ವತ ಹೊದಲಾಗುವ ನಡೆ

ವಚನ ಸುಧೆ

ಅಶ್ರಮಸ್ಥಾನಿ ಕಾರ್ಯಾಣಿ
ಯೋ ಮೋಘಾದನು ತಿಷ್ಠತಿ
ಸ ತೇಷಾಂ ವಿಪರಿಭ್ರಂಶಾದ್
ಭ್ರಂಶ್ಯತೇ ಜೀವಿತಾ ದಪಿ।

ಮೋಸಪೂರಿತನಾಗಿ ದುಷ್ಕರ್ಮ ಮಾಡುವವನ್ನು ಆ ಕಾರ್ಯಗಳು ವಿಫಲತೆ ಪರಿಣಾಮ ನೀಡಿದಾಗ, ತನ್ನ ಜೀವನದಿಂದಲೇ ಕೈ ತೊಳೆದುಕೊಳ್ಳುತ್ತಾನೆ.

ದಾವಂತೆ...। ಇವೆಲ್ಲವುಗಳ ಅರ್ಥವೇನು? ರಾಜ್ಯ—ಭಾಷೆಯೆಂಬ ಸಂಳುಚಿತ ಪ್ರವೃತ್ತಿ. ಈ ಪ್ರವೃತ್ತಿ ಶ್ರೀ ಸಾಮಾನ್ಯನಲ್ಲಿದ್ದರೆ, ಅಧಿಕಾರ ದಕ್ಕಿಸಿಕೊಳ್ಳುವ ಪ್ರವೃತ್ತಿ ನಾಯಕರದ್ದು. ನ್ಯಾಯ ಮಸ್ತು ಸಂಕುಚಿತತೆಗಳು ಒಂದೆಡೆಯಲ್ಲೇ ನಿಲ್ಲಲಾರವು. ಮಹಾರಾಷ್ಟ್ರದ ಏಳ್ಗೆ ಮಹಾತಾಯಿ ಕರೆನಿಸಿರುವ ಜವಾಹರು ತನ್ನ ರಾಜ್ಯದ ಜನರಿಗೆ, ನಾಯಕರಿಗೆ ನ್ಯಾಯದ ಪ್ರಥಮ ಪಾಠವನ್ನು ಕಲಿಸ ಬೇಕು; ವಿವಾದಕ್ಕೆ ಪೂರ್ಣವಿರಾಮ ಹಾಕುವಲ್ಲಿ ಸಹಕರಿಸಬೇಕು. ಇನ್ನು ಜನಪ್ರಿಯ ಸರಕಾರವಿಲ್ಲವೆಂಬ ಕಾರಣದಿಂದ ಕೇರಳ ಸರಕಾರ ಆಯೋಗದ ವರದಿಯನ್ನು ನಿರಾಕರಿಸುವುದು ಎಂದಿಗೂ ನ್ಯಾಯವಲ್ಲ. ಕೇಂದ್ರ ಸರಕಾರವು ನೇಮಿಸಿದ್ದ ಆಯೋಗವದು. ನಂಬೂದರಿಯವರು ತಮ್ಮ ಮೂಲ ತಿರುವ ಫೋಕರ ನಿಗೆ ಕಾಸರಗೋಡೆಂದು ಆಭಾಸವೆಂದು ತಿಳಿದಿದ್ದರೆ, ಅದು ಕಂಡಿತಕ್ಕೂ ಸುಳ್ಳು. ಇಂದಿರಾ ಗಾಂಧಿಯವರು ರಾಜ್ಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಪಕ್ಷೋದ್ವೇಗಿಗಳನ್ನು ಒಲಿಸಿ ವರದಿಯನ್ನು ಅಂಗೀಕರಿಸಿದರೆ, ಅವರ ಮುತ್ಸದ್ದಿತನ ವ್ಯಕ್ತವಾಗುವುದು.

ರಾಜ್ಯ ಪಕ್ಷವಾತ

ಮೇಣಿಯುದ್ದ ಪಕ್ಷ— ಪಕ್ಷಾಂತರ ಪಕ್ಷವಾತವೆಂದ ಅಲ್ಲಿ ಕೂಪ್ಪ ಕೊನೆಗೆ ರಾಷ್ಟ್ರಪತಿ ಆಳಿಕೆಯ ಅನಿವಾರ್ಯವಾಯಿತು. ಇವೀಗ ಹಂಬೂನಾ ರಾಜ್ಯಕ್ಕೂ ಇದೇ ಬಗೆಯ ಪಕ್ಷವಾತ ಬಡಿಸುಕೊಡಗಿದೆ. ಸಂಯುಕ್ತ ರಂಗವೆ ಗೆಲವರು

(ಪತ್ರದೇ ಪುಟ ನೋಡಿರಿ)

ನರಸಣ್ಣನ ನಸನ

'ಇಂದ್ರೆಸ್ಸಾ ಅಧ್ಯಕ್ಷೆರಾಗಿ ಬನ್ನಿ ಎಂದು ಸ್ವಾಗತಿಸುವಾಗ ನಿಜಲಿಂಗಪ್ಪನವರು ಊಹ್ಞೂಂ ಎಂದರಂತೆ—ತಾನು ಆ ಸುದ್ದಿಗೆ ಆಯೋಗ್ಯ—ಅಲ್ಲ, ಯೋಗ್ಯನಲ್ಲ—ಎಂದು ನನ್ನಾಡಿದರೂ ಕರೆಯುತಿದ್ದರೆ, ಬಾಡಿಗೆ ಇಲ್ಲವೆ ಮನೆಯವರೂ ಸಿಗುತ್ತಿತ್ತು. ದಿಲ್ಲಿಯಲ್ಲಿ!

ಮುಂದೆ

ಗೇಹ ರಾಜ್ಯದಲ್ಲಿ

ಎಲ್ಲು ನೋಡಿದ್ರೂ ಗೌಡ ಬಂಗಾಳಿ

'ಹೌದ್ರೀ.....'

'ಏನು?'

'ಮತ್ತೇನೂ ಇಲ್ಲ ಬಂಗಾಳದಲ್ಲಿನ ವಿಚಿತ್ರವೇನೂಂತ...'

'ಯಾಕೆ? ಏನಾಯಿತು?'

'ಆಗೋದೇನು? ಪ್ರಾದೇಶಿಕ ಕಾಂಗ್ರೆಸ್ ಸಮಿತಿಯನ್ನು ರದ್ದುಗೊಳಿಸಿದ್ದಾಯಿತು; ನೇಮಿಸಿದ್ದ ಆಡ್‌ಹಾಕ್ ಸಮಿತಿಯೂ ಈಗ ರಾಜೀನಾಮೆ ನೀಡಿದೆಯಂತೆ...'

'ಆಯ್ಯೋ, ಇದ್ರಲ್ಲೇನು ವಿಶೇಷ?'

"ವಿಶೇಷವೇನೂ ಇಲ್ಲಾನ್ರಿ. ಕಾಂಗ್ರೆಸ್ಸಿನ ಪುನರ್ಜೀವನಕ್ಕನುಕೂಲವಾದುದಂತೆ ಎಲ್ಲರೊಡನೆಯೂ ವಿಚಾರಿಸಿ, ವಿಮರ್ಶಿಸಿ ಗುಲ್ಜಾರೀಲಾಲ ನಂದಾರು ಆಡ್ ಹಾಕ್ ಸಮಿತಿ ನೇಮಿಸ ಬೇಕೆಂದು ಸಿಫಾರಸ್ಸು ಮಾಡಿದ್ರು."

"ಹೌದು, ಕಾಮರಾಜರೂ ಮುಂದಕ್ಕನ್ನು ಒಪ್ಪಿ ಸಮಿತಿಯನ್ನು ರಚಿಸಿದ್ರು, ಈಗ ಆದರ ಸದಸ್ಯರೆಲ್ಲಾ ರಾಜೀನಾಮೆ ಇತ್ತಿದ್ದಾರೆ..."

"ಆದೇ ಅಂದದ್ದು. ಬರಿಯ ಒಂದು ವಾರದಲ್ಲೇ ಕಾಂಗ್ರೆಸಿಗೆ ಹೊಸ ಜೀವ ತಂದು ಕೊಟ್ಟರೇನು?'

"ಇದ್ದರೂ ಇರಬಹುದು...ಅಥವಾ ಇನ್ನೊಂದೂ ಇರಬಹುದು...."

ಏನದು?"

"ಕಾಂಗ್ರೆಸ್ ಹೆಣಕ್ಕೆ ಹೊಸ ಪ್ರಾಣ ಪ್ರತಿಷ್ಠೆ ಕಾರ್ಯ ತನ್ನಿಂದಾಗದೆಂದು..."

'ಹ್ಞೂಂ....ಆದ್ರೂ ನೋಡಿ..."

'ಏನು?'

'ಅಲ್ಲಿನ ಅಶುಭ್ಯ ಘೋಷ್ ಬೊಡ್ಡ ಗೌಡ ಬಂಗಾಳಿ ಅಂತ ಈಗ ಗೊತ್ತಾಯ್ತು..."

'ಹೇಗೆ?"

'ನೋಡಿ, ಹೇಳಿ ಕೇಳಿ ಕಾಮರಾಜರೂ ಘೋಷರೂ ಹಾಲು ಜೇನ್ನು ಮುರಾರ್ಜಿ ಭಾಯಿಯನ್ನು ಹಿಂದೆ ದೂಡಿ ಇಂದಿರಮ್ಮನನ್ನು ಮುಂದೆ ತರುವಲ್ಲಿ ಎರಡು ಬಾರಿಯೂ ಇವರು ಕೈ ಹರಡಿದ್ದರಲ್ಲಾ ...'

"ಹಾಗು. ಆದ್ರೆ, ಆವರ ಬಿಗಿ ಮುಷ್ಟಿಯಿಂದಾಗಿಯೇ ಆಜಯ ಮುಖರ್ಜಿ, ಹುಮಾಯೂನ ಕಬೀರ ಮುಂತಾದವರು ಕಾಂಗ್ರೆಸ್ ಬಿಟ್ಟು ಬಂಗ್ಲಾ ಕಾಂಗ್ರೆಸಿಗರಾದದ್ದು— ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸು ಸೋತದ್ದು...."

"ಇರಬಹುದೂನ್ರಿ. ಅದಕ್ಕಾಗಿಯೇ, ಘೋಷ ರಾವಣನಿಂದ ಕಾಂಗ್ರೆಸ್ಸಿನ ಸೀತೆಯನ್ನು ಬಂಧಮುಕ್ತಗೊಳಿಸಲು ನಂದಾ 'ಹನುಮಂತನ ಯೋಜನೆಯನ್ನೇನೋ ಕಾಮರಾಜ ರಾಮ ಒಪ್ಪಿದ. ಆದರೆ, ಈ ರಾವಣನೇನು ಸಾಮಾನ್ಯನಲ್ಲವೆನ್ರಿ."

"ಆದಕ್ಕೇ ಅನ್ನೋದು ರಾವಣಾಯ ಸ್ವಸ್ತಿ ಅಂತ. ಈ ರಾವಣನ ಕಾರಬಾರದ ಮುಂದೆ ತಮ್ಮದೇನು ನಡೆಯುತ್ತೆ ಅಂತ ರಾಮನ ಮುಂದೆ ತಮ್ಮ ಅಸಾಮರ್ಥ್ಯವನ್ನು ತೋಡಿಕೊಳ್ಳುವ ಬದಲು ರಾಜೀನಾಮೆ ನೀಡಿದರು ಜಾಂಬವಾದಿಗಳು.

'ಅಂದರೆ, ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸು ಮತ್ತೆ ತಲೆಯೆತ್ತುವಂತಿಲ್ಲ..."

"ಯಾಕೆ ಎತ್ತಬೇಕೂಂತ?"

'ಆಯ್ಯೋ, ಏನಂತೀರಾ..."

"ಹ್ಞಾಂ ತಪ್ಪಿದೆ...ಮತ್ತೆ ನೋಡು, ಮೂತಿನ ಭೂರದಲ್ಲಿ ಏನೋ ಅಂದು ಬಿಟ್ಟೆ. ಬಂಗಾಳದಲ್ಲಿ ಕಾಂಗ್ರೆಸ್ಸಿನ ಸಮೂಧಿ ಪರಿಪೂರ್ಣವಾದಂತೆಯೇ ಸರಿ."

"ಹೀಗೆ ಖಡಾಕಂಡಿಷ ಹೇಗನ್ನುತ್ತೀರಿ?

"ಹೇಗೆ ಅಂದರೆ, ಅಷ್ಟು ದುರ್ಬಲ ಸರಕಾರವಾದರೂ ಘೊರೈವತ್ತು ತೇಪೆ ಹಚ್ಚಿ ಅಲ್ಲಿ ಮುಂದುವರಿಯುತ್ತಿರುವಾಗ, ತಾವು ಒಂದಾಗಬೇಕು, ಕಾಂಗ್ರೆಸ್ಸನ್ನು ಬಾಳಿಸಬೇಕೆಂಬ ಯೋಚನೆಯೇ ಅವರಿಗಿಲ್ಲ...."

'ಇಲ್ಲಾಂತ ಹೇಗನ್ನುತ್ತೀರಿ?'

"ಒನ್ಮೆ ಆಡ್‌ಹಾಕ್ ಸಮಿತಿ ರಚನೆಯಾಗಬೇಕು ಅಂದ ಮಹನೀಯರೇ ಎಳೇ ಎಳು ದಿನದಲ್ಲಿ ರಾಜಿ ಕೊಡಬೇಕಾದ್ರೆ...."

'ಹ್ಞೂಂ...ಇರಲಿ, ಅಲ್ಲಾ, ನನಗೊಂದು ಪೊಳ್ಳಿತದೆ...."

'ಏನು?'

"ಮತ್ತೇನೂ ಇಲ್ಲ. ಘೋಷರು ಆಡ್‌ಹಾಕ್ ಸಮಿತಿಗೆ ವಿರೋಧವಿದ್ದರು. ತಮ್ಮ ಆಪ್ತ ಕಾಮರಾಜರಿಗೂ ಇದನ್ನು ತಿಳಿಸಿದ್ದರು. ಆದರೆ, ನಂದಾರಿಗೆ ಬೇಜಾರಾಗಬಾರದೂಂತ ಇವರಿಬ್ಬರೂ ಕೂಡಿ ಆಡಿದ ನಾಟಕವೇಕಾಗ ಬಾರದಿದು?'

"ಹೌದೇ, ನಾನು ಏನೋ ಅನ್ನುತ್ತಿದ್ದೆ ನಿನ್ನ ತಲೆ ಎಂದರೆ ತಲೆ. ಗಜ್ಜಾ ಗೌಡ ಬಂಗಾಳಿ..."

"ಯಾರು? ನಾನೇ?"

"ಅಯ್ಯೋ, ಶಾಕಂ ಪಾಪಂ ಶಾಂಕಂ ಪಾಪಂ'

'ಮತ್ತೆ?'

'ಅಶುಭ್ಯ ಘೋಷ್—ಕಾಮರಾಜ್...'

"ಅಯ್ಯೋ, ಇದು ಏನನ್ನುತ್ತೀರಿ? ನಾನು ಹೀಗೇ ಅಂದರೆ...."

'ನೋಡಮ್ಮ, ಇದು ಹೀಗಲ್ಲ ಅನ್ನೋದಕ್ಕೆ ಸಾಕಷ್ಟು ಪುರಾವೆ ಸಿಗುವ ತನಕ ಇದು ಹೀಗೇನೇ ಎನ್ನುವುದು ಸಿದ್ಧಾಂತ."

"ಅಂದರೆ?"

'ನಾಲ್ಕು ಗುಣಿಸು ನಾಲ್ಕು ಎಷ್ಟು?"

"ಹದಿನಾರು...."

'ಹೌದು, ನಾಲ್ಕು ನಾಲ್ಕಿಲ್ಲ ಹದಿನಾರು ಎಲ್ಲ ಅಂತ ಪ್ರಮಾಣ ಬದ್ಧವಾಗಿಸಿದ್ದವಾಗುವವರೆಗೂ ನಾಲ್ಕು ನಾಲ್ಕಿಲ್ಲ ಹದಿನಾರು. ತಿಳೀತಲ್ಲ?'

'ಹ್ಞೂಂ... ಮತ್ತೆ ನೋಡಿ..."

"ಎಷ್ಟು ಸಲವಪ್ಪೆ ನೋಡೋದು...."

"ಈಗೊಂದು ಸಲ ನೋಡಿ..."

'ಏನನ್ನು?'

'ಅದನ್ನೂ ಹೇಳಬೇಕೆ?"

"ಹ್ಞೂಂ...ಹೋಡಿ ನೋಡಿ ಸಾಕಾಯ್ತು...."

'ಅದು ಯಾವಾಗ್ಲೂ ಹಾಗೇ. ನನ್ಗೆ ಸಾಕಾಗೋದಿಲ್ಲ ಆಲ್ಲ?"

'ಯಾಕೆ?'

'ನೋಡಿ ನೋಡಿ, ಕೇಳಿ ಕೇಳಿ, ಹೂಡಿ ಮೂಡಿ...."

"ಸಾಕಮ್ಮಾ ಸಾಕು. ಸದ್ಯ ಏನು ಸಮೂಚಾರ? ಅದಾದ್ರೂ ಬರ್ಲಿ...."

"ಸಮೂಚಾರವೇನೂ ಇಲ್ಲಾನ್ರಿ.....ಅದ್ರೂ..."

'ಅದೇ....ನಿಮ್ಮೇನು? ಮನೆ ಉರಿದು ಹೋದ್ರೂ ಅದು ಸಮೂಚಾರಾನೇ ಆಗೋಲ್ಲ....ಆಪ್ರಿಯಲ್ಲೇ ನಿಲ್ಲುತ್ತೆ...."

'ಅಂತಹ ಸಂಗ್ತಿ ಏನು ನಡೀತೀಗ?'

'ನಡೀಬೇಕಾನು? ಕಾಮರಾಜರು ಮತ್ತೆ ಕಾಂಗ್ರೆಸ್ ಅಧ್ಯಕ್ಷನಾಗಿ ಬಾರದೂಂತ ಇಂದಿರಮ್ಮ ಅನ್ನುತ್ತಾರಂತೆ...'

"ಸರೀನ್ರಿ, ಪಾಪ, ಎಷ್ಟು ಬಾರೀಂತ ಕಾಮರಾಜರು ಮತ್ತೂ ಮತ್ತೂ ಆ ಭಾರ ಹೊರ ಬೇಕು?"

"ಅದು ಸರೀನ್ರಿ. ಆದ್ರೆ ಈ ಹೆಂಗಸ್ರ ಜಾತಿಯೇ ಹೀಗೆ. ತನ್ನನ್ನು ಪ್ರಧಾನ ಮಂತ್ರಿ ಮಾಡುವ ನಾಟಕದ ಮಹಾಸೂತ್ರಧಾರನಿಗೇ ಕೈಕೊಡುವುದೆಂದರೆ..."

"ಕೈ ಕೊಟ್ಟದ್ದು ಏನು? ಎರಡು ಅವಧಿ ಮುಗೀತು. ಇನ್ನವರು ಪಾಪ— ತುಸು ಹಾಯಾಗಿರಲೀಂತ. ಮತ್ತೆ ಹೊಸ ರಕ್ತಕ್ಕೆ ಅವಕಾಶ ಮಾಡಿ ಕೊಡಬಾರದೇಕೆ?'

'ಅದು ಸರೀನ್ರಿ. ಆದ್ರೆ, ಕಾಮರಾಜರ ಮೇಲೆ ಚುನಾವಣೆಯ ಸೋಲಿನ ಆರೋಪ ಬೇರೆ ಇದೆ.'

"ಅಜೊಂದು ನೆಪ. ಮುಖ್ಯವಾಗಿ ನನಗೊಂದು ಅನ್ನಿಸುತ್ತದೆ...."

"ಏನದು?"

"ನೋಡಿ, ಕಾಮರಾಜರು ಭಾಷಾವಾರು ಬಂಧದಲ್ಲಿ ವಿವಿಧ ಗತ ಪ್ರಧಾನಿ ನೆಹರೂರವರು ಹಿಂದ್ಯೇತರ ರಾಜ್ಯಗಳಿಗೆ ನೀಡಿದ ಭರವಸೆಯನ್ನು ಬೆಂಬಲಿಸಿ ಆದಕ್ಕೆ ಕಾಯದೆ ರೂಪ ತರ ಬೇಕೆನ್ನುವವರು. ಉಗ್ರ ಹಿಂದೀ ವಾದಿಗಳು ರಾತ್ರೆ ಬೆಳಗಾಗುವುದರೊಳಗೇನೇ ಹಿಂದಿಯನ್ನು ಏಕಮಾತ್ರ ಅಧಿಕೃತ ಭಾಷೆ ಸೂಡಬೇಕೆನ್ನುವವರು ತಾನೆ? ಸೇಠ್ ಗೋವಿಂದದಾಸರು ಇವರ ಪ್ರತಿನಿಧಿ. ಆದುದರಿಂದ, ಕಾಮರಾಜರನ್ನು ಗದ್ದುಗೆಯಿಂದುರುಳಿಸಿದರೆ..."

. "ಹೇ ಮೂರಾಯ್ತು, ಏನಿದು ಮಾತು? ಕಾಮರಾಜರು ಅನ್ನುವುದರಲ್ಲಿ ತಪ್ಪೇನು? ಅದ್ರ ಬಗ್ಗೆ ಅವ್ರ ಮೇಲೆ ಪ್ರತೀಕಾರ ಮಾಡುವುದು ಅಂದ್ರ ಹಿಂದಿಗ ಮತ್ತಷ್ಟು ವಿರೋಧ ಹೆಚ್ಚಾದೀತು — ದೇಶ ಒಡೆದು ಹೋದೀತು...ನಿಜ ಕಾರಣವೆಂದರೆ, ಇಂದಿರಮ್ಮ- ಕಾಮರಾಜ ನಡುವೆ ಒಂದಲ್ಲ ಹಲವು ಭಿನ್ನ ಮತಗಳಿವೆಯಂತೆ ಕಾಮರಾಜರು ಎರಡು ಅವಧಿಗಳ ನಂತರವೂ ಯಾಕೆ ಮುಂದುವರಿಯಬೇಕು? ಮೇಲೆ ಚುನಾವಣೆಯಲ್ಲಿ ಸೋತವರು ಜವರು, ಕಾಮರಾಜರಿಗಿಂತ ಈ ಹೊಲಸು ರಾಜಕಾರಣದಿಂದ ತುಸು ವಿರಾಮವಿರಲೀಂತ...'

'ಆದೂ ಹೌದೂನ್ರಿ. ಇಲ್ಲವಾದ್ರೆ, ಮಹಾಜನ ಆಯೋಗ ನೇಮಿಸುವ ವೇಳೆ, ಅದರ ವರದಿಯನ್ನು ಒಪ್ಪ ಬೇಕೆಂದ

(ಒಂಭತ್ತನೇ ಪುಟ ನೋಡಿರಿ)

ದಕ್ಷಿಣ ಕನ್ನಡ ಪುತ್ತೂರು II
ಎಡಿಶನಲ್ ಮುನ್ಸಿಫ್
ಕೋರ್ಟಿನಲ್ಲಿ

O. S. 280/1967

ಸಯದ್ ಸಾಬಾ ಸಾಹೆಬ್ —ವಾದಿ
ಮುತ್ತು
ಪುತ್ತಬ್ಬ ಬ್ಯಾರಿ —ಪ್ರತಿವಾದಿ

To

ಪುತ್ತಬ್ಬ ಬ್ಯಾರಿ, ಅಮ್ಮಿದೆ ಬ್ಯಾರಿಗಳ ಮಗ, ಪುತ್ತೂರು ತಾಲೂಕು ಪಾಲ್ತಾಡಿ ಗ್ರಾಮದ ಬಟಾರ ಚೆಕ್ಕಿತ್ತಾಡಿ ಎಂಬಲ್ಲಿರುವವರು.

ಸದ್ರಿ ಮೇಲಿನ ವ್ಯವಹಾರದಲ್ಲಿ ಪ್ರತಿವಾದಿಯಾದ ನಿಮ್ಮ ಮೇಲೆ ವಾದಿಯು ತನ್ನ ದಿ. ಪ್ರೊನೋಟಿನ ವಸೂಲಿ ಬಗ್ಗೆ ಮಾಡಿದ ದಾವೆಯಲ್ಲಿ ನಿಮ್ಮ ನೋಟೀಸಿನ ಹಾಜರಾತಿ ಬಗ್ಗೆ ತಾರೀಕು 28—11—1967 ಕ್ಕೆ ವ್ಯಾದೆ ಇಟ್ಟಿರುತ್ತದೆ. ಆ ದಿವಸ ನೀವು ಖುದ್ದಾಗಲೀ ಯಾ ವಕೀಲರ ಮುಖಾಂತರ ನಿಮ್ಮ ಉದಾಸೀನತೆ ಕೊಡದಿದ್ದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾದೀತೆಂತ ಈ ಮೂಲಕ ನಿಮಗೆ ತಿಳಿಸಲಾಗಿದೆ.

ಕೋರ್ಟು ಹುಕುಂ ಪ್ರಕಾರ

ಕೆ. ರಘುನಾಥ ರೈ
ವಾದಿ ಕಡೆ ಎಡಿಷ್ನಲ್ ಕೋರ್ಟ್
ಪುತ್ತೂರು, ತಾ. 3—11—67

ವಿದ್ಯಾವರ್ಧಕ ಸಂಘ (ರಿ.), ಶಿರ್ವ, ದ. ಕ.

ಮಹಾಸಭೆಯ ನೋಟೀಸು

ಮೇಲಿನ ಸಂಘದ ಮಹಾಸಭೆಯು ತಾ. 11—11—1967ನೇ ಶನಿವಾರ ಅಪರಾಹ್ನ ಘಂಟೆ 3-00ಕ್ಕೆ ಶಿರ್ವ ಹಿಂದೂ ಹಾಯರ್ ಎಲಿಮೆಂಟರಿ ಶಾಲಾ 'ವಿದ್ಯಾನಂದ ಸದನ'ದಲ್ಲಿ ಜರಗಲಿರುವುದು. ಸದಸ್ಯರು ಹಾಜರಿರಬೇಕಾಗಿ ವಿನಂತಿ

ಸಭೆಯಲ್ಲಿ ಬರತಕ್ಕ ವಿಷಯಗಳು:

1. ಸಂಘವು ನಡೆಯಿಸಿಕೊಂಡು ಬರುತ್ತಿರುವ ವಿದ್ಯಾ ಸಂಸ್ಥೆಗಳನ್ನು ಮಂಗಳೂರಿನ ಬಂಟರ ಯಾನೆ ನಾಡವರ ಸಂಘಕ್ಕೆ ವರ್ಗಾಯಿಸುವುದು.
2. ಇತರ ವಿಷಯಗಳು.

ಶಿರ್ವ, ದ. ಕ.
23-10-1967

ಕೆ. ವಾಸುದೇವ ಶೆಟ್ಟಿ,
ಕಾರ್ಯದರ್ಶಿ.

ಪಿ. ತಿವಾಜಿ ಶೆಟ್ಟಿ,
ಅಧ್ಯಕ್ಷ.

ಬೆಳ್ತಂಗಡಿ ಮುನ್ಸಿಫ್
ಕೋರ್ಟಿನಲ್ಲಿ

R. I. A. 549/67 in O. S. 180/63

ಚಿನ್ನಮ್ಮು ಸಹಾ-ಅರ್ಜಿದಾರರು, ವಾದಿರು.
ಜಾಕಪ್ಪ ಸಹಾ —ಎದ್ರಿರು, ಪ್ರತಿವಾದಿರು.

ಬೆಳ್ತಂಗಡಿ ತಾಲೂಕು ಗರ್ತಾಡಿ ಗ್ರಾಮದ ಪಿಂಗಿಲ ಎಂಬಲ್ಲಿರುವ ಪಮ್ಮು ಹೆಂಗ್ಸಿನ ಪಾಗಲು ತಿನೇ ಎದ್ರಿ—ಪೊವ್ವು ಮತ್ತು ಬೆಳ್ತಂಗಡಿ ತಾಲೂಕು ನಾಲ್ಕೂರು ಗ್ರಾಮದ ಬೊಕ್ಕಸ ಎಂಬಲ್ಲಿರುವ ಸಂಕಪ್ಪುಳೆ ಮಗ ದೀಕಯ್ಯ—ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ

ಮೇಲಿನ ಫೈನಲ್ ಡಿಕ್ರಿ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 21—11—67ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜೆ ನಿಮ್ಮ ವಿಷಯದಲ್ಲಿ ನಿಮಗೆ ಅಶ್ಚೇಸವಿದ್ದಲ್ಲಿ ನೀವು ಸ್ವತಃ ಯಾ ಪರವಾಲು ವಕೀಲರ ಮುಖಾಂತರ ಕೋರ್ಟಿಗೆ ಹಾಜರಾಗಿ ಉದಜಾಬನೆ ಕೊಡಬೇಕಾಗಿದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ವಿಚಾರಣೆಯನ್ನು ಯುಕ್ತವೆಂದಂತೆ ತೀರ್ಮಾನಿಸಲಾದೀತು. ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣರಾವ್
ಎಡ್ವೊಕೇಟ್
ಬೆಳ್ತಂಗಡಿ, 26—10—67

ತುಳುನಾಡಿನ ರಾಣಿಯರು

ಲೇಖಕರು: ಶ್ರೀ ಕೆ. ಜಿ. ವಸಂತ ಮಾಧವ, ಎಂ. ಎ.

ಪೀಠಿಕೆ

ತುಳುನಾಡು ಕರ್ನಾಟಕ ಪರಿಶ್ರಮ, ಮತ್ತು ಸಂಸ್ಕೃತಿಯು ಬೆಳವಣಿಗೆಗೆ ತನ್ನ ಅಮೂಲ್ಯ ಕಾಣಿಕೆಯನ್ನು ನೀಡಿದೆ ಕರ್ನಾಟಕ ಸಂಸ್ಕೃತಿಯನ್ನು ವಿಕಸಿಸಲು ತುಳುನಾಡು ಸಹಾಯ ಮಾಡಿದೆ ಕರ್ನಾಟಕದ ರಾಜಕೀಯ ಭಾಗವಾದ ಪ್ರಾಚೀನ ತುಳುನಾಡು ಬಾರಕೂರ ಪಶ್ಚಿಮ ಕರಾವಳಿಯಲ್ಲಿ ಉತ್ತರದಲ್ಲಿ ಗೋಕರ್ಣದಿಂದ ಹಿಡಿದು ದಕ್ಷಿಣದಲ್ಲಿ ಪಯಸ್ವಿನಿ ನದಿಯ ವರೆಗೆ ಹಬ್ಬಿತ್ತು. ಆದರೆ ಕಾಲಕ್ರಮೇಣ ತುಳುನಾಡು ಉತ್ತರದ ಹಲವಾರು ಭಾಗಗಳನ್ನು ಕಳೆದುಕೊಂಡಿತು. ಈಗ ಅದು ಉತ್ತರದಲ್ಲಿ ಕಲ್ಯಾಣಪುರ ಹೊಳೆಯಿಂದ ದಕ್ಷಿಣದಲ್ಲಿ ಚಂದ್ರಗಿರಿ ನದಿಯ ವರೆಗೆ ಹಬ್ಬಿದೆ. ತುಳು ಸಂಸ್ಕೃತಿಯು ಕರ್ನಾಟಕ ಸಂಸ್ಕೃತಿಯ ಅಂಗವೋ? ಕೇರಳ ಸಂಸ್ಕೃತಿಯು ಅಂಗವೋ ಎಂಬ ವಿಚಾರದಲ್ಲಿ ಇತಿಹಾಸಿಗಾರರಲ್ಲಿ ಭಿನ್ನಾಭಿಪ್ರಾಯವಿದೆ. ತುಳುನಾಡಿನ ಇತಿಹಾಸವನ್ನು ವಿಮರ್ಶಿಸಿದಾಗ ಇಲ್ಲಿ ಹಲವಾರು ರಾಜಮನೆತನಗಳು ಆಳಿದ್ದವೆಂಬ ವಿಷಯ ತಿಳಿದು ಬರುತ್ತದೆ. ಆದರೆ ಇಲ್ಲಿ ಆಳಿದ ರಾಜಮನೆತನಗಳು ಕರ್ನಾಟಕದ ಇತರ ಅರಸರಂತೆ ವಿಶಾಲ ಸಾಮ್ರಾಜ್ಯವನ್ನು ಕಟ್ಟಲಿಲ್ಲ. ಇಲ್ಲಿ ಆಳಿದ ಹೆಚ್ಚಿನ ರಾಜಮನೆತನದವರು ಸಾಮಂತ ಅರಸರಾಗಿದ್ದರು. ಆದರೆ ಈ ಸಾಮಂತ ಅರಸರು ಕರ್ನಾಟಕದ ಸಂಸ್ಕೃತಿಯ ಬೆಳವಣಿಗೆಗೆ ಹೆಚ್ಚಿನ ಸಹಾಯ ಮಾಡಿದ್ದರು. ಇವರು ಕರ್ನಾಟಕದ ಅಂಗವೆಂದಿದ್ದುಕೊಂಡು ಕಲೆ, ಸಾಹಿತ್ಯ, ಧರ್ಮ ಸಂರಕ್ಷಣೆಗಳನ್ನು ಪ್ರೋತ್ಸಾಹಿಸಿ ಕರ್ನಾಟಕದ ಸಂಸ್ಕೃತಿಯನ್ನು ವಿಕಸಿಸುವಂತೆ ಪ್ರಯತ್ನಿಸಿದರು. ಪ್ರಸಿದ್ಧ ಇತಿಹಾಸಗಾರ ಡಾ॥ಆರ್. ನರಸಿಂಹಾಚಾರ್ ಅವರಂತೆ ರಾಜಕೀಯ, ಸಂಸ್ಕೃತಿ ಬೆಳವಣಿಗೆಗೆ ಸಾಮ್ರಾಟ ಮನೆತನಗಳೇ ಯಾವಾಗಲೂ ಸಹಾಯ ಮಾಡಿದ್ದಲ್ಲದೇ ಸಾಮಂತ ರಾಜಮನೆತನಗಳೂ ಸಹಾಯ ಮಾಡಿದ್ದವು. ಇದು ಕರ್ನಾಟಕದ ವಿಷಯದಲ್ಲಿ ಸತ್ಯವಾಗಿದೆ. ಕರ್ನಾಟಕದ ಸಂಸ್ಕೃತಿ ಮತ್ತು ಹಿರಿಮೆಯನ್ನು ಕಾಪಾಡಿ ಬರಲು ಸಾಮಂತ ಅನೇಕರಿಗೂ ಬಹಳ ಸಹಾಯ ಮಾಡಿವೆ. ತುಳುನಾಡನ್ನು ಆಳಿದ ಸಾಮಂತ ರಾಜಮನೆತನಗಳಲ್ಲಿ ಅಳುಪರು, ಬಾರಕೂರಿನ ಪಾಂಡ್ಯರು, ಬಂಗ ಅರಸರು, ಚೌಟ ಅರಸರು ಅಜಲರು, ಬೈರರಸ ಒಡೆಯರು, ಪೂಳಿ ಸಾವಂತರು, ಬೈಲಂಗಡಿ ಮೂಲರು, ಸುಕಾಲ ಹೊಳಾಹರ್ಯುಹೊನ್ನಯ ಕಂಬಳಿ ವಂಶದ ಅರಸರು ಬಿನ್ನಾಣ ವಂಶದ ಅರಸರು, ವಿಟ್ಲದ ಅರಸರು ಕುಂಬಳೆ ಅಳಪರು ಕೂಲತ ಅರಸರು, ನೀಲೇಶ್ವರದ ಅರಸರು ಮತ್ತು ಪಾಳೆಯಗಾರರೆಂಬ ಜೈನ ಬಲ್ಲಾಳರು, ಕೆಲವು ರಾಜಮನೆತನಗಳಲ್ಲಿ ರಾಣಿಯರು ರಾಜ್ಯವನ್ನು ರಾಜಾಜ್ಞೇ ಪರಾಕ್ರಮದಿಂದಲೂ ಸಾಮರ್ಥ್ಯದಿಂದಲೂ ಆಳಿದ್ದರು. ಈ ರಾಣಿಯರು ಕರ್ನಾಟಕವನ್ನು ಪರಕೀಯರ ಆಕ್ರಮಣದಿಂದ ರಕ್ಷಿಸಿ, ಸಾಹಿತ್ಯಗಳನ್ನು ಪ್ರೋತ್ಸಾಹಿಸಿದ್ದರು.

ಬಂಗ ರಾಣಿಯರು

ತುಳುನಾಡನ್ನು ಆಳಿದ ಬಂಗರ ಅರಸರಲ್ಲಿ ರಾಣಿಯರು ಬರುತ್ತಾರೆ. ಈ ವಂಶದವರು 1079ರಿಂದ 1838ರ ವರೆಗೆ ತುಳುನಾಡಿನ ಕೆಲವು ಭಾಗದಲ್ಲಿ ಆಳುತ್ತಿದ್ದರು. ಇವರು ಹೊಯ್ಸಳ ವಿಜಯನಗರ ಇಕ್ಕೇರಿ ಅರಸರ, ಕೈದರ ಆಲಿಬೆಟ್ಟು ಸುಲ್ತಾನರ ಮತ್ತು ಇಂಗ್ಲೀಷರ ಸಾಮಂತರಾಗಿದ್ದರು. ಇವರ ರಾಜಧಾನಿ ಕಲವು ಕಾಲ ನಂದಾವರವಾಗಿತ್ತು. ಈ ರಾಜವಂಶದಲ್ಲಿ ವೀರ ಎಂಬ ರಾಣಿಯು ಕ್ರಿ. ಶ. 1239-1240ರ ವರೆಗೆ ಆಳಿದ್ದಳು. ಪದುಮಲದೇವಿ ಎಂಬ ಇನ್ನೊಬ್ಬ ರಾಣಿಯು 1274 — 1287ರ ವರೆಗೆ ಆಳಿದ್ದಳು. ಸಾಮ್ರಾಜ್ಯ ಹೀನ ಸ್ಥಿತಿಯಲ್ಲಿರುವಾಗ, ಬಂಗರು ಮನೆತನದ ಶಂಕರ ದೇವಿಯು ಸ್ವತಂತ್ರವಾಗಿ ಆಳಿದ್ದಳು. ಇವಳ ಕಾಲ 1324—1349. ಇವಳ ಕಾಲದಲ್ಲಿ ವಿಜಯನಗರ ಅರಸನಾದ ಸೋಯಿದೇವನು ಮಂಗಳೂರಿನಲ್ಲಿ ಮಂಡಲೇಶ್ವರನಾಗಿದ್ದನು. ಇವನು ಶಂಕರ ದೇವಿಗೆ 7 ಸೀಮೆಗಳನ್ನು ಬಿಟ್ಟುಕೊಟ್ಟು ಒಡೆಯ ಎಂಬ ಬಿರುದನ್ನು ಕೊಟ್ಟನು. ಈ ವಂಶದ ಇನ್ನೊಬ್ಬ ರಾಣಿ ಮೂದ ತಿನೇ ಶಂಕರದೇವಿಯು ಕೂಳೂರಿನಲ್ಲಿ ಆರಮನೆಯನ್ನು ಕಟ್ಟಿಸಿದಳು. ಅವಳ ಕಾಲದ ತಾಮ್ರ ಶಾಸನಗಳ ಪ್ರಕಾರ ಶಂಕರದೇವಿಯು ಹಲವು ದೇವಸ್ಥಾನಗಳಿಗೆ ಉಂಬಳಿ ಬಿಟ್ಟಿದ್ದಳು. ಇವಳು ಕ್ರಿ. ಶ. 1631—58ರ ವರೆಗೆ ಆಳಿದ್ದಳು. ಇವಳು ಕೃತಜ್ಞತಾಭಾವದಿಂದ ಇಕ್ಕೇರಿ ಅರಸರಿಗೆ ಕೊಡಬೇಕಾದ ಕಪ್ಪವನ್ನು ನಿಲ್ಲಿಸಿದಳು. ಇದರಿಂದ ಇಕ್ಕೇರಿ ಶಿವಪ್ಪನಿಗೆ ಸಿಟ್ಟು ಬಂದು ನಗರಕ್ಕೆ ಬರಬೇಕೆಂದು ಹೇಳಿ ಕಳುಹಿಸಲು ಅದನ್ನು ಅವಳು ತಿರಸ್ಕರಿಸಿದಳು. ಆದರೆ ಪರಿಸ್ಥಿತಿಯ ಒತ್ತಡದಿಂದ ಅವಳು ಇಕ್ಕೇರಿ ಅರಸರೊಡನೆ ಒಪ್ಪಂದ ಮಾಡಿಕೊಂಡಳು.

ಚೌಟ ರಾಣಿಯರು

ತುಳುನಾಡಿನಲ್ಲಿ ಆಳಿದ ಇನ್ನೊಂದು ರಾಜಮನೆತನ ಚೌಟರದು. ಈ ವಂಶದಲ್ಲಿ ಹಲವು ರಾಣಿಯರು ರಾಜ್ಯ ಭಾರವನ್ನು ಮಾಡಿದ್ದರು. ಇವರು ಹೊಯ್ಸಳ ವಿಷ್ಣುವರ್ಧನನ ಸಂತರು ತುಳುನಾಡಿನಲ್ಲಿ ಪ್ರಾಮುಖ್ಯತೆಗೆ ಬಂದರು. ಈ ವಂಶದವರು 1179ರಿಂದ 1838ರ ವರೆಗೆ ತುಳುನಾಡಿನಲ್ಲಿ ಸಾಮಂತ ಅರಸರಾಗಿ ಆಳಿದರು. ಮೊದಲು ಇವರ ರಾಜಧಾನಿ ಉಲ್ಲಾಳವಾಗಿತ್ತು. ಬಳಿಕ ಈ ವಂಶದವರು ಮಂತ್ರಿಗೆ ಮಾಡುಬಿದ್ರೆಯನ್ನು ರಾಜಧಾನಿಯಾಗಿ ಮಾಡಿಕೊಂಡರು. ಈ ವಂಶದ ಕುಲದೇವರು ಉಲ್ಲಾಳದ ಸೋಮೇಶ್ವರ ಸೋಮನಾಥನು ಈ ರಾಜವಂಶದಲ್ಲಿ 1ನೇ ಅಬ್ಬಕ್ಕದೇವಿ, ಪದುಮಲಾದೇವಿ, 1ನೇ ಚೆನ್ನಬೈರಾದೇವಿಯೆಂಬವರು —ರಾಜ್ಯವನ್ನು ಆಳಿದ್ದರು. 2ನೇ ಅಬ್ಬಕ್ಕದೇವಿಯು ಈ ರಾಜಮನೆತನದಲ್ಲಿ ಆಳಿದ ರಾಣಿಯರಲ್ಲಿ ಶ್ರೇಷ್ಠಳು. ಇವಳು 1541—1582ರ ವರೆಗೆ ಆಳಿದಳು. ಇವಳು ಲಕ್ಷ್ಮಪ್ಪರಸರ ಬಾಗಿಲಿನಲ್ಲಿ ಮದುವೆಯಾಗಿದ್ದಳು. ಈ ರಾಜನು ವಿಧಿವಶನಾಗಲು ಅವನ ಅಳಿಯ ಕಾಮದೇವನು ಸಟ್ಟಕ್ಕೆ ಬಂದನು. ಇವನು ತನ್ನ ಅತ್ತೆಯೊಡನೆ ಆಗಾಗ ಜಗಳವಾಡುತ್ತಿದ್ದನು. ಪೋರ್ತುಗೀಸ ಚಾಪಲ ರಾಣಿ ಅಬ್ಬಕ್ಕ

ಈ ಸಮಯದಲ್ಲಿ ಪೋರ್ತುಗೀಸರು ಪ್ರಬಲರಾಗಿ ತುಳುನಾಡಿನ ಬಂದರುಗಳಲ್ಲಿ ವ್ಯಾಪಾರ ಮಾಡಿಕೊಂಡಿದ್ದರು. ವ್ಯಾಪಾರದೊಡನೆ ರಾಜ್ಯ ವಿಸ್ತರಿಸುವ ಮತ್ತು ಮತ ಪ್ರಸಾರಗಳ ಸಾಮರ್ಥ್ಯವನ್ನು ಕೈಗೊಂಡರು. ಈ ಉದ್ದೇಶಗಳನ್ನು ಸಾಧಿಸಲು ಪೋರ್ತುಗೀಸರು ಕನ್ನಡ ಜಿಲ್ಲೆಯಲ್ಲಿ ಹಿಂಸಾತ್ಮಕ ಕಾರ್ಯಕ್ರಮಗಳಿಗೆ ತೊಡಗಿದರು. ಇದರಿಂದಾಗಿ ಕನ್ನಡ ಜಿಲ್ಲೆಯಲ್ಲಿ ಅವರ ಹಾವಳಿ ಸಹಿಸಲಾರದಷ್ಟು ಹೆಚ್ಚಾಯಿತು. ಬಂಗರಸ ಕಾಮರಾಯನು ಅಬ್ಬಕ್ಕ ದೇವಿಯನ್ನು ಶಿಕ್ಷಿಸುವುದಕ್ಕೋಸ್ಕರ ಪೋರ್ತುಗೀಸರೊಡನೆ ಒಪ್ಪಂದ ಮಾಡಿಕೊಂಡನು. ಅಬ್ಬಕ್ಕದೇವಿಯು ಪೋರ್ತುಗೀಸರಿಗೆ ಕಪ್ಪವನ್ನು ಕೊಡುವುದನ್ನು ನಿಲ್ಲಿಸಿದಳು. ಇದರಿಂದ ಪೋರ್ತುಗೀಸರು ಸಿಟ್ಟುಗೊಂಡು ಅವಳನ್ನು ಶಿಕ್ಷಿಸುವುದಕ್ಕೋಸ್ಕರ ಯುದ್ಧವನ್ನು ಸಾರಿದರು. ಇದಕ್ಕೆ ಅಬ್ಬಕ್ಕ ರಾಣಿಯು ಹೆದರಲಿಲ್ಲ. ರಾತ್ರಿ ಸಮಯದಲ್ಲಿ 800 ಸೈನಿಕರೊಂದಿಗೆ ಅಬ್ಬಕ್ಕ ರಾಣಿಯು ಪೋರ್ತುಗೀಸ ಹಡಗುಗಳ ಮೇಲೆ ಬಿದ್ದಳು. ಇದರಿಂದ ಪೋರ್ತುಗೀಸರು ಗಾಬರಿಯಾಗಿ ಮೊದ ಮೊದಲು ದಿಕ್ಕು ದಿಕ್ಕಿಗೆ ಓಡಿದರು. ಆದರೆ ಸುಸಜ್ಜಿತ ಪೋರ್ತುಗೀಸ ಸೈನ್ಯದ ಮುಂದೆ ಇವಳ ಸಾಹಸ ನದಿ ಬಲ್ಲಿ ಈ

(ಎಂಟನೇ ಪುಟ ನೋಡಿರಿ)

ಕೃಷಿ ರಾಷ್ಟ್ರವನ್ನು ಉಣಿಸುತ್ತದೆ

ಸಿಂಡಿಕೇಟ್ ಬ್ಯಾಂಕು ಕೃಷಿಯನ್ನು ಪೋಷಿಸುತ್ತಿದೆ.

ಆಧುನಿಕ ಕೃಷಿ ಪದ್ಧತಿಯ ಬಳಕೆಯೇ
ರಾಷ್ಟ್ರವನ್ನು ಸ್ವಯಂಪೂರ್ಣಗೊಳಿಸಿ,
ನಾಡಿನ ಆರ್ಥಿಕ ಬದುಕನ್ನು ಸುಭದ್ರ
ಅಡಿಪಾಯದ ಮೇಲೆ ನಿಲ್ಲಿಸಬಲ್ಲುದು.

ಹೆಚ್ಚಿದ ಸಂಗುವಳಿ ಬೆಲ್ಲಿ ಬಂಡವಾಸ್ತೀಕರಣ
ಮತ್ತು ನವೀನ ವಿಧಾನದ ಅನುಸರಣೆಯನ್ನು
ಸಾಧ್ಯಗೊಳಿಸಲು ಸಿಂಡಿಕೇಟ್ ಬ್ಯಾಂಕು ನಾಡಿನ
ಕೆಲಪೊಂದು ಆಯಕಟ್ಟಿನ ಪ್ರದೇಶಗಳ ಕೃಷಿಕರಿಗೆ
ನೀರಾವರಿ ಪಂಪು ಸೆಟ್ಟು, ಉಳುಮೆ ಯಂತ್ರ,
ಟ್ರ್ಯಾಕ್ಟರು ಮತ್ತಿತರ ಕೃಷಿ ಉಪಕರಣಗಳನ್ನು
ಕೊಂಡುಕೊಳ್ಳಲು ಹಣದ ನೆರವನ್ನು ನೀಡಿದೆ.

ಸಿಂಡಿಕೇಟ್ ಬ್ಯಾಂಕು ಕೃಷಿರಂಗದ ಇನ್ನೂ
ಮಿಗಿಲಾಗಿ ಸುತ್ತ ವ್ಯಾಪಕ ನೆಲೆಯಾಗಿ
ನೆರವನ್ನು ನೀಡಲು ಸಿದ್ಧವಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಕರ್ನಾಟಕ ಮುನ್ಸಿಫ್ ಕೋರ್ಟಿನಲ್ಲಿ
O. S. 225/1967

ಸೀನಮ್ಮ —ವಾದಿಳು
A. S. ರಕ್ಷಿತ ಜೈನ ಸಹಾ —ಸ್ಪತಿವಾದಿರು.
೩. ಕುಲ್ಲಂಡಿ, H. S. ಪುಸ್ಸೇನ ಸಂಜೀವರ ವಿಷಯ.

೫. A. S. ಅಬ್ಬುಲ್ಲಾ ೪. ನಾಸೀನು ಭಾನು H. S. ಮುಸ್ಸೇನ್ ಸಾಹೇಬರ ಮುಖೇನ ಕರ್ನಾಟಕ ಸ್ಮಾಲ್‌ಕಾಸ್ ಕೋರ್ಟಿನ ಸಮನ್ಸು ಜಾರಿಯಾಗಿ ಸದರಿ ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ತಾರೀಕು 16—6—1962ರಲ್ಲಿ ನಾನು ಸ್ಮಾ ಎಂಬವರು ಮಾಡಿಕೆಗೆ ರೂಪಾ ೨೮೫ ಕೊಟ್ಟ ಅಲಸಾರ್ಥ ಕರಾರು ಪ್ರಕಾರ ಸದ್ರಿ ಕರಾರಿನಂತೆ ತೀರುವಳಿ ಈಗ ನಿಮ್ಮಿಂದ ಸದ್ರಿ ಪ್ರತಿವಾದಿರ ಹಕ್ಕಿನ ಆಸ್ತಿಗೆ ಜಪ್ತಿ ಜಾರಿಯಿಂದ ಮಾಡಿಕೆಗೆ ಕಳೆದ ಸದ ಭಾಕಿ ಸಂಬಂಧ ಅಂತಿಕ್ಕೆ ಬರತಕ್ಕ ಎದ್ದ ಖರ್ಚಿನ ಬಗ್ಗೆ ರೂ. ಸಿ. ಯ 287—765 ಮೊತ್ತಕ್ಕೆ ದಾಖಲು ಮಾಡಿದ ಸದ್ರಿ ದಾವೆಯ ಮೊತ್ತವು 18—11—1967ಕ್ಕೆ ಏನಾಗಿ ಅಕ್ಕೆಗೆ ನೋಟೀಸಿಗೆ ಬಿಟ್ಟಿದೆ. ಆದ್ದೇಕೆ ಇದ್ದಕ್ಕೆ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿಗೆ ಖುದ್ದಾಗಿ ಅಥವಾ ಕಾನೂನಿಕ ಕಾಣಿಸಿಕೊಳ್ಳಬೇಕು ಇಲ್ಲವಾದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಪು ಆಜ್ಞೆಯಾಗುವುದು ಎಂದು ಕೋರ್ಟಿನ ಸ್ವಂತ ಪ್ರಕಾರ ತಿಳಿಸಿದೆ.

K. S. Ramath
Advocate for Plaintiff
Karkala, 27—10—67

ವಿಚಾರ ಮಂಥನ

ವಿಯೆತ್ನಾಮ್ ಜನತೆ ವಿಜಯ ಗಳಿಸುವದೆ ?

ಲೇಖಕರು : ಶ್ರೀ ಸಿ. ಎಸ್. ನಾಗರಾಜ್, ಮೈಸೂರು.

೧೯೪೫ ಸೆಪ್ಟೆಂಬರ್ ೨ರಂದು ವಿಯೆಟ್ನಾಮ್ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಘೋಷಿಸಲಾಯಿತು. ಇಂದಿಗೆ ಸ್ವತಂತ್ರ ಸ್ವತಂತ್ರದ ಈ ವರ್ಷಗಳಲ್ಲಿ ಗಣತಂತ್ರದ ಈ ಅನನ್ಯತೆ ಗಮನೀಯವಾದ ಹಾಗೂ ಮಹತ್ವಪೂರ್ಣವಾದ ಸಾಮಾಜಿಕ, ಆರ್ಥಿಕ ರಂಗಗಳಲ್ಲಿ ಮೂಡಿರುವ ಸುಧಾರಣೆಗಳನ್ನು ನಾವಿಲ್ಲಿ ನೆನೆಯಬೇಕು. ೧೯೫೪ರಲ್ಲಿ ೯ ವರ್ಷಗಳ ಸಮರ ಕೊನೆಗೊಂಡಾಗ ಈ ವಿಯೆಟ್ನಾಮ್ ಅತ್ಯಂತ ಭಗ್ನಾವಸ್ಥೆಯಲ್ಲಿದ್ದಿತೆಂಬುದನ್ನು ನಾವು ಗಮನಿಸಿದಾಗ ಈ ಸಾಧನೆಗಳ ಮಹತ್ವ ನವ.ಗೆ ಅರಿವಾಗುವುದು.

ವಿಯೆತ್ನಾಮಿನ ಕಾರ್ಮಿಕ ಜನತೆಯ ಪಾರ್ಟಿಯ ನಾಯಕತ್ವದ ಅಡಿಯಲ್ಲಿ ಮತ್ತು ಸೋದರ ಸಮಾಜವಾದೀ ದೇಶಗಳ ಸರ್ವತೋಮುಖವಾದ ನೆರವಿನೊಂದಿಗೆ ವಿಯೆತ್ನಾಮಿನ ಜನತೆ ತಮಗೆ ಬಿದ್ದ ಬಲವಾದ ಪೆಟ್ಟನ್ನು ಗುಣುಹಡಿಸಿಕೊಳ್ಳಲು ಕೇವಲ ಕೂರೀ ವರ್ಷಗಳ ಅವಧಿಯಲ್ಲಿ ಸಮರ್ಥರಾದರೆಂದರೆ ನಿಜಕ್ಕೂ ಅವರ ಧೈರ್ಯಸ್ಥೈರ್ಯಗಳು ಶ್ಲಾಘನೀಯವಾದುವು. "ದೊಡ್ಡ ಭೂಸ್ವಾಮಿಗಳ ವರ್ಗದ ನಾಶ—ಉಳುವ ರೈತನಿಗೇ ಭೂಮಿ"—ಇವೆಲ್ಲಾ ಅಪೂರ್ವ ಸಾಧನೆಗಳು.

ಪುನರ್ನಿರ್ಮಾಣದ ಅವಧಿಯ ಪ್ರಾರಂಭದ ದಿನಗಳಲ್ಲಿ ವಿಯೆತ್ನಾಮಿನ ಗಣತಂತ್ರವು ಸಮಾಜವಾದದ ನಿರ್ಮಾಣದಲ್ಲಿ ತೊಡಗಿತಲ್ಲದೆ ಅದು ಆರ್ಥಿಕ ಹಾಗೂ ಸಮಾಜವಾದೀ ಸುಧಾರಣೆಗಳಿಗೆ ಭದ್ರ ಬುನಾದಿಗಳನ್ನು ಹಾಕಿತು. ಅನಂತರ ಸಮಾಜವಾದದ ಧಾತ್ವಿಕ ಹಾಗೂ ತಾಂತ್ರಿಕ ತಳಹದಿಯನ್ನು ಹಾಕುವ ಗುರಿಯುಳ್ಳ ಪ್ರಥಮ ಪಂಚವಾರ್ಷಿಕ ಯೋಜನೆಯನ್ನೂ ಅದು ರೂಪಿಸಿಕೊಂಡಿತು.

ಇತ್ತ ಸ್ವತಂತ್ರದ ಮೇಲೆ ಅಮೇರಿಕನ್ ಸಾಮ್ರಾಜ್ಯವಾದೀ ಆಕ್ರಮಣವು ಅವಿರತವಾದರೂ ಪ್ರಥಮ ಯೋಜನೆ ಅತ್ಯಂತ ಯಶಸ್ವಿಯಾಯಿತು. ಈ ವಿಯೆತ್ನಾಮ್ ಗಣತಂತ್ರವು ಈಗ ದ್ವಿತೀಯ ಯೋಜನೆಯನ್ನೂ ವಿಸ್ತರಿಸುತ್ತಿದೆ.

ಸಮಾಜವಾದದ ನಿರ್ಮಾಣದ ಅವಧಿಯಲ್ಲಿ ವಿಯೆತ್ನಾಮಿನ "ಕೃಷಿ ರಂಗ"ವೂ ಗಮನೀಯ ಸಾಧನೆ ಸಾಧಿಸಿದೆ.

ಅವೆರಿಕಾದ ವಿಮಾನದಾಳಿಗಳುಂಟು ಮಾಡಿದ ಅನೇಕಾನೇಕ ತೊಂದರೆಗಳ ನಡುವೆಯೂ ಆಶ್ಚರ್ಯಕರವಾಗಿಯೂ ಉತ್ತರ ವಿಯೆತ್ನಾಮಿನ ರೈತರು ೧೯೬೬ರಲ್ಲಿ (೧೯೬೫ಕ್ಕಿಂತ) ಶೇ. ೪.೫ರಷ್ಟು ಅಧಿಕ ಕೃಷಿ ಉತ್ಪನ್ನ ಉತ್ಪಾದಿಸಿದರೆಂಬುದೂ ಗಮನೀಯ.

ಹೀಗೆ ಉತ್ತರ ವಿಯೆತ್ನಾಮಿನಲ್ಲಿ ಸಾಂಸ್ಕೃತಿಕ ಕ್ರಾಂತಿಯು ಪಾತ್ರವೂ ಮಹತ್ವಪೂರ್ಣವಾದುದು. ಸೋವಿಯೆತ್ ಮತ್ತಿತರ ಸಮಾಜವಾದೀ ದೇಶಗಳು ವಿಯೆತ್ನಾಮ್ ಪ್ರಜಾಸತ್ತಾತ್ಮಕ ಗಣತಂತ್ರಕ್ಕೆ ಎಸ್ಟೋವಾದ ನೆರವು ನೀಡುತ್ತಿದೆ.

ವಿಯೆತ್ನಾಮ್ ಕಾರ್ಮಿಕ ಜನತೆಯ ಪಾರ್ಟಿ ಹಾಗೂ ಗಣತಂತ್ರದ ಸರಕಾರಗಳು ವಿಯೆತ್ನಾಮಿಗೆ ಸಮಾಜವಾದದ ನಿರ್ಮಾಣದಲ್ಲಿ ಸೋವಿಯೆತ್ ಒಕ್ಕೂಟ ಮತ್ತಿತರ ಸಮಾಜವಾದೀ ದೇಶಗಳು ನೀಡುತ್ತಿರುವ ಅತ್ಯಮೂಲ್ಯ ಸಹಕಾರಕ್ಕೆ ಪದೇ ಪದೇ ಕೃತಜ್ಞತೆ ಅರ್ಪಿಸುತ್ತಿದೆ.

ಹೀಗಿರುವಲ್ಲಿ ಅಮೆರಿಕವು ದಕ್ಷಿಣ ವಿಯೆತ್ನಾಮಿನಲ್ಲಿ ಒಂದು ನಿರಂಕುಶಾಧಿಕಾರದ, ಫ್ಯಾಸಿಸ್ಟ್ ಕೈ ಗೊಂಬೆ ಸರಕಾರವನ್ನು ಸ್ಥಾಪಿಸಿದೆಯಲ್ಲದೆ ಅದು ಸಹಸ್ರಾರು ವಿಯೆತ್ನಾಮಿಗ ದೇಶಭಕ್ತರ ಪತನಕ್ಕೆ ಕಾರಣವಾಗಿದೆ. ಇಲ್ಲಿನ ರೈತರೂ ವಸಾಹತುವಾದೀಗಳನ್ನು ಧೈರ್ಯವಾಗಿ ವಿರೋಧಿಸುತ್ತಿದ್ದಾರೆ, ಅವರೂ ಶಸ್ತ್ರಾಸ್ತ್ರಗಳನ್ನು ಹಿಡಿದು ಶತ್ರುವಿನ ವಿರುದ್ಧ ಹಗಲೂ ಇರುಳೂ ಹೋರಾಡುತ್ತಿದ್ದಾರೆ. ದಕ್ಷಿಣ ವಿಯೆತ್ನಾಮ್‌ನಲ್ಲಿ ಅಮೇರಿಕನ್ನರಿಗೆ ಎಳ್ಳಷ್ಟೂ ಬೆಂಬಲವಿಲ್ಲವೆಂಬುದನ್ನು ಅಲ್ಲಿನ ವಿದ್ಯಾಮಾನಗಳು ಸ್ಪಷ್ಟಪಡಿಸುತ್ತಿದೆ.

ಅಮೇರಿಕವು ತನ್ನ ಲಕ್ಷಾಂತರ ಸೈನಿಕರನ್ನು ವೀರ ವಿಯೆತ್ನಾಮ್ ಜನತೆಯ ವಿರುದ್ಧ ನಿಲ್ಲಿಸಿದೆ. ಈ ಅಮೆರಿಕನ್ ಆಕ್ರಮಣಕಾರರು ವಿಯೆತ್ನಾಮಿಗಳ ನಾಶಕ್ಕಾಗಿ "ನಾಪಾಂ" ಮತ್ತಿತರ "ವಿಷಪೂರಿತ ಅಣುಗಳನ್ನು" ಬಳಸುತ್ತಿದ್ದಾರೆ.

ರಾಷ್ಟ್ರೀಯ ಬಂಧವಿಮೋಚನಾ ರಂಗದ ನಾಯಕತ್ವದಡಿಯಲ್ಲಿ ದಕ್ಷಿಣ ವಿಯೆತ್ನಾಮಿನ ದೇಶಭಕ್ತರು ಅಮೇರಿಕದ ಆಕ್ರಮಣಕಾರರ ಹಾಗೂ ಅವರ ಅನುಚರರ ವಿರುದ್ಧ ಸ್ವಾರ್ಥರಹಿತ ಹೋರಾಟ ನಡೆಸುತ್ತಿದ್ದಾರೆ.

ಈಚಿನ ದಿನಗಳಲ್ಲಿ ಅಮೆರಿಕವು ತನ್ನ ಆಧ್ಯಕ್ಷ ಜಾನ್ಸನ್‌ರ ಅಜ್ಞೆಯ ಮೇರೆಗೆ ವಿಯೆತ್ನಾಮ್ ಪ್ರಜಾಸತ್ತಾತ್ಮಕ ಗಣತಂತ್ರದ ಮೇಲೆ ಅಮಾನುಷ ಬಾಂಬುದಾಳಿ ನಡೆಸುತ್ತಿದೆ. ಅಮೆರಿಕದ ವಿಮಾನಗಳು ವಿಯೆತ್ನಾಮಿನ ಪ್ರಮುಖ ನಗರಗಳಾದ 'ಹನಾಯ್' ಹಾಗೂ 'ಹೈಫೊಂಗ್'ಗಳ ಮೇಲೆ ಬಾಂಬಿನ ಮಳೆ ಕರೆಯುತ್ತಿವೆಯೆಂದೂ ಘೋಷಿಸಲ್ಪಟ್ಟ ವಲಯಗಳಿಂದ ತಿಳಿದು ಬಂದಿದೆ. ಪರಿಸ್ಥಿತಿ ಹೀಗಿದ್ದರೂ ಸಹ ವೀರ ವಿಯೆತ್ನಾಮಿ ಜನತೆ ಈ ಆಕಾಶ ಕಳ್ಳರನ್ನು ಹೊಡೆದಟ್ಟುತ್ತಿದೆಯೆಂತೆ! ಈ ಧೀರರು ೧೯೬೬ರ ಸೆಪ್ಟೆಂಬರ್ ವೇಳೆಗೆ ೧೩೦೦ಕ್ಕೂ ಮಿಕ್ಕಿ ಅಮೇರಿಕನ್ ವಿಮಾನಗಳನ್ನು ಹೊಡೆದುರುಳಿಸಿದ್ದರು.

ಏಳೆ ತ್ನಾಮಿನ ನೇಲೆ ಅಮೇರಿಕನ್ನರು ನಡೆಸಿರುವ ಈ ದುಃಕೃತ್ಯವು ಸಾಮ್ರಾಜ್ಯಶಾಹಿಯಾದ ದರೋಡೆಕೋರ ನೀತಿಯನ್ನು ವಿಶ್ವಕ್ಕೆ ಪರಿಚಯ ಮಾಡಿಕೊಟ್ಟಿದೆ. ವಿಯೆತ್ನಾಮಿಂದ ಆರಂಭವಾದ ಈ ಆಕ್ರಮಣವು ಲಾವೋಸ್ ಹಾಗೂ ಕಾಂಬೋಡಿಯಗಳಿಗೂ ಹಬ್ಬಿದೆ.

ವಿಯೆತ್ನಾಮಿನ ಜನತೆಯು ಈ ವೀರೋಚಿತ ಹೋರಾಟಕ್ಕೆ ಪ್ರಚೋದನೆ ಎಲ್ಲಾ ಶಾಂತಿ ಹಾಗೂ ಪ್ರಗತಿಯ ಗಾಢ ಸಹಾನುಭೂತಿ ಹಾಗೂ ಪೂರ್ಣ ಬೆಂಬಲ ಇದೆ ಎಂಬುದೂ ವಿದಿತವಾಗಿದೆ. ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್‌ನ ಎಷ್ಟೇ ಮಹಾಧಿವೇಶನವು—

"ಸೋವಿಯೆತ್ ಒಕ್ಕೂಟವು ವಿಯೆತ್ನಾಮಿನ ವೀರ ಹಾಗೂ ಧೀರಪಾಂಥಿ ಜನತೆಯ ವಿರುದ್ಧ ನಡೆಸಿರುವ ಈ ಕ್ರೂರ ಆಕ್ರಮಣವನ್ನು ಕ್ರೋಧಭರಿತವಾಗಿ ಖಂಡಿಸುತ್ತದೆ. ಇದರಿಂದ ಅಮೇರಿಕವು ಜನತೆಯ ಪ್ರಬಲ ಸಮಾಜವಾದೀ ರಾಷ್ಟ್ರಗಳಾದ ಸೋವಿಯೆತ್ ಒಕ್ಕೂಟ ಮುಂತಾದ ರಾಷ್ಟ್ರಗಳು ವಿಯೆತ್ನಾಮಿ ಜನತೆಗೆ ನೀಡುವ ಅಧಿಕಾಧಿಕ ಬೆಂಬಲವನ್ನೂ ಎದುರಿಸುವರು. ವಿಯೆತ್ನಾಮಿನ ಜನತೆ ತಮ್ಮ ಇಡೀ ನಾಡಿನ ಒಡೆಯರಾಗುವದರಲ್ಲಿ ಸಂದೇಹವೇ ಇಲ್ಲ. ಧೀರ ವಿಯೆತ್ನಾಮಿಗಳು ಎತ್ತಿ ಹಿಡಿದ ಈ ವೀರ ದೀವಟಿಗೆಯನ್ನು ಯಾರೂ ಯಾವತ್ತೂ ಆರಿಸಲು ಅಶಕ್ತರು.

—ಎಂಬುದಾಗಿ ದೃಢೀಕರಿಸಿದೆ.

ತಮ್ಮ ನಾಡಿನ ಸ್ವೇಚ್ಛಾಮಂತ್ರವನ್ನು ಎತ್ತಿಹಿಡಿಯಲು ಈ ವಿಯೆತ್ನಾಮಿ ಜನರ ಹೋರಾಟವು ರಾಷ್ಟ್ರೀಯ ಬಂಧವಿಮೋಚನಾ ಚಳುವಳಿಗೆ ಒಂದು ಕಾಣಿಕೆಯೂ ಆಗಿದೆ.

ಅಮೇರಿಕದ ಈ ಕೇಳು ಮನೋಭಾವವನ್ನು ಎದುರಿಸಲು ಸೋವಿಯೆತ್ ಒಕ್ಕೂಟವು ವಿಯೆತ್ನಾಮಿನ ಧೀರ ಜನತೆಗೆ ಆರ್ಥಿಕ, ನೈತಿಕ, ಭೌತಿಕ ಹಾಗೂ ಸೈನಿಕ ಬೆಂಬಲವನ್ನೂ ಯಥೇಚ್ಛವಾಗಿ ನೀಡುತ್ತಿದೆ. ಎಲ್ಲದೆ ಅಮೇರಿಕಕ್ಕೆ—

"ಅಮೇರಿಕದ ಸರಕಾರವೂ ೧೯೫೪ರ ಜಿನೀವೀ ಒಪ್ಪಂದದ ಪ್ರಕಾರ ಕಟ್ಟುನಿಟ್ಟಾದ ವರ್ತನೆಗಳನ್ನು ಅನುಸರಿಸಬೇಕು. ಈಗ ಆಕ್ರಮಣವಾಗಿ ನಡೆಸುತ್ತಿರುವ ಪಾಶವೀ ಬಾಂಬುದಾಳಿಯನ್ನೂ ಈ ಕೂಡಲೇ ನಿಲ್ಲಿಸಬೇಕು, ಮತ್ತು ದ. ವಿಯೆತ್ನಾಮಿನಲ್ಲಿ ತನ್ನ ಹತ್ತಕ್ಷೇಪವನ್ನು ನಿಲ್ಲಿಸಬೇಕು. ತನ್ನ ಎಲ್ಲಾ ವಿಧವಾದ ಸಮರ ಸಂಬಂಧಿತವಾದ ಸೇನಾ ಪಡೆಗಳನ್ನೂ, ಸೇನಾ ನೆಲೆಗಳನ್ನೂ ಹಿಂತೆಗೆದುಕೊಳ್ಳಲೇಬೇಕು."

—ಎಂಬುದಾಗಿ ಪದೇಪದೇ ತಿಳಿಸುತ್ತಿದ್ದರೂ ಅಮೆರಿಕವು ತನ್ನ ನಿಲುವನ್ನು ಬದಲಿಸಿಲ್ಲದಿರುವುದು ದುರದೃಷ್ಟಕರ.

ಬುಕಾರೆಸ್ಟ್‌ನಲ್ಲಿ ಜರುಗಿದ ರಾಜಕೀಯ ಸಮಾಲೋಚನಾ ಸಮಿತಿಯ ಸಭೆಯಲ್ಲಿ ಅಂಗೀಕರಿಸಲಾದ ಹೇಳಿಕೆಯ ಪ್ರಕಾರ—

"ವಿಯೆತ್ನಾಮಿನಲ್ಲಿನ ಅಮೇರಿಕದ ಈ ಯುದ್ಧನೀತಿಯು, ಅಮೇರಿಕದ ಸಾಮ್ರಾಜ್ಯವಾದೀನೀತಿಯ ಅತ್ಯಂತಸಿನಿಸ್ಟರವಾದ ಅಭಿವ್ಯಕ್ತಿಯಾಗಿದೆ. ಇದು ಅಂತಾರಾಷ್ಟ್ರೀಯ ಕಾನೂನು ಒಪ್ಪಂದಗಳ ಕ್ರೋರವಾದ ಉಲ್ಲಂಘನೆಯಾಗಿದೆ. ಮತ್ತು ವಿಶ್ವಶಾಂತಿಯ ಪ್ರಮಾಣಕೆಯ ಪ್ರತ್ಯಕ್ಷ ತಿರಸ್ಕಾರವಾಗಿದೆ. ಎಲ್ಲದೆ ಈ ದುಃಕೃತ್ಯವು ವಿಯೆತ್ನಾಮಿ ಜನತೆಗೆ ಸಮಾಜವಾದೀ ದೇಶಗಳಿಂದ ಅಧಿಕ ಬೆಂಬಲವನ್ನೂ ಕೊಡುವಂತೆ ಮಾಡಿ ನೂಡಿಕೊಡುವ ಪ್ರಸಂಗವನ್ನೂ ತಂದೊಡ್ಡಿದೆ" ಎಂದೂ' ಈ ಹೇಳಿಕೆ ತಿಳಿಸಿದೆ.

ವಿಯೆತ್ನಾಮಿ ಜನತೆಯು ಈ ವೀರೋಚಿತವಾದ ಹೋರಾಟವು ಸಮಾಜವಾದೀ ದೇಶಗಳ ಸಹಾಯ ಮತ್ತೂ ಎಲ್ಲಾ ಕಾರ್ಮಿಕನಗರದವರ ಸಹಕಾರಗಳು ಅಂತಿಮವಾಗಿ ವಿಯೆತ್ನಾಮಿ ಜನತೆಯ ವಿಜಯಕ್ಕೇ ದಾರಿ ಮಾಡಿಕೊಡುತ್ತವೆ.

ವಿಯೆತ್ನಾಮಿನಲ್ಲಿ ಅಮೆರಿಕದ ಈ ಆಕ್ರಮಣವು ಸಾಮ್ರಾಜ್ಯವಾದೀ ಆಕ್ರಮಣಕಾರರ ನಡುವೆ ಹಾಗೂ ಬಹು ಸಂಖ್ಯಾತ ಮಾನವ ಕೋಟಿ ಮಧ್ಯೆ, ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಪುಂಡಾಟಿಕೆ ಮತ್ತು ಅಂತಾರಾಷ್ಟ್ರೀಯ ಕಾನೂನುಗಳ ನಡುವೆ ಜನರನ್ನೂ ಕೊಲೆ ಮಾಡುವವರ ಮತ್ತು ಜನತೆಗಳ ಸ್ವಾತಂತ್ರ್ಯಕ್ಕೆ ಹೋರಾಟ ನಡೆಸುವವರ ನಡುವೆ ತೀಕ್ಷ್ಣವಾದ ಗೆರೆಯನ್ನು ಹಾಕಿದೆ.

ವಿಯೆಟ್ನಾಮಿ ದ ರಾಕ್ರಮಣಕ್ಕೆ ಅಮೇರಿಕಕ್ಕೆ ಪ್ರತಿಕ್ಷಣಕ್ಕೂ ಜಗತ್ತಿನ ಮೂಲೆಮೂಲೆಗಳಿಂದ ನಾನಾ ಬಗೆಯ ಜನತೆಗಳಿಂದ ಉಗ್ರವಾದ ಪ್ರತಿಭಟನೆ ಕೇಳಿಬರುತ್ತಿದೆ.

ಅಮೇರಿಕವು ವಿಯೆತ್ನಾಮಿನಲ್ಲಿ ತನ್ನ ಈ ಅನೈತಿಕ ಯುದ್ಧವನ್ನು ಪೈಶಾಚಿಕವಾಗಿ ವಿಸ್ತರಿಸುತ್ತಾ, ತನ್ನ 'ತೃತೀಯ ಜಗತ್ತನ್ನೇ' ಸೃಷ್ಟಿಸಲು ಯತ್ನಿಸುತ್ತಿದೆ ಯಾದರೆದ ೨/೩ ಭಾಗ ಸೋಲನ್ನೂ ಅಪ್ಪಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಈ ಅಮೇರಿಕನ್ ಆಕ್ರಮಣವು ಜಾಗತಿಕ ಘರ್ಷಣೆಯನ್ನೂ ತೀವ್ರವಾಗಿ ಹಚ್ಚಿಸಿದೆ; ಇದು ಇತರ ಜನತೆಗಳ ಶಾಂತಿ ಹಾಗೂ ಸುಭದ್ರತೆಗೆ ಧಕ್ಕೆಯನ್ನುಂಟು ಮಾಡಿದೆ.

ಇತಿಹಾಸದಲ್ಲೇ ಪ್ರಥಮ ನೀಚತನದ ಯುದ್ಧದಲ್ಲಿ ಒಂದಾಗಿರುವ ಈ ವಿಯೆತ್ನಾಂ ಯುದ್ಧವು ಅಮೇರಿಕದ ಸಾಮ್ರಾಜ್ಯವಾದದ ಆಕ್ರಮಣಕಾರಿತನದತೀವ್ರತೆಯನ್ನೂ ಮತ್ತು ಅದು ಜನತೆಗಳ ಸ್ವಾತಂತ್ರ್ಯಕ್ಕೆ ಒಡ್ಡಿರುವ ಗಂಡಾಂತರವನ್ನೂ ಎತ್ತಿ ತೋರಿಸುತ್ತದೆ.

ಜಗತ್ತಿನಾದ್ಯಂತವೂ ವಿಯೆತ್ನಾಮಿನ ಬೆಂಬಲಾರ್ಥವಾಗಿ ನಾನಾ ಚಳವಳಿಯೂ ನಡೆಯುತ್ತಿದೆ ಹೀಗಿರಲು ಅಮೇರಿಕದ ರಾಜಕೀಯ ತಜ್ಞರು ಸ್ವತಃ ಅಮೇರಿಕನ್ನರನೇಕರ ಬಿಚ್ಚು ಮನದ ಖಂಡನೆಗಳಿಗೆ ಒಳಗಾಗಿದ್ದಾರೆ.

ವಿಯೆತ್ನಾಮಿ ಜನರ ನ್ಯಾಯವಾದ ಗುರಿ ಗೆಲ್ಲುವಂತೆ ಪ್ರತಿಯೊಂದನ್ನೂ ಮಾಡುವ ವಿಶ್ವಾಸಾರ್ಹ ವಿಶ್ವಾಸ ವಿಯೆತ್ನಾಮಿ ಜನತೆಗಿದ್ದಾರೆ. ಈ ಯುದ್ಧದಲ್ಲಿ ಅಮೆರಿಕನ್ನರಿಗೆ ವಿಜಯವಾಗುವುದಂತೂ ಅಸಾಧ್ಯವೆ ಮಾತಾಗಿದೆ. ಇದನ್ನು ವಿಯೆತ್ನಾಮಿ ಗಣತಂತ್ರದ ಅಧ್ಯಕ್ಷ ಹೋ. ಚಿ. ಮಿನ್ಹ್‌ರು ತಮ್ಮದೇ ಆದ ಧಾಟಿಯಲ್ಲಿ ಹೀಗೆಂದಿದ್ದಾರೆ—

ಅಮೇರಿಕವು ೫೦೦,೦೦೦ ಅಷ್ಟೇಕೆ ೧ ಮಿಲಿಯನ್ನಿನಷ್ಟು ಅಥವಾ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವಿಯೆತ್ನಾಮಿ ಧೀರರ ಮುಂದೆ ಸೈನ್ಯ ಎತ್ತಿಕಟ್ಟಬಹುದು! ಹನಾಯ್, ಹೈಫೊಂಗ್‌ಗಳ ನಾಶ ಮಾ

ನೀವೂ ತಿಳಿಯಿರಿ

ಮಾತೃ ಭಕ್ತಿಯ ಮಹಿಮೆ

ಲೇಖಕರು - ಶ್ರೀ ಶಂಕರ ಲಾಲ ಬೇಂಕರ್.

ಾಯಿತು! ಆದರೆ ಈ ಹುಟ್ಟು ವೀರರಾದ ವಿಯೆತ್ನಾಮಿ ಜನತೆಯನ್ನು ಜನ್ಮಜನ್ಮಕ್ಕೂ ಹೆದರಿಸಲಾರದು. ಅಮೇರಿಕದ ದುರಾಕ್ರಮಣದ ವಿರುದ್ಧ ಕೈಗೊಂಡಿರುವ ಈ ರಾಷ್ಟ್ರೀಯ ಬಂಧವಿಮೋಚನಾ ಚಳುವಳಿಯ ಬಗ್ಗೆ ಹೊಂದಿರುವ ಭವ್ಯ ವೀರ ಸಂಕಲ್ಪವನ್ನು ಮಾತ್ರ ಮುರಿಯಲು ಅಮೇರಿಕನ್ನರಿಗೆ ಎಂದೆಂದಿಗೂ ಸಾಧ್ಯವಿಲ್ಲ."

—ಎಂಬುದಾಗಿ ಒತ್ತಿ ಒತ್ತಿ ಹೇಳಿದ್ದಾರೆ.

ಓರ್ವ ಪತ್ರಿಕಾ ಭಾತ್ಮೀದಾರರೂ ಯುದ್ಧದ ಬಗ್ಗೆ ವಿಶ್ಲೇಷಿಸುತ್ತಾ "ಅಮೇರಿಕದ 'ನಾಪಾಂ' ಬಾಂಬು ವಿಯೆತ್ನಾಮಿನಲ್ಲಿ ಅತಿಶಯವಾಗಿದೆ. ಏಕೆಂದರೆ ಅದು ಎಷ್ಟು ಅಗ್ಗವೋ ಅಷ್ಟೇ ಮಾರಕವೂ ಹೌದು. ಇದು ಎಷ್ಟು ಶಾಖದಲ್ಲಿ ಉರಿಯುತ್ತದೆಂದರೆ, ಬಾಂಬು ಹಾಕಿದ ಎರಡು ನಿಮಿಷದಲ್ಲೇ ಸಿಡಿದ ಪ್ರದೇಶದಲ್ಲಿನ ಪ್ರಾಣವಾಯುವೆಲ್ಲಾ ತೀರಿಹೋಗುತ್ತದೆ. ಪರಿಣಾಮವಾಗಿ ಜನರು ಉಸಿರು ಕಟ್ಟಿಯೋ ಇಲ್ಲವೇ ಉಯಿಲ್ಲಿ ಸಜೀವವಾಗಿ ಬೆಂದೋ ಸಾಯುತ್ತಾರೆ" ಎಂದು ತಿಳಿಸಿದ್ದಾರೆ.

ಅಮೇರಿಕದ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆದುಲ್ಲಿನ ಲೇಖನವೊಂದು "ಅಮೇರಿಕದ ಸೇನೆ ವಿಯೆತ್ನಾಮಿನಲ್ಲಿ ಮಾಡಿಗೆಟ್ಟಂತೆ ಅಡುತ್ತಿದೆ"ಎಂದೂ, "ವಿಯೆತ್ನಾಮ್ ಒಂದು ಪರೀಕ್ಷಾಭೂಮಿಯಾಗಿ ಮಾರ್ಪಾಡಾಗಿದೆ" ಎಂದು ತಿಳಿದಿದೆಯಲ್ಲದೆ, "ಅಮೇರಿಕದ ಸಾಮೂಹಿಕ ಕಗ್ಗೊಲೆ ಶಸ್ತ್ರಾಸ್ತ್ರಗಳು ತನ್ನ ನೂತನ ವಿನಾಶಕ ವಸ್ತುಗಳೊಂದಿಗೆ ವಿಯೆತ್ನಾಮಿಗೆ ಧಾವಿಸಿ ಬರುತ್ತಿದ್ದಾರಿಂದೂ" ತಿಳಿಸಿದೆ.

ಹೀಗ್ ಮತ್ತು ಜೇನೀವೀ ಒಪ್ಪಂದಗಳು ಅತ್ಯಂತ ಕಡ್ಡಾಯವಾಗಿ ನಿಷೇಧಿಸಿದ ರಾಸಾಯನಿಕ ಸ್ಫೋಟಕಗಳನ್ನೂ ಅಮೇರಿಕವು ವಿಯೆತ್ನಾಮಿನಲ್ಲಿ ಬಳಸುತ್ತಿದೆಯಂತೆ!

ಇದರಿಂದ ಸುಮಾರು ೫೫,೦೦೦ಕ್ಕಿಂತಲೂ ಹೆಚ್ಚು ಎಕ್ರೆ ಜಮೀನಿನ ಮೇಲೆ ಸುಮಾರು ೧,೩೫೪,೪೫೦ ಗ್ಯಾಲನ್ನಿನಷ್ಟು ವಿಷದ್ರವ್ಯ ಸುರಿದಿನೆ ಎಂದೂ, ಇದು ಕೇವಲ ಬೆಳೆಗಳನ್ನು ಮಾತ್ರ ನಾಶ ಮಾಡದೆ ನಾಗರಿಕ ಜೀವಿಗಳನ್ನೂ ಬಲಿತೆಗೆದು ಕೊಳ್ಳುತ್ತಿದೆ ಎಂದು ತಿಳಿಸಲಾಗಿದೆ.

"ಜೂನ್ ೨೦, ೬೯ ರಿಂದ ಜುಲೈ ೩೭, ೬೯ ರವರೆಗೂ ಹಾಗೂ ಆಗಸ್ಟ್ ೧೩ರಿಂದ ವಿಯೆತ್ನಾಮಿನ ಪ್ರಮುಖ ಪ್ರದೇಶಗಳಾದ ಹೋವಾಬಿನ್ನ, ಹೇಆಯಿತೋನ ಮುಂತಾದ ಪ್ರದೇಶಗಳ ಮೇಲೆ ವಿಷಪೂರಿತ ರಾಸಾಯನಿಕಗಳ ಮಳೆ ಕರೆದದ್ದರಿಂದ ಸಾವಿರಾರು ಜನರ ಆರೋಗ್ಯ ಹೀನವಾಗಬಹುದಾಗಿದೆ.

"ಆಗಸ್ಟ್ ೨೫ರಂದು ಳಿದೇರೆ ಅಮೇರಿಕನ್ ವಿಮಾನಗಳು ದೋಂಹ್‌ವಾಂಗ್ ನಿಂದ —ಚಿಂಕೋಯಿ ವರೆಗೂ, ಫೈನಿನ್‌ನಿಂದ ಅಯೋಂಗ್ಡಿನ್ ಜಿಲ್ಲೆವರೆಗೂ ವಿಷದ ಮಳೆಕರೆದಿದ್ದರಿಂದ ೪,೭೦೦ ಜನರಿಗೆ ನಂಜುತಗುಲಿಕ್ಕು. ೨,೭೩೦ ಹೆಕ್ಟೇರ್ ಭೂಮಿ ನಾಶವಾಯಿತು. ಆಗಿರುವ ನಷ್ಟ ೧ ಮಿಲಿಯನ್‌ಗೂ ಮಿಗಿಲು ಪಿಯಸ್ಟ್ರೆಗಳು.'

ರಾಟವರ್ಗದ ನಿಮಿತ್ತದಿಂದಾಗಿ ನನ್ನ ತಾಯಿ ಗಾಂಧಿಯವರ ನಿಕಟ ಸಂಪರ್ಕದಲ್ಲಿ ಬಂದಳು. ಅನಂತರ ಅವಳು ಗಾಂಧಿಯವರ ಹತ್ತಿರ ನನ್ನ ವಿಷಯವನ್ನೂ ಮಾತಾಡಿ ಹೆತ್ತಿದಳು. ನಾನು ವಿದೇಶಯಾತ್ರೆಮಾಡಿ ಬಂದಿದ್ದೆ. ವಿದೇಶೀ ರೀತಿ ನೀತಿಗಳ ನನ್ನ ಮನಸ್ಸಿನ ಮೇಲೆ ಪ್ರಬಲ ಪ್ರಭಾವ ಬೀರಿದವು. ಅದಕ್ಕೂ ಮೊದಲು ನಾನು ಕಾಲೇಜಿನಲ್ಲಿ ಕಲಿಯುತ್ತಿರುವಾಗ ಆರ್ಯ ಸಮಾಜ ಹಾಗೂ ಪ್ರಾರ್ಥನಾ ಸಮಾಜಗಳ ಸಂಪರ್ಕದಲ್ಲಿ ಬಂದಿದ್ದೆ. ಆದರಿಂದ ನಾನು ಮೂರ್ತಿ ಪೂಜೆಯ ವಿರೋಧಿಯಾಗಿದ್ದೆ. ಸಾಂಪ್ರದಾಯಿಕ ಸೇವೆ ಪೂಜೆಗಳೆಲ್ಲ ನನಗೆ ಬೊಟ್ಟೆ ಹಾಗೂ ಅರ್ಥಹೀನವಾಗಿ ಅನಿಸುತ್ತಿದ್ದವು. ನಾವು ವೈಷ್ಣವಂಗಿದ್ದ ಕಾರಣ ತುಳಸೀಮಣಿಯ ಮಾಲೆ ಧರಿಸುತ್ತಿದ್ದೆವು. ಆದರೆ ನಾನು ಅದನ್ನು ತೆಗೆದಿರಿಸಿ ಬಿಟ್ಟಿದ್ದೆ. ದೇವ ದರ್ಶನ ಕ್ಕಂತೂ ಹೋಗುತ್ತಿರಲೇ ಇಲ್ಲ. ಶ್ರಾದ್ಧ ಮೊದಲಾದ ಕ್ರಿಯೆಗಳಲ್ಲಿಯೂ ಪ್ರತೀಕ ಪೂಜೆ ಇದ್ದದರಿಂದ ಅವುಗಳನ್ನು ಸಹ ಮಾಡಬಾರದೆಂದು ನಿರ್ಧರಿಸಿ ಬಿಟ್ಟಿದ್ದೆ. ನನ್ನ ತಂದೆಯವರಾದರೋ ನನ್ನ ಬಾಲ್ಯದಲ್ಲೇ ವೃತಪಟ್ಟಿದ್ದರು. ನನ್ನ ಅಣ್ಣಂದಿರೇ ಪಿತೃಶ್ರಾದ್ಧ ಮಾಡಿದ್ದರು. ಆದ್ದರಿಂದ ತಂದೆಯವರ ಶ್ರಾದ್ಧದ ಪ್ರಶ್ನೆ ಇರಲಿಲ್ಲ. ಆದರೆ ತಾನು ವೃತಪಟ್ಟ ಮೇಲೆ ಈತ ತನ್ನ ಶ್ರಾದ್ಧ ಮಾಡಲಿಕ್ಕಿಲ್ಲವಲ್ಲ ಎಂದು ನನ್ನ ತಾಯಿ ಕಮಿಷಿಸಬಹುತ್ತ ಇದ್ದಳು. ಆಗಾಗ್ಗೆ ನಾನು ಹಾಗೆ ಹೇಳಿಯೂ ಬಿಡುತ್ತಿದ್ದೆ. ಇದರಿಂದ ಅವಳು ತಂಬಾ ವ್ಯಥೆ ಪಡುತ್ತಿದ್ದಳು.

ಆದ್ದರಿಂದ ಸಂಧಿ ಸಾಧಿಸಿ ಒಂದು ದಿನ ಅವಳು ಗಾಂಧಿಯವರ ಮುಂದೆ ಈ ಪ್ರಶ್ನೆ ಎತ್ತಿದಳು. "ಫಿಮ್ಮ ಸಹವಾಸದಲ್ಲಿ ಬಂದ ತರುವಾಯ ನನ್ನ ಮಗನಲ್ಲಿ ಎಷ್ಟೋ ಮಟ್ಟಿಗೆ ಪರಿವರ್ತನವಾಗಿದೆ. ಆದರೆ ಇನ್ನೂ ಈತ ತುಳಸೀಸರ ಧರಿಸುತ್ತ ಇಲ್ಲ ಮತ್ತು ನಾನು ಮೃತಪಟ್ಟ ತರುವಾಯ ನನ್ನ ಶ್ರಾದ್ಧ ಮಾಡಲಿಕ್ಕಿಲ್ಲ ಎಂದೂ ಹೇಳುತ್ತಾನೆ. ಇದು ಕೇಳಿ ನನಗೆ ತುಂಬಾ ದುಃಖವಾಗುತ್ತಲಿದೆ. ನೀವು ಅವನಿಗೆ ಸ್ವಲ್ಪ ತಿಳಿಸಹೇಳಿದರೆ ನೆಟ್ಟಗಾದೀತು. ಯೊಕೆಂದರೆ ಅವ ನಿಮ್ಮ ಮಾತು ಕೇಳುತ್ತಾನೆ."

ಗಾಂಧಿಯವರಿಗೆ ನನ್ನ ತಾಯಿಯ ಮಾತು ಹಿಡಿಸಿತು. ಅವರು ನನ್ನನ್ನು ಕರೆಯಿಸಿ ಹೇಳಿದರು. "ನಿನ್ನ ತಾಯಿಯವರು ನಿನ್ನ ವಿಷಯ ಹೇಳುತ್ತಿದ್ದರು. ಅವಳಿಗೆ ನಿನ್ನ ಮೇಲೆ ತುಂಬಾ ಪ್ರೇಮ ವಿದೆ. ಆದರೆ ನಿನ್ನ ಎಷ್ಟೋ ರೀತಿ ನೀತಿಗಳಿಂದ ಅವಳ ಮನಸ್ಸನ್ನು ನೋಂದಿದೆ. ನೀನು ತುಳಸಿ ಮಣಿ ಸರ ಧರಿಸಬೇಕು. ಮತ್ತು ಶ್ರಾದ್ಧ ಮಾಡುತ್ತೇನೆ ಎಂತಲೂ ಒಪ್ಪಿಕೊಳ್ಳಬೇಕು ಎಂದು ಅವಳು ಬಯಸುತ್ತಾಳೆ. ಅವಳ ಇಯಕೆಯೇನೂ ತಪ್ಪಲ್ಲ. ಇಷ್ಟೇ ಅಲ್ಲ ಅವಳ ಇಚ್ಛೆಯಂತೆ ಮಾಡುವದೇ ನಿನ್ನ ಕರ್ತವ್ಯವಾಗಿದೆ.

ಅದಕ್ಕೆ ಪ್ರತ್ಯುತ್ತರವಾಗಿ ನಾನು ನನ್ನ ವಿಚಾರ ಹೇಳಿದೆ. "ನನ್ನಿಂದ ಇದೆಲ್ಲಾ ಶಕ್ಯವಿಲ್ಲ. ಇಂಥ ಸಂಪ್ರದಾಯದಲ್ಲಿ ನನಗೆ ವಿಶ್ವಾಸವೇ ಇಲ್ಲ. ಅಂದ ಮೇಲೆ ತುಳಸೀ ಮಾಲೆ ಹೇಗೆ ಧರಿಸಲಿ? ನನಗೆ ಮೂರ್ತಿ ಪೂಜೆಯಲ್ಲೂ ವಿಶ್ವಾಸವಿಲ್ಲ. ದೇವರ ಬಗ್ಗೆನೋ ನನಗೆ ನಿಶ್ವಾಸವಿದೆ. ದೇವರು ಭಕ್ತಿ ಮಾಡಬೇಕು ಎಂಬುದನ್ನೂ ಒಪ್ಪುತ್ತೇನೆ. ಆದರೆ ದೇವರು ಸರ್ವವ್ಯಾಪಿಯಾಗಿದ್ದಾನೆ. ಅವನೊಂದು ಮೂರ್ತಿ ಮಾಡಿ ಪೂಜಿಸುವದು ತಪ್ಪು ಎಂದು ನನಗೆ ಅನಿಸುತ್ತದೆ. ಶ್ರಾದ್ಧ ಮೊದಲಾದ ಕರ್ಮಗಳಲ್ಲಿಯೂ ಮೂರ್ತಿ ಪೂಜೆ ಬರುತ್ತದೆ ಆದ್ದರಿಂದ ಅಂಥ ಕ್ರಿಯೆಗಳನ್ನು ಮಾಡುವದೂ ಅವುಗಳಲ್ಲಿ ಭಾಗವಹಿಸುವದೂ ತಪ್ಪು ಎನಿಸುತ್ತದೆ. ಇಂಥ ವಿಷಯಗಳಲ್ಲಿ ವಿಶ್ವಾಸವಿಲ್ಲದೆಯೂ ಕೂಡ ತಾಯಿಗಾಗಿ ಮಾಡಿದ್ದೂ ಹೋಗುವದು ಡಂಭಾಚಾರವಾದೀತು".

ಗಾಂಧಿಯವರು ತಾಳ್ಮೆಯಿಂದ ನನ್ನ ಹೇಳಿಕೆಯನ್ನೆಲ್ಲ ಕೇಳಿಕೊಂಡು ಹೇಳಿದರು "ನಿನ್ನ ಹೇಳಿಕೆ ನನಗೆ ಅರ್ಥವಾಗುತ್ತದೆ. ಆದರೆ ಅದು ಸರಿಯಲ್ಲ. ತುಳಸಿ ಸರ ಧರಿಸುವದರಲ್ಲಿ ಇಲ್ಲವೆ ಶ್ರಾದ್ಧ ಮಾಡುವದರಲ್ಲಿ ಏನೂ ತಪ್ಪಿಲ್ಲ. ಮೇಲಾಗಿ ನಿನ್ನ ತಾಯಿಯ ಸಮಾಧಾನಕ್ಕಾಗಿ ಅದನ್ನು ಮಾಡುವದೇ ನಿನ್ನ ಕರ್ತವ್ಯ'

ಸಾಮಾನ್ಯವಾಗಿ ಆ ಕಾಲದಲ್ಲಿ ಗಾಂಧಿಯವರ ಎನು ಹೇಳಿದರೂ ಅದನ್ನು ಒಪ್ಪಿ ಬಿಡುವದು ನನ್ನ ಮನಸ್ಥಿತಿಯಾಗಿತ್ತು. ಆದರೆ ನನ್ನ ಮನಸ್ಸಿನ ಮೇಲೆ ಪ್ರಾರ್ಥನಾ ಸಮಾಜದ ಸಂಸ್ಕಾರಗಳು ತುಂಬಾ ಪ್ರಭಾವ ಬೀರಿದ್ದ ಕಾರಣ ಗಾಂಧಿಯವರ ಮಾತು ನನಗೆ ಹಿಡಿಸಲೇ ಇಲ್ಲ. ನಾನೇ ಅವರಿಗೆ ಹೇಳಿದೆ "ನನಗೇನೂ ಇದು ಸರಿ ಎನಿಸುವದಿಲ್ಲ. ತುಳಸೀ ಮಾಲೆ ಧರಿಸುವದು, ಶ್ರಾದ್ಧ ಮಾಡುವದು ಇದೆಲ್ಲ ತಪ್ಪು ಎಂದು ನನಗೆ ಅನಿಸುತ್ತಲಿದ್ದೂ ಕೂಡ ಅದನ್ನು ಮಾಡಿದರೆ ಭಾಪಖವಾದೀತು ಎಂದು ನನಗೆ ಅನಿಸುತ್ತದೆ.

ಇದಕ್ಕೆ ಪ್ರತಿಯಾಗಿ ಗಾಂಧಿಯವರು 'ಇದರಲ್ಲಿ ನೀನು ತಪ್ಪುತ್ತೀಯೇ. ನಿಜವಾಗಿ ಇದನ್ನು ಮಾಡುವದರಲ್ಲಿ ಯಾವದೇ ತರಹದ ಪಾಪವಿಲ್ಲ. ಒಂದು ವೇಳೆ ಇದರಲ್ಲೇನಾದರೂ ಪಾಪವಿದ್ದರೆ ಅದು ನನ್ನ ಪಾಲಿಗೆ ಬರಲಿ. ಒಟ್ಟಿಗೆ ತುಳಸೀ ಮಾಲೆ ಧರಿಸಲಿಕ್ಕೂ ಶ್ರಾದ್ಧ ಮಾಡಲಿಕ್ಕೂ ಒಪ್ಪಿಕೊಂಡು ಬಿಡು ಎಂಬುದೇ ನನ್ನ ಸಲಹೆ.

• ಇಷ್ಟಾದರೂ ಅವರ ಹೇಳಿಕೆ ನನ್ನ ಮನಸ್ಸಿಗೆ ಹಿಡಿಸುತ್ತ ಇಲ್ಲ ಎಂಬುದು ಕಂಡು ಅವರು ತಿರುಗಿ ಹೇಳಿದರು "ಕಾನು ಪ್ರತಿಯೊಂದು ಸರಿಯಾಗಿ ವಿಚಾರ ಮಾಡಿಯೇ ಮಾಡುತ್ತೇನೆ ಎಂದು ನಿನಗೆ ಅನಿಸುತ್ತಿರಬಹುದು. ತುಂಬಾ ದೇಶ ಸೇವೆಯನ್ನು ಮಾಡುತ್ತಲಿದ್ದೀಯೇ ಆದರೆ ನಿನ್ನ ದೃಷ್ಟಿಯಲ್ಲಾದರೋ ತಾಯಿಯ ಸೇವೆಯ ಮುಂದೆ ಅದೆಲ್ಲವೂ ಏನನ್ನೂ ಅಲ್ಲ. ಇಷ್ಟೊಂದು ಸಣ್ಣ ವಿಷಯದಲ್ಲಿ ಕೂಡ ನಿನ್ನಿಂದ ನಿನ್ನ ತಾಯಿಗೆ ಸಂತೋಷ ಸಡಿಸಲಿಕ್ಕೆ ಆಗದೇ ಹೋದರೆ ನಿನ್ನ ಇನ್ನುಳಿದ ಸೇವೆ ಎಲ್ಲ ಬರೇ ಒಂದು ದೊಡ್ಡ ಂಡೀ ಗಾಲಿ (ಶೂನ್ಯ) ಎಂದರು.

ಅನಂತರ ಅವರು ನನಗೆ ಗಣಪತಿಯ ಮಾತೃ ಭಕ್ತಿಯ ಕಥೆ ಹೇಳಿದರು "ತಮ್ಮಿಬ್ಬರಲ್ಲಿ ಯಾರು ಹೆಚ್ಚಿನವರು ಎಂಬ ಕುರಿತು ಕಾರ್ತಿಕ ಸ್ವಾಮಿ ಮತ್ತು ಗಣಪತಿ ಇವರಲ್ಲಿ ವಾದವಿತ್ತು. ಅವರು ಇದರ ನಿರ್ಣಯ ಮಾಡಿಸಲಿಕ್ಕೆ ದೇವತೆಗಳ ಬಳಿಗೆ ಹೋದರು. ಪೃಥ್ವೀ ಪ್ರದಕ್ಷಿಣೆ ಯಾರು ಮೊದಲು ಮಾಡುತ್ತಾರೆಯೋ ಅವರು ಹೆಚ್ಚಿನವರು ಎಂದು ದೇವತೆಗಳು ಹೇಳಿದರು. ನವಿಲೇ ಕಾರ್ತಿಕ ಸ್ವಾಮಿಯ ವಾಹನವಾಗಿದ್ದ ಕಾರಣ ಅವನು ಅದನ್ನು ಹತ್ತಿ ಹೊರಟುಬಿಟ್ಟ. ಆದರೆ ತನ್ನ ವಾಹನ ಇಲಿಯಾಗಿದ್ದರಿಂದ ಗಣಪತಿ ವಿಚಾರದಲ್ಲಿ ಬಿದ್ದ—ಪೃಥ್ವೀ ಪ್ರದಕ್ಷಿಣೆ ಮಾಡುವದೆಂತು; ಆದರೆ ಅಪ್ಪ ರಲ್ಲಿಯೇ ತಾಯಿಯ ಪ್ರದಕ್ಷಿಣೆ ಮಾಡಿದರೆ ಪೃಥ್ವೀ ಪ್ರದಕ್ಷಿಣೆ ಮಾಡಿದಂತೆಯೇ ಎಂದು ಅವನಿಗೆ ಹೊಳೆಯಿತು. ಆದ್ದರಿಂದ ಅವನು ತಾಯಿ ತಂದೆಗಳ ಸುತ್ತ ಪ್ರದಕ್ಷಿಣೆ ಮಾಡಿ ತನ್ನ ತಂದೆ ತಾಯಿಗಳ ಚರಣಗಳನ್ನು ಎಂದಿನ ಕ್ಕಳಿಕು ಕೊಂಡು ಬಿಟ್ಟ. ಎಷ್ಟೋ ಹೊತ್ತಿನ ಮೇಲೆ ಕಾರ್ತಿಕ ಸ್ವಾಮಿ ಪೃಥ್ವೀ ಪ್ರದಕ್ಷಿಣೆ ಮಾಡಿ ಬಂದು ದೇವತೆಗಳ ಹತ್ತಿರ ನಿರ್ಣಯ ಕೇಳಿದ. ಗಣಪತಿಯೇ ಹೆಚ್ಚಿನವನೆಂದು ದೇವತೆಗಳು ಉತ್ತರಕೊಟ್ಟರು. ತಾಯಿಯೊದೋ ಸೃಷ್ಟಿಗಿಂತ ಹೆಚ್ಚಿನವಳು. ಆದ್ದರಿಂದ ಅವಳ ಪ್ರದಕ್ಷಿಣೆ ಮಾಡಿದರೆ ಸೃಷ್ಟೀ ಪ್ರದಕ್ಷಿಣೆ ಮಾಡಿದಂತೆಯೇ. ಆದ್ದರಿಂದ ಗಣಪತಿಯೇ ಹೆಚ್ಚಿನವ ಎಂದು!'

ಈ ಕಥೆಯನ್ನು ಹೇಳಿ ಗಾಂಧಿಯವರು ನನಗೆ ಹೇಳಿದರು— "ಈ ಕಥೆಯ ರಹಸ್ಯ ತಿಳಿದುಕೊಂಡರೆ ನಿನ್ನ ತಾಯಿಗೆ ಸಮಾಧಾನ ಪಡಿಸುವದು ನಿನಗೆ ಸುಲಭವಾಗುವದು. ಅವರು ಭಾವನಾಪ್ರಧಾನರಾಗಿ ಈ ಕಥೆಯನ್ನು ಹೇಳಿದ್ದಾರೆಂದೂ

(ಉಂಚತ್ತನೇ ಪುಟ ನೋಡಿ)

ತುಳುನಾಡಿನ ರಾಣಿಯರು

(ಐದನೇ ಪುಟದಿಂದ)

ಯುದ್ಧದಲ್ಲಿ ಪೋರ್ತುಗೀಸರು ಗೆದ್ದರೂ ವರ ಸೇನೆ ಅಪಾರ ಸಾವು ನೋವನ್ನು ಅನುಭವಿಸಿದಂಗ ಲಾಯಿಬು ಸಿಟ್ಟುಗೊಂಡ ಪೋರ್ತುಗೀಸರು ಅವಳ ರಾಜಧಾನಿಯಾದ ಉಲ್ಲಾಳವನ್ನು ಸುಟ್ಟರು. ಆದರೂ ಪೋರ್ತುಗೀಸರನ್ನು ಕರಾವಳಿಯಿಂದ ಓಡಿಸಬೇಕೆಂಬ ಅಬ್ಬಕ್ಕ ರಾಣಿಯ ಉದ್ದೇಶ ಬದಲಾಗಲಿಲ್ಲ. ಈ ಉದ್ದೇಶ ಸಾಧಿಸುವುದಕ್ಕೋಸ್ಕರ ಜಾಮೋರಿನನ ಸೇನಾ ಸೇನಾಧಿಪತಿಯಾದ ಕುಟ್ಟಿಪೋಕ್ಕೆಯ ಸಹಾಯವನ್ನು ಕೋರಿದಳು. ಅದರ ಫಲವಾಗಿ ಕುಟ್ಟಿಪೋಕ್ಕೆ ಬಲವಾದ ದಂಡನ್ನು ತೆಗೆದುಕೊಂಡು ಬಂದು ಪೋರ್ತುಗೀಸ ನೌಕೆಯ ಮೇಲೆ ಧಾಳಿ ಮಾಡಿದನು. ಇದೇ ಸಮಯದಲ್ಲಿ ಅಬ್ಬಕ್ಕ ರಾಣಿಯು ಪೋರ್ತುಗೀಸರೊಡನೆ ಇನ್ನೊಂದೆಡೆಯಿಂದ ಯುದ್ಧಪ್ರಾರಂಭಿಸಿದಳು. ಈ ಯುದ್ಧದಲ್ಲಿ ಅವಳಿಗೆ ಸೋಲಾದರೂ ಪೋರ್ತುಗೀಸರ ರಾಜ್ಯದಾಹಕ್ಕೆ ಅದು ಪ್ರಬಲ ಭಂಗವಾಗದೆ ಇರಲಿಲ್ಲ. 1682ರಲ್ಲಿ ಅಬ್ಬಕ್ಕದೇವಿಯು ಕಾಲವಾದಳು.

ತಿರುಮಲಾದೇವಿ ಕಾರ್ಕಳ ಭೈರರಸರು

ಇವಳ ನಂತರ ತಿರುಮಲಾದೇವಿ ಸಿಂಹಾಸನಕ್ಕೆ ಬಂದಳು. ಇವಳು 1582ರಿಂದ 1606ರ ವರೆಗೆ ಆಳಿದಳು. ಇವಳು ಜೈನ ಬಸ್ತಿಯನ್ನು ಕಟ್ಟಿಸಿ ಜೈನ ಧರ್ಮವನ್ನು ಪ್ರೋತ್ಸಾಹಿಸಿದಳು. ಇವಳಿಗೆ ಕಾರ್ಕಳ ಭೈರವ ಅರಸ ಇಮ್ಮಡಿ ಭೈರವರಾಯನೊಡನೆ ಮನಸ್ತಾಪವಾಯಿತು. ಇದು ತಿರುಮಲಾದೇವಿಯ ಕಾರಣವಾಯಿತು. ಈ ಯುದ್ಧವು ಪೂರ್ವಭಾವಿ ಯುದ್ಧವಾಗಿ ಕೊನೆಗೆ ಪೋರ್ತುಗೀಸರ ಸೇನೆ ಹುಟ್ಟಿಹಾಕಿತು. ಪೋರ್ತುಗೀಸರ ಸೇನೆಯು ಮುಂದಾಳುವಾಗಿದ್ದ ತಿರುಮಲಾದೇವಿಯು ಸ್ವತಃ ಯುದ್ಧರಂಗಕ್ಕಿಳಿದಳು. ಯುದ್ಧ ಮಾಡುವಂತೆ ಸೈನಿಕರನ್ನು ಪ್ರೋತ್ಸಾಹಿಸುತ್ತಿದ್ದಳು. ಕೊನೆಗೆ ಇವಳು ಯುದ್ಧರಂಗದಲ್ಲಿ ಮಡಿಯಬೇಕಾಗಿ ಬಂತು. ಭೈರವ ಸೇನಾಧಿಪತಿಯು ಅವಳ ಶಲೆಯನ್ನು ಕಾರ್ಕಳಕ್ಕೆ ಕೊಂಡು ಹೋಗಿ ಒಂದು ಹರಿವಾಣದಲ್ಲಿ ಭೈರವರಸನ ಮುಂದಿಟ್ಟನು. ಆದರೆ ಅವಳ ರುಂಡವನ್ನು ಓರೆಯಾಗಿ ಭೈರವರಸನಿಗೆ ಅಭಿಮುಖವಾಗಿ ತಿರುಗಿಕೊಂಡಿತು. ಇದರಿಂದ ರಾಜನು ಸಿಟ್ಟಾಗಿ ಅವಳ ರುಂಡವನ್ನು ಅರಮನೆಯ ಮುಂದಿರುವ ಶೂಲದ ಮೇಲೆ ನಿಂತಿರಬೇಕೆಂದು ಆಜ್ಞಾಪಿಸಿದನು. ಆದರೆ ಪೋರ್ತು ಸೇನಾಧಿಪತಿ ಮಂಗಿಲನು ಆ ರುಂಡವನ್ನು ಯಾರಿಗೂ ಕಾಣದಂತಾಗಿ ಕಾಡು ದಾರಿಯಿಂದ ತನ್ನರಾಜಧಾನಿಗೆ ತೆಗೆದುಕೊಂಡು ಬಂದನು. ಅಲ್ಲಿ ಅವಳಅಂತ್ಯ ಸಂಸ್ಕಾರವಾಯಿತು. ಇವಳ ಸ್ಮಧಾನಿ ದಂಡನಾಯಕರು ಅನುಕ್ರಮವಾಗಿ ನಾರಣಪ್ಪಯ್ಯ, ತಿಮ್ಮಪ್ಪನಾಯ್ಕ. ಈ ವಂಶದ ಇನ್ನೊಬ್ಬ ರಾಣಿ ಎರಡನೇ ಚೆನ್ನಮ್ಮ ದೇವಿಯು ಕ್ರಿ. ಶ. 1628—1630ರ ವರೆಗೆ ಇಕ್ಕೇರಿ ನಾಯ್ಕರ ಸಾಮಂತಳಾಗಿ ಆಳಿದಳು. 3ನೇ ಚೆನ್ನಮ್ಮ ದೇವಿಯು 1044 1687ರ ವರೆಗೆ ಯೋಗ್ಯ ರೀತಿಯಲ್ಲಿ ಆಳಿದ್ದಳು. ಎರಡನೇ ಪದುಮಲಾ ದೇವಿ ಎಂಬ ಇನ್ನೊಬ್ಬ ರಾಣಿಯು ಕ್ರಿ. ಶ. 1715—1726ರ ವರೆಗೆ ಆಳಿದಳು. ಈ ವಂಶದಲ್ಲಿ 3ನೇ ಅಬ್ಬಕ್ಕ ದೇವಿಯು ಕ್ರಿ. ಶ. 1726—1749ರ ವರೆಗೆ ಆಳಿದಳು. ಇವಳ ಆಳ್ವಿಕೆ ಕಾಲದಲ್ಲಿ ಇಕ್ಕೇರಿ ಅರಸ ಸೋಮಪ್ಪ ನಾಯ್ಕನು ತುಳು ನಾಡಿಗೆ ಬಂದು ಅಬ್ಬಕ್ಕರಾಣಿಯನ್ನು ಯೋಗ್ಯರೀತಿಯಲ್ಲಿ ನೋಡಿಕೊಳ್ಳಲಿಲ್ಲ. ಇದರಿಂದ ಈ ರಾಣಿಯು ಬೇಸರಗೊಂಡು ಸ್ವಲ್ಪ ಸೈನಿಕರೊಡನೆ ಪಡುಬಿದ್ರೆ ಬಂದರಿಗೆ ಮುಖಾಂತರ ಕೇರಳಕ್ಕೆ ಹೋದಳು. ಅವಳ ರಾಜ್ಯವನ್ನು ಇಕ್ಕೇರಿ ಅರಸರು ಮುದ್ರಾಡಿ ಅನಂತಯ್ಯ ಶೆಟ್ಟಿಗೆ ಕೊಟ್ಟರು. ಚಾಟಿ ಸೀಮೆಗೆ ಅತನನ್ನು ಅಧಿಪತಿಯಾಗಿ ನಿಯಮಿಸಿದರು. ಈ ವಾರ್ತೆಯನ್ನು ಕೇಳಿ ಅಬ್ಬಕ್ಕ ರಾಣಿ ಕ್ರೋಧಗೊಂಡು ಕೊಪ್ಪದಸನ ಸಹಾಯದಿಂದ ತುಳುನಾಡಿನ ದಕ್ಷಿಣ ಭಾಗವನ್ನು ತನಗೆ ಮಾಡುತ್ತಾ. ಇಕ್ಕೇರಿ ಅರಸರಿಗೆ ಬಹಳ ಉಪಟಳ ಕೊಟ್ಟಳು. ಇದರಿಂದ ಇಕ್ಕೇರಿ ಅರಸರು ನಿರ್ವಾಹವಿಲ್ಲದೆ ಚಾಟಿ ಸೀಮೆಯನ್ನು ಪೆರುಗಿ ಅವಳಿಗೆ ಕೊಡಬೇಕಾಯಿತು. ಆದರೆ ಚಾಟಿ ಸೀಮೆಯನ್ನು ರಾಣಿಯಾಗಿ ಕಲ್ಪುವ ಮೊದಲೆ ಅಬ್ಬಕ್ಕರಾಣಿ 1749ರಲ್ಲಿ ನಿಧನಳಾದಳು.

ಅಜಿಲ ರಾಣಿಯರು

ತುಳುನಾಡಿನಲ್ಲಿ ಆಳಿದ ಇನ್ನೊಂದು ಶ್ರೇಷ್ಠ ಮನೆತನವು ಅಜಿಲರದ್ದಾಗಿದೆ. ಈ ವಂಶದವರು 1154—1776ರ ವರೆಗೆ ಸಾಮಂತ ಅರಸರಾಗಿ ತುಳುನಾಡಿನಲ್ಲಿ ಆಳಿದ್ದರು. ಇವರ ರಾಜಧಾನಿ ಪೇಣೂರು ಈ ವಂಶದಲ್ಲಿ ಮದುರಕ್ಕದೇವಿ ಎಂಬವಳು 1610ರಿಂದ 1647ರ ವರೆಗೆ ಆಳಿದ್ದಳು. ಇವಳು ಕಾರ್ಕಳದ ಭೈರಂಗ ವಂಶದ ರಾಮನಾಥನನ್ನು ಮದುವೆ ಮಾಡಿಕೊಂಡಳು. ಇವಳ ಆಳ್ವಿಕೆಯಲ್ಲಿ ಪೇಣೂರು ಗೋಮಟೇಶ್ವರಗೆ ಮಸ್ತಕಾಭಿಷೇಕವಾಯಿತು. ಅದನ್ನು ತಡೆಗಟ್ಟಬೇಕೆಂದು ಕಾರ್ಕಳದ ಭೈರರಸನು ಯುದ್ಧಕ್ಕೆ ಬಂದನು. ಆದರೆ ಮದುರಕ್ಕ ದೇವಿಯು ತನ್ನ ರಾಜಕೀಯ ಚಾಣಾಕ್ಷತನದಿಂದ ಯುದ್ಧ ಆಗುವುದನ್ನು ಹೋಗಲಾಡಿಸಿದಳು. ಈ ವಂಶದಲ್ಲಿ ಇನ್ನೊಬ್ಬ ರಾಣಿಯೊದ ಸೋಮಲಾದೇವಿಯು ಕ್ರಿ. ಶ. 1683-1721ರ ವರೆಗೆ ಆಳಿದ್ದಳು. ಇವಳು ನಿರ್ವಾಣ ಸಾವಿಯನ್ನು ಮರೆಸಿ ಚೆನ್ನವೀರ ದೇವನಿಗೆ ಒಂದು ಉಂಬಳಿ ಬಿಟ್ಟದ್ದಳು.

ಮೂಲರ ಸೋಮಲಾದೇವಿ

ತುಳುನಾಡಿನ ರಾಜ್ಯಗಳಲ್ಲಿ ಬೈಲಂಗಡಿ ಮೂಲರ ರಾಜ್ಯವು ಒಂದಾಗಿದೆ ಇವರು 12 ಮಾಗಣೆಗಳಾದ ಪಾರ್ಕೂಡಿ, ಮುಂಡಾಜೆ, ಉಜ್ರೆ, ಮುಂಡೂರು, ಪಡಂಗಾಡಿ, ಗರ್ಡಾಡಿ, ಸೊಣಂದೂರು ಮೊದಲಾದ ಮುಂತಾದ ಪ್ರದೇಶವನ್ನು ಆಳಿಕೊಂಡಿದರು ಈ ವಂಶದಲ್ಲಿ ಸೋಮಲಾದೇವಿ ಎಂಬ ರಾಣಿಯು ಹುಟ್ಟಿದ್ದಳು. ಇವಳ ರಾಜಧಾನಿ ಬೈಲಂಗಡಿಯೊಗಿತ್ತು. ಇವಳು ಬಂಗರಾಜನಾದ ವೀರನರಸಿಂಹ ಲಕ್ಷ್ಮಪ್ಪನನ್ನು ಮದುವೆ ಮಾಡಿಕೊಂಡಿದ್ದಳು. ಅನಂತವೃತದಲ್ಲಿ ತಾನು ಬಲಕ್ಕೆ ಕುಳಿತು ಕೊಳ್ಳಬೇಕೆಂದು ಗಂಡನೊಡನೆ ವಾದಿಸಿದಾಗ ಗಂಡನು ಅದಕ್ಕೆ ಸಮ್ಮತಿಸದ ಕಾರಣ ತನ್ನ ಗಂಡನನ್ನು ತ್ಯಜಿಸಿ, ಬೈಲಂಗಡಿಗೆ ಬಂದು ಅನಂತಪ್ರತನನ್ನು ಮಾಡಿಸಿದಳು. ಇದರಿಂದ ಬಂಗರಾಜನು ಸಿಟ್ಟುಗೊಂಡು ಬಲವಾದ ಸೈನ್ಯದೊಂದಿಗೆ ಬೈಲಂಗಡಿಗೆ ಮುತ್ತಿಗೆ ಹಾಕಿದನು. ಇದು ಯುದ್ಧಕ್ಕೆ ಕಾರಣವಾಗಿ ಬಂಗರಾಜನು ಯುದ್ಧದಲ್ಲಿ ಸತ್ತ ಹೋದನು. ಯುದ್ಧದಲ್ಲಿ ಸೋಮಲಾದೇವಿಗೆ ಜಯವಾದರೂ ಗಂಡನು ಸತ್ತುದಕ್ಕಾಗಿ ಪಶ್ಚಾತ್ತಾಪಗೊಂಡು ಆತ್ಮಹತ್ಯೆ ಮಾಡಿಕೊಂಡಳು.

ಉಪಸಂಹಾರ

ಕರ್ನಾಟಕದ ರಾಣಿಯರಂತೆ ತುಳುನಾಡಿನ ರಾಣಿ ಯರು ಉತ್ತಮ ರಾಜ್ಯಭಾರ ಮಾಡಿದರು. ಕಲೆಗಳಿಗೆ ಪ್ರೋತ್ಸಾಹ ಕೊಟ್ಟರು. ಧರ್ಮರಕ್ಷಣೆ ಮಾಡಿದರು. ಪರಕೀಯರ ಆಕ್ರಮಣವನ್ನು ಪೆಡಗಟ್ಟಲು ಪ್ರಯತ್ನಿಸಿ ತಾಳವ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದ, ಕರ್ನಾಟಕ ಸಂಸ್ಕೃತಿಯನ್ನು ವಿಸಿಸಿದರು. ತುಳುರಾಣಿಯರು ಕರ್ನಾಟಕ ಚಕ್ರವರ್ತಿಗಳ ಸಾಮಂತರಾಗಿದ್ದಾಕೊಂಡರು ಕರ್ನಾಟಕ ಸಂಸ್ಕೃತಿಯ ಬೆಳವಣಿಗೆಗೆ ಅಮೂಲ್ಯ ಕಾಣಿಕೆಯನ್ನಿತ್ತಿದ್ದಾರೆಂದರೆ ತಪ್ಪಾಗುವುದಿಲ್ಲ.

(ಆಧಾರದಿಂದ)

[ದೀಪಾವಳಿ ಸಂಚಿಕೆಗೆ ಬಂದುದು.]

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭ್ರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

ರಿಯಾಯಿತಿ ದರಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ

ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸಾಕಲ್ಯಗಳ

ವಸತಿ ಗೃಹ

ಶ್ರೀಹೊ ಟೀಲ್ ಶಿವಪ್ರಸಾದ

ಕುಂದಾಪುರ, ಪಿ. ಕೆ.

ಫೋನ್: 177

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾತ್ರೆಯಂಗಡಿ ಉಪಾಹಾರಕ್ಕೆ ಆಗ್ರ ಸ್ಥಾನ ಶೀತಾತ್ರ ಹೆಚ್ಚಿಲ್.

In the Court of Munsif Kundapur

O. S. 516/1967

Madayya Shetty ... Plaintiff

versus

Nagappa Achari ... Defendant

To

Defendant Nagappa Achari
Son of Channa Acnari
No (1) Shiroor village,
Kundapur Taluk.

Please take notice that the suit filed for recovery of amounts due under promote executed by you on 31-7-61 and endorsed on 31-7-64 is posted on 27-11-67 for your appearance. In case of your absence, the suit will be decided exparte.

By order of Court

K. Narayana Kamath,
Advocate for Plaintiff.

Kundapur, 30-10-67.

ಎಲ್ಲು ನೋಡಿದ್ರೂ ಗೌಡ ಬಂಗಾಳಿ

(ಸಾಲ್ಕನೇ ಪುಟದಿಂದ)

ಮಹಾರಾಷ್ಟ್ರದ ವಿ. ಪಿ. ನಾಯಕರು ಈಗ ತಿರಸ್ಕರಿಸುವ ವಿಚಾರ ಮಾಡುತ್ತಾರಂತೆ....'

'ಅಸ್ಸೇ ಜಲ್ಲ, ಮಹಾಜನ ವರದಿಯನ್ನು ಸುಟ್ಟು ಬಿಡುವ ಚಳವಳಿಯೊಂದು ಸಂಘಟಿತವಾಗುತ್ತಿದೆಯಂತೆ..... ಏನು ಹುಚ್ಚು....!'

"ಮಧ್ಯ ಪ್ರದೇಶದ ಕಾಂಗ್ರೆಸ್ ಶಾಸಕ ಪಕ್ಷದ ನಾಯಕ, ಕಾಮರಾಜರ ಜಂಟಿ, ಮಿಶ್ರಾ ಕೂಡಾ ನಾಡುಕಟ್ಟನ್ನೆ ರಾಜಿನಾಮೆ ನೀಡಿದ್ದಾರಂತೆ...."

'ನೀಡಲಿ, ನೀಡಲಿ....ದುಃಖದ ಸಂಗತಿಯೆಂದರೆ, ಒಂದು ದೇಶ—ಒಂದು ಮನಸ್ಸಾಗಿರಬೇಕಾದ ಈ ಸಂಧಿಕಾಲದಲ್ಲಿನಾವು ಪಕ್ಷಸ್ಪರ ರಜ್ಜಾಡುತ್ತಾ ಇದ್ದೇವೆ.?'

'ಅಲ್ರೀ, ಪಾಕಿಸ್ತಾನ ಹಾಗೂ ಚೀನಾ ರೂಪಾಯಿ ಪರಿಸ್ಥಿತಿ ಕೇಳಿದೆಯಂತೆ...."

"ಹ್ಞಾಂ...ರಷ್ಯಾದ ಯುದ್ಧದ ನೇಪಥ್ಯ ಭಾರತ ಪಾಕಿಸ್ತಾನಕ್ಕೆ ಸಿಂಧೂ ನದಿಯ ನೀರನ್ನು ಬಿಟ್ಟು ಕೊಡಲಿಲ್ಲವಂತೆ, ಅದಕ್ಕೆ ಪರಿಹಾರವಂತೆ...."

'ಏನಂತೆ, ಭಾರತ ಸರಕಾರ ಕೊಡಬಹುದು...'

"ಇಲ್ಲ, ಅದು ಹೇಗೆ ಸಾಧ್ಯ?ನಿರ್ದಿಷ್ಟ ಬೇಡಿಕೆ ಬಂದರೆ ಮಾತ್ರ ನೀರು ಸರಬರಾಯಿ ಪದ್ಧತಿ. ಯುದ್ಧದ ವೇಳೆ ಬೇಡಿಕೆ ಬರಲಿಲ್ಲ: ನೀರು ಪೂರೈಸಲಿಲ್ಲ..."

"ಆಯ್ಯೋ, ಅಯೂಬ್; ಶಸ್ತ್ರ ಹಿರಿದು ಸಾಯುವಾಗ ನೀರಿಗ್ಕೂ ಕೇಳಬಾರದ

ಮೌಢ್ಯ ಭಕ್ತಿಯೆ ಮಹಿಮೆ

(ಏಳನೇ ಪುಟದಿಂದ)

ನನ್ನ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬಿತ್ತು. ಹೀಗಾಗಿ ನಾನು ಅವರ ಮಾತಿಗೆ ಒಪ್ಪಿದೆ ಮತ್ತು ಅಂದೇ ತಾಯಿಯ ಕಡೆಯಿಂದ ಕುಳಿತು ಸರಬೇಡಿಕೊಂಡು ಧರಿಸಹಕ್ಕಿದೆ. ಮತ್ತು ಅವಳ ಶ್ರಾದ್ಧವನ್ನು ಸಹ ಸಂತೋಷ ಪೂರ್ವಕ ಮಾಡುವೆನೆಂದು ಅವಳಿಗೆ ಆಶ್ವಾಸನೆಕೊಟ್ಟೆ.

ಈ ನನ್ನ ಮಾತು ಕೇಳಿ ನನ್ನ ತಾಯಿಯು ಹುಂಬಾ ಪ್ರಸನ್ನಳಾದಳು.ಆದರೆ ಆ ಹೊತ್ತಿಗೆ ನನಗೆ ಇದರ ಮಹತ್ವ ಆಸ್ಥೂಂದು ಹೊಳೆಯಲಿಲ್ಲ. ನಾನು ಕೆಲಸದ ಜಂಜಾಟದಲ್ಲಿದ್ದಿದ್ದಾರಿಂದ ಇದನ್ನೆಲ್ಲ ಮರೆತು ಬಿಟ್ಟೆ. ಮುಂದೆ ಜೈಲಿನಲ್ಲಿ ಇರಹತ್ತಿದ್ದಾಗ ತುಂಬಾ ತಾಯಿಯ ನೆನಪಾಗಹತ್ತಿತು. ಬಾಲ್ಯದಿಂದಲೂ ಅವಳು ನನ್ನನ್ನು ಅತ್ಯಂತ ಪ್ರೇಮದಿಂದ ಸಲಹಿ ಮುದ್ದು ಮಾಡಿ ಬೆಳೆಸಿದ್ದಳು. ತಂದೆಯು ತೀರಿಕೊಂಡ ತರುವಾಯವೂ ನನಗೆ ವಿದ್ಯಾಭ್ಯಾಸ ಮಾಡಿಸಿ ಆಚಾರವಿಚಾರಗಳನ್ನು ಕಲಿಸಿ ಬೆಳೆಸಿದ್ದಳು ಎಂಬುದೆಲ್ಲ ನೆನಪಾಗ ಹತ್ತಿತು. ಅಷ್ಟು ಹೊತ್ತಿಗೆ ಅವಳು ಸಶ್ತು ಹೋಗಿದ್ದಳು. ಆದ್ದರಿಂದ ಇದೆಲ್ಲ ವಿಚಾರ ಮಾಡಿದೂಡನೆ ಮನಸ್ಸಿಗೆ ಹಳಹಳ ಎನಿಸುತ್ತಿತ್ತು—ನಾನು ನನ್ನ ಜೀವನದಲ್ಲಿ ಬೇರೆ ಏನೇನೆಲ್ಲ ಮಾಡಿದ್ದಿರಬಹುದು. ಆದರೂ ಅವಳ ಬಗ್ಗೆ ಮಾತ್ರ ಏನೊಂದೂ ಮಾಡಲಿಲ್ಲ! ಗಾಂಧಿಯವರ ಸಲಹೆ ಕೇಳಿ ಅವಳು ಸಾಯುವ ಮೊದಲೇ ನಾನು ತುಳಸೀಮಾಲೆ ಧರಿಸಲಿಕ್ಕೂ ಅವಳ ಶ್ರಾದ್ಧ ಮಾಡಲಿಕ್ಕೂ ಒಪ್ಪಿಕೊಂಡದ್ದು ನೋಡಿ ಅವಳಿಗೆ ಎಷ್ಟೋ ಮಟ್ಟಿಗೆ ಸಂತೋಷ ಆದದ್ದು ನೆನಸಿ ನನಗೆ ಏಷ್ಟೋ ಸಮಾಧಾನ ಎನಿಸಹತ್ತಿತು. ನನ್ನ ಜೀವನದಲ್ಲಿ ಅದೊಂದು ಅಮೂಲ್ಯವಾದ ನೆನಪಾಗಿ ಉಳಿಯಿತು.

(ಗಾಂಧೀಜಿ ಮತ್ತು ರಾಷ್ಟ್ರೀಯ ಪ್ರವೃತ್ತಿಯಿಂದ)

ಗೌರವ ಗಾತ್ರದಿಂದಲ್ಲ

ಹಾಲಿನ ಚಂದ್ರನಂತೆ ಬಾಲಕ ಬೆಳೆಯ ತೊಡಗಿದ ಕಮಲದಂತೆ ಕೋಮಲವಾದ ಮುಖದ ಮೇಲೆ ರೆಪ್ಪೆ—ಹುಬ್ಬುಗಳ ಮೇಲಿರುವ ಕೂದಲಿನ ಹೊರತು ಬೇರೆ ಎಲ್ಲೂ ಕೂದಲಿನ ಗುರುತಿರಲಿಲ್ಲ.

ತಲೆಯ ಮೇಲೆ ಗುಂಗುರು—ಸುಂದರ ಕೂದಲು ದಿನೇ ದಿನೇ ಬೆಳೆಂಬತೊಡಗಿತ್ತು. ಆ ಕೂದಲಿಗೆ ಆತ್ಮಾಭಿಮಾನ,ಅಹಂಕಾರ, ತುಂಬಿ ತುಳುಕಾಡಿತು. ಅವು ರೆಪ್ಪೆ ವತ್ತು ಹುಬ್ಬುಗಳ ಮೇಲಿರುವ ಕೂದಲನ್ನು ಗೇಲಿ ಮಾಡಿದವು.

"ಅಷ್ಟು ಕೋಮಲವಾದ ಶರೀರದಲ್ಲಿ ಬೆಳೆಯುತ್ತಿರುವ ನೀವಾದರೂ ಅಷ್ಟೇಕೆ ಅಷ್ಟು ಮಂದಗತಿಯಿಂದ ಬೆಳೆಯುತ್ತಿರುವಿರಿ?

ಇಷ್ಟ ನಮ್ಮ ಕಡೆ ಸ್ವಲ್ಪ ನೋಡಿ! ನಾವು ಕಠೋರವಾದಈ ತಲೆಯನ್ನು ಬೆಳೆಯುವ ಶ್ರೀರುವವರಾದಾಗ್ಯೂ ನಾವು ಎಷ್ಟು ಚುರುಕಾಗಿ ತೀವ್ರಗತಿಯಿಂದ ಬಳೆಯುತ್ತಿದ್ದೇವೆ!'

ಇದನ್ನು ಕೇಳಿದ ರೆಪ್ಪೆ— ಹುಬ್ಬುಗಳ ಮೇಲಿನ ಕೂದಲು ವ್ಯಂಗದಿಂದಿದ್ದವು. ಏನೂ ಉತ್ತರಿಸಲಿಲ್ಲ.

"ನಾನು'ಎಂಬ ಜಂಬದ ತಲೆಯ ಕೂದಲುಗಳು ಬೆಳೆಯತೊಡಗಿದವು. ಅವನ್ನ ಕತ್ತರಿಸುವ ಕಾಲ ಬಂತೂ, ಅನ್ನು ಘಡೇನ್ನು ಕತ್ತರಿಸಿಯೇ ಬಿಟ್ಟ. ಅವುಗಳ ಜೊತೆಯಲ್ಲಿ ದಾಡಿಯನ್ನೂ ಬೋಳಿಸುವ ಗತಿ ಬಂತು. ಮಿಸೆಗೆ ಸ್ವಲ್ಪ ಸಾನಕಾಶವಾಯಿತು. ಅಂತ್ಯದಲ್ಲಿ ಅದಕ್ಕೂ ಕೂದಲಿನ ಗತಿಯಾಯಿತು.

ರೆಪ್ಪೆ—ಹುಬ್ಬಿನ ಕೂದಲು ಹೇಗಿದ್ದವೋ ಹಾಗೆ ಇದ್ದವು. ಅವಕ್ಕೆ ಬೆಳೆಯುವಲ್ಲಾ ಇಲ್ಲ ಕಡಿಮೆಯೂಗಲ್ಲಾ ಇಲ್ಲ.

ಇದನ್ನು ನೋಡಿದ ತಲೆಯ ಕೂದಲಿಗೆ ಜಂಬ ಮುರಿದು ಅನೇಕ ವರ್ಷಗಳ ಮುಂದೆ ತಲೆ ಕಜ್ಜಿಯುನಂತೆ ಅಯಿತು.

ವಿನಸೆ— ದಾಡಿಗಳು ಮುಖ ತರುವಿನ ಬಡ—ಬಡ ನೆರೆವು.

"ಗೌರವ ಗಾತ್ರದಿಂದಲ್ಲ ಗುಣದಿಂದ"

"—ಮಲ್ಲಾರಿ"

(ಹಿಂದಿ ಮೂಲ.)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 111/1967

ವಾದಿ —ಗಾರಮ್ಮ

ಪ್ರತಿವಾದಿರು—ರಾಮ ಳ್ಳಾಳ ಕೂಡಾ

ಕುಂದಾಪುರ ತಾಲ್ಲು ಕೋಟೇಶ್ವರ ಗ್ರಾಮದಲ್ಲಿರುವ ಬಡಾಕೆರೆ ಶ್ರೀನಿವಾಸ ಳ್ಳಾಳರ ಮಗ ರಾಮ ಳ್ಳಾಳ, ಶ್ರೀನಿವಾಸ ಳ್ಳಾಳರ ವಿಧವೆ ವಾಗ್ದೇವಿ ಅಮ್ಮ, ಕೃಷ್ಣ ಳ್ಳಾಳರ ಮಕ್ಕಳು ವಿಶ್ವೇಶ್ವರ ಳ್ಳಾಳ, ಶ್ರೀನಿವಾಸ ಸತ್ಯನಾರಾಯಣ ಆಸಂದ, ಕೋಟೇಶ್ವರ ಕೊಡಾ 7 ಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರಿಂದ ವಾದಿಗೆ ಬರತಕ್ಕ ಕಳೆದ ತೋಭಕ್ತಿನ ಸಂವತ್ಸರದ ಆದಿಯೂಗಿ ವಿಶ್ವಾವಸು ಸಂವತ್ಸರದ ಆಂತ್ಯದ ವರೆಗಿನ ಅಶನಾರ್ಜ ಬರಪಡಿ ಕೊಳ್ಳುವರೆ ವಾದಿಳು ಪ್ರತಿವಾದಿರ ಮೇಲೆ ದಾಕ್ಲು ಸಡಿಸಿದ ಮೇರಿನ ದಾವೆಯು ತಾರೀಕು 29—11—67ಕ್ಕೆ ಮೇಲಿನ ಕೋರ್ಟಿನಲ್ಲಿ ತ್ಯಾಗೆ ಇರುತ್ತದೆ. ಆ ಕಾರಣ ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಬ್ತಾದು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸಿದೆ.

N. S Parameshwaraiah

Advocate for Piff

Date 30—10—67, Coondapoor.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 347/1967

ವಾದಿ—ಕೊರಗಯ್ಯ ಶೆಟ್ಟಿ

ಪ್ರತಿವಾದಿ—ಕೊರಗಯ್ಯ ಶೆಟ್ಟಿ,

ಸದ್ರಿ ಪ್ರತಿವಾದಿ:—

ಕೊರಗಯ್ಯ ಶೆಟ್ಟಿ ಬಾಕೂರು ಹೊಸ್ಮನೆ ಮುಂಗಮ್ಮ ಸೆಟ್ತಿರ ಮಗ, ವನಜಳ ಗ್ರಾಮ. ಈಗ ಹಾಲೀ ಕುಂದಾಪುರ ತಾಲ್ಲು ಬೇಳೂರು ಗ್ರಾಮದ ಕೋಣಜ್ಜಗೆ ಅಂತಯ್ಯ ಸೆಟ್ಟಿ ಸನೆಯಲ್ಲಿರುವವ

ಇವರಿಗೆ

ಮೇಲ್ಕಂಡ ವಾದಿಗೆ ನೀವು ತಾ. 2.6.64 ನೆಲ್ಲಿ ಬರಿಸಿ ಕೊಟ್ಟ ಡಿವಾಂಡು ನೋಟಿನ ಅನಾಲು ಬಡ್ಡಿ ಪಡ ಕೂಡಾ ರೂ. 117—50 ಮತ್ತು ಕೋರ್ಟು ಹುಕ್ಕು ವಗೈರೆ ಬಗ್ಗೆ ನೂಡಿದ ಮೇಲ್ಕಂಡ ದಾವೆಯು ತಾ. 27.11.1967ಕ್ಕೆ ಆಗೈರ ತ್ಯಾಗೆಯಿರುತ್ತದೆ ಆ ಕಾರಣ ನಿಮ್ಮ ಅಕ್ಷೇಪಣೆಯಿದ್ದಲ್ಲಿ ಸದ್ರಿ ದಿವಸ ಈ ಕೋರ್ಟು ಮುಂದೆ ಬರುವ ಪಕ್ಷಕ್ಕೆ ನಿಮ್ಮ ಅಕ್ಷೇಪಣೆಯನ್ನು

ಎಲ್ಲೆಲ್ಲಿ ಏನೇನು?

ಪೆಂಡಿಕ ಪಡಮುನ್ನೂರು ನಾರಾಯಣಾಚಾರ್ಯರಿಗೆ ಸನ್ಮಾನೋತ್ಸವ

ಉಡುಪಿ, ನಾಡಿನ ಹಿರಿಯ ವಿದ್ವಾಂಸ ಶ್ರೀ ಪಡಮುನ್ನೂರು ನಾರಾಯಣಾಚಾರ್ಯರನ್ನು ತಾ. 28—10—67ರಂದು ವಿಶ್ವೇಶ್ವರಿಯ ಜುಬಿಲೀ ಯೂನಿಯನ್ ಕ್ಲಬ್ಬಿನಲ್ಲಿ ರಚಿಸಲಾದ "ಆಚಾರ್ಯ ಮಂಟಪ"ದಲ್ಲಿ ಸನ್ಮಾನ ಸಮಿತಿಯ ವತಿಯಿಂದ ವೈಭವದಿಂದ ಸನ್ಮಾನಿಸಲಾಯಿತು. ಆದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ಆಚಾರ್ಯರನ್ನು ಬಿರುದಾವಳಿ ವಾದ್ಯಘೋಷದೊಂದಿಗೆ ಕರೆತಂದು ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಕುಮೂರಿ ಎನ್. ಜಿ. ಸೌಂದರವಳ್ಳಿಯವರ ಪ್ರಾರ್ಥನೆಯ ಬಳಿಕ ಶ್ರೀ ಕಾಪು ಸಾಬ್ಬಾಯ ಪುರಾಣಿಕರ ವೇದಘೋಷವಾಯಿತು. ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದರು. ಶ್ರೀ ಪಿ. ರಂಗನಾಥ ಶೆಣೈಯವರು ಸಂದೇಶಗಳನ್ನೋದಿದರು. ನಗರ ಸಭಾಪತಿ ಶ್ರೀ ಕೆ. ಮುಂಜುನಾಥ ಮಧ್ಯಸ್ಥರು ಉಡುಪಿ ನಗರ ಸಭೆಯ ಪರವಾಗಿ ಮಾನಪತ್ರವನ್ನರ್ಪಿಸಿದರು. ಬಳಿಕ ಅನೇಕ ಸಂಘಸಂಸ್ಥೆಗಳ ಪರವಾಗಿ ಶ್ರೀ ಆಚಾರ್ಯರಿಗೆ ಹೂ ಹಾರಗಳನ್ನರ್ಪಿಸಲಾಯಿತು.

ಶ್ರೀಗಳಾದ ಎಚ್. ವಿ. ಯಜ್ಞೇಶ್ವರ ಶಾಸ್ತ್ರಿ, ಮೈಸೂರು; ಗುರುರಾಜ ಪಿ. ಜೋಶಿ ಗದಗ; ಶ್ರೀ ಕೆ. ಟಿ. ಪಾಂಡುರಂಗಿ, ಬೆಂಗಳೂರು; ಪಂಡರೀನಾಥಾಚಾರ್ಯ ಗಲಗಲಿ, ಗದಗ ಮೊದಲಾದವರು ಶ್ರೀ ಆಚಾರ್ಯರ ಪೂರ್ವ ಸೇವೆಯನ್ನು ಶ್ಲಾಘಿಸಿ ಶ್ಲೋಕ ಶಾಸ್ತ್ರ ರಚನೆಯನ್ನರ್ಪಿಸಿದರು. ಡಾ. ಬಿ. ಎನ್. ಕೆ. ಶರ್ಮ, ಮುಂಬಯಿ ಇವರು ಪಾಂಡಿತ್ಯ ಪೂರ್ಣ ಗ್ರಂಥವನ್ನು ಉದ್ಘಾಟಿಸಿ ಶ್ರೀ ಆಚಾರ್ಯರನ್ನು ಸ್ಮರಿಸಿದರು. ಡಾ। ಟಿ. ಎಸ್. ಪೈ ಗಳು ಶ್ರೀ ಸಮಿತಿಯವರು ಸಂಗ್ರಹಿಸಿದ ನಿಧಿಯನ್ನು ಶ್ರೀ ಆಚಾರ್ಯರಿಗೆ ಅರ್ಪಿಸಿದರು.

ಶ್ರೀ ಆಚಾರ್ಯರು ಉತ್ತರಿಸುತ್ತಾ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ, ಎಲ್ಲರಿಗೂ ಸನ್ಮಂಗಳವನ್ನು ಹಾರೈಸಿದರು. ಅಧ್ಯಕ್ಷರು ಮಾತನಾಡಿ, ಶ್ರೀ ಆಚಾರ್ಯರಂಥಹ ಸಮರ್ಥ ಬೋಧಕರು ದೇಶದಲ್ಲಿ ಬೇರೆ ಇಲ್ಲ ಎಂದು ನುಡಿದರು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 507/1967

ವಾದಿ— ಸೂರಪ್ಪ ಶೆಟ್ಟಿ,

ಪ್ರತಿವಾದಿರು—ಗೋರಪ್ಪ ಶೆಟ್ಟಿ ಕೂಡಾ ಸದ್ರಿ ದಾವೆಯ ಪ್ರತಿವಾದಿಗಳು.

1. ಸೂರಪ್ಪ ಶೆಟ್ಟಿ ಹೊಸ ಮನೆ ಮುತ್ತಯ್ಯ ಸೆಟ್ಟಿ ಆಳಯ.

2. ಆಕ್ಕನೆ ಸೆಟ್ಟಿ 1ನೇ ಪ್ರತಿವಾದಿ ಹೆಂಡತಿ, ಕುಂದಾಪುರ ತಾಲ್ಲೂ ಬೆಳ್ಳಾಲ ಗ್ರಾಮದ ನಂದ್ರೊಳ್ಳಿ ಕಲ್ಲುಮಕ್ಕಿಯಲ್ಲಿರುವವರು

ಇವರಿಗೆ

ಮೇಲ್ಕಂಡ ವಾದಿಗೆ ಫೀರ್ಯಾದು ತಾ. 25—6—67ರಲ್ಲಿ ಬರಿಸಿ ಕೊಟ್ಟು ದಿನಾಂಕ ನೋಟೀಸ್ ಆಗಲು ಬಡ್ತಿ ಹಣ ಕೂಡಾ ರೂ 107—50 ಮತ್ತು ಕೋರ್ಟು ಖರ್ಚು ವಗೈರೆ ಬಗ್ಗೆ ನೊಡಿದ ಮೇಲ್ಕಂಡ ದಾವೆಯು ತಾ 29—11—67ಕ್ಕೆ ಆಳ್ಕರೆ ತಪ್ಪಿಗೆಯು ಆಗ್ತದೆ. ಈ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಈ ಕೋರ್ಟಿಗೆ ಮುಂಚೆ ನೀವು ಸ್ವತಃ ವಾ ಪ್ಲೀಡರ ಮುಖಾಲೆ ಹಾಜರಾಗಿ ಡ್ಯಾಹೇರು ಮಾಡಿ ಕೊಳ್ಳ ತಕ್ಕದ್ದು ತಪ್ಪಿದಲ್ಲಿ ಯೇಕ ಪಕ್ಷವಾಗಿ ಕರ್ಮೂನಸಲಾದೀತು ಅಂತ ತಿಳಿಯಪಡಿಸಿಯಾತ್ತದೆ.

ಕೋರ್ಟು ಹುಕುಂ ಪ್ರಕಾರ

G. Kushala Hegde
B. A. LL. B.
Advocate for Plff

Coondapoor, 30—10—67

ಆರೆಂಥದಲ್ಲಿ ಮೈಸೂರಿನ ಶ್ರೀ ಆರ್. ಕೆ. ನಾರಾಯಣಾರಾಯಣರಿಂದ ವೀಣಾವಾದನ ಕಛೇರಿ ಜರಗಿತು.

ಕೊನೆಯಲ್ಲಿ ಶ್ರೀ ಎ. ಜಿ. ಅಸ್ಸೈಯವರು ವಂದನಾರ್ಪಣೆಗೈದರು.

ಲೋಕ ಸೇವಾ ವೃಂದ

ಅಳಿಕೆ, ತಾ. 28—10—67ರಂದು ಶ್ರೀ ಬಿ. ವಿಠಲದಾಸ ಶೆಟ್ಟಿ, ಎಂ. ಎಲ್. ಎ. ಅವರು ಸತ್ಯಸಾಯಿ ಪಿಯೂಷದಲ್ಲಿ ಮತ್ತು ಓಟಿಕಿ ಮೂರಿನ ಕೃಷಿ ಕ್ಷೇತ್ರಗಳಲ್ಲಿ ವಿದ್ಯುತ್ ಸರಬರಾಯಿಯುದ್ಘಾಟನೆಯನ್ನು ನೆರವೇರಿಸಿದರು. ಬಂಟ್ವಾಳ ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ಅಧ್ಯಕ್ಷೆ ಶ್ರೀಮತಿ ಲೀಲಾವತಿ ಕೆ. ರೈ, ಎಂ ಎಲ್. ಎ. ಅವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ವಿಠಲದಾಸ ಶೆಟ್ಟರು ಮೂತನಾಡುತ್ತಾ "ಕೆಲಸ ಮಾಡುವಾಗ ಅನೇಕ ಅಡೆ ತಡೆಗಳು ಬರುತ್ತವೆ. ಆದರೆ ಅವನ್ನು ಎದುರಿಸಿ ಕಾರ್ಯ ಮುಂದುವರಿಸುವವರೇ ಯೋಗ್ಯರು ಸಮರ್ಥರು ಅಂತಹ ಶಕ್ತಿಯುಳ್ಳ ಶ್ರೀ ನಾರಾಯಣ ಭಟ್ಟರು ಈ ಗ್ರಾಮಕ್ಕೆ ಸಿಕ್ಕಿರುವುದು ಇಲ್ಲಿಯ ಸೌಭಾಗ್ಯ, ಈ ಪ್ರದೇಶವು ಅಭಿವೃದ್ಧಿಯನ್ನೂ ಪ್ರಸಿದ್ಧಿಯನ್ನೂ ಹೊಂದಲಿ ಎಂದು ಹಾರೈಸಿ ಎಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ನೆರವೇರಿಸಿದರೆ ನಮ್ಮ ದೇಶ ಉದ್ಧಾರವಾದೀತು" ಎಂದು ಹೇಳಿದರು.

ಶ್ರೀ ಟಿ. ವೆಂಕಟೇಶ ರೈಗಳು ಮೂತನಾಡಿದ ಬಳಿಕ ಡಿಸ್ಪೆನ್ಸರಿ ಡೆವಲಪ್‌ಮೆಂಟ್ ಅಸಿಸ್ಟೆಂಟ್ ಶ್ರೀ ಎನ್. ಆರ್. ರಂಗಣ್ಣ ಅವರು ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಯಶಸ್ವಿಯಾಗಿ ತೋಡಿದ ಬಾವಿಯ ಉದ್ಘಾಟನೆಯನ್ನು ನೆರವೇರಿಸಿ ಸಂಸ್ಥೆಯ ಸೇವಾಕಾರ್ಯಗಳನ್ನು ಶ್ಲಾಘಿಸಿ ಮೂತನಾಡಿದರು.

ಶ್ರೀಮತಿ ಲೀಲಾವತಿ ಕೆ. ರೈಯವರು ಮೂತನಾಡುತ್ತಾ "ವಿದ್ಯುತ್ ಶಕ್ತಿಯು ಬೆಳಕು ಗ್ರಾಮವನ್ನೂ, ದೇಶವನ್ನೂ ಪ್ರಪಂಚವನ್ನೂ ಬೆಳಗಿಸಲಿ ನಮ್ಮ ದೇಶದ ಕಷ್ಟವನ್ನು ನೀಗಿಸಲು ನಾವೆಲ್ಲರೂ ಒಟ್ಟಾಗಿ ಶ್ರಮಿಸಿ, ಗಾಂಧೀಜಿಯವರ ಕನಸಾದ ರಾಮರಾಜ್ಯವನ್ನು ಕಟ್ಟಲು ಶ್ರಮಿಸೋಣ" ಎಂದರು. ಮುಂದುವರಿಯುತ್ತ "ಇಲ್ಲಿ XIನೇ ತರಗತಿಯಲ್ಲಿ ಬಹಳ ಹೆಣ್ಣುಕ್ಕಳಿದ್ದಾರೆ ಎಂದು ಕೇಳಿ ತುಂಬಾ ಸಂತೋಷವಾಯಿತು. ಹೆಣ್ಣುಕ್ಕಳು ವಿದ್ಯಾವಂತರಾದರೆ ಕುಟುಂಬಗಳ ಉದ್ಧಾರವಾಗುವುದು ಮುಂದಿನ ಪುಕ್ಕಳಿಗೂ ಅವರು ವಿದ್ಯಾಭ್ಯಾಸ ಕೊಡಿಸಬಯಸುವೆ" ಎಂದಿತ್ಯಾದಿಯಾಗಿ ನುಡಿದರು.

ರಾತ್ರಿ ಏರ್ಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಲ್ಲಿ ಚಲಚಿತ್ರ ಪ್ರದರ್ಶನವಿತ್ತು. ತದನಂತರ ಡಿಸ್ಪೆನ್ಸರಿ ಕಮಿಶನರ್ ಶ್ರೀ ಎಚ್. ಎಲ್. ನಾಗೇಗೌಡರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಬಯಲಾಟವೂ ವಿಜೃಂಭಣೆಯಿಂದ ನೆರವೇರಿತು.

ಮೊದಲು ಲೋಕ ಸೇವಾ ವೃಂದದ ಅಧ್ಯಕ್ಷ ಶ್ರೀ ಮಡಿಯೂಲ ನಾರಾಯಣ ಭಟ್ಟರು ಸ್ವಾಗತ ಭಾಷಣವನ್ನು ಮಾಡಿದರು ಶ್ರೀ ವಿ. ವಿ. ಶಂಕರನಾರಾಯಣ ಭಟ್ಟರು ಶ್ರೀ ಮತ್ತೂರ ಸರಬರಾಯಿಗೆ ಸಂಬಂಧ ಪಟ್ಟ ವರದಿಯನ್ನು ಓದಿದರು.

ಕಾಂಜಿನ ಕಸ್ತೂರಿ ಪ್ರದರ್ಶನ

ತಾ. 28—10—67ರಂದು ಮೂಲ್ಕಿ ಸರಕಾರಿ ಸ್ವೈನ್ಯಾಲಿನ ವಿದ್ಯಾರ್ಥಿ ಸಾಹಿತ್ಯ ಸಂಘದ ಕಲಾವಿದರು ಮಂಗಳೂರು ಮಾಧವನಗರ ರಂಗಮಂಟಪದಲ್ಲಿ ಶ್ರೀ ಡು. ಗೋ. ರಾವ್. ವಿರಚಿತ 'ಕಾಂಚನ ಕಸ್ತೂರಿ' ಎಂಬ ಕನ್ನಡ ಸಾಮಾಜಿಕ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು. ಶ್ರೀ ರಾಯರೇ ಸ್ವತಃ ನಾಟಕವನ್ನು ನಿರ್ದೇಶಿಸಿ, ದಿಗ್ದರ್ಶಿಸಿದ್ದರು. ಶ್ರೀಯುತರುಗಳಾದ ನರಸಿಂಹ ಸೇರಿಗಾರ್, ನಂದಗಾಪುರ ಆಚಾರ್ ಹಿರ್ಮೆಳದಲ್ಲಿ ಭಾಗವಹಿಸಿದ್ದರು. ಈ ನಾಟಕವನ್ನು ಮಂಗಳೂರಿನ ಅಮೃತ ಸಂಗೀತ ಸಭಾದ ವತಿಯಿಂದ ಅಭಿನಯಿಸಲ್ಪಟ್ಟಿತ್ತು. ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಇದು ವಿಶಿಷ್ಟ ಸ್ಥಾನ ಗಳಿಸಿಕೊಂಡಿದೆ.

ಯಕ್ಷಗಾನ ಕೂಟ

ದೇರಂಬಾಡಿ ಬಣಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ತಾ. 21—10—67ರಂದು "ಸಂಜಯ ಸಂಧಾನ" ಎಂಬ ಯಕ್ಷಗಾನ ತಾಳಮದ್ದಳೆಯು ಬಣಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ಜರಗಿಸಲ್ಪಟ್ಟಿತು.

ಶ್ರೀ ಮಾಸ್ಟರ್ ರಾಧಾಕೃಷ್ಣ ರೈಗಳ ವತಿಯಿಂದ ಸೇರಿಸಲ್ಪಟ್ಟ ಈ ಕೂಟದಲ್ಲಿ ಹಲವು ಅರ್ಥದಾರಿಗಳು ಭಾಗವಹಿಸಿದ್ದರು.

ವಿವಾಹ ಸಮಾರಂಭ

ಸುಂಗಳೂರು, ಡಾ. ಎಮ್. ವೇಣು ಗೋಪಾಲ ಶೆಟ್ಟರ ಪುತ್ರಿ, ವ, ಇವರಬಹು ದ್ದೂರಾ ಕೆ. ಟಿ. ಅಳ್ವರ ಮೊಮ್ಮಗಳು ಬಿ. ಸೌ. ಲತಾ ಮತ್ತು ಶ್ರೀ ಕೆ. ಎಲ್. ಭಂಡಾರಿಗಳ ಪುತ್ರ ವ, ಬ್ರಹ್ಮಾವರ ಮುತ್ತೂರು ಮನೆ ಜಗಜೀವನದಾಸ್ ಶೆಟ್ ಅಳಿಯ ಬಿ. ಅನಿಲ್ ಇವರ ವಿವಾಹ ಸಮಾರಂಭವು ತಾ. 8—11—67ರಂದು ಮಂಗಳೂರು ಪುರಭವನದಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ನಗರದ ಜಿಲ್ಲೆಯ, ಹೊಗೂ ದೇಶದಾದ್ಯಂತದಿಂದ ಬಂಧು ಮಿತ್ರರು ಬಸುಸಾಂಪ್ರಯಲ್ಲಿ ಆಗಮಿಸಿ ವಧೂವರರನ್ನು ಆಶೀರ್ವದಿಸಿದರು.

ಗುಂಪು ರಾಜಕೀಯ

"ಬೆಳಗಾಯ್ತು"—"ಆಗಿಲ್ಲ"
ಎಂಬೀ ವಿವಾದವು
ಬೆಳೆದುದು ಕೋಗಿಲೆಗಳ ನಡುವೆ.
ಬೆಳಗಾಯಿತೆಂದುದು ಹೆಡ್ಡ ಹಕ್ಕಿ!
ಆಗಿಲ್ಲವೆಂದುದು ದಡ್ಡ ಹಕ್ಕಿ!
ಬೆಳಗಾಯಿತೆಂದಾಗ
ದಡ್ಡನು ಹೆಡ್ಡನ
ಮುಖ ಮುಕ್ಕಿ ಸೀಳಲು
ಹಾರಿ ಬಂತು;

ಆಗಿಲ್ಲವೆಂದಾಗ ಮೈತಿವಿಯಲು ಬಂದ
ಹೆಡ್ಡನು ದಡ್ಡಗೆ ಒದೆಯಲೆದ್ದ!
ಒದೆಯಬದರೊಡೆ, ಕುತ್ತು
ಕುತ್ತಿಗಾದರೆ ಉರುಳು;
ಹೊಡೆಬಾಟೆ ಹೋರಾಟ
ಎರಡೂ ಸಿದ್ದ!
ಈ ಚಂದ ಕಾಣಲು
ನಂವಾದ ಕೇಳಲು

ನೆಪಿ ಹಕ್ಕಿಗಳು ಬಂದು ನೇರಿದವು.
ಕೋಗಿಲೆಗಳ ಕ್ರೋಧ
ಬಿರುಸಿನಿಂದೇರಿತು—

ಸೇರಿದ್ದವಗೆ ನಂಬಿ
ಬಿಗುವೇರಿತು.
ಅತ್ತಿತ್ತ ಒದೆಯ :ವ
ಕುಳ್ಳುವ ಪರಚುವ
ಹೊಡೆಬಾಟ ಹೆಣಗಾಟ
ಚೀತ್ಕಾರಗಳ!
ಬೆಳಗಾಯಿತೆಂಬುದು ಹೆಡ್ಡ ಹಕ್ಕಿ
'ಇಲ್ಲವೆಂದಾಗಿಗೆ ದಡ್ಡ ಹಕ್ಕಿ!
ಕಾಗೆ, ಕೊಕ್ಕರೆ, ಗೂಗೆ,
ಗುಬ್ಬಚ್ಚಿ ಗಿಡುಗಾದಿ
ಕಾವೇರಿಸಿದ್ದವು
ಕಲಹ ಮಧ್ಯೆ!
"ಜಿಂದಾಬಾದ್...."
"ಮುರ್ದಾಬಾದ್...."
ಎಲ್ಲ ಘೋಷಣೆಗಳ
ಗುಲ್ಲಲ್ಲಿ ಹೋರಾಟ ನಾಮುತಿತ್ತು.
ಪೆಸಟ್ಟೆಯ ಕುಕ್ಕಿತು ಹೆಡ್ಡ ಹಕ್ಕಿ;
ತಲೆ ಕುಕ್ಕಿ ಸೀಳಿತು ದಡ್ಡ ಹಕ್ಕಿ!
ಆ ತನಕವು ಬಲು ಇಂಪಾಗಿ ಜತೆಯಲ್ಲಿ
ಹಾಡಿದ್ದ ನವ್ಯ ಬಿದ್ದು ಹೊರಳಿದವು!
ಹೊರಳಾಟ ನರಳಾಟ
ಹೋರಾಟ ಚೀರಾಟ
ಪೇಚಾಟ ವಂದದ ಸೆಳೆದಾಟ!
ಒಂದಾಗಿ ಬಾಳಿದ್ದ
ಇಂವಾಗಿ ಹಾಡಿದ್ದ
ಕೋಗಿಲೆಗಳೆದಪೆ ಕೊನೆಯೊಟ!
"ಬೆಳಗಾಯ್ತು" "ಆಗಿಲ್ಲ"
ವಾದವು ಸಾಗಿತ್ತು;
ಸೇರಿದ್ದ ಸಭಿಕರು ಗುಂಡುಗಟ್ಟೆ
ಇಷ್ಟರೊಳಗೆ ಹೊತ್ತು
ಮೂಡಿತ್ತು—ಎದಿತ್ತು;
ಮಧ್ಯಾಹ್ನ ಬಿಸಿಲಿನ ಬೆಸಿಯಾಗಿತ್ತು.

—ಎಚ್. ಎಂ. ನಾರಾಯಣ ಭಟ್ಟ

ಆಪ್ಪಾ ಭಾಷಣ ಪ್ರಧೇಯಲ್ಲಿ ನಂಗೆ ಪ್ರಥಮ ಬಹುಮಾನ ಸಿಕ್ಕಿದೆ..."

"ಮತ್ತೆ, ನೀನು ನಿನ್ನ ಅಮ್ಮನ ಮಗನೇ ಆಲ್ವೆ. ಆದ್ದೆ!

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R, E P. 25/67 O. S. 472/61

ವಾದಿ— ಮಂಜಾಂಬಿಕೆ ಸೆಟ್ತಿ.

ಪ್ರತಿವಾದಿರು—1, ಸದಿಯಮ್ಮ ಸೆಟ್ತಿ ಕೂಡಾ

2. ಲಕ್ಷ್ಮಿ ಸೆಟ್ತಿ, 3. ವಿಟ್ಟಲಸೆಟ್ಟಿ —ಸದಿಯಮ್ಮ ಸೆಟ್ತಿರ ಮಕ್ಕಳು, 5 ಬಾಸ್ಕರಸೆಟ್ಟಿ, 9. ವಿಶಾಲಾಕ್ಷಿಸೆಟ್ತಿ, ಆಂತಮ್ಮ ಸೆಟ್ತಿರ ಮಕ್ಕಳು, 13 ಲಕ್ಷ್ಮಮ್ಮ ಸೆಟ್ತಿ—ಚಿಕ್ಕಮ್ಮಸೆಟ್ತಿ ಮಗಳು, ಕುಂದಾಪುರ ತಾಲ್ಲೂ ಬಳ್ಳೂರು ಗ್ರಾಮದವರೆಲ್ಲರಿಗು ವಗೈರೆ.

ಸದ್ರಿ ಪ್ರತಿವಾದಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಮೇಲ್ಕಂಡಿಯಲ್ಲಿ ನೂರಾಬಟ್ಟೆ ವಿಧಿಯುಳ್ಳ ಸ್ತಿರಾಸ್ತಿಗಳ, ಯೇಜಮಾ ಕಾಂತು ವಾದಿಳು ಯೇಲಂ ಮಿಸ್ತ್ರಿಯಾರು ದಾಖಲು ಮಾಡಿರುತ್ತಾರೆ ಸದ್ರಿ ಮಿಸ್ತ್ರಿಯಾರನ ಶರ್ತ ನಿರ್ಣಯಿಸುವರೆ ಅಮಲ್ದಾರಯನ್ನು ತಾ. 18-11-1967ಕ್ಕೆ ಯಿಟ್ಟಿರುತ್ತದೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೇರುಮಾಡಿಕೊಳ್ಳತಕ್ಕದ್ದು ಎಂಬ ಸಂಗತಿಯನ್ನು ತಿಳಿಸಿದ್ದುತ್ತದೆ.

ಕೋರ್ಟು ಹುಕುಂ ಪ್ರಕಾರ

Y. Tejappa Shetty
Advocate for Plff.

Coondapoor, 26—10—67

ಉದಾರ ಹಸ್ತ

(ಎರಡನೇ ಭಾಗದಿಂದ)

ಯೂ ಒಂದು ಹೆಚ್ಚು ಮಾತನಾಡುವವರಲ್ಲ. ಒಂದು ದಿನವಾದರೂ ಅವರ್ಯಾರಿಗೂ ನೋಯಿಸಿ ಮಾತನಾಡಿದ್ದು ನನಗೆ ಗೊತ್ತಿಲ್ಲ...' ಎನ್ನುತ್ತಿರುವಾಗಲೇ.

"ಹೌದು, ಹೌದು. ನೀನು ಅಪ್ಪನದೇ ಪಾರ್ಟಿ. ನಾನು ಮಾತ್ರ ಬೇರೆ. ನೀವೆಲ್ಲಾ ಕೂಡಿ ನನ್ನನ್ನು ಕೊಲ್ಲಿ ಕೊಲ್ಲಿ" ಎಂದು ಹಣೆ ಬಡಕೊಳ್ಳುವಾಗಲೇ ವರದ್ರಾಯರು ಒಳ ಬಂದರು

'ಏನು? ಏಂಥಾದ್ದು?' ಎಂದು ಆಶ್ಚರ್ಯ ಬೆರೆತ ಧ್ವನಿಯಿಂದ ವತ್ಸಲೆಯನ್ನು ನೋಡಿದರು.

"ನಮ್ಮ ಶಾಲೆಯಲ್ಲಿ ನಾಟಕವಿದೆ ಅಪ್ಪ"

"ಅದಕ್ಕೇಕೆ ಈ ಪ ರಾಣ'

'ಪಾಗಲ್ಲ. ನನ್ನನ್ನು ಪಾರ್ಟು ಮಾಡಲು ನಯನಾ ಟೀಚರ್ ಕೇಳಿಕೊಂಡರು.

"ಅದಕ್ಕೇಕೆ ಇವಳ ಪುರಾಣ?

"ನಾನೂ ಸುಮತಿ ಒಟ್ಟು ಪಾರ್ಟು ಮಾಡಬೇಕಂತೆ.'

"ಅದಕ್ಕೆ ಇವಳದೇನು ಕೂಗಾಟ?'

"ಅವಳಕೂಡನೆ ವಿಂಡಿತ ಪಾರ್ಟು ಮಾಡಬೇಕು" ಎಂದರು ವತ್ಸಲೆಯು ತಾಯಿ. ಖಿನ್ನತೆ ಆಳು, ಗರ್ವ ಮಿಶ್ರಿತ ಧ್ವನಿಯಿಂದ.

'ನೀನು ಅದೇ ಪಾರ್ಟನ್ನು ಮಾಡಲೇ ಬೇಕು ತಿಳಿಯಿತೆ?" ಎಂದು ನಿರ್ಧಾರದ ಆಜ್ಞಾ ಧ್ವನಿಯಿಂದ ಸ್ವರ ಎತ್ತರಿಸಿದರು ವರದ್ರಾಯರು.

'ಮಾಡಬೇಡ" ಎಂದರು ಪುನಃ ತಾಯಿ ಕಟಮಿಶ್ರಿತ ಸ್ವರದಿಂದ.

ಇದುವರೆಗೂ ಒಳಕುದಿಯಲ್ಲಿದ್ದ ಆಗೊಮ್ಮೆ ಈಗೊಮ್ಮೆ ಹೊರ ಇಣಿಕಿ ಒಳಗೋಡಿ ಸೇರಿ ಕುಳಿತು ಕೊಳ್ಳುವ ಭಾವನೆ ಒಮ್ಮೆಗೆ ಹೊರ ಚಿಮ್ಮಿದಂತಾಯಿತು.

'ಒಂದೋ ಈ ಮನೆಯಲ್ಲಿ ನೀನು ಹೇಳಿದ ಹಾಗೆ ನಡೆಯಬೇಕು ಇಲ್ಲವೇ ನಾನು ಹೇಳಿದ ಹಾಗೆ. ಯಾವಾಗಲೂ ಬೆಳಿಗ್ಗಿನಿಂದ ಸಂಜೆಯವರೆಗೆ ನಿನ್ನ ಬೇಕು— ಬೇಡದ ಎಂತು ಕೇಳಿ ಕೇಳಿ ಸಾಕಾಗಿ ಹೋಗಿದ್ದ. ಏನು ನೀನೀಗ ಪಾರ್ಟು ಮಾಡುವವಳೋ? ಅಲ್ಲವೋ" ಎಂದು ಉರಿ ಕಾರುತ್ತಿರುವ ಕಣ್ಣುಗಳಿಂದ ಮಗಳನ್ನು ನೋಡಿದರು. ವತ್ಸಲಾ ತಾಯಿಯು ಎಂಬಿವನ್ನು ಬೆದರು ಕಣ್ಣುಗಳಿಂದಲೇ ನೋಡಿದಳು.

'ಏನು ಮೊದಲು ಹೇಳು, ಒಂದೋ ತಾಯಿ ಇಲ್ಲವೇ ತಂದೆ. ಕೂಡಲೇ...." ಎಂದನು ಪಕ್ಷೇ ನಿರ್ಧಾರದ ಮನೋಭಾವನೆಯಿಂದ.

"ಹೇಳುತ್ತೇನೆ" ಎಂದಳು ಕ್ಷೀಣ ಧ್ವನಿಯಿಂದ.

ಂ ಂ ಂ

'ನೋಡ ಜಯಾನ್" ಯಶಸ್ವಿಯಾಗಿ ಅಭಿನಯಿಸಲ್ಪಟ್ಟು ಜನರ ಮೆಚ್ಚುಗೆಯನ್ನು ಪಡೆಯಿತು. ಎಲ್ಲರೂ ವತ್ಸಲಾ ಸುಮತಿಯರ ಪಾತ್ರಗಳನ್ನು ಹೊಗಳುವರೇ ಬಹುವೂನ ಪಡೆಯುವುದರೊಂದಿಗೆ ನೆಚ್ಚಿನ ಸಂಬಂಧಿಕರಾಗಿ ಪರಿವರ್ತನೆಗೊಂಡರು.

ದೇರಾದ, ದೂರಾದ ಅವರಿಬ್ಬರ ಮನಸ್ಸು ಊಹಿಸುವುದೋ ಒಂದು ಕ್ಷಣದಲ್ಲಿ ಒಟ್ಟುಕೂಡಿದುವು. ತಾಯಿಯ ಉತ್ಕಟ ಪರಬೇತಿಯಲ್ಲಿ ಬೆಳೆದ ಸುಮತಿ ಯಾರನ್ನೂ ದ್ವೇಷಿಸಿರ ದಾಗಿಲ್ಲ. ನಾಟಕದ ಪ್ರಾತ್ಯಕ್ಷಿಸಿನ ಸಮಯದಲ್ಲೂ ಹಲವುಬಾರಿ ವತ್ಸಲಳು ಸುಮತಿಯ ಮನೆಗೆ ಹೋಗಬೇಕಾಯಿತು. ನೊದಲುಅಳುಕಿಕೊಂಡರೂ ಕೊನೆಗೆ ಸರಾಗವಾಗಿ ಹೋಗಿ ಬರತೊದಗಿದಳು. ರಜೆಯಲ್ಲಿ ಊಗೆ ಬಂದ ಸುಮತಿಯ ಅಣ್ಣ, ಅವಳ ತಾಯಿ ಯಾರೂ ವತ್ಸಲೆಯ ಮನಸ್ಸನ್ನು ನೋಯಿಸಲಿಲ್ಲ. ಬದಲಾಗಿ ತಮ್ಮ ಮನೆಯವಳೇ ದೇ ಅವಳನ್ನು ಕಾಣತಿದ್ದರು. ಮುಚ್ಚು ಮರೆ ಇಲ್ಲದ ಅವರ ಮಾತು, ನಡವಳಿಕೆ ವತ್ಸಲೆಯನ್ನು ಅವರ ಬಳಿಗೆ ಸೆಳೆಯಿತು. ತನ್ನ ತಾಯಿಯು ಮಾತಿನಲ್ಲಿ ಸಹಕೆಯನ್ನು ಕಾಣದೆ, ತಂದೆಯ ಮೇಲೆ ವಿಶ್ವಾಸವೂ ಪ್ರೀತಿಯೂ ಹೆಚ್ಚಿತು

ತಮ್ಮ ಮಗಳಿಗಾಗಿ ಹಲವಾರು ಕಡೆ ಹೆಣ್ಣುನೋಡಿದ ರಾಮರಾಯರ ಕಣ್ಣಿಗೆ ಆಗಾಗ ಬರುವ ವತ್ಸಲೆ ಬಿದ್ದಳು. ಅವರ ಭಾವನೆಗೆ ಮನೆಯವರೆಲ್ಲರೂ ಒಪ್ಪಿದರೂ, ವತ್ಸಲೆಯ ತಾಯಿಯು ಜಾಯಿಗೆ ಹೆದರಿಸೇ ಇದ್ದರು. ರಾವ ರಾಯರು ತಮ್ಮ ಭಾವನೆಯಿಂದ ವಿಚಲಿತರಾಗದೆ ಇರುವ ಒಂದು ದಿನ ವರದ್ರಾಯರೊಡನೆ ಕ್ರಸ್ತಾಪ ತೆಗೆದೇ ತೆಗೆದರು.

ಂ ಂ ಂ

"ವತ್ಸಲೆಗೆ ೧೭ ತುಂಬಿತು ಎಂದು ಕಾಣುತ್ತದೆ" ಎಂದರು ವರದ್ರಾಯರು ಊಟಕ್ಕೆ ಕುಳಿತಾಗ.

'ಯಾಕಾಗಿ?" ಎಂದರು ಹೆಂಡತಿ

"ಹೀಗೆ. ಅವಳ ಜಾತಕ ಎಲ್ಲಿದೆ?"

'ಹದಿನೇಳಾಯ್ತಲ್ಲ ಯಾಕೆ ನಮ್ಮುವೆ? ನಮ್ಮನೇನು ಸಾವಿರ ಹೆಣ್ಣುಗಳಿನೆಯೇ?'

'ಯೋಗ್ಯ ವರ ಸಿಕ್ಕಿದರೆ ಕೊಡಬಾರದೆ?"

"ಅಂಥ ಯೋಗ್ಯ ಯಾರಪ್ಪ?"

'ಯಾರೆಂದು ಮತ್ತೆ. ಜಾತಕ ಹುಡುಕಿ ಕೊಡು, ಸಾಧ್ಯವಾದರೆ ಇವತ್ತು ಪೇಟೆಗೆ ಹೋಗುವಾಗ" ಎಂದಷ್ಟೇ ಕೇಳಿ ಆ ವಿಚಾರ ಮಾತನಾಡಿ ಊಟ ತೀರಿಸಿ ಮಲಗಿಕೊಂಡರು.

ಅದೇ ದಿನ ವತ್ಸಲಾ ವೆಟ್ಟಿನಿ ಹೋಗಿನೇಮಕ್ಕೆ ಹೋಗಿದ್ದಳು. ನೀಲಾಮಾದ ಹೊಂಗನಸು, ಗೆಳತಿಯರೊಡನೆ ಚರ್ಚೆ, ಇವುಗಳಲ್ಲಿ ಲೀನವಾಗಿ ನಡೆಯುತಿದ್ದಳು ವತ್ಸಲಾ. ಅವರ ಹಿಂದಲ್ಲೇ ಸುಮತಿ, ಅವಳಣ್ಣ ಬರುತಿದ್ದರು. ಮನೆಗೆ ತಿರುಗುವ ಆವರೆದಲ್ಲಿ ಎದುರು ಬದುರಾಗಿ ಬರುತ್ತಿರುವ ಮೋಟಾರು ಮತ್ತು ಗಾರಿನ ಕಡೆಗೆ ಗಮನ ಹರಿದಿರಲಿಲ್ಲ. ಹೀಗಾಗಿ ಮಧ್ಯ ಸಿಕ್ಕಿದಳು ವತ್ಸಲಾ. ಹಿಂದಲ್ಲಿದ್ದ ಸುಮತಿ ಚೀಂಕೊಳ್ಳುವಾಗಲೇ ಅವಳಣ್ಣ ಅವಳೆಡೆಗೆ ಧಾವಿಸಿದ್ದ. ಕೈಯೊಂದನ್ನು ಕಳೆದು ಕೊಂಡು ಸ್ಮೃತಿ ತಪ್ಪಿದ್ದಳು ವತ್ಸಲಾ.

ಂ ಂ ಂ ಂ

ಮೂರನೇಯ ದಿನ ಕೆಲಸಕ್ಕೆಂದು ಹೊರಟು ಬೊಂಬಾಯಿ ಸೇರಿದ್ದ ದಿನೇಶ, ತನ್ನ ಕಾಗದದಲ್ಲೆಲ್ಲಾ ವತ್ಸಲೆಯ ಕುರಿತು ಪಂಗಿಯೊಡನೆ ಕೇಳುತಿದ್ದನ ೬ ತಿಂಗಳ ಸತತ ಆರೈಕೆಯು ಫಲವಾಗಿ ಪೂರ್ಣ ಗುಣ ಹೊಂದಿದ ವತ್ಸಲೆ ಕೃತಕ ಕೈಯ ವಳಾದಳು. ಆದರೆ ತಾಯಿಯ ಹಂಗಿನುವ, ತಿರಸ್ಕಾರದ ಮಾತುಗಳಿಂದ ಜರ್ಜರಿತಳಾಗುತ್ತಿದ್ದಳು. 'ಬದುಕಿ ತನಗೇನಾಗಬೇಕು' ಎಂಬ ಮನೋಸ್ಥಿತಿಗೆ ಬಂದು ಮುಟ್ಟಿತಿದ್ದಳು. ಅಂಥಾ ಒಂದು ದಿನ ಸುಮತಿ

"ಅತ್ತಿಗೆ" ಎಂದು ಕರೆಯುತ್ತಾ ವತ್ಸಲೆಯ ಕೋಣೆಗೆ ಬಂದಳು.

"ಯಾರು?' ಎಂಬ ಬೆಟ್ಟಿ ಕೇಳಿದಳು ವತ್ಸಲಾ.

"ಏನು ನೋಡಿರುತ್ತೀ? ಎಂದು ವತ್ಸಲೆಯ ಕಳಾಹೀನ ಮುಖವನ್ನು ನೋಡಿದಳು. ದುಃಖ ಒಮ್ಮೆಲೇ ಉಕ್ಕಿ ಬಂದು ಮುಖ ಮುಚ್ಚಿ ಅಳಲಾರಂಭಿಸಿದಳು ವತ್ಸಲಾ. ಎಷ್ಟು ಸಮಾಧಾನ ಪಡಿಸಿದರೂ ಕೇಳದೆ ಇರುವಾಗಲೇ ವತ್ಸಲೆಯು ತಾಯಿ ಕೋಣೆಗೆ ಬಂದರು. ಅವಳನ್ನು ಕಂಡು.

"ಕೂತು ತಿನ್ನುವವರಿಗೆ ಅಳು ಬಾಗದೆ ಇನ್ನೇನ? ಸುಟ್ಟಮುಖಕ್ಕೆ ಅಳು ಬೇರೆ" ಎಂದು ಹೇಳುತ್ತಾ ಏನನ್ನೋ ಹುಡುಕಿ ಕೊಂಡು ಹೊರಟು ಹೋದರು. ವತ್ಸಲೆಯ ದುಃಖಕ್ಕೆ ಕಾರಣ ತಿಳಿದ ಸುಮತಿಗೆ ಬಹಳ ಬೇಸರವಾಯಿತು. ಆ ದಿನ ಹೆಚ್ಚಿಗೇನನ್ನೂ ಮಾತನಾಡದೆ ಹೊರಟು ಹೋದ ಸುಮತಿ ಆ ದಿನದಿಂದ ಪ್ರತಿದಿನವೂ ಅವಳಿಗಾಗಿ ಹೂ, ತಿಂಡಿ, ಕಥೆ ಪುಸ್ತಕ, ಹೊಸ ಬಟ್ಟೆ, ಊರಿನ ಸ್ವಾರಸ್ಯ ವಿಚಾರ, ತನ್ನ ತಾಯಿ ಮಾಡಿದ ತಿಂಡಿ, ಅಡುವಿಚಾರ ಮಾತನಾಡುತ್ತಾ ಅವಳ ಬಳಿ ಕುಳಿತು ಅವಳ ಮನಸ್ಸನ್ನು ಬೇರೆಡೆಗೆ ತಿರುಗಿಸಲು ತೊಡಗಿದಳು. ಇದರಿಂದ ವತ್ಸಲೆ ದಿನದ ಒಂದು ಹೊತ್ತು ನೆನ್ನು ದಿಯನ್ನು ಕಾಣ ವಂತಾದಳು. ಆದರೆ ಸುಮತಿ ದಿನವೂ ಒಂದಲ್ಲ ಒಂದ ನೀತಿಯ ಕೊಂಕಿನ ನುಡಿಯನ್ನು ವತ್ಸಲೆಯು ತಾಯಿಯ ಬಾಯಿಯಿಂದ ಕೇಳಿತ್ತಲೇ ಇದ್ದಳು.

ಂ ಂ ಂ ಂ

ಸುಮತಿಯು ತನ್ನ ಅಣ್ಣ ದಿನೇಶನಿಗೆ ಪತ್ರ ಬರೆಯುವಾಗಲೆಲ್ಲಾ ವತ್ಸಲೆಯ ಕುರಿತು ಕಕ್ಷಿಕರಪ ಮಾತುಗಳನ್ನು ಅವಳಿಗರಿವಿಲ್ಲದೆಯೇ ಬರೆದು ಬಿಡುತಿದ್ದಳು. ಹಾಗೆಯೇ ದಿನೇಶನಿಂದ ವತ್ಸಲೆಗೆ ಸಮೂಧಾನದ ಮಾತುಗಳು ಪತ್ರದ ಮೂಲಕ ಬರುತ್ತಿದ್ದುವು.

ಹೀಗೆ ಆರು ತಿಂಗಳು ಕಳೆಯಿತು ಎನ್ನುವಾಗ ದಿನೇಶನು ತನ್ನ ವಂಶಸ್ಥನಲ್ಲೇ ನೊ ಪರಿವರ್ತನೆ ಮಾಡಿಕೊಂಡನು. ವತ್ಸಲೆಯು ಜಾತಕ ರಾಮಾಚಾರಿಯ ಕೈಯನ್ನು ಸೇರಿರಲ್ಲಿ. ನರದ್ರಾಯರೂ ಮಗಳ ಕುರಿತು ಹಲವು ಯೋಚನೆಗಳನ್ನೂ ಮಾಡಿದ್ದರೂ ಸುಗಮವಾದ ದಾರಿ ಹೊಳೆದಿರಲಿಲ್ಲ. ಆ ಚಿಂತೆಯಲ್ಲಿರುವಾಗಲೇ ದಿನೇಶನಿಂದ ರಾಮರಾಯರಿಗೆ ಒಂದು ಪತ್ರ ಬಂತು "ವತ್ಸಲೆಯನ್ನು ತನಗೆ ಕೊಡುವಂತೆ ವರದ್ರಾಯರನ್ನು ಒಪ್ಪಿಸುವ ಧಾರ ನಿಮ್ಮದು. ಇದಕ್ಕೇನಾ ನೀವು ಆಡ್ಡಿ ಬಂಲಂಬರಿಂದು ಆಶಿಸುತ್ತೇನೆ. ಅವ್ಯಾನನ್ನು ಒಪ್ಪಿಸಿ ವತ್ಸಲೆಯನ್ನು ಸೊಸೆಯಾಗಿ ಸ್ವೀಕರಿಸುವಂತೆ ಮಾಡುವ ಹೊಣೆಯೂ ನಿಮ್ಮದು ನಿಮ್ಮಿಬ್ಬರ ಆಶೀರ್ವಾದವೇ ನಮ್ಮಿಬ್ಬರ ಜೀವಕ್ಕೆ ಬೆಳಕು. ಏನೂ ತಿಳಿಯದ ಬಾರದಾಗಿ ಬೇಡುತ್ತೇನೆ" ಎಂದು ಮುಗಿಸಿದ್ದ ವತ್ಸಲೆಗೆ ಕೊಡುವಂತೆ ಒಂದು ಕಾಗದವನ್ನು ಅದರಲ್ಲಿಟ್ಟು ಬಿಟ್ಟಿದ್ದ.

ವತ್ಸಲೆಯು ಕಾಗದವನ್ನು ಬಿಡಿಸುವಾಗ ಕೈ ನಡುಗುತ್ತಿತ್ತು ಹೃದಯ ಹೆಚ್ಚಿದು ಕೂಳ್ಳುತ್ತಿತ್ತು ಕಣ್ಣು ಮಂಜಾಗಿ ಪತ್ರ ಬಿಡಿಸಿ ಓದಲೋ ಬೇಡವೋ ಎಂದು ಓಲಾಡಿ, ಓಲಾಡಿ, ಓದಿದ್ದಳು.

"ನನ್ನ ಮನೆ ತುಂಬಿ, ಮನೆ ತುಂಬುವ ಇಚ್ಛೆ ನಿನಗಿದ್ದರೆ ತಿಳಿಗು ಬೇರಾವ ಯೋಚನೆಗೂ ಎಡೆಯಿಲ್ಲ" ಎಂದಿತ್ತು.

ಓದಿ ಮುಗಿಸಿದ ವತ್ಸಲೆ 'ದಿನೇಶ' ಕಣ್ಣೀರು ಸುರಿಸುತ್ತಲೇ ಇದ್ದಳು.



ನವಯುಗಕ್ಕೆ

ಖಂಡಾತಾರರಾಗಿ ಪ್ರೋತ್ಸಾಹಿಸಿರಿ

ಚಾರ್ಷಿಕ ಚಂದಾ ರೂ. ೧೦

NAVAYUGA 9—11—1967
Registered with the Registrar of News Papers for India under No. R N 3546/'57

REGD. No. B G. 176
LICENCE No. 31
Licensed to Post without Prepayment

ವಿಚಾರ ವೀಚಿ

ಭಾರತದ ಐಕ್ಯತೆಯ ಒಳಮರ್ಮ

ಹಿಂದೀ ಮೂಲ: 'ದಿನಕರ'
ಅನುವಾದಕರು: ಶ್ರೀ ಮ. ಗೋ. ರಾವ್, ಮೂಲ್ಕಿ.

ಭಾರತವು ವಿಸ್ತೃತವಾದ ಭೂಭಾಗವಾಗಿದೆ. ಇಲ್ಲಿ ಅನೈಕ್ಯತೆಯ ಜೊತೆಗೆ ಐಕ್ಯತೆಯೂ ಕೆಲವೆಡೆ ಗೋಚರಿಸುತ್ತದೆ. ಮಹಾಭಾರತದ ಕಾಲದಿಂದಲೂ ಮತ್ತು ಚಂದ್ರ ಗುಪ್ತ, ಅಶೋಕ, ವಿಕ್ರಮಾದಿತ್ಯ, ಮೊಗಲರೆಲ್ಲ ಭರತ ಖಂಡವನ್ನು ಒಂದು ಶಾಸನದ ಅಧೀನಕ್ಕೆ ತರಲು ಪ್ರಯತ್ನ ಮಾಡಿದರು ಯೂರೋಪಿನ ರಾಜರುಗಳು ಭಾರತದಲ್ಲಿ ಏಕತೆಯನ್ನು ಸಾಧಿಸುವ ಸಫಲತೆಯನ್ನು ಪಡೆದರೋ ಅದೇ ಸಫಲತೆ ಅವರ ವಂಶಜರ ದೌರ್ಬಲ್ಯದಿಂದ ನಷ್ಟವಾಯಿತು. ಈ ಕಾರಣದಿಂದಾಗಿ ಕೃಷ್ಣಾ ನದಿಯ ಉತ್ತರ ಮತ್ತು ದಕ್ಷಿಣದ ಭಾಗಗಳು ಒಂದು ಶಾಸನದಿಂದ ರೂಪುಗೊಂಡವು.

ಈ ದೇಶದಲ್ಲಿ ಭೇದ ಭಾವಗಳು ಹುಟ್ಟಲು ಇಲ್ಲಿಯ ನದಿಗಳು ಮತ್ತು ಪರ್ವತಗಳು ಬಲವಾದ ಕಾರಣವಾಗಿರಬಹುದು. ಇವು ದೇಶದೊಳಗೆ ಬೇರೆ ಬೇರೆ ವಿಭಿನ್ನ ವಾತಾವರಣವುಳ್ಳ ಪ್ರದೇಶಗಳನ್ನು ನಿರ್ಮಿಸಿವೆ. ಮತ್ತು ಈ ಪ್ರದೇಶಗಳಲ್ಲಿ ವಾಸ ಮಾಡುವ ಜನರಲ್ಲಿ ಪ್ರಾಂತೀಯತೆಯ ಭಾವನೆಯು ಉತ್ಪನ್ನಗೊಳ್ಳುವುದು. ನಮ್ಮ ದೇಶ ಎಷ್ಟು ವಿಶಾಲ ಎಂದರೆ ಒಂದು ಕಡೆಯಿಂದ ಕಾಶ್ಮೀರದ ಹವಾಗುಣ ಮಧ್ಯ ವಿಶಿಯೂದ ಹವಾಗುಣವನ್ನೂ ಕಳಿಗನ ಕಥ್ಯಾಕುಮಾರಿಯ ವಾತಾವರಣವನ್ನೂ ಹೋಲುತ್ತದೆ. ಈ ಜಲವಾಯುವಿನ ಅನುಸಾರವಾಗಿ ಜನರ ಉಡುಗ ತೊಡುಗೆ, ಊಟೋಪಚಾರಗಳಲ್ಲಿ ಅಂತರ ಉಂಟಾಗುವುದು ಸ್ವಾಭಾವಿಕ. ಆದ್ದರಿಂದ ಈ ಎಲ್ಲಾ ವೈಕ್ಯಾಸಗಳನ್ನು ಒಂದುಗೂಡಿಸಿ ಏಕತೆಯನ್ನು ಸ್ಥಾಪಿಸುವುದು ಬಹಳ ಕಠಿಣತರವಾದ ವಿಷಯವಾಗಿದೆ.

ಪ್ರಚಲಿತ ದೇಶದಲ್ಲಿರುವ ವಿಭಿನ್ನ ಭಾಷೆಗಳು ಮತ್ತು ಜಾತಿಭೇದಗಳು ನಮ್ಮಲ್ಲಿ ಭೇದ ಭಾವಕ್ಕೆ, ಆಸೈಕ್ಯತೆಗೆ ಮುಖ್ಯ ಕಾರಣಗಳೆನಿಸಿವೆ. ಗುಜರಾಥದಿಂದ ಬಂಗಾಲದ ತನಕದ ಜನರ ನಡುವೆ ಒಳೈಯ ಸಂಪರ್ಕವಿದ್ದುದನ್ನು ನಾವು ಕಾಣಬಹುದು ಅಲ್ಲಿ ಭಾಷಾ ವೈಷಂಕ್ಯತೆ ಇಲ್ಲ.

ಇಂದಿನ ವೈಜ್ಞಾನಿಕ ಯುಗದಲ್ಲಿ ಪ್ರಾಕೃತಿಕ ತೊಂದರೆಗಳಲ್ಲದೆ ಭಾಷಾ ಸಂಬಂಧದ ತೊಡಕುಗಳೂ ಹಬ್ಬಿನೆ ಈಗ ಭಾರತದ ಎಲ್ಲಾ ಕಡೆಗಳಲ್ಲಿ (ಕೆಲವು ಪ್ರದೇಶಗಳನ್ನು ಹೊರತು) ಹಿಂದೀ ಭಾಷೆಯು ಹೆಚ್ಚಿನ ಪ್ರಚಾರ ನಡೆಯುತ್ತಿದೆ. ಕೆಲವೆಡೆ ಆದರ ಬಗ್ಗೆ ದ್ವೇಷಾಗ್ನಿ ಹೊರ ಬಿದ್ದು ಆ ಅಗ್ನಿಗೆ ಆತ್ಮಾಹುತಿ ಮಾಡಿಕೊಂಡ ನಿದರ್ಶನಗಳೂ ಬೇಕಷ್ಟಿವೆ.

ಭಾಷಾವ್ಯಾಮೋಹ ಎಲ್ಲರಿಗೂ ಇದ್ದದ್ದೇ ಅನ್ನಿ. ಆದರೂ ನಮ್ಮದು ಪ್ರಜಾಸ್ವಭುತ್ವ ಸರಕಾರ. ಸರಕಾರವೆಂದರೆ ಪ್ರಜೆಗಳು. ಪ್ರಜೆಗಳಿಂದ, ಪ್ರಜೆಗಳಿಗಾಗಿ ನಡೆಸಲ್ಪಡುವ ಸರಕಾರವೆಂದು ನಾವು ತಿಳಿದವರು, ನಾವೆಲ್ಲ ಸರಕಾರದ ಪ್ರತಿನಿಧಿಗಳು ಸರಕಾರ ಮಾಡಿದ ಅಧಿನಿಯಮಗಳನ್ನು ಭಾರತೀಯರಾದ ನಾವೇ ಉಲ್ಲಂಘಿಸಿದರೆ ಭಾವೈಕ್ಯತೆಯನ್ನು ಎಲ್ಲಿ ಸಾಧಿಸಿದಂತಾಗುವುದು? ಭಾರತದಲ್ಲಿರುವ ಎಲ್ಲಾ ಭಾಷೆಗಳೂ ರಾಷ್ಟ್ರ ಭಾಷೆಗಳಾಗುವುದು ಅಸಂಭವ. ಏಕೆಂದರೆ ಭಾರತವು ಒಂದೆ. ಇದಕ್ಕೆ ರಾಷ್ಟ್ರ ಭಾಷೆಯೂ ಒಂದೇ. ಅದು ಕನ್ನಡವೇ ಆಗಬೇಕು. ಹಿಂದಿಯೇ ಆಗಬೇಕು, ಇಂಗ್ಲಿಷ್ ಆದೀತು. ತಮಿಳೇಕಾಗಬಾರದೆ, ಎಂದು ಬೇರೆ ಬೇರೆ ಪ್ರಾಂತ್ಯಗಳಿಂದ ಬೇರೆ ಬೇರೆ ಸೂಚನೆಯ ಧ್ವನಿ ಕೇಳಿ ಬಂದರೂ ದೇಶದಲ್ಲಿರುವ ಜನರಲ್ಲಿ ಬಹು ಸಂಖ್ಯಾತರು ಆಡುವ ಮಾತೃಭಾಷೆಯನ್ನೇ ರಾಷ್ಟ್ರ ಭಾಷೆಯನ್ನಾಗಿ ಮಾಡುವುದು ಸಮಂಜಸವಾಗಿದೆ. ಪ್ರಜಾಪ್ರಭುತ್ವ ಪಡೆದ ಈ ದೇಶದಲ್ಲಿ ಮತಗಣನೆಯಿಂದಲೇ ಈ ಸಮಸ್ಯೆಯನ್ನು ಬಗೆಹರಿಸಿಸುವುದೊಳಿತು. ಬೇರಾವ ರೀತಿಯಲ್ಲಿ ಬಗೆ ಹರಿಸಿದರೂ ಭಾರತದ ಜನತೆ ಕೃತ್ರಿಮರಾಗಲಾರರು.

ಹಲವು ವಿದ್ವಾಂಸರು ರಾಮಾಯಣ ಮತ್ತು ಮಹಾಭಾರತದ ಆಧಾರದ ಮೇಲೆ ಹಲವಾರು ಪುಸ್ತಕಗಳನ್ನು ಬರೆದಿರುತ್ತಾರೆ. ಸಂಸ್ಕೃತ ಮತ್ತು ಪ್ರಾಕೃತ ಭಾಷೆಯು ಕೂಡಾ ಎಲ್ಲಾ ಭಾಷೆಗಳ ಮೇಲೆ ಪ್ರಭಾವವನ್ನು ಸಮಾನರೂಪದಲ್ಲಿ ಬೀರಿದೆ 'ವಿಚಾರದ ಐಕ್ಯತೆ' ಎಲ್ಲಕ್ಕಿಂತಲೂ ಮಹಾ ಐಕ್ಯತೆಯಾಗಿದೆ. ಪಾರ್ಸಿಲಿಪಿಯನ್ನು ಬಿಟ್ಟು ಬೇರೆ ಎಲ್ಲಾ ಭಾರತೀಯ ಲಿಪಿಗಳ ವರ್ಣಮಾಲೆಯಲ್ಲಿ ಹಿಂದಿಯಲ್ಲಿದ್ದಂತೆ ಕ, ಖ, ಗ, ಇತ್ಯಾದಿ ಅಕ್ಷರಗಳನ್ನು ನಾವು ಓದುಬಹುದು ಉತ್ತರ, ದಕ್ಷಿಣ ಎಲ್ಲೇ ಹೋಗಲಿ ಅಲ್ಲಿಯ ದೇವಾಲಯಗಳಲ್ಲಿ ಜನರು ಮಾಡುವ ಶುಭ ಕೆಲಸಗಳಲ್ಲಿ ಒಂದೇ ಸಭ್ಯತೆಯು ಚಿಹ್ನೆ ತೋರಿಬರುವುದು ಜೀವನದ ದೃಷ್ಟಿಕೋನ ಸಮಾನವೆಂದು ಪರಿಗಣಿಸಲ್ಪಡುವುದು.

ಸಾಂಸ್ಕೃತಿಕ ದೃಷ್ಟಿಯಿಂದ ನೋಡುವುದಾದರೆ ಮುಸಲ್ಮಾನನು ಕೂಡಾ ಹಿಂದು ಜನರ ಸಾಮಿಪ್ಯ ಸ್ಥಾನವನ್ನು ಪಡೆಯುತ್ತಾನೆ. ಹಲವು ವಿಚಾರಗಳಲ್ಲಿ ಎರಡೂ ಮತಗಳವಿಷಯಗಳೂ ಏಕರೂಪತೆಯನ್ನು ಹೊಂದುತ್ತವೆ ಮಾನವನ ಗುರಿ ಒಂದೇ. ದಾರಿ ಮಾತ್ರ ಎರಡು ಎಂದು ಎಲ್ಲಾ ಮತದವರೂ ತಿಳಿಯುತ್ತ ಬಂದಿದ್ದಾರೆ. ಇದೇ ಭಾವೈಕ್ಯತೆಗೆ ನಾಂದಿ ಎಡರು ತೊಡರುಗಳು ಕಡಿಮೆಯಾದಂತೆಲ್ಲ ಬಾಳು ನಿತ್ಯ ನೂತನವಾಗುವುದು. ಏಕತೆಯು ದೇಶದಲ್ಲಿ ನೆಲೆಗೊಳ್ಳುವುದು. ರಾಷ್ಟ್ರ ರೂಪದಲ್ಲಿ ತಲೆ ಎತ್ತಿದ ಹಲವಾರು ಸಮಸ್ಯೆಗಳಿಗೆ ಇದು ಶೋಭನ ಹಾಡಿದಂತಾಗುವುದು. ರಾಷ್ಟ್ರ ಪ್ರಗತಿಗೆ ಇದು ಕಾರಣವಾಗುವುದು—ಆಗ ನವ ಸನ್ಮಂಗಳವಾಗುವುದು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O. P. 33/67

1. ಶಾಂಭವಿ M. ಸೆಟ್ಟಿ,
2. ಸುರೇಶ M. ಸೆಟ್ಟಿ,
3. ಸುಶ್ಮಿತ M. ಸೆಟ್ಟಿ,
4. ಜ್ಯೋತಿ M ಸೆಟ್ಟಿ,
5. ಸತೀಶ M ಸೆಟ್ಟಿ,

} ಅರ್ಜಿದಾರರು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ,—

1ನೇ ಅರ್ಜಿದಾರರ ಗಂಡ 2000 ಡಿಸೆಂಬರ 6ನೇ ತಾರೀಖಿನಂದು ಹಾಲಿ ಮೃತಪಟ್ಟಿರುವ ಸದಾಶಿವ ಸೆಟ್ಟಿಯವರಿಗೆ ಬರತಕ್ಕ ಸಂಪತ್ತಿನ ಆರ್ಜಿಯಲ್ಲಿ ಕಾಣಿಸಿದ ಪದೇಜಂಗಳನ್ನು ವಸೂಲು ಮಾಡುವರೆ ಸಕ್ಸೆಸರ್ ಸರ್ಟಿಫಿಕೇಟು (Succession Certificate) ಕೊಡಿಸಿ ಬೇಕಾಗಿ ಅರ್ಜಿದಾರರು ಮಾಡಲು ಪೂಡಿದ ಸದ್ರಿ ಅರ್ಜಿಯು ದಿನಾಂಕ 20-11-67 ರೈ ನೋಟಿನ ಬಗ್ಗೆ ಇಟ್ಟಿದೆ ಆಕ್ಷೇಪ ಇದ್ದವರು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ವಂಠಿಗೆ ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಿ ಆಕ್ಷೇಪಣೆ ಸಲ್ಲಿಸುವುದು ಎಂತ ಕೋರ್ಟು ಹುಕುಂ ಕೊಟ್ಟಾಂ ತಿಳಿಸಿರುವೆ.

Shivaji Shetty Perody
Advocate for the Petitioners

Udipi, S. K. Dt 25—10—67



ಬೇಕಾಗಿದ್ದಾರೆ

ಪ್ರಿಂಟಿಂಗ್ ಪ್ರೆಸ್ಸಿನ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಲು ಸ್ಥಳೀಯ ಅನುಭವಸ್ಥ ಕೆಲಸಗಾರರು ಬೇಕಾಗಿದ್ದಾರೆ. ಸಂಬಳ ಯೋಗ್ಯತಾನುಸಾರ 8ನೇ ತರಗತಿವರೆಗೆ ಓದಿದ ಕೆಲವು ಸ್ಥಳೀಯ ಹುಡುಗರನ್ನು ಶಿಕ್ಷಣೇತರಗಿಯೂ ಸೇರಿಸಿಕೊಳ್ಳಲಾಗುವುದು

ವಿಚಾರಿಸಿರಿ:—

ನವಯುಗ ಪ್ರೆಸ್, ಉಡುಪಿ.

"NAVAYUGA Kannada Weekly is recommended for high Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26—4—1966.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

16—11—1967

೨೦
ಪೈಸೆ

ಆ ಕಥೆ

ಬರೆದವರು: ಶ್ರೀ ಸ. ನಾರಾಯಣ

ಅಂದು ಗೆಳೆಯರೆಲ್ಲರೂ ಕಾಲೇಜು ಹಾಸ್ಟಲಿನ ಕೋಣೆಯಲ್ಲಿ ಕುಳಿತಿದ್ದೆವು.

ನಾಲ್ವರು ಗೆಳೆಯರು ಸೇರಿದಾಗ ಇನ್ನೇನಿದೆ?—ಹರಟೆ. ನವ್ಯ ಮೂತು ನಿನಿಮಾ ನಟ ನಟಿಯರ ಜಾವ-ಭಾವ ಅಭಿನಯಗಳಿಂದ ಆರಂಭವಾಗಿ ಇತ್ತೀಚೆಗೆ ಪ್ರಕಟವಾಗುತ್ತಿರುವ ಕಥೆಗಳನ್ನು ಮುಟ್ಟಿತು. ನವ್ಯ ಕಥೆಗಳ ಶೈಲಿ, ಕಥಾವಸ್ತು, ನಿರೂಪಣೆಯ ಬಗೆಗೂ ಸಾಕಷ್ಟು ಟೀಕೆ, ವಿಮರ್ಶೆ ನಡೆಯಿತು.

"ಏನು ನವ್ಯ ಕಥೆಗಳೋ ಏನೋ! ಎಲ್ಲರೂ ಚಿಕ್ಕ ಕಥೆಗಳ ಲೇಖಕರೇ" ಎಂದ ರಂಗ

ಚಿಕ್ಕ ಕಥೆ ಬರೆಯುವುದಕ್ಕೆ ಮೆದುಳಿಗೆ ಹೆಚ್ಚು ಶ್ರಮ ಕೊಡಬೇಕಾಗಿಲ್ಲವಲ್ಲ? ಯಾವುದಾದರೊಂದು ಚಿಕ್ಕ ಪ್ರೇಮದ ಘಟನೆ ತೆಗೆದುಕೊಂಡರೆ ಸಾಕು, ಚಿಕ್ಕ ಕಥೆ ಮುಗಿದಂತೆ"—ಎಂದೆ.

'ಈಗ ಪ್ರೇಮ ಪ್ರಕರಣದ ಚಿಕ್ಕ ಕಥೆಗಳ ಶ್ರದ್ಧಾವ ಕಡಿಮೆಯಾಯಿತು, ಎಲ್ಲರೂ ದೆವ್ವಭೂತಗಳ ಕಥೆ ಬರೆಯಲಾರಂಭಿಸಿದ್ದಾರೆ. ಇದೊಂದು ನೂತನ ಸಂಪ್ರದಾಯ" ಎಂದ ಶಂಕರ.

"ಮೊದಲು ಕಥೆಗಾರರಿಗೆ ಪ್ರೇಮದ ಹುಚ್ಚು ಹಿಡಿದಿದ್ದಂತೆ ಈಗ ದೆವ್ವಗಳ ಹುಚ್ಚು ಹಿಡಿದಿದೆ" ಎಂದು ವ್ಯಂಗ್ಯವಾಗಿ ನಕ್ಕ ಚಂದ್ರು.

"ಕಥೆಗಳಲ್ಲಿ ಹೊಸ ಶೈಲಿ, ಸಂಪ್ರದಾಯ, ನಿರೂಪಣ ವೈವಿಧ್ಯತೆ ಬೇಡವೆಂದಲ್ಲ ಅಚ್ಚುಕಟ್ಟಾಗಿರಲಿ, ಹೊಸ ಕಾಲಕ್ಕೆ ಹೊಂದಿಕೊಳ್ಳುವಂತಿರಲಿ. ಚಂದ್ರು ಹೇಳಿದಂತೆ ಹೊಸ ಬರಹಗಾರರಿಗೆ ಪ್ರೇಮದ ಜೊತೆಗೆ ಇನ್ನಿತರ ವಿಷಯಗಳ ಹುಚ್ಚು ಹತ್ತಿಸಿ" ಎಂದ ರಂಗಾ.

"ಲೋಕೋ ಭಿನ್ನ ರುಚಿಃ ಕೇಳಿಲ್ಲವೆ? ಒಂದೊಂದು ದೆವ್ವದ ಕಥೆ ಬರೆದರು, ಚೆನ್ನಾಗಿಸ್ತು. ಓದುಗರು, ವಿಮರ್ಶಕರ ಮೆಚ್ಚುಗೆ ಪಡೆಯಿತು. ಸರಿ, ಎಲ್ಲ ಹೊಸ ಬರಹಗಾರರೂ ಅದೇ ಜಾಡು ಹಿಡಿದರು" ಎಂದ ಚಂದ್ರು.

ದೆವ್ವ, ಭೂತ, ಮಾಯ, ಮಂತ್ರ—ಶಂಖ್ರಗಳನ್ನಿ ನಂಬಿತೆ. ವಿಶ್ವಾಸವಿಲ್ಲದ ಕಾನು ನೆನಗೆ ಈ ಕಥೆಗಳಲ್ಲಿ ಸ್ವಲ್ಪವೂ ಸಂಬಂಧ ಇಲ್ಲ- ಎಲ್ಲ ಮೂರ್ಖರ ಸಂತೆ ಎಂದೆ.

'ನಾನೇ ದೆವ್ವದ ಕಥೆ ಬರೆಯಲು ಸಿದ್ಧ ಎಂದ ಶಂಕರ ಆತ್ಮ ವಿಶ್ವಾಸದಿಂದ

"ಸಾಕು ಮಹರಾಯ...ನೀನು ದೆವ್ವದ ಕಥೆ ಬರೆಯ ಬೇಡ. ನಾನುಗಳಾಯ್ತು. ಓದುಗರಾಯ್ತು. ಯಾವ ಸಾಹಸವನ್ನೂ ಮಾಡಿಲ್ಲ' ಎಂದ ರಂಗ.

"ಅವನು ದೆವ್ವದ ಕಥೆ ಬರೆದರೆ ಮನುಷ್ಯರಂತೂ ಓದಲು ಸಾಧ್ಯವಿಲ್ಲ.ದೆವ್ವಗಳೇ ಓದಬೇಕು" ಎಂದ ಚಂದ್ರು.

ಆ ವರೆವಿಗೂ ಪ್ರಕಟವಾಗಿದ್ದ ಅನೇಕ ದೆವ್ವದ ಕಥೆಗಳನ್ನು ಓದಿದ್ದೆ. ಕೆಲವು ಯೋಗ್ಯವಾಗಿದ್ದವು. ಕೆಲವು ಇ ಬ್ಬವದ ಕಥೆಗಳೆ? ಎಂದು ಪ್ರಶ್ನಿಸುವಂತಾಗುತ್ತಿತ್ತು. ದೈವ ಭೂತಗಳನ್ನು ನಾವು ಕಂಡಿರಲಿಲ್ಲ. ಪರಿಚಿತರ— ಅಪರಿಚಿತರ ಬಾಯಿಂದ ದೈವ ಭೂತಗಳ ಅದ್ಭುತ ಕಥೆಗಳನ್ನು ಕೇಳಿದ್ದೆ. ದೈವವನ್ನು ಕಾಣುವ ಆಸೆ ನನಗೂ ಇತ್ತು. ಆದರೆ ದೈವವೇ ನನ್ನನ್ನು ಕಾಣಲು ಅಂಜುತ್ತಿತ್ತು ಎಂದು ತೋರುತ್ತದೆ!

ದೆವ್ವ ಭೂತಗಳ ಕಥೆ ಕಲ್ಪನೆ- ಭ್ರಾಂತಿ ಎನ್ನುವವರಲ್ಲಿ ನಾನೊಬ್ಬ.

— ೨ —

ದಸರೆ ರಜೆ ಆರಂಭವಾಯಿತು. ಗೆಳೆಯರೆಲ್ಲರೂ ಒಟ್ಟಾಗಿ ಹೊರಡುವುದೆಂದು ನಿರ್ಧರಿಸಿದೆವು. ಎಲ್ಲರ ಒಮ್ಮತದಂತೆ ಒಂದೇ ದಿನ ಎಲ್ಲರೂ ರೈಲು ಹತ್ತಿದೆವು.

ನಾನು ಹಿಂದಿನ ಬಾರಿ ಊರಿಗೆ ಹೋದಾಗಲೇ ಅಮ್ಮ ತಿಳಿಸಿದ್ದಳು, "ಗೋಪಿ ದಸರಾ ರಜೆಗೆ ನೀನು ಇಲ್ಲಿಗೆ ಬಂದರೂ ಸಂತೋಷ, ಬಾರದಿದ್ದರೂ ಸಂತೋಷ, ತಪ್ಪದೆ ನೀನು ದೊಡ್ಡಮ್ಮನ ಊರಿಗೆಹೋಗು, ಅಕ್ಕನಿಗೆ ಕಳುಹಿಸುತ್ತೇನೆ ಎಂದು ಹೇಳಿ ಬಂದಿದ್ದೇನೆ.ಅನುಕೂಲವಾದರೆ ಇಲ್ಲಿಗೆ ಬಂದು ಹೋಗು. ಇಲ್ಲವಾದರೆ ರಜೆ ಮುಗಿದೊಡನೆಯೇ ನೇರವಾಗಿ ಮೈಸೂರಿಗೆ ಹೋಗು' ಎಂದು ತಿಳಿಸಿದ್ದರು. ಆಗಲಿ ಎಂದು ಒಪ್ಪಿಕೊಂಡಿದ್ದೆ.

ಮೈಸೂರು ಬಿಡುವ ಮುಂಜೆ ಅಮ್ಮ ಬರೆದ ಪತ್ರ ಕೈ ಸೇರಿತ್ತು.

"ಗೋಪಿ, ನಾನು ಹೇಳಿದ ಸಂಗತಿಯನ್ನು ನೀನು ಮರೆತಿರಲಾರೆ. ಅಕ್ಕನಿಗೆ ಗೋಪಿ ರಜಕ್ಕೆ ನಿಮ್ಮಲ್ಲಿಗೆ ಬರುತ್ತಾನೆ ಎಂದು ಪತ್ರ ಬರೆದಿದ್ದೇನೆ. ನೀನು ತಪ್ಪದೆ ಹೊನ್ನೂರಿಗೆ ಹೋಗು"ಎಂಬ ಅಮ್ಮನ ಪತ್ರದಲ್ಲಿ ಮತ್ತೆ ತಿಳಿಸಿದ್ದರು.

ಅಮ್ಮ ಮತ್ತು ದೊಡ್ಡಮ್ಮ (ತಾಯಿಯ ಅಕ್ಕ)ನ ಅಪೇಕ್ಷೆಯನ್ನು ನಾನು ಉಪೇಕ್ಷಿಸುವಂತಿರಲಿಲ್ಲ. ಅಮ್ಮನಿಗೆ ತನ್ನ ಅಕ್ಕನ ಮಕ್ಕಳೆಂದರೆ ವಿಶೇಷ ಅಭಿಮಾನ. ದೊಡ್ಡಮ್ಮನಿಗೆ ಮಕ್ಕಳಿರಲಿಲ್ಲ. ತಂಗಿಯ ಮಕ್ಕಳೇ ತನ್ನ ಮಕ್ಕಳು ಎಂದು ತಿಳಿದಿದ್ದರು. ದೊಡ್ಡಮ್ಮ. ಅವರಿಗೆ ಹಣದ್ದೊಂದಿಗೆ ದೊಡ್ಡ ಗುಣವೂ ಇತ್ತು. ಅವರ ಅಂತಃಕರಣ ಅಭಿಮಾನಗಳನ್ನು, ಪ್ರೀತಿಯುವಂತಿದಲ್ಲಿ ಕಾಲೇಜಿನಲ್ಲಿ ಓದುತ್ತಿದ್ದ ನಾನು ನನ್ನ ದೊಡ್ಡಮ್ಮನ ದೃಷ್ಟಿಯಲ್ಲಿ 'ಕಂದ' ನಾಗಿದ್ದೆ.

ದೊಡ್ಡಮ್ಮನಿಗೆ ನಾನು ಬರುವ ಸಂಗತಿಯನ್ನೂ ಪತ್ರದ ಮೂಲಕ ತಿಳಿಸಿದ. ಹೊನ್ನೂರು ತಲುಪಿದೆ. ದೊಡ್ಡಮ್ಮ,ದೊಡ್ಡಪ್ಪ ಆನಂದದಿಂದ ಸ್ವಾಗತಿಸಿದರು.

"ಬಸ್ಸೀಯೋ ಇಲ್ಲೋ ಅಂತ ಅನುಮಾನವಾಗಿತ್ತು ಕಣೋ ಗೋಪಿ' ಎಂದರು ದೊಡ್ಡಮ್ಮ.

"ನಾನು ಹಿಂದೆ ಊರಿಗೆ ಹೊರಡಾಗ ಅಮ್ಮ ಹೇಳಿದಳು, ಮೂನ್ನೆ ಕಾಗದವನ್ನು ಬರೆದಿದ್ದಳು. ನಾನು ಬರ್ತೇನೆ ಅಂತ ಕಾಗದ ಬರದಿದ್ದನಲ್ಲ ದೊಡ್ಡಮ್ಮ".

"ನೀನು ಈಗ ಚಿಕ್ಕವನಲ್ಲ ಕಣಪ್ಪ. ಕಾಲೇಜಿನಲ್ಲಿ ಓದುವವನು. ಇದೇನು ದೊಡ್ಡಮ್ಮನ ಕಾಟ ಅಂದುಕೊಂಡು ಇಲ್ಲಿಗೆ ಬರದೆ ಊರಿಗೆ ಹೋಗಿ ಬಿಡ್ತೀಯೋ ಅಂತಿದ್ದೆ"

"ಬಂದಿದ್ದೇನೆಲ್ಲ ದೊಡ್ಡಮ್ಮ".

"ಲಕ್ಷ್ಮಿಗೂ ಕಾಗದ ಬರೆದಿದ್ದೆ,ನೀನೂ ಇಲ್ಲಿಗೆ ಬಾ ಅಂತ. ಅವಳು ಆಗೋಲ್ಲ ಅಂತ ಉತ್ತರ ಬರೆದಳು. ಸದ್ಯ ನೀನಾದರೂ ಬಂದೆಯಲ್ಲಾ"

'ಎಂದಾದರೂ ನಾನು ಬರೋದಿಲ್ಲ ಅಂದಿದ್ದೆನೆ? ಇಲ್ಲಿ ಕಾಲೇಜು ಇದ್ದಿದ್ದರೆ ಇಲ್ಲೇ ಇದ್ದು ಬಿಡುತ್ತಿದ್ದೆ.

"ಈಗೇನಾಯ್ತು ಒಂದು ಕಾಲೇಜು ಆರಂಭಿಸಿದರಾಯ್ತು ಅಷ್ಟೇ ತಾನೆ?" ಎಂದರು ದೊಡ್ಡಪ್ಪ.

"ಫಮ್ಮೂಸು ಏನಾದರೂ ಹಳ್ಳಿ, ಇಲ್ಲಿ ಹೊಟೇಲು, ಸಿನಿಮಾ, ನಾಟಕ, ಪಾರ್ಕು ಯಾವುದೂ ಇಲ್ಲವಲ್ಲಪ್ಪ" ಎಂದರು ದೊಡ್ಡಮ್ಮ.

"ಏನೇನೂ ಇಲ್ಲ ನಿಜ. ನೀನು ದೊಡ್ಡಪ್ಪ ಇದ್ದೀರೆಲ್ಲ ನನಗೆ ಸಾಕು' ಎಂದೆ.

ಅಷ್ಟನ್ನಾದರೂ ತಿಳಿದು ಕೊಂಡಿದ್ದೀಯಲ್ಲ ಬಿಡು' ಎಂದು ಸಂತೋಷದಿಂದ ನುಡಿದರು ದೊಡ್ಡಪ್ಪ.

ಹೊನ್ನೂರು ನಾಗರಿಕ ಪಟ್ಟಣವೂ ಅಲ್ಲ. ಕುಗ್ರಾಮವೂ ಅಲ್ಲ. ಹೆಚ್ಚು ಅನುಕೂಲಗಳು ಇರಲಿಲ್ಲ. ಅನುಕೂಲಗಳು ಇಲ್ಲದೆಯೂ ಇರಲಿಲ್ಲ. ಹಳ್ಳಿಯಲ್ಲಿವ್ರಾಥಮಿಕ ಶಾಲೆ, ಪೂರ್ಣಮಿಕ ಶಾಲೆ, ಲೋಕಲ್ ಫಂಡ್ ಆಸ್ಪತ್ರೆ ಗ್ರಾಮ ಪಂಚಾಯತಿ ವಾಚನಾಲಯ, ವಿದ್ಯುತ್ ದೀಪ ಇದ್ದವು. ಕೆಲವರ ಮನೆಗಳಲ್ಲಿ ವಿದ್ಯುದ್ದೀಪ ರೇಡಿಯೋ ಇದ್ದವು. ಅಂತಹ ಮನೆಗಳಲ್ಲಿನಮ್ಮ ದೊಡ್ಡಮ್ಮನ ಮನೆಯೂ ಒಂದು.

ನಮ್ಮ ದೊಡ್ಡಮ್ಮ ಅನ್ನಪೂರ್ಣಮ್ಮ ಮತ್ತು ದೊಡ್ಡಪ್ಪ ರಂಗಕೃಷ್ಣಯ್ಯ ಇವರದು ಅನುಕೂಲ ದಾಂಪತ್ಯ. ಇಬ್ಬರ ಗುಣ, ಸ್ವಭಾವ, ಮನೋಭಾವ ಒಂದೇ ಆಗಿದ್ದವು. ಇಬ್ಬರದೂ ಉದಾರ ಹಸ್ತ, ಅವರ ಜೀವನದಲ್ಲ, ವ್ಯವಹಾರಗಳಲ್ಲಿ ಶಿಸ್ತು, ಶ್ರೀಮಂತಿಕೆ ಸ್ಥಿರವಾಗಿದ್ದುವು.

ನಮ್ಮ ದೊಡ್ಡಪ್ಪರಂಗಕೃಷ್ಣಯ್ಯನವರು ಹೊನ್ನೂರಿನಲ್ಲಿ ಸುಪ್ರಸಿದ್ಧ ಜವಾನುದಾರರು. ಬಡವ ಬಂಧು, ಅವರ ಮಾತಿಗೆ ಆ ಊರಿನಲ್ಲಿ ಗೌರವವಿತ್ತು. ಅವರು ಆ ಗೌರವವನ್ನು ಉಳಿಸಿಕೊಂಡಿದ್ದರು.

ಎರಡುದಿನ ದೊಡ್ಡಪ್ಪನೊಂಗಿಗೆ ಅವರ ತೋಟ, ಗದ್ದೆ, ಹೂಲಗಳನ್ನೆಲ್ಲ ಸುತ್ತಿ ಬಂದೆ. ಅನಾವೃಷ್ಟಿಯು ಸಂಭವಾನು ಬಡವರ ಸಮಸ್ಯೆ, ಇತ್ತೀಚೆಗೆ ವ್ಯವಸಾಯದ ಮೂಲಾಧಾರ, ರೈತರ ಕಷ್ಟ-ನಷ್ಟಗಳನ್ನೆಲ್ಲ ವಿವರಿಸಿದರು. ನಾನೇನು ಹೇಳಲಿ? ಎಲ್ಲದಕ್ಕೂ 'ಹುಂ'ಗುಟ್ಟಿದೆ. ಜೊತೆಗೆ ತಂದಿದ್ದ ಕಾದಂಬರಿ ಸಂಚಿಕೆ, ಪತ್ರಿಕೆಗಳನ್ನು ಓದಿದೆ. ರೇಡಿಯೋ ಕೇಳಿದೆ. ನಾಲ್ಕೈದು ದಿನಗಳ ವೇಗೆಗೆ ಬೇಕರವಾಯ್ತು.

ದೊಡ್ಡಪ್ಪ ತೋಟಗಳ ನುಲ್ವಿಚಾರಣೆಗೆ ಹೋಗಿ ಬಿಡುತ್ತಿದ್ದರು ದೊಡ್ಡಮ್ಮ ನುಳಿಯಲ್ಲಿಯ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು. ಮನಸ್ಸಿಲ್ಲಿ ಬೇರೆ ಯಾರೂ ಇರಲಿಲ್ಲ. ಕೀಲಂ, ಪಗಡೆ ಆಡಿದೆವಾಯ್ತು. ತಾಲ ಹೋಗಲೊಪ್ಪಿದಾ.

"ಜೊತೆಗೆ ಯಾರೂ ಇಲ್ಲ. ಬೇಸರವಾಯ್ತೇನು, ಗೋಪಿ?"

"ಕೆಲಸವಿಲ್ಲ...ಎಷ್ಟು ಓದಿದರೂ.....ಎಷ್ಟು ಸಾರಿ ರೇಡಿಯೋ ಕೇಳಿದರೂ ಅಲನೇ ಓಡುವುದಿಲ್ಲ ದೊಡ್ಡಮ್ಮ"

"ಪಾಪು ಕಣೋ, ಬೇರೆ ಊರಿನಿಂದ ಬಂದರೆ ಈ ಹಳ್ಳೀಲಿ ಬೇಜಾರಾಗೋದು ಸ್ವಾಭಾವಿಕ"

'ನೀನು ಒಬ್ಬಳೇ ಇರ್ತೀಯಲ್ಲ, ಬೇಜಾರಾಗೊಲ್ವೆ ದೊಡ್ಡಮ್ಮ?'

"ಮನೆ ಕೆಲಸದಲ್ಲಿ ಸಾಕಷ್ಟು ಕಾಲ ಕಳೆದು ಹೋಗುತ್ತದೆ. ಉಳಿದ ಕಾಲದಲ್ಲಿ ಶ್ರೀನಿವಾಸ ಕಲ್ಯಾಣ, ಜೈಮಿನಿ ಭಾರತ, ಗದುಗಿನ ಭಾರತ, ರಾಮಾಯಣ ಓದೋದು"

'ರೇಡಿಯೋ ಸಂಗೀತ, ಹರಿಕಥೆ, ಭಾಷಣ ಕೇಳೋಲ್ವೇನು?'

'ನಮ್ಮ ದೊಡ್ಡಪ್ಪ ಸಂಜೆ ಮನೆಗೆ ಬಂದ ಕೂಡಲೇ ಒಂದು ಘಂಟೆ ಭಾಷಣ ಮಾಡುತ್ತಾರೆ.'

"ನನಗಂತೂ ನಾಲ್ಕೈದು ದಿನಗಳಿಗೆ ಸಾಕಾಯಿತು"

"ಜಮೀನು ಮನೆ ಇರೋರು, ಹಾಗೆ ಅನ್ನುವುದಕ್ಕೆ ಆಗುತ್ತದೆಯೇನೋ ಗೋಪಿ! ಮುಂದಿನ ಸಾರಿ ರಜೆಗೆ ಬರಬೇಕಾದರೆ ಯಾರಾದರೂ ಸ್ನೇಹಿತರನ್ನೂ ಕರೆದು ಕೊಂಡು ಬಾ. ನಿನಗೆ ಸ್ನೇಹಿತರ ದಂಡೇ ಇದೆ'

'ಬರೀ ಮೂತಿನ ಮಲ್ಲರು ದೊಡ್ಡಮ್ಮ'

'ಹಾಗಾದರೆ ಲಕ್ಷ್ಮಿಗೆ ಹೇಳುತ್ತೇನೆ ಹೆಣ್ಣು ನೋಡಿ ಮದುವೆ ಮಾಡು ಅಂತ. ಮುಂದಿನ ಬಾರಿ ನೀನು ನಿನ್ನ ರಾಧೆಯೊಂದಿಗೇ ಬಾ ಗೋಪಿ'

'ನೀನ್ಹೇಗಲ್ಲ ತಮಾಷೆ ಮಾಡಿದರೆ ನಾನು ಬರೋದಿಲ್ಲ"

"ಆಗ ನಾನು ಕರೆದರೆ ಯಾಕೆ ಬರ್ತೀಯ? ನಿನ್ನ ರಾಧೆ ಕಿವಿ ಹಿಡಿದು ಎಳೆದು ಕೊಂಡು ಬರುತ್ತಾಳೆ" ಎಂದರು ದೊಡ್ಡಮ್ಮ.

ನಾನು ಕಿವಿ ಕೇಳಿಸದವನಂತೆ ರೇಡಿಯೋ ಧ್ವನಿಯನ್ನೂ ಎಕ್ಸರಿಸಿ ಕೇಳುತ್ತಾ ಕುಳಿತೆ. ದೊಡ್ಡಮ್ಮ ನಗುತ್ತಾ ಒಳಕ್ಕೆ ಹೋದರು.

— ೩ —

ಹೊನ್ನೂರಿನ ಕೆರೆಯೂ ಬಹುದೊಡ್ಡದು. ಕೆರೆಯ ಹಿಂಭಾಗದಲ್ಲಿ ತೆಂಗು, ಬಾಳೆ, ಅಡಿಕೆ ತೋಟಗಳು ಸಮೃದ್ಧಿಯಾಗಿದ್ದವು. ಕೆರೆಯ ಎಡಭಾಗದಲ್ಲಿ ಹೊನ್ನೂರು ಗ್ರಾಮವಿತ್ತು. ಹೊನ್ನೂರು ಗ್ರಾಮ ಮಲೆನಾಡಿನ ಅಂಚಿನಲ್ಲಿ ಇದ್ದುದರಿಂದ ಬೆಟ್ಟ ಗುಡ್ಡಗಳಿಂದ, ಮರಗಿಡಗಳಿಂದ ಆವರಿಸಲ್ಪಟ್ಟಿತ್ತು. ಪ್ರಕೃತಿದೇವಿ ಉಟ್ಟ ಹಸಿರು ಸೀರೆಯಂತೆ ಆ ಪ್ರದೇಶವೆಲ್ಲ ಆಂದವಾಗಿ ಕಂಗೊಳಿಸುತ್ತಿತ್ತು.

ಹೊನ್ನೂರು ಕೆರೆಯ ಎರಿಯ ಮೇಲೆ ನಡೆದುಕೊಂಡು ಹೋಗಿ ಮತ್ತೊಂದು ಕುದಿಯಿಂದ ಸುಮಾರು ಒಂದೂವರೆ ಮೈಲು ದೂರ ನಡೆದು ಹೋದರೆ ವಿಶಾಲ ಬಯಲು ಸಿಗುತ್ತಿತ್ತು. ಆ ಬಯಲಿನ ಮಧ್ಯೆ ಒಂದು ಭವ್ಯ ದೇವಾಲಯವಿತ್ತು. ಅದು ಹೊಯಸಳರ ಕಾಲದ ದೇವಾಲಯ. ದೇವರಿಲ್ಲದ ದೇಗುಲ, ಆದು,'ಅದು ಲಕ್ಷ್ಮೀ ವರಸಿಂಹ ಸ್ವಾಮಿಯ ಸ್ಥಳವಾಲಯ—ಈ ಪ್ರದೇಶವೆಲ್ಲ ಹೊಯ್ಸಳ ಅರಸರಿಗೆ ಸೇರಿತ್ತು. ಈ ವಿಶಾಲವಾದ ಬಯಲೆಲ್ಲ ಒಂದು ನಗರದ ವಾಸು ಪ್ರದೇಶ, ಇದಕ್ಕೆ ಬಲ್ಲಾಳ ದುರ್ಗ ಎನ್ನುವ ಹೆಸರಿತ್ತಂತೆ, ಈಗ

(ಹನ್ನೊಂದನೇ ಪುಟ ನೋಡಿರಿ)

ನಮ್ಮ ನಾಡು

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೧೧	೧೬—೧೧—೧೯೬೭	No. 11

ಮಹತ್ವದ ಸಮ್ಮೇಳನ

ರಾಜ್ಯಪಾಲರ ಸಮ್ಮೇಳನ ಎಂದಿನಂತೆ ಇಂದ್ಯೂನಡೆಯಿತು. ಒಡಿಸ್ಸಾವೊಂದನ್ನುಳಿದು ಉಳಿದೆಲ್ಲರಾಜ್ಯಗಳರಾಜ್ಯಪಾಲರೂ ಲೆಫ್ಟಿನೆಂಟ್ ಗವರ್ನರ್‌ರೂ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ನಾಲ್ಕನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಭಾರತೀಯ ರಾಜಕೀಯ ಪಕ್ಷ ಬಹುರಂಗಿಯೂಗಿ ರೂಪಾಣಗೊಂಡ ನಂತರ, ಇಂತಹ ಸಮ್ಮೇಳನ ಏರ್ಪಟ್ಟಿರುವುದು ಇದೇ ಮೊದಲ ಬಾರಿ. ರಾಜಸ್ಥಾನದಲ್ಲಿ ಸುಖಾದಿಯಾರಿಗೆ ಮಂತ್ರಿ ಮಂಡಳ ರಚಿಸಲು ಅವಕಾಶ ಮಾಡಿಕೊಟ್ಟ ದಿನದಿಂದಲೇ 'ರಾಜ್ಯಪಾಲ' ಹುದ್ದೆಯ ಮಹತ್ವ ಬೆಳೆಯುತ್ತ ಬಂದಿದೆ. ಉತ್ತರಪ್ರದೇಶ, ಉತ್ತರಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ ಹರಿಯಾಣಾಗಳ ದೋಲಾಯಮಾನ ಸ್ಥಿತಿ ತೀವ್ರ ಕಳವಳದಾಯಕವಾಗಿದೆ. ಕೇರಳದಲ್ಲಿ ಸಂವಿಧಾನ ವಿರೋಧಿ ಭಾವನೆ ಮತ್ತು ನ್ಯಾಯೊಂಗದ ಪಾವಿತ್ರ-ಪ್ರತ್ಯೇಕತೆಯ ನಡುವೆ ತಲ ಹಾಕುವ ಹವ್ಯಾಸ ರಾಜ್ಯ ಕಾರಣಿಗಳಲ್ಲಿದೆ. ಪಂಜಾಬಿನ ದಾರಿ ಒಂದಾದರೆ ಒಡಿಸ್ಸಾ-ಮದ್ರಾಸಿಗಳದು ಬೇರೆಯೇ ದಾರಿ.ಕೇಂದ್ರ ಶಾಸಿತ ಪ್ರದೇಶಗಳಲ್ಲಿ ಮಣಿಪುರವನ್ನು ಅನಿವಾರ್ಯವಾಗಿ ರಾಷ್ಟ್ರಪತಿಗಳ ಆಳಿಕೆಗೆ ತಂದೀಕಾಯಿತು. ಪಾಂಡಿಚೇರಿಯ ರಾಜ್ಯತೀಯಮತ್ತೆ ಎಂದಾದರೂ ತಲೆಯೆತ್ತಬಹುದು. ಬೇರೆ ಬೇರೆ ತಪ್ಪು ದಾರಿಯಲ್ಲಿ ನಡೆದು ಒಂದು ಎನಿಸೀಯುವ ಹಲವು ರಾಜಕೀಯ ಪಕ್ಷಗಳು ಸಮ್ಮಿಳಿತ ಸರಕಾರ ರಚಿಸಿದುದರಿಂದ-ಅದೂ ಅಕ್ಷಲ್ಪ ಬಹುಮತದಿಂದ ಈ ಪರಿಸ್ಥಿತಿ ತಲೆಯೆತ್ತಿದೆ. ಎಂತಲೇ ರಾಜ್ಯಪಾಲರ ಪೊಣೆ ಇಂದು ಹೆಚ್ಚಿದೆ.

ರಾಜ್ಯಪಾಲರಿಗೆ ಕೇಂದ್ರ ಸರಕಾರವು ಯಾವುದೇ ಮಾರ್ಗದರ್ಶನ ನೀಡಲು ಸಂವಿಧಾನದಲ್ಲಿ ಅವಕಾಶವಿಲ್ಲ. ರಾಜ್ಯ ಕೇಂದ್ರ ಸರಕಾರದ ಕರ್ತವ್ಯಗಳೇನೆಂಬುದನ್ನು ಸಂವಿಧಾನವು ಸ್ಪಷ್ಟವಾಗಿ ನಿರೂಪಿಸಿದೆ. ಅದರಂತೆ ಸರಿಯಾಗಿ ನಡೆದುಕೊಂಡರೆ ರಾಜ್ಯ—ಕೇಂದ್ರಗಳ ಘರ್ಷಣೆ ತಿಕ್ಕಾಟ ಕಂಡಿತಕ್ಕೂ ಬರುವುದಿಲ್ಲ. ಇಂದು ಕೆಲವೆಡೆ ತುಸು ತಿಕ್ಕಾಟ ತೋರಬರುವುದಕ್ಕೆ ಕರ್ತವ್ಯ ಲೋಪ, ತಮ್ಮ ಅಸಮರ್ಥತೆಯನ್ನು ಮರೆ ಮಾಚಲು ಕೇಂದ್ರವನ್ನು ಬೊಟ್ಟುಮಾಡುವ ಚಟ ಮತ್ತು ಹೇಗಾದರೂ ಅಧಿಕಾರಕ್ಕೆ ಅಂಟಿಕೊಂಡಿರ ಬೇಕೆಂಬ ಮೋಹ ಮುಖ್ಯತ ಹರಗಳೇ ಕಾರಣ. ಇಂದು ಹಲವು ರಾಜ್ಯಗಳಲ್ಲಿ ಸ್ಥಾಪಿತವಾದ ಸಂಯುಕ್ತ ಸರಕಾರಗಳು ಯಾವಗಳಿಗೆಯಲ್ಲೂ ಉರುಳ ಬಹುದು. ಬೆಳಗಿನಿಂದ ಸಂಜೆಯ ತನಕ ಮೂರಾರು ಬಗೆಯ ಪರಿಸ್ಥಿತಿ ಪರಿಯೂಣದಲ್ಲಿ ಉದ್ಭವವಾಗುತ್ತಿರುವುದನ್ನು ಮರೆಯುವುದು ಸಾಧ್ಯವಿಲ್ಲ. ಪಶ್ಚಿಮ ಬಂಗಾಲ ಸರಕಾರವು ಸಾವಿರಿಂದ ಬದುಕಿತ್ತು ಈಗ ಮತ್ತೆ ಮರಣಾಂತಿಕಕ್ಕೆ ಬಂದಿದೆ. ಉತ್ತರ ಪ್ರದೇಶದ ೪೦೦ ಮಂದಿಯಿರುವ ಕಾಂಗ್ರೆಸ್ ಸಂಪುಟದ ವಿಶಾಲ ತಳಹದಿ ನೀತಿಯನ್ನು ಯಾವಾಗ ಲೂ ಟೀಕಿಸುತ್ತಿದ್ದ ಜನಸಂಘದ ಮಹಾನಾಯಕರು ಇಂದು ಸಂಯುಕ್ತ ಸರಕಾರ ಸಚಿವರ ಸಂಖ್ಯಾಧಿಕತೆಯ ಮೇಲೆ ಯೂ ಕಾರಾಸ್ತ್ರವನ್ನೂ ಬಿಡುತ್ತಿಲ್ಲ. ಪಶ್ಚಿಮ ಬಂಗಾಲದಲ್ಲಿ ಇತ್ತೀಚೆಗೆ ವಿಧಾನ ಸಭೆ ಕರೆಯುವ ಸಂಬಂಧದಲ್ಲಿ ಮುಖ್ಯಮಂತ್ರಿ ರಾಜ್ಯಪಾಲರ ಘರ್ಷಣೆ ಚರಮ ನುಕೆಯೆದ್ದಿದನ್ನೂ ನಾವು ಮರೆಯಬಾರದು.

ರಾಜ್ಯಪಾಲರ ಹೊಣೆಗಾರಿಕೆಯೆಂದು ಹೆಚ್ಚಿದೆಯೆಂಬುದು ಕಂಡಿತ. ರಾಜ್ಯಪಾಲರ ಸಮ್ಮೇಳನದಲ್ಲಿ ಶಮ್ಮ ಹೊಣೆಗಾರಿಕೆಯನ್ನು ವಿವೇಚನೆಯಿಂದ ಅನಿರ್ಬಂಧವಾಗಿ ಪ್ರಯೋಗಿಸ ಬೇಕೆಂದು ಒಮ್ಮತದ ಅಭಿಪ್ರಾಯಕ್ಕೆ ಬರಲಾಯಿತು. ವಿಧಾನ ಸಭೆಯನ್ನು ಕರೆಯುವುದು ಬಿಡುವುದು ಮುಖ್ಯಮಂತ್ರಿಯ ಸಲಹೆಯನ್ನು ಹೂಡಿಕೊಂಡಿದ್ದರೂ, ಕರೆಯುವ ತಾರೀಕು ಸ್ಥಳಗಳನ್ನು ಗೊತ್ತು ಪಡಿಸುವುದು ರಾಜ್ಯಪಾಲರಿಗೆ ಸೇರ ಬೇಕೆಂದು ಕೆಲವರು ಅಭಿಪ್ರಾಯ ಪಟ್ಟರು. ವಿಧಾನ ಸಭೆಯನ್ನು ವಿಸರ್ಜಿಸುವ ಬಗ್ಗೆ ಮುಖ್ಯ ಮಂತ್ರಿಯ ಸಲಹೆಯನ್ನು ಒಪ್ಪಬೇಕೆಂದೂ ಆದರೆ, ಒಪ್ಪುವುದಕ್ಕೆ ನೊವದಲು ಇತರರು ಸರಕಾರ ರಚಿಸುವ ಸಾಧ್ಯಾಸಾಧ್ಯತೆಗಳನ್ನು ಪರ್ಯಾಲೋಚಿಸ ಬೇಕೆಂದೂ ಅಭಿಪ್ರಾಯ ಬಂತು. ನಮ್ಮ ಸಂವಿಧಾನದಲ್ಲಿ ರಾಜ್ಯಪಾಲರ ಕರ್ತವ್ಯಗಳ ಬಗ್ಗೆ ಘರ್ಷಣೆವಾದ ಉಲ್ಲೇಖವಿಲ್ಲವಾದುದರಿಂದ ರಾಜ್ಯಪಾಲರು ಹಿಂದೆ ಮುಂದೆ ನೋಡ ಬೇಕಾಗಿದೆ. ಆಂದರೆ, ರಾಜ್ಯ ಸರಕಾರದಲ್ಲಿ ಸರಿಯಾಗಿ ನ್ಯಾಯೋಚಿತವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವ ಕೆಲಸ ಅವರದ್ದು.

ಹೇಗೆ ನೋಡಿಕೊಳ್ಳ ಬೇಕೆಂಬ ವಿವರಣೆಯಿಲ್ಲವಾದುದರಿಂದ ಸ್ವಯಂ ಪ್ರಜ್ಞೆಯಿಂದ ಎಂಬುದು ಸರ್ವಶ್ರುತ. ಈ ದೃಷ್ಟಿಯಲ್ಲಿ ಇದೀಗ ನಡೆದ ರಾಜ್ಯಪಾಲರ ಸಮ್ಮೇಳನ ಮಹತ್ವಪೂರ್ಣ.

ನಾಯಕ ಆಯೋಗ ಬೇಕೆ?

'ಮುಂಬಯಿಯಲ್ಲಿ ಇಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಮಹಾಜನ ಆಯೋಗದ ನೇಮಕದ ಬಗ್ಗೆ ವಿಧಾರ ಕೈಕೊಂಡಾಗ ಸಂಬಂಧಪಟ್ಟವರು ಆದರ ಶಿಫಾರಸುಗಳನ್ನು ಅಂಗೀಕರಿಸ ಬೇಕೆಂಬ ತಿಳುವಳಿಕೆಗೆ ಬರಲಾಗಿತ್ತು. ಈ ಅಂಶವನ್ನು ಮಹಾರಾಷ್ಟ್ರದ ಕಾಯಕರೂ ಒಪ್ಪಿದುಂಟು'— ಇದು ಕಾಂಗ್ರೆಸ್ ಅಧ್ಯಕ್ಷ ಕಾಮರಾಜರ ಪ್ರತಿಕ್ರಿಯೆ. ಶ್ರೀ ನಾಯಕರೇ ಮಹಾಜನ ವರದಿಯನ್ನು ನಿರಾಕರಿಸಿ, ಗಡಿವಿವಾದವನ್ನು ತ್ವರಿತ ಗತಿಯಲ್ಲಿ ಬಗೆಹರಿಸ ಬೇಕೆಂದು ಕೇಂದ್ರವನ್ನು ಕೇಳಿಕೊಳ್ಳುವ ಗೊತ್ತುವಳಿಯನ್ನು ವಿಧಾನ ಸಭೆಯಲ್ಲಿ ಮಂಡಿಸಿದರು. ಕೇಗೆ ಬಗೆಹರಿಸ ಬೇಕು? ಶ್ರೀ ನಾಯಕರ ನೇತೃತ್ವದಲ್ಲೇ ಏಕ ಸದಸ್ಯ ಆಯೋಗ ರಚಿಸೋಣವೆ?

ದಯಮಾಡಿ ನಿಮ್ಮ ಬಾಕಿ ಚಂದಾಹಣವನ್ನು ಕಳಿಸಿ ಕೊಡಿರಿ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 384/1963 S. E. P. 120/1967

ಅರ್ಜದಾರ—ಕೃಷ್ಣಯ್ಯ ಸೆಟ್ಟಿ

ಎದ್ರಿರು—ನಂದೈಸ್ಪ ಸೆಟ್ಟಿ ಸಾಕಿನಕೊಡಾ ಕುಂದಾಪುರ ತಾಲ್ಲೂ ಕೆದೆಮನು ಗ್ರಾಮದಲ್ಲಿರುವ ನಂದೈಸ್ಪ ಸೆಟ್ಟಿ ಮಕ್ಕಳು ಸುಶೀಲಯಣ ಭವಾನಿಸೆಟ್ಟಿ ಬಾಬ್ಯಿಯಣೆ ಭವಾನಿಸೆಟ್ಟಿ ಕಡ್ಡಿಯಣೆ ವನಜ ಸೆಟ್ಟಿ ಕೂಡಾ ತಿಳಿಸುವುದೇನೆಂದರೆ—

ಸದ್ರಿ ಗೃಹಪರಿಷೆಯಲ್ಲಿ ತಿಳಿಸಿದ ವಿಧಿ ಸ್ಕಾರ ಎದ್ರಿಂದ ಅರಜಕ್ಕೆ ಪಣ ಬಾವಂಡೆರೂ ಳ್ಳವರ ಅರ್ಜದಾರನು ಎದ್ರಿರ ಮೇಲೆ ದಾಖ್ಲು ಮಾಡಿದ ಅ ಮಲ್ಲಂರಿಯು ತಾ. ೫—11—67ಕ್ಕೆ ತನ್ನಿಗೆ ಇರುತ್ತದೆ. ಆಳುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ಮುಂತ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪಿಸಿಲಿ ತಪಿಸಿ ಕೊಳ್ಳತಕ್ಕದ್ದು ಎಂದು ಸಾಗ್ತಿ ಈ ಸುಳ್ಳು ತಿಳಿಯಪಡಿಸುವುದೇನೆಂದರೆ.

N. S. Parameshwariah
Advocate for Petr.
Date, 6—11—67 Coondapoor



ಸುಬ್ರಹ್ಮಣ್ಯ ಜಾತ್ರೆ

ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ತಾಲ್ಲೂ ಸುಬ್ರಹ್ಮಣ್ಯ ಗ್ರಾಮದಲ್ಲಿರುವ ಮಹತೋಭಾರ ಕುಕ್ಕೇ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಪೂರ್ವಶಿಷ್ಟ ಸಂಪ್ರದಾಯ ಪ್ರಕಾರ ಇದೇ ಸ್ಥಳಂಗ ಸಂವತ್ಸರದ ಕಾರ್ತಿಕ ಬಹುಳ ಪಾಡ್ಯಮಿ ಬುಧವಾರ ತಾ. 29—11—67ರಿಂದ ಉತ್ಸವವು ಪ್ರಾರಂಭವಾಗಿ ತಾ. 1—12—67ರಲ್ಲಿ ಲಕ್ಷ ದೀಪೋತ್ಸವ, ತಾ. 5—12—67ರಲ್ಲಿ ಹೂವಿನ ತೇರು ಉತ್ಸವ, ತಾ. 6—12—67ರಲ್ಲಿ ಪಂಚಮಿ ಧರ್ಮೋತ್ಸವ, ತಾ. 7—12—67ರಲ್ಲಿ ಚಂಪಾ ಷಷ್ಠಿ ಮಹಾರಥೋತ್ಸವ ತಾ. 8—12—67ರಲ್ಲಿ ಅವಭೃತೋತ್ಸವದೊಂದಿಗೆ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

ಸರ್ವರೂ ಬಂದು ಗಂಧ ಪ್ರಸಾದಾದಿಗಳನ್ನು ಸ್ವೀಕರಿಸಿ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗುವಂತೆ ಅಪೇಕ್ಷಿಸುತ್ತೇವೆ.

ಆಡಳಿತ ಕಮಿಟಿ

ಪರಿಚಯ

ಇಡ್ಯ ಶ್ರೀ ಮಹಾಲಿಂಗೇಶ್ವರ ದೇವಾಲಯ

ಬರೆದವರು:— ಶ್ರೀ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು

"ಶ್ರೀ ವಿದ್ಯಾಧರ ಯೋಗಿನಾರ್ಚಿತ ತನುಃ ಯಃ ಚಂದ್ರಚೂಡಃ ಪುರಾ"

[ಸುರತ್ಕಲ್—ಇಡ್ಯ ಗ್ರಾಮಗಳು ಅಳ್ಳ ಕಕ್ಕದವು. ಇವರಡು ಕಡೆಗಳಲ್ಲೂ ಸಾಕಷ್ಟು ಅಭಿವೃದ್ಧಿಯಾಗಿದೆ. ಪ್ರಸ್ತುತ ಇಡ್ಯ ಗ್ರಾಮದ ಮಹತ್ವ ಇಡ್ಯ ದೇವಳದ ವಿಚಾರ ತುಸ ಸಂಕಲಿಸಿ ಬರೆಯಲಾಗಿದೆ]

ಪ್ರಾಚೀನತೆಯ ಬಗೆ: ಕನ್ನಡದ ಎಡೆಗಳಲ್ಲಿ ದ. ಕ. ಜಿಲ್ಲೆ (ತೆಂಕನಾಡು) ವ್ಯಾಪ್ತಿಯಿಂದಿಂದಲೂ ಪ್ರಸಿದ್ಧವಾಗಿದೆ. ನೇತ್ರಾವತಿ, ಕುಮಾರಧಾರಾ, ಗಂಗಾವಳಿ ಇತ್ಯಾದಿ ಹೊಳೆಗಳು; ಮಂಗಳೂರು, ಕದರಿ, ಉಡುಪಿ ಇತ್ಯಾದಿಶ್ಥಳಗಳು ಚಾರಿತ್ರಿಕ ಹಾಗೂ ಪೌರಾಣಿಕಗಳಿಂದಿ ಹೆಸರುಗೊಂಡಿವೆ. ಇನೆಲ್ಲೆಡೆಯು ಹಲವಾರು ವೈಶಿಷ್ಟ್ಯಗಳೇ ಈ ತರದ ಪ್ರಚರತೆಗೆ ಮೂಲ ಕಾರಣವಾಗಿವೆ. ಆ ವೈಶಿಷ್ಟ್ಯಗಳಿಗೆ ಆವೊಂದು ಹಿನ್ನೆಲೆಯಿರಬೇಳು. ಅಂತಹ ಹಿನ್ನೆಲೆಯೇ ನೆಂದು ತಿಳಿಯಲು ಲಿಖಿತಾಧಾರಗಳಾಗಳಾಗಲೀ, ಬಾಯ್ದೆರಿಯಾದ ಹೇಳಿಕೆಗಳಾದಲೀ ಆಧಾರಗಳಾಗಿವೆ. ಇಂದು ನಾಡಿನ ಹಲವೆಡೆಯ ಸುಪ್ರಸಿದ್ಧತೆಯ ಕಾರಣ ವಿಚಾರಗಳನ್ನು ತಿಳಿಯು ಹೊಂಟರೆ ಸಾಕು, ಅದೇನಾದರೂ—ಒಂದೆರಡಾದರೂ ಲಿಖಿತಗಳು ದೊರೆಯುವುವೆಂದರೆ ಬಲು ತೊಂದರೆಯಾಗಿದೆ. ಅಂತಹ ಉಲ್ಲೇಖಗಳೂ ಹೇಳಿಕೆಗಳಿಗೆ ಬೆಂಬಲವಾಗಿರುವಂತೆ ದೊರಕುವುವೆಂದರೆ ಬಲು ವಿರಳವಾಗಿವೆ. ಹಲವೆಡೆಯಲ್ಲಿ—ಹಿಂದಿನವರು—ಈ ಬಗೆಗೆ ಆಸ್ಥೆಂದು ಆಸ್ಥೆ—ಮುತುವರ್ಜಿ ವಹಿಸಿಲ್ಲದಿರಬಹುದು; ಅದರೆಂದಿಗೆ ಇಂದಿನ ನವ ಜನಾಂಗವೂ—ತದ್ವಿದ್ಯಾಭ್ಯಾಸ ಪ್ರಣಾಲಿಯಿಂ—ಅಂತಹವುಗಳತ್ತ ಗಮನ—ಅವಧಾನವಿರಿಸುವುದಿಲ್ಲ.

ಇಂತಹ ವಿಚಿತ್ರ—ವಿಷಾದ ಸ್ಥಿತಿಯಲ್ಲೂ ಕೆಲವೆಡೆಯು ಮಂದಿಯೂದರೂ—ಕೆಲವರು ವೃದ್ಧರಾದರೂ, ತಪ್ಪಾಗಿದ್ದರೂ—ತಡವರಿಸಿದ್ದರೂ—ಸವಳಲಾಗಿದ್ದರೂ ತಂತಮ್ಮ ಅನುಭವಾವ್ಯತಕರಣಗಳನ್ನು ಕೇಳಿದವರಿಗೆ ಜೆಂದವಾಗಿ ಬಣ್ಣಿಸುತ್ತಾರೆ. ಇವುಗಳ ಸರಿ—ಜೊಳ್ಳುಗಳ ವಿಚಾರ, ಹೊಂದಾಣಿಕೆಯ ಬಗೆಗಳೆಲ್ಲಾ ಸಂಕಲಕಾರನ ತಿಳಿವು — ಹೊಣೆಗಾರಿಕೆಗಳನ್ನು ಹೊಂದಿಕೊಂಡಿವೆ. ಆದರೂ ಅಂತಹ ಕೆಲವು ಊಹಾನಾತ್ಮಕ ಆಧಾರಗಳನ್ನೂ, ಹೇಳಿಕೆಗಳನ್ನೂ ಪರಿಶೀಲಿಸಿದಲ್ಲಿ ಅದರತ್ಥ ಆವೊಂದಾದರೂ ನಳು ಬೆಳಕು ಹರಿಯಬಲ್ಲುದೆಂದು ಹೇಳಲಡ್ಡಿಯಿಲ್ಲ. ಇದರಲ್ಲಿ ಅಡಾವ ಅತ್ಯುತ್ಸಾಹವಾಗಲೀ ಉಪೇಕ್ಷೆಯಾಗಲೀ, ಪೂರ್ವಗ್ರಹವಾಗಲೀ ಇರಬಾರದು. ಲೇಖಕಕ್ಷೂ ವಾಚಕನೂ ಭಾವುಕನಾಗಿರುವಂತೆಯೇ ಪ್ರಾಮಾಣಿಕನಾಗಿಯೂ ಪ್ರವರ್ತಿಸಬೇಕಾಗಿದೆಯೆಂಬುದು ನೊತ್ತೊದಲಾಗಿ ನಿವೇದಿಸುವುದು ಸೂಕ್ತ!

ಇಡ್ಯ ಗ್ರಾಮ: "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ"ವು ಈ ಜಿಲ್ಲೆಯ ಚಾರಿತ್ರಿಕ ಪೌರಾಣಿಕಾದಿ ವಿಷಯಾಂಶಗಳನ್ನು ಒಳಗೊಂಡ ಗ್ರಂಥ. ಶ್ರೀ ಗಣಪತಿರಾವ್ ಐಗಳ್", ಅವರು ತಮ್ಮ ನೊದಗಿದ ವಿಚಾರಕಣಗಳನ್ನು ಇಲ್ಲಿ ಸಂಚಯಿಸಿದ್ದಾರೆ. (ಈ ಗ್ರಂಥದಲ್ಲಿ ಕಲವಡೆ ತುಸ ತಿದ್ದುಪಡಿ ಮಾಡಿಹರೆ, ಇದನ್ನು ಪುನಃ ಮುದ್ರಿಸಿದರೆ, ಮಾಚಕರಿಗೆ-ಜಿಜ್ಞಾಸುಗಳಿಗೆ ತುಂಬ ಅನುಕೂಲವಾದೀತಂದು; ಈ ಬಗೆಗೆ ತಕ್ಕಂತೆ ಮುಂದಾಳುಗಳು ಸಾಗಬೇಕಾಗಿಯೂ ವಿಧಿವ್ಯುತೆಯಿಂದ ಸೂಚಿಸಬಯಸುತ್ತೇನೆ). ಪ್ರಸ್ತುತ ಇದರಿಂದ ಕೆಲವು ಸೂತು ಎತ್ತಿ ಬರೆಯಲಾಗಿದೆ.

"ವಿದ್ಯುದ್ಯುಪ್ತ ಪಾಂಡ್ಯನು, ಭೂತಾಳ ಪಾಂಡ್ಯ ಚರಿತ್ರೆಯ ಪ್ರಕಾರ ಕ್ರಿ. ಶ. 148ರಲ್ಲಿ ಪಟ್ಟಕ್ಕೆ ಬಂದು ಮೂವತ್ತಂತೆ (ಭೂತಾಳ ಪಾಂಡ್ಯವಂತೆ) ಧರ್ಮದಿಂದ ರಾಜ್ಯವಾಳಿದನು. ಇವನು ಹನ್ನೆರಡು ಮಂದಿ ಕನ್ನಡಿಯರನ್ನು ಮದುವೆಯಾದನು. ಆಳಿಯ ಸಂತಾನ ಕಟ್ಟಿನ ಪ್ರಕಾರ ಕೆಂಗತಿಯ ಮಕ್ಕಳಿಗೆ ಯಾವ ತರದ ಹಕ್ಕೂ ಇಲ್ಲದ್ದರಿಂದ ಅವನ ಹೆನ್ನೆರಡು ಮಂದಿ ರಾಣಿಯರ ಹನ್ನೆರಡು ಮಂದಿ ಮಕ್ಕಳಿಗೆ ಅವನು ತನ್ನ ರಾಜ್ಯದಲ್ಲಿ ಹನ್ನೆರಡು ಮೂಗಣಿಗಳನ್ನು ಬಿಟ್ಟು, ಕೊಟ್ಟು, ಅವರನ್ನೂ ಹನ್ನೆರಡು ಮಂದಿ ಬಲ್ಲಾಳರಾಗಿ ಮೂಡಿದನು' ಆ ಹನ್ನೆರಡು ಮಂದಿ ಬಲ್ಲಾಳರಲ್ಲಿ ಇಡ್ಯದ ಸಮೀಪ ಕುತ್ತೆಕ್ಕೂರಿನಲ್ಲಿರುವ ಮದೂರು ಪೈ ಹೆಗ್ಗಡೆಯೊಬ್ಬನು!

"ಮೂನಾಡು ಮದೂರು ಪೈ ಹೆಗ್ಗಡೆಯ ವಂಶದವರು ಕುತ್ತೆಕ್ಕೂರು, ಸುರತ್ಕಲ್ಲು ಮತ್ತು ಎಕ್ಕಾರು ಎಂಬ ಮೂರು ನಾಡುಗಳನ್ನು ಆಳಿಕೊಂಡಿದ್ದರು" ಮೂನಾಡು ಮೂಗಣಿಯಲ್ಲಿ ಇಡ್ಯವೂ ಒಂದು ಗ್ರಾಮವಾಗಿದೆ. ಈ ಹೆಗ್ಗಡೆಯ ವಂಶದವರ ಬೀಡು ಕುತ್ತೆಕ್ಕೂರಿನಲ್ಲಿತ್ತು. ಭೂತಾಳ ಪಾಂಡ್ಯನ ಕಟ್ಟಿನಲ್ಲಿ ಈ ಮನೆತನದ ಕೈ ಕೆನ್ನರಿ ಅರಸು ಎಂಬ ಹೆಸರಿದೆ.

ಇಡ್ಯ ದೇವಾಲಯ: ಇಡ್ಯವೆಂದರೇನು, ಇಡ್ಯದ ದೇವಾಲಯ ಬಗೆಗೆ ಪ್ರಾಚೀನ ವಿಚಾರದ ಹಿನ್ನೆಲೆಯೇನಿರಬೇಕೆಂದು ತುಸ ಪರಿಚಯಿಸಬೇಕು. ಇಲ್ಲಿಯ ದೇವರನ್ನು-ಲಿಂಗಾಕಾರದ ಶಿಲಾಮಯನಾದ ಶ್ರೀ ಮಹಾಲಿಂಗೇಶ್ವರನನ್ನು—ಪ್ರಾಚೀನದಲ್ಲಿ 'ವಿದ್ಯಾಧರ' ನೆಂಬ ಮುನಿಯೊಬ್ಬನು ಪೂಜಿಯುತ್ತಿದ್ದನೆಂದು ಹೇಳುತ್ತಾರೆ. ಈ ದೇವನನ್ನು ಕುರಿತು ಹೇಳುವ ಹಾಡುಗಳಲ್ಲಿಯೂ ಈ ಮಾತಿಗೆ ಪುಷ್ಟಿಯಿದೆ: "ಮುನಿವ ವಿದ್ಯಾಧರ ಸುಪೂಜ್ಯನೆ; "ಮಂಗಳ ನಿದ್ಯಾಧರನುತಗೆ" ಎಂದು ಅರತಿ ಹಾಗೂ ಮಂಗಲ ಗೀತೆಗಳಲ್ಲಿವೆ. ಈ ಮಾತಿಗೆ ಆಧಾರವಾದರೂ ಆಧಾರವಿದ ಎಡೆ—ಹಿನ್ನೆಲೆಯಿದೆಯೋ ಎಂದು ಸಂಶೋಧಿಸತಕ್ಕದ್ದಾಗಿದೆ. ಕ. ಜಿಲ್ಲೆಯಲ್ಲಿ ಶ್ರೀ ಆಗದ್ಗುರು ಆದ್ಯ ಶಂಕರಾಚಾರ್ಯರು ಮತ್ತು ಅವರ ಶಿಷ್ಯರು ವೈಷ್ಣವ, ಶೈವ ಮೊದಲಾದ ಪಂಥಾತ್ಮಕತೆಗಳನ್ನು ಪ್ರಚುರಿಸಿದ್ದರು. ತತ್ಪೂರ್ವತಃ ಎಲ್ಲೆಡೆಯಂತೆ— ಇಲ್ಲಿಯೂ—ಜೈನ, ಬೌದ್ಧ, ನಾಥ ಪಂಥದವರೂ ಅಲ್ಪಾಲ್ಪ ಸಂಖ್ಯೆಯಲ್ಲಾದರೂ ಹರಡಿದ್ದರೆಂದು ತಿಳಿಯುವುದು ಸಾಧುವಾಗಿದೆ. ಅಂತೆ, ಈ ಜಿಲ್ಲೆಯಲ್ಲಿ ಕಾಳಾ ಮುಖ ಪಂಥದವರೂ— ಕೆಲವರಾದರೂ ಅಲ್ಲಲ್ಲಿದ್ದಿರಬಹುದು. ಏಕೆಂದರೆ, ಹತ್ತನೆಯ ಶತಕದಲ್ಲಿ ಬರೆದ ಕನ್ನಡದ ಬೇರಿಡೆಯ ಶಾಸನದಲ್ಲಿ ಕಾ ಳಾ ಮು ಖ ಗು ರು ವಾ ದ ವಿದ್ಯೇಶ್ವರನ ಹೆಸರಿದೆ. ಹನ್ನೆರಡನೆಯ ಶತಕದ ಇನ್ನೊಂದು ಶಾಸನದಲ್ಲಿ ವಿದ್ಯಾರಾಶಿ ಪಂಡಿತನ ಹೆಸರಿದೆ (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ಡಾ. ಚಿದಾನಂದ ಮೂರ್ತಿ) ಅಂತೆ, ಇಡ್ಯದ ಜಗೆ ಗೆಕತೆ ಹೇಳುವಲ್ಲಿ ವಿದ್ಯಾಧರನೆಂದು ಹೆಸರಿಸುವುದು ತೀರಾ ಅಪ್ರಾಮಾಣಿಕವಾದ ಲಾರದು. ಏನೆಂದರೆ, 'ಕೋಟೇಶ್ವರನೆಂದೂ ದೇವರ ಹೆಸರು ಕನ್ನಡದಲ್ಲಿ ಬೇರೆಡೆ ಇದೆ. ಯೆಡೆಯ, ಇಡೆಯ-ಇಡ್ಯ"ವೆಂದು ಕಾ (ಆದೇ ಪುಸ್ತಕ ನೋಡಿ). ಈ ಜಿಲ್ಲೆಯಲ್ಲೂ 'ಕೋಟೇಶ್ವರ'ವು ಸುಪ್ರಸಿದ್ಧವಿದೆ. (ಕುಂದಾಪುರ ತಾಲೂಕಿನ ಕೋಟೇಶ್ವರ ಈ ಜಿಲ್ಲೆಯ ಸಪ್ತಕ್ಷೇತ್ರಗಳಲ್ಲೊಂದಾಗಿದೆ. ಈ ಬಗೆಗೆ ಇನ್ನೊಮ್ಮೆ ಬರೆಯಬಹುದಾಗಿದೆ).

ವಿದ್ಯಾಧರ ಮುನಿಯು ಇದ್ದ ಎಡೆ-ಎಡೆಯೇ "ಯೆಡೆಯೆ"ವೆಂದು ಶಾಸನದಲ್ಲಿ ಹೇಳಿರಬಹುದು 'ಇಡೆ- ಎಡೆ- ಎಡೆಯು-ಕಾಲಾಂತರದಲ್ಲಿ ಈ ನುಡಿ ರೂಪಾಂತರಿತವಾಗಿರಬಹುದು (ಎಡೆಹಳ್ಳಿಯು ಬೇರೆಡೆ ಇದೇ ಆದೇ ಪುಸ್ತಕ ನೋಡಿ) 'ಇಡೆಯು ದಿ—ಎಡೆಹೊಳೆ (ಸರಿಂದಂತರ—ಮಧ್ವವಿಜಯದಲ್ಲಿ ನೋಡಿ) ಎಂಬಂದು ಈ ಜಿಲ್ಲೆಯಲ್ಲಾಗಿದೆ. "ಇ. 1389ರಲ್ಲಿ ಬರೆದ ಈ ಜಿಲ್ಲೆಯ ಶಾಸನದಲ್ಲಿ ಚಿತ್ರಾಪುರದಿಂದ ಬಡಗಣ ಭಾಗದಲ್ಲಿ ಯಿಡೆಯು(ಯೆಡೆಯು) ವೆಂಬ ಕ್ಷೇತ್ರದ ಹೆಸರಿದೆ. ಯಿಡೆಯವು ಈಗಿನ ಇಡ್ಯ ಆಗಿರಬೇಕು." "ಈ ದೇವಾಲಯದ ಶಿಲ್ಪದ ರಚನೆ 10—12ನೆಯ ಶತಕಕ್ಕಿಂತ ಈಚಿನದಲ್ಲ ವೆಂದು ಶ್ರೀ ಪಿ. ಗುರುರಾಜ ಭಟ್ಟರು ಹೇಳಿದುದು ಇಲ್ಲಿ ಸ್ಮರಣೀಯ! ಇಲ್ಲಿ ಇರುವ ಸವೆದ ಶಿಲಾಶಾಸನವು 10—12ನೆಯ ಶತಕದ್ದಾಗಿರಬಹುದು!

ಹಿಂದಿನ ಕಾಲದಲ್ಲಿ ಇಲ್ಲಿ ಸುಸ್ಥಿತಿಯಲ್ಲಿ ಕಾಡುಗಳಿದ್ದುವು. ಈಗಿನಂತೆ ರಸ್ತೆಗಳಿದ್ದಿಲ್ಲ! ಅದರೆ, ಇ. 1389ರಲ್ಲಿ ಬರೆದ ಶಿಲಾಶಾಸನದಲ್ಲಿ ಉಲ್ಲೇಖಿಸಿದಂತೆ ಒಳದಾರಿಯೊಂದು [ಬತ್ತೇರಿಯಿಂದ ಹೊರಟು ಚಿ

(ಮುಂಭತ್ತನೇ ಪುಟ ನೋಡಿರಿ)

ಕುಂದಾಪುರ ಮ.ನ್ಸಿಫ್ ಕೋರ್ಟಿನಲ್ಲಿ

O. S. 141/1967

ವಾದಿ— T. M. ರಾಮಚಂದ್ರ ಹತ್ವಾರ ಪ್ರತಿವಾದಿ—ವೆಂಕಟ್ರಮಣ ಹತ್ವಾರ ಕೂಡಾ.

ಕುಂದಾಪುರ ತಾಲ್ಲೂ ತೆಕ್ಕಟ್ಟೆ ಗ್ರಾಮದ ವೆಂಕಟ್ರಮಣ ಹತ್ವಾರ ಮಿಕ್ಕಿಳು ಹಾಲಿ ಬೆಂಗಳೂರು ಸಿಟಿ ಬನಶಂಕರಿ ನಾಗಚಂದ್ರ ಕೋಡಿನಲ್ಲಿರುವವರು T. V. ರಾಮಕೃಷ್ಣ ಹತ್ವಾರ್ ಟಿ. ವಿ. ಸುಬ್ಬಣ್ಣ ಹತ್ವಾರ್ ಟಿ. ವಿ. ಶ್ರೀನಿವಾಸ ಹತ್ವಾರ್ T. V. ಜನಾರ್ಧನ ಹತ್ವಾರ್ ಟಿ. ವಿ. ಗುರುರಾಜ ಹತ್ವಾರ ಕೂಡಾ ಜನರಿಗೆ ಈ ಮೂಲಕ ತಿಳಿಯು ಪಡಿಸುವುದೇನೆಂದರೆ.

ವಾದಿ ಪ್ರತಿವಾದಿರ ಕುಟುಂಬದ ಹಕ್ಕಿನ ಸ್ತ್ರೀ ಧನ ಸೊತ್ತುಗಳ ಹಿಸೆ ನಗೈರೆ ಫಿನ್ಸ್ಟಿ ಬರಮಾಡಿ ಕೊಳ್ಳುವರೆ ವಾದಿಯು ಪ್ರತಿವಾದಿರ ನೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 30—11—67ಕ್ಕೆ ತನ್ನಿಗೆ ಇರುತ್ತದೆ. ಆ ದಿವಸ ಏನಾದರೂ ಆಕ್ಷೇಪಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪಿಸಲು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿದೆ.

N. S. Parameshwariah
Advocate for Plff.

Date 7—11—67, Coondapoor

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 85 ಶಾಖೆಗಳಿಂದ ಹೆಚ್ಚಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಶಾ

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

In the Court of the Munsiff
Udipi

S. C. No. 255/67

A. N. Subba Rao — Plaintiff

vs.

Venkamma Shedthi — Defendant

The abovenamed defendant Venkamma Shedthi, wife of Babu Shetty, residing at Adjil of Aroor village, Udipi Taluk is hereby informed that the suit filed by the Plaintiff against her is posted to 24—11—67 for her appearance. She is directed to appear in Court on that day at 11 A. M. either in person or by Pleader to answer the claim made in the suit. Failing which the suit will be decided in her absence.

K. L. Aithal,
Vakil for Plff.
5—11—67

ಪರಿಚಯ

ಬಿಹಾರಿನ ಪುಸ್ತಕ ಭಂಡಾರ

ಅನು: ಶ್ರೀ. ಕೆ. ನಾರಾಯಣಾಚಾರ್,
ಶಿರೋಮಣಿ, ವಿದ್ವಾನ್, ಹುಮಚ.

ಪಾಟ್ನಾದಲ್ಲಿರುವ ಖುದಾ ಬಕ್ಷ್ ಓರಿಯೆಂಟಲ್ ಪಬ್ಲಿಕ್ ಲೈಬ್ರರಿಯನ್ನು ಪ್ರಮುಖ ಅಂತಾರಾಷ್ಟ್ರೀಯ ಇಸ್ಲಾಮಿಕ್ ವಿದ್ಯೆಯ ಕೇಂದ್ರವನ್ನಾಗಿ ಮಾಡಲು ಭಾರತ ಸರಕಾರವು ಪ್ರಯತ್ನ ಮಾಡುತ್ತಿದೆ.

ಹೆಜ್ಜಾಗಿ ಅರೇಬಿಕ್ ಮತ್ತು ಪರ್ಶಿಯನ್ ಪುಸ್ತ ಪ್ರತಿಗಳುಳ್ಳ ಮತ್ತು ಮುಸ್ಲಿಮ್ ಪ್ರಸೇಚದ ದೊಡ್ಡ ಜ್ಞಾನ ಭಂಡಾರವನ್ನೊಳಗೊಂಡು, ಐನರ್ವಗಳಷ್ಟು ಹಳೆಯ ಆ ಲೈಬ್ರರಿಯನ್ನು ಒಂದು ಪಾರ್ಲಿಮೆಂಟ್ ಆಕ್ಟಿನ ಮೂಲಕ-ರಾಷ್ಟ್ರೀಯ ಸಂಸ್ಥೆಯೊಂಗಿ ಮಾರ್ಪಡಿಸಲು ಸರಕಾರವು ಉದ್ದೇಶ ಪಟ್ಟಿದೆ. ಮೊದಲ ಹೆಜ್ಜೆಯಾಗಿ ೧೦೦,೦೦೦ ರುಪಾಯಿಗಳ ವೆಚ್ಚದಿಂದ ಗಂಗಾನದಿಯ ಪಶ್ಚಿಮದಲ್ಲಿರುವ ಆ ಲೈಬ್ರರಿಯ ಕಟ್ಟಡಕ್ಕೆ ಒಂದು ಎರಡನೇ ಅಂತಸ್ತನ್ನೇರಿಸಿ ಕಟ್ಟಲಾಗುತ್ತಿದೆ.

ಬಿಹಾರಿನ ಮುಸ್ಲಿಮ್ ವಿದ್ವಾಂಸರ ವಂಶದ ಎರಡು ತಲೆಮಾರುಗಳಿಂದ ಈ ಇಸ್ಲಾಮ್ ಗ್ರಂಥ ಸಂಗ್ರಹವು ರಚಿಸಲ್ಪಟ್ಟಿದೆ, ಆ ವಂಶಜರು ಇದನ್ನು ರಕ್ಷಿಸುತ್ತಾ ಬಂದಿದ್ದುತ್ತಾರೆ. ಆದರೆ ಈ ಅಪೂರ್ವ ನಿಧಿಯು ಆ ವಂಶಜ್ಞನಾದ ಮತ್ತು ವೃತ್ತಿಯಿಂದ ಲಾಯರ್ ಆದ ಖುದಾ ಬಕ್ಷನ ದೃಢ ಸಂಕಲ್ಪಕ್ಕೆ ಸ್ಮಾರಕವಾಗಿದೆ.

ಪ್ರಮುಖ ಇಸ್ಲಾಮಿಕ್ ವಿದ್ವಾಂಸರಾದ ಸರ್ ಡೇವಿಸನ್ ರೋಸ್ ಮತ್ತು ಸರ್ ಚಾರ್ಲ್ಸ್ ಲಿಯಲ್‌ರವರ ಸೂಚನೆ ಪ್ರಕಾರ ಲಾರ್ಡ್ ಕರ್ಜನನು ೧೯೦೫ರಲ್ಲಿ ಈ ಲೈಬ್ರರಿಯನ್ನು ಸಂದರ್ಶಿಸಿದನು. ಅವನು ಬ್ರಿಟಿಷ್ ಮ್ಯೂಸಿಯಮ್ಮಿಗಾಗಿ ಈ ೪೦೦೦ ಅಪೂರ್ವ ಗ್ರಂಥಗಳಲ್ಲಿ ಕೆಲವನ್ನು ಕೊಂಡುಕೊಳ್ಳುವುದಾಗಿ ಹೇಳಿದನು. ಆದರೆ ಖುದಾ ಬಕ್ಷನು ೫೦೦,೦೦೦ ಪೌಂಡುಗಳ ಈ ಬೇಡಿಕೆಯನ್ನು ನಿರಾಕರಿಸಿದನು.

ಲಾರ್ಡ್ ಕರ್ಜನನು ಈ ಪುಸ್ತಪ್ರತಿಗಳಿಗೆ ವ್ಯವಸ್ಥಿತವಾದ ಒಂದು ಪಟ್ಟಿಯನ್ನು ಕಯಾರಿಸಬೇಕೆಂದೂ, ಇಸ್ಲಾಮ್ ಸಂಸ್ಕೃತಿಯ ವಿದ್ವಾಂಸರು ಮತ್ತು ವಿದ್ಯಾರ್ಥಿಗಳಿಗೆ ಸಂಶೋಧನೆಯ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕೆಂದೂ ಸೂಚನೆಯಿತ್ತನು. ಪ್ರೊಫೆಸರ್ ಜೆ. ಎನ್. ಸರ್ಕಾರರು ಭಾರತ ಚರಿತ್ರೆಯ ಮುಸ್ಲಿಮ್ ಕಾಲದ ಕುರಿತು ಸಂಶೋಧನೆ ಕೈಡಿಸಿ ಖುದಾ ಬಕ್ಷನ ಈ ಸಂಗ್ರಹವನ್ನು ಅಂದಿನಿಂದ ಪ್ರಸಿದ್ಧಿಗ ತಂದರು. ಮತ್ತು ಟಿ. ಪಿ. ಸ್ಮಿತ್ ಒಕ್ಕನ್ನೊರ್ ಎಂಬವರು "All Eastern History" ಎಂಬ ತಮ್ಮ ಸಚಿತ್ರವಾದ ಸಣ್ಣ ಪುಸ್ತಕದಲ್ಲಿ ಇದನ್ನು ಖ್ಯಾತಿಗೆ ತಂದರು.

"ಖೈವಾನುಗ್ರಹ"ನೆಂದು ಅರ್ಥ ಕೊಡುವ ಹೆಸರನ ಖುದಾ ಬಕ್ಷನು ೧೮೪೨ರಲ್ಲಿ ಉತ್ತರ ಬಿಹಾರದ ಚಾಪ್ರ ಎಂಬಲ್ಲಿ ಹುಟ್ಟಿದನು. ಕಲ್ಕತ್ತದಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿದ ತನ್ನ ೨೬ನೇ ವರ್ಷದ ವಯಸ್ಸಿನಲ್ಲಿ ಸರಿ ೧೦೦ ವರ್ಷಗಳ ಮೊದಲು ಪಾಟ್ನಾದಲ್ಲಿ ಒಬ್ಬ ಲಾಯರ್ ಆಗಿ ನೆಲೆ ನಿಂತನು.

ಅವನು ೧೮೮೮ರಲ್ಲಿ ಹೈದರಾಬಾದಿನಲ್ಲಿ ನೈಜಾಮರ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶ ಪದವಿಯನ್ನೇರಿ ಕೆಲವು ವರ್ಷ ಆ ಉದ್ಯೋಗದಲ್ಲಿದ್ದನು. ೧೯೦೮ರಲ್ಲಿ ಅವನು ಮರಣ ಹೊಂದಿದನು. ಲೈಬ್ರರಿಯ ಆವರಣದಲ್ಲಿಯೇ ಅವನ ಅಕ್ಷವನ್ನು ವಿಶ್ರಾಂತಿಗೊಳಿಸಲಾಯಿತು.

ದಿಲ್ಲಿಮುಲ್ಲಿನ್ನ ಖುದಾ ಬಕ್ಷಸ್ಥ ಪೂರ್ವಜನಾದ ೨೬ನೇ ಹಯಾಬತ್ ಖಾನನು ತಾನು "ಫತ್ವಾ—ಇ—ಆಲಮ್‌ಗಿರಿ" ಅಥವಾ ಔರಂಗ ಜೇಬನ ಶಾಸನಗಳು ಎಂಬ ಗ್ರಂಥವನ್ನು ಪೂರ್ತಿಗೊಳಿಸಿದಾಗ ಈ ಅಪೂರ್ವ ಹಸ್ತ ಪ್ರತಿಗಳ ಸಂಗ್ರಹವನ್ನು (ಇಂತಹ ಸಂಗ್ರಹ ಮೂಡಿದ್ದು ಇದೇ ಮೊದಲು) ಪ್ರಾರಂಭಿಸಿದವನೆಂದು ಹೇಳಲಾಗುತ್ತಿದೆ. ಮುಗಲ ಸಾಮ್ರಾಜ್ಯದ ಪತನವಾದ ನಂತರ ಅವನ ವಂಶಜರು ಬಿಹಾರಕ್ಕೆ ಬಂದು ನೆಲೆಸಿದರು. ಅವರು ಹಸ್ತ ಪ್ರತಿಗಳನ್ನೂ ಅಪೂರ್ವ ಗ್ರಂಥಗಳನ್ನೂ ಸಂಗ್ರಹಿಸುತ್ತಲೇ ಇದ್ದರು.

ಮಹಮ್ಮದ ಬಕ್ಷನು ತನ್ನ ಮರಣ ಕಾಲದಲ್ಲಿ ಮಗನಾದ ಖುದಾ ಬಕ್ಷನಿಗೆ ಸುಮಾರು ೧೫೦೦ ಪುಸ್ತಕಗಳನ್ನು ಒಪ್ಪಿಸಿಕೊಟ್ಟು ಒಂದು ಪಬ್ಲಿಕ್ ಲೈಬ್ರರಿಯನ್ನು ಕಟ್ಟಬೇಕೆಂದು ಆಪ್ಪಣೆಯಿತ್ತನು.

ಲೈಬ್ರರಿಯ ಡೈರೆಕ್ಟರರಾದ ಡಾಕ್ಟರ್ ಇಕ್‌ಬಾಲ್ ಹುಸೇನರು ಆ ೫೦,೦೦೦ ಹಸ್ತ ಪ್ರತಿ, ಅಚ್ಚಾದ ಪುಸ್ತಕ, ಮೂಸಪತ್ರಿಕೆ, ವಾರ್ತಾ ಪತ್ರಿಕೆಗಳನ್ನು ಅತೀವ ಕಾಳಧಾನಿಯಲ್ಲಿ ಜಗತ್ತಿನಲ್ಲೇ ಅಮೂಲ್ಯವಾದ ಸಂಸ್ಥೆಯೆಂದು ವರ್ಣಿಸಿದ್ದಾರೆ.

ಅಮೂಲ್ಯವಾದ ಪುಸ್ತ ಪ್ರತಿಗಳು

ಡಾಕ್ಟರ್ ಹುಸೇನರು ಹೇಳುತ್ತಾರೆ—ಖುದಾ ಬಕ್ಷನು ೨೮ವರ್ಷಗಳ ಕಾಲದಲ್ಲಿ ಪ್ರಪಂಚದ ನಾನಾ ಭಾಗಗಳಿಗೆ, ವಿಶೇಷತಃ ಅರಬ್ ರಾಷ್ಟ್ರಗಳಿಗೆ ಅಮೂಲ್ಯವಾದ ಹೆಸ್ತಪ್ರತಿಗಳನ್ನು ಸಂಗ್ರಹಿಸುವುದಕ್ಕೆ ರಾಯಭಾರಿಗಳನ್ನೂ ಪ್ರತಿನಿಧಿಗಳನ್ನೂ ಕಳುಹಿಸಿದ್ದನು. ತನ್ನ ಪ್ರತಿನಿಧಿಗಳು ಪರ್ಶಿಯ, ಈಜಿಪ್ಟ್, ಸಿರಿಯಾ, ಅರೇಬಿಯಾ ಮತ್ತು ಸ್ಪೈನ್ ದೇಶಗಳನ್ನು ಕೂಡ ಈ ಉದ್ದೇಶಕ್ಕಾಗಿ ಸಂದರ್ಶಿಸಿದ್ದರು.

ಡಾಕ್ಟರ್ ಹುಸೇನರು ಅಭಿಪ್ರಾಯದಂತೆ ಈಗ ಈ ಸಂಗ್ರಹವು ತಾರೀಖ್ ಖಾಂಡಿನ್ ತಿಮುರಿಯಾ" (ತೈಮೂರ್ ವಂಶದ ಚರಿತ್ರೆ) "ಬಾದಷಾನಾಮಾ" (ಷಾಹಜಹಾನನ ಆಳಿಕೆಯ ಚರಿತ್ರೆ) ಫಿರ್‌ದಾತಿಯೂ "ಷಾಹನಾಮ" (ರಾಜನ ಚರಿತ್ರೆ) ಮತ್ತು 'ದಿವಾನ್-ಇ-ಹಫಿನ್" (ಹಫೀಜನ ಕೃತಿಗಳು) ಇವುಗಳನ್ನು ಒಳಗೊಂಡಿದೆ.

"ಈ ದಿವಾನ್-ಇ-ಹಫಿನ್" ಗ್ರಂಥವನ್ನು ಮುಗಲ್ ಚಕ್ರವರ್ತಿಗಳಾ ಕಷ್ಟ ಕಾಲದಲ್ಲಿ ಅನೇಕ ಪೇಳೆ ನೋಡಿ ವಿಚಾರ ಮಾಡುತ್ತಿದ್ದರು.

ಜುಮಾಯೂನ್, ಜಹಾಂಗೀರ್ ಇವರಿಬ್ಬರೂ ಈ ಗ್ರಂಥವನ್ನು ತೆಗೆಸಿದ ಮೇಲೆ ಪಾಳೆಗಳ ಬದಿಯಿಂಬಿನಲ್ಲಿಗ ಖಲೆಗಳನ್ನು ಬಿಟ್ಟು ಹೋಗಿರುತ್ತಾರೆ.

ಈ ಸಂಗ್ರಹದಲ್ಲಿ ಔರಂಗಜೇಬ್ ಆಲಮ್‌ಗೀರಿಯು ಕೈ. ಶ. ೧೫೫೫ರಲ್ಲಿ ನಾನ್ಯ ಸುಂದರ ಬರವಣಿಗೆಯಲ್ಲಿ ಪ್ರತಿಯಲ್ಲಿ ಬರೆದ ಪವಿತ್ರ ಕುರಾನಿನ ಪ್ರತಿಯು ಒಂದು ಅತ್ಯುತ್ತಮ ಗ್ರಂಥವಾಗಿದೆ. ಷಾಜಿಹಾನ್ ಸ್ವೈನಿನ ರಾಜಕೀಯ ಪುಸ್ತಕ ಭಂಡಾರದ ಮುದ್ರೆಯನ್ನು ಪೊತ್ತಿರುವ ನಾಜ್ಯವಿಯು "ಕಿತಾಬ್ ಉತ್ ಫಸ್ಲಿ ಫ್" (ವಿಜಯ ಗ್ರಂಥ)ವು ಕೊಡೋಕ್ ಬಾದಿಂದ ಪಾಟ್ನಾಕ್ಕೆ ಬಂದಿದೆ.

ಕೈ. ಶ. ೧೫೩೦ರಲ್ಲಿ ಬರೆದ ನಾಮಮಾಲ್-ಆಲ್-ಹರೀರ್ (ಸಾಹಿತ್ಯದ ಸಂಕಲನಗಳು) ಎಂಬ ಗ್ರಂಥವು ಈಜಿಪ್ಟಿನ ಅಲಂಕೃತವಾದ ಸೈಪುಸ್ತೀನ್ ಅಬು ಬಕರ್‌ನ ಲೈಬ್ರರಿಯಿಂದ ಪಡೆದಿದ್ದಾಗಿದೆ.

ಪಾಶ್ಚಿವಲ್ಲಿನ ಜೀವನ ಚಾರ್ಯ, ಕಳ್ಳ ಶಸ್ತ್ರ, ತರ್ಕ, ನೀತಿ, ನ್ಯಾಸು, ತತ್ವಶಾಸ್ತ್ರ, ಗಣಿತ, ಖಗೋಳಬೌತಿಕ್ಯ, ಪ್ರಕೃತಿ ವಿಜ್ಞಾನ, ಔಷಧ, ಜ್ಯೋತಿಷ್ಯ, ಅಲಂಕಾರ ಮತ್ತು ಇತರ ವಿಷಯಗಳ ಗ್ರಂಥಗಳೂ ಇರುತ್ತವೆ.

ಈ ಲೈಬ್ರರಿಯಲ್ಲಿ ಇಂಗ್ಲಿಷ್, ಫ್ರೆಂಚ್, ಜರ್ಮನ್, ಇಟೆಲಿಯನ್, ಸ್ಪಾನಿಷ್ ಮತ್ತು ಲೇಟಿನ್ ಭಾಷೆಗಳ ಅಪೂರ್ವ ಯುರೋಪಿನ ಗ್ರಂಥಗಳ ದೊಡ್ಡ ಸಂಗ್ರಹವೂ ಇದೆ. ಅಲ್ಲಿಯಲ್ಲಿ "ಸೆಪೋಲಿಯನ್ ಬೋನ ಪಾರ್ಟೆಯ ಸ್ವಾನುಭವಗಳು" "ಹಿಸ್ಟೋರಿಯಾ-ಡಿ-ಪಟೇಲಿಯ" (ಕ್ರಿ. ಶ. ೧೫೬೦) "ತರ್ಕರ ಇತಿಹಾಸ (ಕ್ರಿ. ಶ. ೧೬೮೭) ಮತ್ತು ಸರ್ ವಾಲ್ಟೆರ್ ಸ್ಕಾಟ್‌ನ ನೇವರ್ಲೀ ರಾವಲಿಬರಿಗಳ ಸಂಪೂರ್ಣ ಸೆಟ್ಟೂ ಇವೆ.

ಇವುಗಳ ಸಂಗಡ ಸಂಸ್ಕೃತ ಪುಸ್ತ, ಹಿಂದೀ ಹಸ್ತ ಪ್ರತಿಗಳ ಸಂಗ್ರಹವೂ ಇದೆ. ಅಲ್ಲಿಗಳಲ್ಲಿ ನೀಲಿ, ಕುಂಕುಮ, ಹಳದಿ, ಕಂದು ಮತ್ತು ಹಸುರು ವರ್ಣಗಳಲ್ಲಿ ಬಣ್ಣಗಾರಿಕೆಗಳೂ ಇವೆ. ೬೦೦ ಚಿತ್ರಗಳು ಮುಗಲ್, ಪರ್ಶಿಯನ್, ಭೈರೀಸ್, ರಾಜಪೂತ್ ಮತ್ತು ಕಂಪ್ಯಾನಿ ಪದ್ಧತಿಗಳಿಂದ ಬರೆಯಲ್ಪಟ್ಟಿವೆ.

೪೦ ವರ್ಷಗಳ ಹಿಂದೆ ಈ ಪುಸ್ತಕಾಲಯವನ್ನು ಸಂಸ್ಥಿಸಿದ ಮಹಿತ್ಮಾ ಗಾರಿಧಿಯವರು ಈ ಹಸ್ತ ಪ್ರತಿಗಳ ಬಣ್ಣ ಮತ್ತು ಅಲಂಕಾರಿಕಗಳು ಕಣ್ಣುಗಳಿಗೆ ಚಿರ ಸ್ಥಾಯಿಯಾದ ಹಬ್ಬವಾಗಿವೆಯೆಂದು ಹೇಳಿರುತ್ತಾರೆ.

ಡಾಕ್ಟರ್ ಹುಸೇನರು "ಈ ಪುರಾತನವಾದ ಹಸ್ತ ಪ್ರತಿಗಳ ಶೋಧನೆಯಿಂದ ಹಾಳೆಗಳಲ್ಲಿರುವ ಅಕ್ಷರಮಾಲೆಯ ಸುಂದರ ಬರವಣಿಗೆಯಷ್ಟಲ್ಲ, ಕೆಲವು ಬಣ್ಣ, ನೀಲಿ, ಕುಂಕುಮ, ಹಸುರು, ಹಳದಿ, ರಸ ಸಿಂಧೂರ ಮತ್ತು ಕುಚ್ಚು ಬಂಗಾರ ಬಣ್ಣಗಳನ್ನು ಮಿಕ್ಕಿರುವ ಕಾಲದ ವರೆಗೆ ನಿಲ್ಲುವಂತೆ ಮಾಡುವ ಪದ್ಧತಿಯನ್ನಲ್ಲಿ ಬೇರೆಲ್ಲಿಯೂ ಇಲ್ಲವೆಂದು ಹೇಳುತ್ತಾರೆ.

ಈ ಪುಸ್ತಕ ಸಂಗ್ರಹವನ್ನು ಸಾರ್ವಜನಿಕರಿಗೆ ಒಪ್ಪಿಸಿಕೊಡುವ ಖುದಾ ಬಕ್ಷನ ಮೂರು ಶಾಸನವು ಈ ಪುಸ್ತಪತ್ರಿಕಾ

(ಎಂಟನೇ ಸುಳಿ ನೋಡಿರಿ)

ನಿಮ್ಮ ಕೈಯಲ್ಲಿ ಉಳಿಯುವ
ಕೊನೆಯ ರೂಪಾಯಿಯ ಬೆಲೆ ಬಲ್ಲಿರೇ?

ರೂಪಾಯಿ ಒಂದಾದರೂ ಅದರ ಬೆಲೆ ಎಷ್ಟೋ ಪಾಲು ಮಿಗಲು. ತಿಂಗಳ ಉಳಿದ ದಿನಗಳ ಉದ್ದಕ್ಕೂ ಅದೊಂದೇ ರೂಪಾಯಿ ನಿಮ್ಮ ಪಾಲಿಗೆ ದೊರಕಿರುವುದರಿಂದ ನೀವು ಸಹಜವಾಗಿ ಅದನ್ನು ಜಾಗ್ರತೆಯಾಗಿ ಬಳಸಲು ಇಚ್ಛೆಯುವಿರಿ, ಹಾಗೂ ಅದನ್ನು ಅತೀ ಹೆಚ್ಚಿನ ಉಭಯೋಗಕ್ಕಾಗಿ ವಿನಿಯೋಗಿಸುವಿರಿ. ಅಂದರೆ ಅದರ ಬೆಲೆ ಒಂದು ರೂಪಾಯಿಯಾಗಿರದೆ ಬಹಳಷ್ಟು ಪಾಲು ಹೆಚ್ಚಾಗಿ ತೋರುವುದು.

ಆದಾಯ ನಿಮ್ಮ ಕೈಗೆ ಬಂದ ದಿನದಿಂದಲೇ ನಿಮ್ಮ ಗೃಹಿಣಿಯೊಂದು ರೂಪಾಯಿಯನ್ನು ಕೊನೆಯ ರೂಪಾಯಿಯಾಗಿ ಯಾಕೆ ನೀವು ಮಾಡಬಾರದು? ಹಾಗೆ ಮಾಡಲು ತೀರಾ ಸರಳ ವಿಧಾನವಿದೆ. ಖರ್ಚಿನಲ್ಲಿ ಮಿತ, ವಿವೇಕಪೂರ್ಣ ಖರ್ಚ, ನೀತಿ ಜಾಗ್ರತೆಯಾಗಿ ವೆಚ್ಚಮಾಡುವ ಪ್ರತಿ ರೂಪಾಯಿಯು ಬೆಲೆ ಲಿ ಮಾಲಿಕ ಏರುವಂತಾಗುತ್ತದೆ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆಯೊಂದನ್ನು ತೆರೆದು, ನಿಮ್ಮ ವರಮಾನದ ಕೊಂಚ ಭಾಗವನ್ನು ಅದರಲ್ಲಿ ಶ್ರಮವಾಗಿ ಕೂಡಿಸುತ್ತಾ ಬನ್ನಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಸೌತ್ ಕೆನರಾ ಜಿಲ್ಲೆ.

ವಿಚಾರ ಮಂಥನ

ನವೀನ ನರಕಾಸುರರ ನೀಚ ಕೃತ್ಯಗಳು

ಬರೆದವರು: ಶ್ರೀ ಶಿವಶಂಕರ.

ದೀಪಾವಳಿ ಬಂತು, ದೀಪಾವಳಿ ಹೋಯಿತು. ಎಲ್ಲೆಲ್ಲೂ ಶಬ್ದ ಕೇಳಿ ಬಂತು, ಬೆಳಕು ಕಂಡು ಬಂತು. ಬಂದಂತೆ ಎಲ್ಲವೂ ಹೋದುವು. ಮತ್ತೆ ಮರೆವು ಕೂಡಾ ಬಾಗೇನೇ. ಸಂಭವ ಸ್ಮೃತಿಪಟಲದಲ್ಲಿ ಸ್ವಲ್ಪ ಸಮಯ ಇದ್ದು ಮತ್ತೆ ಮರೆತುಹೋಗುತ್ತದೆ. ಹಾಗೆ ಮರೆತು ಹೋದದ್ದೂ ಕೆಲವೊಮ್ಮೆ ಹಳ್ಳನೆ ಜ್ಞಾಪಕಕ್ಕೆ ಬರುವ ದೂ ಉಂಟು. ಅದೇನೂ ಅಸಂಭವನೀಯ ಆಗಿರುವದಿಲ್ಲ.

ದೀಪಾವಳಿಯು ಧಾಂ, ಧೂಂ ಸಹಿತ ಶೈಲಾಭ್ಯಂಗದಿಂದ ಆರಂಭವಾಗುತ್ತದೆ. ಎಣ್ಣೆ—ಸ್ನಾನ.ಇತರ ದಿನಗಳಲ್ಲೂ ನಡೆಯುತ್ತದೆ. ಆದರಲ್ಲೂ ತಮಿಳು ನಾಡಿನಲ್ಲಿ ಪುರುಷರು ಬುಧವಾರ ಹಾಗೂ ಶನಿವಾರ, ಸ್ತ್ರೀಯರು ಶುಕ್ರವಾರ ದಿವಸ ಎಣ್ಣೆ ಸ್ನಾನ ಮಾಡುವ ಅಭ್ಯಾಸ ಇಂದೂ ಇಟ್ಟು ಕೊಂಡಿದ್ದಾರೆ. ಆದರೆ ಆ ದಿನಗಳಲ್ಲಿ ಜ್ಞಾಪಕಕ್ಕೆ ಬಾರದ ಒಂದು ವಿಷಯ ದೀಪಾವಳಿಯ ತೈಲಾಭ್ಯಂಗದಂದು ಜ್ಞಾಪಕಕ್ಕೆ ಬರುತ್ತದೆ. ಅದುವೇ ನರಕಾಸುರನ ವಿಷಯವಿವೆ. ನರಕಾಸುರನು ನೂರಾರು ನಾಯಿಯರನ್ನು ತಪ್ಪ ನರಕ ಸದೃಶ ಆಂಶಸುಂದಲ್ಲಿ ತಂದಿಟ್ಟು ಚಿತ್ರ ಹಿಂಸೆಯ ವಿವಿಧ ಪ್ರಯೋಗಗಳನ್ನು ನಡೆಸುತ್ತಿದ್ದ ಆದಕ್ಕೂ ಅದೊಂದು ಅಂತ್ಯವೆಂಬು ದಿ. ಅಂತೆಯೇ ನರಕಾಸುರನ ವಧೆ ಸ ಮಾಯುತ್ತದೆ. ಭಗಿನಿಯರ ಬಿಡುಗಡೆಯೂ ಗುತ್ತದೆ. ಮಹಿಳೆಯರು ಮಹದಾನಂದ ದಿಂದ ಎಣ್ಣೆ ಸ್ನಾನ ಮಾಡುತ್ತಾರೆ. ಈ ಬಿಡುಗಡೆಯ ಜ್ಞಾಪಕಾರ್ಥ ಇಂದೂ ತೈಲಾಭ್ಯಂಗ ಕಾರ್ಯಕ್ರಮದಿಂದ ದೀಪಾವಳಿ ಆರಂಭವಾಗುತ್ತವೆ.

ಇನ್ನೊಂದು ಸಂಭವವೂ ಜ್ಞಾಪಕಕ್ಕೆ ಬಾರದಿರಲಾರದು. ವಿಶ್ವವಾಸ್ಯ ಪರಿಪಾಲಕ ಅಯೋಧ್ಯಾ ರಾಮನು ವನವಾಸಕ್ಕೆ ಸೀತಾ ಸಮೇತನಾಗಿ ಹೋಗುತ್ತಾನೆ. ಅಲ್ಲಿ ರಾವಣಾಸುರನು ಸೀತಾದೇವಿಯನ್ನು ಕದ್ದುಕೊಂಡು ಹೋಗುತ್ತಾನೆ. ಅದರ ಪರಿಣಾಮವಾಗಿ ಶ್ರೀ ರಾಮಚಂದ್ರನು ಅವನನ್ನು ಕೊಲ್ಲ ಬೇಕಾಗುತ್ತದೆ. ವನವಾಸದ ಅವಧಿಯು ಆಗ ಮುಗಿಯುತ್ತದೆ. ಪ್ರಭು ಶ್ರೀ ರಾಮಚಂದ್ರನು ಅಯೋಧ್ಯೆಗೆ ಹಿಂತಿರುಗುತ್ತಾನೆ. ದೀಪಾವಳಿಯ ಶುಭ ಪರ್ವದಂದು ಮಂಥರಾ ಸುರುಷೋತ್ತಮ ಶ್ರೀ ರಾಮಚಂದ್ರ ಪ್ರಭುವಿಗೆ ಪಟ್ಟ ಕಟ್ಟಲಾಗುತ್ತದೆ. ಇಲ್ಲಿ ತೈಲಾಭ್ಯಂಗ ವಿಶೇಷ ಹಾಗೂ ಬಹು ಮುಖ್ಯ ಕಾರ್ಯ ಕ್ರಮವಿದೆ. ಅಲ್ಲಿ ನಿಜವಾಗಿ ಪವಿತ್ರ ನದಿಗಳಿಂದ, ತೀರ್ಥಸ್ನಾನಗಳಿಂದ ತಂದಿದ್ದ ಪಾವನ ಜಲದಿಂದ ಶ್ರೀ ರಾಮಚಂದ್ರ ಮಹಾ ಪ್ರಭುವಿಗೆ ಸ್ನಾನ ಮಾಡಿಸುತ್ತಾರೆ. ಇಂದು ಗಂಗಾ—ಯಮುನಾ—ಕಾವೇರಿಗಳ ಪಾವನ ಸ್ಮರಣ ಮಾತ್ರದಿಂದಲೇ ಸ್ನಾನ ಮುಗಿಸಿಕೊಳ್ಳಬೇಕಾಗಿರುತ್ತದೆ. ಹಾಗೂ ಅಖಂಡ ಭಾರತದ ಜ್ಞಾಪಕ ಅಂ ಾದೂ ನಮಗೆ ಸಿಗುತ್ತದೆ. ಇಲ್ಲೂ ಂ ಾನ ವಧೆಗೆ ಸೀತೆಯು ಬಂಧಮವೇ ಾಯವಿದೆ.

ಇಂದು ನಾವು ಎಣ್ಣೆ ಸ್ನಾನ ಮಾಡಿಕೊಳ್ಳುವದು ನ್ಯಾಯವೇನು? ನರಕಾಸುರನ ನರಕದಿಂದ ನಾರಿಯರು ಬಂಧವಿಮುಕ್ತ ರಾದರೆಂಬ ಕಾರಣದಿಂದ ಆ ಅಭ್ಯಾಸವನ್ನು ನಾವಿಟ್ಟುಕೊಂಡಿದ್ದೇವಾದಲ್ಲಿ, ನಮ್ಮೆ ದುರಿನಲ್ಲಿಂದು ಏನು ನಡೆಯುತ್ತಿದೆ? ದೇಶ ವಿಭಜನೆಯ ಸಮಯ ನಡೆದ ಘೋರ ಪಾತಕದ ದುಷ್ಪಲವನ್ನಿಂದೂ ನಾವು ಅನುಭವಿಸ ಬೇಕಾಗಿರುತ್ತದೆ. ಬ್ರಿಟಿಷರೇನೋ ಹೋದರು. ಆದರೆ ನಾವು ಬಲಾತ್ಕಾರಕ್ಕೆ ತಲೆ ತಗ್ಗಿಸಿದೆವು. ಅಂದು ದೀಪಾವಳಿ ಅಲ್ಲ, ಭಾರತ ದಹನಕ್ಕನೇ ಕೊಳ್ಳಿ ಇಟ್ಟುಕೊಂಡೆವು ಕಾಶ್ಮೀರವನ್ನು ನರಕಾಸುರರ ನರಕವನ್ನಾಗಿ ನಿರ್ಮಿಸಿದೆವು. ಆದ್ಯ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರು ಅಲ್ಲಿ ನಿರ್ಮಿಸಿರುವ ಮೂತೆ ಸರಸ್ವತಿಯ ಮಂದಿರ ಇಂದು ನಾಮ ಮಾತ್ರವೇ ಇದೆ. ಭಾರತದ ಸರಸ್ವತಿಯೇ ಪರದಾಸ್ಯದಲ್ಲಿರುವಾಗ ಅಕೆಯ ಮಂದಿರದಷ್ಟ ಮನೆ ಗೊಡುವವರ್ಯಾರು?

ಕಾಶ್ಮೀರದ ಕಾಫಿರರು ಕಣ್ಣೀರಕೋಡಿ ಹರಿಸುತ್ತ ದಯಾರ್ದ್ರ ದೃಷ್ಟಿಯಿಂದ ದಿಲ್ಲಿಯ ದೊರೆಗಳತ್ತ ನೋಡಿದರು. ಆದರೇನು ಪ್ರಯೋಜನ! ಹಿಂದೂ ಹೆಂಗಳೆಯರಿರುವದೇ ನರಕಾಸುರರ ನರಕವನ್ನು ತುಂಬಿಸಲಿಕ್ಕಾಗಿ ತಾನೇ! ಕಾಶ್ಮೀರದ ನಾರಿಯರಿಂದ ಮತೀಯನವೀನ ನರಕಾಸುರ ನರಕದಲ್ಲಿದ್ದಾರೆ.ಇದುವಾತ್ಮಸ್ಥಾನ ಅಥವಾ ಪ್ರೇತಸ್ಥಾನದಲ್ಲಿ ಅಲ್ಲ,ಭಾರತದಲ್ಲಿರುವ ಕಾಶ್ಮೀರದಲ್ಲಿ.ಇದು ನಿಜವಿದೆ. ಅದರೂ ನಾವು ಎಣ್ಣೆ ಸ್ನಾನ ಮಾಡಿರುವೆವಲ್ಲವೇ? ಇದು ನ್ಯಾಯವೇ? ಕಾಲ್ಕೇರವು ಪಾತಕಸ್ಥಾನದಲ್ಲಿರುವದಿಲ್ಲ; ಹಿಂದೂಸ್ಥಾನದಲ್ಲೇ ಇದೆ. ಕಾಶ್ಮೀರವೇನೂ ಪೃತ್ಯೇಕ ಭಾಗ ಇರುವದಿಲ್ಲ. ಅದು ಭಾರತ ಅವಿಭಾಜ್ಯ ಅಂಗವೇ ಇದೆ. ಹಾಗಿರುವಾಗ ಇಂದು ಕಾಶ್ಮೀರದಲ್ಲಿ ನಡೆದದ್ದು ನಾಳೆ ಕಾಲಡಿಯಲ್ಲೂ ಪಡೆಯಲಾರದೆಂದು ಹೇಳಲು ಸಾಧ್ಯವೇನು? ಕಾಶ್ಮೀರದ ಬಾಗ್ಲಿಚ್ಚು ದೇಶದಾದ್ಯಂತ ಹಬ್ಬದಿರಲಾರದು—ನಾತ್ರಿ ನಿದ್ರಿಸಿದಲ್ಲ.

ಕಾಶ್ಮೀರದಲ್ಲಿ ನಡೆದುದಾದರೂ ಏನು?

ಈ ದುರ್ಘಟನೆ ನಡೆದರುವದಾದರೂ ಕಾಶ್ಮೀರದ ಸೀಮೆಯಲ್ಲಿ ಅಲ್ಲ, ರಾಜಧಾನಿ ಅಥವಾ ಕೇಂದ್ರ ನಗರ ಶ್ರೀನಗರದ ಅಮಿತ ಕಡಲಿನಲ್ಲಿ. ಅಲ್ಲಿಯ ಸುಪರ್ ಬ ರುಗಾರಿನಲ್ಲಿ ಶುವಾರಿ ಪರಮೇಶ್ವರಿ ಹಿಂದೂ ಎಂಬಾಕೆ ಮಾರುವಾಕೆ ಅಥವಾ ಸೇಲ್ಸ್ ಗರ್ಲ್, ಗುಲಾಂ ರಸೂಲ್ ಕಂಟನು ಅಲ್ಲಿಯ ಕೇಶಿಯರ್. ದಿನಂಪ್ರತಿ ವ್ಯಾಪಾರ ಮುಗಿದೊಡನೆ ಪರಮೇಶ್ವರಿಯು ಗುಲಾಮ ರಸೂಲನ ಬಳಿ ಮೊತ್ತ ಣವನ್ನು ಒಪ್ಪಿಸಬೇಕು. ಅವನು ಲೆಪ್ಪ ಪತ್ರಗಳನ್ನು ನೋಡಿ ಸರಿಯಾಗಿ ಅದನ್ನು ತೆಗೆದುಕೊಳ್ಳಬೇಕು. ಅವನು ದಿವಸಾಗಲೂ ಹಣ ಕಮ್ಮಿ ಇದೆ, ಲೆಪ್ಪ ಪತ್ರ ಸರಿ ಇಲ್ಲ....ಇತ್ಯಾದಿ ನೆವನ ಹೇಳಿಕೊಂಡು ಆಕೆಯನ್ನು ಉದ್ದೇಶ ಪೂರ್ವಕವಾಗಿ ತಡೆ ಹಿಡಿದು ಬಹಳ ತಡವಾಗಿ ಹೋ ಗಲು ಬಿಡುತ್ತಿದ್ದನು. ದೇರೆ ದಾರಿ ಇರಲಿಲ್ಲ. ಆ ಕಂಟಕಮಯ ದಾರಿಯಲ್ಲಿ ಆಕೆ ನಡೆಯಲೇ ಬೇಕಾಗಿತ್ತು. ತನ್ನ ಹೊಟ್ಟೆ ಮಾತ್ರ ತುಂಬಿಸಿಕೊಳ್ಳುವ ಜವಾಬ್ದಾರಿ ಅವಳದಲ್ಲ. ತನ್ನ ವಿಧವಾ ಮೂತೆಯನ್ನೂ ನೋಡಿಕೊಳ್ಳಬೇಕು. ಆಕೆಯ ಬಿದ್ದಲ್ಲಿ ಕಾಶ್ಮೀರದಲ್ಲಿ ಹಿಂದೂಗಳಿಗೆ ಕೆಲಸ ಸಿಗುವದು ಸುಲಭ ಸಾಧ್ಯವೇನು? ವಿದ್ಯಾಲಯಗಳಲ್ಲೇ ಸ್ಥಳ ಸಿಗದೆ ಇದ್ದು, ಮಹಮ್ಮದೀಯರಾಗಿ ಮತಾಂತರಗೊಂಡೊಡನೆ ಅಲ್ಲಿ ಸ್ಥಾನ ಸಿಗುತ್ತಿರುವಾಗ, ಕೆಲಸ ಸಿಗುವದುಂಟೇ? ಅದುದರಿಂದ ವಿಷಜಂತುವನ್ನು ಮಡಿಲಲ್ಲಿ ಕಟ್ಟಿಕೊಂಡೇ ಆಕೆ ದಿನ ಕ್ಷಕೆಯಬೇಕಾಯಿತು. ಈ ಮಧ್ಯೆ ಗುಲಾಮ ರಸೂಲನು ತನ್ನ ಮನೋಭಿಲಾಷೆಯನ್ನು ಪರಮೇಶ್ವರಿಗೆ ಪದೇ ಪದೇ ತಿಳಿಸಿದನಾದರೂ ಆಕ್ಷ ಆಕೆ ಗಮನ ಕೊಡಲ್ಲಿಲ್ಲ. ಆಕೆಯು ಸ್ಥಿತಿಗತಿಯನ್ನು ತಿಳಿದುಕೊಂಡಿದ್ದ ರಸೂಲನು ಕೊನೆಯ ದಾಳವನ್ನುರುಳಿಸಿದನು. ಭಾರೀ ಹಣ ಜೋತಾ! ಪರಮೇಶ್ವರಿಯ ಪ್ರಾಣ ತತ್ತರಿಸಿತು. ಅನ್ಯಾಯವಷ್ಟೆಂತೆದುರಿಸುವದು? ಯಾರ ಬಳಿ ನ್ಯಾಯ ಬೇಡಲಿ!ಹಣ ಕಮ್ಮಿ ಇಲ್ಲವೆಂದು ಹೇಗೆ ಸ್ಪಷ್ಟಪಡಿಸುವದು? ರಸೂಲನು ಆಕೆಯನ್ನು ಬೆದರಿಸಿದನು. ಹಣ ತುಂಬಿಸದಿದ್ದಲ್ಲ ಪೋಲೀಸರಿಗೆ ತಿಳಿಸಬೇಕಾಗುತ್ತದೆ. ಪೋಲೀಸ್ ಕಛೇರಿ, ಅವರ ಕ್ರೂರ ಕೃತ್ಯಗಳು, ಮುದಿ ತಾಯಿ...ಆಕೆಗೆ ಕಣ್ಣು ಕತ್ತಲೆ ಬಂತು. ಆಗ ರಸೂಲನು ಬಲೆಯನ್ನು ಬೀಸಿದನು. ಇರುವದು ಒಂದೇ ಉಪಾಯ. ನೀನು ನನ್ನವಳಾಗು. ನಷ್ಟವನ್ನು ನಾನು ತುಂಬಿಸಿಕೊಳ್ಳುತ್ತೇನೆ." "ತಾಯಿ?" "ಮುದಿ ಗೊಡ್ಡು ಯಾರಿಗೆ ಬೇಕು? ನಷ್ಟ ತುಂಬಿಸುವದು ನಿನಗಾಗಿ. ಇತ್ಯರ್ಥವಾಗಲೆಂದನು. ಮನೆಗೆ ಹೋಗುವಂತಿಲ್ಲ. ಹಣ ತುಂಬಿಸಲು ಸಾಧ್ಯವಿಲ್ಲ. ಅಂತಹ ಸ್ಥಿತಿಯಲ್ಲಿ ಆಕೆಯನ್ನು ಈ ನವೀನ ನರಕಾಸುರನು ತನ್ನ ಮನೆಗೆ ಅಸಹಕರಿಸಿಕೊಂಡು ಹೋದನು.

ಇತ್ತ ಮಗಳು ಬಾರದುದನ್ನು ಕಂಡ ಹೆತ್ತವರಳು ಮರುಗಿತು. ಪೋಲೀಸರಲ್ಲಿ ಆಕೆ ದೂರಿತ್ತಳು. ತಾವು ನ್ಯಾಯಕ್ಕಾಗಿಯೇ ಇರುವವರೆಂಬಂತೆ ಅಲ್ಲಿನ ಪೋಲೀಸರು ವರ್ತಿಸಿದರು. ಪರಮೇಶ್ವರಿಯನ್ನು ಗುಲಾಂ ರಸೂಲನನ್ನೂ ಕರೆಯಿಸಿ,ಕಛೇರಿಯಲ್ಲಿ ಕೂರಿಸಿದರು. ಪರಮೇಶ್ವರಿ ಅಪ್ರಬುದ್ಧಯಿರುವ ಕಾರಣ ಆಕೆಯನ್ನು ತನ್ನ ಗೊಪ್ಪಿಸಬೇಕೆಂಬುದು ತಾಯಿಯ ಬೇಡಿಕೆ. ಆಕ ಅಪ್ರಾಪ್ತ ವಯಸ್ಕಳೆಂಬುದನ್ನು ಹೇಗೆ ನಿರೂಪಿಸುವದು? ಆಕಯು ಶಾಲಾ ದಾಖಲೆ ಪತ್ರಗಳನ್ನು ಪರಿಶೀಲಿಸಿದಾಗ ಅದು ಸತ್ಯವೆಂಬುದು ಗೊತ್ತಾಯಿತು. ಆದಕ್ಕಾಗಿ ಈ ನಾಟಕದವಿಸರ್ಜನೆಗಾಗಲಿಲ್ಲ. ಆದುದರಿಂದಮುಂದಿನ ದೃಶ್ಯ ಸಿದ್ಧತೆಯಾಯಿತು. ಒರ್ವ ಡಾಕ್ಟರರನ್ನು ಕರೆಯಿಸಿ ಅವಳಿಗೆ ಇಪ್ಪತ್ತು ವರ್ಷವೆಂದು ಪತ್ರವನ್ನು ತೆಗೆದುಕೊಳ್ಳಲಾಯಿತು. ಇದು ಅನ್ಯಾಯ ಇರುವ ಕಾರಣ ನ್ಯಾಯಾಲಯಕ್ಕೆ ಹೋಗುವದಾಗಿಯೂ, ನ್ಯಾಯಾಲಯ ತೀರ್ಪು ಕೊಡುವವರೆಗೆ ಆಕೆಯನ್ನು ಅನಾಥಾಲಯದಲ್ಲಿಡಬೇಕೆಂದು ಮತೆ ಮೊರೆ ಇಟ್ಟಳು. ಆದಕ್ಕೆ ತಿರಿಕೊಡುವವರ್ಯಾರು? ಪೋಲೀಸ್ ನಿಲ್ಯಾಣದಲ್ಲಿ ಪರಮೇಶ್ವರಿ ಇದ್ದಾಗ ಅವಳಿದ್ದಲ್ಲಿಗೆ ತಾಯಿಯನ್ನು ಹೋಗಲು ಬಿಡಲಿಲ್ಲ. ಆದರೆ ಗುಲಾಂ ರಸೂಲನ ಸಂಬಂಧಿಕರು ಇಂದು ಮಾತಾಡಿ (ಬೆದರಿಸಿ?) ಹೋಗುತ್ತಿದ್ದರು. ಆಕ ವಯಸ್ಕಳೆಂದು ಮಹಿಳಾ ಡಾಕ್ಟರ್ ಪತ್ರ ಕೊಟ್ಟಿರುವದಾಗಿ ಸರಕಾರ ಹೇಳಿದೆಯಾದರೂ, ನಿಜವಾಗಿ ಪರೀಕ್ಷೆಯು ನಾಟಕದಲ್ಲಿ ಪಾತ್ರವಹಿಸಿದವನು ಗಂಡನೊಬ್ಬನು. ಡಾಕ್ಟರರ ಪತ್ರದ ಮೇಲೆ ಸರಕಾರವು ಯಾರನ್ನಾದರೂ ಉದ್ಯೋಗಕ್ಕೆ ತೆಗೆದುಕೊಳ್ಳುತ್ತದೆಯೆ? ವ.ತ್ತೇಕ ಈ ನಾಟಕ?

ಶ್ರೀಮತಿ ಶ್ಯಾಮಾ ಹಾಧಿ ಸಿಂಘೆರ ಸೀರೆಯನ್ನು ನರಕಾಸುರ ವರ್ಗ ಸೆಳೆಯಿತು, ಕರ್ನಾಟಕದಿಂದ ಹೋಗಿದ್ದ ವೀಣಾ ಕುಮಾರಿಯ ಮೇಲೂ ಬಲಪ್ರಯೋಗ ಪಡೆಸಿದರು.

ಇಂದು ಅಂಗಡಿಯಲ್ಲಿದ್ದ ಅಂಗನೆ ರಾಗೆ, ನಾಳೆ ಆಂಗಳದಲ್ಲಿರುವ ಆಕೆ, ಆ ಮೇಲೆ ಅಗಳ ಹಾಕಿಕೊಂಡಿದ್ದರೂ ಒಳಗಿನ್ನಿ ಅಲ್ಲಿರುವವರನ್ನು ಕೊಂಡೊಯ್ಯಲಾ ದೀತೆನ್ನುವದನ್ನವರು ಸ್ಪಷ್ಟ ಪಡಿಸಿದರು. ಕಾಶ್ಮೀರದ ಹಿಂದೂಗಳಲ್ಲಿ ಕೆಲವರು ಎಚ್ಚೆತ್ತರು. ಮಂತ್ರಿಗಳನ್ನು ಕಂಡರು. ಸತ್ಯಾಗ್ರಹ ಹೂಡಿದರು. ಹುಂಡನ್ನೆದುರಿಸಿದರು. ಪ್ರಯೋಜನ? ದಿಲ್ಲಿ ದೊರೆಗಳ ದರ್ಬಾರಿನಿಂದ ಹೊರಗೆ ಬರಲಿಲ್ಲ. ವಿಹಿಂಪೆಯ ಮುನ್ನದ ನೋವು ವಿ.ಹಿಂಪೆಗೆ ಅರ್ಥವಾಗಬೇಕಾಗಿತ್ತು. ಆದರೆ ಶ್ರೀಮತಿ ಇಂದಿರಾ ಗಾಂಧಿಯವರು ಪರಮೇಶ್ವರಿಯನ್ನಾಕೆಯು ತಾಯಿಗೊಪ್ಪಿಸಲು ಹೇಳುವದು ಹಾಗಿರಲಿ, ಮರುಗುತ್ತಿರುವ ಮೂಪೆಗೆ ಒಂದು ಸಾಂತ್ವನ ಪರ ಮಾತನ್ನಾ ಆಡಲಿಲ್ಲ. ಆಕೆಯನ್ನು ಶ್ರೀಮತಿಜೀಯವರು ಕಂಡು ಸಂತೈಸುತ್ತಿದ್ದಲ್ಲಿ ಕಾಶ್ಮೀರದಲ್ಲಿ ಕಾಳ್ಗಿಚ್ಚು ಹಬ್ಬುತ್ತಿರಲಿಲ್ಲ. ಬಡ ಜನತೆಯ ಪತ್ರಣ ಹಂತಿಯೂಗುತ್ತಿರಲಿಲ್ಲ. ಎಲ್ಲವೂ ಶಾಂತಿವಾಗಿ ಮುಗಿಯುತ್ತಿತ್ತು. ಮಸೀದಿಯಲ್ಲಿದ್ದ ಒಂದು ಕೂದಲು ರಾಜೆಪೂಯ್ತೆಂದೊಡನೆ ಅದು ಮನಃ ಅಲ್ಲಿಯೇ ಬಂದಿರುವವರೆಗೂ ದಿಲ್ಲಿ ದೊರೆಗಳು ಉಸಿರು ಬಿಟ್ಟುಂಲಿಲ್ಲ. ಅದೇ ಸಮಯದಲ್ಲಿ ಹಿಂದೂಗಳ ದೇವಸ್ಥಾನದಿಂದ ಮೂರ್ತಿಗಳು ರಾಜೆಪೂಯಿರುವದನ್ನು ಕಂಡು ಹಿಡಿಯಲು ಅದನ್ನು ಮಾಡಿದೆಂಬುದೂ ಹಾಗಿರಲಿ, ಒಂದು ಮನೆಯ ಜೀವಂತ ಮೂರ್ತಿ ರಾಜೆಪೂಯಿದಾಗ ಅದನ್ನು "ನೈಜ "ಒಡೆಯನ"ಬಳಿ ಒಪ್ಪಿಸಲು ಈ ಸರಕಾರ ಸಿದ್ಧವಿಲ್ಲ! ವಾಕಸ್ಥಾನತ್ವ ಇಗರ್ಜಿಗಳ ಮೇಲೆ ಗುಂಡು ಹಾಕಿದಾಗ, ಅನಂತರ ಇದೀದ ಅರಬ-ಇಸ್ರೇಲ್ ಯುದ್ಧದ ನೆನೆನದಿಂದ ಮತೀಯ ಗೂಂಡಾಗಳು ಇಡೀ

ಜ್ಞರಗಳನ್ನು ಕೆಡವಿದಾಗ ಅವನ್ನು ಸರಿಪಡಿಸಲು ಅತ್ಯಂತ ತ್ವರಿತ ಗತಿಯಿಂದ ಮುಂದೆ ಬಂದೆ ಸರಕಾರ, ಶಾಂತ ಮನೆಯೊಂದನ್ನು ನರಕಾಸುರನು ನಾಶ ಮಾಡಿದಾಗ ಅದನ್ನು ಸರಿಪಡಿಸಲು ಮುಂದಕ್ಕೆ ಬರಲಿಲ್ಲ? ಕಾರಣವೇನು—ಆ ಮನೆ ಮಹಮ್ಮದೀಯರದ್ದಲ್ಲ, ಕ್ರಿಶ್ಚಿಯರದ್ದಲ್ಲ—ಹೇಡಿ ಹಿಂದೂಗಳದ್ದು. ಅದನ್ನು ಉಳಿಸಿದರೇನು, ನಾಶ ಮಾಡಿದರೇನು! ನವೀನ ನರಕಾಸುರನು ಪರಮೇಶ್ವರಿಯನ್ನು ಪೋಲೀಸರೆದುರಿಗೆನೇ ಕೊಂಡೊಯ್ದನು.

ಕೆಲವರಲ್ಲಾದರೂ ಕೆಚ್ಚಿನ ಕಿಡಿ ಇರುತ್ತದೆಯಲ್ಲವೇ? ಅವರೆಂತು ಮೌನ ಪ್ರೇಕ್ಷಕರಾಗಿ ಉಳಿದಾರು? ಅವರು ಸತ್ಯಾಗ್ರಹ, ನ್ಯಾಯಾಲಯ.....ನ್ಯಾಯ ಬೇಡಿಕೆಗೆ ಮುಂದಾದರು. ಒಡನೆ ನವೀನ ನರಕಾಸುರರು ಅವರ ಮೇಲೆ ಅತ್ಯಾಚಾರಕ್ಕೆ ಮುಂದಾದರು. ಹಿಂದೂಗಳ ಮನೆ-ಮರಗಳಿಗೆ ಬೆಂಕಿ ಇಟ್ಟರು. ಸರಕಾರದ ದಮನ ಚಕ್ರವೂ ಕೆಲವರನ್ನು ಬಲಿ ತೆಗೆದುಕೊಂಡಿತು. ನರಕಾಸುರನ ದರ್ಬಾರಿನಲ್ಲಿ ಮಾನವರ ನೊರೆಗೆ ಮೌಲ್ಯವಿದೆ ಏನು? ಶ್ರೀ ಚವಾಣರು ಸ್ವಲ್ಪ ಚಡಪಡಿಸಿ, ಕಾಶ್ಮೀರಕ್ಕೆ ಬಂದು ಹಿಂದೂಗಳನ್ನು ಸಂತೈಸಲು ಪ್ರಯತ್ನಿಸಿದರು.

ಹೇಡಿ ಹಿಂದುಗಳ ಹಾಗೂ ದಿಲ್ಲಿ ದೊರೆಗಳ ಸುಸ್ತಾದಾಳವನ್ನು ಅರಿತುಕೊಂಡಿರುವ ನವೀನ ನರಕಾಸುರರ ವರ್ಗ ಬೊಕ್ಕೆಯ ಮೇಲೆ ಬರೆಯನ್ನೆಳೆದು ತಿಸಿಕಿಸಿ ನಗಾಡಿತು. ಇಲ್ಲಿ ಸತ್ಯಾಗ್ರಹಾದಿಗಳು ನಡೆಯಬೇಕಿದ್ದಂತೆ ರಿಯಾಸಿಯ ಸಹೋದರಿ ಅಂಗಡಿಯಾಳ್ಳಿ ಉದ್ಯೋಗಕ್ಕೆರುವ ಮಹಮ್ಮದ್ ಕಾಸೀಮನು ಹಿಂದೂ ಹುಡುಗಿಯೊಬ್ಬಳನ್ನು ಅಪಹರಿಸಿಕೊಂಡು ಹೋದನು. ಶ್ರೀ ಚವಾಣರು (ಭಾರತದ ಗೃಹ ಮಂತ್ರಿ) ಕಾಶ್ಮೀರದಲ್ಲಿ ಸತ್ಯಾಗ್ರಹಿಗಳಿಗೆ ಒಂದು ಮಾತು ಕೊಟ್ಟಿದ್ದರು—ಹತ್ತು ದಿನಗಳೊಳಗೆ ಕುವರಿ ಪರಮೇಶ್ವರಿಯನ್ನು ನ್ಯಾಯಾಲಯದ ತೀರ್ಪು ಬರುವವರೆಗೆ ಮೂರನೇಯವರ ಖಲಿ ಒಪ್ಪಿಸುವದಾಗಿ ಹೇಳಿದ್ದರು. ಪರಮೇಶ್ವರಿಯನ್ನು ಒಪ್ಪಿಸುವ ಬದಲು "ಏನು ಮಾಡುತ್ತೀರಿ, ನೋಡೋಣ"ವೆಂದು ನರಕಾಸುರರು ನಾರಿಯರನ್ನು ತಮ್ಮ ನರಕಕ್ಕೆ ಕೊಂಡೊಯ್ಯುತ್ತಿದ್ದಾರೆ? ಗೃಹ ಮಂತ್ರಿಯವರ ಆಶ್ವಾಸನೆಯು ಕಾಶ್ಮೀರದ ಶೀತಲ ಹಿಮದ ಡಬ್ಬಿಯಲ್ಲಿ ಹುದುಗಿ ಹೋಯಿತು. ಹಿಡಿ ಹಿಂದೂಗಳಲ್ಲಾದರೂ ಉಂಟಾದ ಜಾಗೃತಿಯ ಕಿಡಿಯೂ ಆ ಮಂಜಿನಲ್ಲಿ ಶೀತಲವಾಗಿ ಹೋಯಿತು. ಮತೀಯ ನವೀನ ನರಕಾಸುರ ವರ್ಗಕ್ಕೆ ಕೈ ಬೆರಳೆಣಿಸಬಹುದಾದ ಸಂಖ್ಯೆಯಲ್ಲಿಲ್ಲ. ಹಿಂದೂಗಳು ಮಾಡುವದಾದರೂ ಏನು? ಮಾನ ಬೇಕಾದಲ್ಲಿ ಹೇಡಿಗಳಂತೆ ಓಡಿ ಬರಬೇಕು. ಇಲ್ಲವೇ ಹುತಾತ್ಮರಾಗಬೇಕು. ದಮನ ಚಕ್ರ ಅವರನ್ನು ಮಾತ್ರ ಅಟ್ಟಿಸಿಕೊಂಡು ಬರುವದಿಲ್ಲ. ಪೃಥ್ವಿರಾಜನನ್ನು ಬಲಿ ತೆಗೆದುಕೊಂಡವರು ಜಯಚಂದನನ್ನು ಬಲಿ ತೆಗೆದುಕೊಳ್ಳದೆ ಬಿಡುವದಿಲ್ಲ.

ಗುಲಾಮ ರಸೂಲನ ರಾದ್ಧಾಂತ ನಡೆವದ್ದು ಆಗೋತ್ಸವನ ಆರಂಭದ್ದು. ದೀವಾಳಿಯು ಸಮಯು ಹಲವರು ಇದನ್ನು ಮರೆತಿರಬಹುದು. ಅಂತೆಯೇ, ಶ್ರೀ ಚವಾಣ ರಿಗೆ ಆಶ್ವಾಸನೆ ಕೊಡುತ್ತಾ ಆದರೆ ಮತೀಯ

ಅನುಕಂಪೆ—ನ್ಯಾಯಗಳ ಪ್ರತಿಪಾದಕೆ

ಪಂಡಿತ ನೆಹರು

ಪ್ರಜಾಪ್ರಭುತ್ವ ಪ್ರತಿಯೊಬ್ಬ ಪ್ರಜೆಯು ಆಗು ಹೋಗುಗಳ ಬಗ್ಗೆ ವಿಚಾರಿಸುತ್ತಿರಾಸ್ಪದ ಹಿತ ಚಿಂತನೆಯಲ್ಲಿ ತೊಡಗುತ್ತದೆ. ಪ್ರಜಾ ಪ್ರಭುತ್ವಕ್ಕೆ ವ್ಯಕ್ತಿಗತ ವಿಚಾರಿಸುವ ಶಕ್ತಿಯಿದೆ. ಪ್ರಜಾಪ್ರಭುತ್ವದ ಬಗ್ಗೆ ನೆಹರುರವರ ಅಸ್ಥೆಯಿಪ್ಪು ಎಂಬುದು ಎಲ್ಲರಿಗೂ ಗೊತ್ತು. ಅವರು ಸ್ವತ್ತೆಂದು ನೋಡಬೇಕು.

ಕ್ತಿ ಸ್ವಾತಂತ್ರ್ಯದಲ್ಲಿ ಆಸಕ್ತಿಯುಳ್ಳವರಾಗಿದ್ದರು. ವ್ಯಕ್ತಿಯು ಮುಂದೆ ಬಂದು ಟೀಕಿಸುವ ಅಧಿಕಾರ ಹೊಂದಿದ್ದಾನೆಂಬುದು ಅವರ ಅಚಲ ವಿಶ್ವಾಸ. ಪಾರ್ಲಿಮೆಂಟರಿ ಪದ್ಧತಿಯ ಸರಕಾರ, ಅನಿರ್ಬಂಧ ಪತ್ರಿಕೋದ್ಯಮ ಮತ್ತು ಕಾನೂನು ಎಲ್ಲರನ್ನೂ ಬಂಧಿಸುತ್ತದೆ ಎಂಬ ತತ್ವವನ್ನು ಎತ್ತಿ ಹಿಡಿಯುವ ಸ್ವತಂತ್ರ ನ್ಯಾಯಾಂಗಗಳಲ್ಲಿ ನೆಹರೂರವರಿಗೆ ಅಪಾರ ಶ್ರದ್ಧೆ.

ರಾಜಕೀಯವು ಅಧಿಕಾರ ಗ್ರಹಣಕ್ಕೆ ಸಂಬಂಧಿಸಿದೆ; ಪ್ರಜಾಪ್ರಭುತ್ವ ಪದ್ಧತಿಯು ಅಧಿಕಾರವನ್ನು ಹೇಗೆ ಉಪಯೋಗಿಸಬೇಕು; ನಿಯಮಿತಗೊಳಿಸಬೇಕು ಎಂಬುದನ್ನು ವಿವೇಚಿಸುತ್ತದೆ. ಪಂಡಿತಜಿಯವರ ಹಿರಿತನೇಳು ವರ್ಷ ಕಾಲದ ಪ್ರಧಾನಿ ಪಟ್ಟದಲ್ಲಿ ಭಾರತೀಯರು ಪರಿಪೂರ್ಣ ಸ್ವಾತಂತ್ರ್ಯ ಗಳಿಸಿದ ವೌರರಾಗಿದ್ದಾರೆಯೆ? ತಮ್ಮ ಅಧೀನ ಜನತೆಯನ್ನು ಸಹೋದ್ಯೋಗಿಗಳೆಂದೂ ತಮ್ಮ ಅನುಯಾಯಿಗಳನ್ನು ಸಹಕಾರಿಗಳೆಂದೂ ಮಾಡಿಕೊಳ್ಳಲು ನೆಹರು ಶಕ್ತರಾಗಿದ್ದರೆ?

ಪ್ರಜಾಸತ್ತೆಯೆಂದರೆ ಬಿರಿಯ ಮೂಲ ಭೂತ ಹಕ್ಕುಗಳಲ್ಲಿ-ಸ್ವಾತಂತ್ರ್ಯ ಘೋಷಣೆಗೆ ಅರ್ಥವಿಲ್ಲ. ಸಜೀವ ಸಂವಿಧಾನವಾಗಿಲ್ಲ. ಪಕ್ಷಗಳು ಸ್ವತಂತ್ರ ಸಂಘ-ಸಂಸ್ಥೆಗಳೂ ಪ್ರಜಾತಂತ್ರಕ್ಕೆ ಸಂಬಂಧಿಸಿದೆ. ನೆಹರೂ ಸಂಪುಟದ ಸದಸ್ಯರು ಅವರ ಸಹೋದ್ಯೋಗಿಗಳಾಗಿದ್ದರೆ? ಅವರ ಅನುಯಾಯಿಗಳು ಜತೆ ಕಾರ್ಯಕರ್ತರಾಗಿದ್ದರೆ? ಇದಕ್ಕೆ ಪಂಡಿತಜೀ ಮತ್ತು ಅವರ ಪಕ್ಷ ಕಾಂಗ್ರೆಸ್‌ಗಳ ಸಂಬಂಧ ಹೇಗಿದೆ ಎಂಬುದನ್ನು ನೋಡಬೇಕು.

ಪ್ರಜಾಪ್ರಭುತ್ವ ಪಕ್ಷಗಳ ಸಂಬಂಧ ಪಡೆದಿರುತ್ತದೆ. ಪ್ರಜಾಪ್ರಭುತ್ವ ದಬ್ಬಾಳಿಕೆಯ ವಿರುದ್ಧ ನಂಬುಗೆ ಕೀಡಬಲ್ಲ ಚಿಕ್ಕ ದೊಡ್ಡ ಸ್ವತಂತ್ರ ಸಂಘ—ಸಂಸ್ಥೆಗಳ ಒಂದು ಸರಪಳಿ. ಸ್ವಾತಂತ್ರ್ಯ ಲಭ್ಯವಾದ ಮೇಲೆ ಉಳಿದಿಲ್ಲ ಸಂಸ್ಥೆಗಳ ಚಾರಿತ್ರ್ಯಾಪಹ ಕುರಿತಾಯಿತು; ಸರಕಾರವೇ ಒಂದು ಸಂಸ್ಥೆಯಾಗಿ ಭೀಮಾಕಾರ ಪಡೆದು ನವನ್ನು ದಂಗು ಬಡಿಸಿತು. ಮೂರ್ಖ ಮತ್ತು ಎಂಜಲುರು ತಮ್ಮ ಸಮಶಾವಾದದ ಘೋಷಣಾ ಪತ್ರದಲ್ಲಿ 'ಸರಕಾರ ಅಂದರೆ ಆಳುವ ಪಕ್ಷದ ಕಾರ್ಯ ನಿರ್ವಾಹಕ ಸಮಿತಿ' ಎಂದು ಬರೆದಿದ್ದಾರೆ, ಒಂದು ಪಕ್ಷದ ಮತ್ತು ವಿಶೇಷ ಸವಲತ್ತು ಪಡೆದ ಒಂದೇ ಸಮನೆ ಬೆಳೆಯುತ್ತಿರುವ ಸರಕಾರಿ ನೌಕರರ ಜಂಟೀ ಕಾರ್ಯ ನಿರ್ವಾಹಕ ಸಮಿತಿಯೂ ಸರಕಾರವು ಭಾರತದಲ್ಲಿ ಕೆಲಸ ಮಾಡುವ ಒಲವನ್ನು ತೋರಿಸಿದೆ. ಪಂಡಿತಜಿಯವರು ಇಂತಹ ಒಲವನ್ನು ಬಲಪಡಿಸಲು ನೆಹರು ಯತ್ನಿಸಿದ್ದರೆ?

ಒಂದು ದೇಶವು ತನ್ನ ಆರ್ಥಿಕ ಮತ್ತು ಸಾಮಾಜಿಕೋನ್ನತಿ ಯೋಜನೆಗಳನ್ನು ಕೈಗೊಳ್ಳುವಾಗ, ಸರಕಾರವೇ ನಿರ್ಣಯ ಮಾಡಿ, ಅಧಿಕಾರ ಚಲಾಯಿಸುವ ಮುಖ್ಯ ಕೇಂದ್ರವಾಗುವೆನು. ರಾಜಕೀಯ ನಾಯಕತ್ವದ ಬಾಹ್ಯ ವರಣವನ್ನು ಗಳಿಸಿದ ಮೇಲೆ, ಅದು ಒಬ್ಬ ಬಲಿಷ್ಠ ರಾಜಕಾರಣಿಯ ಕೈಯಲ್ಲಿ ಕೇಂದ್ರೀಕೃತವಾಗುತ್ತದೆ. ಇಂತಹ ನಾಯಕನು ಪ್ರಜಾಪ್ರಭುತ್ವ ಪದ್ಧತಿಗೆ ವ್ಯಕ್ತಿಗತವಾಗಿ ನಿಷ್ಠೆಯುಳ್ಳವನಾಗಿದ್ದರೆ, ಆವನ ಕಾಲಾವಧಿಯಲ್ಲಿ ಪ್ರಜಾಸತ್ತೆ ಸುರಕ್ಷಿತವಿರುತ್ತದೆ. ಆದರೆ, ಸರ್ವೋದ್ಯೋಗಿಗಳ ಸಂಘ ಸಂಸ್ಥೆಗಳ ಸರಪಳಿಯು ಪ್ರಜಾನತ್ತೆಯು ವಿನಾಸಗೊಳ್ಳಲೂ ಬದಲಾವಣೆ ಹೊಂದಲೂ ಅಸ್ಪದವಾಗುವಂತೆ ಕಾರ್ಯಮಗ್ನವಾಗಬೇಕು.

ಪಂಡಿತ ನೆಹರು ತಮ್ಮ ಸಮಕಾಲೀನರಲ್ಲಿ ಅಗಾಧ ಜನಪ್ರಿಯ ಬೃಹತ್ ವ್ಯಕ್ತಿಯಾಗಿದ್ದರು. ಬ್ರಿಟಿಷರು ಬಿಟ್ಟು ಹೋದ ಭಾರತೀಯ ಪ್ರಜಾಪ್ರಭುತ್ವಕ್ಕೆ—ವಿಶೇಷವಾದ ದರಿದ್ರ ಜನರದಕ್ಕೆ—ಕೂಡಲೇ ಹೆಸರಿಡಿಕೆಯಾಗುವ ರೀತಿಯಲ್ಲಿ ಏನಾದರೂ ಕೊಡುವನ್ನು ಕೊಡಲು ನೆಹರು ಶಕ್ತರಾದರೆ?

ಬಹಳಷ್ಟು ಸಮಯ ಅಧಿಕಾರ ಚಲಾಯಿಸಿ ಪ್ರಜಾಪ್ರಭುತ್ವವನ್ನು ಓಜಸ್ಸಿನಿಂದ ಅಳವಡಿಸಿಕೊಂಡ ಜನರನ್ನು, ಸಂಘ-ಸಂಸ್ಥೆಗಳನ್ನು ಬಿಟ್ಟು ಹೋಗುವ ಸಂಗತಿ ಅತ್ಯಂತ ಶೋಚನೀಯವಾದದ್ದು. ಆದರೆಲ್ಲಾ ಭಾರತದ ಕೋಮುವಾದ ಪರಂಪರೆ, ತೀಕ್ಷ್ಣ ಆರ್ಥಿಕ ವಿಷಮತೆ, ಜಮ್ಮು ನ್ಯಾಂ ಸಂಬಂಧ ಮೊದಲಾದುವು ನಿರಂಕುಶ ಪ್ರಭುತ್ವಕ್ಕೆ ದಾರಿ ಮಾಡಿ ಕೊಡುತ್ತಿದ್ದುವೆಂಬುದು ಸತ್ಯ.

ಪಂಡಿತ ನೆಹರುರವರನ್ನು ಆಳಿಯುವಾಗ ನಾವು ಇವನ್ನೆಲ್ಲ ನೆನೆಪಿಡಬೇಕು. ಅವರ ಸಮಕಾಲೀನ ಲೇಖಕಿಯೊಬ್ಬಳು ಹೀಗೆ ಬರೆಯುತ್ತಾನೆ—ಪಂಡಿತಜಿಯವರ ಸುತ್ತ ಶಬ್ದಾಡಂಬರದ ಜಾಲ ಹರಡಿದೆ. ಅಲ್ಪ ವಿಚಾರಗಳು ಮುಖ್ಯ ವಿಷಯಗಳಾಗಿ ಪರಿಗಣಿತವಾಗಿದೆ. ನಿರುದ್ಯೋಗ, ಭಿಕ್ಷೆ, ಸಂದಿಗ್ಧತೆಗಳು ಅವರ ಕುರ್ಚಿ ಹಾನೆದು ಕೊಂಡಿವೆ. ಮಾಮಸ್ಥಿತಿ ಮನಸ್ಸು ಒಪ್ಪಿಗೆಯ ಆಕಾರಕೆಗಳನ್ನೂ ಇತಿಗಳಿಂದಿಗೆ ಸೇರಿಸಬಹುದು. ಇಂತಹ ವಾತಾವರಣದಲ್ಲಿ ಪಂಡಿತಜಿಯವರ ಪ್ರಜಾಪ್ರಭುತ್ವ ಪದ್ಧತಿಯ ಬಗ್ಗಿನ ದೃಷ್ಟಿ ಒಂದು ದಾರ್ಢ್ಯವಿಲ್ಲ ಸಾವಿರ ತಾರೆಯಂತೆ ಹೊಳೆಯುತ್ತದೆ. ಆವಾರ ಅಧಿಕಾರ ಅವರು ಉಡಿದುಳ್ಳಿ ಬಿದ್ದಿತ್ತು. ಅವರನ್ನು ಅನಾವರ್ತಸುವಲ್ಲಿ ಸುತ್ತ ಮುತ್ತಲಿನವೆಲ್ಲ ಬೂಟಾಕಾಲಕ್ಕೂ ಸಿದ್ಧರಿದ್ದರು. ಆದಾಗ್ಯೂ ಅವರು ಪ್ರಜಾಪ್ರಭುತ್ವದ ಭಾವನೆಗಳನ್ನೂ ಸಿದ್ಧಾಂತಗಳನ್ನೂ ಉಳಿಸಿಕೊಂಡು ಬಂದರು.

ನಾವು ನೆಹರೂ ಯುಗದಲ್ಲಿ ಜೀವಿಸಿದ್ದೇವೆ. ಭವ್ಯ ಬದುಕು ಧನ್ಯವಿಗಿದೆ. ಅನುಕಂಪ ಮತ್ತು ನ್ಯಾಯ— ಈ ವಿಶೇಷ ಗುಣಗಳಿಗಾಗಿ ನಾವು ಪಂಡಿತಜಿಯವರಿಗೆ ಋಣಿಗಳು. ಈ ವಿಶಿಷ್ಟ ಗುಣಗಳು ಎಲ್ಲಿ ಪೂಜಿಸಲ್ಪಡುವುದಿಲ್ಲವೋ ಆ ದೇಶದಲ್ಲಿ ಪ್ರಜಾಸತ್ತೆ ಬದುಕಲಾರದು.

READ & ADVERTISE IN NAVAYUGA WEEKLY

ನವೀನ ನರಕಾಸುರರಿಗೆ ಇದು ಬೇಕಾಗಿಲ್ಲ. ಅವರಿಗೆ ಕಾಳ್ಗಿಚ್ಚಿನ ಕಿಡಿಯನ್ನು ಸರ್ವಥಾ ಉರಿಸುತ್ತಿರಲೇ ಬೇಕಾಗಿದೆ. ಹಿಂದೂಗಳಿಗೆ ಎಚ್ಚೆತ್ತಿನ ಕಿಡಿಯನ್ನು ಮಾಡಿಸಬೇಕಾಗಿದೆ. ಅವರ ಅಭಿಲಾಷೆ. ಅವರಿಗೆ ಬಟಾಕೆ-ಸಿಡಿಮದ್ದುಗಳ ಧಾಂಧೂಂ ಅಲ್ಲ, ಸಿಡಿದುಂಡುಗಳ ಅರ್ಘಟವೇ ಅಗತ್ಯವೆಂಬುದು ಅವರ ಆಸೆ. ಅದಕ್ಕೆಂದೇ ಅವರು ಹಿಂದೂ ಹೆಂಗಳೆಯರನ್ನು ಕದ್ದು ವಾಕಿಸ್ತಾನಕ್ಕೆ ಕಳುಹಿಸುತ್ತಿದ್ದಾರೆ. ಇದರಲ್ಲಿ ಮಾದುಳೆಯಾದವರೂ ಇದ್ದಾರೆ. ಪಾಪ! ಅವರ ಗಂಡಂದಿರು ಅವರನ್ನು ಹುಡುಕಿಕೊಂಡು ದಿಲ್ಲಿಗೆ ಬರುತ್ತಿದ್ದಾರೆ! ಅಂತಹ ಅಪಹರಣದ ವಿಷಯ ಲೋಕ ಸಭೆಯಲ್ಲೂ ಕೇಳಿ ಬಂಸರು ಕ್ಷಪೆ.

ಇದನ್ನು ತಡವಾಲು ಕಾಶ್ಮೀರ ಸರಕಾರ ಮಾಗೂ ಭಾರತ ಸರಕಾರ ಅದೇನು ಮಾಡುತ್ತಿದೆ? ಅಪಹರಿಸಲ್ಪಟ್ಟವರನ್ನು ಅವರವರ ರಕ್ಷಿಗಳಿಗೆ ಒಪ್ಪಿಸಲು ಪ್ರಯತ್ನವಾದರೂ ನಡೆದಿದೆಯೇ? ಪರಮೇಶ್ವರಿಯಂತಹವರು ಮತೀಯ ನವೀನ ನರಕಾಸುರ ನರಕದಲ್ಲಿ ಕೊಳೆಯುತ್ತಿರುವಾಗ ದೇಶದ್ರೋಹಿ ಅಬ್ದುಲ್ಲನ "ಬಿಡುಗಡೆ"ಗೆ ದಿಲ್ಲಿಯಲ್ಲಿ ಸಿದ್ಧತೆ ನಡೆಯುತ್ತಿದೆ! ತೀರ್ಪು ಅಬ್ದುಲ್ಲನ ಬಂಧನ ಗೃಹವಾಸ

ನಗೆ ಮಲ್ಲಿಗೆ

ಸೈಕಿಯಾಟ್ರಿಸ್ಟ್ ಡಿಸ್ಪೆನ್ಸರಿಯಲ್ಲಿ ಹಿರಿಗೆಗೆ ಬಂದ ಒಬ್ಬ ಭೂಡನೆ ಡಾಕ್ಟರ್ 150ರೂ ಫ್ಯಾ ಫೀಸು ಕೇಳಿದ.

'ನೀನಲ್ಲವೆ? 75ರೂಪ್ಯಾ ಅಂತ ಹೇಳಿದ್ದು?' ಎಂದು ಪುಶ್ನಿಸಿದಳವಳು.

"ಆದರೆ, ಹೆಶ್ಶಗ್ದು ಎರಡನ್ನಲ್ಲವೆ?" ಎಂದರು ಡಾಕ್ಟರ್.

ಂ ಂ ಂ

ಸಾಹಿತಿ: ನಾನು ಹೊಸತಾಗಿ ಪ್ರಕಟಿಸಿದ ಕಾದಂಬರಿಯ ಬಗ್ಗೆ ನಿನ್ನ ಅಭಿಪ್ರಾಯವೇನು?

'ಅಭಿಪ್ರಾಯ ಎರಡಿದೆ: ಓದಬೇಕೋ, ಬೇಡವೋ ಅಂತ!'

ಂ ಂ ಂ

ಒಬ್ಬ: ನಾನು ನನ್ನ ಪತ್ನಿಯನ್ನು ಮೆಚ್ಚದಿದ್ದರೂ ಅವಳ 'ಫೋಟೋ' ಮೆಚ್ಚುತ್ತೇನೆ. ಏಕೆಂದರೆ ಫೋಟೋ ನನ್ನೆದ್ದು ಜಗಳಕ್ಕೆ ಬರುವುದಿಲ್ಲ.

ಂ ಂ ಂ

ಸ್ತ್ರೀಯೆಂದರೆ ಒಂದು 'ಸ್ವಪ್ನ'ನಷ್ಟೆ. ಮದುವೆಯಾಗುವ ಮುಂಚೆ ಸುಂದರ ಸ್ವಪ್ನ; ಆದ ಮೇಲೆ ಭೀಕರ ಸ್ವಪ್ನ.

ಂ ಂ ಂ

ತಾಯಿ: ಏನೇ ಇದು ನಾಲ್ಕೈದು ಶಾರ್ಟಾನ್ ಪೇಪರ್ ಇಟ್ಟು ಬರಿಯುತ್ತಿರೋದು?

ಮಗ: ಮೊಸ್ಟ್ರು ಹೇಳಿದ್ದಾರೆ, ಪದ್ಯ ಬಾಯಿಪಾಠ ಮಾಡಲಿಕ್ಕೆ ಕನಿಷ್ಟ ಪಕ್ಷ ಐದು ಸರ್ತಿಯಾದರೂ ಬರೀಬೇಕೆಂದು ಅದಕ್ಕೆ...

ಂ ಂ ಂ

ಅಜ್ಜಿ: ಮಗನೇ, ಈಗ ರೇಡಿಯೋದಲ್ಲಿ "ನೋರ್ಮಲಾಂ' ಏನಿದೆ?

ಮಗ: ಈಗ ಸಮೂಪನೆ—

ಬಿಹಾರಿನ ಪುಸ್ತಕ ಭಂಡಾರ

(ಐದನೇ ಪುಟದಿಂದ)

ಲೈಬ್ರೇರಿಯನ್ನು ಬಿಟ್ಟು ಬೇರೆ ಕಡೆಗೆ ಹೋಗಬಾರದೆಂದು ವಿಧಿಸಿರುತ್ತದೆ. ಆದರೂ ರಾಜಗೀರಲ್ಲಿ ಕಿಂಗ್ ಜಾರ್ಜ್ ಮತ್ತು ಕ್ವೀನ್ ಮೇರಿಗಳಿಗೆ ಉತ್ತಮವಾದ ಚಿತ್ರ ಮತ್ತು ಸಾವರ್ಜನಿಕರಿಗೆ ಬರವಣಿಗೆ ಯನ್ನು ತೋರಿಸುವುದಕ್ಕಾಗಿ ಸಿರ್ ಡಾನಿ ಯಲ್ ಶಾಹನಾನು'ವನ್ನೂ ಬಾದಶಾಹ ವನ್ನೂ ದಿಲ್ಲಿಗೆ ತೆಗೆದುಕೊಂಡು ಬಂದಾಗ ಈ ನಿಯಮಕ್ಕೆ ಭಂಗವುಂ ಟಾಯಿತು.

ಶಸ್ತ್ರಪ್ರತಿಗಳಲ್ಲಿ ಆ ರಾಜಪ್ರಭುಪತಿ ಖಾನ್ಸಾರಿಗಳು ಮುಗಲ್ ಚಕ್ರವರ್ತಿ ಬಸಾತ್ಸಕ್ಷರಿಗಳಾಡನೆ ಆಗ ಸೇರಿ

ಬಿಹಾರ ಸರ್ಕಾರದ ಸ್ವಾತಕೋತ್ತರ ಅಧ್ಯಯನ ಮತ್ತು ಸಂಶೋಧನೆಯ ಸಂಸ್ಥೆಯು ಕೆಲವು ಅಪೂರ್ವ ಹಸ್ತಪ್ರತಿಗಳನ್ನು ಪ್ರಕಟಿಸುತ್ತಿದೆ. ಈಗಾಗಲೇ ಅವುಗಳಲ್ಲಿ ೧೧ ಪ್ರತಿಗಳು ಪ್ರಕಟಗೊಂಡಿವೆ.

(ಮೈಲ್ ಸಕ್ರಿಕೆಯ ತಾ. ೫—೨—೧೯೬೮ರ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ದೇವೀ ದಾಸ ಗುಪ್ತರ ಲೇಖನದ ಅನುವಾದ)

ಆಜ್ಞೆ: ಡಾಗಾದ್ರೆ ಅದು ಒಂದರ್ಧ ಘಂಟೆ ಇಟ್ಟಿಡು.

ಂ ಂ ಂ

"ಕೇಳಿದ್ಯಾ, ನಮ್ಮ ಶಾಗಪೆಗೆ ನಾಡಿದ್ದು ಮದ್ವೆ ಅಂತೆ— ಗಂಡ ಒಬ್ಬ 'ಎಕ್ಸ್ ರೇ—ಎಕ್ಸ್‌ಪರ್ಟ್' ಅಂತೆ..."

'ಚೆಲೋವಾಯ್ತು. ಆತನಿಗಾದರೂ ಅವಳಲ್ಲಿ ಒಂದು ಹೃದಯವಿದೆಯೆಂದು ತಿಳಿದೀತು!'

ಂ ಂ ಂ

ಅಬ್ರಹಾಂ ಲಿಂಕನ್ ತನ್ನ ವಿವಾಹ ದಿನದಂದು ಹೊಸ ಉಡುಪನ್ನು ಧರಿಸಿ ದೇವಾಲಯಕ್ಕೆ ಹೋಗುತ್ತಿರುವಾಗ ಒಬ್ಬ ಕೇಳಿದ- "ಎಲ್ಲಿಗೆ ಹೋಗುತ್ತಿರುವೆ?"

"ನರಕಕ್ಕೆ ಅಂತ ಕಾಣುತ್ತೆ" "ಲಿಂಕನ್ ಉತ್ತರವಿತ್ತ.

ಂ ಂ ಂ

"ಅಪ್ಪಾ ಇವೊತ್ತು ನಮ್ಮ ಶಾಲೇಲಿ ಒಬ್ಬ 'ಮೇಜಿಕ್ ಬಾಲಾ' ಐದು ರೂಪ್ಯಾ ನೋಟನ್ನು ನಿಮಿಷದಲ್ಲೆ ಇಸ್ಪೀಟು ಎಲೆ ಮಾಡಿ ಬಿಟ್ಟ."

"ಅದೇಕೆ ನಿನ್ನ ತಾಯಿ ನಿಮಿಷಾರ್ಧದಲ್ಲೆ ನೂರು ರೂಪ್ಯಾ ನೋಟನ್ನು ಸೀರೆ ಮಾಡ್ತಾಳಲ್ಲ!"

ಂ ಂ ಂ

ಪ್ರೊಫೆಸರ್: ನಾನಿಲ್ಲಿ ಇಲ್ಲವೆಂದು ನೀನೂ ಹೇಳಿದಿಯೂ?

ನೌಕರ: ನಾನು ಹೇಳಿದರೂ ಅವರು ನಂಬುವುದಿಲ್ಲ. ಆಲ್ಲಿ ನಿಂತಿದ್ದಾರೆ. ನೀನೇ ಹೋಗಿ ಒಮ್ಮೆ ಹೇಳಿರಂತೆ

ಂ ಂ

"ನಿಮಗೆ ಇನ್ಸೂರನ್ಸ್ ಪಾಲಿಸಿ ಇದೆಯೂ?"

"ಛೆ, ಛೆ, ಆದೆಲ್ಲಾ ಜನ ಹೊಟ್ಟೆಕಿಚ್ಚಿನಿಂದ ಹೇಳೋದು. ನನಗೆ ಶ್ವಲ್ಪ ಡಯಾಬಿಟೆಸ್‌ನ ಕೊಂದರೆ ಮಾತ್ರ ಇದೆ"

ಂ ಂ ಂ

ಅಧ್ಯಾಪಿಕೆ: ನಿನ್ನ ತಾಯಿ ಹೆಚ್ಚು ಏನು ಸುಗು?

"ಹೆಣ್ಣು..."

'ಆದರೆ ಬರುವ ಸಾರಿ ಗಂಡು ಮಗು ಹೆರಬಹುದು...."

'ಇಲ್ಲ.....ಇಲ್ಲ....ತಾಯಿಯೇ ಹೆರುವುದು....'

ಂ ಂ ಂ

ಆಬ್ಯುಮಿನಿಯಮ್ ಪಾತ್ರೆಯ ಅಂಗಡಿಯಲ್ಲಿ ನಿರಾಕೆ:

"ಈ ಅನ್ನ ಬೇಯಿಸುವ ಪಾತ್ರೆಗೇನು ಬೆಲೆ?"

"ನಾಲ್ಕು ರೂಪ್ಯಾ"

ಒಳ್ಳೆ ಪಂಚಾಯ್ತಿಕೆ!, ಕಳೆದ ಬಾರಿ ನಾನು ಇದನ್ನೆ ಒಂದು ರೂಪ್ಯಾಗೆ ಪಡಕೊಂಡಿದ್ದೆ...'

"ಆಕ್ಕೆಗೂ ಕಳೆದ ಬಾರಿಗಿಂತ ನಾಲ್ಕು ಪಾಲು ಹೆಚ್ಚು ಬೆಲೆಯಷ್ಟೆ ಈಗ?"

"ಆದರೆ ಕಳೆದ ವರ್ಷದ ಅರ್ಧವಷ್ಟೆ ಈಗ ಅಕ್ಕಿ ಸಿಗೋದು...."

ಆದರೆ ಕಳೆದ ವರ್ಷಕ್ಕಿಂತ ಅರ್ಧ ಪಾಲು ಸಣ್ಣ ಪಾತ್ರೆನೇ ತಗೊಳ್ಳಿ..."

—ಶ್ರೀ ಬಿ. ನರಸಿಂಗ ರಾವ್

"ಯಜಮಾನರಿದ್ದಾರೆಯೆ?"— ಎಲ್ಲಿಂದಲೋ ಬಂದ ಅಪರಿಚಿತನು ಕೆಲಸದವರನ್ನು ವಿಚಾರಿಸಿದ.

"ನೀವು ಯಾವ ಊರವರು? ಇಲ್ಲದಿರುತ್ತಿದ್ದರೆ ನಾವು ಈ ಬಿಸಿಲಲ್ಲಿ ಹಾರೆ, ಪಿಕ್ಕಾಸಿನಲ್ಲಿ ಕೆಲಸ ಮಾಡುತ್ತಿದ್ದೆವೆ?..'

ಂ ಂ ಂ

"ನೀವೀಗ ವಿವಾಹಿತ ಜೀವನವನ್ನು ಒಮ್ಮತದಿಂದ ಸಾಗಿಸುತ್ತಿರುವುದಾಗಿ ಕೇಳಿದೆ; ಸಂತೋಷ...."

"ದೊಡ್ಡ ಅಭಿಪ್ರಾಯ ವ್ಯತ್ಯಾಸಗಳೇನೂ ಇಲ್ಲ.... ಆದರೆ...."

"ಹೆಣ್ಣಂ...."

"ಒಂದು ಆಭಿಶ್ರಾಯದ ಬಗ್ಗೆ ಮಾತ್ರ ನೀ ನಿರ್ಧಾರಕ್ಕೀಗ ಬಾಕಿ."

"ಆದೇನು?..."

'ಈ ದಾಂಪತ್ಯ ಜೀವನ ಹೀಗೆಯೇ ಮುಂದರಿಯಬೇಕೇ? ಎಂದು"

ಂ ಂ ಂ

"ನಾಟಕ ಚೆನ್ನಾಗಿತ್ತು; ಆದರೆ ಪ್ರಣಯಕ್ಕೆ ಸಂಬಂಧಿಸಿದ ನಟನೆ ಕಳೆದ ವರ್ಷದಷ್ಟು ಉತ್ಕಮವಾಗಿರಲಿಲ್ಲ..."—ಮೇನೇಜರನೊಂದಿಗೆ ಸಂಭಾಷಣಾ ಮಧ್ಯೆ ಪ್ರೇಕ್ಷಕನೋರ್ವನ ಅಭಿಪ್ರಾಯ.

"ಇರಬಹುದು; ಕಳೆದ ವರ್ಷ ಆ ನಟ ನಟಿಯರು ಅವಿವಾಹಿತರಾಗಿದ್ದವರೀಗ ವಿವಾಹಿತರು...."

—ಎಚ್. ಎಂ. ವಿಜಯನಾರಾಯಣ

ಉದರ ನಿಮಿತ್ತ

ಹಕ್ಕಿಯು ರೆಕ್ಕೆನೆ ಹಾರಿತು ಹೋರಿತು
ಯಾರೊಡನಡರಾ ಕಾಳಗಾ?
ಆಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ
ಅರಿಗಳ ನೋರೆಸುವ ದಾಳಿಗಾ?
ಮೂಡಿಗೆ ಮಡುವಿಗೆ
ಹೆದ್ದಂ ಹೊದಂಗೆ ದಾರುವ ಸಾಹಸ
ವೇತಕೆ?
ಭಿತ್ತಿಯ ಪೊಟರೆಗೆ
ಗೂಡಿ ಗೊಮ್ಮಟರಿಂಗೆ ಸುತ್ತುವ ಸತ್ಕ್ರಿಯೆ
ದೂರಕೆ?
ತಂಗದಿರಿನ ಜೆಲು ಮಂದಿರ ಕಾಣಲು
ಪಾನೆತ್ತರಕದು ದಾರುವುದೆ?
ಪ್ರಕೃತಿ ರಾಣಿಯೂಕೃತಿ ಮತಿ
ಕಾಣಲು
ಕಾನ ತಾಣಕದು ಸಾರುವುದೆ?
ಭೂದೇವಿಯ ಜರಿವಸನದೊಲೊಪ್ಪುವ
ಕೈವಲದತ್ತದು ಚಲಿಸುವುದು
ಶಾಲಿಗಳೆತ್ತಿಂ ಕತ್ತಂ ಬಾಗಿಸಿ
ಕೈವಲ್ಯವನದು ಬಯಸುವುದೆ?
ನಾಮ ಬೀಜಯೆಣಲು ರೆಕ್ಕೆಯು
ರಿಸಿಯದ,
ಹಾಡುಪ ಏನನು ಬೇಡುವುದು?
ಯೂವ ಸುದ್ದಿ? ಮತ್ಸ್ಯವ ಸಿದ್ಧಿ?
ಪ್ರಶ್ನೆ—
—ಯೂಂಶಕ ಬಾದ್ಧಿಗೆ ಕಾಡುವುದು?!
ಸೌಂದರ್ಯದ ಸವಿ ಸ್ವಾದಫಕಲ್ಲ!
ಸರ್ವಂ ದೈವ ನಿವೇದನಕಲ್ಲ!
ಸರ್ವ ದುಃಖ ಸಂವೇದನಕಲ್ಲ!
ಗರ್ವದಿರದ ಮನ ಭೋದನಕಲ್ಲ!
ದೀನ ಬಲಿತ್ಯಾತ್ಮ ಪನೆಗಿಲ್ಲ!
ದಿವ್ಯ ಧರ್ಮ ಸಂನ್ಯಾಪನೆಗಲ್ಲ!
ಮತ್ಸ್ಯಕವರಾ ಕಾಳಗಾ!
ಹೊಟ್ಟೆಯು ಎಡೆಗೆ ಕಾಳಗಾ!
ಒಂದೇ ಮುಖ್ಯ ಯು ಶಾಳಗಾ!?
ಕೇಳುವೆಯೋ ಶ್ಲಾಘಿಸುವೆಯೋ?
ಬಯಕೃತ ವೇಷಂ ಉಸಿರ ನಿಯತ್ತ!!

—"ತ್ರಿಮೂರ್ತಿ"

ತಿದ್ದುಪಡಿ ಇದೇ ಕಳೆದ ದೀಪಾವಳಿ ಸಂಚಿಕೆಯ ಪದಸಂಪದದಲ್ಲಿ ಪ್ರಕಟವಾದ ನ್ಯೂ ವಿಜಾಕ್ಷಿ ಭವನದ ಪ್ರೊಪ್ರೈಟರ್ ಶ್ರೀ ಮಹಾಬಲ ರಾವ್ ಎಂಬುದನ್ನು ಎಂ. ಮಹಾಬಲ ರಾವ್ ಎಂದು ತಿದ್ದಿ ಓದಬೇಕಾಗಿ ವಿನಂತಿ. —ಸಂ.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಶ್ರೀ ಕೊಲ್ಲೂರು ಮೂಕಾಂಬಿಕಾ ಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ನಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಇಡ್ಯ ಶ್ರೀ ಮಹಾಲಿಂಗೇಶ್ವರ ದೇವಾಲಯ

(ನಾಲ್ಕನೇ ಪುಟದಿಂದ)

ತ್ತಾಪುರದ ವರೆಗೆ ಅಂದಿದ್ದು] ಚಿತ್ರಾಪುರದಿಂದ ಮುಂದೆ ಸಾಗಿ "ಕೊಲ್ಲಿಯ"(ಜೇಳ್ಳಾರು ಪಾವಂಜೆಯ ಹತ್ತಿರ) ತನಕ ಚಾಚಿತ್ತು! ಈ ಒಳದಾರಿ ಈಗಲೂ ಇದೆ. ಇ. 1398ರ ಚಿತ್ರಾಪುರದ ಶಾಸನದಂತೆ ಗೆ ರಾ ಮೇ ಶ್ವ ರ ಪ ಡೆ ಯ ಡು ವ್ ಜ ನ ರ ಉ ಲ್ಲೇ ಖ ವಿ ದೆ. ಈ ಶ್ರೀ ಚಿತ್ರಾಪುರದ ಶ್ರೀ ದುರ್ಗಾಲಯ ಮತ್ತು ಶ್ರೀ ಚಿತ್ರಾಪುರ ಮಠಗಳು ಶ್ರೀ ಮಧ್ವಾಚಾರ್ಯರಿಗಿಂತ ಹಿಂದಿನವು; ಇವು ಶ್ರೀ ಭಂಡಾರ ಕೇರಿ ಮಠ ಮತ್ತು ಶ್ರೀ ಸುಬ್ರಹ್ಮಣ್ಯ ಮಠಗಳಂತೆ ಪ್ರಾಚೀನ ಶೈವ ಕೇಂದ್ರಗಳಾಗಿದ್ದು, ಕ್ರಮೇಣ ಮಧ್ವ ಸಂಪ್ರದಾಯಕ್ಕೆ ಸೇರಿದ್ದುವೆಂದು ನನ್ನ ಬೇರೆ ಬರಹದಲ್ಲಿ ವಿವರಿಸಿದ್ದೇನೆ (ಶ್ರೀ ವಿಜಯಧ್ವಜಾಚಾರ್ಯರ ಪರಿಚಯ ನೋಡಿ) ಇಡ್ಯ ದೇವಾಲಯವೂ ಅಂತೆ, ಪ್ರಾಚೀನ ಕಾಳಾಮುಖಿ ಕೇಂದ್ರಗಳ್ಲೊಂದಾಗಿತ್ತೆಂದು ತೋರುತ್ತದೆ. ಇಲ್ಲೀಗ ಕೋಟ ವರ್ಗದ ಬ್ರಾಹ್ಮಣರು ದೇವರ ಅರ್ಚಕರಾಗಿದ್ದಾರೆ.

ಇಡ್ಯದೇವಳದಲ್ಲಿ "ಪಿಲಿಚಾಮುಂಡಿ" ದೈವದ ಆರಾಧನೆ ಜತೆಗೂಡಿದೆ. ಈ ದೇವಳದ ಈಶಾನ್ಯದ ಎತ್ತರದಿಣ್ಣೆಯ ಪ್ರಾಚೀನವೂ, ಅಲ್ಲಿ ವಿದ್ಯಾಧರ ಮುನಿಯ ತಪಸ್ಥಳವೂ ಇದೆಯೆಂದು ತೋರಿಸುತ್ತಾರೆ. ಕದಿರೆಯ ದೇವಳದಲ್ಲಿರುವಂತೆ, ಈ ದೇವಾಲಯದ ಮೂಡು ಬದಿ ಎತ್ತರದ ದಿನ್ನೆಯ ತಲದಲ್ಲಿ ಚಿಕ್ಕದಾದ ಕೆರೆಯಿದೆ. ದೇವಾಲಯದ ಪಡುಗಡೆ ಚಿಕ್ಕ ಬಯಲು ಗದ್ದೆಗಳೂ ಕಡಲೂ ನಮ್ಮ ಕಣ್ಮನಗಳನ್ನು ಆಪ್ಯಾಯನಗೊಳಿಸುತ್ತವೆ.

ಇತರ ವಿಚಾರಂಗಳು: ಇಡ್ಯ ಗ್ರಾಮದ ಈಶಾನ್ಯದಲ್ಲಿ "ಮೂಡಂ ಮನೆ"ಯ ಬಳಿ ಸಿರಿಗಳ ಗೂಡಿಗಳಿವೆ. ಕುಸು ಉತ್ಪರದಲ್ಲಿ "ಜಾರಂದಾಯನ ಗುಡ್ಡೆ"ಯಿದ್ದು ಈ ದೇವಳದ ಪಡುವಣ ಬರೆಯ ಬಳಿ ಆ ದೈವದ "ಸೀಮೆ"ವಾಗುವ ಕಟ್ಟಕೆಯಿದೆ. ಈ ಗ್ರಾಮದಲ್ಲಿ ವೀರ ಶೈವರ ಮಠ (ಜಂಗಮ ಮಠ) ವಿದ್ದು, ಒಂದು ತಲೆಮಾರಿನ ಹಿಂದಿನ ತನಕ ಬಹು ಘನತೆಯಿಂದ ಕೂಡಿತ್ತು, ಇಡ್ಯ ದೇವಳದ ತುಸ ಮೂಡು ಕ್ರೈಸ್ತರ ಇಗರ್ಜಿಯಿದೆ. ಸ್ವಲ್ಪ ದೂರದಲ್ಲಿ ಮುಸಲ್ಮಾನರ ಹಳೆಯ ಪ್ರಾರ್ಥನಾ ಮಂದಿರವಿದ್ದು, ವರ್ಷಕ್ಕೊಮ್ಮೆ ವಿಶೇಷಗಳು ನೆರವೇರುತ್ತವೆ. ಆಷಾಡಿ (ಆಟಿ) ಅಮಾವಾಸ್ಯೆಯಂದು ಹತ್ತಾರು ಗ್ರಾಮಗಳವರು ಇಡ್ಯ ದೇವಾಲಯದ ಪಡುಗಡೆ ಕಡಲು ವಿಹಾರಿಸುವ ಕ್ರಮ ಇಂದಿಗೂ ಇದೆ. ಇಡ್ಯದಲ್ಲಿ "ಬಬ್ಬು" ದೈವದ ಗುಡಿಯೂ ಬೇರೊಂದು ಇದೆ.

ಈ ದೇವಾಲಯದ ಸುತ್ತಲೂ ಬದಿಕಲ್ಲುಗಳಿದ್ದರೂ, ಧ್ವಜಸ್ತಂಭವಿಲ್ಲ; ವರ್ಷಕ್ಕೊಮ್ಮೆ (ಕಾರ್ತಿಕ ಬಹುಳದ ಬಿದಿಗೆಗೆ) ದೀಪೋತ್ಸವವು ಜರಗಿ, ಬಲಿಮೂರ್ತಿಯನ್ನು ಚಿಕ್ಕ ಮರದ ತೇರಲ್ಲಿ (ಚಂದ್ರ ಮಂಡಲದಲ್ಲಿ) ಇರಿಸಿ, ಪೂಜಿಸಿ, ಅರ್ಧ ಮೈಲು ದೂರದ ವರೆಗೆ ಸಾಗುತ್ತದೆ. ಇಲ್ಲಿ ಕಿನಂತ್ರಿ ಪೂಜೆ, ತುಲಾಭಾರ, ರಂಗಪೂಜೆ, ಹೂವಿನಪೂಜೆ, ವಸಂತಪೂಜೆಗಳು ಭಕ್ತರ ನೆರವಿನಿಂದ—ವಿಜೃಂಭಣೆಯಿಂದ ನೆರವೇರುತ್ತವೆ. ಸರಕಾರದಿಂದ ತುಸ ತಸ್ದೀಕು ದೊರೆಯುತ್ತದೆ. ದೇವರಹೆಸರಲ್ಲಿಕೆಲವು ಆಸ್ತಿಗಳಿದ್ದು, ಅರ್ಚಕ, ದೇವಕಾರ್ಯ, ದೋಲು ಗಂಟೆಹುದರ ಕುಟುಂಬದವರಿಗೆ ವಹಿಸಿಕೊಟ್ಟಿವೆ. ನಾಲ್ಕಾರು ವರ್ಷಗಳಿಂದೀಚೆ ಪ್ರತಿ ಸೋಮವಾರ ಪುದೋಷ ಕಾಲದಲ್ಲಿ ದೇವರ ಸನ್ನಿಧಿಯಲ್ಲಿ ಭಜನೆಯೂ (ವಾರ್ಷಿಕ ಮಂಗಲವೂ) ಕಪ್ಪದೆ ನಡೆಯುತ್ತದೆ!

ಸ್ಥಳೀಯ ಸೌಕರ್ಯಗಳು: ಮಂಗಳೂರಿಂದ ಉಡುಪಿಗೆ ಹೋಗುವ ಪಡುಕರಾವಳಿ ರಸ್ತೆಯಲ್ಲಿ 9½ ಮೈಲು ದಾಟಿ ತುಸ ಮುಂದೆ ಹೋದಾಗ, ಪಡುಗಡೆ ನೋಡಿದರೆ, ರಮಣೀಯವಾದ ಇಡ್ಯ ಶ್ರೀ ಮಹಾಲಿಂಗೇಶ್ವರ ದೇವಾಲಯವು ಕಂಗೊಳಿಸುತ್ತದೆ. ಬಜಪೆಯು ವಿಮಾನ ನಿಲ್ದಾಣದಿಂದ ಇಲ್ಲಿಗೆ ಬರಲು ರಸ್ತೆಯ ವಾಹನಗಳ ಅನುಕೂಲವಿದೆ. ಉಳುವಾನಿಗೆ ನೈದ್ಯಾಲಯಗಳೂ, ಸುರಕ್ಷಲ್ಲು ಸಬ್ ಪೋಸ್ಟ್ ಆಫೀಸ್, ಸಂತೆಕಟ್ಟೆ, ಬೇಂಕ್‌ಗಳು; ಚಿಕ್ಕ ದೊಡ್ಡ ತರದ ಹಲವಾರು ಜನರು—ಅಟ್ಟೆ ವಸ್ತುಗಳ ಅಂಗಡಿಗಳೂ ಹೋಟೆಲ್‌ಗಳೂ ಇವರ ವ್ಯವಹಾರ ಸೌಕರ್ಯಕ್ಕೆ ಅನುಕೂಲವಾಗಿವೆ.

ಇ. 1916ರಲ್ಲಿ ಇಡ್ಯ ದೇವಾಲಯದ ಗೋಪುರದಲ್ಲಿ ಪ್ರಾರಂಭವಾದ "ಹಿಂದೂ ವಿದ್ಯಾದಾಯಿನೀ ಸಂಘ"ದ ವತಿಯಿಂದ ಎರಡು ಹಾಯರ್ ಎಲಿಮೆಂಟರಿ ಶಾಲೆಗಳೂ, ಒಂದು ಹಾಯರ್ ಸೆಕೆಂಡರಿ ಶಾಲೆಯೂ ನಡೆಯುತ್ತಿವೆ. ಈ ವರ್ಷದಿಂದ "ಗೋವಿಂದದಾಸ ವಿದ್ಯಾದಾಯಿನೀ ಕಾಲೇಜ್" ಕೂಡಾ ಪ್ರಾರಂಭವಾಗಿದೆಯೆಂದು ಎಲ್ಲೆಡೆ ಗೊತ್ತಿದೆ! ಒಳ್ಳೆಯ ಕೆಲಸಕ್ಕೆ ಎಲ್ಲೆಡೆಯ ಉದಾರಿಗಳ ಸೌಹಾರ್ದ ಸಹಕಾರಗಳೂ ದೊರೆಯುತ್ತವೆ; ಅಂತೆ, ಶ್ರೀ ದೇವರ ದಯೆಯೂ ಒದಗಿ ಬರುತ್ತದೆಯೆಂಬುದಕ್ಕೆ ಈ ವಿದ್ಯಾಸಂಸ್ಥೆ ಉತ್ತಮ ನಿದರ್ಶನವಾಗಿದೆ!

ಜಯ ಮಹಾಲಿಂಗೇಶ್ವರ!
ಜಯ ವಿದ್ಯಾಧರೇಶ್ವರ!

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 371/1967.

ವಾದಿ— ಕಡ್ರಿ ಸೂರಪ್ಪ ನ್ಯಾಕ.

ಪ್ರತಿವಾದಿಗಳು 1. ಹರಿಯಣ್ಣ ಸೆಟ್ಟಿ, 2. ಗೋವಿಂದ ಸೆಟ್ಟಿ, 3. ಕೃಷ್ಣಪ್ಪ ಸೆಟ್ಟಿ.

ಕುಂದಾಪುರ ತಾಲ್ಲೂ ಕಮಲಶಿಲೆ ಗ್ರಾಮದ ಉಪ್ಪಿಲ್ಲಿಯಲ್ಲಿರುವ ಸರ್ವೇ ನಂ. 87ರ ಸಿದ್ಧಿರ ಮಗ ಹಂಯಣ್ಣ ಸೆಟ್ಟಿ| ಚಂದಮ್ಮ ಸಿದ್ಧಿರ ಮಗ ಗೋವಿಂದ ಸೆಟ್ಟಿ| ಸುಬ್ಬನ್ನು ಸಿದ್ಧಿರ ಮಗ ಕೃಷ್ಣಪ್ಪ ಸೆಟ್ಟಿ| ಕೂಡಾ ತಿಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರು ವಾದಿಗೆ ತಾರೀಕು 17-6-64 ರಲ್ಲಿ ರೂಪಾಯಿ 350—00ಕ್ಕೆ ಬರೆಕೊಟ್ಟ ದಿವಾಂಡು ನೋಟಿನ ಹಣ ಬಟ್ಟೆ ಕೂಡಾ ಬರವಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ಇಾಮ್ಲು ಮೂಡಿಸ ಮೇಲಿನ ದಾವೆಯನ್ನು ತಾ. 22—11—67ಕ್ಕೆ ತನ್ನಿಗೆ ಇರುತ್ತದೆ. ಆ ಕಾರಣ ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನೆ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿಯಾದೆ.

N. S. Parameshwariah
Advocate for Plff.

Date 5—11—67, Coondapoor.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 371/1967.

ವಾದಿ— ಕಡ್ರಿ ಸೂರಪ್ಪ ನ್ಯಾಕ.

ಪ್ರತಿವಾದಿಗಳು 1. ಹರಿಯಣ್ಣ ಸೆಟ್ಟಿ, 2. ಗೋವಿಂದ ಸೆಟ್ಟಿ, 3. ಕೃಷ್ಣಪ್ಪ ಸೆಟ್ಟಿ.

ಕುಂದಾಪುರ ತಾಲ್ಲೂ ಕಮಲಶಿಲೆ ಗ್ರಾಮದ ಉಪ್ಪಿಲ್ಲಿಯಲ್ಲಿರುವ ಸರ್ವೇ ನಂ. 87ರ ಸಿದ್ಧಿರ ಮಗ ಹಂಯಣ್ಣ ಸೆಟ್ಟಿ| ಚಂದಮ್ಮ ಸಿದ್ಧಿರ ಮಗ ಗೋವಿಂದ ಸೆಟ್ಟಿ| ಸುಬ್ಬನ್ನು ಸಿದ್ಧಿರ ಮಗ ಕೃಷ್ಣಪ್ಪ ಸೆಟ್ಟಿ| ಕೂಡಾ ತಿಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರು ವಾದಿಗೆ ತಾರೀಕು 17-6-64 ರಲ್ಲಿ ರೂಪಾಯಿ 350—00ಕ್ಕೆ ಬರೆಕೊಟ್ಟ ದಿವಾಂಡು ನೋಟಿನ ಹಣ ಬಟ್ಟೆ ಕೂಡಾ ಬರವಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ಇಾಮ್ಲು ಮೂಡಿಸ ಮೇಲಿನ ದಾವೆಯನ್ನು ತಾ. 22—11—67ಕ್ಕೆ ತನ್ನಿಗೆ ಇರುತ್ತದೆ. ಆ ಕಾರಣ ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನೆ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿಯಾದೆ.

N. S. Parameshwariah
Advocate for Plff.

Date 5—11—67, Coondapoor.



ಪ್ರತಿದಿನ ಲಕ್ಷಾಂತರ ಕಾಗದ ಪತ್ರಗಳು ಆಂಜೆ ಡಬ್ಬಿಯೊಳಗೆ ಬಂದು ಬೀಳುತ್ತವೆ ಆದರೆ ಅನೇಕ ಪತ್ರಗಳ ವಿಳಾಸವೇ ಸರಿಯಿರುವುದಿಲ್ಲ. ವಿಳಾಸವನ್ನು ಬರೆಯುವಾಗ ಸ್ವಲ್ಪ ಆಲೈ ನೆಹಸಿದರೆ, ಆಂಚೆಯು ಪ್ರತಿಶತವಾಗಿ ತನ್ನ ಗುರಿ ಮುಟ್ಟಿ, ನಿಮ್ಮ ಬಂಧುಗಳಿಗೆ ಜಾಗ್ರತೆ ತಲುಪುತ್ತದೆ. ಈ ಕೆಳ ಕಂಡಂತೆ ಪತ್ರಗಳ ಮೇಲೆ ವಿಳಾಸವನ್ನು ಸಂಪೂರ್ಣವಾಗಿ ಹಾಗೂ ಸ್ಪಷ್ಟವಾಗಿ ಬರೆಯಿರಿ ಇದರಿಂದ ವಿಳಾಸದಾರರಿಗೆ ಪತ್ರ ಜಾಗ್ರತೆ ಮುಟ್ಟುತ್ತದೆ. ಅಂಚೆ ನಿಲಯದ ಸಂಖ್ಯೆಯನ್ನು ಬರೆಯಲು ಮರೆಯದಿರಿ

ಶ್ರೀ ಎಚ್. ಎಲ್. ಗೋಪಾಲ್
2 ನೇ ಅಡ್ಡ ರಸ್ತೆ
ಶಾಂತಿನಗರ
ಬೆಂಗಳೂರು-27

ಭಾರತೀಯ ಅಂಚೆ ಮತ್ತು ತಂತಿ ಇಲಾಖೆ

67/104

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಎಲ್ಲೆಲ್ಲಿ ಏನೇನು?

ದೀಪಕ ಟ್ರೇಡರ್ಸ್ ವಾರ್ಷಿಕೋತ್ಸವ

ಉಡುಪಿ, ಜೂ. 11, ದೀಪಕ ಟ್ರೇಡರ್ಸ್ ಎಂಬ ಔಷಧ ವಿತರಣಾ ಸಂಸ್ಥೆಯ ಮ್ಯಾನೇಜಿಂಗ್ ಪಾರ್ಟ್‌ನರ್ ಬಿ. ರಘುರಾಮ ಶೆಟ್ಟರು ತಮ್ಮ ಸಂಸ್ಥೆ ಪ್ರಥಮ ವಾರ್ಷಿಕ ಸಮಾರಂಭದ ಅಂಗವಾಗಿ ಜೂ. 11ನೇ ಸಂಜೆ ಆಜ್ಜರಕಾಡಿನಲ್ಲಿ 'ತಾಜ್‌ಕೆಂಟ್'ನಲ್ಲಿ ಉಪಾಹಾರ ಸತ್ಕಾರವೊಂದನ್ನು ಏರ್ಪಡಿಸಿದ್ದರು. ನಗರದ ಅನೇಕ ಅನುಪಾಸಿನ ಡಾಕ್ಟರರೂ ಬಂಧುಮಿತ್ರರೂ ಬಹು ಸಂಖ್ಯೆಯಲ್ಲಿ ಆಗಮಿಸಿ ಸಂಸ್ಥೆಗೆ ಶುಭ ಕೋರಿದರು. ಶ್ರೀ ರಘುರಾಮ ಶೆಟ್ಟರು ಸರ್ವರನ್ನೂ ಹಾರ್ದಿಕವಾಗಿ ಸ್ವಾಗತಿಸಿ ಅಂತ್ಯದಲ್ಲಿ ಅಭಾರವನ್ನು ಸಿದರು.

ವಿದ್ಯಾಮಂತ್ರಿ ಶಂಕರ ಗೌಡರು

ಮೈಸೂರು ಸರಕಾರದ ವಿಶ್ವಾಸ ಸಚಿವ ಶ್ರೀ ಕೆ. ವಿ. ಶಂಕರ ಗೌಡರು ತಾ. 18—11—67ರಂದು ಹೆಸ್ರಿಯಲ್ಲಿ ಭುಜಂಗ ಬಲ್ಲಾಳ್ ಸ್ಮಾರಕ ಮಂದಿರವನ್ನು ಉದ್ಘಾಟಿಸಿ, ಮಂಗಳೂರಿನ ಕೆಲ್ಮಾಣಿಪುರದಲ್ಲಿ ಮಿಲಾಗ್ರಿಸ್ ಕಾಲೇಜು ಕಟ್ಟಡಕ್ಕೆ ಶಂಕು ಸ್ಥಾಪನೆ ನೆರವೇರಿಸಿದರು. ಆನಂತರ ಉಂಡಾಪುರದಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಿಸ್ತರಣಾದ ಎ. ಬಿ. ಶೆಟ್ಟಿ ಸ್ಮಾರಕ ಕಟ್ಟಡವನ್ನು ಉದ್ಘಾಟಿಸಿದರು. (ವರದಿಯನ್ನು ಬರಲಿರುವ ಸಂಚಿಕೆಯಲ್ಲಿ ಕೊಡಲಾಗುವುದು. ಸಂ. ನ.)

ಫ್ಲೈಯರೋಗ ಸಮಿತಿಯ ವಾರ್ಷಿಕ ಸಮಾರಂಭ

ಉಡುಪಿ, 12:- ಉಡುಪಿ ತಾಲೂಕು ಫ್ಲೈಯರೋಗ ಸಮಿತಿಯ ವಾರ್ಷಿಕ ದಿನಾಚರಣೆಯು ತಾ 12—11—67ರಂದು ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಅಲಂಕಾರ್ ಥಿಯೇಟರಿನಲ್ಲಿ ಜರಗಿಸಲ್ಪಟ್ಟಿತ್ತು. ಸಮಿತಿಯ ಅಧ್ಯಕ್ಷ ಡಾ॥ ಸಿ. ಎಚ್. ಶಿವರಾಮನ್ ಅವರು ಸ್ವಾಗತಿಸಿದರು. ಉಪಾಧ್ಯಕ್ಷ ಶ್ರೀ ಕೆ. ವಾಸುದೇವ ಕಿಣಿಯವರು ಅತಿಥಿಗಳಿಗೆ ಹಾರಾರ್ಪಣೆ ಗೈದರು. ಕಾರ್ಯದರ್ಶಿ ಡಾ॥ ಕೆ. ಮೋಹನ್‌ದಾಸ್ ಪೈಯವರು ವಾರ್ಷಿಕ ಭಾಷಣ ಮಾಡಿದರು. ಕೆ. ಎಮ್. ಸಿ. ಯ ಪ್ರಿನ್ಸಿಪಾಲ್ ಡಾ॥ ಎಂ. ಪಿ. ಪೈಯವರು ಟಿ. ಬಿ. ಮೊದಲಾದ ರೋಗಗಳನ್ನು ಉದ್ಘಾಟಿಸಿ ಈ ಚಳವಳಿಯು ಯಶಸ್ವಿಗೆ ಸರ್ವರ ಸಹಕಾರ ಕೋರಿದರು. ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಭಾಷಣ ಮಾಡುತ್ತಾ ಫ್ಲೈಯರೋಗ ನಿವಾರಣಾ ಕಾರ್ಯವು ಸರಕಾರಕ್ಕಂತೆಯೂ ಜನರ ಸ್ವಯಂ ಸ್ಫೂರ್ತಿಯ ಕೆಲಸ ಹೌದೆಂದೂ ಈ ರೋಗ ಬಂದನಂತರ ಚಿಕಿತ್ಸೆ ಮಾಡುವುದಕ್ಕಿಂತಲೂ ಅದು ಬಾರದಂತೆ ನೋಡಿಕೊಳ್ಳುವುದು ಸೂಕ್ತವೆಂದೂ ಹೇಳಿದರು. ಶ್ರೀಮತಿ ಸುನಂದಾ ಬಾಳಿಗರು ಧನ್ಯವಾದಗಳನ್ನರ್ಪಿಸಿದರು. ಅಂತ್ಯದಲ್ಲಿ ಶ್ರೀ ಎ. ಜೆ. ಆಳ್ವಿಯವರ ಪ್ರಸ್ತಾವನೆಯೊಂದಿಗೆ ಚಿತ್ರ ಪ್ರದರ್ಶನ ನಡೆಯಿತು.

ಮುಖ್ಯ ಮಂತ್ರಿಗಳಿಗೆ ಶ್ರೀ ಪಿ. ವಿ. ಏಕಾಳರ ಪತ್ರ

ಅಕ್ಟೋಬರ್ ೧, ೧೯೬೭ರಂದು ರಾಷ್ಟ್ರಪತಿ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಮಂಗಳೂರಿಗೆ ಭೇಟ್ಟಿ ಕೊಡಿದ್ದರು. ಈ ವೇಳೆ ಮುಖ್ಯ ಮಂತ್ರಿಯವರನ್ನು ಭೇಟ್ಟಿ ಮಾಡಿ ಪಣಂಬೂರು ಬೈಕಂಪಾಡಿಯ ಬಂದರು ಯೋಜನೆಯ ನಿರ್ವಾಸಿತರ ದುರವಸ್ಥೆಯ ಬಗ್ಗೆ ತಮ್ಮ ಮನವಿ ಮಾಡುವ ಸಲುವಾಗಿ ತಾನು ಡೆಪ್ಯುಟಿ ಕಮಿಶನರೊಡನೆ ಮೂರಾಡಿ ಭೇಟ್ಟಿಯ ಸಮಯವನ್ನು ಗೊತ್ತು ಮಾಡಿ ಗ್ರಾಮಸ್ಥರ ಗ್ರಹಕೃತ್ಯದೊಡನೆ ಬಂದುದಾಗಿಯೂ ಮೊನ್ನೆ ಮಂತ್ರಿಗಳ ಭೇಟಿ ಮಾಡಲು ತಾನು ಆತ್ಯಂತ ಪಾಡು ಪಡಬೇಕಾಯಿತೆಂದೂ, ಕೊನೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ವಿಚಾರ ತಿಳಿಸಿರುವರು, ನೀವು ಕಾಲಜಿ ಮಾಡಿಕೊಳ್ಳಬೇಡಿ ಎಂದು ಸಾರಿನಂದಿಕೆಯಾಗಿ ಮುಖ್ಯಮಂತ್ರಿಗಳು ಹೇಳಿದರೆಂದೂ, ಮುಂದೆ ತನಗೆ ಮುಂಬೈನ ಪರಿಚಾಮಕಾರಿಯಾದುದೆಂದೂ ಈ ರೋಗ ಬಂದನಂತರ ಚಿಕಿತ್ಸೆ ಮಾಡುವುದಕ್ಕಿಂತಲೂ ಅದು ಬಾರದಂತೆ ನೋಡಿಕೊಳ್ಳುವುದು ಸೂಕ್ತವೆಂದೂ ಹೇಳಿದರು. ಶ್ರೀಮತಿ ಸುನಂದಾ ಬಾಳಿಗರು ಧನ್ಯವಾದಗಳನ್ನರ್ಪಿಸಿದರು. ಅಂತ್ಯದಲ್ಲಿ ಶ್ರೀ ಎ. ಜೆ. ಆಳ್ವಿಯವರ ಪ್ರಸ್ತಾವನೆಯೊಂದಿಗೆ ಚಿತ್ರ ಪ್ರದರ್ಶನ ನಡೆಯಿತು.

ಮುಖ್ಯ ಮಂತ್ರಿಗಳಿಗೆ ಶ್ರೀ ಪಿ. ವಿ. ಏಕಾಳರ ಪತ್ರ

ಅಕ್ಟೋಬರ್ ೧, ೧೯೬೭ರಂದು ರಾಷ್ಟ್ರಪತಿ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಮಂಗಳೂರಿಗೆ ಭೇಟ್ಟಿ ಕೊಡಿದ್ದರು. ಈ ವೇಳೆ ಮುಖ್ಯ ಮಂತ್ರಿಯವರನ್ನು ಭೇಟ್ಟಿ ಮಾಡಿ ಪಣಂಬೂರು ಬೈಕಂಪಾಡಿಯ ಬಂದರು ಯೋಜನೆಯ ನಿರ್ವಾಸಿತರ ದುರವಸ್ಥೆಯ ಬಗ್ಗೆ ತಮ್ಮ ಮನವಿ ಮಾಡುವ ಸಲುವಾಗಿ ತಾನು ಡೆಪ್ಯುಟಿ ಕಮಿಶನರೊಡನೆ ಮೂರಾಡಿ ಭೇಟ್ಟಿಯ ಸಮಯವನ್ನು ಗೊತ್ತು ಮಾಡಿ ಗ್ರಾಮಸ್ಥರ ಗ್ರಹಕೃತ್ಯದೊಡನೆ ಬಂದುದಾಗಿಯೂ ಮೊನ್ನೆ ಮಂತ್ರಿಗಳ ಭೇಟಿ ಮಾಡಲು ತಾನು ಆತ್ಯಂತ ಪಾಡು ಪಡಬೇಕಾಯಿತೆಂದೂ, ಕೊನೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ವಿಚಾರ ತಿಳಿಸಿರುವರು, ನೀವು ಕಾಲಜಿ ಮಾಡಿಕೊಳ್ಳಬೇಡಿ ಎಂದು ಸಾರಿನಂದಿಕೆಯಾಗಿ ಮುಖ್ಯಮಂತ್ರಿಗಳು ಹೇಳಿದರೆಂದೂ, ಮುಂದೆ ತನಗೆ ಮುಂಬೈನ ಪರಿಚಾಮಕಾರಿಯಾದುದೆಂದೂ ಈ ರೋಗ ಬಂದನಂತರ ಚಿಕಿತ್ಸೆ ಮಾಡುವುದಕ್ಕಿಂತಲೂ ಅದು ಬಾರದಂತೆ ನೋಡಿಕೊಳ್ಳುವುದು ಸೂಕ್ತವೆಂದೂ ಹೇಳಿದರು. ಶ್ರೀಮತಿ ಸುನಂದಾ ಬಾಳಿಗರು ಧನ್ಯವಾದಗಳನ್ನರ್ಪಿಸಿದರು. ಅಂತ್ಯದಲ್ಲಿ ಶ್ರೀ ಎ. ಜೆ. ಆಳ್ವಿಯವರ ಪ್ರಸ್ತಾವನೆಯೊಂದಿಗೆ ಚಿತ್ರ ಪ್ರದರ್ಶನ ನಡೆಯಿತು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. I. A. 686/1967.
O. S. 418/1967

ವಾದಿರು—1. ನಾರಾಯಣಪೂಜಾರಿ, ಶಿದ್ಧಮಗ್ಗ, 2. ನಾರಾಯಣಪೂಜಾರಿ, ಕೂರ ಗಪ್ಪುಜಾರಿ ಆಳಿಯ, 3. ಮೊಗೇರ ನಂದಿ ಮರಕಾಲ—ನಾರಾಯಣ ಮರಕಾಲನ ಸಹೋದರರು, 4. ಬಡಾ ಮನೆ ಕಾಳಿಂಗ ಸೆಟ್ಟಿ—ನಾಗೈಯ್ಯ ಸೆಟ್ಟಿಯ ಸಹೋದರರು, 5. ಚೇರ್ಕಪೂಜಾರಿ—ಗೆಸ್ತನಿಂದನ ದುಗ್ಗ.

ಯೆಲ್ಲಾವಾದಿರು ಉಡುಪಿ ತಾಲ್ಲೂಕು ಕಾವಡಿ ಗ್ರಾಮದಲ್ಲಿರುವವರುರೈತರು, ಪೋಸ್ತು ಕಾವಡಿ.

ಪ್ರತಿವಾದಿರು—1. ಮಯಾ ಲಿಂಗಸೆಟ್ಟಿ 2. ನುಂಜಮ್ಮ ಸೆಟ್ತಿ } ಗಿರಿಜಮ್ಮ ಸೆಟ್ತಿ ಮಕ್ಕಳು.

ಸದ್ರಿ ಕಾವಡಿ ಗ್ರಾಮದಲ್ಲಿರುವವರು ಪೋಸ್ತು ಕಾವಡಿ.

ವಾದಿರು ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲೆ ಕಂಡ ವಾದಿರು ಕೊಡಾ ಸಾಗುವುದು ಬರುವ ಕಾವಡಿ ಗ್ರಾಮದ ಕೊಡಿಹಾಡಿಯ ನ್ನು ಪ್ರತಿವಾದಿರು ಅಕ್ರಮ ಪ್ರವೇಶಮಾಡಿ ಅವರಲ್ಲಿರುವ ಮರಗಿಡಗಳನ್ನು ಕಡಿದು ನಾಶ ಮಾಡಿರುವುದಾಗಿ ವಗೈರೆ ನಿವೃತ್ತಿ ಕೇಳಿ ವಾದಿರು ಮೇಲಿನ ದಾವಾ ದಾಖಲು ಮಾಡಿದ್ದಾಗಿದ್ದು ಸದ್ರಿ ಕಾವಡಿ ಗ್ರಾಮದ ಸುಮಾರು 60—70 ರೈತ ಕುಟುಂಬದವರ ಮತ್ತು ಅವರ ಹಿರಿಯರು ಬಹಳ ಕಾಲದ ಹಿಂದಿನ ಅನ್ಯಾಯತ ಮರ ಗಿಡಗಳನ್ನು ನಟ್ಟು, ಬೆಳ್ಸಿ ಗಬೇಲಿ ಹೂಡಿ, ಮಜಬೂರಿಕೊಟ್ಟುಕಾದು, ಬಂದಮೇಲಿನ ಹಾಡಿಯಂದ ಪ್ರಯೋಜ್ಯ ಈ ದಾವೆಯನ್ನು ಹಾಡಿಯಲ್ಲಿ ಹಕ್ಕಿರುವ ಯಲ್ಲಾ ವರ್ಗದಾಯಿಯಿಂದ ಮೂಡಿದ್ದಾದ್ದರಿಂದಲೂ ಮೇಲಿನ ದಾವ ಯಲ್ಲಿ ವಾದಿರ ವಿರುವಾಗಿಯೂ— ಸದ್ರಿ ಕಾವಡಿ ಗ್ರಾಮದ ರೈತರ ಪರವಾಗಿಯೂ ದಾವೆ ಬಾಳ್ವ ನೂಮುವರೆ ಅವರನ್ನು ಪ್ರತಿನಿಧಿ ಕರಿಸಲಿಕ್ಕೂ ಅಗತ್ಯವುಳ್ಳ ಪರ್ಮಿಶನ್ ಕೊಡ್ಸ ಬೇಕೆಂತ ವಗೈರೆ ಕಾಣ್ಸ ವಾದಿರು ಈ ದಾವೆಯನ್ನು ಮೇಲಿನ ಅರ್ಜಿ ಮಾಡಿಕೊಂಡಿರುವದರಿಂದ ಮೇಲೆ ಹೇಳಿದ ಕಾರಣಗಳಿಂದ ಬಡಾ ಕಾವಡಿ ರೈತ ಕುಟುಂಬದವರು ಮೇಲಿನ ದಾವೆಯಲ್ಲಿ ಹೇಳಿದ ಪ್ರಕಾರ ಅನುಸರಿಸಿ ನಡೆಸಿಕೊಳ್ಳತಕ್ಕದ್ದು.

ಮೇಲಿನ ಬಾದಿನಲ್ಲಿ ಆಕ್ಷೇಪಗಳಿದ್ದರೆ ಮೇಲಿನ ದಾನೆಯ ತಪ್ಪಿ ತಾ. 18—11—1967 ನೇ ದಿನ್ನ ಬೆಳಿಗ್ಗೆ 10 ಗಂಟೆ 11ಕ್ಕೆ ಕೋರ್ಟು ಸುಂದ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೆಕ್ಪಾರ್ಟಿ ಮಾಡಲಾಗುವದು. ಯಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುತ್ತದೆ. ತಿಳಿದಿರಲಿ.

S. S. Kolkebail
Advocate for Plaintiff.

ತಾ. 6.11.1967, ಮೊಕ್ಕಾಂ: ಕುಂದಾಪುರ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. I. A. 631/67 in O.S. 198/64

H. ಲಾಲ್‌ಚಂದ್ರಾ ಹೆಗ್ಡೆ—(ವಾದಿ) ಅರ್ಜಿದಾರ

ಮತ್ತು

ಹಾಮ್ಮದ್ ಬ್ಯಾರಿ—ಎದ್ರಿ (ಪ್ರತಿವಾದಿ) ಬೆಳ್ತಂಗಡಿ ತಾಲ್ಲೂ ಉಜಿ ಗ್ರಾಮದ ಉಜಿ ಎಂಬಲ್ಲಿರುವ ಪಕೇರಬ್ಬ ಬ್ಯಾರಿಗಳ ಮಗ, ಹಾಮ್ಮೋದು ಬ್ಯಾರಿಯಂಗಿ—

ಮೇಲಿನ ದಾವೆಯ ವಾದಿಯು ಪ್ರಮ್ಮ ಮೇಲೆ ಪಡೆದ ಪ್ರಬಲಿಸುವ ದಿಕ್ಕ್ರಿ ವಿಧಿ ಪ್ರಕಾರ ಫೈನಲ್ ಡಿಕ್ರಿ ಕೊಡಿಸಬೇಕಾಗಿ ದಾಖ್ಲು ಮಾಡಿದ ಅರ್ಜಿಯು ತಾ. 28—11—1967ಕ್ಕೆ ಇಟ್ಟಿರುವುದರಿಂದ ಆಯಂತಿ ನಿಮ್ಮ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ 11 ಗಂಟೆಗೆ ಕೋರ್ಟಿನಲ್ಲಿ ದಾಖ್ಲು ಮಾಡಿಕೊಳ್ಳತಕ್ಕದಂತೆ ಕೋರ್ಟು ಹ್ಯುಂ ಪ್ರಕಾರ ಈ ಮೂಲಕ ನಿಮಗೆ ತಿಳಿಸೋಡಾಗಿಯೂದೆ.

N. J. Kadamba
Advocate Belthangady

ಬೆಳ್ತಂಗಡಿ, 8—11—1967.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. I. A. 574/67 in O. S. 90/64.

ಅಪ್ಪು ಹೆಗ್ಡ್ತಿ ಸಹಾ —ಅರ್ಜಿದಾರರು

ಸುಂದರ ಹೆಗ್ಡೆ ಸಹಾ — ಎದ್ರಿರು.

ಬೆಳ್ತಂಗಡಿ ತಾಲ್ಲೂ ಉಜ್ರೆ ಗ್ರಾಮದ ಹೊಸಮನೆರು ಎಂಬಲ್ಲಿರುವ ಸಂಕಮ್ಮ ಹೆಗ್ಡ್ತಿಯ ಮಗ ಸುಂದರ ಹೆಗ್ಡೆಯವರಿಗೆ—

ಮೇಲಿನ ಅರ್ಜಿಯಲ್ಲಿ ಅರ್ಜಿದಾರನು ವಾದಿದ ಫೈನಲ್ ಡಿಕ್ರಿ ಬಗ್ಗೆ ಸದ್ರಿ ದಾವೆಯಲ್ಲಿ ಪ್ರತಿವಾದಿಯ ವಿರುದ್ಧ ಪ್ರಕಾರ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಗೈರೆ ಕಾರಣಗಳಿಂದ ದಾಖ್ಲು ಮಾಡಿದ ಅರ್ಜಿಯು ತಾ. 20—11—67ಕ್ಕೆ ಇಟ್ಟಿರುವುದರಿಂದ ಆ ಕಾರಿತು ನಿಮ್ಮ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ 11 ಗಂಟೆಗೆ ಕೋರ್ಟಿನಲ್ಲಿ ದಾಖ್ಲು ಮಾಡಿಕೊಳ್ಳತಕ್ಕದ್ದೆಂತ ಕೋರ್ಟು ಹ್ಯುಂ ಪ್ರಕಾರ ಈ ಮೂಲಕ ನಿಮಗೆ ತಿಳಿಸೋಡಾಗಿದೆ.

N. J. Kadamba
Advocate for Petitioners

ಬೆಳ್ತಂಗಡಿ, 9—11—67.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 340/1967

ವಾದಿ— K. ನಾರಾಣಪ್ಪ ಹೆಬ್ಬಾರ್

ಪ್ರತಿವಾದಿರು—1. ಗಾಣಿಗ ಅಳ್ಕ ಹೆಂಗ್ಸು, 2. ಅನಂತ, 3. ರಾಮಚಂದ್ರ.

ಕುಂದಾಪುರ ತಾಲ್ಲೂ ಕೋಣೆ ಗ್ರಾಮದಲ್ಲಿರುವ ಗಾಣಿಗ ಅಳ್ಕ ಹೆಂಗ್ಸಿನ ಮಗ ಅನಂತನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರಿಂದ ವಾದಿಗೆ ಬರತಕ್ಕ ಕಳೆದ ಕ್ರೈಧಿ ಸಂವತ್ಸರದ ಆದಿಕಾಗ್ಣಿತಿನ ಜಾಲಗೇಣ ಗೇಣದಬಕ್ಕರನ್ನೂಡಿಕೊಳ್ಳುವರೆ ವಾದಿ ಯಿಂದ ಪ್ರತಿವಾದಿರಿಮೇಲೆದಾಖ್ಲು ಮಾಡಿದದಮೇಲಿನ ದಾವೆಯು ತಾರೀಕು. 17—11—67ಕ್ಕೆ ತಪ್ಪಿಗೆ ಇಟ್ಟಿತ್ತದೆ. ಆ ಕಾರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ಮುಂದೆ ಹಗಲು 11ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸ್ಯಾಯಿದೆ

N. S. Parameshwariah
Advocate for Plff.

Date 5—11—67, Coondapoor.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. No. 223/1967.

ಭುಜಂಗರಾವ್ — ವಾದಿ

T. P. ನಾರಾಯಣರಾವ್ —ಪ್ರತಿವಾದಿ

T. P. ನಾರಾಯಣರಾವ್, ಅಂಡಾಸ್ಸು ಭಟ್ಟ ಮಗ್ಗ, ಮಂಗಳೂರು ತಾಲ್ಲೂ ಕಂಳಿಪಾಡಿ ಗ್ರಾಮದ ಪೊಯಿಮಂಡ ಎಂಬಲ್ಲಿರುವವರು.

ಸದ್ರಿ ಪ್ರತಿವಾದಿ ಅವರ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ನೀವು ತಾ. 16..7—1964 ರಲ್ಲು ವಾದಿಯಿಂದ ಕೈಕಡವಾಗಿ ಸಡದ ರೂಪ್ಯಾ 100 ಬಡ್ಡಿ ನಕೇಲ ನೋಟೀಸಿನ ಖರ್ಚು ಕೂಡಾ ರೂಪ್ಯೆ 130—90ಕ್ಕೆ ಸಾದಿಯು ನಿಮ್ಮ ಮೇಲೆ ದಾಖ್ಲು ಮಾಡಿದ ಸದ್ರಿ ದಾವೆಯು ತಾರೀಕು 18—11—67ಕ್ಕೆ ನಿಮಗೆ ಆ ಕೈದ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಜಂದಾ ಹಡಕೆ ಕೊಡಬೇಕಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವುದು ಎಂತ ಕೋರ್ಟು ಹ್ಯುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Plaintiff

Karkala, 10—11—67

ಶ್ರೀಗಳಿಗೆ ಭೆಟ್ಟಿ ಮಾಡಬೇಕೆಂದು ಅನೇಕ ಸಲ ಸಂಬಂಧಿಸಿದವರಿಗೆ ತಿಳಿಸಿದರೂ ತಮಗೆ ಬ್ಬಿಡಿಗೆ ಮಾತ್ರ ಭೆಟ್ಟಿ ಕೊಡಿಲ್ಲವೆಂದೂ ಜಪ್ತಾ ಪ್ರತಿನಿಧಿಯೂದ ತನ್ನನ್ನು ಹೇಗೆ ಅಂಳ್ಳ ತನ ಮತ್ತು ಆಗೌರವದಿಂದ ಮುಖ್ಯಮಂತ್ರಿ ಸ್ಥಾನದಲ್ಲಿದ್ದವರು ನಡೆದುಕೊಂಡುದು ವಿಷಾದನೀಯವೆಂದು ಮುಂತಾಗಿ ಶ್ರೀ ಪಿ. ವಿ. ಏಕಾಳ್, ಎಂ. ಎಲ್. ಎ. ಅವರು ಮುಖ್ಯ ಮಂತ್ರಿ ನಿಜಲಿಂಗಪ್ಪನವರಿಗೊಂದು ಪತ್ರವನ್ನು ಬರೆದಿರುವುದಾಗಿ ತಿಳಿಸುತ್ತಾರೆ. ಮೊನ್ನೆ ಮಂತ್ರಿಗಳ ವರ್ತನೆಯು ಒಬ್ಬ ಜನತಾ ಪ್ರತಿನಿಧಿಯ ಗೌರವ ಪ್ರತಿಷ್ಠೆ ಮತ್ತು ಹಕ್ಕಿನ ಭಾಧ್ಯತೆಗಳಿಗೆ ಧಕ್ಕೆ ತರುವಂತಹದಿರುವುದರಿಂದ, ಆ ಪತ್ರದ ಪ್ರತಿಗಳನ್ನು ವಿಧಾನ ಸಭಾಧ್ಯಕ್ಷ ಶ್ರೀ ದಿ. ವಿ. ಬಾಳಿಗಾ, ಶಾಸನ ಸಭಾ ವಿರೋಧಿ ಪಕ್ಷದ ನಾಯಕ ಶ್ರೀ ಕಿವಪ್ಪ, ಸರಕಾರದ ಮುಖ್ಯ ಕಾರ್ಯದರ್ಶಿ, ಮೊದಲಾದವರಿಗೂ ಕಳಿಸಿರುವುದಾಗಿಯೂ ಶ್ರೀ ಏಕಾಳರು ತಿಳಿಸಿದ್ದಾರೆ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 154/1967

ಯು. ಗೋಪಾಲ ಹೆಗಡೆ —ವಾದಿ

ಮತ್ತು

ಯು. ಅನಂತ ಕೃಷ್ಣಭಟ್ಟ, ಪದ್ಮನಾಭ ಭಟ್ಟ ಮಗ್ಗ ಉಡ್ಪಿ ಹೊಲ್ಯ ಉದಿಯವರ ಗ್ರಾಮ —ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ ಯೂ ಮೂಲಕ ತಿಳಿಸುವದೇನೆಂದ್ರೆ—

ವಾದಿಗೆ ಪ್ರತಿವಾದಿಯಿಂದ ಬರತಕ್ಕ ಹೊಡಿನ ಅಸಲು ಬಡ್ಡಿಗೆ ದಾಖ್ಲು ಮಾಡಿದ ಮೇಲ್ಕಂಡ ದಾವೆಯು ತಾ. 29—11—67ಕ್ಕೆ ಯಿಡೋಡಾಗಿಯದೆ ಆ ಕಾರಿತು ಪ್ರತಿವಾದಿಗೆ ಆಕ್ಷೇಪಣೆ ಯೇಳತಕ್ಕದ್ದು ಯಿದ್ದಸದ್ರಿ ದಿವ್ಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ತಿಳಿಸೋಡಾಗಿದೆ.

N. V. Kamath
Advocate for Plaintiff

ಉಡ್ಪಿ, 10—11—67

In the Court of Munsiff Kundapur

O. S. 310/67

Herianna Shetty ... Plaintiff.

versus

Narayana Achari ... Defendant 1o

Defendant Narayana Achari, Son of Subraya Achari, Kalthodu village, Kundapur Taluk.

Sir,

The suit filed against you for recovery of chalgeni rental of Rs 507-80 has been posted to 8—12—67 before this Court. In case of your non-appearance on the day, the suit will be decided in your absence.

(By order of Court.)

K. Narayana Kamath,
Advocate for Plaintiff

Kundapur, 10-11-67.



ಆ ಕಥೆ

(ಎರಡನೇ ಪುಸ್ತಕದಿಂದ)

ಹೊಟೆ ಪಾಳು ಏನೂ ಉಳಿದಿಲ್ಲ. ದೇವರಿಲ್ಲದ ದೇವಾಲಯ ಮಾತ್ರ ಉಳಿದಿದೆ' ಎಂದು ದೊಡ್ಡಪ್ಪ ಆನೇಕ ಬಾರಿ ಹೇಳಿದ್ದರು.

ದೇವಾಲಯದಲ್ಲಿ ದೇವರಿರಲಿಲ್ಲ. ಆದರೆ ದೇವಾಲಯದ ಹೊರ ಒಳ ವಲಯಗಳಲ್ಲಿ ಅದ್ಭುತ ಶಿಲ್ಪ ಕಲಾ ವೈವಿಧ್ಯಮೆ ಅಡಗಿತ್ತು. ಹಿಂದೆ ಒಂದೆರಡು ಬಾರಿ ದೊಡ್ಡಮ್ಮ ದೊಡ್ಡಪ್ಪನೊಂದಿಗೆ ಅಲ್ಲಿಗೆ ಹೋಗಿದ್ದೆ. ಆ ನೆನಪು ನನಗಿತ್ತು. ರಸ್ತೆಯ ಪರಿಚಯವೂ ಇತ್ತು. ಜಕಣಾಚಾರಿ ಕಟ್ಟಿದ ದೇವಾಲಯ ಎಂದು ದೊಡ್ಡಮ್ಮ ಹೇಳುತ್ತಿದ್ದರು. ಜಕಣಾಚಾರಿಯೇ ಕಟ್ಟಿದ್ದನೋ ಅಥವಾ ಯಾವ ಆಚಾರಿ ಕಟ್ಟಿದ್ದನೋ ಅಂತು ಅದು ಅಂದವಾದ ದೇವಾಲಯ. ಶಿವಾಂಗಿಗಳ ಕುಶಲಕಲಾ ನೈಪುಣ್ಯ. ದೇವಾಲಯದ ಒಳಿದುಳಿದ ಶಿಲಾಮೂರ್ತಿಗಳಲ್ಲಿ ಕಾಣಬಹುದಿತ್ತು. ಆ ದೇವಾಲಯಕ್ಕೆ ಜೋಗಲು ನಿರ್ಧರಿಸಿದೆ. ದೊಡ್ಡಮ್ಮ ನಿಗೆ ತಿಳಿಸಿ ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದ. ಆದಕ್ಕೆ ಮುಂಜೆ ಒಮ್ಮೆ ನಾನೇ ಹೋಗಿ ಬರ್ಲೇ ಎಂದುಕೊಂಡೆ.

ಅಂದು ದೊಡ್ಡಪ್ಪ ತೋಟಕ್ಕೆ ಹೋಗಿದ್ದರು. ದೊಡ್ಡಮ್ಮನಿಗೆ ತಿಳಿಸೋಣ ಎಂದು ಯೋಚಿಸಿದ. ಆದರೆ ಅಪರಿಚಿತ ಮಹಿಳೆಯೊಬ್ಬಳು ಅವರೊಂದಿಗೆ ಮಾತಿಗೆ ಕುಳಿತಿದ್ದರು. ಸಂಭಾಷಣೆಗೆ ಭಂಗ ತರುವುದು ಬೇಡವೆಂದು ಒಟ್ಟೆ ಹಾಕಿಕೊಂಡು ಹೊರಟೆ. ದೊಡ್ಡಮ್ಮ 'ಎಲ್ಲಿಗೆ!' ಎಂದು ಪ್ರಶ್ನಿಸಲಿಲ್ಲ, ನಾನು ತಿಳಿಸಲಿಲ್ಲ. ಮೂರು ಗಂಟೆಗೆ ಮನೆಯಿಂದ ಹೊರಟವನು ನಾಲ್ಕು ಗಂಟೆಯ ವೇಳೆಗೆ ದೇವಾಲಯ ತಲುಪಿದೆ.

ನಿರ್ಜನ ಪ್ರದೇಶ. ಜನಸಂಚಾರವೂ ಇಲ್ಲ. ದೇವಾಲಯದ ಸ್ವಾಕಾರ ಭುವನೇಶ್ವರೀ ಕಲ್ಯಾಣ ನಂಟಪ, ಮೊದಲಾದುವುಗಳನ್ನೆಲ್ಲ ನೋಡಿದ. ದೇವಾಲಯದ ಸಮೀಪದ ಭವ್ಯ ಕಲ್ಯಾಣಿಯನ್ನು ಕಂಡಾಗ ಅಚ್ಚರಿಯಾಯಿತು. ಪೂರ್ವಿಕರ ಅದ್ಭುತ ಕಲಾ ನೈಪುಣ್ಯತೆಗೆ ಕಲ್ಯಾಣಿ ಉದಾಹರಣೆಯಂತಿತ್ತು.

ದೇವಾಲಯದಲ್ಲಿ ಅಂದವಾಗಿ ಉಳಿದಿದ್ದ ಶಿಲಾ ಮೂರ್ತಿಗಳಿಗಿಂತಲೂ, ಪ್ರಕೃತಿಯು ಪ್ರಯೋಸದಿಂದ, ಆಸಾಗರಿಕ ಅಸಂಸ್ಕೃತದ ಹೊಡೆತದಿಂದ, ನಾಸ್ತಿಕರ ಕ್ರೂರ ವರ್ತನೆಯಿಂದ ಅಸಂಖ್ಯಾತ ಮೂರ್ತಿಗಳು ತಮ್ಮ ಸೌಂದರ್ಯವನ್ನು ಕಳೆದುಕೊಂಡು ಬಿದ್ದಿದ್ದವು ಜೀವವಿಲ್ಲದ ದೇಹದಂತೆ. ಶತಮಾನಗಳಿಂದ ಬಾಳಿ ಬದುಕಿದ ಕಲೆಗೆ ಬಂದ ದುಸ್ಥಿತಿಯನ್ನು ಕಂಡು ಹೃದಯ 'ಅಯ್ಯೋ!' ಎಂದು ಮರುಗಿತು.

ದೇವಾಲಯ ಬಿಟ್ಟು ಹೊರಕ್ಕೆ ಬಂದೆ ಆರೂವರೆ ಗಂಟೆ ಕಳೆದು ಹೋಗಿತ್ತು. ಸ್ವಭಾಕರ ವಿಶ್ರಾಂತಿಗಾಗಿ ತೆರಳಿ ವಿಶ್ರಾಂತಿ ಪಡೆದಿತ್ತು. ಕತ್ತಲು ಆವರಿಸುತ್ತಿತ್ತು. ಹೊನ್ನಾರು ತುಂಬ ದೂರವಿದ. ನುಮ್ಮನೆ ಹುಚ್ಚನಂತ ಅಳತೆ. "ಕತ್ತಲಾಯಿತು. ಹೊತೆಗೆ ಹೂರೂ ಇಲ್ಲ' ಎಂದು ಗೊಣಗಿಕೊಂಡೆ. ದೂರಾವರೂ ಹೊನ್ನಾರಿನ ಕಡೆಗೆ ಹೋಗುವವರು ಸಿಕ್ಕಬಹುದೆಂದು ದಾಪುಗಾಲು ಹಾಕುತ್ತಾ ನಡೆದೆ.

— ೪ —

'ನಾನು ವೇಗವಾಗಿ ಜೆಜ್ಜೆ ಹಾಕಿದಂತೆಲ್ಲಾ ಕತ್ತಲು ದಟ್ಟವಾಗಿ ತೊಡಗಿತು. ಕತ್ತಲು ಹಾಗೂ ಆಪರಿಚಿತ ಪ್ರದೇಶ, ರಸ್ತೆಯನ್ನೂ ಕಂಡಾಗ ಭಯವಾಗದಿದ್ದರೂ, ಮನದ ಮೂಲೆಯಲ್ಲಿ ಆಂಜಿಕೆ ಇಲ್ಲದಿರಲಿಲ್ಲ.

ಜೆಜ್ಜೆಯು ವೇಗ ದ್ವಿಗುಣವಾಯಿತು. ಯಾರೋ ಗಾಡಿ ಹೊಡೆದು ಕೊಂಡು ಮುಂದೆ ಸ್ವಲ್ಪ ದೂರದಲ್ಲಿಯೇ ಹೋಗುತ್ತಿರುವಂತೆ ಶಬ್ದವಾಯಿತು. ಗಾಡಿಯನ್ನಾದರೂ ಹಿಡಿಯೋಣವೆಂದು ವೇಗದಿಂದ ಹೆಜ್ಜೆ ಹಾಕತೊಡಗಿದೆ. ಗಾಡಿ ಕಾಣಲಿಲ್ಲ, ಸಿಗಲೂ ಇಲ್ಲ. ಕೆರೆಯ ಸಮೀಪದಲ್ಲಿ ಒಂದೆರಡು ತೋಟಗಳು ಸಿಕ್ಕವು. ಹೇಗೂ ಇಲ್ಲಿ ಜನವಲಿಗಾಗಿ ಇರುವ ಒಬ್ಬಿಬ್ಬರಾದರು ಇರುತ್ತಾರೆ. ನನ್ನ ಪರಿಚಯ ತಿಳಿಸಿ ಅವರನ್ನು ಕರೆದು ಕೊಂಡು ಹೋದರಾಯ್ತು" ಎಂದು ಕೊಂಡೆ.

ಹತ್ತು ಹೆಜ್ಜೆ—ಹರುವ ವೇಳೆಗೆ ರಸ್ತೆಯ ಮಗ್ಗುಲಿನಲ್ಲಿ ಯಾರೋ ಇಬ್ಬರು ಮಹನಾಡುತ್ತಾ ನಿಂತಿದ್ದರು. ಅವರು ಯಾರು ಎಂಬ ಸಂಗತಿ ನನಗೆ ತಿಳಿಯದು. ಆದರೆ ಒಬ್ಬ ಯುವಕ, ಅವನೊಂದಿಗೆ ಇರುವವಳು ಯುವತಿ ಎಂಬುದು ಸ್ಪಷ್ಟವಾಗಿ ಗೊತ್ತಾಯಿತು.

ಯಾರೋ ದಂಡ ಹೆಂಡತಿಯರು ತೋಟಕ್ಕೆ ಬಂದು, ಕಲಸ ಮುಗಿಸಿಕೊಂಡು ಊರಿನ ಕಡೆ ಹೊರಟಿದ್ದಾರೆ ಎಂದುಕೊಂಡೆ. ಆಕಾಶವನ್ನೆಲ್ಲ ಕಪ್ಪು ಮೋಡ ಕವಿದಿದ್ದುದರಿಂದ ಚಂದ್ರನ ಸ್ವಲ್ಪ ಬೆಳಕಿದ್ದರೂ ಮುಂದಿನ ರಸ್ತೆ ಚನ್ನಾಗಿ ಕಾಣುತ್ತಿರಲಿಲ್ಲ. ಅವರಿಬ್ಬರೂ ನನ್ನನ್ನೆ ಅನುಸರಿಸಿ ಬರುತ್ತಿದ್ದಾರೆ ಎಂಬುದು ಖಚಿತವಾಯಿತು. ಅವರೇ ಮಾತನಾಡಿಸಬಹುದೆಂದು ಸುಮ್ಮನೆ ಹೆಜ್ಜೆ ಹಾಕುತ್ತಿದೆ. ಅವರು ಪಿಸುಗುಟ್ಟುತ್ತಿದ್ದರು. ಆದರೆ ಏನು ಮಾತು ಎಂಬುದು ಅರ್ಥವಾಗುತ್ತಿರಲಿಲ್ಲ. ನನಗೇಕೆ ಅವರ ಮಾತು?

ಅವರಿಸಿದ್ದ ಕತ್ತಲೆ; ಭೀಕರ ಮೌನ; 'ಜೀ' ಎನ್ನುವ ಶಬ್ದ ಎಲ್ಲವೂ ಒಂಟಿಯಾದ ನನ್ನನ್ನು ಕಣಕಾದವು. ಕೊನೆಗೆ ಗತ್ಯಂತರವಿಲ್ಲದೆ "ಯಾರದು?" ಎಂದೆ.

"ನಾವು....ನಿವ್ವ—"

"ಊರಿಗೆ ಹೊರಟಿರುವಿರೇನು?"

"ಹೌದು ನೀವು ಊರಿಗೆ ತಾನೆ?"

'ಹೌದು ದೇವಸ್ಥಾನಕ್ಕೆ ಯೋಗಿದ್ದೆ ಕತ್ತಲಾಯಿತು'

"ಒಬ್ಬರೇ ಹೋಗಿದ್ದಿರಾ, ಭಯವಾಗಲಿಲ್ವೆ?'

ಭಯವೇನೂ ಇಲ್ಲ, ಸ್ವಲ್ಪ ಜೊತ್ತಾಯಿತಷ್ಟೆ'

'ನೀವು ಬೇರೆ ಊರವರೇನು?'

"ಹೌದು, ರಾಮಕೃಷ್ಣಯ್ಯನವರ ಮನೆಗೆ ಬಂದಿದ್ದೇನೆ. ಅಣ್ಣಾಪೂರ್ಣಮ್ಮನವ್ರ ದೊಡ್ಡಮ್ಮ."

'ಆವಂಬ್ಬರೂ ದೇವರಂತಹ ಮನುಷ್ಯರು."

"....."

'ಆಪ ಒಬ್ಬರೇ ಬಗಿದ್ದೀರಿ ನೀವು. ನಡೆಯಿರಿ. ನಿವ್ವನ್ನು ಊರಿನ ತಪಕ ಬಿಡುತ್ತೇವೆ. ಇನ್ನು ಮೇಲೆ ಯಾಗೆನ್ನೆ ರಕ್ತಲಲ್ಲಿ ಒಬ್ಬರೇ ಈ ರಸ್ತೆಯಲ್ಲಿ ತಿರುಗಾಡಬೇಡಿ"

"ಯಾಕೆ ಕಳ್ಳಕಾಕರ ಭಯವೆ?"

"ಅಂತಹ ಭಯಂಕರ್ಲ ಹೇಳಿದ್ದು. ನಿಮ್ಮ ದೊಡ್ಡಮ್ಮನ ಮನೆಯಲ್ಲಿ ನಾಗ ಅಂತ ಆಳಿದ್ದ. ಅವನ ಮಗಳ ಚೆನ್ನಿ. ಚೆನ್ನೀನ ನೀವು ನೋಡಿದ್ದೀರೋ ಇಲ್ವೋ? ಅವಳು ತುಂಬ ಸುಂದರವಾಗಿದ್ದಳು. ಭೀಮ ಹನುಮ ಇಬ್ಬರೂ ಅಣ್ಣತಮ್ಮಂದಿರು. ಹನುಮ ಚೆನ್ನಿಯನ್ನು ಪ್ರೀತಿಸುತ್ತಿದ್ದ. ಇಬ್ಬರೂ ಮದುವೆ ಮಾಡಿಕೊಳ್ಳಲು ಒಪ್ಪಿಕೊಂಡರು. ಆದರೆ ಭೀಮು ಚೆನ್ನಿಯನ್ನು ಮದುವೆ ಮಾಡಿಕೊಳ್ಳಲು ಮುಂದೆ ಬಂದ. ಇದೇ ವಿಷಯವಾಗಿ ಅಣ್ಣತಮ್ಮಂದಿರಲ್ಲಿ ವೈಮನಸ್ಯ ಬೆಳೆಯಿತು. ಒಂದು ದಿನ ಮೂತಿಗೆ ಪೂತ ಬೆಳೆಯಿತು. ಭೀಮು ತಮ್ಮನನ್ನು ಕೊಲೆ ಮಾಡಿದ, ಚೆನ್ನಿ ಅವನ ಕೈಗೆ ಸಿಗಲಿಲ್ಲ. ದೇವಾಲಯದ ಸಮೀಪದ ಕಲ್ಯಾಣಿಯಲ್ಲಿ ಹಾರಿ ಪ್ರಾಣ ಬಿಟ್ಟಳು. ಮುಂದೆ ಭೀಮು ಊರು ಬಿಟ್ಟು ಹೋದ. ಚೆನ್ನಿ ವತ್ತ ಹನುಮು ಇವರು ದಿವ್ವವಾಗಿ ಇಲ್ಲಿ ಬಳಿವಾಡುತ್ತಿರುತ್ತಾರೆಂತೆ. ಸಾಮಾನ್ಯವಾಗಿ ಇಲ್ಲಿ ಏಕೈಕ ಜನರಿಗೆ ಕಾಣಿಸುತ್ತಿರುತ್ತಾರಂತೆ. ಅವರಿಂದ ಯಾರಿಗೂ ತೊಂದರೆಯಾಗಿಲ್ಲ. ಅನುಮಾನವಿದ್ದರೆ ನಿಮ್ಮ ದೊಡ್ಡಮ್ಮನವರನ್ನೇ ಕೇಳಿ" ಎಂದ ಯುವಕ.

"ಅಯ್ಯೋ ಪಾಪ, ಹಾಗಾಗಿ ಬಾರದಿತ್ತು" ಎಂದೆ.

"ಇಬ್ಬರು ಪ್ರೇಮಿಗಳ ಬಾಳು ಹಾಳಾಯ್ತು' ಎಂದಿತು ಹೃದಯ.

ಯುವಕ ಹೇಳಿದ ಕಥೆಯನ್ನೇ ಯೋಚಿಸುತ್ತಾ ವೇಗವಾಗಿ ಬರುತ್ತಿದ್ದೆ. ಏಂದೆ ಇದ್ದ ಯುವಕ ಯುವತಿಯರನ್ನು ಮರೆತಿದ್ದೆ.

ಊರು ತಲುಪಿದೆ, ದೊಡ್ಡಪ್ಪ ನಾಲ್ಕೈದು ಜನ ಹಳ್ಳಿಗರೊಂದಿಗೆ ಲಾಟೀನು ದೊಣ್ಣೆಗಳನ್ನು ತೆಗೆದುಕೊಂಡು ಹೊರಟಿದ್ದರು. ನನ್ನನ್ನು ಕಂಡೊಡನೆಯೇ ಅವರಿಗೆ ಆನಂದವಾಯಿತು.

"ಕತ್ತಲಾಗುವ ವೇಗೆ ಎಲ್ಲಿಗೆ ಹೋಗಿದ್ದೆ ಗೋಪಿ!' ಎಂದರು ದೊಡ್ಡಪ್ಪ.

'ನುಮ್ಮನೆ ಒಂದು ಸುತ್ತ ಹಾಕಿಕೊಂಡು ಬಂದೆ' ಎಂದೆ.

'ನಿವ್ವ ದೊಡಮ್ಮ ನೀವು ಇಷ್ಟು ಹೊತ್ತಾದರೂ ಬರಲಿಲ್ಲ ಎಂದು ಪೆದರಿಕುಳಿತಿದ್ದಾಳೆ ಬಾ" ಎಂದರು ದೊಡ್ಡಪ್ಪ.

ನಾನು, ದೊಡ್ಡಪ್ಪ ಮನೆ ಸೇರಿದವು. ದೊಡ್ಡಪ್ಪನ ಜೊತೆಗಿದ್ದ ರೈತರು ಮನೆಯ ದಾರಿ ಹಿಡಿದರು. ನಾನು ನನ್ನೆನ್ನು ಅನುಸರಿಸಿ ಬರುತ್ತಿದ್ದ ಯುವಕ ಯುವತಿಯರ ಸಂಗತಿಯನ್ನೇ ಮರೆತೆ.

"ಬಂವೆಯೊ ಪುಣ್ಯಾತ್ಮ? ಎಲ್ಲಿ ಹೋಗಿದ್ದೆಯೋ ಎಂದು ಗಾಬರಿ ಪೂಗಿದ್ದೆ" ಎಂದಳು ದೊಡ್ಡಮ್ಮ.

ಆವರ ಮುಗ್ಧ ಪ್ರೀತಿಯನ್ನು ಕಂಡುನಕ್ಕು "ನಾನೇನು ಹುಡುಗಿಯೇ ದೊಡ್ಡಮ್ಮ" ಎಂದೆ.

ಅದೆಲ್ಲ ಬೇಡ, ಸದ್ಯ ಬಂದೆಯಲ್ಲ? ಎಂದಳು ಪ್ರೀತಿಯ ದನಿಯಲ್ಲಿ.

ದೊಡ್ಡಪ್ಪ, ನಾನು ಊಟಕ್ಕೆ ಕೈ ತೊಳೆದೆವು.

ದೊಡ್ಡಮ್ಮ ಅನ್ನ ಬಡಿಸುತ್ತಾ "ಎಲ್ಲಿಗೆ ಹೋಗಿದ್ದಿ ಗೋಪಿ?" ಎಂದರು.

"ಬೀಗೆ ಸುತ್ತಾಡುತ್ತಾ ಹೋಗಿದ್ದೆ."

'ದೇವಸ್ಥಾನಕ್ಕೆ ತಾನೆ?"

'ಹೂಂ"

'ನನಗೆ ಗೊತ್ತಿಲ್ಲೆ ನಮ್ಮ ದೇವರ ಸಕ್ತ. ನಾನು ಅಂದುಕೊಂಡದ್ದು ನಿಜವಾಯ್ತು.

'ಹೋಗುವಾಗ ಹೇಳಬಾರದಿತ್ತೇ. ನಾಳೆ ನಾಡಿದ್ದರಲ್ಲಿ ಎಲ್ಲರೂ ಒಟ್ಟಾಗಿ ಹೋಗಬಹುದಿತ್ತು"

"ಬೇಸರವಾಯ್ತು ದೊಡ್ಡಮ್ಮ....ಸುಮ್ಮನೆ ಹೋಗಿ ಬಂದೆ"

"ಇನ್ನು ಮೇಲೆ ಅಲ್ಲಿಗೆ ಒಂಟಿಯಾಗಿ ಹೋಗಬೇಡ ಮಹರಾಯ. ನಿನಗೆ ಆ ವಿಷಯ ಗೊತ್ತಿಲ್ಲ"

"ಯಾವ ವಿಷಯು?"

"ಅದೊಂದು ದೊಡ್ಡ ಕಥೆ. ನೆನೆಪು ಮಾಡಿಕೊಂಡರೆಪ್ಪು ನಡಗುತ್ತದೆ"

"ಯಾವ ಕಥೆ.....ನಿಪ್ಪ ನುನೆಯು ಆಳು ನಾಗ, ಅವನ ಮಗಳು ಚನ್ನಿ....

ಭೀಮು ಮತ್ತು ಹನುವು...ಭೀಮು ಹನುಮನನ್ನು ಕೊಲೆ ಮಾಡಿ ಓಡಿ ಹೋದದ್ದು....

ಚನ್ನಿ ದೇವಸ್ಥಾನದ ಕಲ್ಯಾಣಿಯಲ್ಲಿ ಹಾರಿ ಸಕ್ತ ಕಥೆ ತಾನೆ!' ಎಂದೆ.

ದೊಡ್ಡಮ್ಮ ದೊಡ್ಡಪ್ಪ ಆಶ್ಚರ್ಯದಿಂದ ಕೇಳುತ್ತಿದ್ದರು.

'ಹೌದೇ ದೊಡ್ಡಮ್ಮ" ಎಂದು ಪ್ರಶ್ನಿಸಿದಾಕೆದೆ.

"ನಿನಗೆ ಈ ಕಥೆ ಯಾರು ಹೇಳಿದರು?' ಎಂದರು ದೊಡ್ಡಮ್ಮ.

"ದೇವಸ್ಥಾನದ ಬಟ್ಟೆ ಹೊರಟು ಬರುವ ವೇಳೆಗೆ ನುಮಾರಾಗಿ ಕತ್ತಲಾಗಿತ್ತು. ಜೊತೆಗೆ ಯಾರೂ ಇರಲಿಲ್ಲ. ಹೊತೆ ಇಲ್ಲ, ಕತ್ತಲಾಯಿತು ಎಂದು ವೇಗವಾಗಿಯೇ ಬರುತ್ತಿದ್ದೆ, ತೋಟಗಳ ಸಮೀಪದಲ್ಲಿ ಬಂದಾಗ ಒಬ್ಬ ಯುವಕ, ಒಬ್ಬ ಯುವತಿ ಮಾತನಾಡತ್ತಾ ನಿಂತಿದ್ದರು. ಒಬ್ಬ ನನ್ನ ಹಿಂಬಡೇ ಬಂದರು; ಅವರೇ ಈ ಕಥೆ ಹೇಳಿದರು. ನಿಮ್ಮಿಬ್ಬರನ್ನೂ ತುಂಬ ಹೊಗಳಿದರು. ಈ ಕಥೆ ಬೇರಾದರೆ ನಿವ್ವ ದೊಡ್ಡಮ್ಮನನ್ನೇ ಕೇಳಿ ಅಂದ ಆ ಯುವಕ" ಎಂದೆ.

ದೊಡ್ಡಮ್ಮ ದೊಡ್ಡಪ್ಪ ಒಬ್ಬರ ಮುಖ ವನ್ನೊಬ್ಬರು ನೋಡಿಕೊಂಡರು.

"ಚನ್ನಿ, ಹನುಮ ದೆವ್ವವಾಗಿ ತಿರುಗುತ್ತಿದ್ದಾರಂತೆ ನಿಜವೆ!' ಎಂದೆ

"ಆ ಕತ್ತಲು ವೇಳೆಯಲ್ಲಿ ನೋಟಗಳ ಸಾಲಿನಲ್ಲಿ ಯಾವ ಗಂಡು ಹೆಂಡತಿ ಹೊಗುತ್ತಾರೋ? ನಿನ್ನ ಹಿಂದೆ ಬಂದ ಆ ಯುವಕ ಯುವತಿಯರನ್ನು ಚೆನ್ನಿ... ಹನುಮು..." ಎಂದು ಬೆದರಿಸಲಂತೆ ನುಡಿದರು ದೊಡ್ಡಪ್ಪ.

ನನ್ನ ಕೈಯಲ್ಲಿದ್ದ ತುತ್ತು ನನಗರಿವಿಲ್ಲದೆಯೇ ಕೈಯಿಂದ ಜಾರಿ ಬಿತ್ತು.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26—4—1966.

NAVATUGA 16—11—1967
Registered with the Registrar of News Papers for India under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ಕೃಷಿ ಸಮಾಚಾರ

ಗಿಡ್ಡ ಜಾತಿಯ 'ಕ್ಯಾವೆಂಡಿಸ್' ಬಾಳೆ

ಬೇಗನೇ ಬಾಡಿ ಹೋಗುವಂತಹ ತರಕಾರಿಯೊಗಲೀ, ಹಣ್ಣಾಗಲೀ ಮೂರಲು ಸರಿಯಾದ ಮೂರುಕಟ್ಟೆಯು ಅನುಕೂಲವಿಲ್ಲದಿದ್ದಲ್ಲಿ ಅವುಗಳನ್ನು ಕಷ್ಟಪಟ್ಟು ಬೆಳೆದ ರೈತನ ಪಾಡು ಬೇಡ. ಆದರೆ ಸರಿಯಾದ ಯೋಜನೆ ಹಾಕಿಕೊಂಡು ಹಣ್ಣನ್ನು ಬೆಳೆದು ವ್ಯವಸ್ಥಿತ ರೀತಿಯಲ್ಲಿ ಸುಲಭವಾಗಿ ಮೂರಿ, ಲಾಭಗಳಿಸುವುದೂ ದುಸ್ಸಾಧ್ಯವೇನಲ್ಲ. ಇದಕ್ಕೆ ಸಾಪ್ಪೆ ಕೊಯಂಬುತ್ತೂರಿನ ಕೃಷ್ಣ ಸ್ವಾಮಿ ಗೌಂಡರ್.

ಈ ರೈತ ಗೌಂಡರ್‌ಗೆ ೭೫ ಎಕರೆ ಜಮೀನುಂಟುಕೊಯಂಬುತ್ತೂರಿಗೆ ೬ಮೈಲಿ ದೂರದಲ್ಲಿದೆ ಇವರ ಹಳ್ಳಿ. ಆ ಹಳ್ಳಿಯ ಹೆಸರು ರನುವಾಯ್, ಇವರ ಜಮೀನಲ್ಲಿ ಎರಡು ಬಾವಿ, ಎಲೆಕ್ಟ್ರಿಕ್ ಪಂಪ್ ಸೆಟ್ಟುಗಳು ಇರುವುದರಿಂದ ನೀರು ಹಾಯಿಸುವುದು ಕಷ್ಟವಲ್ಲ. ಸರಿಯಾಗಿ ನೀರು ತೋಟಕ್ಕೆ ಹಾಯಿಸುವುದಕ್ಕೆಂದೇ ೬—೮ಅಡಿ ದಪ್ಪದ ಸಿಮೆಂಟು ವೈಪುಗಳನ್ನು ೮೦೦ ಅಡಿಗಳಷ್ಟು ಭೂಮಿಯಡಿ ಹಾಕಿಸಿದ್ದಾರೆ. ೧೫ ಎಕರೆ ಜಮೀನಿನಲ್ಲಿ ಇತ್ತಾ ಗಿಡ್ಡ ಜಾತಿಯ ಕ್ಯಾವೆಂಡಿಸ್ ಬಾಳೆಯನ್ನು (ಹಸಿರು ವೊರಿವಸ್) ಬೆಳೆದು ಉಳಿದ ಜಮೀನಿನಲ್ಲಿ ಕಬ್ಬು, ಜೋಳ ತೆಂಡು, ಬೆಳೆಸುತ್ತಾರೆ.

ಗೌಂಡರ್‌ಗೆ ಬಾಳೆ ತೋಟಕ್ಕೆ ಕಂಪೋಸ್ಟು ಹಸಿರು ಗೊಬ್ಬರ ಹಾಕುವುದರಲ್ಲಿ ಹೆಚ್ಚು ನಂಬಿಕೆ. ತಳು ಗೊಬ್ಬರವಾಗಿ ಕಂಪೋಸ್ಟ್‌ನ್ನು ಹಾಕುತ್ತಾರೆ. ಕ್ಯಾಲೊಟೋಪಿಸ್ ಹಸಿರು ಗೊಬ್ಬರವನ್ನು ಜಮೀನಿನಲ್ಲಿ ಬೆಳೆದು ಆದಷ್ಟು ಬಾಳೆ ಸಸಿಗಳ ಸುತ್ತಲೂ ತುಳಿಸುತ್ತಾರೆ. ಬಾಳೆ ಸಸಿ ನಾಟಿ ಮಾಡಿದ ಎರಡು ಮೂರು ತಿಂಗಳಾದ ಮೇಲೆ ಪ್ರತಿಯೊಂದು ಸಸಿಗೂ ಹದಿನೆಂಟು ಅಂಗುಲ ದೂರದಲ್ಲಿ ೨೦೦ ಗ್ರಾಂ ಬೇವಿನ ಹಿಂಡಿ ೭೫ ಗ್ರಾಂ ಸೂಪರ್ ಫಾಸ್‌ಫೇಟ್, ೧೦೦ ಗ್ರಾಂ ಮ್ಯೂರಿಯೇಟ್ ಆಫ್ ಪೊಟಾಷ್‌ನ್ ಮಿಶ್ರಣವನ್ನು ಸಸಿಯ ಮೊದಲನೆಯ ಕಂತಿಂಗಿ ಹಾಕುತ್ತಾರೆ. ಇಷ್ಟೆ ಮೊತ್ತದ ಮಿಶ್ರಣವನ್ನು ಸಸಿ ನಾಟಿ ಮಾಡಿದ ನಾಲ್ಕು ಐದನೆ ತಿಂಗಳಲ್ಲಿ ಹಾಕುತ್ತಾರೆ. ಆದರೆ ಈ ಬಾರಿ ಗೊಬ್ಬರವನ್ನು ಎರಡು ಸಾಲುಗಳ ಮಧ್ಯದಲ್ಲಿ ಆಳವಾಗಿ ಅಂಗುಲ ಆಳದಲ್ಲಿ ಹಾಕುತ್ತಾರೆ. ಪ್ರತಿಯೊಂದು ಸಲ ಗೊಬ್ಬರ ಹಾಕಿದಾಗಲೂ ಕಡಲೇ ನೀರು ಹಾಯಿಸುತ್ತಾರೆ. ಸಾಮಾನ್ಯವಾಗಿ ಸಸಿಗಳಿಗೆ ವಾರಕ್ಕೊಂದು ಸಲ ನೀರು ಹಾಯಿಸುತ್ತಾರೆ.

"ಬಾಳೆಗಿಡ ಚೆನ್ನಾಗಿ ಬೆಳೆದು ನಿಂತ ಮೇಲೆ ಗಿಡದ ತುದಿಯು ಸುತ್ತಲೂ ಕಳೆ ತೆಗೆಯಲು ಆಳವಾಗಿ ಮಣ್ಣನ್ನು ಅಗೆಯಬಾರದು. ಜಾಗೆ ಮಾಡಿದರೆ ಗಿಡದ ಬೆಳವಣಿಗೆ ಆಡಚಣೆಯುಂಟಾಗುವುದು. ಇದರಿಂದ ಹಣ್ಣಿನ ಬೆಳವಣಿಗೆಗೂ ತೊಂದರೆಯಾಗುತ್ತದೆ ಎನ್ನುತ್ತಾರೆ ರೈತ ಗೌಂಡರ್‌ರವರು. ಇವು ಸಸಿ ನಾಟಿ ಮಾಡಿದ ೩೦—೪೫ ದಿನಗಳ ವರೆಗೆ ಎರಡು ಸಲ ಮಣ್ಣನ್ನು ೪ ಅಂಗುಲವಾಗಿ ಆಗೆದು ಆ ಮೇಲೆ ಹೆಚ್ಚು ಹುಲ್ಲು ಬೆಳೆದಾಗ ಮೂತ್ರಾ ತೆಳುವಾಗಿ ಮಣ್ಣನ್ನು ಕೆದರುತ್ತಾರೆ. ಒಟ್ಟು ೬ ಸಲ ಮೂತ್ರ ಮಣ್ಣು ಆಗೆದು ಕಳೆ ಕೆತ್ತು ಹಾಕಿಸುತ್ತಾರೆ.

"ಒಂದು ಗುಂಡಿಯಲ್ಲಿ ಒಂದು ಸಸಿ ಮೂತ್ರಾ ಬೆಳೆಸಲು ಬಿಡಬೇಕು. ಆಗಲೇ ಒಳ್ಳೆಯ ಗೊನೆ ಬಿಡಲು ಸಾಧ್ಯ' ಎನ್ನುತ್ತಾರೆ ಗೌಂಡರ್. ತಾಯಿ ಗಿಡದ ಬದಿಯಲ್ಲಿ ಸಸಿಗಳು ಬೆಳೆಯಲು ಬಿಡಬಾರದು. ತಾಯಿ ಗಿಡದಲ್ಲಿ ಹೂ ಬಿಡುವ ವರೆಗೂ ಆಗಾಗ್ಗೆ ಬೇಡದ ಸಸಿಗಳನ್ನು ಕಿತ್ತೆಸೆಯುತ್ತಿರಬೇಕು. ಆದರೆ ಹೂ ಬಿಡಲು ಪ್ರಾರಂಭವಾದ ಮೇಲೆ ಒಂದೇ ಒಂದು ಮರಿ ಸಸಿಯನ್ನು (ಸಣ್ಣ ಎಲೆ ಬಿಡುವ) ಮೂತ್ರಾ ಬೆಳೆಯಲು ಬಿಟ್ಟರೆ ಅದು ಮುಂದಿನ ಬೆಳೆಗೆ ಅನುಕೂಲವಾಗುತ್ತದೆ. ಈ ವಿಧಾನದಿಂದ ಶ್ರೀ ಗೌಂಡರ್‌ರವರು ಸುಮಾರು ೨೧ ತಿಂಗಳಲ್ಲಿ ಎರಡು ಸಲ ಹಣ್ಣು ಕೊಯ್ಲು ಮಾಡುತ್ತಾರೆ.

"ಬೆಳೆಗೆ 'ಎಲೆಮಚ್ಚೆ' ಬರದಂತೆ ಕಾಪಾಡಲು ತಾಮ್ರ ಶಿಲೀಂಧ್ರ ನಾಶಕವನ್ನು ಹಾಕಲೇ ಬೇಕು"—ಎನ್ನುತ್ತಾರೆ ರೈತ ಗೌಂಡರ್‌ರವರು. ಇವರು ಈ ಮದ್ದನ್ನು ಬೆಳೆಯ ಮೇಲೆ ೩—೪ ಸಲ ಸಿಂಪಡಿಸುತ್ತಾರೆ.

ಗೌಂಡರ್ ತಪ್ಪದೆ ಎರಡು ತಿಂಗಳಿಗೊಮ್ಮೆ ಸಸಿಗಳನ್ನು ನಾಟಿ ಮಾಡುತ್ತಲೇ ಇರುತ್ತಾರೆ. ಇದರಿಂದ ಪ್ರತಿ ದಿನವೂ ವರ್ಷಪೂರ್ತಿ ಹಣ್ಣು ಕೊಯ್ಯುತ್ತಲೇ ಇರಬಹುದು. ಈತ ಪ್ರತಿದಿನ ಮೂರುಕಟ್ಟೆಗೆ ೩೦—೬೦ ಗೊವೆಗಳನ್ನು ಕಳುಹಿಸುತ್ತಲೇ ಇರುತ್ತಾರೆ. ಪ್ರತಿಯೊಂದು ಗೊನೆಯಲ್ಲೂ ೧೦೦ ಹಣ್ಣಾದರೂ ಇದ್ದೇ ಇರುತ್ತವೆ ಮತ್ತು ಅವರ ದಿನದ ಸರಾಸರಿ ಆದಾಯ ೩೦೦ ರೂಪಾಯಿಗಳು. ಗೊನೆಗಳನ್ನು ಕೆತ್ತು ಮನೆಗೆ ತಂದಾದ ಮೇಲೆ ಹಣ್ಣು ಮಾಡಲು ಹೊಗೆಯೂಡಿಸುತ್ತಾರೆ. ೫—೬ ದಿನದ ನಂತರ ಮೂರುಕಟ್ಟೆಗೆ ಸಾಗಿಸುತ್ತಾರೆ. ಗೊನೆಗಳನ್ನು ಮನೆಗೆ ತಂದ ಮೇಲೆ ಅದಕ್ಕೆ ಹೊಗೆ ಮಾಡಿಸುವುದು ದೊಡ್ಡ ಚಿಕ್ಕ ಹಣ್ಣಿನ ಗೊನೆಗಳನ್ನು ಬೇರೆ ಮಾಡುವುದು ಮುಂತಾದ ಕೆಲಸಗಳೆಲ್ಲಾ ಶ್ರೀಮತಿ ಗೌಂಡರ ಕೆಲಸ.

ಗೌಂಡರರು ಸುಮಾರು ೨೦೦೦ ರೂಪಾಯಿ ಖರ್ಚು ಮಾಡಿ ತಮ್ಮಲ್ಲಿದ್ದ ಜೀಪಿಡೆತ್ತಿನ ಗಾಡಿಗೆ ಹಲಗೆಗಳನ್ನು ಉಪಯೋಗಿಸಿ ಅಂಗಡಿಯಂತೆ ಕಟ್ಟಿದ್ದಾರೆ. ಇದು ಚಲಿಸುವ ಅಂಗಡಿಯೇ ಸರಿ. ಈ ಗಾಡಿಗೆ ಒಂದು ಕಡೆಕಿಟಕಿಯೂ ಇದೆ. ಇನ್ನೊಂದು ಕಡೆ ಪ್ರತಿಯೊಂದು ದರ್ಜೆಯ ಹಣ್ಣಿನಬೆಲೆಗಳನ್ನು ಬರೆದಿಡುತ್ತಾರೆ. ಇದರಿಂದ ಹಣ್ಣು ಕೊಳ್ಳುವವರಿಗೂ ಸುಲಭ. ಗಾಡಿಯನ್ನು ಊರಿಗೆ ಹೊಡೆದುಕೊಂಡು ಹೋಗಿ ನಿಗದಿ ಮಾಡಿದ ಸಮಯಕ್ಕೆ ಸರಿಯಾಗಿ ಆಯಾಜಾಗದಲ್ಲಿ ನಿಲ್ಲಿಸುತ್ತಾರೆ. ಹಣ್ಣು ಕೊಳ್ಳುವವರಿಗೂ ಗಾಡಿ ಯಾವ ಸಮಯದಲ್ಲಿ ಎಲ್ಲಿ ನಿಲ್ಲುತ್ತದೆ ಎಷ್ಟು ಬೆಲೆಗೆ ಕೊಳ್ಳ ಬಹುದು ಎನ್ನುವುದೂ ತಿಳಿಯುತ್ತದೆ. ಇದುವರೆಗೂ ಒಂದು ದಿನವಾದರೂ ಹಣ್ಣು ಮನೆಗೆ ವಾಪಸ್ಸು ತಂದಿಲ್ಲ. ಎನ್ನುತ್ತಾರೆ ಗೌಂಡರ್‌ರವರು. ಬಾಳೆ ಸಸಿಗಳನ್ನು ಆರು ಆಣೆಗೆ ಒಂದೆಂತೆ ಮಾರುತ್ತಾರೆ.

ಈ ರೀತಿಯಾಗಿ ತಾವೇ ಹಣ್ಣನ್ನು ಮಾರುವುದನ್ನು ಪ್ರಾರಂಭಿಸುವುದಕ್ಕೆ ಮೊದಲು ವರ್ತಕರು ಕೊಟ್ಟ ಹಣ ತೆಗೆದುಕೊಳ್ಳಬೇಕಾಗಿತ್ತು. ಇಡೀ ಗೊನೆಗೆ ಸಿಕ್ಕುತ್ತಿದ್ದ ಹಣ ೫ ಅಥವಾ ಮೂರು ರೂಪಾಯಿ ಮಾತ್ರ. ಈಗ ೫—೬ ಆಳುಗಳನ್ನು ಇಟ್ಟುಕೊಂಡಿರುವುದರ ಜೊತೆಗೆ ನಿವ್ವಳ ಆದಾಯ ಎಕರೆಗೆ ವರ್ಷಕ್ಕೆ ೧೫೦೦ ರೂಪಾಯಿ ಸಿಗುತ್ತದೆ.

ಈ ಜಾತಿಯ ಹಣ್ಣಿಗೆ ಜಪಾನ್ ಮತ್ತು ಇತರ ದೇಶಗಳಲ್ಲಿ ಹೆಚ್ಚು ಬೇಡಿಕೆ ಇದೆ. ಇವುಗಳನ್ನು ಹೊರದೇಶಕ್ಕೆ ಕಳಿಸುವ ಉದ್ದೇಶದಿಂದ ಸುಮಾರು ೧೨,೦೦೦ ಎಕರೆಯಲ್ಲಿ ಈ ತಳಿಯ ಹಣ್ಣನ್ನು ಮದ್ರಾಸ್ ರಾಜ್ಯದಲ್ಲಿ ಬೆಳೆಯುವ ಯೋಜನೆಯೂ ಇದೆ.

ರೈತರು ಈ ತಳಿಯ ಹಣ್ಣನ್ನು ಬೆಳೆಯುವುದರಿಂದ ಬಹಳ ಅನುಕೂಲವಿದೆ. ಸಾಮಾನ್ಯವಾಗಿ ಬೇರೆ ತಳಿಯ ಸಸಿಗಳಾದರೆ ಎಕರೆಗೆ ೬೦೦—೮೦೦ ಸಸಿಗಳನ್ನು ಮಾತ್ರ ನಾಟಿಮಾಡಬಹುದು. ಆದರೆ ಗಿಡ್ಡ ಕ್ಯಾವೆಂಡಿಸ್ ತಳಿಯನ್ನು ಎಕರೆಗೆ ೧೨೦೦ ಸಸಿಗಳನ್ನು ನಾಟಿಮಾಡಬಹುದು. ಅಲ್ಲದೆ ೧೫ ತಿಂಗಳೊಳಗೆ ಒಂದು ಕೊಂಬೆಯಲ್ಲಿ ಎರಡು ಗೊನೆ ಬಿಡುತ್ತದೆ. ಆದರೆ ಇತರ ಜಾತಿಯ ಗಿಡಗಳಲ್ಲಿ ೧೫—೧೮ ತಿಂಗಳಿಗೆ ಒಂದು ಗೊನೆ ಬಿಡುತ್ತದೆ. ಕ್ಯಾವೆಂಡಿಸ್ ಗಿಡ್ಡ ಜಾತಿಯಾದ್ದರಿಂದ ಗಿಡಗಳಿಗೆ ಬಲವಾದಂತ ಬೂಂಬಿನ ಆಸರೆ ಕೊಡುವ ಅವಶ್ಯಕತೆಯೇ ಇಲ್ಲ. ಅಲ್ಲದೆ ರಸ್ತೆಯ ಬಾಗಿ ತಿರುವಿನ ಪಕ್ಕದ ಜಾಗಗಳಲ್ಲಿ ಕೂಡ ಈ ಜಾತಿಗೆ ಹತ್ತುವುದಿಲ್ಲ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ ರೂ.೨ರಷ್ಟು.(ಟಿ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

(Letter Writing Made Easy)

ವಿನಯವಹ ಪತ್ರವ್ಯವಹಾರಕ್ಕೆ ಬೇಕಾದಬಹುದಾದ 75ಇಂಗ್ಲಿಷ್‌ಪತ್ರಗಳು

ಬೆಲೆ:ರೂ. 1-25 (ಟ್ಯಕ್ಸ್‌ಪ್ರತ್ಯೇಕ)

ಡಾ। ಕೊರಡ್ಲಲ್ ವೆಂಕಟ್ರಾವ್ ವಿರಚಿತ

ಮನೆ-ಮದ್ದು

(Home-Remedies)

ನೂರಾರು ಕಾಯಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹಪೈದ್ಯ.

ಬೆಲೆ ರೂ. 2—00 (ಟ. ಖ್ಚು ಪ್ರತ್ಯೇಕ)

—ಪ್ರತಿಗಳಿಗೆ ತರಿಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

R. L. P. No. 140/1967.

ಸುಗಂಧಿ ಬಾಡಾ .. ಅರ್ಜಿದಾರರು—

ಮತ್ತು

ಮುತ್ತಕ್ಕ ಪೂಜಾರ್ತಿ ಕೊಡಾ—ಎದ್ರಿಯ್ದು

—ಇವರೊಳಗೆ

ಉಡುಪಿ ತಾಲ್ಲೂ ಪುತ್ತೂರು ಗ್ರಾಮದ ನಯಂಪಳ್ಳಿಯಲ್ಲಿರುವ ಮುತ್ತಕ್ಕ ಪೂಜಾರ್ತಿಯ ಗಂಡ ಎಂಡನೇ ಎದ್ರಿ ಪೂಜಾರಿಗೆ ತಿಳಿಯಪಡಿಸುವುದು. ನೀವೆ ಜಾಣಿಸಿದ ಅರ್ಜಿದಾರರು ಫಿರ್ಯಾದಿ ಮೇಲೆ ವಾರಂಟು ಕೇರಿ ಮಾಡಿದ ಅಮಲ್ ಬ್ಯೂಯಿಂತಾ, 29-11-67 ಕ್ಕೆ ಇಡಲ್ಪಟ್ಟಿದೆ. ಅದಕ್ಕೆ ನೀವ್ಯಾದೀನರಾದಲ್ಲಿ ಆಕ್ಷೇಪಣೆ ಇದ್ದಲ್ಲಿ ಆ ದಿನ ಕೋರ್ಟು ಸಮಕ್ಷ ಜಾಜರಾಗಿ ಉದಪರಿಸಿಕೊಳ್ಳತಕ್ಕದ್ದು.

(By order)

P. N. Krishnamoorthy Rao,
B. A. L. L. B.
Advocate for Petitioner.

ಉಡುಪಿ, ದ. ಕ., ತಾ. 6—11—1967.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

23—11—1967

೨೦
ಪೈಸೆ

ಕಥಾ ಪ್ರಪಂಚ

ತೀರದ ಆಸೆ

ಬರೆದವರು — ಶ್ರೀ ಹಳೆನಾಡು ಸುಬ್ರಾಯ ಭಟ್ಟ

ತುನೆಗೆ ಸೊಸೆ ಬಂದುದನ್ನು ಕಾಣದೇ ಕ್ಷಯ ಹಂಬಲ ನಾಗನ್ಮಾಳಿಗೆ. ಇದ್ದ ಒಬ್ಬ ಮಗನು ಇಪ್ಪತ್ತೈದರ ಹರೆಯಕ್ಕೆ ಬಂದಿದ್ದರೂ ಮದುವೆಯೂಗದೆ ಉಳಿದಿರುವುದು ತುಂಬಾ ಅಸಂತೃಪ್ತಿಯನ್ನುಂಟು ಮಾಡಿತ್ತು.

ಶ್ಯಾಮಣ್ಣನವರಂದರೂ ಆ ಯೋಜನೆಯನ್ನೇ ಇತ್ತೀಚೆಗೆ ಕೈಬಿಟ್ಟಿದ್ದರು. ಹಲವು ಕಡೆಗಳಿಂದ ಜಾತಕ ತರಿಸಿ ವಧು ಪರೀಕ್ಷೆ ನಡೆಯಿಸಿದಾಗಲೇ; ಸುಂದರ 'ಒಲ್ಲೆ' ಎಂದು ಘಡಿದುದನ್ನು ಕೇಳಿ ಬೇಸರಪಟ್ಟಿದ್ದರು.

ಇತ್ತೀಚೆಗಂತೂ ಕನ್ಯಾಪಿತೃರಾರೂ ಅವರ ಮನೆ ಬಾಗಿಲಿಗೆ ಸುಳಿಯುತ್ತಿದ್ದಿಲ್ಲ. ದಾರಿಯಲ್ಲಿ ಸಿಕ್ಕಾಗಲೂ ಮುಖಕೊಟ್ಟು ಮಾತನಾಡಿಸುತ್ತಿದ್ದಿಲ್ಲ.

ತನ್ನ ಅಣ್ಣನ ಮಗಳು ಶಾಲಿನಿಯನ್ನೇ ಸುಂದರನಿಗೆ ತರಬೇಕೆಂಬ ಬಯಕೆ ನಾಗಮ್ಮನಿಗಿದ್ದಿತ್ತು.

'ಹೇಗೂ ಅಣ್ಣನ ಮಗಳು, ಕಂಡು ಹೊಡಿದ ಹೆಣ್ಣು; ರೂಪ; ವಿದ್ಯೆಗೇನೂ ಕೊರತೆ ಇರಲಿಲ್ಲ. ಮನೆಗೆಲಸ ಎಲ್ಲವನ್ನು ಚೆನ್ನಾಗಿ ಬಲ್ಲಳೆಂಬುದೇ' ನಾಗಮ್ಮನ ಹಿರಿಯಾಸೆಗೆ ಕಾರಣವಾಗಿತ್ತು.

'ಖಂಡಿತ ಸುಂದರನಿಗೆ ತರುತ್ತೇನೆಂದೇ' ಮಗನ ವಿದ್ಯಾಭ್ಯಾಸ ಮುಗಿಯುವ ಮೊದಲೇ ತನ್ನಣ್ಣನಿಗೆ ಮಾತು ಕೊಟ್ಟಿದ್ದಳು.

ಹಾಗಾಗಿ ಅಣ್ಣ ಶ್ರೀಪತಿರಾಯರು ಕೂಡಾ ಮಗಳಿಗೆ ಬೇರೆ ಕಡೆ ವರನನ್ನು ಹುಡುಕುವ ಯೋಜನೆಗೆ ಹೋಗಿರಲಿಲ್ಲ.

ಇಂದಿನಿಗೆ ವಿದ್ಯಾಭ್ಯಾಸ ಸೂರೈಸಿ ಬಂದಾಗಲೇ ಬೇಂಕಿನಲ್ಲಿ ಕೆಲಸ ದೊರಕಿತು.

ಆತ ಮದುವೆಯ ಪ್ರಸ್ತಾಪವನ್ನು ಶ್ರೀಪತಿರಾಯರೇ ಎತ್ತಿದರು. ಆದರೆ ಸುಂದರ ಶಾಲಿನಿಯನ್ನು ಒಪ್ಪದಾಗ ಶ್ರೀಪತಿರಾಯರು ತಂಗಿಯ ಮನೆಯ ಮೆಟ್ಟಿಲ ಹತ್ತದಾದರು. ನಾಗಮ್ಮನ ಕಣ್ಣೀರ ಪ್ರಯೋಜನಕ್ಕೆ ಬರಲಿಲ್ಲ.

ಆದ ಕೆಲವೇ ಸಮಯದಲ್ಲಿ ದೂರದ ಬಂಧುಗಳಿಂದ ಕನ್ಯಾಪಿತೃಗಳು ಶ್ಯಾಮಣ್ಣನವರನ್ನು ಕಂಡು ಮಾತಾಡಿದರು.

ಆದರೆ ಸುಂದರನ ಮನಸ್ಸು ಅಲೋಚನೆಯಲ್ಲಿ ತಂದೆ-ತಾಯಿಗಳಿಗೆ ಅವಕಾಶವಾಗದೆ ಇರುತ್ತಿತ್ತು. ಹಾಗಾಗಿ ಇನ್ನುಂದ ನಾನು ಹೆಣ್ಣು ನೋಡೋದಿಲ್ಲ ನೀನು ಒಪ್ಪಿದ ಹೆಣ್ಣನ್ನೇ ನಾನು ಮದುವೆಯಾಗುವೆ ಎಂದು ಶ್ಯಾಮಣ್ಣನವರೂ ಸುಮ್ಮನಾದರು.

ಮಗನಿಗೆ ತಾನೂ ಮದುವೆಯಾಗಬೇಕೆಂಬ ಬಯಕೆ ಇಲ್ಲದೆ ಇರಲಿಲ್ಲ. ಆದರೆ ಅವಕಾಶಕ್ಕೆ ಅನುಕೂಲವಾದ ಹೆಣ್ಣು ದೊರೆತಿರಲಿಲ್ಲ.

ಸುಂದರನು ಲೆಕ್ಕಕ್ಕೆ ಸೇರಿ ಆಗಲೇ ಕಾಲ್ಕಾರು ಆಫೀಸಿನ ಮೆಟ್ಟಿಲನ್ನು ಏಳಿಸಿ ಬಂದಿದ್ದನು. ಎಲ್ಲಿಯೂ ಆದು ತಿಂಗಳಿಗಿಂತ ಹೆಚ್ಚು ದಿನ ಉಳಿದಿರಲಿಲ್ಲ.

ಈಗ ಏಳನೆಯ ಆಫೀಸಿನಲ್ಲಿ ದುಡಿಯ ಹೊರಟಿದ್ದನು. ಬಸರೂರು ಹೆಚ್ಚೇನೂ ದೊಡ್ಡದಲ್ಲವಾದರೂ ಬೇಂಕಿನ ವ್ಯವಹಾರವೇನೂ ಕಡಿಮೆ ಇರಲಿಲ್ಲ. ಅವನನ್ನು ಕೂಡಿ ಎಣಿಕೆ ಮಾಡಿದರೆ ಆಫೀಸಿನ ನೌಕರರು ಮೂರೇ ಮಂದಿ.

ಆ ಮೂವರ ಆಭಿರುಚಿಯೂ ಒಂದೊಂದು ವಿಧ. ವೆನೇಜರ ರಾಜಾರಾಮರು ಆಗಲೇ ಐವತ್ತರ ಮೆಟ್ಟಿಲಿಗೆ ಕಾಲಿಟ್ಟಿದ್ದರು. ಹಾಗಾಗಿ ಇನ್ನೂ ಹರೆಯದ ಸುಂದರನನ್ನು ಹುಡುಗನೆಂದೇ ಕಾಣುತ್ತಿದ್ದರು.

ಮತ್ತಳಿದ ಶಾಂತಣ್ಣನ ವಯಸ್ಸು ಮೂವತ್ತಾದರೂ ಆಗಲೇ ನಾಲ್ಕು ಮಕ್ಕಳ ತಂದೆಯಾಗಿದ್ದರು.

ಆಫೀಸು ಬಿಟ್ಟೊಡನೆ ಮನೆಗೆ ತೆರಳುವುದು ಅವರ ಅಭ್ಯಾಸವಾಗಿಯೇ ಬಂದಿತ್ತು. ಆದ್ದರಿಂದ ಸುಂದರನಿಗೆ ಆಫೀಸಿನ ಒಡನಾಡಿಗಳೇ ಇಲ್ಲವಾಗಿದ್ದರು.

ತಂದೆ ತಾಯಿಗಳನ್ನು ಕಾಣುವ ಬಯಕೆ ಮೊದಲೇ ಅವನಿಗೆ ಕಡಿಮೆಯಾಗಿತ್ತು. ಹೋಟೇಲು ಊಟ, ಆಫೀಸಿನ ಕೆಲಸ ಮುಗಿದಾಗ ಕೆಲದೂರ ತಿರುಗಾಟ; ಮತ್ತೆ ಸಿನಿಮಾ ಪ್ರಪಂಚ; ಇವಿಷ್ಟು ಅವನ ದಿನಚರಿಯೊಳಗಿತ್ತು.

ದಾರಿಯಲ್ಲಿ ಸಿಕ್ಕ ಹುಡುಗಿಯರತ್ತ ಸಾಚಿಕೆಯಿಲ್ಲದೆ ದೃಷ್ಟಿಸುತ್ತಿದ್ದ ಸುಂದರನನ್ನು ಕೆಲವು ಬಾರಿ ರಾಜಾರಾಮರೇ ಎಚ್ಚರಿಸಿದ್ದರು.

ಬರುವ ಸಂಬಳದಲ್ಲಿ ಏನನ್ನು ಉಳಿಸುತ್ತಿದ್ದಿಲ್ಲ. ಎಲ್ಲವೂ ಖರ್ಚಾಗಿ ಹೋಗುತ್ತಿತ್ತು.

ಂ ಂ ಂ

ಮೊದ ಮೊದಲು ದಿನದ ಬಿಡುವಿನ ಸಮಯವನ್ನೇ ಫಿರೀಕ್ಷಿಸುತ್ತಿದ್ದ ಸುಂದರ ನೀಗ; "ಅದೇಕೆ ಇಷ್ಟು ಬೇಗ ಹೊತ್ತು ಸಾಗುತ್ತದೆ' ಎಂದೇ ಪರಿತಪಿಸ ತೊಡಗಿದ್ದ.

ಕೆಲಸದಲ್ಲಿ ನಿರುತ್ಸಾಹಿಯಾಗಿದ್ದ ಸುಂದರ ಫೀಜಿಗೆ ಉತ್ಸಾಹದಿಂದಲೇ ದುಡಿಯ ಹೊಂಟ.

ಮೊದಲು ಅವನಿಗೆ ಕಾಲದ ಅರಿವನ್ನು ರಾಜಾರಾಮರೇ ಮೂಡಿ ಕೊಡಬೇಕಾಗಿತ್ತು ಆದರೆ ಈಗ ಎಲ್ಲಂಗಿಂತಲೂ ಮೊದಲೇ ಹಾಜರಾಗುತ್ತಿದ್ದ.

ಇದಕ್ಕೆ ಆಫೀಸಿನಲ್ಲಾದ ಬದಲಾವಣೆಯೇ ಕಾರಣವೆಂದು ಅದಾಗಲೇ ಮತ್ತಿಬ್ಬರಿಗೆ ತಿಳಿದಿತ್ತು.

ಉದ್ದವಾದ ಮೇಜಿನೆದರು ಸಾಲಾಗಿ ನಾಲ್ಕು ಕುರ್ಚಿಗಳು ಇಡಲ್ಪಟ್ಟಿದ್ದವು. ಕೊನೆಯ ಕುರ್ಚಿ ಇತ್ತೀಚೆಗೇನೆ ಹಾಕಲ್ಪಟ್ಟಿದ್ದಾಗಿತ್ತು.

ಆ ಕುರ್ಚಿಗೆ ನಳಿನಿಯೇ ಹಕ್ಕುದಾರಳಾಗಿದ್ದಳು.

ಸುಂದರನ ಒತ್ತಿನಲ್ಲಿಯೇ ನಳಿನಿ ಕುಳಿತಾಗ ಎಲ್ಲಿಲ್ಲದ ಉತ್ಸಾಹ ಅವನಲ್ಲುಂಟಾಗುತಿತ್ತು.

ನಳಿನಿ ಹತ್ತಿರವಿದ್ದಾಗ ತನ್ನ ಕೆಲಸವನ್ನು ವೈ ಮರೆತು ಮಾಡುತ್ತಿದ್ದನು.

ಕೆಲಸದ ಅನುಭವವಿಲ್ಲದ ನಳಿನಿ ನಾಲ್ಕು ದಿನ ಸುಂದರನ ಸಹಾಯವನ್ನೇ ಪಡೆದಳು. ಅವಳು ಕೇಳಿದಾಗ ಆ ಕೆಲಸವನ್ನು ತಾನೇ ಪೂರೈಸಿ ಕೊಡುತ್ತಿದ್ದನು.

ನಳಿನಿಯ ಆಕರ್ಷಕ ಕಣ್ಣುಗಳು ಆದಾವಾಗಲೋ ಸುಂದರನ್ನ ಸೆರೆ ಹಿಡಿದಿದ್ದವು.

ಅವಳ ಒಪ್ಪು ಓರಣ ಉಡುಪು ಅವನ್ನು ಆಕರ್ಷಿಸಿತ್ತು.

ಇನ್ನೂ ಹೆದಿನೆಂಟರ ಹರೆಯದ ನಳಿನಿಯ ಸುಂದರಾಕೃತಿಗೆ ಸುಂದರನು ನುನ ಸೋತಿದ್ದನು.

ಬಿಡುವಿನ ವೇಳೆಯಲ್ಲಿ ಸುಂದರನೇ ಏನಾದರೊಂದು ನೆಪ ಹಿಡಿದು ಮಾತು ಮೊದಲು ಮಾಡುತ್ತಿದ್ದನು.

ಎಳ್ಳಷ್ಟಕ್ಕೂ ನಳಿನಿ ಮುಗುಳು ನಗೆಯಿಂದಲೇ ಉತ್ತರ ನೀಡುತ್ತಿದ್ದಳು.

ನಳಿನಿ ಬರುವಾಗ ತನ್ನ ತಾಯಿಯನ್ನು ಜೊತೆಪುಲ್ಲಿಯೇ ಕರೆತಂದಿದ್ದಳು. ಆ ತಾಯಿಗೆ ಮಗಳ ಮೇಲೆ ಎಲ್ಲಿಲ್ಲದ ಮಮತೆ. ಎಂದೂ ಮಗಳ ಮೇಲೆ ಒಂದಿಷ್ಟು ಶಂಕೆಯ ತಾಳಿದವಳಲ್ಲ. ಮನೆಗೆ ಹೊತ್ತು ಮೂಡಿ ಬಂದಾಗಲೂ ಮಗಳ ಶೀಲದ ಬಗ್ಗೆ ಶಂಕಿಸಿದವಳಲ್ಲ.

ದಿನ ಸರಿದಂತೆ ಇಬ್ಬರ ಬಲವೂ ಒಂದೇ ಕಡೆಗೆ ಹರಿಯತೊಡಗಿತು.

ಆಫೀಸು ಕಳೆದಾಗಲೇ ಇಬ್ಬರೂ ಬಹು ಸಮಯ ಹರಟುತ್ತಾ ಕುಳಿತಿರುತ್ತಿದ್ದರು.

ನಳಿನಿ ಬಂದ ಲಗಾಯ್ತು ಸುಂದರನ ಸಿನಿಮಾಗೀಳು ಇಲ್ಲವಾಗಿತ್ತು.

ಉಡುಪಿನಲ್ಲಿ ದಿನ ದಿನಕ್ಕೆ ನಾವೀನ್ಯ ತೋರತೊಡಗಿತು. ನಳಿನಿಯ ಮುದಿ ತಾಯಿಗಿದಾವುದರ ಪರಿವೂ ಇರಲಿಲ್ಲ. ಪ್ರೇಮ ಬೆಳೆದಂತೆ ಸ್ವಚ್ಛಂದ ತಿರುಗಾಟ ಹೆಚ್ಚಿದಂತೆ ಸುಂದರನ ಮನ ಮತ್ತೂ ಮುಂಬೋಡುತಿತ್ತು. ನಳಿನಿಯ ಸಾಮಿಪ್ಯದಿಂದಲೇ ಕೃಷ್ಣಿ ಹೊಂದದಾದ ಅವಳ ಸುಕೋಮಲ ದೇಹದ ಮೇಲೆ ನೋಹ ನೆಳೆಯ ತೊಡಗಿತು.

ನಳಿನಿ ಸುಂದರನೊಡನೆ ಅದಾವಾಗಲಾದರೂ ತಿರುಗಾಡ ಬಯಸುತ್ತಿದ್ದಳು. ಗಂಟೆಗಟ್ಟಲೆ ಹುಟುಕುತ್ತಾ ಒಂದೆಡೆ ಕುಳಿತಿರುತ್ತಿದ್ದಳು.

ಆದರೆ ಸುಂದರ ಮುಂದಿರಿದಾಗ ಅವನನ್ನು ಅವಳೇ ಕಡೆಯುತ್ತಿದ್ದಳು.

ತನ್ನ ವಿವೇಕವನ್ನೆಂದೂ ಕಳೆದುಕೊಳ್ಳುತ್ತಿರಲಿಲ್ಲ, ಅದಕ್ಕೆ ಅವಳ ಮುರೆಯಲಾರದ ನೆಪವೇ ಕಾರಣವಾಗಿತ್ತು.

ನಳಿನಿಯು ಗೆಳತಿ ಶಾರದೆ. ಹೈಸ್ಕೂಲಿನಲ್ಲಿರುವಾಗಲೇ ನೆರೆಮನೆ ಶ್ರೀಧರನ ಪ್ರೇಮವನ್ನು ಸಂಪಾದಿಸಿದ್ದಳು. ಮದುವೆಯಾಗುವೆನೆಂಬ ನೆಪದಿಂದ ಆತ ಅವಳ ದೇಹದ ಸವಿಯನ್ನು ಭೋಗಿಸಿದ್ದನು. ಅದರ ಪ್ರತೀಕವಾಗಿ ಶಾರದೆಯ ಜೊಟ್ಟೆಯೊಳಗೆ ಶ್ರೀಧರನ ಪಿಂಡ ಬಳೆದು ತೊಡಗಿತು.

ಒಂದು ದಿನ ಶಾರದೆಯು ಕಣ್ಣೀರೇ ಶ್ರೀಧರನ ಮದುವೆ ನುತ್ತೊಬ್ಬಳೊಡನೆ ನೆರವೇರಿತು. ಮುಂದೆ ತಲೆ ಎತ್ತಿ ಬಾಳಲಾರದೆ ಶಾರದೆ ಒಂದು ದಿನ ಮನೆಯ ನುಂಡಿನ ಬಾವಿಗೇನೇ ಹಾರಿ ಪ್ರಾಣ ಬಿಟ್ಟಿದ್ದಳು.

ಅಂದಿನಿಂದ ನಳಿನಿಯು ಒಳಗೊಳಗೆ ದಂಡು ದ್ವೇಷಿಯಾಗಿದ್ದಳು. ಆದರೆ ವಯಸ್ಸಿಗೆ ಬಂದಾಗ ಗಂಡಿನ ಸಂಪರ್ಕ ಬೇಕೆಂಬಾಸೆಯುಂಟಾಗಿತ್ತು. ಮದುವೆಯಾಗದೆ ದೇಹ ಫೀಡಲು ಮಾತ್ರ ತಯಾರಾಗಿರಲಿಲ್ಲ.

ಸುಂದರನಿಗೆ ನಳಿನಿಯ ಕಟ್ಟುಪಾಡಿನ

(ಹದಿನೈದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೋಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಆಗ್ರ ಸ್ಥಾನ ಪಡೆದ ವಿಶಾಲವಾದ ಹೊಟೆಲ್.

ಉದಯವಾಣಿ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೧೨	೨೩—೧೧—೧೯೬೭	No. 12

ವಚನ ಸುಧೆ

ಕುಲಾನಾ ಸಮುಪೇತಾನಾ
ಗೋಭಿ: ಸುರುಸತೋದ್ಗತ:
ಕುಲ ಸಂಖ್ಯಾಂ ನ ಗಚ್ಛಂತಿ
ಯೋನಾ ಹೀನಾನಿ ವೃತ್ತತಃ

ಧನಗಳು, ಮನುಷ್ಯರು ಮತ್ತು ಸಂಪತ್ತಿನಿಂದ ತುಂಬಿ ಕುಲುಕಾಡುತ್ತಿದ್ದರೂ ಸದಾಚಾರ ಹೀನವಾದ ಮನೆತನವು ಸತ್ಕುಲವೆನಿಸುವುದಿಲ್ಲ.

ಎಚ್ಚರಿಕೆ ಅಗತ್ಯ

ಭಾರತದಲ್ಲಿ ದಿನ ದಿನಕ್ಕೂ ಹೊಸ ಹೊಸ ರಾಜಕೀಯ ಪಕ್ಷಗಳು ಹುಟ್ಟುದರೂ ಇನ್ನೂ ಆಶ್ಚರ್ಯ ಪಡಬೇಕಾದ ದಿನ ಬಾರದು. ಈ ವರ್ಷದ ಆರಂಭಕ್ಕೆ ಮೊದಲು ಪ್ರತಿರಾಜ್ಯದಲ್ಲೂ ಒಂದೊಂದೆಂಬಂತೆ ಮರಿ ಕಾಂಗ್ರೆಸ್ಸು ಹುಟ್ಟಿ ಕೊಂಡಿತು. ಚುನಾವಣೆಗಳಲ್ಲಿ ಕಾಂಗ್ರೆಸ್ಸು ಅಧಿಕಾರಕ್ಕೆ ಬರದಂತೆ ಏನೇನು ಮಾಡಬಹುದೋ ಅವೆಲ್ಲವನ್ನೂ ಮಾಡಿತು. ತನ್ನ ಧ್ಯೇಯಗಳಿಗೆ ಎಳ್ಳಷ್ಟೂ ಹೊಂದಿಕೊಳ್ಳದ, ಕೆಲವೆಡೆ, ತದ್ವಿರುದ್ಧವಾದ ಧ್ಯೇಯ ಹೊಂದಿದ ಬೇರೆ ಬೇರೆ ರಾಜಕೀಯ ಪಕ್ಷಗಳೂಡನೆ ಕೈ ಜೋಡಿಸಲು ಮಾಡಿತು. "ಸಂಯುಕ್ತರಂಗ ಸರಕಾರವು ಹಲವು ರಾಜ್ಯಗಳಲ್ಲಿ ರಚನೆಗೊಂಡು ತಂತಿಯ ಮೇಲೆ ನಡೆಯ ತೊಡಗಿದುವು. ಹೀಗೆ ಡೊಂಬರಾಟ ಆಡುತ್ತಿರುವ ಸರಕಾರಗಳಲ್ಲಿ ಪಶ್ಚಿಮ ಬಂಗಾಳ ಮತ್ತು ಹರ್ಯಾಣಾಗಳು ಅಗ್ರಗಣ್ಯವಾಗಿವೆ.

ಬಿಹಾರ ರಾಜ್ಯಕ್ಕೆ ರಾಜ್ಯಪಾಲರಾಗಿ ಶ್ರೀ ಫಕ್ರುದ್ದೀನ್ ಅಲಿ ಅಹಮ್ಮದ್ ಅವರು ನೇಮಕಗೊಂಡ ಸಂದರ್ಭದಲ್ಲಿ ಅವರು ಅಲ್ಲಿಯ ಮುಖ್ಯಮಂತ್ರಿ ಶ್ರೀ ಮಹಾಮಾಯಾ ಪ್ರಸಾದ್ ಸಿನ್ಹಾ ಅವರನ್ನು ಕುರಿತು ಆಡಿದ ಮಾತುಗಳು ಗಮನಾರ್ಹವಾಗಿವೆ. "ಸಂಯುಕ್ತರಂಗ ಸರಕಾರಗಳು ಅಧಿಕಾರಕ್ಕೆ ಬಂದ ಕೂಡಲೇ ಅವುಗಳ ಘಟಕ ಪಕ್ಷಗಳು ಪರಸ್ಪರ ಕಚ್ಚಾಡಲು ಆರಂಭಿಸುತ್ತವೆ. ಇದು ಸಂಯುಕ್ತರಂಗ ಸರಕಾರಗಳ ಸಾಮಾನ್ಯ ಲಕ್ಷಣವಾಗಿದೆ. ಇಂಥ ಸರಕಾರಗಳು ಸ್ಥಿರವಾಗಿ ಆಡಳಿತ ನಡೆಸಲಾರವು" ಎಂದು ಅವರು ಹೇಳಿದ್ದರು. ಈ ಮಾತುಗಳು ಎಷ್ಟು ಸತ್ಯವಾಗಿವೆ ಎಂಬುದಕ್ಕೆ ಬಿಹಾರ ರಾಜ್ಯದ ಪ್ರಸಕ್ತ ಪರಿಸ್ಥಿತಿಯೇ ಸಾಕ್ಷಿಯಾಗಿದೆ. ಅಲ್ಲಿ ಸಂಯುಕ್ತರಂಗ ಸರಕಾರವು ಅಧಿಕಾರಕ್ಕೆ ಬಂದು ಇನ್ನೂ ಒಂದು ತಿಂಗಳು ಕಳೆದಿಲ್ಲ. ಆಗಲೇ ಅದರ ಘಟಕ ಪಕ್ಷಗಳಲ್ಲಿ ಒಂದಾದ ಸಂಯುಕ್ತ ಸೋಷಲಿಸ್ಟ್ ಪಕ್ಷವು ಸರಕಾರಕ್ಕೆ ಬೆಂಬಲ ಕೊಡುವುದನ್ನು ನಿಲ್ಲಿಸಿದೆ. ಸಂಯುಕ್ತ ಸೋಷಲಿಸ್ಟ್ ಪಕ್ಷದ ಶಾಸಕರು ಸಂಪುಟದಿಂದ ಹೊರಗುಳಿದಿದ್ದಾರೆ. ಸಂಯುಕ್ತ ಸೋಷಲಿಸ್ಟ್ ಪಕ್ಷದ ಬೆಂಬಲವನ್ನು ಕಳೆದುಕೊಂಡ ಮೇಲೆ ಸಂಯುಕ್ತರಂಗ ಸರಕಾರವು ಅಲ್ಪಮತಕ್ಕೆ ಇಳಿದಿದೆ. ಅದು ಬಹುಮತವನ್ನು ಕಳೆದುಕೊಂಡಿದೆ. ಆದರೂ ಅದು ಅಧಿಕಾರದಲ್ಲಿ ಮುಂದುವರಿಯಲು ಪ್ರಯತ್ನಿಸುತ್ತಿದೆ. ಸಂಯುಕ್ತ ಸೋಷಲಿಸ್ಟ್ ಪಕ್ಷದ ಶಾಸಕರನ್ನು ಸೆಳೆಯಲು ಅದು ಪ್ರಯತ್ನಿಸುತ್ತಿದೆ. ಈ ಪ್ರಯತ್ನ ಫಲಿಸಿದರೆ ಸಂಯುಕ್ತರಂಗ ಸರಕಾರವು ಮತ್ತೆ ಬಹುಮತ ಗಳಿಸಿದಂತಾಗುತ್ತದೆ. ಇಲ್ಲವಾದರೆ ಅದು ಅಧಿಕಾರ ಕಳೆದುಕೊಳ್ಳಬೇಕಾಗುತ್ತದೆ. ಈ ಪ್ರಯತ್ನ ಫಲಿಸಿದರೆ ಅದು ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಾಗುತ್ತದೆ. ಆದರೆ ಅದು ಅಧಿಕಾರದಲ್ಲಿ ಮುಂದುವರಿಯುವುದು ಸಾಧ್ಯವಾದರೂ ಅದು ಸಮರ್ಥವಾಗಿ ಆಡಳಿತ ನಡೆಸಲಾರದು. ಅದು ಅಸ್ಥಿರವಾಗಿಯೇ ಇರುತ್ತದೆ. ಅದು ಯಾವಾಗ ಬೇಕಾದರೂ ಕುಸಿದು ಬೀಳಬಹುದು. ಅದು ಕುಸಿದು ಬೀಳುವ ಸಂಭವವೇ ಹೆಚ್ಚಾಗಿದೆ. ಹೀಗೆ ಬಿಹಾರ ರಾಜ್ಯದಲ್ಲಿ ಸಂಯುಕ್ತರಂಗ ಸರಕಾರವು ಅಸ್ಥಿರವಾಗಿರುವುದಕ್ಕೆ ಮತ್ತು ಅಸಮರ್ಥವಾಗಿರುವುದಕ್ಕೆ ಕಾರಣಗಳು ಅನೇಕ. ಅವುಗಳಲ್ಲಿ ಮುಖ್ಯವಾದ ಕಾರಣವೆಂದರೆ ಸಂಯುಕ್ತರಂಗ ಸರಕಾರದ ಘಟಕ ಪಕ್ಷಗಳಲ್ಲಿ ಒಂದಾದ ಜನಸಂಘವು ಕೋಮುವಾದಿ ಪಕ್ಷವಾಗಿರುವುದು. ಜನಸಂಘವು ಕೋಮುವಾದಿ ಪಕ್ಷವಾಗಿರುವುದರಿಂದ ಅದು ಸಂಯುಕ್ತರಂಗ ಸರಕಾರದ ಇತರ ಘಟಕ ಪಕ್ಷಗಳೊಂದಿಗೆ ಸಹಕರಿಸಲಾರದು. ಅದು ಸಂಯುಕ್ತರಂಗ ಸರಕಾರದ ಇತರ ಘಟಕ ಪಕ್ಷಗಳೊಂದಿಗೆ ಸಹಕರಿಸಲಾರದಿರುವುದರಿಂದ ಸಂಯುಕ್ತರಂಗ ಸರಕಾರವು ಸಮರ್ಥವಾಗಿ ಆಡಳಿತ ನಡೆಸಲಾರದು. ಸಂಯುಕ್ತರಂಗ ಸರಕಾರವು ಅಸ್ಥಿರವಾಗಿರುವುದಕ್ಕೆ ಕಾರಣವೂ ಜನಸಂಘವೇ ಆಗಿದೆ. ಜನಸಂಘವು ಕೋಮುವಾದಿ ಪಕ್ಷವಾಗಿರುವುದರಿಂದ

ಗೇಹೆ ರಾಜ್ಯದಲ್ಲಿ

ನಿನ್ನೆಗೆ ಭವಿಷ್ಯ, ನಾಳೆಗೆ ಭೂತ

ಆಲ್ರಿ ಇಡಿಯ ದೇಶದಲ್ಲೇ ಭಾರೀ ನಾಟಕ ನಡೆಯುತ್ತಿದೆಯಲ್ಲಾ....'

"ಆಲ್ವೆ ಮತ್ತೆ, ಜೀವನವೇ ನಾಟಕ, ಈ ವಿಶ್ವವೇ ನಾಟ್ಯರಂಗ..."

"ಅದೆಲ್ಲಾ ನಿಮ್ಮ ಪುರಾಣ ಬೇಡ..'

"ನೋಡು, ನಾನು ಇದ್ದದ್ದನ್ನು ಇದ್ದಂತೆ ಅಂದ್ರೆ ನಿಂಗೆ ಪುರಾಣವಾಯ್ತು. ಆದ್ರೂ ಕೇಳು, ಪುರಾಣದಲ್ಲಿ ಮತ್ತು ಎಂದಿಗೂ ಸಟೆಯೂಡುವುದಿಲ್ಲಾಂತ...'

"ಇರಬಹುದು, ಆದ್ರೂ ಪುರಾಣಮಿಕ್ಕೈವ ನ ಸಾಧುಮನ್ಯೇ ಅಂತ ನಿನ್ನ ಕವಿ ಕುಲಗುರು ಕಾಳಿದಾಸ ಅಂದಿದ್ದಾನೆಂತೆ ನೋಡಿ."

"ಏನಾಯ್ತು? ಅದನ್ನು ನಂಬಬೇಡಿ ಅಂತ ಎಲ್ಲಿ ಹೇಳಿದ್ದಾನೆ? ಅದ್ರ ಮೇಲೆ...'

ಕ್ಷಿಣ'ಯಾಕೆ ನಾಲಿಗೆ ತುಂಡಾಯ್ತೇನು? ಹೇಳಿಬಿಡ್ರಿ, ಅದ್ರ ಮೇಲೆ..."

"ಹ್ಞೂಂ..... ಅಂದ್ರೆ, ತಾನು ಬರೆಯೋ ಕಾವ್ಯವನ್ನು ಜನ ತಿರಸ್ಕರಿಸಬಾರದಲ್ಲ, ಅದಕ್ಕೆ ಹಳತು ಮಾತ್ರ ಸತ್ಯವಲ್ಲ, ಹೊಸತೆಲ್ಲ ಸುಳ್ಳಲ್ಲ ಅಂದ...."

"ಅಂದ್ರೆ,ಅವನ ಸ್ವಾರ್ಥಸಾಧನೆಗೆ...'

"ಬೇಕಾದ್ರೆ ಹಾಗೂ ಅಂದುಕೋ...'

"ಆಲ್ರಿ, ಅವನು ಪುರಾಣದಲ್ಲಿಲ್ಲದ್ದು ಏನು ಬರೆದಿದ್ದಾನೇಂತ?"

"ಅಯ್ಯೋ, ತುಂಬ ತುಂಬ. ಅದೂ ನಾಟಕ. ನಾಟಕ ಅಂದ್ರೇನೇ ಸುಳ್ಳಿನಿಂದ ತುಂಬಿದ್ದು. ಇಂದಿನ ಸಿನಿಮಾ ಪುರಾಣ ಸುಳ್ಳು ಸಂತೆ...."

"ಸಿನಿಮಾದ ಸುದ್ದಿ ಈಗ ಬೇಡ. ಕಾಳಿದಾಸ ಏನು ಮಾಡಿದ್ದ?"

"ಕೇಳು, ಅವನ ಶಾಕುಂತಲ ನಾಟಕಕ್ಕೆ ಮೂಲ ಮಹಾಭಾರತ— ವ್ಯಾಸ ಭೃತ..'

"ಹ್ಞೂಂ...."

'ದುಷ್ಯಂತ ಬೇಟೆಗೆಂದು ಬರುತ್ತಾನೆ. ಶಕುಂತಲೆಯನ್ನು ಕಾಣುತ್ತಾನೆ. ನೀನಾರೆಂದು ಕೇಳುತ್ತಾನೆ. ನಾನು ಶಕುಂತಲೆಯೆಂದಾಕೆ ತನ್ನ ಕಥೆ ಹೇಳುತ್ತಾಳೆ..."

'ಛಿ.... ಏನಿದು?"

"ಯಾಕೆ?"

'ಅಲ್ಲ, ಪರಪುರುಷನೊಡನೆ ಹೀಗೆ ಮನಸ್ವಿಯಾಗಿ ಮಾತಾಡೋಕೆ ನಾಚಿಕೆಯಿಲ್ಲವೆ ಆ ಪ್ರಾಯಕ್ಕೆ ಬಂದ ಹುಡುಗಿಗೆ?"

"ನೋಡು, ನಿನಗೇ ಸರಿಯೊಗಲಿಲ್ಲ,ವ್ಯಾಸರು ಕಾಳಿದಾಸಶಕುಂತಲೆಯನ್ನು ಗಂಡುಬೀರಿ, ಲಜ್ಜಾವಿಹೀನೆಯಾಗಿ ಚಿತ್ರಿಸದೆ, ನೀನು ಮೆಚ್ಚುವಂತೆ ನಾಚಿಕೆಯ ಗೊಂಬೆಯನ್ನಾಗಿ ಮಾಡಿದೆ. ದುಷ್ಯಂತನು ಶಕುಂತಲೆಯ ವಿಚಾರವನ್ನು ಆಕೆಯ ಸಖಿಯರೊಡನೆ ಕೇಳಿ ತಿಳಿಸುಕೊಂಡ..'

"ಎಷ್ಟು ಒಳ್ಳೆಯದು ನೋಡಿ, ಈ ಪವಿತ್ರಕರ್ನೆ!'

'ನೋಡು, ಪುರಾಣವನ್ನೇ ನಂಬ ಬೇಡ್ರಿ ಬದಲಾಪನೆ ಮಾಡಿದರೆ, ಚಂದ ರಾಣುತ್ತದೆ ಎಂದು ಪುರಾಣಮಿಕ್ಕೇವ ಶ್ರೇಷ್ಠ ಮನ್ಯೇ ಅಂದ ಹಾಗೆ...'

"ಹ್ಞೂಂ ನ ಶ್ರೆ ಪುರಾಣದ ಮೂಲ ಸುಳ್ಳುಗೋದಿಲ್ಲ ಅಂದಿರಲ್ಲಾ, ಅದು ಹೇಗೆ?"

'ಇದಕ್ಕೆ ಬೇರೆ ಉದಾಹರಣೆ ಬೇಕೆ? ನಿನ್ನ ಆಸ-ಪಾಸನ್ನು ತುಸು ನೋಡಿಕೊಂಡರೆ ಸರಿಯೊಗಿ ತಿಳಿಯುತ್ತೆ...'

'ಅಂದ್ರೆ....'

"ವ್ಯಾಸರು ಚಿತ್ರಿಸಿದಂತಹ (ಅಭಿನವ) —ಅಭಿನಯಿ ಶಕುಂತಲೆಯರೂ ದುಷ್ಯಂತರೂ ಎಷ್ಟಿಲ್ಲ...."

"ಓ..... ಇದೆಲ್ಲ ಸಿನಿಮಾದ ಪ್ರಭಾವ"

'ಸುಮ್ಮ, ಸುಮ್ಮಗೆ ಅವ್ರನ್ನು ಯಾಕೆ ದೂರಬೇಕು? ನೋಡು, ವೇದಗಳು ಅಪೌರುಷೇಯವಂತೆ. ಇರಬಹುದೂನ್ನು ಅಂಪೂ ಅವಕ್ಕೆ ಕಡಿಮೆಯೆಂದರೂ ನಾಲ್ಕೈದು ಸಾವಿರ ವರ್ಷವಾಯಿತೂನ್ನು. ಇಷ್ಟು ಕಾಲದಲ್ಲಿ ಏನೇನೋ ಲೋಕದಲ್ಲಿ ನಡೆಯಿತು. ಆದರೂ ಆ ಹಳೆಯ ವೈದಿಕಮತವನ್ನೇ ಜಾಡೂ ತಪ್ಪದೆ ಅನುಸರಿಸಬೇಕೆನ್ನುವ ವೈದಿಕ ಸಂಪ್ರದಾಯಿಗಳನ್ನು ಕೆಲವರಿಲ್ಲ ಇದ್ದಾರಲ್ಲಾ—ಅರ್ಥವಿರಲಿ, ಇಲ್ಲದಿರಲಿ, ಅವರಿಗೆ ಆ ಗೊಡ್ಡು ಸಂಪ್ರದಾಯ ಮುಖ್ಯ....

'ಅಂದ್ರೆ, ಹಾಗೇನೇ, ಗಂಡು—ಹೆಣ್ಣು ಯೌವನದ ಹುಚ್ಚನ್ನು ಮನಸ್ವಿಯಾಗಿ ಹರಿಯ ಬಿಡುವುದೂ ಹಳೆಯ ಪುರಾಣದ ಸಂಪ್ರದಾಯವೆಂದು ನೀವು ತಾನೇ ಅನ್ನುವುದು?"

'ಹ್ಞೂಮ್ಮ—ಶಂಕನು ಚಕ್ರವರ್ತಿಯೂ ಡಿದ್ದೇನು? ಶೂರ್ಪಣಖೆ ಮೂಡಿದ್ದೇನು? ಅರ್ಜುನ—ಸುಭದ್ರೆಯರ ರಹಸ್ಯವೇನು? ದುಷ್ಯಂತ—ಶಕುಂತಲೆ....'

"ಸಾಕು ಬಿಡೀಂದ್ರೆ,ಎಲ್ಲೂ ಒಂದೊಂದುದಾಹರಣೆ ಸಿಕ್ಕಿದ್ರೆ....."

"ಮತ್ತೆ ಸಿನಿಮಾ ಏನು? ಅದೂ ಅಷ್ಟೆ. ಅರೆ ಹುಚ್ಚರಿಗೆ ಕಳ್ಳು ಕುಡಿಸಿ ಪೂರಾ ಹುಚ್ಚರನ್ನಾಗಿ ಮಾಡಿ, ಕಸೆ ಕತ್ತರಿಸುವ ಕೆಲವಂ ರಾಜೋದ್ಯಮ.'

"ಅದು ಸರೀನಿ. ಮೊನ್ನೆ ಮೊನ್ನೆ ದೆಂಬಳೂರಲ್ಲಿ ದೀಲೀಪ ಕುಮಾರ್ ಅಂದಿದ್ದನಂತೆ—ಒಳ್ಳೆಯ ನಾಟಿತ್ಯವಿಲ್ಲ, ಒಳ್ಳೆಯ ಚಿತ್ರವಿಲ್ಲ ಅಂತ—'

'ಹಾಗೇನೇ ನೋಡು, ದೇಶ ತುಂಬ ಕೆಟ್ಟದೂ ಕೆಟ್ಟದು....'

'ಆಲ್ರಿ, ಬಳಿಗ್ಗೆ ಕಾಂಗ್ರೆಸನ್ನು ತೃಜಿಸಿ ಸಂಯುಕ್ತ ರಂಗ ಸೇರಿದ ಒಬ್ಬರು ಮಧ್ಯಾಹ್ನದಲ್ಲೇ ಮಂತ್ರಿಯಾದರಂತೆ..."

"ನೋಡು, ಏನು ಚಮತ್ಕಾರ!'

"ಆದೇ ಹುಬ್ಬಳ್ಳಿಯಲ್ಲಿ, ಈಗ ತಮಗೇ ಟಿಕೆಟ್ ಇಲ್ಲ ಅಂತ ಸಂಯುಕ್ತ ದಳ ಹೇಳುತ್ತಿದೆಯಂತೆ.'

"ಮತ್ತೆ, ಅದರ ಮಂತ್ರಿ ಸೇನೆಯೇ ವಿಧಾನ ಸಭೆಯ ಕಾಲಂಶವಿಷ್ಟು ಇದೆ.'

"ಪಶ್ಚಿಮ ಬಂಗಾಳದ ರಾಜ್ಯಪಾಲ—ಮುಖ್ಯ ಮಂತ್ರಿಯವರ ನಡುವೆ ತುಸು ವಿರಸ ಮೂಡಿದೆಯಂತೆ...."

ಪಾರಮ್ಯ ವಿಜಯ ಮುಖರ್ಜಿಯವರ ಬಹುರಂಗಿಗೆ ದಳಕ್ಕೆ ಬಹುಮತವಿಜಯ ಇಲ್ಲವೇ ನೋಡಲು ವಿಧಾನ ಸಭೆ ಕರೆಯುವ ವಿಚಾರದಲ್ಲಿ".

"ಏನಾಯಿತು ಮತ್ತೆ?'

"ದಶಂಬರ ಗಲ್ಲಿಕ್ಕೆ ಕರೆಯುತ್ತಾರಂತೆ. ಅದು ವರೆಗೆ ಇನ್ನಾರಿಗಾದರೂ ಹೆಚ್ಚು-ಆಶೆ—ಆಮಿಷ ತೋರಿಸಿ ಬಹುಮತದಕ್ಕೆ ಸಿಕೊಂಡರೂ ಕೊಳ್ಳಬಹುದಲ್ಲಾ.."

"ಹ್ಞೂಂ....ಸರಿ ಬಿಡಿ ಮತ್ತೆ...ಬಿಹಾರದಲ್ಲಿ ಎಂಥದೋ...."

"ಅದೇ ಭಾರಿ ತಮಾಶೆ ನೋಡು. ನಿತ್ಯಾನಂದ ಕೂಮಂಗೋರನ್ನು ಅಲ್ಲಿನ ರಾಜ್ಯಪಾಲರಾಗಿ ನೇಮಿಸಲಾಯಿತು...'

"ಹ್ಞೂಂ, ಮತ್ತೆ?"

"ಅವರು ನಿಷ್ಠುರ ಕಾಂಗ್ರೆಸಿಗರು, ತಮಗೆ ಬೇಡಾಂತ ಅಲ್ಲಿನ ಸಂಯುಕ್ತ ಸರಕಾರದ ವಾದ..."

"ಹ್ಞೂಂ ಸರಿಯೇ ಅನ್ನಿ. ಪಂಜಾಬದ ರಾಜ್ಯಪಾಲರಾಗಿ ಪಾವಟೆಯವರನ್ನು ನೇಮಿಸಿದಾಗ ಅಲ್ಲಿನ ಸರಕಾರದ ಅನುಮೋದನೆಯನ್ನೂ ಪಡೆಯಲಾಗಿತ್ತಲ್ಲ!"

"ಸಂಬಂಧಿತ ರಾಜ್ಯ ಸರಕಾರದೊಡನೆ ಪರ್ಯಾಲೋಚಿಸಿಯೇ ರಾಜ್ಯಪಾಲರ ಫೇಮಕ ಮಾಡುವ ನರ್ಮ ಸಂಪ್ರದಾಯವಿದೆ, ನಮ್ಮಲ್ಲಿ..'

'ಆಲ್ರಿ, ರಾಜ್ಯಪಾಲ ಅಂದ್ರೆ, ರಾಜ್ಯದಲ್ಲಿ ರಾಷ್ಟ್ರಪತಿಗಳ ಪ್ರತಿನಿಧಿ. ರಾಷ್ಟ್ರ, ಪತಿ ಕೇಂದ್ರ ಸರಕಾರದ ಸಲಹೆಯಂತೆ ಕಾರ್ಯ ನಿರ್ವಹಿಸುತ್ತಾನೆ; ಹಾಗಿರುವಾಗ ರಾಜ್ಯ ಸರಕಾರವನ್ನು ಕೇಳುವುದೇಕೆ?'

"ಏಕೋ, ಏನೋ.... ಆದೆಲ್ಲಾ ಮೊನ್ನೆ ಸೇರಿದ್ದ ರಾಜ್ಯಪಾಲರ ಸಮ್ಮೇಳನದಲ್ಲಿ ಪರಿಶೀಲಿಸಿರಬಹುದು. ಸಂವಿಧಾನಾತ್ಮಕನಾಗಿ ರಾಜ್ಯಪಾಲರಿಗಿರುವ ಅಧಿಕಾರದ ಬಗ್ಗೆ ಭಾರಿ ವಿಚಾರವಾಯಿತಂತೆ...'

"ಕೇರಳದ ಮುಖ್ಯಮಂತ್ರಿ ನಂಬೂದ್ರಿಪಾಡರು ನ್ಯಾಯಾಂಗವೂ ಟೀಕಾತೀತವಲ್ಲ ಅಂತ ಹೇಳಿದ್ದಾರಂತೆ..."

'ಮೊರ್ಕ್ರ್ಸ್ಟ್ ಕಮ್ಯುನಿಸ್ಟರು ಸಂವಿಧಾನವನ್ನೂ ನ್ಯಾಯಾಂಗವನ್ನೂ ಸರ್ವೋತ್ಕೃಷ್ಟವೆಂದು ಭಾವಿಸುವುದಿಲ್ಲವಂತೆ...."

"ಮತ್ತೆ?"

'ಇದೆಯಲ್ಲಾ, ರಾಜ್ಯದಲ್ಲಿ ಅರಾಜಕತೆ ಹರಡಿಸಿ, ದೊಂಬಿಯೆಬ್ಬಿಸಿ, ಸರ್ವಾಧಿಕಾರವನ್ನೇ ಸರ್ವೋತ್ಕೃಷ್ಟವೆಂದು ಭಾವಿಸುತ್ತಾರೆ...."

"ಆಲ್ರಿ, ಕೇರಳದ ವಿದ್ಯಮಾನ, ಅಲ್ಲಿನ ಪಾಯಕರ ಜೇಳಿಕೆ— ಮಾಡಿಕೆಗಳು ಕಮ್ಯುನಿಸ್ಟರು ದಂಗೆಯೇಳಲು ಪೂರ್ಣತಯಾರಿಯಲ್ಲಿದ್ದಾರೆ ಎಂಬ ಸಂದೇಹಕ್ಕೆ ಎಡೆ ಕೊಡುತ್ತಿದೆ....'

"ಅಲ್ಲವೆಷ್ಟು ವಂತಿಲ್ಲ. ಇಲ್ಲವಾದರೆ, ಪವಿತ್ರವಾದ ಸಂವಿಧಾನವನ್ನೂ ನ್ಯಾಯಾಂಗವನ್ನೂ ಮೂಲೆಗೆ ಸರಿಸಲು ಹೆಸರಿಸುತ್ತಿರುವುದು ಎಂದರೆ, ಅರಾಷ್ಟ್ರೀಯರಾಗಿ 'ಆ ರಾಷ್ಟ್ರೀಯರಿಸಿಸುವೆನೇ ತಾನೆ?'

'ಇನ್ನು ಈ ದಾರಿಯನ್ನು ಪಶ್ಚಿಮ ಬಂಗಾಳವೂ ಅನುಸರಿಸಬಹುದು. ಮತ್ತೆ ನೋಂಕು ರೋಗ...."

'ಹ್ಞೂಂ...."

'ಏನೋಪ್ಪ, ಪಕ್ಷಾಂತರ ರೋಗದಂತೆಯೇ ಈ ರೋಗವೂ ಜನತೆಯಲ್ಲಿ ಬೇರು ಬಿಟ್ಟರೆ, ಆಗ ಪುರಾಣದ ಮಾತು ಸತ್ಯವಾಗುತ್ತದೆ....'

"ಏನದು ವಂಕ್ಯ?'

"ಏನು ಏನೆ? ಭಾರತೀಯರು ಸ್ವಾತಂತ್ರ್ಯಕ್ಕೆ ಅನರ್ಹರ, ಅವರು ಸ್ವಾತಂತ್ರ್ಯ ಪಡೆದರೂ ಅದನ್ನು ಉಳಿಸಿಕೊಳ್ಳಲು ಸಮರ್ಥರಾಗರು. ಯೂರೋಪಿನ ಕಲಹ ವೆದ್ದು ಭಾರತವು ಛಿನ್ನವಿಚ್ಛಿನ್ನವಾಗುವುದು—'

'ಎಂಥದ್ರಿ, ಇದು? ಈ ಪುರಾಣಕಾರರು ಆಂಗ್ಲೇಯರು ತಾನೆ?"

"ಮತ್ತೆ, ನೋಡು, ಯಾವುದೋ ಒಂದು ಪುರಾಣದಲ್ಲಿ ಚಿಪ್ಪಟೆ ಮೂಗಿನವರು ಇಲ್ಲಿ ಬಂದು ರಾಜ್ಯವಾಳುತ್ತಾರೆ ಎಂತ ಇದೆಯಂತೆ...."

ಹ್ಞೂಂ...."

"ಕೆಂಪು ಚೀನೀಯರೇ ಈ ಚಪ್ಪಟೆ ಮೂಗಿನವರು ಅಂತ ಊಹಿಸಿ. ಇವರು ಸ್ವಾತಂತ್ರ್ಯಕ್ಕೆ ಕೆಂಪು ಕೇರಳದ ನಂಬೂದಿರಿಪಾದೇತ್ಯಾದಿ ಸಿದ್ಧರಿದ್ದಾರೆ ಎಂಬುದು ಕುಹಕವಲ್ಲವಾದರೂ ಪೂರ್ಣ ಸತ್ಯವಲ್ಲವೆನ್ನಿ. ಒಂದು ದಿನ ಈ ಪುರಾಣದ ಮಾತೂ ಸತ್ಯವಾದರೂ ಆದಬಹುದೂನ್ನು"

'ಸುಮ್ಮನಿರ್ರಿ... ಆಗ, ಉಳಿದವರೇನು ಸುಮ್ಮನಿರುತ್ತಾರೆಯೆ? ಸಂವಿಧಾನ — ನ್ಯಾಯಾಂಗಗಳ ಸರ್ವೋತ್ಕೃಷ್ಟತೆಯನ್ನು ಒಪ್ಪದವರ ಮೇಲೆ ಸೂಕ್ಷ್ಮ ಕ್ಷಮ ಕೈಗೊಳ್ಳುವುದು ಸಾಧ್ಯವಿಲ್ಲವೇನು?"

'ಇಲ್ಲದೆ ಏನ? ಆದರೆ, ಅಂತಹ ಗಂಡೆದೆ ಯಾರಲ್ಲದೆ?'

'ಓಹೋ, ನವ್ಯ ಇಂದಿರಾಜಿ ಪ್ರಧಾನಿಯಾದದ್ದೇ ತಮಗೆಲ್ಲಾ ಕಣ್ಣಿಂ..."

"ಅಯ್ಯೋ, ಏನಂತೀ ಸ್ವಾ? ಗಂಡೆದೆ ಅಂದರೆ ಗಂಡಿನ ಎದೆ ಅಲ್ಲ, ಗಂಡು ಉಳ್ಳ ಎದೆ..."

'ಮತ್ತೆ, ವ್ಯಂಗ್ಯ ಸುರು ಮಾಡಿದ್ರಿ...'

"ಮಹಿರಾಯಿತಿ, ಗಂಡು ಅಂದರೆ, ಧೈರ್ಯ...ಗಂಡೆದೆ ಅಂದ್ರೆ ಎದೆಗಾರಿಕೆ ಅಂತ...."

"ಸಾಕು ಬಿಡ್ರಿ.... ನೀವು ಗಂಡಸ್ರೇ ಹಾಗೆ, ಗಂಡಸಿಗೆ ಮಾತ್ರ ಗಂಡುತನ ಅಂತ ಅನ್ನುವವರು, ಅದ್ರೂ ನೆನಪಿಡಿ, ಪುರಾಣದ ಮಾತು ಮಾತ್ರ ಸತ್ಯವಲ್ಲ..."

"ಭಲೆ, ನಮಗೂ ಬೇಕಾಗಿರೋದು ಅದೇ. ಹಳೆಯದರ ಒಳ್ಳೆಯ ಗುಣಗಳನ್ನು ತೀರಾದ ಹೊಸ ಸಂಪ್ರದಾಯ—ಪದ್ಧತಿ, ಸಮಾಜ, ದೇಶ...

'ಅಂದ್ರೆ...'

(ಪದಮೂರನೇ ಪುಟ ನೋಡಿರಿ)

ಸಚಿತ್ರ ಹೊಸ ಪುಸ್ತಕ

ಲಾಲ್ ಬಹಾದುರ್ ಶಾಸ್ತ್ರಿ

ಲೇಖಕರು—

ಬಿ. ಆರ್. ಪ್ರಾಣೇಶ ರಾವ್,ಎಂ.ಎ.

ಮೈಸೂರು

ಸರಳವೂ ತ್ಯಾಗಮಯವೂ ಆಗಿದ್ದ ಶ್ರೀ ಶಾಸ್ತ್ರಿಯವರ ಸಾರ್ಥಕ ಜೀವನದ ಪರಿಚಯ

ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕ

ಬೆಲೆ ರೂ. 2/—ಮಾತ್ರ,

ಅಂಚೆ ವೆಚ್ಚ ಪ್ರತ್ಯೇಕ

ಪ್ರತಿಗಳಿಗೆ—

ನವಭಾರತ ಪುಸ್ತಕ ಭಂಡಾರ,

ಉಡುಪಿ

ರಶ್ಯನ್ನರ ದೃಷ್ಟಿಯಲ್ಲಿ

ಮಾನವತಾವಾದಿ - ನೆಹರೂ

ಬರೆದವರು : ಪ್ರಾ| ಬಿ ಜಿ. ಗಫ್ಫಾರೋವ್
(ಮಾಸ್ಕೋದಲ್ಲಿರುವ ಏಶಿಯಾ ಸಂಸ್ಥೆಯ ಪಬ್ಲೀಕೇಶನ್ಸ್ ನಿರ್ದೇಶಕರು)



ಜವಾಹರಲಾಲ್ ನೆಹ್ರೂ ಹೆಸರು ಸುಪರಿಚಿತ. ರೈತರು, ಕಾರ್ಮಿಕರು, ಪಂಡಿತರು, ವಿದ್ಯಾರ್ಥಿಗಳು, ಮಹಿಳೆಯರು ಎಲ್ಲರ ಪ್ರೀತ್ಯಾದರಗಳಿಗೂ ಇವರು ಪಾತ್ರರು. ಜವಾಹರಲಾಲ್ ನೆಹ್ರೂಗೆ ತೋರಿಸಲಾದ ಗೌರವ ಭಾವನೆ ಮಹಾನ್ ದೇಶ ಭಾರತದ ಜನರಿಗೆ, ನೆಹ್ರೂ ಯಾರು ಪುತ್ರರೋ ಆ ಜನರಿಗೆ ತೋರಿಸಿದ ಸುಸ್ಪಷ್ಟ ಗೌರವವೇ ಆಗಿದೆ.

ಜವಾಹರಲಾಲ್ ನೆಹ್ರೂರನ್ನು ಒಮ್ಮೆ ನೋಡಿದವರು ಅವರ ಹಸನ್ಮುಖ, ತುಂಬಿದ ಕಣ್ಣು, ಆ ದಿವ್ಯ ಮುಖ ಭಾವಗಳನ್ನು ಧೀಮಂತತ್ವ ಸ್ಫೂರಣೆಯಲ್ಲಿಟ್ಟುಕೊಳ್ಳುತ್ತಾರೆ. ಅವರ ಶುಭ್ರವಾದ ಟೋಪಿ, ಜುಬ್ಬ, ಗುಂಡಿಯ ತೂಕವನ್ನೊಂದು ಸದಾಕಾಲ ತಾಜಾ ಕಂಸುಗಲಂಬಿ ಹೂ ಎಲ್ಲ ಎಲ್ಲವೂ ನಮ್ಮ ನೆನಪಿನಲ್ಲಿವೆ.

ಜವಾಹರಲಾಲ್ ನೆಹ್ರೂ ಬಗ್ಗೆ ಯೋಚಿಸುವಾಗ ಅವರು ತಮ್ಮ ಜೀವಿತ ಕಾಲದಲ್ಲಿ ಎಂಥ ಅಪಾರ ಸಾಧನೆಗಳನ್ನು ಮಾಡಲು ಶಕ್ತರಾದರು, ತಮ್ಮ ಬದುಕಿನ ಮೇಲೆ ಎಂಥ ಅದ್ಭುತ ಪ್ರಭಾವಗಳನ್ನು ಮಾಡಿಸಿದರು, ಸಮಕಾಲೀನ ಜಾಗತಿಕ ಸಮಸ್ಯೆಗಳ ಪರಿಹಾರದ ಮೇಲೆ ಎಷ್ಟು ಹಿರಿಮೆಯಿಂದ ಬೀರಿದ ಪ್ರಭಾವ ಎಂಥದು ಎಂಬುದಿಲ್ಲವನ್ನೂ ನೆನಪು ಉಚ್ಚರಿಯುಂಟಾಗದ ಇರದು.

ಜವಾಹರಲಾಲ್ ನೆಹ್ರೂ ಅವರದು ಉಜ್ವಲ ಅನನ್ಯ ವ್ಯಕ್ತಿತ್ವ. ಅವರು ಪ್ರತಿಭಾವಂತ ಚಿಂತನಶಿಲ್ಪಿಗಳು. ತೀಕ್ಷ್ಣ ಸ್ವಭಾವದ, ದೃಢ ಸಂಕಲ್ಪ ಹಾಗೂ ಅದ್ಭುತ ಆಕರ್ಷಣೆಯ ವ್ಯಕ್ತಿ ಎನ್ನುವವರೆಲ್ಲ ಒಂದಿನ್ನೂ ಅನುಮಾನವಿಲ್ಲ. ಅವರನ್ನು ಅರಿತವರೆಲ್ಲ ಈ ಮಾತನ್ನು ಹೇಳಬಲ್ಲರು. ಆದರೆ ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಅವರ ಬಹುಮುಖಚಟುವಟಿಕೆಗಳೇ. ನೆಹ್ರೂ ಪಂಡಿತರಾಗಿದ್ದರು, ರಾಜನೀತಿಜ್ಞರಾಗಿದ್ದರು. ನೆಹ್ರೂ ಭಾವುಕ ಕಾರಂಗಿದ್ದರು. ಬರಹಗಾರರೂ ಆಗಿದ್ದರು. ನೆಹ್ರೂ ಮುತ್ಸದ್ದಿ ಸೂಗಿದ್ದರು ಮತ್ತು ಜನಶಾ ಜಳವಳಗಳ ನಾಯಕರೂ ಆಗಿದ್ದರೆಂಬುದು ನನಗೆ ಗೊತ್ತು.

ನಾನಾ ಮುಖವಿವ ಪ್ರತಿಭೆಗಳು ಮತ್ತು ಚಟುವಟಿಕೆಗಳು ಇದ್ದಾಗಿಲೂ ಅವರ ಉನ್ನತ ವ್ಯಕ್ತಿತ್ವದ ಸಮಗ್ರತೆಯನ್ನು ದೂಸಿದ್ದೂಂದು ಮಾತ್ರ ಸುಳಿಯ ಇತ್ತು. ಅದೇ ಅವರ ಘನ ಹೃದಯವು ಸಾರಿಪೂರ್ತಿ ಯಾಗಿದ್ದರೆ ಎಂದು ವುದು!

ಈ ವಿಶ್ಲೇಷಣೆ ಬಗ್ಗೆ ಅನೇಕಾನೇಕರು ಯೋಚಿಸಿ ತಮ್ಮದೇ ಆದ ಉತ್ತರಗಳನ್ನು ಪ್ರತಿದ್ದಾರೆ. ಅವಶ್ಯವಿದ್ದ ಮಾನವ ಪ್ರೇಮ, ಸೃಜನಾತ್ಮಕ ಶಕ್ತಿ ಇವೇ ಅವರ ಮುಖ್ಯ ಲಕ್ಷಣಗಳಾಗಿದ್ದವೆಂದು ಯಾರೂ ಹೇಳಬಹುದು.

"ಮಾನವ ಚೇತನ ಎಷ್ಟೊಂದು ಅದ್ಭುತ!" ಎಂದು ಬರದರು ನಾಹ್ರೂ. "ಶತ ಶತಮಾನಗಳ ಉದ್ದಕ್ಕೂ ಅನಂತ ಸೋಲುಗಳ ಕೊನೆಗಿದರೂ ಆತ ಸತ್ಯಕ್ಕಾಗಿ, ನಂಬಿಕೆಗಾಗಿ, ದೇಶಕ್ಕಾಗಿ ಮತ್ತು ಗೌರವಕ್ಕಾಗಿ ತನ್ನ ಜೀವನವನ್ನೂ, ಪ್ರೀತಿಸಿದುದೆಲ್ಲವನ್ನೂ ಅರ್ಪಣೆ ಮಾಡಿಕೊಂಡು ಬಂದಿದ್ದಾನೆ. ಅದರ್ಶಗಳು ಬದಲಾಗಬಹುದು, ಬಲಿದಾನದ ಸಾಮರ್ಥ್ಯ ಮಾತ್ರ ಮುಂದುವರಿಯುತ್ತದೆ. ಅದಕ್ಕಾಗಿಯೂದರೂ ಮಾನವನ ಬಗ್ಗೆ ಅಶಿ ಬಿಟ್ಟು ಕೊಡುವುದು ಸಾಧ್ಯವಿಲ್ಲ. ವಿನಾಶಗಳ ಮಧ್ಯ ನಿಂತು ಕೊಂಡೂ ಅತ ತನ್ನ ಘನತೆಯನ್ನೂ, ಶ್ರದ್ಧೆಯನ್ನೂ, ಶೋಷಿಸಿಕೊಂಡು ಬಂದ ಮೌಲ್ಯಗಳನ್ನೂ ಬಿಟ್ಟು ಕೊಟ್ಟಿಲ್ಲ."(ಭಾರತ ದರ್ಶನ ಪು—16)

ಸರ್ವಧರ್ಮ ಸಮ್ಮೇಳನದ ಉದ್ಘಾಟನೆಯನ್ನು ತಾ॥ ೩೦-೧೧-೧೯೬೭ರಲ್ಲಿ ಮೈಸೂರು ರಾಜ್ಯಪಾಲರಾದ **ಸನ್ಮಾನ್ಯ ಶ್ರೀ ಗೋಪಾಲ್ ಸ್ವರೂಪ್** ಪಾಠಕ್, ಎಂ. ಎ., ಎಲ್‌ಎಲ್. ಬಿ. ಅವರು ನೆರವೇರಿಸಲು ದಯೆಯಿಟ್ಟು ಸಮ್ಮತಿಸಿರುವರು.

ಈ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆಯನ್ನು ಭಾರತದ ಸ್ಕೌಟ್ ದಳದ ಚೀಫ್ ಕಮಿಷನರರವರಾದ ಸನ್ಮಾನ್ಯ ಶ್ರೀ ಪಿ. ಶಿವಶಂಕರ್, ಬಿ. ಎ., ಎಲ್‌ಎಲ್. ಬಿ., ಅವರು ವಹಿಸುವರು.

ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ತಾ॥ ೧—೧೨—೧೯೬೭ರಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಸನ್ಮಾನ್ಯ ಡಾ॥ ಕೆ. ಎಲ್. ಶ್ರೀಮಾಲಿ, ಎಂ. ಎ., ಪಿಎಚ್. ಡಿ., ಎಲ್‌ಎಲ್. ಡಿ. ಅವರು ನೆರವೇರಿಸಲು ದಯೆಯಿಟ್ಟು ಸಮ್ಮತಿಸಿರುವರು.

ಈ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಕಾವ್ಯಾನಂದ ಸನ್ಮಾನ್ಯ ಶ್ರೀ ಸಿದ್ಧಯ್ಯ ಪುರಾಣಿಕ್, ಐ. ಎ. ಎಸ್., ಅವರು ವಹಿಸುವರು.

ಈ ಸಮ್ಮೇಳನಗಳಿಗೆ ತಾವು ದಯವಾಡಿಸಬೇಕಾಗಿ ಪ್ರಾರ್ಥನೆ.

ಡಿ. ರತ್ನವರ್ಮ ಹೆಗ್ಗಡೆಯವರು,
ಅಧ್ಯಕ್ಷರು ಸ್ವಾಗತ ಸಮಿತಿ.

ಶ್ರೀ ಧರ್ಮಸ್ಥಳ,
ದ. ಕನ್ನಡ
ತಾ॥ ೧೫-೧೧-೧೯೬೭

ಕೆ. ಎಸ್. ಧರಣೇಂದ್ರಯ್ಯ, ಎಂ. ಎ., ಬಿ. ಟಿ.,
ಎಸ್. ಪ್ರಭಾಕರ್, ಎಂ.ಎ.,
ಕಾರ್ಯದರ್ಶಿಗಳು.

ತಾ॥ ೩೦-೧೧-೧೯೬೭ನೆಯ ಗುರುವಾರದ ಕಾರ್ಯಕ್ರಮ

ಸರ್ವಧರ್ಮ ಸಮ್ಮೇಳನ

ಉದ್ಘಾಟಕರು :
ಮೈಸೂರಿನ ರಾಜ್ಯಪಾಲರಾದ
ಸನ್ಮಾನ್ಯ ಶ್ರೀ ಗೋಪಾಲ್ ಸ್ವರೂಪ್ ಪಾಠಕ್, ಎಂ. ಎ., ಎಲ್‌ಎಲ್. ಬಿ., ಅವರು

ಅಧ್ಯಕ್ಷರು :
ಭಾರತದ ಸ್ಕೌಟ್ ದಳದ ಚೀಫ್ ಕಮಿಷನರರಾದ
ಸನ್ಮಾನ್ಯ ಶ್ರೀ ಪಿ. ಶಿವಶಂಕರ್, ಬಿ. ಎ., ಎಲ್ ಎಲ್. ಬಿ., ಅವರು

ಮಧ್ಯಾಹ್ನ ೪ ಗಂಟೆಗೆ

ಪ್ರಾರ್ಥನೆ: ಶ್ರೀ ಬಿ. ಎಸ್. ರಾಮಾಚಾರ್ ಅವರು
ಸ್ವಾಗತ: ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು
ಉದ್ಘಾಟನೆ: ಮೈಸೂರು ರಾಜ್ಯಪಾಲರಾದ ಶ್ರೀ ಜಿ. ಎಸ್. ಪಾಠಕ್ ಅವರು
ಸಂದೇಶಗಳು: ಪರಮಹಂಸ ಶ್ರೀ ಭಾಸ್ಕರಂ ಶೇಷಾಚಾರ್ಯರು
ಅಧ್ಯಕ್ಷ ಭಾಷಣ: ಶ್ರೀ ಪಿ. ಶಿವಶಂಕರ್ ಅವರು
ಸಂಗೀತ: ಶ್ರೀಮತಿ ಚೊಕ್ಕಮ್ಮಾಳ್ ಮತ್ತು ಮಂಡಲಿಯವರು

ಭಾಷಣದ ವಿಷಯಗಳು:
ಈ ಕೆಳಗೆ ಕಂಡ ಎರಡು ವಿಷಯಗಳಲ್ಲಿ ಯಾವುದಾದರೂ ಒಂದನ್ನು ಭಾಷಣಕಾರರು ಆರಿಸಿಕೊಳ್ಳಬಹುದು :

೧. ಧರ್ಮ—ರಾಷ್ಟ್ರಧರ್ಮ ಮತ್ತು ಯುಗಧರ್ಮ—ಇವುಗಳ ಹೊಂದಾಣಿಕೆ
೨. ವಿಜ್ಞಾನವೂ ಪಾರಮಾರ್ಥವೂ ಜೀವನ ರಥದ ಎರಡು ಚಕ್ರಗಳು

ಭಾಷಣಕಾರರು
ಸರ್ವಶ್ರೀ
(೧) ಡಾ॥ ಜಿ. ಎಸ್. ಶಿವರುದ್ರಪ್ಪನವರು, ಎಂ. ಎ., ಪಿಎಚ್. ಡಿ.
(೨) ವಿದ್ಯಾವಾಚಸ್ಪತಿ ವರ್ಧಮಾನ ಶಾಸ್ತ್ರಿಗಳು, ನ್ಯಾಯತೀರ್ಥ
(೩) ಹಜರತ್ ಮೌಲ್ವಿ ಸಯ್ಯದ್ ಖಾಸಂ ಅವರು
ಕಾವ್ಯವಾಚನ: ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರು
(೪) ಶ್ರೀಮತಿ ಸಾಧಾ ಪಿ. ರೆಡ್ಡಿಯವರು
(೫) ಫಾದರ್ ಜೆ. ಜೀವಿಯರ್ ಅವರು
(೬) ಪ್ರೊ॥ ಸಿ. ಆರ್. ಗುರುರಾಜರಾಯರು, ಎಂ. ಎಸ್ಸಿ.
(೭) ಪ್ರೊ॥ ಎಂ. ಚಂದ್ರಶೇಖರ್ ಅವರು, ಎಂ. ಎ.
(೮) ಶ್ರೀ ಡಿ. ಪಿ. ಸೆಲ್ವಿಯನ್, ಟಾಸೆಲ್ ಮಿಕ್ಸರ್, ಮಂಗಳೂರು

ತಾ॥ ೧—೧೨—೧೯೬೭ನೆಯ ಶುಕ್ರವಾರದ ಕಾರ್ಯಕ್ರಮ

ಸಾಹಿತ್ಯ ಸಮ್ಮೇಳನ

ಉದ್ಘಾಟಕರು:
ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಸನ್ಮಾನ್ಯ ಡಾ॥ ಕೆ. ಎಲ್. ಶ್ರೀಮಾಲಿ, ಎಂ. ಎ., ಪಿಎಚ್. ಡಿ., ಎಲ್‌ಎಲ್. ಡಿ. ಅವರು

ಅಧ್ಯಕ್ಷರು:
ಕಾವ್ಯಾನಂದ ಸನ್ಮಾನ್ಯ ಶ್ರೀ ಸಿದ್ಧಯ್ಯ ಪುರಾಣಿಕ್, ಐ. ಎ. ಎಸ್. ಅವರು

ಮಧ್ಯಾಹ್ನ ೪ ಗಂಟೆಗೆ
ಪ್ರಾರ್ಥನೆ: ಶ್ರೀ ಬಿ. ಎಸ್. ರಾಮಾಚಾರ್ ಅವರು
ಸ್ವಾಗತ: ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು
ಉದ್ಘಾಟನೆ: ಡಾ॥ ಕೆ. ಎಲ್. ಶ್ರೀಮಾಲಿಯವರು
ಸಂದೇಶಗಳು: ಪರಮಹಂಸ ಶ್ರೀ ಭಾಸ್ಕರಂ ಶೇಷಾಚಾರ್ಯರು
ಅಧ್ಯಕ್ಷ ಭಾಷಣ: ಕಾವ್ಯಾನಂದ ಶ್ರೀ ಸಿದ್ಧಯ್ಯ ಪುರಾಣಿಕರು
ಸಂಗೀತ: ಶ್ರೀಮತಿ ಆರ್. ಎಸ್. ಜಾನಕಿ ಮತ್ತು ಮಂಡಲಿಯವರು

ಭಾಷಣದ ವಿಷಯಗಳು:
ಈ ಕೆಳಗೆ ಕಂಡ ಎರಡು ವಿಷಯಗಳಲ್ಲಿ ಯಾವುದಾದರೂ ಒಂದನ್ನು ಭಾಷಣಕಾರರು ಆರಿಸಿಕೊಳ್ಳಬಹುದು:

೧. ಹಳೆದು ಕೆನ್ನೀರಿಯಲ್ಲಿ ಹೊಸತು ಹಾಡನುಕ್ಕಿಸು
೨. ಸಾಹಿತ್ಯದಲ್ಲಿ ಸೌಂದರ್ಯ ನಿರೂಪಣೆ

ಭಾಷಣಕಾರರು:
ಸರ್ವಶ್ರೀ
೧) ಪ್ರೊ॥ ಡಿ. ಜವರೇಗೌಡರು, ಎಂ. ಎ.
೨) ಎಚ್. ಸಿ. ಶಾಂತವೀರಯ್ಯನವರು, ಎಂ ಎ. ಬಿ. ಇಡಿ.
ಬೆಂಗಳೂರಿನ ಪೊಟೇಲ್ ಟೂರಿಸ್ಟ್ ಮಾಲೀಕರಾದ ಶ್ರೀ ಕೆ.ಗುರು ರಾಜಾಚಾರ್ ಅವರ ಕುಟುಂಬ ವರ್ಗದ ಮಕ್ಕಳಿಂದ
೧) ನೃತ್ಯ: ಕುಮಾರಿ ಲತಾ ಮತ್ತು ಕುಮಾರಿ ತಾರಾ
೨) ಪೇವರ ನಾಮಗಳು: ಕುಮಾರಿ ಉಷಾ ಮತ್ತು ಕುಮಾರಿ ಶಶಿ
೩) ಪ್ರೊ॥ ಎಸ್. ಎಂ. ವೃಷಭೇಂದ್ರಸ್ವಾಮಿಗಳು, ಎಂ. ಎ.
೪) ಮಿರ್ಜಿ ಅಣ್ಣಾರಾಯರು
೫) ಬಿ. ಎಂ. ಇದಿನಬ್ಬ, ಎಂ. ಎಲ್. ಎ. ರವರು
ಕಾವ್ಯವಾಚನ: ಶ್ರೀ ವಿ. ತಿ ಅನ್ನಪೂರ್ಣಮ್ಮ ರಘುಪತಿ ಶಾಸ್ತ್ರಿಯವರು
೬) ಪ್ರೊ॥ ವಿ. ಅನ್ನಪೂರ್ಣಮ್ಮನವರು, ಎಂ. ಎ.
೭) ಕೃಷ್ಣಮೂರ್ತಿ ಪುರಾಣಿಕರು, ಬಿ. ಎ. (ಆನರ್ಸ್), ಬಿ. ಟಿ.
೮) ಕೆ. ಎಸ್. ಧರಣೇಂದ್ರಯ್ಯನವರು, ಎಂ. ಎ., ಬಿ. ಟಿ.
ವಂದನಾರ್ಪಣೆ: ಪ್ರಿನ್ಸಿಪಾಲ್ ಎಸ್. ಪ್ರಭಾಕರ್ ಅವರು, ಎಂ.ಎ.

ಈ ಕೆಳಗೆ ಕಂಡ ವಿಶಿಷ್ಟ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ—

೧. ತಾ॥ ೩೦—೧೧—೧೯೬೭ನೆಯ ಬುಧವಾರ (ಮನೋರಂಜನ ಕಾರ್ಯಕ್ರಮ)
ಸಂಜೆ ೬—೩೦ ಗಂಟೆಗೆ: ಸಂಗೀತ ಕಛೇರಿ: ಶ್ರೀಮತಿ ಎಂ. ಎಸ್. ರತ್ನ ಮತ್ತು ಮಂಡಲಿಯವರಿಂದ.
ರಾತ್ರಿ ೯—೩೦ ಗಂಟೆಗೆ: ಲಲಿತೋದ್ಯಾನದಲ್ಲಿ ಭಗವಾನ್ ಶ್ರೀ ಮಂಜುನಾಥ ಸ್ವಾಮಿಯ ಪೂಜೆ.
ರಾತ್ರಿ ೧೧ ಗಂಟೆಗೆ: ನಾಟಕಾಭಿನಯ.
೨. ತಾ॥ ೩೦—೧೧—೧೯೬೭ನೆಯ ಗುರುವಾರ
ಸಂಜೆ ೪ ಗಂಟೆಗೆ: ಸರ್ವಧರ್ಮ ಸಮ್ಮೇಳನ
೩. ತಾ॥ ೧—೧೨—೧೯೬೭ನೆಯ ಶುಕ್ರವಾರ
ಸಂಜೆ ೪ ಗಂಟೆಗೆ: ಸಾಹಿತ್ಯ ಸಮ್ಮೇಳನ.
೪. ತಾ॥ ೨—೧೨—೧೯೬೭ನೆಯ ಶನಿವಾರ
ರಾತ್ರಿ ೮-೩೦ ಗಂಟೆಗೆ: ಭಗವಾನ್ ಶ್ರೀ ಚಂದ್ರನಾಥಸ್ವಾಮಿಯ ಬೈತ್ಕಾಲಿಯ ದಕ್ಷಿಣ ಸಮವಸರಣ ಪೂಜೆ.
ರಾತ್ರಿ ೧೦ ಗಂಟೆಗೆ: ಯಕ್ಷಗಾನ-ಬಯಲಾಟ: ಶ್ರೀ ಮಂಜುನಾಥೇಶ್ವರ ಯಕ್ಷಗಾನ ಮಂಡಲಿಯವರಿಂದ ಸೇವೆ.

ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳ ಚುನಾವಣೆ

ಉಡುಪಿ, ಬ್ಲಾಕ್ ಕಾಂಗ್ರೆಸಿನ ಪದಾಧಿಕಾರಿ ಹಾಗೂ ಆಡಳಿತ ಮಂಡಳಿಯ ಸದಸ್ಯರ ಚುನಾವಣೆ ತಾ. 12—11—1967ರಂದು ಸ್ಥಳೀಯ ಕಾಂಗ್ರೆಸ್ ಶಾಖೀಲಯದಲ್ಲಿ ಚುನಾವಣಾಧಿಕಾರಿಗಳಾದ ಮುನಿಸಿಪಲ್ ಕೌನ್ಸಿಲರ್ ಶ್ರೀ ಮೂಡುಪಡಂಬೂರು ವಿಠಲ ಶೆಟ್ಟಿಯವರ ನೇತೃತ್ವದಲ್ಲಿ ಜರಗಿತು. ಶ್ರೀ ಕೆ. ರಾಮಚಂದ್ರ ಶೆಟ್ಟಿಯವರು ಚುನಾವಣೆಯ ವಿವರಗಳನ್ನು ತಿಳಿಸಿದರು. ಈ ಕೆಳಗಿನವರನ್ನು ಆರಿಸಲಾಯಿತು. ಶ್ರೀ ಸಿ. ರಂಗನಾಥ ಶೆಣೈ, ವಕೀಲರು, ಅಧ್ಯಕ್ಷರು. ಡಾ. ವಿ. ಎಸ್. ಶೆಟ್ಟಿ ಮತ್ತು ಶ್ರೀ ಎಚ್. ಮಧ್ವರಾಜ ಉಪಾಧ್ಯಕ್ಷರುಗಳು, ಶ್ರೀ ಪಿ. ಶಿವಾಜಿ ಶೆಟ್ಟಿ, ವಕೀಲರು, ಪ್ರಧಾನ ಕಾರ್ಯದರ್ಶಿ, ಶ್ರೀ ಪದ್ಮನಾಭ ಆಚಾರ್ಯ, ಕೋಶಾಧಿಕಾರಿ, ಶ್ರೀ ಯು. ಮೋಹನದಾಸ್, ಶ್ರೀ ಬಿ. ಆನಂದ ರಾವ್ ಮತ್ತು ಶ್ರೀ ಟಿ. ಶಂಭು ಶೆಟ್ಟಿ ಇತರ ಕಾರ್ಯದರ್ಶಿಗಳು, ಶ್ರೀ ರಾಮಚಂದ್ರ ಜಿ ಗೌಡ, ಶ್ರೀ ಆನಂದ ಹೆಗ್ಡೆ, ಶ್ರೀ ಎಸ್. ವಿಠಲ ಶೆಟ್ಟಿ, ಶ್ರೀ ಆತೋಳಿ ಹೆಗ್ಡೆ, ಶ್ರೀ ಶ್ರೀನಿವಾಸ ಶೆಟ್ಟಿ, ಶ್ರೀ ಸರ್ವೋತ್ತಮ ಶೆಣೈ, ಶ್ರೀ ಕಾಳಪ್ಪ ಶೆಟ್ಟಿ, ಶ್ರೀ ಚಂದ್ರಶೇಖರ ಶೆಟ್ಟಿಗಾರ್, ಶ್ರೀ ಎಸ್. ಶ್ರೀಧರ್, ಶ್ರೀ ಸತೀಶ ಹೆಗ್ಡೆ ಮತ್ತು ಶ್ರೀ ಸತೀಶ್ಚಂದ್ರ ಹೆಗ್ಡೆ ಸದಸ್ಯರುಗಳು. ಅಲ್ಲದೆ ೪೭ ಮಂದಿಗಳನ್ನು ವಿಶೇಷ ಆಮಂತ್ರಿತರನ್ನಾಗಿ ಆರಿಸಲಾಯಿತು. ಶ್ರೀ ರಂಗನಾಥ ಶೆಣೈಯವರು ಧನ್ಯವಾದ ಸಮರ್ಪಣೆ ಮಾಡಿದರು.

ರಾಜಧನದ ಪ್ರಶ್ನೆ

ರಾಜಧನ ರದ್ದತಿಗೆ ಕಮಿಟಿಯ ಶಿಫಾರಸು
ನಿಜಕ್ಕು ಕಾಂಗ್ರೆಸಿಗಿದು ಕೊಟ್ಟೇತು ಸಾವು
ಎಲ್ಲರೂ ಮೊದ ಮೊದಲು ಪ್ರಯೋಗ
ವನ್ನು ಮಾಡಿ
ಕೆಟ್ಟ ಮೇಲೆಯೆ ಬುದ್ಧಿ ಬರುವುದಿದ

ಹಾಡಿ.

ಮ್ಯಾ ಗೋ. ಶಾ.

ತೀರದ ಆಸೆ

(ಎರಡನೇ ಭಾಗದಿಂದ)

ಮೂತು ಮದುವೆಯೂಗಬೇಕೆಂದಾಸೆಗೆ ಎ
ಳೆಯಿತು. ನಳಿನಿ ಎಲ್ಲವುದರಲ್ಲಿಯೂ ತನ
ಗನುರೂಪಳಾದ ಹೆಣ್ಣೆಂದೇ ಭಾವಿಸಿ
ದನು.

ತಂದೆಯನ್ನು ಬರಮಾಡಿಕೊಂಡೇ
ಮೂತು ಮುಗಿಸಬೇಕೆಂದು ನಿಶ್ಚಯಿಸಿ
ದನು.

ಜಾತಿಯಲ್ಲಿ ಬ್ರಾಹ್ಮಣರೆಂದು ತಿಳಿದಾಗ
ಲೇ ಸಂತೋಷದಿಂದ ತಂದೆಗೆ ಪತ್ರ ಬರೆ
ದನು.

೦ ೦ ೦ ೦

ಫಾಲ್ಗು ಸಾಲಿನ ಸಂಪ್ರೀಪ್ತ ಪತ್ರ ಕೈಸೇ
ರಿದಾಗಲೇ ಶ್ಯಾಮಣ್ಣನವರು ಊರಿನಿಂದ
ಹೊರಟರು.

ನಾಗಮ್ಮನ ಸಂತೋಷಕ್ಕಂತೂ ಪಾರ
ವೇ ಇರಲಿಲ್ಲ. ಕೊನೆಗಾದರೂ ಮನೆಗೆ
ಸೊಸೆ ಬರುವಳಲ್ಲಾ ಎಂಬ ಹಿಗ್ಗಿ ನೊ
ದಲಿನ ಕಹಿ ನೆನಪನ್ನು ಮರೆಯಿಸಿತು.

ಶ್ಯಾಮಣ್ಣ — ಸುಂದರನನ್ನು ಹಿಂದಿ
ಟ್ಟು ಕೊಂಡೇ ಒಂದು ಮಧ್ಯಾಹ್ನ ನಳಿನಿ
ಮನೆಗೆ ತರಳಿದರು.

ಆಗಲೇ ನಳಿನಿಯ ತಾಯಿ ವೆಂಕಮ್ಮ
ಅಡಿಗೆ ಹೂರೈಸಿ ಹೊರ ಜಗಲಿಯಲ್ಲಿ ವ
ಗಳನ್ನು ಕಾದು ಕುಳಿತಿದ್ದಳು.

ಯಾರ ಜೊತೆಯಲ್ಲಿಯೋ ಬರುವ ಮ
ಗಳನ್ನು ನೋಡಿ ಆಲೋಚನ ತೊಡಗಿ
ದಳು.

ಮನೆಯ ಅಂಗಳಕ್ಕೆ ಬಂದೊಡನೆ
ಶ್ಯಾಮಣ್ಣನವರನ್ನು ಕಂಡ ವೆಂಕಮ್ಮ
ಸಂತೋಷದಿಂದಲೇ ಅದರಿಸಿದಳು.

ವೆಂಕಮ್ಮನನ್ನು ನೋಡಿದ ಶ್ಯಾಮಣ್ಣ
ನವರಿಗೂ ಆನಂದವೇ ಆಯಿತು.

ಸುಂದರನು ಶ್ಯಾಮಣ್ಣನವರ ಮಗ
ನೆಂಬುದನ್ನು ತಿಳಿದು ವೆಂಕಮ್ಮನ ಉಪ
ಚಾರ ಹೇಳಿ ತೀರದಾಯಿತು.

ಸುಂದರ ಮತ್ತು ನಳಿನಿಗೆ ಸ್ವರ್ಗ ಕ
ಮ್ಮ ಕೈಸೇರಿದಷ್ಟೇ ಆನಂದವಾಯಿತು.

ಬಿಸಿಯಡಿಗೆ ಮತ್ತೆ ತಯಾರಾಯಿತು.
ಶ್ಯಾಮಣ್ಣನವರ ಪರಿಚಯ ತನ್ನ ತಾಯಿ
ಗೆ ಈ ಮೊದಲೇ ಇದೆ ಎಂಬುದನ್ನರಿತ ನ
ಳಿನಿಗೆ ಸುಂದರನೊಡನೆ ತನ್ನ ಮದುವೆ
ನಿಶ್ಚಯವೆಂದೇ ತಿಳಿದಳು.

ಊಟವಾದೊಡನೆ ಜಗುಲಿಯಲ್ಲಿಯೇ
ಜಾಪೆ ಹಾಸಿದಳು. ಮಗಳನ್ನು ಹತ್ತಿರ ಕ
ರೆದು ಕುಳ್ಳಿರಿಸಿಕೊಂಡಳು.

'ನಳಿನಿ! ಸುಂದರ ನಿನ್ನ ಅಣ್ಣ' ಎಂದಾ
ಗಲೇ ಇಬ್ಬರ ಮುಖವೂ ವಿವರ್ಣವಾ
ಯಿತು.

ಆಗ ಶ್ಯಾಮಣ್ಣರಾಯರು 'ಸುಂದರ! ನೀ
ನು ಬಯಸಿದ ಹಣ್ಣು ನಿನಗೆ ತಂಗಿಯೂಗ
ಬೇಕು', ಎಂದೂ ತಮ್ಮ ಸ್ವರ ಸೇರಿಸಿ
ದರು.

ವಿಧಿಯ ವೆಂಕಮ್ಮ ತಮ್ಮ ವಿಳಿತವದ
ಲ್ಲೊನ್ನು ಕಾಲು ಜಾರಿ ಶ್ಯಾಮಣ್ಣನವ
ರಿಂದಲೇ ನಳಿನಿಯನ್ನು ಪಡೆದಿದ್ದಳೆಂಬು
ದು ಆ ವಿಳಿಯ ಹುಬ್ಬೇರಿಗಳಿಗೆ ಅದು ಹೇಗೆ
ತಿಳಿಯಬೇಕು?

'ಸುಂದರ—ನಳಿನಿ ಆದಾಗಲೇ ನಾವಿಬ
ರಿಂದ ಅಲ್ಲಿ ತಾಯಿಮಗಿದ್ದೆವು.

ನಗೆ ಬಿಂದು

"ನಾವು ಮಯೂರಿಗಾಗಿ ಹೋರಾ
ಡೋಣ; ನೀವು ಹಣಕ್ಕಾಗಿಯೂ" ಎಂದು
ಯುಗ್ಮ ರಾಷ್ಟ್ರ ಸಂಸ್ಥೆಯು ಸೈನಿಕ ಅಧಿ
ವೇಶನದಲ್ಲಿ ರಶ್ಮಾ ಸೇನಾನಿ ಹೇಳಿದ.

"ಅದು ನಿಜ; ಇಲ್ಲದಿದ್ದುದಕ್ಕಾಗಿಯೇ
ಜನರು ಸಾಮಾನ್ಯವಾಗಿ ಹೋರಾಡುವ
ಪದ್ಧತಿ"—ಜರ್ಮನ್ ಸೇನಾನಿ ಅಭಿಪ್ರಾ
ಯ ಸೇರಿಸಿದ.

೦ ೦ ೦

"ನಿನ್ನೆ ನಾವು ಕಂಡ ನಾಟಕ ಬಲು
ಸೊಗಸಾಗಿರುವುದಾಗಿ ಇಂದು ಪತ್ರಿಕೆಯ
ಲ್ಲಿ ವಿಮರ್ಶೆ ಕಾಣುತ್ತದೆ"

'ಸರಿ; ನಿನ್ನೆ ಇಷ್ಟೇನೂ ಸೊಗಸಾಗಿದ್ದಂ
ತೆ ತೋರಲಿಲ್ಲ. ಮತ್ತೇನಾದರೂ ಸುಧಾರ
ಣೆ ಮಾಡಿರ ಬಹುದು.'

೦ ೦ ೦

"ನಿಮ್ಮ ತಂದೆಯವರು ಮೃತಪಟ್ಟ
ರಂತೆ; ಹೌದೇನು!..."

"ನಿಜ....ನೊನ್ನೆ..."

"ಏನು ಖಾಯಿಲೆಯೂಗಿತ್ತು?"

"ವ್ಯಾಯಾಧಿಕ್ಯ.... ಬೇರೇನೂ ಇಲ್ಲ.'

"ಆ ಖಾಯಿಲೆ ಇತ್ತೀಚೆಗೆ ಸಾಧಾರಣ
ವಾಗಿದೆ. ನಮ್ಮೂರಲ್ಲಿ ಚಿಕ್ಕ ಮಕ್ಕಳನ್ನೇ
ಕ ಈ ಖಾಯಿಲೆಗೆ ಬಲಿಯೂದರು—ಕಳೆ
ದ ತಿಂಗಳಲ್ಲಿ!"

೦ ೦ ೦

"ಆತನ ಪತ್ನಿ ನಿನ್ನೆ ಹೆತ್ತಳು..."

"ಆಸ್ಪತ್ರೆಯಲ್ಲೋ ನರ್ಸಿಂಗ್ ಹೋ
ಮನಲ್ಲೋ?"

"ಎರಡೂ ಅಲ್ಲ; "ಎಕ್ಸ್‌ಪ್ರೆಸ್" ಗಾಡಿ
ಯಲ್ಲಿ...."

"ಹಾಗಾದರೆ, "ಎಕ್ಸ್‌ಪ್ರೆಸ್ ಡೆಲಿವರಿ"
ಯನ್ನೆ!"

೦ ೦ ೦

ಡಾಕ್ಟರ್ ರೋಗಿಯ ಕೂಡೆ ಏನೆಲ್ಲಾ
ಪ್ರಶ್ನೆ ಪಾಕೆ ರೋಗ ಲಕ್ಷಣಗಳ ವಿಷಯ
ತಿ ತಿಳಿಯಲೆತ್ನಿಸುತ್ತಿದ್ದಾಗ ರೋಗಿಗೇ
ಕೋ ಸ್ವಲ್ಪ ಬೇಸರವಾಯಿತು.

"ಹೀಗೆಲ್ಲಾ ಪ್ರಶ್ನಿಸುವುದೇಕೆ? ಪರೀ
ಕ್ಷೆ ಮಾಡಿಯೇ ರೋಗ ಲಕ್ಷಣಗಳನ್ನು
ತಿಳಿಯುವ ಡಾಕ್ಟರ್ ಇದೇ ರಸ್ತೆಯ ಬ
ಳಿಯದ್ದಾರೆಂದು ಕೇಳಿದೆ...."

"ಹೌದು; ಇದ್ದಾರೆ! ನೋಡಿ....ಆ

ಕನ್ನಡ ಸಾಹಿತ್ಯ ಕೂಟದ ವಾರ್ಷಿಕ ಸಭೆ

ಮುಂಬಯಿ ಇಪ್ಪತ್ತು ವರ್ಷಗಳಿಂದ ಕ
ನ್ನಡ ಸಾಹಿತಿಗಳ, ಕವಿಗಳ, ಕಲಾವಿದರ ವಿ
ಚಾರವಿನಿಮಯ ಕೇಂದ್ರವೆನಿಸಿರುವ ಮುಂಬಯಿ
ಕನ್ನಡ ಸಾಹಿತ್ಯ ಕೂಟ ಕಳೆದ ವಾರ ತನ್ನ ವಿ
ಶೇಷ ವಾರ್ಷಿಕ ಸಭೆಯಲ್ಲಿ ಹೊಸ ಪದಾಧಿಗ
ಳನ್ನು ಆರಿಸಿತು.

ಡಾ|| ಬಿದರಿ ದೀಕ್ಷಿತರು ಅಧ್ಯಕ್ಷರಾ
ಗಿ, ಶಿವಮೂರ್ತಿ ಪರಾರಿ ಮತ್ತು ಸಂತೋಷಕುಮಾ
ರ ಗುಲ್ವಾಡಿಯವರು ಜತೆಕಾರ್ಯದರ್ಶಿ
ಗಳಾಗಿ, ವ್ಯಾಸರಾಯ ಬಲ್ಲಾಳ, ಯಶವಂ
ತ ಚಿತ್ತಾಲ, ಡಾ|| ಸಿ. ಎಂ. ಕೂಲಕರ್ಣಿ,
ಶ್ರೀನಿವಾಸ ಹಾವನೂರ, ರಾಘವೇಂದ್ರರಾವ್,
ಪ್ರೊ|| ನಾರಾಣಿ ಶ್ಯಾನಭೋಗ ಮತ್ತು ಅನಂತ
ಪದ್ಮನಾಭಯವರು ಸದಸ್ಯರಾಗಿ ಆಯ್ಕೆಗೊಂಡರು.

ಮುಂಬಾಯಿಗೆ ಬರುವ ಸಾಹಿತಿ, ಕವಿ,
ಕಲಾವಿದರಿಗೆ ಇಲ್ಲಿಯ ಲೇಖಕರ ಪರಿಚಯ
ಮಾಡಿಸಿಕೊಟ್ಟು, ಆತಿಥಿಗಳ ವಿಚಾರಗಳನ್ನು
ತಿಳಿಸುವ ಕೇಂದ್ರವಾಗಿ 1940ರ ಮುದ್ದಣ್ಣ
ಜಯಂತಿಯಂದು ಆರಂಭವಾದ ಈ ಕೂಟ
ಡಾ|| ಶಾರದಕ್ಕಡಾ| ಬೇಂದ್ರೆ, ಗೋಪಾಲಕೃ
ಷ್ಣ ಅಡಿಗ, ಕೆ. ಕೆ. ಶರ್ಮ, ಡಾ|| ಮುರಳಿ,
ಶ್ರೀರಂಗ, ವಿ. ಕಾ. ವೆಂ. ಅಯ್ಯರ್, ಪದ್ಮಶ್ರೀ
ಕೆ. ಕೆ. ಹೆಬ್ಬಾರ ಅದಿಯಾಗಿ ಬಲವಷ್ಟು ಹಿರಿಯ
ಕಿರಿಯ ಸಾಹಿತಿ-ಕಲಾವಿದರುಗಳಿಗೆ ಮುಂಬ
ಯಿಯಲ್ಲಿರುವ ಲೇಖಕರ ಸಂಪರ್ಕ ಮಾಡಿಸು
ವ ಸಾರ್ವಜನಿಕ ಸೇವೆಯಂತೆ ರಚನಾತ್ಮಕ
ಕಾರ್ಯ ಮಾಡಿದೆ.

ಕಾಸರಗೋಡು ಸಾಹಿತ್ಯ ಸಮ್ಮೇಳನದಲ್ಲಿ
ಶ್ರೀ ರಂಗರು ಹೊರನಾಡ ಕನ್ನಡಿಗರಲ್ಲಿ ಇಂ
ಥ ಸಂಸ್ಥೆಗಳ ಅವಶ್ಯಕತೆಯಿದೆ ಎಂದು ಹೇ
ಳಿದ ಮಾತಿನಿಂದ ಸ್ಫೂರ್ತಿಗೊಂಡು ಅಂದು
ಮುಂಬಯಿಯ ಕೆಲವು ಪತ್ರಿಕೋದ್ಯಮಿ ಸಾ
ಹಿತಿಗಳಾದ ವ್ಯಾಸರಾಯ ಬಲ್ಲಾಳ, ಮು. ವಿ.
ನಾಯಕ, ಆರ್. ಎಸ್ ಮಣಿಲ್ಕ, ರಾಘವೇಂ
ದ್ರ ರಾವ್ ಮೊದಲಾದ ಕೆಲವು ಉತ್ಸಾಹಿ
ಗಳು ಈ ಕೂಟ ಕಟ್ಟಿ ರೂಪಿಸಿದರು. ಕೂಟ
ದ ಆಶ್ರಯದಲ್ಲಿ ವಿಮರ್ಶೆ, ಚರ್ಚಾಗೋಷ್ಠಿ,
ಸಾಹಿತಿಗಳ ಭಾಷಣ ಮೊದಲಾದ ಕಲವು
ಚಟುವಟಿಕೆ ನಡೆಯುವುದರೊಂದಿಗೆ ಕೃಷ್ಣಕು
ಮಾರ ಕಲ್ಲೂರ, ಎಚ್. ವೈ. ಶಾರದಾಪ್ರಸಾ
ದ ದಿನಕರ ದೇಸಾಯಿ, ಶ್ರೀನಿವಾಸ ಹಾವ
ನೂರ, ಪ್ರೊ|| ಸಿ. ಎಂ. ಕೂಲಕರ್ಣಿ, ಕೇಕ
ರ ಇತ್ಯಾದಿ ಮೊದಲಾದವರು ಕೂಟವನ್ನು ಯಶ
ಸ್ವಿಯಾಗಿ ನಡೆಸಿಕೊಂಡು ಬಂದರು.

ಕೆಂಪುಗೇಟಿನ ಕಂಪೌಂಡಿನಲ್ಲಿದ್ದಾರೆ, ಅವ
ರು ರೋಗಿಯ ಪರೀಕ್ಷೆ ಮಾಡದೆಯೂ
ಔಷಧಿ ಕೂಡಲೂ ಸಾಕು...ಮುಂದೆಹೋ
ಗಿ! ಗೇಟಿನ ಒಳಿ 'ವೆಟರಿನರಿ ಆಸ್ಪತ್ರೆ
ಯೆಂಬ ಬೋರ್ಡಿದೆ....'

ಎಚ್. ಎಂ. ವಿಜಯನಾರಾಯಣ.

ಸುಮ್ಮನಸ್ಥ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 85 ಶಾಖೆಗಳಿಂದ ಹಬ್ಬರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ ೪% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಶಾಖೆ

೨, ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

ಕೃಷಿ ಕ್ಷೇತ್ರದಲ್ಲಿ ಬೇಂಕಿನ ಕಾರ್ಯಕ್ರಮಗಳ ವಿವರಣೆ!

ಶ್ರೀ ಟಿ. ಎ. ಪೈ ಅವರಿಂದ

ಬೆಂಗಳೂರಿನ ಪತ್ರಿಕಾ ಪರಿಷತ್ತಿನವರಿಷ್ಟಿ
ಮೂತನಾಡುತ್ತಾ, ಸಿಂಡಿಕೇಟ್ ಬೇಂಕಿನ ವೈ
ಸೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಗಳ
ವರು ಸಿಂಡಿಕೇಟ್ ಬೇಂಕು ತನ್ನ ದೊಡ್ಡ
ಬೋಜನಯೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯ
ಉಡುಪಿ ತಾಲ್ಲೂಕಿನ ಮಣಿಪಾಲ ಎಂಬ ಪುಟ್ಟ
ಹಳ್ಳಿಯಲ್ಲಿ ಆರಂಭಿಸಿದ ಕೃಷಿ ಸಂಶೋಧನಾ
ಕೇಂದ್ರದ ಮೂಲಕ ಕೃಷಿಗೆ ಹಣ ಒದಗಿ
ಸುವ ಕ್ರಮವನ್ನು ತಿಳಿಸಿದರು.

ದಕ್ಷಿಣ ಕನ್ನಡದ ರೈತರಿಗೆ ಎರಡು ಸಾವಿ
ರ ಪಂಪ್ ಸೆಟ್ಟುಗಳನ್ನು ಬಿಡುವಿನಲ್ಲಿ 800
ರೂ ರೂಪಾಯಿ ಪಟ್ಟಿದಿಂದ ಬೇಂಕು ಸಹಾಯ
ಒದಗಿಸುವುದು ಅಲ್ಲದೆ 14 ಲಕ್ಷ ರೂ. ವೆಚ್ಚ
ದಿಂದ 200 ಟ್ರಾಕ್ಟರ್‌ಗಳನ್ನು ಒದಗಿಸುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ
ಬೇಂಕು ನಡೆಸಿದ ಸರ್ವೆಯೊಂದರ ಪ್ರ
ಕಾರ ರೈತರು ಪರಂಪರಾಗತ ಕೃ
ಷಿ ಪದ್ಧತಿಯನ್ನು ಅನುಸರಿಸುವರು ಎಂದು
ಕಂಡು ಬಂದಿದೆ. ಬೇಂಕು ಮಣಿಪಾಲ ಕೃಷಿ
ಕೇಂದ್ರವನ್ನು ರಚಿಸುವ ಮುನ್ನ ಆಲೋಚಿ
ಸಿ ಮೆಡಿಕಲ್ ಕಾಲೇಜಿನ ಬಯೋಕೆಮಿಸ್ಟ್ರಿ
ಸೆಕ್ಷನಿನಲ್ಲಿ ಸ್ವಂತ ಮಣ್ಣಿನ ಪರೀಕ್ಷಾ ಕೇಂ
ದ್ರವನ್ನು ತೆರೆದು, ಇಪ್ಪತ್ತೈದರಿಂದ ಎರಡು ಸಾವಿ
ರ ಮಣ್ಣಿನ ವಿಧಾನಗಳನ್ನು ಪರೀಕ್ಷಿಸಿದೆ.

ಬೇಂಕಿನ ಕೃಷಿ ಸಂಶೋಧನಾ ವಿಭಾಗವು
ನಡೆಸಿದ ಪ್ರಯೋಗಗಳಿಂದ ಒಂದು ಜ
ತೆ ಕೋಣಗಳನ್ನು ಸಾಕುವುದಕ್ಕಿಂತ ಕಡಿಮೆ
ಖರ್ಚಿನಲ್ಲಿ ಯಾಂತ್ರಿಕೃತ ನೇಗಿಲಿಂದ ಕೆಲಸವಾ
ಗುವುದು ಎಂದು ತಿಳಿದಿದೆ. ದಕ್ಷಿಣಕನ್ನಡ ಜಿಲ್ಲೆ
ಗೆ ಬೇಂಕು ಕೇಂದ್ರೀಕರಿಸಿದ ಗಮನವು ಯ
ಶಸ್ವಿಯಾದರೆ ರಾಜ್ಯದ ಇತರ ಭಾಗಗಳಿಗೂ
ಬೇಂಕು ತನ್ನ ಕಾರ್ಯವನ್ನು ವಿಸ್ತರಿಸುವುದು
ಎಂದು ಶ್ರೀ ಪೈಗಳು ನುಡಿದರು. ಅಲ್ಲದೆ ಆ
ನಾನು ಕೃಷ್ಣಕೋಕಿಲಾಕಳೆ ಮುಂತಾದುವಿಗೆ
ಳಿಗೂ ಬೇಂಕು ಸಾಲಸೌಕರ್ಯವಿದೆಯೆಂದರು.

ಶಾಲೆಯ ಮಕ್ಕಳು

ಶಾಲೆಗೆ ಬರುವಾ ಮಕ್ಕಳ ಕಂಡು
ನನ್ನ ಹೃದಯ ತುಂಬಿ ಬಂದು
ಕವಿತೆಯ ಬರೆಯುವೆ ನಾನೆಂದು
ಅದನೇ ನಿನ್ಮೆದುರು ತೋರುವೆ ತಂದು.

ಇಂದಿನ ಮೊಗ್ಗೆ ನಾಳೆಯ ಹೂ
ನಾಳೆಗಳಿದ ಹೂವೆ ಪಂಮಳವು
ಇವರೇ ನಮ್ಮಯ ಶಾಲೆಯ ಮಕ್ಕಳು
ಅವರೇ ನಮ್ಮೀ ನಾಡಿನ ಪ್ರಜೆಗಳು.

ಮಕ್ಕಳ ಲಾಲಿಸಿ ಮಕ್ಕಳ ಪಾಲಿಸಿ
ತಾಯಿಯು ಪಡೆದಳು ಶ್ರೇಷ್ಠತೆಯ
ಮಕ್ಕಳನೆಲಿಸಿ ಮಕ್ಕಳಪಾಡಿಸಿ
ಪಡೆದಪ ಗುರುವು ಶ್ರೇಷ್ಠತೆಯ.

ಗುಡಿಯಂತಿವನೆಗೆ ಗಂಡಿ ಬಂಧಿಸಿ
ಅಕ್ಷರ ರೂಪವನಳವಡಿಸಿ
ಮಕ್ಕಳಾ ವ ನವನಾಕರ್ಷಿಸಿ
ಅಕ್ಷಯ ಪ್ರೇಮದ ವಿಧಿಯೆಸಗಿಸಿ

ಮಕ್ಕಳು ಆಟಕೆ ಮಕ್ಕಳು ಪಾಠಕೆ
ಮಕ್ಕಳು ಸಕಲಕು ಸಮಪಾಲು
ಮಕ್ಕಳ ಗುರುವೇ ಆಗಲು ಬೇಕು
ಆಗಲೇ ಮಕ್ಕಳು ಬಲಿಷ್ಠವಪ್ಪರು.

ಬಲಿದಾ ಮಕ್ಕಳು ಮುಂದೆ ಬಂದು
ಈ ನಾಡಿಗೆ ಕೀರ್ತಿಯ ತಂದು
ನಲಿದೀ ಜಗದಲಿ ಬೆಳಗುವಾಗ
ನಮ್ಮ ಆಳಲ ಸೇವೆ ಸಲ್ಲುವುದಾಗ!

—"ಮಲ್ಲಾರಿ"

READ &
ADVERTISE IN
NAVAYUGA WEEKLY

NAVAYUGA 23—11—1957
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಗ್ರಾಮ ಆರೋಗ್ಯ ಸಾಧನ

ವೈಜ್ಞಾನಿಕ ಸಿದ್ಧಾಂತ ಪ್ರಚಾರ

ಲೇಖಕರು:
ಶ್ರೀ ಬಿ. ಎ. ಶೆಟ್ಟಿ, ಬೆಂಗಳೂರ್

ನಮ್ಮ ದೇಶ ಹಳ್ಳಿಗಳಿಂದ ಕೂಡಿದ ದೇಶ. ನಮ್ಮ ದೇಶದಲ್ಲಿ ವಾಸಿಸುವ ಶೇಕಡಾ ಎಪ್ಪತ್ತೈದು ಜನರು ಗ್ರಾಮ ವಾಸಿಗಳು. ಇಂತಹ ಹಳ್ಳಿಗಳ ಸುಧಾರಣೆಯಾದರೆ ದೇಶವೇ ಸುಧಾರಣೆಯಾದಂತಾಗುವುದು. ಉತ್ತಮ ಸಂಸ್ಕೃತಿಯಿಂದ ಕೂಡಿದ ದೇಶ್ಟಜಾಗತಿಕ ಖ್ಯಾತಿಯನ್ನು ಪಡೆದು ಮುಂದರಿದ ರಾಷ್ಟ್ರವಾಗಿ ಶೋಭಿಸುವುದು.

ರಾಷ್ಟ್ರವು ಸರ್ವತೋಮುಖ ಏಳಿಗೆಯನ್ನು ಸಾಧಿಸಬೇಕಾದರೆ ರಾಷ್ಟ್ರ ವಾಸಿಗಳಾದ ಪ್ರಜೆಗಳ ಜೀವನದ ಪ್ರಧಾನ ಬೇಡಿಕೆಗಳಾದ ಅಶನ, ವಸನ, ವಸತಿ ಇವೇ ಮೊದಲಾದ ವಿಷಯಗಳ ಖುಗ್ಗೆ ಸ್ವಯಂ ಪೂರ್ಣತೆಯನ್ನು ಸಾಧಿಸಬೇಕು. ಆದರೆ ಇವೆಲ್ಲವುಗಳಿಗಿಂತ ಮುಖ್ಯವಾದುದು ಆರೋಗ್ಯ ಭಾಗ್ಯ. ಆರೋಗ್ಯ ಭಾಗ್ಯವಿಲ್ಲದ ಜೀವಿಯು ಬಾಳು ಸದಾ ಗೋಳು. ಎಷ್ಟೇ ಸಂಪತ್ತಿದ್ದರೂ ಆರೋಗ್ಯ ಸಂಪತ್ತಿನ ಕೊರತೆ ಇರುವವನಿಗೆ ಬಾಳಿನಲ್ಲಿ ಎಂದೆಂದೂ ಸುಖವಿಲ್ಲ. ಇಂತಹ ಪ್ರಧಾನ ಸಂಪತ್ತಾದ ಆರೋಗ್ಯ ಸಂಪತ್ತನ್ನು ಒದಗಿಸಿಕೊಟ್ಟು ಗ್ರಾಮ ವಾಸಿಗಳ ಜೀವನ ಸುಧಾರಣೆಗೊಳ್ಳಬೇಕು.

ನಮ್ಮ ರಾಷ್ಟ್ರ ಸ್ವತಂತ್ರ ರಾಷ್ಟ್ರ. ಆಳುವ ಸರಕಾರ ನಮ್ಮದೇ ಆದ ಸರಕಾರ. ಸರಕಾರದ ಆಗುಹೋಗುಗಳು ಪ್ರಮುಖವಾಗಿ ನಡೆಸಲ್ಪಡುತ್ತಿದೆ. ಅದಕ್ಕಾಗಿ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿಕೊಂಡು ತನ್ಮೂಲಕ ರಾಷ್ಟ್ರದ ಪ್ರಗತಿಯನ್ನು ಸಾಧಿಸುವುದೇ ನಮ್ಮ ಮುಖ್ಯ ಗುರಿ. ಇಂತಹ ಯೋಜನೆಗಳನ್ನು ಸಿದ್ಧ ಪಡಿಸಿಕೊಂಡು ಹಳ್ಳಿ ವಾಸಿಗಳ ಸುಧಾರಣೆಯನ್ನೇ ಮುಖ್ಯ ಉದ್ದೇಶವಾಗಿಟ್ಟು ಕೊಂಡು ಬುದ್ಧಿಯನ್ನು ತಿದ್ದುವ ಶಿಕ್ಷಣ ಹಾಗೂ ಸುಖಮಯ ಬಾಳಿನ ಆರೋಗ್ಯ ಇವುಗಳ ಕಡೆಗೆ ಹೆಚ್ಚಿನ ಗಮನವನ್ನಿರಿಸಿ, ಸಾಕಷ್ಟು ಆರ್ಥಿಕಾನುಕೂಲತೆಗಳನ್ನು ಒದಗಿಸಿಕೊಂಡು ಗ್ರಾಮೋತ್ತರ ಪ್ರದೇಶಗಳಲ್ಲಿ ಆರೋಗ್ಯ ಮಂದಿರಗಳನ್ನು ತೆರೆಯುವಾಗಲಿ ತಕ್ಕ ಶಿಬಂದಿಗಳ ನೇಮಕವಾಗಲಿ ಆಗದೆ. ಇವೆಲ್ಲವು ಅಂಧವಿಶ್ವಾಸಕ್ಕೊಳಗಾದ ಅನಾಗರಿಕ ಹಳ್ಳಿಗರಲ್ಲಿ ಹೇಗೆ ತಾನೆ ಆದೀತು? ಆತನಲ್ಲಿ ವಾಸನೆಯಾಗಿರುವ ಕಾಯಿಲೆ ನಿಂಬಿಕೆಯನ್ನು ತೊರೆಯುವಂತೆ ಮಾಡಬೇಕು. ಹಳ್ಳಿ ಹಳ್ಳಿಯನ್ನೇ ನಾಶ ಮಾಡುವ ಸಾಂಕ್ರಾಮಿಕ ರೋಗಗಳ ಬಗ್ಗೆ ಅನೇಕರಲ್ಲಿ ಅನೇಕ ನಂಬುಗೆಗಳಿವೆ. ಕಾಲೆರಾ, ಸಿಡುಬು ಮೊದಲಾದ ಭಯಂಕರ ಅಂಟು ರೋಗಗಳು ಗ್ರಾಮವನ್ನು ಸಬ್ಬಿಕೊಂಡಾಗ ತಮ್ಮ ಆರಾಧ್ಯ ದೈವಗಳ ಅನಮಸ್ಕೂಲಕರ ಆರಾಧನಾ ಸಂಪ್ರದಾಯವೇ ಇದಕ್ಕೆ ಮುಖ್ಯ ಕಾರಣ ಎಂಬ ಕುರುಡು ನಂಬಿಕೆ ಅಷ್ಟೇ ಅಲ್ಲದೆ ಅಂತಹ ಕಾಯಿಲೆಗಳಿಗೆ ಔಷಧಿಯನ್ನು ಮಾಡಬಾರದೆಂದೂ, ಹಾಗೆ ಮಾಡಿದರೆ ನಂಬಿದ್ದ ದೈವಗಳು ಕೋಪಿಸಿಕೊಳ್ಳುವುದೆಂದೂ ಇತ್ಯಾದಿ ಇತ್ಯಾದಿ ಕುರುಡು ವಿಶ್ವಾಸಗಳು. ಇದಕ್ಕೆ ಮುಖ್ಯ ಕಾರಣ ಅನಾಗರಿಕತೆ ಅಂತಹ ಅನಾಗರಿಕತೆಯನ್ನು ಹೋಗಲಾಡಿಸುವಂತೆ ಶಾಸ್ತ್ರೀಯ ಹಾಗೂ ದೃಶ್ಯ ಮೂಲಕ ಅವರಿಗೆ ಆರೋಗ್ಯದ ಪಾಠವನ್ನು ಬೋಧಿಸಿ ಕೊಡಬೇಕು.

ಜೀವನದಲ್ಲಿ ಆಚ್ಚುತಟ್ಟುವಂತೆ ಗ್ರಾಮದ ನೈರ್ಮಲ್ಯ ಇವುಗಳನ್ನು ಪಾಲಿಸುವಂತಹ ಏಕ್ಯ ಬುದ್ಧಿಯು ನೆಲೆಯೂರುವಂತೆ ಮಾಡಬೇಕು. ಅನಾರೋಗ್ಯಕ್ಕೆ ಕೊಳಚೆಯೇ ಮುಖ್ಯ ಕಾರಣ. ಅಂತಹ ಕೊಳಚೆಯನ್ನು ದೂರೀಕರಿಸುವಂತಹ ಗ್ರಾಮದ ಶುಚಿತ್ವದ ಬಗ್ಗೆ ಮಾದರಿಯನ್ನು ತೋರಿಸಿ ಕೊಡಬೇಕು. ಶಿಬಂದಿಗಳು ಅವರ ಜೀವನದ ಒಡನಾಡಿಗಳೆಂಬ ಭಾವನೆ ಹುಟ್ಟುವಂತೆ ಒಂದುಗೂಡಬೇಕು. ಆದರ್ಶತೆಯನ್ನು ತೋರಿಸಿಕೊಡಬೇಕು.

ಸ್ವಚ್ಛವಾದ ಜಲ ಸೇವನೆಯನ್ನು ಮಾಡುವ ಪರಿವಾರವನ್ನು ಹೇಳಿ ಕೊಡುವುದೇ ಎರಡನೇ ಆರೋಗ್ಯ ಸುಧಾರಣೆಯ ವೈಜ್ಞಾನಿಕ ತತ್ವ. ಮಹಾ ಮಹಾ ವಿಜ್ಞಾನಿಗಳೇ ರೋಗಕ್ಕೆ ಶುದ್ಧ ಗಾಳಿಯ ಕೊರತೆಯೇ ಮುಖ್ಯ ಕಾರಣ ಎಂಬ ಸಿದ್ಧಾಂತಕ್ಕೆ ಬಂದಿದ್ದಾರೆ. ಆದುದರಿಂದ ಹಳ್ಳಿಗರಿಗೆ ಶುದ್ಧ ಗಾಳಿಯ ಪೂರೈಕೆಯಾಗುವಂತೆ ಹತ್ತಾರು ಮನೆಗಳ ಕೇಂದ್ರದಲ್ಲಿ ಉತ್ತಮ ಬಾವಿಯನ್ನು ರಚಿಸಿ ಶುದ್ಧ ನೀರಿನ ಸೇವನೆ ಮಾಡಿಕೊಳ್ಳುವಂತೆ ಮಾಡಬೇಕು.

ಹಳ್ಳಿಗರೆಲ್ಲಾ ಒಂದುಗೂಡುವ ಊರ ಜಾತ್ರೆ, ಕಂಬಳ, ಕೋಳಿ ಜೂಜು ಮೊದಲಾದೆಡೆಗಳಲ್ಲಿ ಹಳ್ಳಿಗರಿಗೆ ಮನೋರಂಜನೆಯನ್ನೊದಗಿಸುತ್ತಾ, ಚಲಚಿತ್ರ ಮೂಲಕ ದೃಶ್ಯ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಬೇಕು.

ಸಿಡುಬು ಮೊದಲಾದ ಮಹಾ ಸಾಂಕ್ರಾಮಿಕ ರೋಗಗಳಿಗೆ ವೈಜ್ಞಾನಿಕ ಸಿದ್ಧಾಂತದಂತೆ ದೇವಿ ಹಾಕುವುದನ್ನು ಕಂಡು ಹುಡುಕಲಾಗಿದೆಯಾಷ್ಟೆ! ಆದರೆ ಸಿಡುಬು ನಿಯಂತ್ರಣ ಶಕ್ತಿಯು ಶರೀರದಲ್ಲಿ ಉತ್ಪತ್ತಿಯಾಗುವಂತೆ ದೇವಿ ಹಾಕುವುದೊಂದು ಉತ್ತಮ ವಿಧಾನವೆಂಬ ವಿಷಯವು ಮನೆಮನೆಗಳಿಗೆ ಮುಟ್ಟುವಂತೆ ತಿಳಿಸಬೇಕು. ಕೆಲವು ಪ್ರದೇಶಗಳ ಜನರು ದೇವಿ ಹಾಕಿಸಿಕೊಳ್ಳುವರೇ ಬಹು ಹಿಂದುಳಿಯುತ್ತಾರೆ. ಅಂತಹವರಿಗೆ ಸ್ವಯಂ ಪ್ರೇರಣೆಯುಂಟಾಗುವಂತಹ ವಿಧಾನವನ್ನು ವಿವರಿಸಬೇಕು.

ಹೆಳ್ಳಿಯ ಮಹಿಳೆಯರು ಬಹು ಮುಂದಿವರ್ಗಳ ತಾಯಿಯರಾಗುವುದೂ ಅನಾರೋಗ್ಯಕ್ಕೆ ಒಂದು ದಾರಿಯೂ ಆಗುತ್ತದೆ. ಆದಕ್ಕಾಗಿ ಸಂತತಿ ನಿಯಂತ್ರಣದ ಮಾಹಿತಿಯನ್ನು ಒದಗಿಸಿಕೊಡಬೇಕು. ಆ ಖುಗ್ಗೆ ಅವರಲ್ಲಿರುವ ಲಜ್ಜಾ ಮನೋಭಾವನೆಯನ್ನು ದೂರೀಕರಿಸಿ, ಇದೊಂದು ಪಾವನ ಕಾರ್ಯವೆಂಬ ಭಾವನೆಯನ್ನು ನಾಶವಾಗುವಂತೆ ಮಾಡಬೇಕು. ಮುಂದರಿದ ಪಾಶ್ಚಾತ್ಯ ರಾಷ್ಟ್ರಗಳ ಮಾದರಿಯನ್ನು ತೋರಿಸಿ ತಿಳಿಸಬೇಕು. ಇದೊಂದು ಪವಿತ್ರ ಕರ್ತವ್ಯವೆಂಬ ಭಾವನೆಯೂರುವಂತೆ ಮಾಡಬೇಕು.

ಗಾಂಧೀಜಿಯವರ "ರಾಮ ರಾಜ್ಯ"ದ ಕನಸು ನನಸಾಗಬೇಕಾದರೆ ಹಳ್ಳಿಗರ ಆರೋಗ್ಯ ಸುಧಾರಣೆಗೊಂಡು ದೃಢಕಾಯರಾಗಿ, ಶ್ರಮ ಜೀವಿಗಳಾಗಿ ಸುಖಮಯ ಬಾಳನ್ನು ಸಾಗಿಸುವಂತಾಗಬೇಕು. ಆ ಬಗ್ಗೆ ಸರಕಾರ ಸರ್ವ ಗಮನವನ್ನಿರಿಸಿಕೊಂಡು ತಕ್ಕ ಪ್ರಸಾರ ಕಾರ್ಯಗಳನ್ನು ಕೈಕೊಂಡುದಂದರೆ ನಮ್ಮ ರಾಷ್ಟ್ರವು ಸಂಪತ್ತಿನ ಸುಪ್ಪತ್ತಿಗೆಯಲ್ಲಿ ಪವಡಿಸಿದಂತಾಗುವುದು. ಭಾರತೀಯರ ಜೀವನದಲ್ಲಿ ಹಾಸು ಹೊಕ್ಕಿರುವ ಅನೇಕ ಸಮಸ್ಯೆಗಳು ಬಗೆಹರಿದು ಸ್ವಾವಲಂಬಿಗಳಾಗುವಂತಾಗುವುದು.

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ
ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50
ರಿಯಾ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಸಂಗ್ರಾಹ್ಯ ಸಂಕಲನಗಳು

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಜನ್ಯ	2—00
ಏಕಾಂಕ ನಾಟಕಗಳು	1—00
ಭಾರತದ ನಾಲ್ಮುಮುಖಿಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಗುಡಿಮುಷ್ಟಿಗಳು	1—50
ವಿಚಿತ್ರ ಕಳ್ಳಪೇಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ಸೀತಾ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಪುಷ್ಪ ವನ	2—00

ಕಟಲಾಗಿಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



30—11—1967

೨೦
ಪೈಸೆ

ಕಥಾ ಪ್ರಪಂಚ

ದೂರದ ಬೆಟ್ಟ ನುಣ್ಣಗೆ

ಬರೆದವರು: ಶ್ರೀ ಪಿ. ಕೆ. ಪ್ರಕಾಶ ರಾವ್, ಕೆಮ್ಮಣ್ಣು.

ಈಗೆಂಟು ದಿನಗಳಿಂದ ಸುಮತಿಯ ದ್ದು ಒಂದೇ ಹಟ—ತಾನು ಕೆಲಸಕ್ಕೆ ಸೇರಬೇಕೆಂಬುದಾಗಿ. ಆದರೆ ಶ್ರೀಧರ—ಅವಳ ಗಂಡ ಒಪ್ಪಬೇಕಲ್ಲ? ತಾನು ದುಡಿಯುವಾಗ ತನ್ನ ಹೆಂಡತಿ ದುಡಿಯ ಬೇಕೇಕೆ—ಎಂಬುದು ಅವನ ವಾದ. ಹಾಗೆ ನೋಡಿದರೆ ಸುಮತಿಗೆ ದುಡಿಯಲೇ ಬೇಕೆಂಬ ಆವಶ್ಯಕತೆಯೂ ಇರಲಿಲ್ಲ ಶ್ರೀಧರನಿಗೆ ಸಾಕಷ್ಟು ಸಂಬಳ ಬರುತ್ತಿತ್ತು. ಉಡಲು ತೊಡಲು ಚಿಂತೆಯಿಲ್ಲ. ಖರ್ಚು ಕಳೆದು ಹಣ ಅಲ್ಪ ಸ್ವಲ್ಪ ಬಿಗುತ್ತಿದ್ದುದೂ ಉಂಟು.

ಆದರೆ ಸುಮತಿಗೇನೋ ಬೇಸರ. ಈ ಚೀಜಿಗೆ ಶ್ರೀಧರನನ್ನು ತನ್ನ ಖರ್ಚಿಗೆ ಹಣ ಕೇಳಲು ಅರ್ಥವಿಲ್ಲದ ಸಂಕೋಚ ಅವಳನ್ನು ಕಾಡುತ್ತಿತ್ತು. ಮನೆಯಲ್ಲಿಯೇ ಕುಳಿತು ವ್ಯರ್ಥವಾಗಿ ಕಾಲ ಕಳೆಯುತ್ತಿದ್ದೇನೆ—ಎನ್ನಿಸುತ್ತಿತ್ತವಳಿಗೆ. ತಾನು B Sc. ಕಲಿತದ್ದು ಯಾವ ಪುರುಷಾರ್ಥಕ್ಕೆ ಎಂದವಳ ವಾದ.

ಅವಳ ಮಕ್ಕಳೂ ಅವಳಿಂದಈ ವಿಚಾರವನ್ನು ದೂರಮಾಡಲು ಸಮರ್ಥರಾಗಿರಲಿಲ್ಲ, ಎಲ್ಲರೂ "ನಿನ್ನ ಹುಟ್ಟು ಮಕ್ಕಳು ಎಷ್ಟು ಮುದ್ದಾಗಿವೆ! ಏನೊಂದು ನಗು ಮೊಗದಿಂದಿನಿ!" ಎಂದರೂ ಅವಳು ಮಕ್ಕಳ ವಿಷಯ ಹೆಮ್ಮೆಪಡುತ್ತಿರಲಿಲ್ಲ. ಕೇವಲ ಮನೆ ನೋಡಿಕೊಳ್ಳುವುದು, ಮಕ್ಕಳನ್ನು ಬೆಳೆಸುವುದು—ನನ್ನ ಕೆಲಸ ಆದರೆ ನನ್ನ ಬಾಳೆಲ್ಲ ವ್ಯರ್ಥ" ಎಂಬ ಭಾವನೆ ಅವಳ ಮನವನ್ನು ಬಲವಾಗಿ ಹೊಕ್ಕಿತ್ತು.

"ಸೋಸ್ಕೆ"ಅತುಂತಾಪುರದಿಂದ ಅಡಿಗೆ ಮನೆ"ಯಿಂದೋಡಿ ಬಂದಳು ಸುಮತಿ. ಕಾಗದ ಕಂಡೊಡನೆ ಪರಿಚಯದ ಹಸ್ತಾಕ್ಷರ ಎನ್ನಿಸಿತು. ಕಾಗದ ಒಡೆದೊಡನೆ ಅವಳ ನಂಬಿಕೆ ದೃಢವಾಯಿತು. ಅವಳ ಗೆಳತಿ ವಿಮಲ ಅನೇಕ ವರ್ಷಗಳ ನಂತರ ಕಾಗದ ಬರೆದಿದ್ದಳು.

ಪುಟ್ಟು ದಿನಗಳ ಮಟ್ಟಿಗೆ ಅವಳು ಬೆಂಗಳೂರಿಗೆ ಬರುವಳಾಗಿಯೂ, ಅವಶ್ಯವಾಗಿ ಆಕೆಯನ್ನು ಕಾಣಲೇ ಬೇಕೆಂದೂ ತಿಳಿಸಿ ತನ್ನ ಬೆಂಗಳೂರು ವಿಳಾಸವನ್ನು ಬರೆದಿದ್ದಳು ವಿಮಲಾ.

ಕಾಗದ ಓದಿದ ನಂತರ ಹಳೆಯ ನೆನಪುಗಳು ಸುಮತಿಯನ್ನು ಮುತ್ತಿದುವು.

ವಿಮಲಾ ಮತ್ತು ಅವಳು ಒಟ್ಟಿಗೆ ಓದಿದವರು. ಮೊದಲಿನಿಂದಲೂ ವಿಮಲಾಳದು ಧೀರ ಮನೋವೃತ್ತಿ. ತನಗೆ ತೋರಿದ್ದನ್ನು ನೂಡಲೇ ಬೇಕೆನ್ನುವ ಹಠ.

"ನಾನು ನಿನ್ನಂತೆ ಮದುವೆ ಮಾಡಿಕೊಂಡವ್ಳಕ್ಕೇ ಚಾಪ್ಟರ್ ಕ್ಲೋಸ್ ಮಾಡೋಲ್ಲ" ಎಂದು ಇತರ ಗೆಳತಿಯರನ್ನು ಸದಾ—ಹಂಗಿಸುತ್ತಿದ್ದಳು.

ಅಸು ಅದದ್ದೂ ಹಾಗೆಯೇ. ಓದು ಮುಗಿದ ತಕ್ಷಣ ಇಂಡಿಯನ್ ಏರ್ ಲೈನ್ಸಿನಲ್ಲಿ ಗಗನ ಸಖಿಯಾದವಳು. ತನ್ನ ಮೋಹಕ ಜೀವನದ ಬಗ್ಗೆ ಸುಮತಿಗೆ ಆಗೊಮ್ಮೆ ಕಾಗದ ಬರೆದಿದ್ದಳು. ಮುಂದೆ ಅವಳ ಸಮಾಚಾರವೇ ಇಲ್ಲ. ಎಂದಾದರೂ ಗೆಳತಿ. ಅವಳ ಮೋಹಕ, ಸುಖಿ ಜೀವನದ ಬಗ್ಗೆ ಮುಸ್ಸಂಜೆಯ ನಡಿಯೂಡಿದ ಪ್ರೇ ಕೇಳಿದ್ದು.

"ಹ್ಞುಂ.. .. .." ನಿಟ್ಟುಸಿರಿಟ್ಟಳು ಸುಮತಿ.

ಆದರೆ ತಾನು? ಓದು ಮುಗಿಯಿತೋ ಇಲ್ಲವೋ ತಾಳಿ ಕೊರಳನ್ನು ಆಶ್ರಯಿಸಿತು. ನಿಜ, ಹೊಸತರಲ್ಲಿ ಎಲ್ಲವೂ ಚೆನ್ನವೇ ಅನ್ನಿಸಿತು. ಆದರೆ ನೂತನ ದಾಂಪತ್ಯದ ಸುಖದ ಗುಂಗು ಎಷ್ಟು ದಿನ ಉಳಿದೀತು? ಕಾವ್ಯ ಅರಿದ ನಂತರ. ಪ್ರೇಮ ವಾಹಿನಿಯ ರಭಸ ಕುಂಟೆ ತೊಡಗಿದಾಗ ಇದ್ದಕ್ಕಿದ್ದಂತೆಯೇ ಎಲ್ಲವೂ ಫೀಕರವಾಯಿತು.

ವಿಮಲಾಳಿಗೆ ಈಗ 28ರ ಪ್ರಾಯ. ತನಗೂ ಅಷ್ಟೆ. ಆದರೂ ಇಬ್ಬರಲ್ಲಿ ಅದೆಷ್ಟರ ವ್ಯತ್ಯಾಸ, ಎಂತಹ ಅಂತರ! ತಾನಾಗಲೇ ಮದುವೆಯೂಗಿ ಎಂಟು ವರ್ಷಗಳುರುಳಿದುವು. ಜೊತೆಗೆ 2 ಮಕ್ಕಳ ತಾಯಿ. ವಿಮಲಾ ಅನ್ನುತ್ತಿದ್ದಂತೆ ಹೆಚ್ಚು ಕಡಿಮೆ ತನ್ನದು ಚಾಪ್ಟರ್ ಕ್ಲೋಸ್ಡ್. ಆದರೆ ಅವಳಿಗೆ?

ಕಾಗದವನ್ನು ಮತ್ತೊಮ್ಮೆ ಓದಿದಳು. ಶನಿವಾರ ಬರುತ್ತೇನೆಂದು ಬರೆದಿದ್ದಾಳೆ. ನಾಳೆ ಅಲ್ಲ; ನಾಳಿದ್ದೇ. ಅವಳ ಆಗಮನ ಖಂಡಿತ. ಅವಳನ್ನು ಕಾಣಲೇ ಬೇಕು—ಅಂದುಕೊಂಡಳು.

ಆಮೂಸ...s . s ಗಟ್ಟಲೂಗಿ ಕೆರು ಚುತ್ತ ಓಡಿಬಂದ ಪ್ರದೀಪ್

"ನೋಡಮ್ಮಾ, ಈ ಪ್ರತಿಮೂ ನನ್ನ ಹೊಡೀತಾಳೆ"

ಸುಮತಿಯು ಯೋಜನಾಲಹರಿ ಅಲ್ಲಿಗೇ ತುಂಡಾಗಿ ಬಿತ್ತು; ಗಾಳಿಗೋಪುರ ಕುಸಿದು ಬಿದ್ದಂತಾಯಿತು—ಅವಳಿಗೆ. ಅವಳ ಅತೃಪ್ತ ಮನ ರೊಚ್ಚಿಗೆದ್ದಿತು. ಫಟ್ಟೆಂದು ಇಬರಿಗೂ ಎರಡು ಪೆಟ್ಟು ಕೊಟ್ಟಳು.

ಪಾಪ! ಮಕ್ಕಳಿಬ್ಬರೂ ತಾಯಿಯನ್ನೇ ಪೆಚ್ಚಾಗಿ ನೋಡಿ ತ್ತಿದ್ದಂತೆಯೇ ಆಕೆ ಅಡುಗೆ ಮನೆಗೆ ಹೊಕ್ಕಿದ್ದಳು.

ಂ ಂ ಂ

ಶನಿವಾರದ ದಿನ ಸುಮತಿಗೆ ಎಲ್ಲಿಲ್ಲದ ಉತ್ಸಾಹ. ಬೇಗನೇ ತನ್ನ ಕೆಲಸವನ್ನೆಲ್ಲಾ ಪೂರೈಸಿ, ಮಕ್ಕಳಿಬ್ಬರನ್ನೂ ಶಿಕು ವಿಹಾರಕ್ಕೊಪ್ಪಿಸಿ, ತಾನೂ ವಿಮಲಾ ಬಂದಿಳಿದಿದ್ದ ಹೋಟೆಲಿಗೆ ನಡೆದಳು.

ಸ್ವತಃ ವಿಮಲಾಳೇ ಎದ್ದು ಒಂದು ಆಕೆಯನ್ನು ಸ್ವಾಗತಿಸಿದಳು.

ವಿಮಲಾಳನ್ನು ಕಂಡು ಸುಮತಿಗಾದ ಆಶ್ಚರ್ಯ ಇಷ್ಟೇ ಅಷ್ಟೇ ಅನ್ನುವಂತಿರಲಿಲ್ಲ ಈ ಆರು ವರ್ಷಗಳಲ್ಲಿ ಅವಳು ಸ್ವಲ್ಪವೂ ಬದಲಾಯಿಸಿರಲಿಲ್ಲ. ಬದಲಾಗಿ ಮತ್ತಷ್ಟೂ ಆಕರ್ಷಕಳಾಗಿ ಕಂಡಳು.

"ಏರ್ ಲೈನ್ಸಿನ ಪ್ರಭಾವವೇನೋ?" ಎಂದು ಕೊಂಡಳು ಮನಸಲ್ಲೇ—ಸುಮತಿ.

'ಏನು ಸುಮ್ಮೀ? ಹೇಗಿದ್ದಿ?' ಎಂದು ಅವಳು ಕೇಳಿದಾಗ ನಿಜಕ್ಕೂ ತಬ್ಬಿಬ್ಬಾದಳು.

"ಹೀಗೇ, ನಿನ್ನೆದುರಿಗೆ ಇರುವಂತೆ"ಎಂದಳು ಶುಷ್ಕನಗೆ ಬೀರುತ್ತಾ.

"ಹ್ಞುಂ. ಸ್ವಲ್ಪ ದಪ್ಪ ನಾಗಿದ್ದೀ.... ಮುಂಚಿನಷ್ಟು ತೆಳ್ಳಗಿಲ್ಲ.'

"ಸ್ವಲ್ಪ ಏನು? ಕೊಂಬ ದಪ್ಪ ಆಗಿದ್ದೀನಿ ನಾನು. ಅಲ್ಲವೇ?' ಎಂದು ಕೇಳಿದಳು ವಿಮಲಾಳ ಪ್ರಯಾಣ ಬದ್ಧವಾದ ದೇಹವನ್ನು ಈರ್ಷ್ಯೆಯಿಂದ ಕಾಣುತ್ತಾ.

ಅವಳು ಸುಮ್ಮನೆ ನಕ್ಕಳು.

ಅಲ್ಲಿಂದ ಮೂರು ಗೆಳತಿ ಚಂಪಾಳ ಜೀವನದ ಬಗ್ಗೆ ತಿರುಗಿತು.

ಅನಂತರ ವಿಮಲಾಳ ಜೀವನದ ಕುರಿತೂ ಮೂರು ಪ್ರಸಂಗವಾಯಿತು.

"ಇಡೀ ದಿನ ಆಕಾಶದಲ್ಲಿಯೇ ಕಳೆಯುತ್ತೀನೆ. ಈಗ ಬೊಂಬಾಯಿಯಲ್ಲಿದ್ದರೆ ಮರುಗಳಿಗೆಯಲ್ಲಿ ಮದ್ರಾಸು ಅಲ್ಲಿಂದ ಕಲ್ಕತ್ತಾ. ಹೀಗೇ ಒಂದೆಡೆ ಊಟ, ನಾಕೈಂದೆಡೆ ತಿಂಡಿ.' ಅವಳು ಹೇಳುತ್ತಿದ್ದಂತೆಯೇ ಸುಮತಿಯ ಮನ ಅಸೆಯಿಂದ ಬಾಯ್ಬಿಟ್ಟಿತು.

'ಎಂತಹ ಜೀವನವೆನ್ನುತ್ತಿ ಸುಮೀ? ದಿವಸಗಳೆಲ್ಲ ಕ್ಷಣಗಳಂತೆ ಕಳೆಯುತ್ತವೆ. ನಮ್ಮ ಗಗನ ಸಖಿಯರಂತೂ ತುಂಬಾ ಸರಸಿಗಳು. ಒಬ್ಬರಿಗಿಂತ ಒಬ್ಬರು ಸುಂದರಿಗಳು, ಫ್ಯಾಷ್ಟಿ, ಸ್ಟೈಲ್ ಯಾವ ಸ್ಪರ್ಧೆಯೂ ಉಂಟು.'—ಹೀಗೆಂದು ಅವಳು ತನ್ನ ವೈಮಾನಿಕ ಜೀವನವನ್ನು ವರ್ಣಿಸಿದಾಗ ಇವಳ ಮನ ತನ್ನ ಜೀವನವನ್ನು ನೆನೆದು ರೋಸಿ ಹೋಯಿತು.

ವಿಮಲಾಳೊಡನೆ ಹರಟುತ್ತಾ ಸಮಯ ಕಳೆದುದೇ ತಿಳಿಯಲಿಲ್ಲ. ಸುಮತಿ ಹೊತ್ತಾಯಿತೆಂದು ಹೊರಡುವಾಗ ವಿಮಲಳನ್ನು ತನ್ನ ಮನೆಗೆ ಊಟಕ್ಕೆಂದು ಆಮಂತ್ರಿಸಿದಳು.

"ಹ್ಞುಂ! ನಾಳೆ ಭಾನುವಾರ ಮತ್ತೆ ಸೋಮವಾರ ನನಗೆ ಬಿಡುವಿಲ್ಲ. ಬುಧವಾರವೇ ಮುಂಬಾಯಿಗೆ ನಾನು ವಾಪಾಸು ಹೊರಡಬೇಕು. ಮಂಗಳವಾರ ಬಂದರೆ ಆದೀತಲ್ಲವೋ?"

"ನಿನಗೆ ಯಾವ ವಾರವಾದರೇನು? ಎಲ್ಲಾ ವಾರವೂ ಒಂದೇ. ತಪ್ಪದೇ ಬಾ, ಕಾಯುತ್ತಿರುತ್ತೇನೆ" ಎಂದು ಅವಳಿಂದ ಬೀಳ್ಕೊಟ್ಟಳು.

ಮನೆಗೆ ಹೋಗುವಷ್ಟರಲ್ಲಿ ಸುಮತಿಯ ಮನ ಗುದ್ದುಡಿತ್ತು.

"ಛೇ! ತನ್ನ ದೆಂತಹ ಜೀವನ! ದಿನವಿಡೀ ಒಂದೇ ರೀತಿಯ ದುಡಿತ. ದಿನವೂ ಸುಖಸಂತೋಷವಿಲ್ಲದ ಜೀವನ ವಿಮಲಳದ .. ತಾನು ತಪ್ಪು ಮಾಡಿದೆ. ಮದುವೆ ಆಗಲೇ ಬಾರದಾಗಿತ್ತು. ಅವಳಂತೆಯೇ ಯಾವುದಾದರೊಂದು ಕೆಲಸಕ್ಕೆ ಸೇರಬಹುದಾಗಿತ್ತು. ಆಗ ತಾನು ಬೇಕಾದಂತೆ ಉಡಬಹುದಿತ್ತು; ತೊಡಬಹುದಿತ್ತು. ದಿನವೂ ಒಂದಿಷ್ಟು ಶಾಂತಿಯನ್ನು ಮನಸ್ಸಿಗೆ ಕೊಡಬಹುದಿತ್ತು.' ಪಂಪಯಂಯಾಗಿ ಚಿಂತಿಸಿತು ಅವಳ ಮನ.

ಭಾನುವಾರ ಮತ್ತು ಸೋಮವಾರ ಅವಳಿಗೆ ಬಿಡುವಿಲ್ಲದ ಕೆಲಸ, ಮನೆಯನ್ನು ಎಷ್ಟು ಬಾರಿ ಓರಣ ಮಾಡಿದರೂ ಸಾಲದು.

ಇವಳ ಸಡಗರ ಮತ್ತು ಸಿದ್ಧತೆಗಳನ್ನು ನೋಡಿ ಶ್ರೀಧರ "ನಿನ್ನ ವಿಮಲಾಳೇನು ಮಹಾರಾಣಿಯೇ? ಎಂದು ಹಂಗಿಸಿದ.

ಸುಮತಿಗೊಂದೇ ಆಶ್ಚರ್ಯ. ತಾನೆಷ್ಟು ಬಾರಿ ವಿಮಲಾಳ ವೈಮಾನಿಕ ಜೀವ

(ಪಸ್ಕೊಂದನೆ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನವೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪ್ರಾಧೀಯರಿಗೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶ್ವಮಾನ್ಯ ಹೊಟೆಲ್.

ಫೋನ್ 226

ನವಯುಗ

ಸಂಪುಟ ೪೭ | ಉಡುಪಿ | Vol. 47
ಸಂಚಿಕೆ ೧೩ | ೩೦—೧೧—೧೯೬೭ | No. 13

ರಾಜ್ಯಕೀಯ ಹಗರಣ

ಹರ್ಯಾನಾದಲ್ಲಿ ಪಕ್ಷ ತ್ಯಾಗದ ನಾಟಕ ವು ಹೆಸರು ವೇಶದ ಮಟ್ಟವನ್ನೂ ನಿಂರಿ ದ್ದರಿಂದ, ಡೊಂಬರ ಸರಿಗೆಯ ಮೇಲೆ ಕುಣಿಯುತಿದ್ದ ಸರಕಾರವನ್ನು ಕೆಳ್ತು ಹಾಕಿ, ವಿಧಾನ ಸಭೆಯನ್ನು ವಿಸರ್ಜಿಸಿ ಅಲ್ಲಿ ರಾಷ್ಟ್ರಪತಿ ಆಳಿಕೆಯನ್ನು ಘೋಷಿ ಸುವುದು ಅನಿವಾರ್ಯವೇ ಆಯಿತು. ಸದ್ಯ ಕೆಲವು ಕಾಲ ರಾಷ್ಟ್ರಪತಿ ಆಳಿಕೆಯನ್ನು ಇರಿಸಿ, ವಾತಾವರಣ ತಿಳಿಗೊಂಡೊಡನೆ ಯೇ ಮಧ್ಯಾವಧಿ ಚುನಾವಣೆಗಳನ್ನು ಏರ್ಪಡಿಸುವ ಇರಾದೆ. ಹರ್ಯಾನಾದ ಪ ಕ್ಷಾಂತರ ರೋಗಕ್ಕೆ ಇದಕ್ಕಿಂತ ಉತ್ತಮ ಇಂಜೆಕ್ಷನ್ನು ಯಾವ ರಾಜಕೀಯ ಡಾಕ್ಟ ರರೂ ನೀಡಲಾರರು.

ದಶಂಬರ ೧೫ಕ್ಕೆ ಮೊದಲು ವಿಧಾನ ಸಭೆಯನ್ನು ಕರಯಲಾರೆನೆಂದು ಪಟ್ಟು ಹಿಡಿದ ಅಜಯ ಮುಖರ್ಜಿಯವರ (ಅಲ್ಪ ಮತೀಯ) ಸಚಿವ ಸಂಪುಟವನ್ನು ವಜಾಮಾಡಿ ಇತಿಹಾಸದಲ್ಲೊಂದು ದಾ ಖಲೆ ಸ್ಥಾಪಿಸಿದ ಕೀರ್ತಿ ಅಲ್ಲಿನ ರಾಜ್ಯ ಪಾಲ ಧರ್ಮವೀರರದ್ದು. ಪದಚ್ಯುತ ಸಂ ಯುಕ್ತ ರಂಗವು ಹಂತಾಳವಾಚರಿಸಿ ತು, ಪ್ರದರ್ಶನ ನಡೆಸಿತು, ಶಂತಿ ಸುವ್ಯವಸ್ಥೆಗಳನ್ನು ಕಡಿಸಿತು. ಆದರೆ, ಅದು ಅಧಿಕಾರದಲ್ಲಿದ್ದಾಗಲೂ ಮೂಡು ತ್ತಿದ್ದದ್ದು ಇದನ್ನೇ. ಇಂದು ಅಧಿಕಾರ ವಿ ರಹಿತವಾದುದರಿಂದ ಪೆಟ್ಟು, ಗುಂಡಿನೇ ಟು, ಜೇಲು ಕಾಣುವುದು ಅನಿವಾರ್ಯವಾ ಯಿತು. ಡಾ| ಪಿ ಸಿ. ಘೋಷರು ಬಂಗಾ ಳದ ಮುಳ್ಳಿನ ಕಿರೀಟ ಹೊತ್ತು ಮುಖ್ಯ ಮಂತ್ರಿಯಾದರು. ಇಪ್ಪತ್ತಲ್ಲೇ ಲವರು ವಿಧಾನ ಸಭೆಯಲ್ಲಿ ವಿಶ್ವಾ ಮತ ಪಡೆದಿ ರದಿದ್ದರೆ, ಇಲ್ಲಿಯೂ ರಾಷ್ಟ್ರಪತಿ ಆಳಿಕೆ ಅನಿವಾರ್ಯವೇ. ಒಂದು ವೇಳೆ ಡಾ| ಘೋಷರು ಬಹುಮತ ಪಡೆದಲ್ಲಿ ಸಂಯುಕ್ತ ರಂಗದ ಹಿಂಸಾವೃತ್ತಿ ಇನ್ನೂ ಹೆಚ್ಚಬ ಹುದು. ಕಲಬೆರಕೆಯಾದ ಶಾಂತಿ—ಸುವ್ಯವಸ್ಥೆಗಳನ್ನು ಸಂಪೂರ್ಣ ರಕ್ಷಿಸಿ ಪ್ರಜಾಸತ್ತೆಯನ್ನುಳಿಸುವ ಹೊಸ ಹೊರ ಲು ಬಂಗಾಳಿಗಳು ಮುಂದು ಬರಬೇಕು; ದೇಶ ದ್ರೋಹಿ ಚಟುವಟಿಕೆಗಳನ್ನು ಹತ್ತಿ ಕ್ಕಬೇಕು.

ಲೋಕ ಸಭೆಯು ಅಧಿವೇಶನಾರಂಭದ ಲ್ಲಿ ಇಂದಿರಾ ಗಾಂಧಿ ಸಂಪುಟದ ಮೇಲೆ ಅವಿಶ್ವಾಸ ನಿರ್ಣಯವಿಲ್ಲವೆಂಬ ವದಂತಿ ಹಂಡಿತ್ತು. ಆದರೆ, ಹರ್ಯಾನಾದಲ್ಲಿ ರಾ ಜ್ಯಪಾಲರ ಕ್ರಮ, ಪಶ್ಚಿಮ ಬಂಗಾಳದ ಮುಖರ್ಜಿ ಸಂಪುಟದ ದುರಂತಗಳಿಂದ ರಕ್ತ ಬಸಿಯೆಂರಿದ ನುಧುಲಿಮಯೆ ಅವಿ ಶ್ವಾಸ ಗೊತ್ತುವಳಿಯನ್ನು ಅನಿರೀಕ್ಷಿತ ವಾಗಿ ಮಂಡಿಸಿದರು. ಕೇಂದ್ರ ಸರಕಾ ರದ ಕರ್ತವ್ಯ ಚ್ಯುತಿಗಳ ಉಲ್ಲೇಖ ಕ್ಕೆ ಏನೇನೂ ಪ್ರಾಧಾನ್ಯವಿಲ್ಲದೆ, ಕಾಂಗ್ರೆ ಸ್ಸೇತರ ಸರಕಾರಗಳನ್ನು ಉರುಳಿಸಿದ್ದೇ ಕೇಂದ್ರ ಸರಕಾರವೆಂಬ ಆಪಾದನೆಯ ಮೇಲೆ ಈ ಗೊತ್ತುವಳಿ ಬಂದಿತು. ಬಂಗಾ ಳದಲ್ಲಿ ರಾಜ್ಯಪಾಲರು ಕೈಕೊಂಡ ಕ್ರಮ ವನ್ನು ವಿರೋಧಿಸಿ ಪಕ್ಷಗಳೆಲ್ಲವೂ ವಿರೋ ಧಿಸಲಿಲ್ಲ; ಸ್ವತಂತ್ರವೇ ಮೊದಲಾದ ಕೆಲ ವು ಸಮರ್ಥಿಸಿದುವು. ನೀರಸವೂ ಕ್ಲೋ ಧಪೂರ್ಣವೂ ಆದ ಚರ್ಚೆಯ ಬಳಿಕ ವಿ ಶ್ವಾಸ ಗೊತ್ತುವಳಿ ತಿರಸ್ಕೃತವಾದುದ ರಲ್ಲಿ ಆಶ್ಚರ್ಯವಿಲ್ಲ.

ಇದೇ ಹೊತ್ತಿನಲ್ಲಿ ಪಂಜಾಬಿನ ಮುಖ್ಯ ಮಂತ್ರಿಯವರೂ ರಾಜನಾಮೆಯಿತ್ತರು—ಕಾರಣ ಹಲವರು ಬೆಂಬಲಿಗರ ಪಕ್ಷಾಂತ ರ. ಅಲ್ಲಿಗೆ ಥ್ರೀಲ್ ಸರಕಾರ ರಚಿಸಿದ್ದಾ ರೆ, ಕಾಂಗ್ರೆಸ್ಸು ತನ್ನ ಬೆಂಬಲದ ಧರವನ್ನೆ ನೀಡಿದೆ. ಉಳ್ತರ ಪ್ರದೇಶದಲ್ಲಿ ಇಬ್ಬರು ಕ ಮ್ಯುನಿಸ್ಟ್ ಸಚಿವರು ರಾಜೀನಾಮೆ ನೀಡಿ ದ್ದಾರೆ. ಹಾಗಾಗಿ ಇಲ್ಲಿನ ಮತ್ತು ಬಿಹಾ ರದ ಕತೆಯೇನಾದೀತೆಂದು ಹೇಳುವಂತಿ ಲ್ಲ. ಮಧ್ಯ ಪ್ರದೇಶ ಸಂಪುಟ ಸದ್ಯಕ್ಕೇ ವಿದ್ದರೂ ಅದು ಯಾವಕಾಲಕ್ಕೂ ಅ ಪಾಯಿಗೊಳ್ಳಬಹುದು. ಕೇರಳದ ಮುಖ್ಯ ಮಂತ್ರಿ ನಂಬೂದರಿಪಾದರೂ ಅವರ ಸಂ ಪುಟದ ಸದಸ್ಯರೂ ರಾಜ್ಯದಲ್ಲಿ ಶಾಂತಿ—ವ್ಯವಸ್ಥೆಗಳನ್ನು ಪಾಲಿಸುವುದಕ್ಕಿಂತ ತಂತ ಮ್ಮ ಪಕ್ಷೀಯ ಹಿತ ದೃಷ್ಟಿಯಿಂದಲೇ ಇ ದ್ದಾರೆ. ರಾಜ್ಯಪಾಲ ವಿಶ್ವನಾಥರ ಕಾರಿಗೆ ಕಲ್ಲಿನೇಟು ಬಿದ್ದ ಸುದ್ದಿಯಿಂದ ಇದು ಮ ತ್ತಷ್ಟು ದೃಢವಾಗುತ್ತದೆ. ಕಮ್ಯುನಿಸ್ಟರು ವಿದೇಶನಿಷ್ಠರಾಗಿದ್ದು, ದೇಶದಲ್ಲಿ ಅಶಾಂ ತಿ ಹರಡಿಸುವುದನ್ನೇ ತಮ್ಮ ಧ್ಯೇಯವಾ ಗಿಟ್ಟುಕೊಂಡಿದ್ದಾರೆ, ಇದನ್ನು ಯಾವ ಸ್ವದೇಶೀ ಸರಕಾರವೂ ಸಹಿಸಲಾರದು. ನಂಬೂದರಿಯವರು ತುಂಬ ಮುಂದುವರಿದಿದ್ದಾರೆ; ನ್ಯಾಯಾಂದದ ಪರಮೋಚ್ಚ ಅಧಿಕಾರವನ್ನೇ ಅವರು ಪ್ರಶ್ನಿಸಿದ್ದಾರೆ. ಚುನಾಯಿತ ರಾಜ್ಯಪಾಲರಿರಬೇಕೆಂದು ಅ ಭಿಪ್ರಾಯ ಪಡುತ್ತಾರೆ ಆದರೆ, ಇದರಿಂ ದ ರಾಜ್ಯದಲ್ಲಿ ನೈಮ್ಮದಿಯುಂಟಾದುದು ಬಹುಮತೀಯ ಪಕ್ಷದ ಕೈಗೊಂಬೆ ಯಾಗಿ ರಾಜ್ಯಪಾಲರು ಉಳಿಯ ಬೇಕಾಗಬಹುದು, ರಾಜ್ಯದಲ್ಲಿ ಕ್ರಾಂತಿಯೆ ಬ್ಬಿಸಲು ಕಮ್ಯುನಿಸ್ಟರಿಗೆ ಇದರಿಂದ ಅನು ಕೂಲವೆನಿಸಬಹುದಷ್ಟೆ.

ಹೀಗೆ, ಕಳೆದೊಂದು ವಾರದಲ್ಲಿ ನಡೆದ ಷ್ಟು ರಾಜ್ಯಕೀಯ ಸ್ಥಿತ್ಯಂತರಗಳು ಭಾರ ತದಲ್ಲಿ ಇದು ವರೆಗೆಂದೂ ನಡೆದಿರಲಾರ ದು. ಕಾಂಗ್ರೆಸ್ಸೇತರ ಪಕ್ಷಗಳು ಕೇಂದ್ರ ವು ಕಾಂಗ್ರೆಸ್ಸೇತರ ಸರಕಾರಗಳು ರಾಜ್ಯ ಗಳಲ್ಲಿರುವುದನ್ನು ಸಹಿಸುವುದಿಲ್ಲ. ರಾಜ್ಯ ಪಾಲರನ್ನು ತನ್ನ ಕೈಗೊಂಬೆಯಾಗಿ ನಡೆ ಸುತ್ತಿದೆ—ಎಂದು ಮುಂತಾಗಿ ಆರೋಪ ಹೊರಿಸಿದರೂ ಇವೆಲ್ಲವೂ ಶುದ್ಧ ಸಳ್ಳದ ವೆಂದು ಬೇರೆ ಹೇಳ ಬೇಕಾಗಿಲ್ಲ. ಎಳೆಯ ಲಾರದ ಎತ್ತು ಮಿಣಿಯ ಮೇಲೆ ಬೀಳು ವಂತೆ ಆಡಳಿತೆಯನ್ನು ಸಮರ್ಪಕವಾಗಿ, ತಮ್ಮ ಛಿನ್ನ ಮತದಿಂದಾಗಿ, ನಡೆಸಲಾಗ ದ ಸಂಯುಕ್ತ ರಂಗಗಳು ಕೇಂದ್ರವನ್ನು ಪ್ರತಿಯೊಂದಕ್ಕೂ ಬೊಟ್ಟು ಮಾಡುವುದು ಅವುಗಳ ನಿಷ್ಕ್ರಿಯತೆ ಮಾತ್ರ. ಕೇಂದ್ರ ವು ಎಲ್ಲ ರಾಜ್ಯಗಳನ್ನೂ ಸಮದೃಷ್ಟಿಯಿಂ ದಲೇ ನೋಡುತ್ತದೆ; ತನ್ನ ಆಸಹಾಯಕ ತೆಯನ್ನು ಕೇಂದ್ರದ ತಲೆಯಮೇಲೆ ಹೊ ರಿಸುವುದು ಯಾವ ರಾಜ ಸರಕಾರಕ್ಕೂ ಭೂಷಣವಲ್ಲ. ಇಂದಿನ ರಾಜ್ಯಕೀಯದಿಂ ಧಾರತೀ ಸುರು ಪಾರಕಲಿಯಬೇಕುಯೊ-ವುದಾದರೂ ಒಂದೇ ಪಕ್ಷದ ಸರಕಾರ ವೂ ತ್ಯ ಆಡಳಿತೆಯನ್ನು, ಛಿದ್ರವಿಛಿಯಿಂದ ತಡೆಯಬಹುದು. ಸಂಯುಕ್ತರಂದ ಸರಕಾ ರಗಳೆಂಬರೆ, ಮಿಣಸನ್ನೂ ಮುತ್ತನ್ನೂ ಒ ಟ್ಟಿಗೆ ನೇಯ್ದಂತೆ. ಇಂತಹ ಹುಚ್ಚುತನ ಮುಂದೆಂದೂ ತೋರಿಸ ಬಾರದು.



ಮುಖಪತ್ರದಲ್ಲಿ

ಶ್ರೀ ಕ್ಷೇತ್ರ ಧರ್ಮಸ್ಥಳದ ಸರ್ವತೋಮುಖ
ಅಭಿವೃದ್ಧಿ—ಸಮೃದ್ಧಿಗಳಿಗಾಗಿ
ಸದಾ ದುಡಿಯುತ್ತಿರುವ ಧರ್ಮದರ್ಶಿ
ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು

ವಚನ ಸುಧೆ

ನ ದೇವಾ ದಂಡ ಮಾದಾಯ
ರಕ್ಷಂತಿ ಪಶುಪಾಲವತ್।
ಯಂತು ರಕ್ಷಿಸು ಮಿಚ್ಛಂತಿ
ಬುದ್ಧ್ಯಾ ಸಂವಿಭಜಂತಿ ತೇ॥

ದೇವತೆಗಳು ದನಗಾಹಿಗಳಂತೆ ಕೈಯಲ್ಲಿ ದೊಣ್ಣೆ ಹಿಡಿದು ಕಾಯುವುದಿಲ್ಲ. ಕಾವ ರಕ್ಷಣೆಬಯಸುವವನಿಗೆ ಉತ್ತಮ ಬುದ್ಧಿ ಯನ್ನು ಅವರು ನೀಡುತ್ತಾರೆ.

ಮಂಗಳದಲ್ಲಿ ಅಮಂಗಳ

ತಾನು ಆಕ್ರಮಿಸಿಕೊಂಡ ಭಾರತೀಯ ರಾಷ್ಟ್ರ ಜಮ್ಮು ಮತ್ತು ಕಾಶ್ಮೀರದ ಪ್ರದೇ ಶದಲ್ಲಿ ಪಾಕಿಸ್ತಾನವು ಮಂಗಳ ಆಕಾಶ ನ್ನು ಕಟ್ಟತೊಡಗಿತು. ಉದ್ಘಾಟನೆಗೆ ಭಾರತೀಯ ಮಂತ್ರಿ ಡಾ| ಕೆ. ಎಲ್. ರಾಯರನ್ನೇ ಆಹ್ವಾನಿಸಿತು; ಅವರು ನಿರಾಕರಿಸಿದ ಮೇಲೆ (!) ಸ್ವತಃ ಅಧ್ಯಕ್ಷ ಅಯೂಬ ಖಾನರೇ ಉದ್ಘಾಟಿಸಿದರು. ಮಂಗಳ ಆಕಾ ಶವನ್ನು ಕಟ್ಟುವ ಯೋಜನೆಯನ್ನೇ ಭಾರ ತ ಸರಕಾರ ಪ್ರತಿಭಟಿಸಿತ್ತು. ಆದರೆ, ಇಂದಿನ ಸ್ಪರ್ಧಾಯುಗವು ಆಕಾಶವನ್ನು ಸೂರ್ಯನಾದ ಆಗ್ಗೆ ಶಾಥಾಶಯಗಳನ್ನು

(ಪದಿನಾಲ್ಕನೇ ಪುಟ ನೋಡಿ)

ಗೇಹ ರಾಜ್ಯದಲ್ಲಿ

ಬೋನಿನೊಳಗಿನ ಹುಲಿಗರ್ಜನೆ

"ಹಾಂದ್ರಿ, ನೋಡಿದ್ರಾ?"

"ಹೌದು....'

"ಏನನ್ನ?"

"ಬೇಟೆಗಾರನ ಬಾಣದಿಂದ ತಪ್ಪಿಸಿ ಓಡಿ ಹೋಗುವ ಜಿಂಕೆಯ ಬೆಕ್ಕಸ ಬೆರಗಾದ ಮುಖವನ್ನ....'

'ಎಲ್ಲಿದೇರಿ ಜಿಂಕೆ?'

'ಇದ್ದೇ ಇದೆಯಲ್ಲಾ, ನನ್ನೆ ಕಣ್ಮುಂದೆ!'

'ಅಂದ್ರೆ?"

'ಅಂದ್ರೆ, ಎಂದ್ರೆ..... ಬಾರೀ ತೊಂದ್ರೆ...'

"ಅಯ್ಯೋ, ನೀವೊಂದು, ನಿಮ್ಮದೊಂದು...."

"ಹ್ಞೂಂ... ನೀನೊಂದು, ನಿನ್ನದೊಂದು..."

'ನೋಡೀಂದ್ರೆ.... ನಮ್ಮ ಇಂದಿರಾ ಗಾಂಧಿ ಹೇಗೆ?"

"ಹೇಗೆ ಅಂದ್ರೆ? ಇದ್ದ ಹಾಗೇ ಇದ್ದಾರೆನ್ನ."

"ಹಾದೇ, ನೋಡಿ, ಬಂಗಾಳದ ಹುಲಿಗಳನ್ನು ಹೇಗೆ ಬೋನಿನಲ್ಲಿ ಹಾಕಿ ಭದ್ರ?'

"ಓಹೋ, ನೀನನ್ನುವುದು ಅಜಯ್ ಮುಖರ್ಜಿಯವರ ಮಂತ್ರಿ ಮಂಡಳವನ್ನು ಬರ್ಖಾಸ್ತುಗೊಳಿಸಿದ ಸುದ್ದಿ ಬಗ್ಗೆ ..."

"ಹೌದು..."

"ಅದ್ರೆ, ನೋಡು, ಇದ್ರಲ್ಲಿ ಇಂದಿರಾ ಗಾಂಧಿಯೇನು ಮಾಡಿದ್ರು? ರಾಜ್ಯಪಾಲ ಧರ್ಮವೀರರು ಅಧರ್ಮದ ದಾರಿ ತುಳಿಯುತ್ತಿದ್ದ ಅಜಯ ಸಂಪುಟವನ್ನು ವಿಸರ್ಜಿಸಿದರು, ಧರ್ಮ ಸಂಸ್ಥಾಪನೆಯ ಮೊದಲ ಮೆಟ್ಟಿಲೇರಿದರು...."

'ಊಹೂಹ್ಞೂಂ, ಯಾಗಲ್ಲ. ಇದಕ್ಕೆ ಇಂದಿರಾ ಗಾಂಧಿ ಒಪ್ಪದೆ ಇದ್ದಿದ್ದರೆ?'

"ಒಳ್ಳೇ, ಇದಕ್ಕು ಇಂದಿರಾ ಗಾಂಧಿಗೂ ಏನು ಸಂಬಂಧ?"

"ಆಕೆ ಪ್ರಧಾನಿಯಲ್ವೆ?"

'ಹೌದಾ...."

"ಅಂದ ಮೇಲೆ...."

"ಮೇಲೂ ಇಲ್ಲ, ಕೆಳಗೂ ಇಲ್ಲ. ರಾಜ್ಯಪಾಲರು ಕೇಂದ್ರ ಸರಕಾರದಿಂದ ಮಾರ್ಗದರ್ಶನ ಪಡೆಯಬೇಕಾಗಿಲ್ಲ. ಸಂವಿಧಾನವು ರಾಜ್ಯಪಾಲರಿಗೂ ಕೆಲವೊಂದು ಅಧಿಕಾರಗಳನ್ನು ನೀಡಿದೆ. ವಿವೇಚನೆಯಿಂದ ಅವನ್ನು ಉಪಯೋಗಿಸಿಕೊಂಡರು ಧರ್ಮವೀರರು.'

'ಈ ವಿವೇಚನೆಯ ಪರಿಣಾಮ ಪ್ರಧಾನಿಯ ಮನಸ್ಸಿಗೆ ವಿರೋಧವಾದರೆ...'

"ಏನು ಮಾಡುವುದಕ್ಕಾಗುತ್ತೆ? ರಾಜ್ಯಪಾಲರು ಸೂಕ್ಷ್ಮ ವಿವೇಚನೆ ಮಾಡಿಯೇ ಕ್ರಮ ಕೈಗೊಳ್ಳುತ್ತಾರೆ.'

"ಅಂದರೆ, ಇದರಲ್ಲಿ ಇಂದಿರಾ ಗಾಂಧಿಯ ಹಾತ್ರವೇನೂ ಇಲ್ಲವೆನ್ನಿ...."

"ಕಂಡಿಷಕ್ಕೂ. ಅಲ್ಲ, ನೀನು ಕೆಲವು ಬಿಜ್ಯಕೇಯ ನಾಯಕರಂತೆ. ಮಾತಾಡುತ್ತಿಯಲ್ಲ?"

"ಏಕೆ?"

"ಕಾಂಗ್ರೆಸ್ಸೇತರ ಸರಕಾರಗಳನ್ನು ಉರುಳಿಸಲು ಕೇಂದ್ರವು ರಾಜ್ಯಪಾಲರನ್ನು ತನ್ನ ಗೊಂಬೆಯಾಗಿ ಉಪಯೋಗಿಸುತ್ತಿದೆ ಎಂದು ಅವರು ಆನ್ಸುತ್ತಿತ್ತಾರೆ, ನೀನಾದ್ರೂ ಬಂಗಾಳದ ಹುಲಿಗಳನ್ನು ಬೋನಿನಲ್ಲಿಟ್ಟದ್ದು ಇಂದಿರಾ ಗಾಂಧಿಯೇ ಅನ್ನುತ್ತಿ....'

"ಅದೆಲ್ಲ ನಾನು ಒಪ್ಪೋದಿಲ್ಲ. ನೋಡಿ, ಹರ್ಯಾಣಾದಲ್ಲಿ ರಾಜ್ಯಪಾಲರು ರಾಷ್ಟ್ರಪತಿ ಆಳಿಕೆಯನ್ನು ಸಿಫಾರಸು ಮಾಡಿದರು ಎನ್ನಿ. ಬಂಗಾಳದಲ್ಲಿ ಮತ್ತೆ ಅಧಿಕಾರಕ್ಕೆ ಬಂದದ್ದು ಕಾಂಗ್ರೆಸ್ಸು ಸರಕಾರವೇ ನಲ್ಲ."

'ಅದ್ರೂ ಘೋಷರಿಗೆ ಕಾಂಗ್ರೆಸ್ಸಿನ ಬೆಂಬಲ ಇದೆ...."

"ಇದ್ರೂ ಕಾಂಗ್ರೆಸ್ ಸಂಪುಟದಲ್ಲಿ ಸೇರುವುದನ್ನು ಇಷ್ಟಪಡುವುದಿಲ್ಲ...'

"ಅದು ಹೌದೂಷ್ಟು..."

"ಮತ್ತೆ ನೋಡಿ, ಪಂಜಾಬದಲ್ಲಿ ಮೂಡಿದ್ದೀನು? ಅಲ್ಲಿ, ತನಗೆ ಬಹುಮತವಿಲ್ಲವೆಂದಾದ ಕೂಡಲೇ ಗುರ್ನಾಮ ಸಿಂಗರು ರಾಜಿನಾಮೆ ಕೊಡಿದರು. ಅವರಿಗೆ ರಾಜಿನಾಮೆ ನೀಡಿಯೆಂದು ಯಾರೂ ಹೇಳಲಿಲ್ಲ."

"ಸರೀನ್ನು, ಅದುದರಿಂದಲೇ ಅವರ ಬಗ್ಗೆ ಆದರ ಭಾವನೆ ಕಡಿಮೆಯಾಗಲಿಲ್ಲ. ಪ್ರಜಾಸತ್ತೆಯಲ್ಲಿ ಬಹುಮತವಿಲ್ಲವೆಂದಾದ ಕೂಡಲೇ ಪದವಿ ಸಂಪುಟ ರಾಜಿನಾಮೆ ನೀಡುವುದು ಸರ್ವ ಸಂಪ್ರದಾಯ."

"ಅದ್ರೆ ನೋಡಿ ಅಜಯ್ ಏನು ಮಾಡಿದರು?"

"ಕಮ್ಯೂ ಕೈಗಳೆರಡನ್ನೂ ಜತೆಗೆ ಬುದ್ಧಿಯನ್ನೂ ಪರರ ಕೈಯಲ್ಲಿ ಕೊಟ್ಟು ತೆಪ್ಪಗೆ ಕುಳಿತಿದ್ದರು. ರಾಜ್ಯಪಾಲರು ಬಹುಬಗೆಯಿಂದ ಕೇಳಿ ಕೊಂಡರೂ, ಅಜಯ್—ಜ್ಯೋತಿ ತಮ್ಮ ಹಿಡಿದ ಹಠವನ್ನು ಬಿಡಲಿಲ್ಲ."

'ಅಲ್ರಿ, ಉತ್ತರ ಪ್ರದೇಶದಲ್ಲಿ ಇಬ್ಬರು ಕಮ್ಯೂನಿಸ್ಟ್ ಮಂತ್ರಿಗಳು ರಾಜಿನಾಮೆ ಯಿತ್ತರಂತೆ. ಬಿಹಾರದಲ್ಲಿ ಸಂಪುಟ ಇನೆ ನುದಿಗೆ ಬಿದ್ದಿದೆಯಂತೆ...."

'ಹ್ಞೂಂ....ಬಂಗಾಳದ ವಿದ್ಯಮಾನಗಳಿಂದ ರೊಚ್ಚಿಗೆದ್ದ ಲಿಮಯೆ ಇಂದಿರಾ ಗಾಂಧಿಯವರ ಸಂಪುಟದ ಮೇಲೆ ಅವಿಶ್ವಾಸ ನಿರ್ಣಯವನ್ನೂ ಮಂಡಿಸಿದರು."

"ಆದರೆ, ಆದು ಬಿದ್ದು ಹೋಯಿತಲ್ಲ?'

"ಹಹ್ಞೂಂನ್ನು...."

"ಅಲ್ರಿ, ಬಂಗಾಳದಲ್ಲಿ ಧಾರಿಗೊಂದಲ, ಪ್ರದರ್ಶನ, ಸಂಘ— ಎಲ್ಲವೂ ಪಡೆಯ ಲಾರಂಭಿಸಿದೆಯಂತೆ, ವಿದ್ವಂಸಕ ಕಾರ್ಯಗಳೂ ಮಿತಿ ವಿಧಿಯಂತೆ..."

'ನಿಜವೇ. ಹಲ್ಲುದುರಿದ ಹುಲಿಗಳು ಗರ್ಜಿಸದೆ ಉಳಿಯುವುದು ಸಾಧ್ಯವಿಲ್ಲ ನೋಡ....'

'ಅಂದ್ರೆ, ಇದೆಲ್ಲ ಬರೀ ಗುಲ್ಲು ಅಂತೀರಾ?'

'ಛೆ, ಅಮ್ಮ ಲಕ್ಷೋವಾಗಿ ತಿಳಿದುಕೊಳ್ಳಬಾರದು. ಅಜಯ್ ಮುಖರ್ಜಿಯವರ ಸಂಪುಟವು ಕಳೆದ ಒಂಬತ್ತು ತಿಂಗಳಲ್ಲಿ ಜನತೆಗೆ ನೀಡಿದ ಉಪದೇಶ ಅಷ್ಟು ಬೇಗನೇ ಮರೆತು ಹೋದರೆ, ಸ್ಯೂಲಿಷ ಪಾಠಕ್ಕೂ ಕಮ್ಯೂನಿಸ್ಟ್ ಪಾಠಕ್ಕೂ ಏನು ವ್ಯತ್ಯಾಸ?"

"ಅದು ಸರೀನ್ನಿ. ಆದರೂ ಆದೆನ್ನು ನನ್ನ! ಕಷ್ಟ! ಪ್ರಾಣಹಾನಿ!'

'ಹೌದು ಕುಲಗೆಟ್ಟ ಧರ್ಮವನ್ನು ಪುನಃ ಸ್ಥಾಪನೆ ಮಾಡುವಲ್ಲಿ ಕ್ರಾಂತಿಯೇ ಆಗುತ್ತದು ವಾಸ್ತವ. ಶಾಂತಿಗೆ ಮೊದಲು ಕ್ರಾಂತಿಯಾಗಲೇ ಬೇಕು....'

'ನಕ್ಸಲ್‌ಬಾರಿ ಮೂದಲಿಯ ಕ್ರಾಂತಿಯೇನು?'

"ಶಾಂತಂ ಪಾಪಂ. ನಮಗೆ ಹಿಂಸಾತ್ಮಕ ಕ್ರಾಂತಿ ಬೇಡ.ಅಹಿಂಸಾತ್ಮಕ ಕ್ರಾಂತಿಯನ್ನೇ ನಾವು ಮೆಚ್ಚುವವರು."

'ಮತ್ತೆ ಕಲ್ಕತ್ತದಲ್ಲಿ...'

"ಹಿಂಸಾಪ್ರಜೋದಕರು — ಹಿಂಸಾಪ್ರಿಯರು ಹಿಂಸಾತ್ಮಕ ಕೃತಿಗಳಲ್ಲಿ ತೊಡಗಿರಾಗ ಅದನ್ನು ಎದುರಿಸದಿರುವುದು ಸಾಧ್ಯವೇನು? ಆದರೆ, ಇವೆಲ್ಲ ಕೆಲವು ದಿನದ ಕೃತ್ಯ....'

'ಅಂದ್ರೆ ಮುಂದೆಲ್ಲ ಸರಿಹೋಗುವ ದೇಶ?"

"ನೋಡು, ಜನೆ ತಾರೀಕಿನಂದು ವಿಧಾನ ಸಭೆಯು ಸೇರುತ್ತದೆ. ಅಂದು ಹೊಸ ಮುಖ್ಯ ಮಂತ್ರಿ ಡಾ। ಘೋಷರು ವಿಶ್ವಾಸ ಮತ ಪಡೆದರೆ ಈ ಕೆಂಪು ಹುಲಿಗಳ ಗರ್ಜನೆಗೆ ಅರ್ಥವಿಲ್ಲವೆಂದು ಮಂದಟ್ಟಾಗುತ್ತದೆ."

"ಅಲ್ರಿ, ಒಂದು ವೇಳೆ ಘೋಷ್ ಬಹುಮತ ಪಡೆಯದಿದ್ದರೆ...."

'ಅಮ್ಮ ಧೈರ್ಯವಿಲ್ಲದೆ ಅವರು ಮುಂದುವರಿದಾರೆ?'

"ಅಲ್ರಿ, ಒಂದು ವೇಳೆ..."

'ಏನು?'

'ಅಜಯ್ ಸಂಪುಟ ಉರುಳಿಲಿದ್ದ ಮುಖ್ಯ ಕಾರಣ ಪಕ್ಷಾಂತರ ತಾನೆ? ಹಾಗೆಯೇ ಘೋಷರ ಬೆಂಬಲಿಗರು ಮತ್ತೆ ಅಜಯ್ ಬಾಲ ಹಿಡಿದು ಹರ್ಯಾಣಾ ನಾಟಕದ ಪುನರಾವೃತ್ತಿ ಮಾಡಿದರೆ!'

"ನೋಡಮ್ಮಾ, ಏನನ್ನೂ ಹೇಳಲಾಗದು. ಪಕ್ಷಾಂತರ ಅವಾಂತರಗಳೇ ಈಯೆಲ್ಲ ಗಂಡಾಂತರಗಳಿಗೆ ಮೂಲ. ಇದು ನಿಲ್ಲದೆ ಪ್ರಜಾಸತ್ತೆಗೆ ನೆಮ್ಮದಿಯಿಲ್ಲ. ಈ ಸಲ್ಲನೆಯ ಸಾರ್ವತ್ರಿಕ ಚುನಾವಣೆಯ ಪರಿಣಾಮ, ಅನಂತರದ ವಿದ್ಯಮಾನಗಳು ನಮಗೆ ನೀಡುವುದು ಇದೇ ಪಾಠವನ್ನು ...'

"ಮತ್ತೆ ಎಂಥದ್ರಿ? ಬಟ್ಟೆ ಬದಲಿಸುವಂತೆ ಪಕ್ಷ ಬದಲಿಸಿದರೆ ಹೇಗೇಂತ ನಮ್ಮ ಇಂದಿನ ಸ್ಥಿತಿಗತಿಗಳನ್ನು ಕಂಡವರಾರೂ ಪಕ್ಷಾಂತರದ ರೋಗ ಇಲ್ಲವೆಂತಿದ್ದರೆ ನಾಕು."

(ಪದಿಮೂರನೇ ಪುಟ ನೋಡಿರಿ)

ಕರ್ನಾಟಕ ಸಂಘ, ಉಡುಪಿ
ಇವರ ಜನಪ್ರಿಯ ಪ್ರಕಟಣೆಗಳು

೧ ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ನಗನ ವಿಹಾರ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಪ್ರಯತ್ನ ಮತ್ತು ಇನ್ನು ಮುಂದೆ ನಡೆಯಲಿರುವ ಸಾಹಸವನ್ನು ವಿವರಿಸುವ ಪುಸ್ತಕ. ಬೆಲೆ ರೂ. ಒಂದು.

೨ ಸಾಮಾನ್ಯ ರೋಗಗಳು
(ಡಾ। ಕೆ. ಎಲ್. ಐತಾಳ, ಎಂ. ಬಿ., ಬಿ. ಎಸ್.)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ. ಬೆಲೆ ರೂ. ಒಂದು.

೩ ಭೌತಿಕ ದರ್ಶನ
(ಬಡೆಕ್ಕಿಲ ಕೃಷ್ಣ ಭಟ್, ಎಲ್. ಎಲ್. ಬಿ., ಭದ್ರಾವತಿ)

ಸರ್ವರೂ ಓದಲೇ ಬೇಕಾದ ಭೌತಿಕದರ್ಶನದ ಸ್ಥೂಲ ಪರಿಚಯ. ಬೆಲೆ ರೂ. ಒಂದು.

ಪ್ರತಿ ಪುಸ್ತಕಕ್ಕೂ ಅಂಚೆ ವೆಚ್ಚ 50 ಪೈಸೆ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ
ಹಾಲುಕೊಟ್ಟೆ, ಉಡುಪಿ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ವಿಚಾರ ಮಂಥನ

ಉಪಕಾರ ಸ್ಮರಣೆ

ಬರೆದವರು — ಶ್ರೀ ಮ. ಗೋ. ರಾವ್

ಬಹು ಆನಾದಿಯಿಂದ ನಾವು ನೂಡಿದ ಕಾರ್ಯಗಳನ್ನು ಸ್ಮರಿಸಿಕೊಳ್ಳಲು ಅತನನ್ನು ಪ್ರಶಂಸಿಸಲು ಕೃತಜ್ಞತೆ ಎಂಬುದು ಹುಟ್ಟಿಕೊಂಡಿತು. ಅಥವಾ 'ತುಂಬಾ ಉಪಕಾರವಾಯಿತು' ಎಂದು ಹೇಳೋದು ರೂಢಿಯಾಗಿಬಿಟ್ಟಿತ್ತದೆ. ಏನಾದ್ರಿಂದು ಕೆಲ್ಸ ಮಾಡಿದ್ರೆ ಅದಕ್ಕೆ ದಿನ-ಗಿ 'ಥ್ಯಾಂಕ್ಯೂ' ಆನ್ನೋದು ಆಂಗ್ಲ ಭಾಷಾಪ್ರಿಯರಿಯಾಗಿದೆ.

ಏನಾದರೂ ಸಮಾರಂಭಗಳಲ್ಲಿ ಟೀ ಪಾರ್ಟಿ ಏರ್ಪಡಿಸಿರುತ್ತೇವೆ. ಒಂದು ಚಳಿಗೆ ಬಂದು ಸಂತೋಷದಿಂದ ಸ್ವೀಕರಿಸಿ ಸಭೆಯನ್ನು ಜೆಂದಗಾಣಿಸಿ ಕೊಡಬೇಕು ಎಂದು ಸಹೋದ್ಯೋಗಿಗಳಲ್ಲೋ, ಸ್ನೇಹಿತರಲ್ಲೋ, ಅಥವಾ ಅಪ್ತ ಬಂಧುಗಳಲ್ಲೋ ಕವಿನಯದಿಂದ ವಿನಂತಿಸಿಕೊಂಡರೆ ನಮಗೆ ಆಗ ಸಿಗುವ ಉತ್ತರ 'ಥ್ಯೇಂಕ್ಯೂ' ಎಂದು. ಸರಿ, ಆ ದಿವ ಬಂದ್ರು, ಉಪಾಹಾರ ಮುಗಿಸಿ 'ಕಾರ್ಯಕಲಾಪ' ನೆರವೇರಿಸಿ ಸ್ವಲ್ಪ ವಾರ್ತಾಲಾಪ ಗೈದು ನಿರ್ಗಮಿಸುವ ಹೊತ್ತಿನಲ್ಲಿ ಮನಃ ವ್ಯವಸ್ಥಾಪಕರಿಗೆ ಅಕ್ಕಪಕ್ಕದಲ್ಲಿದ್ದವರಿಗೆ 'ಥ್ಯೇಂಕ್ಯೂ ಥ್ಯೇಂಕ್ಯೂ' ಎಂದು ಉಚ್ಚಾರ.

ಬೊಂಬಾಯಿವಾಲಾ ಫಜೀತಿ:—

ಹಳೆಯವನೊಬ್ಬ "ಬೊಂಬಾಯಿ ರಿಟರ್ನ್ಡ್ ಜಂಟ್ಲ್‌ಮನ್" ನೊಬ್ಬನ ಟ್ರಂಕು ಹೊರಲು ಬಂದು ತುಂಬ ಗಂಡಾಂತರದ ಸನ್ನಿವೇಶ ಇದಿರಿಸಿದನಂತೆ. ಪೇಟೆಯಲ್ಲಿ ಕೂಲಿಗಾಗಿ ಕಾದುಕಾದು ಯಾರೂ ಸಿಗದೆ ಬೇಸತ್ತ ಬೊಂಬಯಿವಾಸಿ ನಿಂತಿದ್ದೆಡೆಗೆ ಹಳ್ಳಿಯವನು ಹೋದನಂತೆ. ಸರಿ ಪಿಟಾರಿ (ಬೇಗ್ ಬೆಡ್ಡಿಂಗು) ತಲೆಗೇರಿಸಿ ಅವನ ಮನೆಗೆ ತಲುಪಿಸಿದನಂತೆ. ಮನೆಯ ಗೇಟಿನ ಹತ್ತಿರ ಪಿಟಾರಿ ಕೆಳಗಿಳಿಸಿದಾಗ ಆ ಬೊಂಬಯಿವಾಲಾ ತಾನು ನಿತ್ಯವೂ ಉಪಯೋಗಿಸುತ್ತಿದ್ದ ಅಗ್ಗದ ಶಬ್ದ 'ಥ್ಯೇಂಕ್ಯೂ' ಎಂದು ಶೀಟಿಯಿಂದ ಎರಡು ಮೂರು ಬಾರಿ ಹೇಳಿದನಂತೆ. ಭಾರವನ್ನು ತಲೆಯಿಳ್ಳಿಟ್ಟುದರ ಪರಿಣಾಮವಾಗಿ ತಲ ಬಿಸಿ ಎಂದ ಆ ಹಳ್ಳಿಯವನ್ದು ಈತನ ಆಂಗ್ಲ ವೈಖರಿಯನ್ನು ಅರಿಯದೆ ಸಿಟ್ಟಿನಿಂದ ಕದಿಯುತ್ತಾ "ನಾನಲ್ಲಿವರೆಗೆ ತಂವ್ವಿಯ ಬೇರೆ. ಅದಂ ಮೇಲೆ ಬೈಗಳು ಬೇರೆ ಕೇಳಬೇಕು. ಇದು ನ್ಯಾಯವನ್? ನೀವಿದೀ ಕಲಿತದ್ದೋ ಎಂದು ಗದರಿಸಿದನಂತೆ! ನಾವು ಆತನಿಗೆ ಸತ್ತು ಬದುಕಿದಂತೆ ಆಯಿತಂತೆ. "ನಾನು ಉಪಕಾರವಾಯಿತು, ಅಜ್ಜ" ಎಂದು ಹೇಳಬೇಕೆನ್ನ. ಎಂದು ಅತಪಗ ಹೊಳೆದಿಂದೇಳ್ದು. ಇದು ಅಂತೆ ಸಂತೆಗಳ ಕಂತೆ ಕಂತೆಗಳು. ಆದರೂ ಭಾಷೆಯನ್ನು ಎಲ್ಲೆಲ್ಲಿ ಪ್ರಯೋಗಿಸಬೇಕು ಅಲ್ಲಲ್ಲೇ ಆ ಯಾಯ ಸಂದರ್ಭದಲ್ಲೇ ಉಪಯೋಗಿಸುವುದು ಒಳ್ಳೆಯದಲ್ಲವೇ?

ಹೋಟೆಲುಗಳಲ್ಲಿ ಅಂಗಡಿಗಳಲ್ಲಿ ಎಲ್ಲಿ ಎಲ್ಲಾ ಕಡೆಯಲ್ಲಿಯೂ ಈಗೀಗ "Thank you" ಫಲಕ ತೂಗಾಡಿಸಿದ್ದಾರೆ. ಅಂದ್ರೆ ಅತ್ಯಾಧುನಿಕ ವಿಧಾನದ ನ್ಯಯ ಇದು ಅವಶ್ಯ ಬೇಕಂತೆ.

ಬಾದುಷ್ಟೆ ಹೇಳಿ ಹೇಳಿ ಪೂರೈಸಲಿಕ್ಕಿಲ್ಲ ಎಂದು ಅವರು ಮನಗಂಡಿರಬೇಕು. ಆದಕ್ಕಾಗಿ ಈ ರೀತಿಯ ಬೋರ್ಡು ತಗಲಿಸಿಬಿಟ್ಟರೆ ಓದುವವರು ಓದಿಕೊಳ್ಳಲಿ ಅಂತ ಅವರ ಅಂದಾಜು ಆಗಿರಬೇಕು. ಉದ್ದೇಶವೇನೋ ಒಳ್ಳೆಯದೇ.... ಆದರೆ ಈ ಆಂದಾಜೇ ಗಿರಾಕಿ ಮಹಾಶಯನ ತಲೆ ಮೇಲೆ ಟೊಪ್ಪಿ ಇಟ್ರೆ!! ಅಥವಾ ಅವನ ಜೇಬು ಖಾಲಿ ಮಾಡಿಸಿದ್ರೆ!!! ಇತ್ತೀಚೆಗೆ ನಡೆದ ಒಂದು ಚಿಕ್ಕ ಘಟನೆ.

ತಂಪು ಪಾನೀಯ ಮಂದಿಗಾಡಿಗೆ ಹೋದೆ ಏನೇನನ್ನೋ ಕುಡಿದು[ಅವರು ಹೇಳಿದ್ದೇ ಹೆಸರು]ಕೊಟ್ಟ ಚೀಟು ಸು ಜೊತೆಗೆ ಬರೇ ರೂ. 1.50ನ್ನು ಕ್ಯಾಶಿಯರನಿಗಿತ್ತು. ಆವ ನಿಶ್ಚ ವಿನಮ್ರ ಪೂರ್ವಕವಾದ "ಥ್ಯೇಂಕ್ಸ್" ನ್ನು ತಲೆಯೆಣಿಸಿ ಮೆತ್ತಿಸಿಕೊಂಡು ಹೊರಗೆ ಬಂದೆ. ಹೊಟ್ಟೆಯ ಒಳಗೆ ಸ್ವಲ್ಪ ತಂಪು 'ಥಂಡಾ'ವಾದರೂ ಪರ್ಸ್ ಖಾಲಿಯಾಡಿದ್ದನ್ನು ಕಂಡು ತಲೆ ಬಿಸಿಯಾಗಿ ಹಿಂದೆ ಹೋಗಿ ನೀವಷ್ಟು ತಕ್ಕೊಂಡದ್ದು ಎಂದು ಕೇಳಿದ ಪ್ರಯೋಗ ಈ ಸಂದರ್ಭದಲ್ಲಿ ನೆನಪಿಗೆ ಬಂತು.

ಆತ್ಮೀಯವಾಗಿ 'ಉಪಕಾರ ಸ್ಮರಿಸುವವರು' ಈ ಪ್ರಪಂಚದಲ್ಲಿ ಕೈಬೆರಳೆಣಿಸುವಷ್ಟು ಮಾತ್ರ ಇರಬಹುದು ಎಂದು ನನ್ನ ಲೆಕ್ಕಾಚಾರದ ಉದ್ದಾಮ ಪಂಡಿತ ರೊಬ್ಬರು ಹೇಳುತ್ತಿದ್ದಾರೆ.

ಇತ್ತೀಚೆಗೆ ದೊಡ್ಡದೊಂದು ಮಳಿಗೆಗೆ ಭೇಟಿ ಇತ್ತಿದ್ದೆ. ಎದುರಿಗೆ ಎರಡು ಮೂರು 'ವೆಲ್ಕಂ' ಸುಸ್ವಾಗತವೆಂಬ ಫಲಕಗಳು ತೂಗಾಡುತ್ತಿದ್ದುವು. ಆ ಮಳಿಗೆಯ ದೊಳಗಡೆ ಪ್ರತಿ ಆಲ್ಮೇರಕ್ಕು ಪೇಲ್ಗಡೆ ಫಿಕ್ಸೆಡು ರೇಟು 'ಒಂದೇ ದರ' ಎಂಬ ರಟ್ಟಿನ ಬೋರ್ಡುಗಳು ತೂಗುತ್ತಿತ್ತು. ಮತ್ತೊಂದೆಡೆ ಕಪ್ಪು ಅಕ್ಷರಗಳಲ್ಲಿ ದಪ್ಪವಾಗಿ ಬರೆದ 'No credit' ಎಂಬ ಬೋರ್ಡು. ಕ್ಯಾಶಿಯರಿನ ಹತ್ತಿರದ ಟೇಬಲಿವಲ್ಲಿ 'Thank you' ಎಂಬ ಚಿಕ್ಕದೊಂದು ಬೋರ್ಡು ತಗಲಿಸಿತ್ತು. ಇದನ್ನೆಲ್ಲಾ ನೋಡಿ ತುಸು ಆಲೋಚಿಸಿದೆ ಮತ್ತು ಮೂರುವ ನೂನವನ ಹತ್ತಿ ಕೇಳಿದೆ

ಹ್ಞಾದ್ರೀ...ಇದು ಯಾಕೆ ಇಲ್ಲಿ ತಗಲಿಸಿದ್ದಾರೆ 'ಒಂದೇ ದರ' ಅಂತ?"

ನಾವು ದರ ನಿಶ್ಚಯ ಮಾಡಿಯೇ ಇಟ್ಟಿರುತ್ತೀನಿ. ಗಿರಾಕಿಗಳಿಗೆ ಚರ್ಚೆಗೆ ಅವಕಾಶ ಕೊಡಬಾರ್ದೂಂತ".

"ವ್ಯಾಪಾರದಲ್ಲಿ ಚರ್ಚೆ ಇಲ್ಲದೆ ಇರಲು ಸಾಧ್ಯನೇ?"

'ಸುಮ್ಮನೆ ಗಿರಾಕಿಗಳಿಗೆ ಯಾಕೆ ಉಪದ್ರ ಕೊಡುವುದು? ಚರ್ಚೆನೂಡಿ ಅವರ ಮನಸ್ಸನ್ನು ಏಕೆ ನೋಯಿಸಬೇಕು ಎಂದು 'ಒಂದೇ ದರ' ಮಾಡಿದ್ದು" ಬಹಳ ವ್ಯಂಗ್ಯವಾಗಿ ನುಡಿದ.

ನಾನು ನನ್ನಷ್ಟಕ್ಕೆ ವಿಶ್ಲೇಷಿಸಿಕೊಂಡೆ 'ಫಿಕ್ಸೆಡು ದರ ಫಿಕ್ಸೆಡು'...ನಾವು ಒಂದು ದರ ಜಾಕಿದ್ದೀನೆ. (ಲಂಭನೇ ನನ್ನ ಧ್ಯೇಯ) ಗಿರಾಕಿಗಳು ಬರುವುದೇ ನಮ ಪರವು ಧ್ಯೇಯ. ಗಿರಾಕಿ ಬಂದು ದರ ವಿಶ್ಚೈಸುವ ಪ್ರಶ್ನೆಯೇ ಇಲ್ಲ. ನಾವು ಹಾಕಿಟ್ಟ ದರ ತೆತ್ತು ಜೊತೆಗೆ 'ಥ್ಯೇಂಕ್ಯೂ' ಗಳನ್ನು ಪಡೆದುಕೊಂಡು ಕೃತಾರ್ಥರಾಗಿರಿ ಎಂಬುದು ಅವುಗಳ ಒಳಾರ್ಥವಾಗಿರಬಹುದು.

ಆಂತೂ ಕೆಲವು ಉಪಕಾರ ಸ್ಮರಣೆಗಳ ನೆಲೆಗಟ್ಟಲ್ಲಿ ಉಪಕಾರದ ಅಥವಾ ಉಪಾಯಚಾರದ ಮರಣ ಹೋಮವೂ ನಡೆದೀತು. ಬೆನ್ನೆ ತಾನೇ ಲಘು ಉಪಹಾರ ಗೃಹ ಒಂದರಲ್ಲಿ ಕಂಡ ದೃಶ್ಯ, ನರ್ತಕಿಯೋರ್ವಳ ಸುಂದರ ರೇಖಾ ಚಿತ್ರದ ಕೆಳಗಡೆ 'ಥ್ಯೇಂಕ್ಯೂ' [Thank you] ಬರೆದಿದೆ. ಆ ಚಿತ್ರಕ್ಕೆ ಕನ್ನಡಿ ಮಟ್ಟಿದೆ. ನರ್ತಕಿಯಂತೆ ನರ್ತಿಸುವ ಕಾಂಚನವನ್ನು ಆ ನರ್ತಕಿಯ ಮೇಲೆಯೇ ಸುರುವಿ, ಅವಳ ಕಾಲ ಗೆಜ್ಜೆಯ ನಾದದಿಂದ ಉತ್ಪನ್ನವಾದ "ಥ್ಯೇಂಕ್ಯೂ"ವನ್ನು ಪಡೆಯುವಿರಿ ಎಂಬುದಿದರ ಆಂತರಾರ್ಥವಾಗಿರಬಹುದೆಂದು ತಿಳಿದೆ.

ದೊಡ್ಡದೊಂದು ಭೋಜನ ಕೂಟ. "ಬ್ರಾಹ್ಮಣೋ ಬಹು ಜನಪ್ರಿಯ" ಎಂದು ಹಿಂದಿನವರು ಹೇಳಿದ್ದನ್ನು ಈಗಿನವರು 'ಬ್ರಾಹ್ಮಣೋ ಭೋಜನ ಪ್ರಿಯ'ಎಂದು ಮಾಡಿದ್ದರಿಂದ "ಅಪ್ಪಟ ಬ್ರಾಹ್ಮಣ" ನಾದ ನಾನು ಹೋದರೆ ಆಶ್ಚರ್ಯವಿಲ್ಲ ತಾನೆ? ಪುಸ್ಕಳ ಭೋಜನ ಮುಗಿಸಿದವರಂತರ ಯಜಮಾನರು [ಮಾಡಿಸಿದವರು] ನಮ್ಮೆಡೆಗೆ ವೀಳ್ಯದ ಕರವಿಣ ತಂದು ತಾವು ಬಂದದ್ದು ಉಪಕಾರವಾಯಿತು. ತಾಂಬೂಲ ಸ್ವೀಕರಿಸಬೇಕು.' ಎಂದಾಗ ತಾನೂ 'Thank you"ನ ಮರಿ ಹೊಕ್ಕೆ. ಅವರು ಕೊಟ್ಟ 'ಥ್ಯೇಂಕ್ಯೂ' ವನ್ನು ಮರುಜಾವಕ ಮಾಡಿದೆ.

ಸಭೆ ಸಮಾರಂಭಗಳಲ್ಲೂ ಆಂತ್ಯಕ್ಕೆ ಧನ್ಯವಾದ ಸಮರ್ಪಣೆ ಮಾಡುವುದೂ ರೂಢಿಯಾಗಿದೆ.

"ನಿವೃತ್ತ ಅಧಿಕಾರಿಯೊಬ್ಬರ ಭಾಷಣ ಮುಗಿದ ಬಳಿಕ ಧನ್ಯವಾದ. ನಿಜವಾಗಿಯೂ ಅವರು ಮನೆಯಲ್ಲಿ ವಿಶ್ರಾಂತಿಯು ತ್ತಿದ್ದರೂ. ಆದರೂ ಅತಿಶಯೋಕ್ತಿಯಾಗಿ 'ಮಾನ್ಯ ಅಧ್ಯಕ್ಷರು ನಾವು ಕೇಳಿ ಕೊಂಡೊಡನೆ ನಮ್ಮ ಮೇಲಿನ ವಾತ್ಸಲ್ಯದಿಂದ ನಮ್ಮ ಕರೆಗೆ ಓಗೊಟ್ಟು ತಮ್ಮ ಹಲವಾರು ಕೆಲಸಗಳನ್ನು (?) ಬದಿಗೊತ್ತಿ ಇಲ್ಲಿಗೆ ಆಗಮಿಸಿ ತಮ್ಮ ಅಪೂರ್ವ ಸಲಹೆಗಳನ್ನು ನೀಡಿದುದಂತ್ಯಾಗಿ ನಾವು "ಉಪಕಾರ ಸ್ಮರಣೆ" ಯನ್ನು ಈ ಮೂಲಕ ಲರ್ಪಿಸುತ್ತೇನೆ."

ಅಷ್ಟು ಮಾತ್ರವನ್ನಷ್ಟೆ ವೀಕ್ಷಕರಾಗಿ ಹೋದ ನಮಗೆಲ್ಲರಿಗೂ ಕೈಯಲ್ಲೊಂದೊಂದು 'ಥ್ಯೇಂಕ್ಯೂ' ಎಂದು ಮುದ್ರಿಸಿದ ಚೀಟು.

ಈ ರೀತಿ ಈ 'Thank you' ಸಮಾಂತರಯಾಮಿಯಾದ ಒಂದು ವಿಶೇಷ ರೀತಿಯಲ್ಲಿ ಉಪಯೋಗಿಸಲ್ಪಡುವ ದಿನ ನಿತ್ಯವೂ ಬಳಸಿಕೊಳ್ಳುವಂತಹದು. ಅಬಲಾ ವೃದ್ಧರ ವರೆಗೂ ಈ 'ವ್ಹಿಥ'ನ್ನು ಜೆಸ್ಚೆಯ ತುದಿಯಿಂದ ಹೊರ ಪುಟಿಯುತ್ತಿದೆ.

ಇನ್ನು ಕನ್ನಡ ಮಾಧ್ಯಮವಾದ ಬಳಿಕ ನಾವು ಇಂಗ್ಲಿಷನ್ನು ಕೈಬಿಟ್ಟರೂ (ಅದು ಅಸಾಧ್ಯವಾದರೂ) ಈ ಸ್ಥಾಣ ಕ್ಷಣಕ್ಕೂ ಉಪಯೋಗಿಸಲ್ಪಡುವಂಥ 'ಥ್ಯೇಂಕ್ಯೂ' ಎನ್ನ ನಾವು ಖಂಡಿತ ಬಿಡಲಿಕ್ಕಿಲ್ಲ, ಛೇ! ಬಿಡಲಿಕ್ಕಿಲ್ಲ.

ಆರ್ಥಿಕ ಯಶಸ್ಸಿನೆಡೆಗೆ

ಸೋಮಯ್ಯ ಕೈಮಗ್ಗದ ಕಾರ್ಖಾನೆಯೊಂದರಲ್ಲೂ ಆಪನ ಸಹೋದರ ಚಂದು ಮೋಟಾರು ರಿಪೇರಿ ಮಾಡುವ ಯಂತ್ರಾಗಾರದಲ್ಲೂ ದಿನಗೂಲಿ ಕೆಲಸ ಮಾಡಿಕೊಂಡಿದ್ದರು. ಇಬ್ಬರೂ ಸಿಂಡಿಕೇಟ್ ಬ್ಯಾಂಕಿನಲ್ಲಿ ಪಿಗ್ಮಿ ರೀಪಣಾತಿಗಳನ್ನ ತೆರೆದು ತಮಗೆ ದೊರಿತ ನೇತನದ ಸಣ್ಣ ಭಾಗವನ್ನು ಖಾತೆಯಲ್ಲಿ ಪ್ರತಿದಿನವೂ ಜಮೆಮಾಡತೊಡಗಿದರು.

ದಿನಂಪ್ರತಿ ಅವರು ಖಾತೆಯಲ್ಲಿ ಕೂಡಿಟ್ಟ ಮೊತ್ತವು ಕೀರಾ ಕರಿಯ ಪ್ರಮಾಣದ್ದಾಗಿದ್ದರೂ ಎಲ ವರುಷಗಳ ಕೂನೆಗೆ ಒಟ್ಟು ಬಡ್ಡಿ ಸಹಿತ ಅವಂಬ್ಯಗೆ ದೀರೆ ದೀರೆ ದೊರಿತ ಮೊತ್ತ ವಿಜಕ್ಕೂ ಹಿರಿಯ ಪ್ರಮಾಣದ್ದು. ತಾನು ಕೂಡಿಟ್ಟ ಚಿಕ್ಕ ಬಂಡವಾಳದಿಂದ ಸೋಮಯ್ಯ ಇದೀಗ ಸ್ವಂತ ಸಣ್ಣ ಕೈವ.ಗ್ಗದ ಕಾರ್ಖಾನೆಯೊಂದನ್ನು ತೊಡಗಿದ್ದಾನೆ. ಚಂದು ಚಿಕ್ಕ ಪ್ರಮಾಣದ ಮೋಟಾರು ರಿಪೇರಿಯ ಯಂತ್ರಾಗಾರವನ್ನು ತೊಡಗಿದ್ದಾನೆ.

ಇಂದು ಇವರಿಬ್ಬರೂ ತಮ್ಮ ಉದ್ಯಮಗಳನ್ನು ವಿಸ್ತೃತ ಪ್ರಮಾಣದಲ್ಲಿ ಬೆಳೆಸಬೇಕೆಂಬ ಬಯಸಿದ್ದು, ಸಿಂಡಿಕೇಟ್ ಬ್ಯಾಂಕು ಅವರಿಗೆ ಅವಶ್ಯಕವಿದ್ದ ಹಣವನ್ನು ಸಾಲದ ರೂಪದಲ್ಲಿ ನೀಡುತ್ತಿದೆ. ನಾಡಿನ ಚಿಕ್ಕ ಉದ್ದಿಮೆಗಳು ಬೆಳೆಯಲು ಹೆಚ್ಚು ಹೆಚ್ಚು ಜನರಿಗೆ ಆರ್ಥಿಕ ನೆರವನ್ನು ನೀಡಬೇಕೆಂಬುದೇ ಸಿಂಡಿಕೇಟ್ ಬ್ಯಾಂಕಿನ ಆಸಯವಾಗಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಕ್ರೈಸ್ತೀಯರ ಕಾರಸ್ತಾನದ ಕರಾಳ ಛಾಯೆ

ಬರೆದವರು: ಶ್ರೀ "ಶಿವಶಂಕರ"

ನಾಗಾಲೇಂಡಿನ ವಿಷ ಜಂತುಗಳಿಂದ ತಪ್ಪಿಸಿಕೊಳ್ಳಲು ಶ್ರೀಮತಿ ಇಂದಿರಾ ಗಾಂಧೀಜೀ ಆದೆಂತೆಂತೋ ಪ್ರಯತ್ನಿಸುತ್ತಿರುವರಾದರೂ ಅದಿನಿತೂ ಪ್ರಯೋಜನ ಕಂಡು ಬರುತ್ತಿಲ್ಲ. ಅದರ ಬದಲು ಅವಘಡಗಳ ಅವಲಕ್ಷಣವೇ ಕಂಡು ಬರುತ್ತಿದೆ. ಈ ವಿಷ ಜಂತುಗಳಾದರೋ ಕ್ರೈಸ್ತೀಯ ಮತ ಪ್ರಸಾರಕರ ಬಲೆಗೆ ಸಿಕ್ಕಿಬಿದ್ದು, ವಿಷ ಸಂಪ್ರದಾಯ ಕೊಂಡವೇ ಇವೆ. ಅಲ್ಲಿಯ ಇ ಪರ್ಯಾಯ ಮೂಲಕ ಅವರು ತಮ್ಮ ಆಟ ವಷ್ಟು ಆಡುತ್ತಿದ್ದಾರಲ್ಲದೆ ಕಾರ್ಯರಂಗದ ವಿಸ್ತರಣೆಯನ್ನೂ ಮಾಡುತ್ತಿದ್ದಾರೆ. ಮಿಜೋಲೇಂಡಿನ ಕೊಗೂ ಕೇಳಿ ಬರುತ್ತಿದೆ. ನೇಫಾದಲ್ಲೂ ಅವರ ನಾಟಕ ನಡೆಯುತ್ತಿದೆ. ಮಣಿಪುರದಲ್ಲೂ ತಮ್ಮ ಪ್ರಯತ್ನಕ್ಕೆ ಪುರಕ್ಕೆ ಅವರು ಏರ್ಪಾಡು ಮಾಡಿಕೊಂಡಿದ್ದಾರೆ. ಬಿಹಾರಿನಲ್ಲಿ ಬೇಳೆ ಬೇಯಿಸಿಕೊಳ್ಳಲು ಅವರು ಬಡಿದಾಡಿದರು. ಅವರು ಗೋವಾದಲ್ಲಿ ಪಡಿಬಿಡಿ ಮಾಡುತ್ತಿದ್ದಾರೆ; ಆಂಧ್ರದಲ್ಲೂ ಗಿರಿಜನರ ಖಳಿ ಆಟ ಆಡುತ್ತಿದ್ದಾರೆ; ಕರ್ನಾಟಕದಲ್ಲೂ ಕರಾಮತ್ತು ನಡೆಸುತ್ತಿದ್ದಾರೆ. ಶಿವಮೊಗ್ಗದ ಮಲೆ ಪ್ರದೇಶದಲ್ಲಿ ನಾಗಾಲೇಂಡ್ ಮಾಡಲು ಹವಣಿಸಿದರು. ಶಿವಪ್ಪನಾಯಕನ ದರ್ಬಾರನ್ನೂ ಅವರು ಬಿಟ್ಟಿಲ್ಲ. ಅಲ್ಲಿಂದ ದರ್ಬಾರು ನಡೆಸಲು ಪ್ರಯತ್ನಿಸುತ್ತಿದ್ದಾರೆ. ಅವರು ಶಿವಪ್ಪನಾಯಕನ ಶವ ಸಿಕ್ಕಿದರೆ ಅದಕ್ಕೂ ಕ್ರೋಸ್ ಕಟ್ಟದೆ ಬಿಡಲಾರರು. ಕೇರಳದಲ್ಲಂತೂ ಅವರ ಕೈಕೆಳಗೆ ಕಾಂಗ್ರೆಸ್ಸಿಗರು ಸಂಪೂರ್ಣ ಮನಸೋತಿರುವರು. ಮತ ಬೇಟೆಯ ವಿಷಯದಲ್ಲಿ ಕಮ್ಯುನಿಸ್ಟರೂ ಅವರೊಂದಿಗೆ ಕೈಮಿಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದು, ಕಲ್ಲಿಕೋಟೆಯ ಪಾದ್ರಿಯೊಬ್ಬರು ನೇಫಾದ ಯಂತ್ರ ಶಾಸ್ತ್ರಜ್ಞ ವಿಕ್ರಮ ಷಾರವರ ಬಳಿ, ಅಲ್ಲಿ ನಂಬೂದಿಪಾದರ ಅಲ್ಲಿಕೆ ನಾಮ ಮೂಹೂರ್ತವಿದ್ದು, ಅಂಕುಶ ತಮ್ಮ ಅಂಕೆಯಲ್ಲಿರುವದಾಗಿ ಹೇಳಿರುವರು. ಇದು ಕೇರಳಕ್ಕೇನೇಕಾದಿರಸಲ್ಪಟ್ಟದಲ್ಲ. ಭಾರತ ಸರಕಾರವು ಸಹಾಯ ಸಲ್ಲಿಸುವ ಅಮೇರಿಕದ ಬಳಿ ಮತಾಂತರದ ಒಪ್ಪಂದ ಮಾಡಿಕೊಂಡಿರುವದಾಗಿ ಮತ ಪ್ರಸಾರಕರು ಬಹಿರಂಗ ಪ್ರಚಾರ ನಡೆಸಿರುವರು. ಹಾಗೇನಿಲ್ಲವೆಂದು ಸರಕಾರೀ ಪ್ರಕಟಣೆ ತಿಳಿಸಿದೆಯಾದರೂ, ಮತ ಪ್ರಸಾರಕರ ಮೇಲೆ ಅದ್ಭಾವ ಶಕ್ತಿಯನ್ನು ಕೈಗೊಂಡಿಲ್ಲ. ಅಂದರೆ ಮತ ಪ್ರಸಾರಕರು ಹೇಳಿದ್ದು ಸರಿಯೆಂದಾಯಿತು. ಆಶ್ಚರ್ಯಣ ಪಡಬೇಕಿಲ್ಲ ವೆಂಬಂತೆ, ಒಪ್ಪಂದ ಮಾಡಿಕೊಂಡಿಲ್ಲವೆಂದು ಕೇಂದ್ರ ಸರಕಾರ ಮುಚ್ಚಿಡುತ್ತಿರಲೂಬಹುದು. ಆ ಧೈರ್ಯದಿಂದ ಅವರು ದ್ವಿಗುಣಿತವಲ್ಲ, ಅನೇಕಪಟ್ಟು ಅಧಿಕ ಉತ್ಸಾಹದಿಂದ ಕಾರಸ್ತಾನ ನಡೆಸುತ್ತಿದ್ದಾರೆ.

ಸಹಾಯದ ಹಗ್ಗಕ್ಕೆ ಸರಾಗವಾಗಿಹಾಗೂ ಹಾಯಾಗಿ ಸರಕಾರವು ಕುತ್ತಿಗೆ ಕೊಟ್ಟುರುವಂತೆ, ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವವರು ಇಲ್ಲಿಯ ಅಂಗ್ಲ ವ್ಯಾಮೋಹಿಗಳು. ಕಾಂಗ್ರೆಸ್ಸ್ ಚಳುವಳಿಯನ್ನು ಹತ್ತಿಕ್ಕಲು ಬ್ರಿಟಿಷಂ ಜಸ್ಟೀಸ್ ವಾರ್ಟೆಯನ್ನು ಕಟ್ಟಿದ್ದರು. ಅದರ ಅವಶೇಷಗಳು ಇಂದೂ ಇವೆ. ಕಾಂಗ್ರೆಸ್ಸಿನಿಂದ ಹೊರಹೊಡಲ್ಪಟ್ಟಿರುವ ಹೆಗ್ಗಣಗಳು ಆ ಅವಶೇಷಗಳೊಂದಿಗೆ ಕೈಮಿಲಾಯಿಸಿಕೊಂಡು ಕಾಂಗ್ರೆಸ್ಸಿನ ಮೇಲಿನ ದ್ವೇಷದಿಂದ ಜಯಚಂದನ ವೇಷವನ್ನು ಹಾಕಿಕೊಂಡು ಅಂಗ್ಲ ಭಾಷೆಯಲ್ಲಿ ಆಟವಾಡುತ್ತಿವೆ. ಆಂಗ್ಲ ಭಾಷೆಗಿರುವ ಅಶ್ಯಾಸನ ತಪ್ಪಿದಲ್ಲಿ ಬಡಬಡನರು ತಮ್ಮನ್ನು ದೂರಿಗಳೆಂದು ಗೌರವಿಸುವದಿಲ್ಲ. ಆ ಭಾವನೆ ನಾಶವಾದ ಮೇಲೆ ತಮ್ಮ ಬಲೆಯಲ್ಲಿ ಅವರು ಬೀಳುವದಿಲ್ಲ. ಇವನ್ನು ಜೀನ್ನಾಗಿ ತಿಳಿದುಕೊಂಡಿರುವ ಕ್ರೈಸ್ತೀಯ ಪ್ರಸಾರಕರು ಅಂಗ್ಲ ವ್ಯಾಮೋಹಿಗಳನ್ನು ಛೂ ಬಿಟ್ಟಿದ್ದಾರೆ. ೧೯೬೫ರಲ್ಲಿ ತಮಿಳ್ನಾಡಿನಲ್ಲಿ ನಡೆದ ಗಲಭೆಯ ಹಿಂದುಗಡೆ ಸೂತ್ರಧಾರರಾಗಿದ್ದವರು ಬ್ರಿಟಿಷ್ ಕೌನ್ಸಿಲಿನವರು. ಇವರು ಕೇಂದ್ರದ ಮೇಲೂ ವರ್ಚಸ್ಸನ್ನು ಬೀರಿ ವಿಶ್ವವಿದ್ಯಾಲಯಗಳಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಇದರ ಲಾಭವನ್ನು ಕ್ರೈಸ್ತೀಯ ಮತ ಪ್ರಸಾರಕರು ಪಡೆಯುತ್ತಿದ್ದಾರೆ.

ಈ ರೀತಿ ಕೇಂದ್ರ ತಥಾ ಕಾಂಗ್ರೆಸ್ಸ್ ಹಾಗೂ ಕಾಂಗ್ರೆಸ್ ವಿರೋಧಿಗಳೆಲ್ಲ ಒಂದು ತಂಡದ ಬೆಂಬಲವನ್ನು ಗಿಟ್ಟಿಸಿಕೊಂಡಿರುವ ಕ್ರೈಸ್ತೀಯ ಮತ ಪ್ರಸಾರಕರು ದೇಶದಾದ್ಯಂತ ನಾಗಾಲೇಂಡ್ ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ. ಶ್ರೀ ನಿಜಲಿಂಗಪ್ಪನವರ ಧೈರ್ಯ ಹಾಗೂ ಜನತೆಯ ಉತ್ಸಾಹದಿಂದಾಗಿ ಮಲೆನಾಡು ಅವರಿಂದ ತಲೆ ತಪ್ಪಿಸಿ ಕೊಂಡಿದೆಯಾದರೂ ಶಿವಪ್ಪನಾಯಕನ ದರ್ಬಾರು ಅವರ ದರ್ಬಾರಿನಲ್ಲಿದೆ. ಧಾರ್ಮಿಕ ವಿಶ್ವ ವಿಜೇತ ಸ್ವಾಮಿ ವಿವೇಕಾನಂದರ ಸ್ಮಾರಕ ಚೆನ್ನೈಯ ಮೇಲೆಯೇ ಕ್ರೋಸ್ ನೆಡಲು ಪ್ರಯತ್ನಿಸಿದ ಈ ಮತಾಂಧ ದೇಶದ್ರೋಹಿಗಳು ಶಿವಪ್ಪನಾಯಕನನ್ನು ಬಿಡುವದುಂಟೇ? ಅದಕ್ಕಾಗಿ ಇಂದು ಅನ್ಯಾನ್ಯ ದೇಶಗಳಿಂದ ಸ್ಪರ್ಧಾರೂಪದಲ್ಲಿ ಮತಪ್ರಸಾರಕರು ಭಾರೀ ಪ್ರಮಾಣ ಹಣ ತರುತ್ತಿರುತ್ತಿದೆ. ಹಿಂದೆ ಬ್ರಿಟಿಷರ ಪೋಷಕಾಗಿದ್ದಾಗ—ಕ್ರೈಸ್ತೀಯ ಅಕ್ರಮಣಗಾರರು ಅಲ್ಲಿಕೆ ನಡೆಯುತ್ತಿದ್ದಾಗ ಅಷ್ಟು ಮಂದಿ ಪ್ರಸಾರಕರ ಅಗತ್ಯವಿರಲಿಲ್ಲ. ಸೇನೆ ಆಗ ನೇರವಾಗಿ ಅವರ ಕೈಯಲ್ಲಿತ್ತು. ಇಂದು ಹಾಗಲ್ಲ. ಇಪತ್ತೇನೋ ಗೃಹಕಲಹದಲ್ಲಿ ಮಗ್ನರಾಗಿರುವ ಕಾಂಗ್ರೆಸ್ಸರೂ, ಕಾಂಗ್ರೆಸ್ ವಿರೋಧಿಗಳೂ ಅವರಿಗೆ ಸ್ವಾಗತ ನೀಡಬಹುದು. ನಾಳೆ ಹಾಗಿರಲಿಕ್ಕಿಲ್ಲ. ರಾಷ್ಟ್ರೀಯತೆಯು ಚಿಲುಮೆ ಹಿಟ್ಟಿದ್ದಿತೆಂದರೆ ಇವರನ್ನು, ಹೊಂಡದ ಕೊಚ್ಚೆ ಕ್ಷೀಣನ್ನು, ಕೇಳುವವರ್ಯಾರು? ಆದುದರಿಂದಲೇ ಪ್ರಸಾರಕರ ಪಡೆ ಅಧಿಕವಾಗುತ್ತಿದೆ. ಅದಕ್ಕೆ ಪೋಷಕರೂ ಅಷ್ಟೇ ವಿದೇಶದ್ದು, ವಶ ಪ್ರಸಾರಣೆ... ಕಾಲ್ಕೆ ಧಾರವಾಡ ತಕ್ಕ ಸ್ಥಳವೆಂದು ಹುಡುಕಿ ದುಂಬಿಸಿ ಮತ ಪ್ರಸಾರಕರನ್ನು ಕಳುಹಿಸುತ್ತಿದ್ದಾರೆ. ಮತ ಪ್ರಸಾರಕರ ಆಗಮನಕ್ಕೆ ವಂಕಿಧಾರಣೆ ಮಾಡಿಸಲು ಕಾಂಗ್ರೆಸ್ಸಿಗರಿಂದ ಸಾಧ್ಯವಾಗಿಲ್ಲ. ಆ ಪೂರ್ವಸ್ಥಿತಿ ದೊಡನೆ ಕ್ರೈಸ್ತಿಯರೆಲ್ಲರೂ, ತಮ್ಮೊಳಗಿನ ಭಿನ್ನ—ಭಾವಗಳನ್ನು ಬದಿಗೊತ್ತಿ ಒಂದಾಗಿ ಬಿಡುತ್ತಾರೆ. ಬೆಂಗಳೂರು, ದಿಲ್ಲಿ ಮುಂತಾದೆಡೆಗಳಲ್ಲಿ ಬೆರೆಳು ದೊಡ್ಡ ದೊಡ್ಡ ವಿಜ್ಞಾಪನೆ ಪತ್ರಗಳನ್ನು ಮಂತ್ರಿ ಮಹೋದಯರಿಗೆ ಕಳುಹಿಸಿ ಬಿಡುತ್ತಾರೆ. ಅಲ್ಲಿಗೆ, ಈ ಬಿಸಿಗೆ, ಕಾಂಗ್ರೆಸ್ಸು ಟೆಣ್ಣೆ ಕರಗಿ ಹೋಗುತ್ತದೆ. ಇದರ ಧೈರ್ಯದಿಂದ ಅವರು ಅಲ್ಲಲ್ಲಿ ನಾಗಾಲೇಂಡ್ ನಿರ್ಮಿಸಲು ನೋಡುತ್ತಿದ್ದಾರೆ.

ತಮಿಳುನಾಡಿನಲ್ಲಿ ಕಾಂಗ್ರೆಸ್ ವಿರೋಧಿ ದ್ರಾವಿಡ ಮುನ್ನೇಟ್ರ ಕಳ್ಳಗಮಿನ ಅಳ್ವಿಕೆ ನಡೆಯುತ್ತಿದೆಯಾದರೂ ಕ್ರೈಸ್ತೀಯ ಮತಪ್ರಸಾರಕರ ನಾಗಾಲೇಂಡ್ ನಿರ್ಮಾಣಕ್ಕೇನೂ ತಡೆ ಇಲ್ಲ. ದ್ರಾ. ಮು. ಕ. ಮತವಿರೋಧಿ ಇದೆಯಾದರೂ ಕ್ರೈಸ್ತೀಯ ಮತಪ್ರಸಾರಕರಕ್ಕೆ ಕಿರಿಬೆರಳನ್ನು ಎತ್ತಲು ಅವರಿಂದ ಸಾಧ್ಯ ಇಲ್ಲ. ಇದಕ್ಕೆ ಕಾರಣವೆಂದರೆ ದ್ರಾ. ಮು. ಕ. ಅಥವಾ ಅದ ಕ್ಕೆಂತಲೂ ಅದಕ್ಕೆ ಜನ್ಮವಿತ್ತಿರುವ ದ್ರಾವಿಡ ಕಳ್ಳಗಮಿನ ಸಂಜಾಂಗಕ್ಕೆ ಕಾರಣರಾದವರು ಕ್ರೈಸ್ತೀಯ ಪಾದ್ರಿ. ಅವರು ಹೇಳಿಕೊಟ್ಟಿರುವ ಪಾಠಗಳನ್ನು ಈ ಗಿಳಿಗಳಿಂದು ಹೇಳುತ್ತವೆ. ಅನಂತರ ಜಸ್ಟೀಸ್ ವಾರ್ಟೆ. ಹೀಗಿರುವಾಗ ಕ್ರೈಸ್ತೀಯ ಮತಪ್ರಸಾರಕರಿಗೆ ಇವರು ಬೆದರಿಗಳಾಗಿ ಇದ್ದಾರೆ. ಹಾಗಿರುವದರಿಂದ ಈಗಂತೂ ಅವರ ಕಾರ್ಯರಂಗ ಬೆಳೆಯುತ್ತಿದೆ. ನಗರದಿಂದ ಹಳ್ಳಿಯ ವರೆಗೂ, ಗಿರಿಜನರಿಂದ ಕಡಲ ದಡದ ವರೆಗೂ ಅವರು ಓಡಾಡುತ್ತಿದ್ದಾರೆ.

ಒಂದು ಉದಾಹರಣೆ: ತಮಿಳ್ನಾಡಿನಲ್ಲಿ ತಿರುನೆಲ್ವೇಲಿ ಜಿಲ್ಲೆ ಇದೆ. ಅಲ್ಲಿ ನಾಂಗವೆರಿ ತಾಲೂಕಿದೆ. ಆ ತಾಲೂಕಿನಲ್ಲಿ ಇಡಿಂದಕರೈ ಎಂದು ಊರು. ಇದು ಸಮುದ್ರ ದಡದಲ್ಲಿದ್ದು ಇಲ್ಲಿರುವವರಲ್ಲಿ ಹೆಚ್ಚಿನವರು ಬೆಸ್ತರಿದ್ದಾರೆ. ಈ ಊರಿಗೆ ಹಿಂದ ವಿಡಿಂದಕರೈ ಹೆಸರು. ಆ ಹೆಸರು ಬರಲು ಒಂದು ಕಾರಣ ಇದೆ. ಹಿಂದೆ ಸ್ಕಂದನು ಮದುವೆಯಾಗವದಕ್ಕಾಗಿ ಮನೆದನ್ನೆಯನ್ನು ಕರೆದುಕೊಂಡು ನಿರ್ದಿಷ್ಟ ಸ್ಥಾನಕ್ಕೆ ತಲಪುವದರ್ಯಹೊರಟಾಗ ದಾರಿಯಲ್ಲೇ ಬೆಳಗಾಗಿ ಬಿಟ್ಟಿತು. ಅದುವೇ ಬೆಳಗಾದ ಊರು ವಿಡಂದಕರೈ. ಇಂದು ಅದು ಇಡಂದಕರೈಯಾಗಿದೆ. ಹೀಗೆ ಅಲ್ಲಿ ಕ್ರೈಸ್ತೀಯ ಇಡಿ (ಗುಡುಗು) ಹೊಡೆದಿದೆ.

ಇದು ಕಡಲಕರೆಯಲ್ಲದ್ದು ಇತರ ವಿಷಯಗಳಿಂದಲೂ ಮುಖ್ಯವಾದ ಸ್ಥಳವಿದು ನದರಿಂದ ಕ್ರೈಸ್ತೀಯ ಪಾದ್ರಿಯೊಬ್ಬನ ಗೃಧ್ರ ದೃಷ್ಟಿ ಬಿದ್ದು, ಅವನ ಚಟುವಟಿಕೆಯ ಚಾವಡಿಯಾಗಿ ಬಿಟ್ಟಿದೆ. ಅವನು ಅಲ್ಲಿಗೆ ಬಂದಾಗ ಎಲ್ಲರೂ ಹಿಂದೂಗಳಾಗಿಯೇ ಇದ್ದರು. ಎಲ್ಲೆಡೆಯಲ್ಲಿ ಬೀಸು ವಂತೆ ಈ ಪಾದ್ರಿ ಬಲೆ ಬೀಸಿದನು. ಮೋಡದ ಬಲೆಯಲ್ಲಿ ಬಡ ಬೆಸ್ತರು ಸಿಕ್ಕಿ ಬಿದ್ದರು. ಅವರಲ್ಲಿ ಹೆಚ್ಚಿನವರನ್ನು ಅವನು ಮೋಸ

(ಜಸ್ಮಾಂದನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 478/1967

ತಮಿಳಳಿರಿ ಪ್ರಭು —ವಾದಿ

ಮತ್ತು

ವೆಂಕಪ್ಪಸೆಟ್ಟಿ, ಪರೀಲ ಗೋವಿಂದ ಸಟ್ಟಿ ಆಳಿಯ, ಕುಂದಾಪುರ ತಾಲೂಕು ಯಡೂರು ಕುಂಜ್ಞಾಡಿ ಗ್ರಾಮ —ಪ್ರತಿವಾದಿರು

ಸದರಿ ಪ್ರತಿವಾದಿಗೆ ಯಾ ಮೂಲಕ ತಿಳಿಯ ಪಡಿಸುವುದೇನೆಂದರೆ—

ವಾದಿಯಿಂದ ಪ್ರತಿವಾದಿಯು ತಾರೀಕು 17—7—1964ರಲ್ಲಿ ರೂಪಾ 100_00 ಪ್ರಶಿಕೊಂಡು ಬರೆಸಿಕೊಟ್ಟ ದಿನಾಂಕ್ ನೋಟಿನ ಹಣ ಬಡ್ಡಿ ಬಗ್ಗೆ ವಾದಿಯು ಸ್ವತಂತ್ರವಾದಿಯ ಮೇಲೆ ದಾವಾ ಹೂಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ತಾರೀಕು 30—12—1967ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾಗುವುದೆಂದು ಎಂದು ಸಂಗ್ತಿ ಕೋರ್ಟು ಹುಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಸೋಣವಾಗಿಯಿದೆ.

K. Raghunatha Shenoy
Advocate for Plaintiff

Coondapoor, 20—11—1967

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ಕನ್ನ 86 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ ೮% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಶೆ

ಹೆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

ಪ್ರದಕ್ಷಿಣೆ

ಆನೆ, ಹುಲಿಗಳ ಪೆಡ್ಡಾ

ಮೈಸೂರು ಆನೆಗಳ ರಾಜ್ಯ. ಇಲ್ಲಿಯ ಆನೆಗಳು, ಆನೆಗಳ ಮರಿಗಳು ಜಪಾನಿನಿಂದ ಅಮೆರಿಕೆಯ ವರೆಗೂ ಭಾರತೀಯ ಪ್ರೇಮಸಾಹಾರ್ದಭಾವನೆಯನ್ನು ಒಯ್ದಿವೆ; ಮುಂದೆಯೂ ಒಯ್ಯುತ್ತವೆ. ಕಪಿಲಾ ನದಿ ದಂಡೆಯ ಕಾಕನಕೋಟೆ ಕಾಡಿನಲ್ಲಿ ಜನವರಿ ತಾ. ೧೦ರಿಂದ ಪೆಡ್ಡಾ ಕಾರ್ಯಕ್ರಮ ನಡೆಯುವುದು. ಇದಕ್ಕಾಗಿ ಅವಶ್ಯವಾದ ಪೂರ್ವ ಸಿದ್ಧತೆ ಳು ನಿರಂತರವಾಗಿ ನಡೆಯುತ್ತಿವೆ. ಇದಕ್ಕಾಗಿ ದುಡಿಯುವವರು ಒಬ್ಬ ಕಾಫ್ಸರ್ವೇಟರ್ ದರ್ಜೆಯ ಅಧಿಕಾರಿ, ೧೦೦ ಮಂದಿ ತಜ್ಞ ನಾಕರರು ಮತ್ತು ೬೦೦ ತಾತ್ಕಾಲಿಕ ಕೆಲಸಗಾರರು. ರಾಜ್ಯ ಸರಕಾರದ ನೇತೃತ್ವದಲ್ಲಿ ನಡೆಯಲಿರುವ ವಿಶ್ವವಿಖ್ಯಾತ ಕುತೂಹಲಕಾರಕವಾದ ಪೆಡ್ಡಾ ಕಾರ್ಯಕ್ರಮವನ್ನು ನೋಡಲು ಅನೇಕ ಗಣ್ಯ ಅತಿಥಿಗಳು ಬರುವ ನಿರೀಕ್ಷೆಯಿದೆ. ರಾಷ್ಟ್ರಪತಿ ಪ್ರಧಾನ ಮಂತ್ರಿ ವಿದೇಶೀರಾಯಭಾರಿಗಳು ಮಂತ್ರಿತರ ಪ್ರಭಾವಶಾಲಿಗಳಿಗೆ ವೀಸ್ತಾಮಂತ್ರಣ ದೊರೆಯ ಬಹುದು. ಜತೆಗೆ ೫೦೦ "ಶ್ರೀ ಸಾಮಾನ್ಯ"ರಿಗೂ ಟಿಕೇಟುಗಳನ್ನು ನೀಡಿ ಪ್ರವೇಶ ಸೌಕರ್ಯವೊದಗಿಸ ವ ವ್ಯವಸ್ಥೆಯಿದೆಯೆಂದೂ ಗೊತ್ತಾಗಿದೆ

ಆನೆಗಳನ್ನು ಹಿಡಿಯುವ ಈ ಪೆಡ್ಡಾ ಕಾರ್ಯಕ್ರಮದಲ್ಲಿ ತುಂಬ ಸುಧಾರಣೆಯೂ ಆಗಿದೆಯೆಂದು ವದಂತಿ ಮೊದಲು ಅವಾನವತೆಯನ್ನು ತೋರಿಸಿಯೇ ಈ ಗಜಬಲವನ್ನು ಅಂಕೆಗೆ ತರುತ್ತಿದ್ದರಿಂದೀಗ ಮಾನವತೆಯಿಂದಲೇ ಆತುಲಬಲವನ್ನು ಒಲಿಸುವ ಪ್ರಯತ್ನ ಸಾಗುತ್ತಿದೆ. ಪೆಡ್ಡಾದಲ್ಲಿ ಬಿದ್ದ ಆನೆಗೆ ಫೀರು ಸಿಂಪಡಿಸುವುದೇ ಮೊದಲಾದ ಕೆಲವು ವ್ಯವಸ್ಥೆಗಳಾಗಿವೆಯಂತೆ ಇದರಿಂದ ಪೆಟ್ಟಿಗೇರಿದ ಸಿಟ್ಟೂ ಇಳಿಯಬಹುದು; ಎಲ್ಲಕ್ಕಿಂತ ಹೆಚ್ಚಾಗಿ ಬಳಿ ನೀರಿರುವಾಗ, ಕುಡಿಯದಿರುವುದು ಸಾಧ್ಯವೆ?

ಈ ಆನೆಗಳನ್ನು ಹಿಡಿಯುವ ವ್ಯವಸ್ಥೆಯಲ್ಲಿ ಪಾಪಿನ ಆನೆಗಳೂ ಸಹಕರಿಸುತ್ತಿರ. ಕೊಡಲಿಯು ಕಾವೇ ಮರಕ್ಕೆ ನೂರಿಯೆಂಬುದು ಫಿಡವಸ್ಪೈ? ಕಾಕನಕೋಟೆಯ ಪೆಡ್ಡಾ ವ್ಯವಸ್ಥೆಗೂ ಕೆಂಗೇರಿ ಬಳಿಯ ಆನೆಗಳ ಸಂಚಾರಕ್ಕೂ ಏನಾದರೂ ಸಂಬಂಧವಿದೆಯೆ? ತವ್ಮನ್ನು ಹಿಡಿಯುವರೆಂಬ ಭಯ ಸೂಚನೆ ಆನೆಗಳಿಗೂ ದೊರಕಿದರೆ ಅವು ಕಾಕನ ಕೋಟೆಯನ್ನಲ್ಲಿ ಮತ್ತೆ ನಿಲ್ಲುವವೆ?

ಂ ಂ ಂ

ಪಶ್ಚಿಮ ಬಂಗಾಳದ ಸಂಯುಕ್ತ ರಂಗದ ಸಚಿವ ಸಂಪುಟವು ದಶಂಬರ ೧೫ಕ್ಕೆ ಮೊದಲು ವಿಧಾನ ಸಭೆಯು ಅಧಿವೇಶನವನ್ನು ಕರೆಯ ಬೇಕೆಂಬ ರಾಜ್ಯಪಾಲರ ಸಲಹೆಯನ್ನು ತಿರಸ್ಕರಿಸಿತು ರಾಜ್ಯಪಾಲರ ಅಧಿಕಾರಿಗಳ ಬಗ್ಗೆ ಸಂವಿಧಾನಾತ್ಮಕ ಅಂಶಗಳನ್ನು ಪರಿಶೀಲಿಸಲು ಸುಪ್ರೀಂ ಕೋರ್ಟಿನ ಸಲಹೆ ಕೇಳಬೇಕೆಂದು ಅಜಯ್ ರಾಷ್ಟ್ರಪತಿಗಳಿಗೆ ಮನವಿ ಮಾಡಿದರು. ಇದನ್ನು ರಾಷ್ಟ್ರಪತಿಯವರು ತಿರಸ್ಕರಿಸಿದರು. ಮುಖ್ಯಮಂತ್ರಿ ರಾಜ್ಯಪಾಲರ ಸಲಹೆಯನ್ನು ಕೇಳುವುದಿಲ್ಲವಾದರೆ, ಒಂದು ರಾಜ್ಯದ ಮುಖ್ಯಮಂತ್ರಿಯ ಸಲಹೆಯನ್ನಾ ರಾಷ್ಟ್ರಪತಿಯೇಕೆ ಕೇಳಬೇಕು? ಸಂವಿಧಾನವೂ ಇದೆ; ಅಧಿಕಾರವೂ ಇದೆ.

ಹರಿಜಾನಮವೇನಾಗ ಬಹುದು ಎಂಬ ಬಗ್ಗೆ ಅಜಯ್ ಬಸು ಮತ್ತವರ ಹದಿನಾಲ್ಕು ಬಣಗಳವರೂ ತುಂಬ ಯೋಚನೆ ಮಾಡಿದರು. ಸಚಿವ ಸಂಪುಟ ಖರ್ಖಾಸ್ತು ಮಾಡಿದರೆ, ಸಚಿವರು ಸಚಿವಾಲಯವನ್ನು ತೃಜಿಸುವುದಿಲ್ಲ, ಜನತೆಯೇ ಉಕ್ತರ ಹೇಳೀತು ಎಂದು ಮುಂತಾಗಿ ಅವರು ಅನ್ನತೊಡಗಿದರು ಹೀಗೆ ಡಬ್ಬಿ ಹೊಡೆಯುತ್ತಿದ್ದದ್ದು ರಾಜ್ಯಪಾಲರಿಗೆ ಒಳ್ಳೆಯದೇ ಆಯಿತು. ವಿಧಾನ ಸಭೆಯನ್ನು ದಶಂಬರಗಿಂತಲೂ ಮೊದಲು ಕರೆಯಲು ಫಿರಾಕಾಸದ ಮುಖ್ಯ ಕಾರಣ ಸಂಯುಕ್ತ ರಂಗಕ್ಕೆ ಬಹುಮತವಿಲ್ಲವೆಂಬುದೇ ಸರಿ. ಒಂದು ವೇಳೆ ಇದ್ದಿದ್ದರೆ, ವಿಧಾನ ಸಭೆಯನ್ನೆದುರಿಸಲು ಆವಕೆ ಹೆದರ ಬೇಕು? ಇಂತಹ ಅನಿಶ್ಚಿತ ವಾತಾವರಣದಲ್ಲಿ ಸಚಿವ ಸಂಪುಟ ವಿಸರ್ಜಿಸುವುದಲ್ಲದೆ ಬೇರೆ ದಾರಿಯಿಲ್ಲ.

ಸೋಜಿಗವೆಂದರೆ, ರಾಜ್ಯಪಾಲ ಧರ್ಮವೀರರೆ ತಾನು ಕೈಕೊಳ್ಳುವ ಕ್ರಮವನ್ನು ಒಂದೆರಡು ದಿವಸಗಳಲ್ಲಿ ತಿಳಿಯುವುದಾಗಿ ಅಜಯ್‌ರಿಗೆ ಹೇಳಿದ್ದರು. ಈಗ ಮಾಡಿಯೇ ತೋರಿಸಿದರು. ಆದರೆ, ಸಂಯುಕ್ತರಂಗದ ಸಚಿವ ಸಂಪುಟವನ್ನು ವಿಸರ್ಜಿಸುವ ಸುದ್ದಿ ಅತ್ಯಂತ ರಹಸ್ಯವಾಗಿಯೇ ಇತ್ತು ರಾಜ ಭವನದಲ್ಲಿ ಡಾ| ವಿ. ಸಿ. ಘೋಷರು ಮುಖ್ಯ ಮಂತ್ರಿಯಾಗಿ ಪ್ರತಿಜ್ಞಾ ವಿಧಿಯನ್ನು ರಾತ್ರಿ ೮-೧೫ಕ್ಕೆ ಕೈಕೊಂಡದ್ದನ್ನೇ ಪತ್ರಿಕಾ ಪ್ರತಿನಿಧಿಗಳು ಕಂಡರು. ಸುಳಿವು ಫೀಡಿದ ಈ ಕ್ರಮ ಅರಿವಾಗುತಿದ್ದರೆ, ಅಜಯ್—ಬಸುಗಳು ಸುಮ್ಮನಿಳಯುತ್ತಿರಲಿಲ್ಲ. ಶಾಂತಿ—ಸುವ್ಯವಸ್ಥೆಯ ದೃಷ್ಟಿಯಿಂದ ಅಗತ್ಯವಾದ ಮುಂಜಾಗ್ರತೆಗಳನ್ನು ರಾಜ್ಯಪಾಲರು ಕೈಕೊಂಡೇ ತಮ್ಮ ಕ್ರಮ ತೆಗೆದುಕೊಂಡಿದ್ದಾರೆ

ಡಾ| ಘೋಷರು ನವಂಬರ ೨೯ರಂದೇ ವಿಧಾನ ಸಭೆ ಕರೆಯುತ್ತಾರೆ. ಬಹುಮತ ಅವರಿಗಿಲ್ಲವಾದರೆ, ಅವರ ಸಂಪುಟ ಬಿದ್ದು ಹೋಗುತ್ತದೆ; ರಾಷ್ಟ್ರಪತಿ ಆಳ್ವಿಕೆ ಅನಿವಾರ್ಯವಾಗುತ್ತದೆ.

ಂ ಂ ಂ

ಕಾಮನ್‌ವೆಲ್ತ್‌ನ ರಾಣಿ ಬ್ರಿಟನ್ನು ಇತ್ತೀಚಿಗಿನ ಕೆಲವು ವರ್ಷಗಳಿಂದ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿಬಿದ್ದು ವಿಲವಿಲ ಒದ್ದಾಡುತ್ತಿದೆ. ಪ್ರಧಾನಿ ಹರೊಲ್ಡ್ ವಿಲ್ಸನ್ನರು ದೇಶಕ್ಕೆ ದರವನ್ನು ಒಂದೇ ಸವನೆ ಏರಿಸುತ್ತ ಬಂದರು, ನೇತನ ಸ್ತಂಭನಾದಿ ಸ್ತಂಭನ ಕ್ರಮಗಳನ್ನು ಕೈಗೊಂಡರು. ಏನೇನೆಲ್ಲ ಮಾಡಬಹುದಂಗಿತ್ತೋ ಅವೆಲ್ಲವನ

(ಹಕ್ಕನೇ ಪುಟ ನೋಡಿರಿ)

ವೇದವು ಸಾರುತ್ತಿದೆ:

"ಏಳು; ಎಚ್ಚರಗೊಳ್ಳು; ತಿಳಿದವರ ಕಾಲಿಗೆ ಬಿದ್ದು ತಿಳಿದುಕೊಳ್ಳಿ" ಎಂದು. ತಿಳಿದವರನ್ನೆಲ್ಲಿ ಹುಡುಕೋಣವೆಂದು ನೀವು ಗೊಣಗಾಡಬೇಕಾಗಿಲ್ಲ. ತಿಳಿದವ ಹಿರಿಯನೆಂದು ಎಲ್ಲರಿಂದಲೂ ಮನ್ನಣೆಗೊಂಡಿರುವ ಶ್ರೀ ಕೃಷ್ಣನ ಪ್ರತಿನಿಧಿ— ಗೀತೆ. ಶ್ರೀ ಕೃಷ್ಣನು ತನ್ನ ಉಪದೇಶದ ಜೀವಕಳೆಗಳನ್ನೆಲ್ಲ ಗೀತೆಯಲ್ಲಿ ಪ್ರತಿಷ್ಠೆ ಮಾಡಿದ್ದಾನೆ. ಕನ್ನಡ ನಾಡಿನ ಪ್ರತಿಯೊಬ್ಬರೂ—ಹುಡುಗರು, ಹೆಂಗಸರು ಕೂಡ ತಮ್ಮ ಮನುಷ್ಯಜನ್ಮವನ್ನು ಸಾರ್ಥಕ ಮಾಡಿಕೊಳ್ಳುವಂತೆ

ಹೊಸಕೆರೆ ಚಿದಂಬರಯ್ಯನವರು ಬರೆದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ಅದನ್ನು ಎಲ್ಲರೂ ಓದಬೇಕಾಗಿದೆ.

—"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಜೊತ್ತಾಗಿ ಓದಬೇಕು" ಎಂದು ವರಾಹ ಪುರಾಣವೂ ಸಾರುತ್ತಿದೆ.

ಸರ್ವರಿಗೂ ಕೊಳ್ಳಲು ಅನುಕೂಲವಾಗುವಂತೆ 450ಕ್ಕೂ ಮಿಕ್ಕಿದ ಪುಟಗಳುಳ್ಳ ಪಾಕೇಟ್ ಸೈಜಿನ ಈ ಪುಸ್ತಕದ ಬೆಲೆ ಬರೇ ಒಂದೂವರೆ ರೂಪಾಯಿ

2 ರೂ. ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.

ರಿಯಾಯಿತಿ ದರಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ— ಟಿ. ಎನ್. ಕೃಷ್ಣಯ್ಯ ಕೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—೨.

ಪರಿಚಯ

ಪಡುವಣ ತಿರುಪತಿ-

'ಮೂಡು ಬಿಡದ ಮಂಜುನಾಥ'ನ ಹೆಸರು ತುಳುನಾಡಿನಲ್ಲಿ ಮೂಕ್ಕವಲ್ಲ. ಇಡಿಯ ದೇಶದಲ್ಲಿ ಪಡಿದನಿಗುಡುತ್ತಿದೆ. 'ನಂಬಿ ಕೆಟ್ಟವರಿಲ್ಲ'ವೆಂಬ ದಾಸ ವಾಣಿಯನ್ನು ಸತ್ಯ ಸಿದ್ಧಗೊಳಿಸುವ ಕೆಲವೇ ಪುಣ್ಯ ಕ್ಷೇತ್ರಗಳಲ್ಲಿ ಮಂಜುನಾಥನ ವಾಸದಿಂದ ಪಾವನವಾದ ಮಂಜುಳವಾದ ಶ್ರೀ ಧರ್ಮಸ್ಥಳ ಕ್ಷೇತ್ರವೂ ಅಗ್ರಗಣ್ಯ, ಸರ್ವಮಾನ್ಯ.

ಪಶ್ಚಿಮ ಘಟ್ಟಗಳಲ್ಲಿ ನೆಲಸಿರುವ ಪ್ರಕೃತಿ ಮಾತೆಯ ತೋಳತೆಕ್ಕೆಯಲ್ಲಿ ಆದರದಿಂದ ಜೋಲಿತವಾದ ಶ್ರೀಧರ್ಮಸ್ಥಳವಿರುವುದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನಲ್ಲಿ. ಕರ್ನಾಟಕದ ಎಲ್ಲೆಡೆಯಿಂದಲೂ ಇಲ್ಲಿಗೆ ಬರಲು ವಾಹನ ಸೌಕರ್ಯವಿರುವುದರಿಂದಲೇ ಪ್ರತಿ ನಿತ್ಯವೂ ಸಾವಿರಾರು ಯಾತ್ರಿಕರು ಭಗವದ್ದರ್ಶನಾಕಾಂಕ್ಷೆಗಳಾಗಿ ಆಗಮಿಸುತ್ತಾರೆ. ದೇವ ಸಾನ್ನಿಧ್ಯದಿಂದ ಕೃತಾರ್ಥರಾಗುತ್ತಾರೆ. ಶ್ರೀ ಕ್ಷೇತ್ರದಲ್ಲಿ ದೊರೆಯುವ ಆದರಾತಿಥ್ಯದಿಂದ ಪ್ರಸನ್ನರಾಗುತ್ತಾರೆ.

ಜಯಕೀರ್ತಿ ಅಥವಾ ಶಿವರಾತ್ರಿ ಬೆಟ್ಟವೆಂಬ ಹೆಸರಿನ ಬೆಟ್ಟದ ತಲೆಯಲ್ಲಿದ್ದ ನೆಲ್ಲಾಡಿ ಬೀಡು ಸುಮಾರು ಎಂಟುನೂರು ವರ್ಷಗಳಿಗೆ ಮೊದಲು ತುಳುನಾಡಿನ ಏಳ್ನಾಡ ಬೀಡುಗಳಲ್ಲಿ ಒಂದು. ಅಲ್ಲಿನ ಹೆಗ್ಗಡೆ ಬರ್ಮಣ್ಣ ಹೆಗ್ಗಡೆಯವರು ಮತ್ತು ಅಮ್ಮುದೇವಿ ಬಲ್ಲಾಳ್ತಿಯವರಿಗೆ ಸ್ವಪ್ನದಲ್ಲಿ ಧರ್ಮದೇವತೆಗಳು ಪ್ರತ್ಯಕ್ಷರಾದರು. ಅವರ ಬಯಕೆಯಂತೆ ಕಾಳರಾಹು, ಕಳರ್ಕಾಯಿ ಮತ್ತು ಕನ್ಯಾಕುಮಾರಿ ಎಂಬ ಆ ದೇವತೆಗಳಿಗೆ ಗುಡಿಗಳನ್ನು ಕಟ್ಟಿ, ಕಾಲ ಕಾಲಕ್ಕೆ ಪರ್ವ ನಡಾವಳಿಗಳನ್ನು ನಡೆಸಿಕೊಂಡು ಬರಲು ಈ ದಂಪತಿಗಳು ತೊಡಗಿಸಿದರು. ಧರ್ಮದೇವತೆಗಳು ತಮ್ಮ ದೂತನಾದ ಅಣ್ಣಪ್ಪನ ಸಹಾಯದಿಂದ ಎಲ್ಲ ಕಾರ್ಯಕ್ರಮಗಳನ್ನೂ ನಿರ್ಬಾಧಿತವಾಗಿ ನಡೆಸಿಕೊಂಡು ಬರುವ ಆಶ್ವಾಸನೆಯನ್ನೂ ಕೊಟ್ಟರು. ಇದರಿಂದ ಅಂದಿನಿಂದ ತೊಡಗಿದ ಈ ಕ್ಷೇತ್ರ ದಿನದಿನಕ್ಕೆ ಹೆಸರು ಪಡೆಯುತ್ತ ಬಂತು.

ಧರ್ಮದೇವತೆಗಳು ಹೆಗ್ಗಡೆ ದಂಪತಿಗಳಿಗೆ ಭರವಸೆಯಿತ್ತರು—"ನೀವು ಶ್ರದ್ಧೆ-ಭಕ್ತಿಗಳಿಂದ ನಮ್ಮನ್ನು ಆರಾಧಿಸಿಕೊಂಡು ಬಂದರೆ, ನಿಮ್ಮ ಕುಟುಂಬ — ಸಂಪತ್ತು — ಆಯುರಾರೋಗ್ಯಗಳನ್ನು ಅಭಿವೃದ್ಧಿಗೊಳಿಸುವೆವು. ದೇಶ ದೇಶಾಂತರಗಳಲ್ಲಿ ನಮ್ಮ ಪ್ರಭಾವ ಬೀರಿ ಹೇರಳ ಹರಕೆ-ಕಾಣಿಕೆಗಳನ್ನು ತರಿಸಿಕೊಡುವೆವು. ಅದರಿಂದ ಏಕ ಪ್ರಕಾರವಾದ್ದಾದಷ—ಧರ್ಮಗಳು ಸದಾಕಾಲ ನಡೆಯಲಿ ಬೇಕು. ನಿಮ್ಮ ಮೂತನ್ನು ನಿಜ ಮೂಡಿ ಕೊಡುತ್ತೇವೆ; ನಿಮ್ಮ ಬಯಕೆಗಳಿಗೆ ಬೆಂಬಲ ನೀಡುತ್ತೇವೆ. ನಿನ್ನೆಲ್ಲ ಕೆಲಸ ಕಾರ್ಯಗಳಲ್ಲೂ ಜಯವನ್ನು ತಂದು ಕೊಡುತ್ತೇವೆ. ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ, ನಿಮಗೆ ಕೇಡು ಖಂಡಿತವಾಗುವುದು' ಹೆಗ್ಗಡೆ ದಂಪತಿಗಳೂ ಅವರ ಉತ್ತರಾಧಿಕಾರಿಗಳೂ ಧರ್ಮ ದೇವತೆಗಳ ಮೂಲತಂತೆ ಅನನ್ಯ ಭಕ್ತಿ-ಶ್ರದ್ಧೆಗಳಿಂದ ನಡೆದುಕೊಳ್ಳುತ್ತ ಬಂದರು; ದೇವತೆಗಳ ಹೇಳಿಕೆ ನಿಜವಾಗುತ್ತ ಬಂತು. ಇದು ನಡೆದುಬರುತಿರುವುದು ಒಂದೆರಡು ತಲೆಮಾರಿನಿಂದಲ್ಲ. ಎಂಟುನೂರುವರ್ಷಗಳ ಸುದೀರ್ಘ ಅವಧಿಯಲ್ಲೂ ಇದು ಧರ್ಮಸ್ಥಳ ಕ್ಷೇತ್ರದ ಹಿರಿಮೆಯಾಗಿದೆ.



ಶ್ರೀ ಧರ್ಮಸ್ಥಳ ಕ್ಷೇತ್ರ

ನಡೆಯುವ ದಾನಧರ್ಮಾದಿಗಳಿಂದ "ಕುಡ ಮ"ಎಂಬ ಹೆಸರು ದಿನದಿನಕ್ಕೆ ಪ್ರಸಿದ್ಧ ವಾಗಿದೆ. ಧರ್ಮ ದೇವತೆಗಳಿಂದಾಗಿ ಮೊದಲೇಮೆರೆಯತೊಡಗಿದ್ದ ಶ್ರೀಕ್ಷೇತ್ರದ ಕೀರ್ತಿಕೆ ಮಂಜುನಾಥನ ಆವಾಸದಿಂದ ನವಿಲುಗರಿಯೇರಿಸಿದಂತಾಯಿತು. ಇಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಹೆಸರೂ ಕೀರ್ತಿಯೂ ದಿಗ್ದೇಶಗಳಲ್ಲಿ ಪಸರಿಸಿದೆ.

ಶ್ರೀ ಧರ್ಮಸ್ಥಳ ಧಾರ್ಮಿಕ ಶ್ರದ್ಧೆಗೆ ಮೂತ್ರ ಪ್ರಸಿದ್ಧವಲ್ಲ. ದಾನ—ಧರ್ಮಗಳೂ ಮಿತ ಪ್ರಮಾಣಕ್ಕೆ ಪರಿಮಿತವಾಗಿ ಉಳಿಯಲಿಲ್ಲ. ಪ್ರತಿ ಯಾತ್ರಾರ್ಥಿಯೂ ಅಲ್ಲಿ ಮೂರು ದಿನಗಳ ವರೆಗೆ ಉಚಿತ ವಸತಿ—ಅಶನಗಳನ್ನು ಪಡೆಯುತ್ತಾನೆ. ಸ್ವತಃ ಅಡಿಗೆ ಮಾಡಿಕೊಳ್ಳುವವರಿಗೂ ಪ್ರತ್ಯೇಕವಾದ ವ್ಯವಸ್ಥೆಯೂ ಇದೆ.

ಶ್ರೀ ದೇವಾಲಯದ ಆಡಳಿತಾಧಿಕಾರವು ವಂಶವಾರಂಪರ್ಯವಾಗಿ ಬರುತ್ತದೆ. ಈ ಅಧಿಕಾರವನ್ನು ಧರ್ಮಾಧಿಕಾರಿಯೆನ್ನುತ್ತಾರೆ. ಶ್ರೀ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿಯಾಗಿ ಅಧಿಕಾರಕ್ಕೆ ಬಂದವರು ಸ್ವಸುಖವನ್ನು ಕಡೆಕಾಣಿಸಿ, ಭಗವದ್ಸೇವೆಯಲ್ಲೇ ಸುಖತ್ತಂಡವರು. ಶ್ರೀ ಕ್ಷೇತ್ರದ ಅಭಿವೃದ್ಧಿಗಾಗಿ ಒಂದಲ್ಲ ನೂರು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸಿದವರು. ಧರ್ಮೋತ್ಥಾನದಶ್ರ ಮೂತ್ರ ಗವಾನಹರಿಸಲಿ, ಕಲೆ, ಸಾಹಿತ್ಯ, ಸಂಗೀತ ಮೊದಲಾದ ಮಾನವ ಜೀವನದ ಪ್ರಮುಖಾಂಕದಳಿತ್ತಪೂ ದೃಷ್ಟಿ ಹರಿಸಿ ಉತ್ಕರ್ಷಂತ ಉದಾರತೆಯಿಂದ ನಡೆದುಕೊಂಡವರು. ಇತ್ತೀಚೆಗಿನ ಧರ್ಮಾಧಿಕಾರಿಗಳಲ್ಲಿ ದಿವಂಗತ ಚಂದಯ್ಯ ಹೆಗ್ಗಡೆ, ದಿವಂಗತ ಮಂಜಯ್ಯ ಹೆಗ್ಗಡೆ ಮತ್ತು ಇಂದಿನ ಧರ್ಮಾಧಿಕಾರಿಗಳಾಗಿರುವ ಶ್ರೀ ರತ್ನವರ್ಮ ಹೆಗ್ಗಡೆಯವರ ಹೆಸರು ಉಲ್ಲೇಖನೀಯವಿದೆ.

ಶ್ರೀ ಚಂದಯ್ಯ ಹೆಗ್ಗಡೆಯವರು ಇಂದಿನ ಧರ್ಮಾಧಿಕಾರಿಯವರ ತೀರ್ಥರೂಪರು. ದೇವರಲ್ಲೂ ಅತಿಥಿ ದೇವರಲ್ಲೂ ಇವರ ವಿಶ್ವಾಸ ಅಚಲ. ಇವರ ಆಡಳಿತಾವಧಿಯಲ್ಲೇ ಅತಿಥಿಗೃಹಗಳು ಬೆಳೆದು ತೊಡಗಿದುವು. ಪ್ರಯತ್ನ ಪೂರ್ವಕವಾಗಿ ನಳ್ಳಿ ಫೀನಿನ ವ್ಯವಸ್ಥೆಯನ್ನೂ ಇವರು ತಂದರು, ದೈವ ಮಾಡಿಗಳನ್ನು ಪುನಾರಂಭಿಸಿದರು. ಶ್ರೀ ಮಂಜಯ್ಯ ಹೆಗ್ಗಡೆಯವರು ಯಾತ್ರಿಕರಿಗೆ ಸೊದಲು ದೂರೆಯುತ್ತಿದ್ದ ಪಡಿಯಕ್ಕೆಯ ಬದಲು ಭೋಜನವನ್ನೂ ಏರ್ಪಡಿಸಿದರು. ಧರ್ಮ-ಕಲೆ-ವಿದ್ಯಾಭ್ಯಾಸಗಳಿಗಾಗಿ ಅವಶ್ಯಕ ಹಣವೊದಗಿಸಿದರು. ನೇತ್ರಾವತಿ ನದಿಗೊಂದು ಸೇತುವೆಯನ್ನು ಕಟ್ಟಿಸಿ ಯಾತ್ರಿಕರಿಗಾಗುತಿದ್ದ ಅನನುಕೂಲವನ್ನು ನಿವಾರಿಸಿದರು.

ಧರ್ಮಸ್ಥಳ ಕ್ಷೇತ್ರದ ಲಕ್ಷದೀಪೋತ್ಸವ ಹೆಸರುವಾಸಿಯಾದುದು. ಈ ವೇಳೆಲಕ್ಷಾಂತರ ಭಕ್ತರು ಬಂದು ಸೇರುತ್ತಾರೆ. ಧರ್ಮ ಸಾಹಿತ್ಯ ಕಲೆಗಳ ಸಾಮೂಹ್ಯ ಲಾಭವು ಈ ಭಕ್ತ ಸಮುದಾಯಕ್ಕೆ ದೊರೆಯುವೆಂಬ ಅಭಿಲಾಷೆಯಿಂದ ಶ್ರೀ ಹೆಗ್ಗಡೆಯವರು ಈ ವೇಳೆಯಲ್ಲೇ ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನಗಳನ್ನು ನಡೆಸಲು ಆರಂಭಿಸಿದರು. ಸಮ್ಮೇಳನದ ವೇದಿಕೆ, ಸಂಗೀತಾದಿ ಲಲಿತ ಕಲೆಗಳ ಪ್ರದರ್ಶನಗಳನ್ನೂ ಏರ್ಪಡಿಸ ತೊಡಗಿದರು. ಇವೆಲ್ಲ ಕಾರ್ಯಕ್ರಮಗಳಲ್ಲಿ ವಿದ್ವಾಂಸರಾದ ಧಾರ್ಮಿಕ ತತ್ವ ವಿದರೂ, ಸಾಹಿತ್ಯಿಕರೂ ಕಲಾವಿಜ್ಞರೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಬಳಿಯಿರುವ ಜ್ಞಾನ ಗಂಗೆಯನ್ನು ನೆರೆದ ಭಕ್ತ ಸಮುದಾಯಕ್ಕೆ ಪೂರೈಸ ತೊಡಗಿದರು. ಈ ಸಂಪ್ರದಾಯ ಅಭಿವೃದ್ಧಿ ಪ್ರಾರಂಭವಾಗಿದ್ದು ಇದು ವರ್ಷ ವರ್ಷಕ್ಕೂ ಬೆಳೆದು ಬರುತ್ತಿದೆ. (ಈ ವರ್ಷದ ಕಾರ್ಯ

ಶ್ರೀ ಚಂದ್ರನಾಥ ಸ್ವಾಮಿಯ ಬಸದಿ



ಶ್ರೀ ಕುಮಾರಸ್ವಾಮಿಯ ಗುಡಿ

ಶ್ರೀ ಧರ್ಮಸ್ಥಳ

ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿ
ಶ್ರೀ ರತ್ನವರ್ಮ ಹೆಗ್ಗಡೆ

ಕ್ರಮಗಳ ವಿವರ ಕಳೆದಸಂಚಿಕೆಯಲ್ಲಿ ಪ್ರಕಟವಾಗಿದೆ).

ಇಂದಿನ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರು ದೂರದರ್ಶಿ. ಇವರು ಹಿಂದಿನ ಕಟ್ಟುಕಟ್ಟಲೆಗಳನ್ನು ಅಧಾದಿತವಾಗಿ ನಡೆಸಿಕೊಂಡು ಬರುವುದರೊಡನೆ ಹಲವು ಹೊಸ ಕ್ರಮಗಳನ್ನೂ ಕೈಗೊಂಡಿದ್ದಾರೆ. ಯಾತ್ರಾರ್ಥಿಗಳ ಉಪಯೋಗಕ್ಕೆ ಛತ್ರಗಳ ಬೃಹತ್ ಪಂಕ್ತಿ ನಿರ್ಮಾಣವೊಂದು ಇವರ ಮಹಾಸಾಧನೆ. ಶ್ರೀ ಕ್ಷೇತ್ರದ ಪುನಾರಚನೆ, ಶಿಕ್ಷಣ ರಂಗದಲ್ಲಿ ಕ್ರಾಂತಿಯೆಂಬಂತೆ ಮಲೆನಾಡಿನಲ್ಲಿರುವ ಶ್ರೀಕ್ಷೇತ್ರದಲ್ಲೂ ವಿಶ್ವವಿದ್ಯಾಲಯ ಶಿಕ್ಷಣದ ಸೌಲಭ್ಯ ಇವುಗಳು ಕೆಲವು ಮಾತ್ರ. ಭಗವಂತನು ಒಳ್ಳೆಯ ಕಾರ್ಯಗಳಿಗೆಂದೂ ವಿಘ್ನ ತಂದೊಡ್ಡುವುದಿಲ್ಲ ಎಂಬ ಅವರ ಅಚಲ ವಿಶ್ವಾಸ ಇದುವರೆಗೂ ಸತ್ಯವಾಗಿ ಪರಿಣಮಿಸಿದೆ; ಮುಂದೆಯೂ ಸತ್ಯವಾಗುವುದು.

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಹಲವಾರು ಪ್ರೇಕ್ಷಣೀಯ ಸ್ಥಳಗಳಿವೆ. ನೆಲ್ಯಾಡಿ ಬೀಡು, ವಸಂತ ಮಹಲು, ಚಂದ್ರನಾಥ ಬಸದಿ, ಅಣ್ಣಪ್ಪನ ಗುಡಿ—ಇವು ಕೆಲವು ಮಾತ್ರ. ಸದ್ಯದಲ್ಲೇ ಶ್ರೀ ಬಾಹುಬಲಿಯ ವಿಗ್ರಹವೊಂದು ಇಲ್ಲಿ ಸ್ಥಾಪನೆಯಾಗಲಿದ್ದು, ಇದು ಜಿಲ್ಲೆಯ ಮೂರನೆಯ ಬಾಹುಬಲಿ ಮೂರ್ತಿಯೆನಿಸುವುದು. ಮೂರ್ತಿ ಕೆತ್ತನೆಯ ಕಾರ್ಯ ಈಗಾಗಲೇ ಆರಂಭವಾಗಿದ್ದು ಅಲ್ಪಾವಧಿಯಲ್ಲೇ ನುಗಿಯುವ ನಿರೀಕ್ಷೆಯಿದೆ. ಶ್ರೀ ಕ್ಷೇತ್ರದ ಬಳಿ ಹರಿಯುವ ನೇತ್ರಾವತಿ ಜಿಲ್ಲೆಯ ಪವಿತ್ರ ನದಿ. ಉಜಿರೆಯಲ್ಲಿನ ಸಿದ್ಧವನ ಗುರುಕುಲ, ಇಲ್ಲಿನ ಹಾಯರ್ ಸೆಕೆಂಡರಿ ಶಾಲೆ, ಉಜಿರೆ ಮತ್ತು ಧರ್ಮಸ್ಥಳದ ನಡುವೆ ಬೆಳೆದು ಬರುತ್ತಿರುವ ಶ್ರೀ ಮಂಜುನಾಥೇಶ್ವರ ಕಾಲೇಜು ಇನ್ನು ಕೆಲವು.

ಯಾತ್ರಿಕರಿಗಾಗಿ ನಿರ್ಮಿತವಾದ ಛತ್ರ

ಹೀಗೆ ಧಾರ್ಮಿಕ-ಶೈಕ್ಷಣಿಕವಾಗಿ ಬೆಳೆದು ಬರುತ್ತಿರುವ ಶ್ರೀ ಧರ್ಮಸ್ಥಳ ಕ್ಷೇತ್ರ—ಧಾರಣೀಯ ಪರಂಪರೆಯಲ್ಲೊಂದು ಮೈಲುಗಲ್ಲು. ನನ್ನು ದೇಶದಲ್ಲಿ ಧಾರ್ಮಿಕ ಸಂಘೆ—ಸಂಸ್ಥೆಗಳಿಗೂ ಗುಡಿ ದೇಗುಲಗಳಿಗೂ ಮಠ— ಸಂನ್ಯಾಸಿಗಳಿಗೂ ಕೊರತೆಯಿಲ್ಲ. ಇವುಗಳಲ್ಲಿ ಸಂಪತ್ತಿನಿಂದ ತುಂಬಿ ತುಳುಕಾಡುವಂಥವೂ ಹಲವಿವೆ. ಇವು ತಮ್ಮ ಸಂಪತ್ತನ್ನು ಹೇಗೆ ಜನೋಪಯೋಗಿಯೂಗಿ, ದೇಶೋಪಯೋಗಿಯೂಗಿ ಬಳಸಬಹುದು, ದೇಶದ ಸರ್ವತೋಮುಖ ಪುನರಚನೆಯಲ್ಲಿ ಹೇಗೆ ಸಹಭಾಗಿಯೂಗ ಬಹುದು ಎಂಬುದಕ್ಕೆ ತಿರುಪತಿ ಹೂರ್ವ ಸಮುದ್ರದಕ್ಷಿಣ ಉದಾಹರಣೆಯೆನಿಸಿದರೆ, ಶ್ರೀ ಧರ್ಮಸ್ಥಳ ಪಡು ಕರಾವಳಿಯ ಮೊದಲು.

ಸೌತ್ ಕೆನರಾ ಚೇಂಬರ್ ಆಫ್ ಅಗ್ರಿಕಲ್ಚರ್

ಇದರ ಮೊದಲಿಂಗ್ ಕಮಿಟಿಯ ಸಭೆಯು ಇದೇ ತಾ. 19ರಂದು ಮಂಗಳೂರಲ್ಲಿ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಜಿಲ್ಲೆಯ ರೈತರಿಗೆ ಆವಶ್ಯಕವಸ್ತುಗಳು ಉಪಕರಣಗಳು ಉತ್ತಮ ತಳಿಯ ಬೀಜಗಳು ತಾಗೂ ರಾಸಾಯನಿಕ ಗೊಬ್ಬರಗಳನ್ನು ಚಿಲ್ಲರೆಯಾಗಿ ವಿಕ್ರಯಿಸುವ ವ್ಯವಸ್ಥೆಗಳನ್ನು ಉತ್ತಮ ಬಾತಿಯ ಕಸಿ ಗಿಡಗಳು ತೆಂಗು, ಅಡಿಕೆ ಹಾಗೂ ಇನ್ನಿತರ ಫಲವಸ್ತುಗಳ ಗಿಡಗಳನ್ನು ಒದಗಿಸುವ ವಿಚಾರವನ್ನು ಚೇಂಬರಿನ ಮತಿಯಿಂದ ಕೈಗೊಳ್ಳುವುದೆಂದು ನಿರ್ಣಯಿಸಲಾಯಿತು ಈ ಸ್ಕೀಮಿನ ಕೂಲಂಕುಶ ವಿಚಾರಗಳನ್ನೊಳಗೊಂಡ ವರದಿಯೊಂದನ್ನು ತಯಾರಿಸಿ ಚೇಂಬರಿನ ಮುಂದಿನ ಸಿಟಿಂಗಿನಲ್ಲಿ ಮಂಡಿಸುವರೇ ಕಾರ್ಯದರ್ಶಿ ಶ್ರೀ ಕೆ. ಸಿ. ಶೆಟ್ಟಿ ಹಾಗೂ ಶ್ರೀ ಸಿ. ಅಚ್ಚುತ್ತ ಪ್ರಭುಗಳನ್ನೊಳಗೊಂಡ ಉಪಸಮಿತಿಯೊಂದನ್ನು ನೇಮಿಸಲಾಯಿತು.

ಪ್ರತಿ ತಿಂಗಳ ಮೊದಲನೇ ಬುಧವಾರದಂದು ಕೃಷಿಕರ ಸಭೆಯನ್ನು ಚೇಂಬರಿನ ಆಫೀಸಿನಲ್ಲಿ ಕರೆಯುವುದೆಂದೂ ಅದಕ್ಕೆ ಜಿಲ್ಲೆಯ ಡಿಸ್ಟ್ರಿಕ್ಟ್ ಕಮಿಶನರವರನ್ನೂ ಇತರ ರವಿನ್ಯೂ ವಿಷ್ಯಕ್ಟಿಕ್ಟ್ರಿ ಸಣ್ಣ ನೀರಾವರಿ ಸಬಕಾರಿ ಕೃಷಿ ಬಾಗೂ ಬೆಟಿಂಗಿನ ಆಲಾವಿಯ ಅಧಿಕಾರಿಗಳನ್ನು ಆಮಂತ್ರಿಸುವುದೆಂದೂ ಈ ಸಭೆಯಲ್ಲಿ ರೈತರು ತಮ್ಮ ಸಂಕಷ್ಟಗಳನ್ನು ನೇರವಾಗಿ ಅಧಿಕಾರಿಗಳ ಮುಂದಿಟ್ಟು ತಕ್ಕ ಪರಿಹಾರಗಳನ್ನು ಕೇಳುವಂತೆ ವಿಚಾರಿಸು ಮಾಡುವುದಾಗಿಯೂ ನಿರ್ಣಯಿಸಲಾಯಿತು.

ಅವಿಧಾರಣೆಯನ್ನು ಸರಿಯಾಲು ಸರಕಾರಕ್ಕೆ ಈ ವರೆಗೆ ಎಷ್ಟು ಒತ್ತಡ ಹೇರಿದರೂ ಪ್ರಯೋಜನವಾಗಿಯಾಗದಿರುವುದರಿಂದ ಶಿವಮೊಗ್ಗ ಜಾನೂ ಇತರ ಜಿಲ್ಲೆಗಳ ಕೃಷಿ ಚೇಂಬರ್ ಗಳ ಅಧಿಕಾರಗಳನ್ನು ಬರ ಮಾಡಿಸಿಕೊಂಡು ಸಾಧ್ಯವಾದಷ್ಟು ಸಮಯ ನಡೆಸಿ ರಾಜ್ಯವ್ಯಾಪ್ತಿಯ ಏಕ ರೂಪವಾದ ಮುಂದಿನ ಕ್ರಮಗಳನ್ನು ಕೈಗೊಳ್ಳುವೆದೆಂದೂ ನಿರ್ಣಯಿಸಲಾಯಿತು.

ಹೊಸ ಪ್ರಕಟಣೆಗಳು

೧ "ಕವಿರಾಜ ಕಂಠೀರವ" ವಿರಚಿತ
ಆದಿತ್ಯ ಪುರಾಣ (ಸಂಪುಟ-೧)
ಸಂಪಾದಕರು: ಶ್ರೀ ಕೆ. ವೆಂಕಟರಾಯ ಭಾರ್ಕ.
ಪ್ರಕಾಶನ: ವಿಜಯ ಸಾಹಿತ್ಯ ಮಾಲೆ, ಸುರತ್ಕಲ್ಲು (ದ. ಕ.)
ಪುಟಗಳು: ೧೨೮, ಬೆಲೆ ರೂ. ೨-೫೦

೨ ಭಗವತಿ ಭಿಕ್ಷಾಂದೇಹಿ
(ಕವನ ಸಂಕಲನ)
ಕವಿ: ಶ್ರೀ ಪುಚ್ಚೆಮೈಲು ಭಾಸ್ಕರ ಭಂಡಾರಿ
ಪ್ರಕಾಶನ: ಸಾಹಿತ್ಯಾಂಜಲಿ ಗ್ರಂಥಮಾಲೆ ಕೋಟೆಕಾರು, ಮಂಗಳೂರು (ದ. ಕ.)
ಪುಟಗಳು: ೪೮, ಬೆಲೆ ರೂ. ೧. ೦೦

೩ ಪಂಚಾಂಗದಾಯಿ-ದೀಪಾವಳಿ ಸಂಚಿಕೆ
ಸಂಪಾದಕರು: ಶ್ರೀ ಬ. ವಾ. ಜಾಳಾ
ಪ್ರಕಾಶನ: ಶ್ರೀ ವೆಂಕಟೇಶ್ವರ ಪಬ್ಲಿಕೇಷನ್ಸ್ ಆಲ್ಕೆ, ಮಂಗಳೂರು-೨ (ದ. ಕ.)
ಪುಟಗಳು: ೧೩೮, ಬೆಲೆ: ರೂ. ೧.೦೦

ವಿಮರ್ಶೆ ಯತ್ನಾವಕಾಶ.

ಶ್ರೀ ಕೆ.ಕೆ.ಶೆಟ್ಟಿ, ಎಂ.ಎಲ್.ಸಿ. ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇನರು	0=25
ವೈಭವಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ನನ್ನಾತ್ಮಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಶುಭಲವ	0=50
ಜಿತ್ಕಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.



ಶ್ರೀ ಮಂಜುನಾಥ ಸ್ವಾಮಿ

ಅನ್ಯ ಹುಲಿಗೆಳ ಖಿಡ್ಡಾ

(ಏಳನೇ ಪುಟದಿಂದ)

ನ್ನೂ ಮಾಡಿದರು. ಆದರೂ ಎದ್ದು ನಿಲ್ಲಲಾಗದೆ ಸ್ವಲಿಂಗ್‌ನ ಅಪಮೌಲ್ಯವನ್ನು ಅನಿವಾರ್ಯವಾಗಿ ಕೈಗೊಳ್ಳಲೇ ಬೇಕಾಯಿತು. ಇದರಿಂದ ಬ್ರಿಟನ್ನಿಗೆ ಅಲ್ಪಾವಧಿಕ ವಸ್ತುಗಳ ಬೆಲೆ ಕಡಿಮೆಯಾಗಿ ವ್ಯಾಪಾರವು ಹೆಚ್ಚುವುದು ಎಂಬುದು ನಿರೀಕ್ಷೆ. ಇದು ಸುಳ್ಳಾಗದು. ಆದರೆ, ಬ್ರಿಟನ್ನಿಗೆ ಬರುವ ವಸ್ತುಗಳು, ಮುಖ್ಯವಾಗಿ ಆಹಾರ ಸಾಮಗ್ರಿಗಳು, ತುಟ್ಟಿಯಾಗುತ್ತವೆ. ಹೀಗಾಗಿ ಪರಿಣಾಮ ಸಫಲವಾದೀತೋ ಇಲ್ಲವೋ ಎಂಬುದಿನ್ನೂ ಪ್ರಶ್ನಾರ್ಥಕವಿದೆ.

ಸ್ವಲಿಂಗ್ಸ್ಟೇ ಜಾಗತಿಕ ಮೂರುಕಟ್ಟೆಯಲ್ಲಿ ಹೊಂದಿಕೊಂಡಿರುವ ಫ್ರಾಂಕಿನ್ಫ್ರಾನ್ ಬಿಲೋನ್ ಇತ್ಯಾದಿ ಕೆಲವು ದೇಶಗಳು ಸ್ವಲಿಂಗ್‌ನ ಅಪಮೌಲ್ಯವನ್ನಾಧರಿಸಿ ತಮ್ಮ ರೂಪಾಯಿಯ ಮೌಲ್ಯವನ್ನು ಕೆಳಕ್ಕೆ ಇಳಿಸಿಕೊಳ್ಳಬೇಕಾಗಬಹುದು. ಆದರೆ ಧಾರಣೆಯ ಡಾಲರನ್ನೇ ಅವಲಂಬಿಸಿದೆ. ಹಾಗಾಗಿ ಮತ್ತೆ ಅಪಮೌಲ್ಯ ಮಾಡಿಕೊಳ್ಳುವ ಅಗತ್ಯವಿಲ್ಲ. ಭಾರತವು ಕಳೆದ ವರ್ಷವೇ ರೂಪಾಯಿಯ ಅಪಮೌಲ್ಯವನ್ನು ಮಾಡಿಕೊಂಡಿದೆ; ಆದರೆ ಅದರಿಂದ ನಿರೀಕ್ಷಿಸಲಾದ ಆರ್ಥಿಕ ಲಾಭವೇನೂ ಆಗದ್ದಕ್ಕೆ ಪ್ರಧಾನಿ ಶ್ರೀಮತಿ ಗಾಂಧಿಯವರಿಗೂ ಅವರ ಸಂಪುಟಕ್ಕೂ ಮಹಾ ನಿರಾಶೆಯನ್ನೇ ಬಳಿದಿದೆ. ಇದೀಗ ಸ್ವಲಿಂಗ್ ಅಪಮೌಲ್ಯದಿಂದ ಈ ನಷ್ಟ ತುಸುವಾದರೂ ತುಂಬಿ ಬಂದೀತು. ಇದು ಅರಿಯ ಆಶಯು ಮಾತ್ರ.

೦ ೦ ೦

ಪ್ರಧಾನಿ ಇಂದಿರಾ ಗಾಂಧಿಯವರು ತಮ್ಮ ಮಂತ್ರಿ ಮಂಡಳವನ್ನು ಹುನಾರಚಿಸುವರು—ಎಂಬ ಸುದ್ದಿ ಹರಡಿ ತಿಂಗಳು ಏದಾರು ಕಳೆದರೂ ಯಾವ ಮಹತ್ವದ ಘಟನೆಯೂ ಇಡೆಯಲಿಲ್ಲ. ಇತ್ತೀಚೆಗೆ ಕೆಲವು ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿತ್ತು; ಆದರೆ, ಇದರಲ್ಲಿ ಹೇಳಿಕೊಳ್ಳಬಹುದಾದ ಅಂಶವಿಲ್ಲ.

ಕೆಲವು ಸುದ್ದಿಗಳು ನಿರಾಧಾರವಾಗಿಯೇ ಸೃಷ್ಟಿಸಲ್ಪಡುತ್ತವೆ; ಇನ್ನು ಕೆಲವು ಯಾವ ಪೂರ್ವ ಸೂಚನೆಯೂ ಇಲ್ಲದೆ ತಾವಾಗಿಯೇ ನಡೆದು ಹೋಗುತ್ತವೆ. ಪಶ್ಚಿಮ ಬಂಗಾಳದ ಸಚಿವ ಸಂಪುಟವನ್ನು ವಿಸರ್ಜಿಸುವ ಬಗ್ಗೆ ಪಾಪ, ಸ್ವಯಂ ಮುಖ್ಯ ಮಂತ್ರಿಯವರಿಗೇನೇ ತಿಳಿದಿರಲಿಲ್ಲ!—ಹುಮ್ಮಸ್ಸಿನಿದ್ದಿರಬಹುದೆನ್ನಿ. ಗಾಂಧಿ ಸಂಪುಟದ ಬಗ್ಗೆ ಈಗ ವ್ಯಕ್ತವಾಗುವ ಅಭಿಪ್ರಾಯಕ್ಕೆ ರಾಜಕೀಯ ಬೆಲೆ ಮಾತ್ರ ಇದ್ದೇ ಇದೆಯೆನ್ನಿ ಬಹುದು.

ಐವರಲ್ಲಿ ಒಬ್ಬ ಅಥವಾ ಏಳ್ವರಲ್ಲಿ ಒಬ್ಬ ಎಂಬ ದಾಮಾಶಯದಂತೆ ಸುಮಾರು ೬೫ ಸಚಿವರನ್ನು ನೇಮಿಸಿಕೊಳ್ಳ ಬೇಕು. ಕೆಲಸ ಮಾಡಲಾಗದವರನ್ನು ನಿರ್ದಾಕ್ಷಿಣ್ಯವಾಗಿ ಕಿತ್ತೆಸೆದು ಸಮರ್ಥರನ್ನು ನೇಮಿಸಬೇಕು ಎಂದು ಮುಂತಾಗಿ ಒಂದು ವಾದ. ಸಚಿವ ಸದಸ್ಯರ ಸಂಖ್ಯೆ ಕಡಮೆಯಾಗಬೇಕು; ದೇಶದ ಇಂದಿನ ಪರಿಸ್ಥಿತಿಯನ್ನು ಅರಿತುಕೊಂಡು, ದುಡಿಯ ಬಲ್ಲ ಉತ್ಸಾಹಿಗಳೂ ಸಮರ್ಥರೂ ಆಗಿರಬೇಕು—ಇದು ಇನ್ನೊಂದು ವಾದ. ಪ್ರಧಾನಿಗಳ ಕೈಯನ್ನು ಬಲಗೊಳಿಸುವಂತಹ, ಪಕ್ಷದ ಮೇಲಿ ಪ್ರಭಾವ ಬೀರ ಬಲ್ಲಂತಹ ಸಮರ್ಥರೂ ಕರ್ತೃತ್ವಶಾಲಿಗಳೂ ಸಂಪುಟದಲ್ಲಿರಬೇಕು—ಇದೂ ಒಂದು ಅಭಿಪ್ರಾಯ.

ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ದಶಂಬರ ಮಧ್ಯಾವಧಿ ಸುಮ್ಮಲಿ ನಡೆಯುತ್ತದೆ. ಅದರ ನಂತರ, ಅಧ್ಯಕ್ಷರು ಯಾರೆಂದು ತ್ತಾರೆ ಎಂದು ತಿಳಿದು ಸಚಿವ ಸಂಪುಟದ ಪುನರ್ಘಟನೆಯಾಗುತ್ತದೆ ಎಂದು ಸುದ್ದಿಯಿದೆ. ಆದರೆ, ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಯೋಗ್ಯ ಅಭ್ಯರ್ಥಿಯನ್ನು ಆರಿಸುವ ಹೊಣೆಗಾರಿಕೆ ಕಾಮರಾಜ — ಇಂದಿರಾ ಗಾಂಧಿಯವರ ಮೇಲೆಯೇ ಬಿದ್ದಿದ್ದು, ಇದನ್ನವರು ಇಷ್ಟರಲ್ಲೇ ನಿರ್ವಹಿಸಿದ್ದಾರೆ. ರಾಜಕೀಯ ಊಹಾಪೋಹಗಳೆಲ್ಲವೂ ತಲೆಕೆಳಗು ವ್ಯಾಪಾರವಾಗುವುದೂ ಉಂಟು.

ನಮ್ಮಲ್ಲಿ ಆಸುರೀ ಶಕ್ತಿ ವ್ಯಕ್ತಿಗಳು!

ಲೋಕ ಸೇವಾ ವೃಂದದಲ್ಲಿ ವಿದ್ಯಾ ಮಂತ್ರಿಗಳ ಭಾಷಣ

"ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ನೈತಿಕ ಶಿಕ್ಷಣಕ್ಕೆ ಸ್ಥಾನವಿಲ್ಲ. ನೈತಿಕ ವಿಚಾರಗಳು ಶಿಕ್ಷಣ ಕ್ಷೇತ್ರದಿಂದ ಬುರಿಯೊಗಿವೆ. ಶಿಕ್ಷಣವು ನಮ್ಮ ಇಂದಿನ ಜೀವನವನ್ನು ಸುಖಕರವಾಗಿ ಮಾಡುವುದರ ಜತೆಗೆ ಪಾರಮಾರ್ಥಿಕ ಜೀವನವನ್ನೂ ಉತ್ತಮಗೊಳಿಸುವಂತಿರಬೇಕು" ಎಂದು ಮೈಸೂರಿನ ಮಾನ್ಯ ವಿದ್ಯಾ ಸಚಿವರಾದ ಶ್ರೀ ಶಂಕರೇ ಗೌಡರು ಲೋಕಸೇವಾ ವೃಂದದಲ್ಲಿ ಲೋಕಸೇವಾ ಹೈಯರ್ ಸೆಕಂಡರಿ ಶಾಲೆಯ ನೂತನ 'ನಿಜ್ಲಿಂಗಪ್ಪ ಭವನ'ದ ಶಂಕುಸ್ಥಾಪನಾ ಸಾಂದರ್ಭದಲ್ಲಿ ನುಡಿದರು.

ಅವರು ಮುಂದುವರಿಸುತ್ತಾ, "ನಾವು ನಾಗರೀಕರೆಂದು ಹೇಳಿಕೊಳ್ಳುತ್ತೇವೆ. ಆದರೆ, ಸಾಸಂಸ್ಕೃತರಾಗಿಲ್ಲ. ನಾಗರೀಕತೆ ಬೇರೆ; ಸಂಸ್ಕೃತಿ ಬೇರೆ. ನಾಗರೀಕತೆ ನಮ್ಮ ಮನೆಯಾಗೂ ಊಟೋಪಚಾರಗಳಲ್ಲಿ ಮನೆ, ಹಾಗೂ ಅಸಾ—ಲಾಸಾಗಳನ್ನು ಇಟ್ಟು ಕೊಳ್ಳುವುದರಲ್ಲಿ ವ್ಯಕ್ತವಾಗುತ್ತದೆ. ಸಂಸ್ಕೃತಿಯು ನಮ್ಮ ನಡತೆ ಹಾಗೂ ಯೋಗ್ಯತೆಯನ್ನು ಎತ್ತಿ ತೋರಿಸುತ್ತದೆ. ವಿಜ್ಞಾನದಲ್ಲಿ ಜನರು ಬಹಳ ಮುಂದುವರಿದಿದ್ದಾರೆ. ಚಂದ್ರನ ಮೇಲೆಯೂ ಹೋಗುವ ಯತ್ನದಲ್ಲಿದ್ದಾರೆ. ಆದರೆ ಜನಜೀವನ ಸಾಮಾನ್ಯ ಮಟ್ಟದಲ್ಲಿ ಕೆಳಕ್ಕಿಳಿಯುತ್ತಿದೆ. ಜೈಜ್ಞಾನಿಕ ಸಾಧನೆಗಳು ನಮ್ಮಲ್ಲಿ ಸಾಕಷ್ಟು ಮುಂದುವರಿದರೂ ನಮ್ಮ ಜೀವನ ಹಿಂದು ಸುಖಕರವಾಗಿಲ್ಲ. ಆಸುರೀ ಶಕ್ತಿಗಳೇ ನಮ್ಮಲ್ಲಿ ಮನೆ ಮಾಡಿವೆ ಭ್ರಾತೃ ಭಾವವು ನಮ್ಮಿಂದ ದೂರವಾಗಿದೆ. ಅಂಬಿಡ್ ವರ್ಗಗಳ ಪೀಡೆ ಅಜ್ಞಾನದಾಗೂರೋಗರುಜಿನಗಳಕಾಟ ಅಧಿಕವಾಗಿದೆ. ಇಂದಿನ ಪ್ರಪಂಚವು ಒಂದು ಸ್ಫೋಟಕ ಸ್ಥಿತಿಯಲ್ಲಿದೆ; ಸ್ಫೋಟಕೋರ್ವನೂ ಶಾಂತಿಯನ್ನು ಬಯಸುತ್ತಿದ್ದರೂ, ಒಂದೇ ಸವನೆ ಯುದ್ಧ ಪತ್ರಿಕಾಂಡಗಳು ನಡೆಯುತ್ತಲೇ ಇವೆ. ಗಾಂಧೀಜಿಯವರು ಹೋಕೊಟ್ಟ ಮಾರ್ಗವೇ ಇದಕ್ಕೆ ಏಕಮಾತ್ರ ಪರಿಹಾರವೆಂದು ಅನೇಕ ರಾಷ್ಟ್ರಗಳಿಗೆ ಮನವರಿಕೆಯಾಗಿದೆ.

"ಇಂದಿನ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಜಾಗೃತಿ ಕಂಡು ಬರುವುದಿಲ್ಲ. ಇದು ಅಪಾಯಕಾರೀ ಚಿಹ್ನೆ. ಇದಕ್ಕೆ ನಮ್ಮ ಶಿಕ್ಷಣ ವಿಧಾನವೇ ಕಾರಣ. ಕಳೆದ ಇಪ್ಪತ್ತು ವರ್ಷಗಳಿಂದ ನಾವು ಅನುಸರಿಸುತ್ತಾ ಬಂದಿರುವ ಶಿಕ್ಷಣ ವಿಧಾನ ನಮ್ಮದಲ್ಲ, ಪರಕೀಯರಾದ ಆಂಗ್ಲರಿಂದ ಬಂದುದು.

ರಾಷ್ಟ್ರೀಯ ಶಿಕ್ಷಣ ಪದ್ಧತಿಯೊಂದನ್ನು ನಾವು ಅನುಸರಿಸ ಬೇಕು. ಅದು ನಮ್ಮ ಅಶೋತ್ತರಗಳನ್ನೆಲ್ಲಾ ಈಡೇರಿಸುವಂತಿರ ಬೇಕು. ಎಲ್ಲಾ ಮತಗಳ ಸಿದ್ಧಾಂತಗಳನ್ನೂ ಒಳಗೊಂಡ ಪಠ್ಯ ಪುಸ್ತಕವೊಂದನ್ನು ತಯಾರು ಮಾಡಿದರೆ ಸ್ವಯೋಜನವಾಗ ಬಲ್ಲದು. ಇದನ್ನು ಸರಕಾರವು ಪರಿಶೀಲಿಸಿತ್ತಿದೆ.

"ಭವ್ಯ ರಾಷ್ಟ್ರದ ನಿರ್ಮಾಣ ಕಾರ್ಯದಲ್ಲಿ ಶಿಕ್ಷಣದ ಮಹತ್ವ ಎಷ್ಟೆಂದು ಹೇಳಲಾಗುವುದಿಲ್ಲ. ಶಿಕ್ಷಣವು ಹಾಳಾದರೆ ರಾಷ್ಟ್ರವೇ ಮುಗ್ಗಾಸುತ್ತದೆ. ಶಿಕ್ಷಣದ ಮಟ್ಟವು ಉತ್ತಮವಾಗಿರಲು ಬೇಕಾದರೆ, ಯೋಗ್ಯ ಅಧ್ಯಾಪಕರಿರಬೇಕು.

'ಮಾನವನು ಕನ್ನಡಿಗರಿವ ಸಂಪತ್ತಿಗೆ ಯಜಮಾನನಲ್ಲ. ಭೂರ್ಮರ್ತಿಗ ಮಾತ್ರ' ಎಂದು ಗಾಂಧೀಜಿಯವರು ಹೇಳಿದ್ದಾರೆ. ಸಮಾಜದ ಕೆಲವರಿಗಾಗಿ ಸಂಪತ್ತನ್ನು ವಿನಿಯೋಗಿಸಬೇಕು ಈ ಸಂದೇಶವನ್ನು ಲೋಕಸೇವಾ ವೃಂದದಲ್ಲಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ಸ್ವಾಮಿ ವಿವೇಕಾನಂದರು ಹೇಳಿದ್ದಾರೆ— ಮಿಲ್ಟನನಂತಹ ಪ್ರತಿಭಾ ಸಂಪನ್ನ ಕವಿಗಳು ಎಷ್ಟೋ ಮುಂದಿ ಇಣ್ಣಾರೆ. ಅವರು ಪ್ರಕಾಶಕ್ಕೆ ಬಂದುವುದಿಲ್ಲ. ಅಥವಾ ಬಂಲಿಚ್ಚಿಸುವುದಿಲ್ಲ. ಲೋಕಸೇವಾ ವೃಂದದ ಅಧ್ಯಕ್ಷರಾದ ಶ್ರೀ ನಾರಾಯಣ ಭಟ್ಟರು ಎಳೆನುರೆಯ ಪ್ರತಿಭಾವಂತರನ್ನು ಆಯ್ಕೆ ಮಾಡಿ ಸೇವೆಸಲ್ಲಿಸುವುದನ್ನು ಕಂಡು ರೋಮಾಂಚನಗೊಂಡಿದ್ದೇನೆ. ಗಾಂಧೀಜಿಯವರು ರಚನಾತ್ಮಕ ಕಾರ್ಯಕ್ರಮಗಳಿಗೆ ಅಗ್ರಪ್ರಾಶಸ್ತ್ಯ ನೀಡಿದ್ದಾರೆ. ನಾವೆಂದು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದೆರೆ, ನಮ್ಮ ಎಷ್ಟೋ ಸಮಸ್ಯೆಗಳು ಮಾಯವಾಗ ಬಲ್ಲುವು.

ಮಕ್ಕಳನ್ನು ಉತ್ತಮ ನಡತೆಯುಳ್ಳವರನ್ನಾಗಿ ನೋಡುವ ಲೋಕಸೇವಾ ವೃಂದದಂತಹ ಸಂಸ್ಥೆಗಳು ದೇಶದ ಮೂಲೆ ಮೂಲೆಗಳಲ್ಲಿ ಹುಟ್ಟಬೇಕು" ಎಂದು ನುಡಿದು ಸಂಸ್ಥೆಯ ಕಾರ್ಯಗಳಿಗೆ ಶುಭ ಕೋರಿದರು. ಸಭೆಯ ಪ್ರಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷರು ಶ್ರೀ ಯಸ್. ನಾರಾಯಣ ಭಟ್ಟರು ಸಚಿವರಿಗೆ ಮಾನಪತ್ರವನ್ನು ಸಮರ್ಪಿಸಿದರು. ಜಿ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಕೆ. ಶೆಟ್ಟರ ಅಧ್ಯಕ್ಷ ಭಾಷಣದ ನಂತರ ಕಾರ್ಯದರ್ಶಿಯವರು ವಂದನಾರ್ಪಣೆ ಸಲ್ಲಿಸಿದರು.

ಇವನಾರ್?

ಬಟ್ಟೆಯೋ ಬಲುಜರಿಕರು, ದಿಟ್ಟಿಯೋ ತೀಕ್ಷ್ಣತಮ
ಕಲ್ಪನೆಯು ಶಿಲ್ಪವನು ಕಡೆಯುವವನು.
ಹೊಗಳಿಕೆಯಕಾಶಿಸದೆ, ತೆಗಳಿಕೆಗೆ ನೋಯದೇ
ನೇರ ದಾರಿಯೊಳವನು ನಡೆಯುವವನು.

ಬಂಡುಣಿಯ ಮನೆತಣಿಸೆ ಸುಮವು ಅರಳುವುದುಂಟೆ?
ತಿಂಗಳಿಗೆ ಅರಿವಿಹುದೆ ವಿರಹಿಗಳ ದುಃಖ.
ಜಗವು ಮೆಚ್ಚಲಿ, ಬಿಡಲಿ; ಬರೆಯುವುದ ನಿಲ್ಲಿಸನು
ಬರೆದು ಬರೆದೇ ಅವನು ಸೊರಗಿ ಹೋಗುವನು.

ಮಸಣ ಸೇರಿದ ಮೇಲೆ ಅವನ ಕೋಯುವ ಮೇಲೆ
ಮಲ್ಲಿಗೆಯು ಬಳ್ಳಿಗಳು ಮೂಡ ಬಹುದು.
ಮುಳ್ಳು ಕಂಟಿಯು ಬೆಳೆದು ಹುತ್ತಗಳು ಮೇಲೇಳೆ
ಹುಸ್ಸ ನಾಗರ ಹಾವು ಮನೆ ಮಾಡ ಬಹುದು.

ಚೇತನಕೆ ಅನ್ನವನು ಕೊಡುವ ಜನರಾರಿಹರು?
ಒಡೆದ ಹೃದಯಕೆ ಜಗವು ಮದ್ದು ಹಚ್ಚುವುದೆ?
ಆಸುವ ನೀಗಿದ ಬಳಿಕ ಸಂಭ್ರಮದೆ ವರ್ಧಂತಿ
ಹೂ ಮಾಲೆ ಏರುವುದು ಅವನ ಪಟಕೆ.

ಶವಕೇಕೆ ಸಿಂಗಾರ? ಹೊನ್ನಿನಾ ಹಿಂಗಾರ,
ಅಂಗಾರಮೆಂಗುರವನು ಜೀವಿಸಿರಲು,
ಬದುಕಿರಲು ಬೀದಿಯೂ ಕಂಬದಡಿ ಅವಾಸ,
ಪ್ರಾಣವದು ಹೊರಗೋಡೆ ಭಾತಖಾದ ಪೂರ.

—"ಸುಧಾ ಪ್ರೇರಿತ"

READ & ADVERTISE IN NAVAYUGA WEEKLY

ಸಚಿತ್ರ ಹೊಸ ಪುಸ್ತಕ

ಲಾಲ್ ಬಹಾದುರ್ ಶಾಸ್ತ್ರಿ

ಲೇಖಕರು—

ಬಿ. ಆರ್. ಪ್ರಾಣೇಶ ರಾವ್, ಎಂ.ಎ.

ಮೈಸೂರು

ಸರಳವೂ ತ್ಯಾಗಮಯವೂ ಆಗಿದ್ದ ಶ್ರೀ ಶಾಸ್ತ್ರಿಯವರ ಸಾರ್ಥಕ ಜೀವನದ ಪರಿಚಯ

ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕ

ಬೆಲೆ ರೂ. 2/—ಮಾತ್ರ,

ಅಂಡೆ ವೆಚ್ಚ ಪ್ರತ್ಯೇಕ

ಪ್ರತಿಗಳಿಗೆ—

ನವಭಾರತ ಪುಸ್ತಕ ಭಂಡಾರ,

ಉಡುಪಿ

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

R. I. A. No. 579/67

in O. S. 363/1958

ಎನ್. ಜಿನರಾಜಯ್ಯ ---ಅರ್ಜಿದಾರ

ಮತ್ತು

ರತ್ನಮ್ಮ ಕೂಡು ---ಎದ್ರಿರು

ಇವರೊಳಗೆ

ಕಾರಳ ತಾಲ್ಲು ಮುಡುಬಿದ್ರೆಯಲ್ಲಿರುವ ಎನ್. ಶಾಂತಿ ರಾಜಯ್ಯನ ವಿಧವೆ ಹಾಗೂ ಮಳ್ಳಕ್ಕು 100ಂದ ಕನೇ ಎದ್ರಿರು ರತ್ನಮ್ಮ, ಸಹೋದರಿಯರಾದ ಶ್ರೀಮತಿ ಲಕಾಮೂರ್ ಉಡ್ಪಿತಾಲ್ಲು ಏರಾಪರ ಗ್ರಾಮವಲ್ಲಿರುವ ಜಾಕೆಸಂತಾನ್ ಸೋದರ ವಿಧವೆ ಹಾಗೂ ಮಗ 5—6ನೇ ಎದ್ರಿರು ಎಸ್ಟ್ ಬ್ಯಾಪ್ಟಿಸ್ಟ್ ಮಿಸೋಜ ಇವರಿಗೆ ತಿಳಿಯಪಡಿಸುವುದು.

ಮೇಸನಲ್ ಡಿಕ್ರಿ ಕೇಳಿ ನಿಮ್ಮ ಪೇಲಿ ಅರ್ಜಿದಾರನು ಮಾಡಿದ ಸದರಿ ಅರ್ಜಿಯುಶಾ. 11—12—67ಕ್ಕೆ ಇಡೋಜರಾಗಿರಬೇಕಿದೆ. ಆ ದಿನದಲ್ಲಿ ನಿಮ್ಮ ಪೇನಾದರೂ ಅಕ್ಷೇಪ ಇದ್ದೆ ಪಕ್ಷದಲ್ಲಿ ಅವು ಆ ದಿನಸ ಕೋರ್ಟಿಗೆ ಮುಂದೆ ಹಾಜರಾಗಿ ಉದಪರಿಹಿಕೊಳ್ಳ ತಕ್ಕದ್ದು.

(By order)

P. N. K. Rao

B.A., L.L. B

Advocate for Petitioner

Udipi, Dated 17—11—67

ಕ್ರೈಸ್ತೀಯರ ಕಾರಸ್ತಾನದ ಕರಾಳ ಛಾಯೆ

(ಅರನೇ ಪುಟದಿಂದ)

ದಿಂದ ಮತಾಂತರಿಸಿ ಬಿಟ್ಟನು. ಕ್ರೈಸ್ತೀಯರಾದ ನೇಲೆ ಇಗರ್ಜಿಯ "ಸಹಬೆ" ಯವನ್ನು ವರ್ಣಿಸಿ ಅದರ ಖರ್ಚಿಗಾಗಿ ಪ್ರತಿಯೊಬ್ಬರೂ ತಾವು ಹಿಡಿದ ವಿಸ್ತಾನ್ನು ತಿಂಗಳನಲ್ಲಿ ಒಂದು ದಿನ ಇಡಬೇಗೆ ಕೊಡಬೇಕೆಂದು ಹೇಳಿದನು. ಗುರುವಿಲ ಮೂತನ್ನು ಮೊರಲು ಸಾಧ್ಯವೇ! ಆ ವಿಸ್ತಾನ್ನು ಏಲಂ ಹಾಕಲಾಗುತ್ತದೆ. ಅದರ ಹಣ ಪಾದ್ರಿಗೆ ಹೋಗುತ್ತದೆ. ಅದೂ ಅಲ್ಲದೆ, ಅವರು ಹಿಡಿದ ವಿಸ್ತಾನಲ್ಲಿ ಒಂದು ಜಾತಿಯ ವಿಸ್ತಾನ ಮೇಲೆ ಪಾದ್ರಿಯದ್ದೇ ಸ್ವಾಮಿತ್ವ, ಅದು ಅವನಿಗೇ ವಿಸಲು. ಇನ್ನು ಬೆಸ್ತರಲ್ಲಿ ಶಿಕ್ಷಣವಂತರಾದಾಗ, ವಯಸ್ಸಿಗೆ ಬಂದಾಗ, ಮದುವೆಯಾಗುವಾಗ್ಗೂ ತೆರವಲ್ಲು, ಸತ್ತಾಗಲೂ ನಿಧಿಕೊಡಬೇಕು. ಇದರಿಂದ ಬೆಸ್ತರು ಬೇಸತ್ತು ಹೋದರು.

ಇತ್ತ ಧನಪಿಶಾಚಿ ಪಾದ್ರಿ ಕೂಡಾ ಅಧಿಕಾಧಿಕ ಹಣ ಕೇಳಲಾರಂಭಿಸಿದನು. ಅವರಿಗಾಗಿ ಜಪೇನೂ ಸೌಕರ್ಯಗಳನ್ನು ಮಾಡಿಕೊಡದೆ ತಾನು ರಾಜ ಭೋಗ ಅನುಭವಿಸಲು ಆರಂಭಿಸಿದನು. ಮತಾಂಧ ಪಾದ್ರಿಗೆ ಬೆಸ್ತರ ಬೇಗುದಿಯು ಅರಿವಾಗಲಿಲ್ಲ. ಭೋಳೇ ಬೆಸ್ತರನ್ನು ಬೆದರಿಸಿ ಖಂಡೋಬಸ್ತಿನಲ್ಲಿಟ್ಟು ಕೊಳ್ಳಬಹುದೆಂದಾತ ಲೆಕ್ಕಾಹಾಕಿಕೊಂಡಿದ್ದನು. ಪಾದ್ರಿಯ ಬಳಿ ತಮ್ಮ ಕಷ್ಟ ಕೋಟಲೆಗಳನ್ನು ಬೆಸ್ತರು ಹೇಳಿಕೊಂಡರು. ಅವುಗಳಿಗೆ ಸಂಘಾದ ದಾರಿ ತೋರಿರುವ ಬದಲು ಇಗರ್ಜಿ ಎಖರ್ಚಿಗೆ ಹಣ ಸಾಕಾಗು ವದಿಲ್ಲವೆಂದು ಪಾದ್ರಿ ಹೇಳಿದನು.

ಬೇಸತ್ತ ಬೆಸ್ತರು ಮತಾಸಿಂದ ಪ್ರಯೋಜನವಿಲ್ಲವೆಂದು ಕಾರ್ಯರಂಗಕ್ಕಿಳಿದರು. ಅವರು ಪಾದ್ರಿಗೆ ವಿಸ್ತು ಕೊಡುವದನ್ನು ನಿಲ್ಲಿಸಿದರು. ರೊಚ್ಚಿಗೆದ್ದ ಪಾದ್ರಿಯು, ತನ್ನ ತಾತಂದಿರ ಆಟ—ಒಡೆಮೆ ಆಳುವ, ಆಟವನ್ನಾಡಿದನು. ಕೆಲ ಬೆಸ್ತರನ್ನು ತನ್ನ ಬುಟ್ಟಿಗೂಳಿಗೆ ಹಾಕಿಕೊಂಡು ಇತರರ ಮೇಲೆ ಛೂ ಬಿಟ್ಟನು; ಈ 'ಮತರಕ್ಷಕ'ರು ಅಲ್ಲಿ ಎಲ್ಲೆಲ್ಲೂ ಸುತ್ತಾಡಬಹುದು, ಏನು ಬೇಕಾದರೂ ಮಾಡಬಹುದು. ಅವರನ್ನು ತಡೆಯುವಂತಿಲ್ಲ. ಸ್ತ್ರೀಯರ ಮೇಲೆ ಅತ್ಯಾಚಾರ, ಗಂಡಸರ ಮೇಲೆ ಜುಲುಮೆ...ಹೀಗೆ ಏನೇನೋ ಮಾಡಿದರು. ಜನರು ಪೋಲೀಸರ ಬಳಿ ದೂರಿತ್ತರು. ಅಲ್ಲಿಯ ಸರ್ಕಲ್-ಇನ್ಸ್‌ಪೆಕ್ಟರ್ ಕ್ರೈಸ್ತೀಯರು. ಅವನೂ ಪಾದ್ರಿಯ ಪಕ್ಷ. ಪಾದ್ರಿಯ ರಕ್ಷಣೆ ಇಲ್ಲದಿದ್ದಲ್ಲಿ ಅವನಲ್ಲಿ ರಾಜಭೋಗ ಫಡೆಸಲು ಸಾಧ್ಯವೇನು ಇದಿಂದಕರೈ ಇಬ್ಬಾಗ ಆಯಿತು. ಒಂದು ಪಾದ್ರಿಯ ಪಕ್ಷ, ಇನ್ನೊಂದು ಜನತಾ ಪಕ್ಷ.

ಜನತಾ ಪಕ್ಷದವರು ಪೋಲೀಸರ ಬಳಿ ಪಾತ್ರವಲ್ಲ, ಮದ್ರಾಸಿಗೆ ಅಂದು ದೊರೆಗಳ ಬಳಿ ದೂರು ಕೊಟ್ಟರೂ ಪ್ರಯೋಜನವಾಗಲಿಲ್ಲ, ಕೊನೆಗೆ ಇಂದೂ ಸಂಘಟಿಸಲ್ಪಟ್ಟು ಹುಡುಕಿಕೊಂಡು ಬಂದು ಮದ್ರಾಸಿನಲ್ಲಿ ಕೆಲವರನ್ನು ಕಂಡು ತಮ್ಮ ಪರಿಸ್ಥಿತಿಯ ಸಂಚಯ ಮಾಡಿಕೊಟ್ಟರು. ಇಲ್ಲಿಂದ ಸರ್ವ ಪಕ್ಷೀಯ ಸಮಿತಿಯ ಪ್ರಮುಖರು ಸ್ವತಃ ಅಲ್ಲಿಗೆ ಹೋಗಿ ಎಲ್ಲಾ ವಿಷಯಗಳನ್ನು ಕಣ್ಣಾರೆ ಕಂಡು ಸರಾಸರಿ ವರದಿಯನ್ನು ಸರಕಾರಕ್ಕೆ ಒಪ್ಪಿಸಿದರು ಆದರಿಂದೇನೂ ಪ್ರಯೋಜನವಾಗಲಿಲ್ಲ.

ಆ ವರದಿಯಲ್ಲಿರುವ ಕೆಲವು ವಿಷಯಗಳು: ಕ್ರೈಸ್ತೀಯ ಗೂಂಡಾಗಳೂ ಪೋಲೀಸ್ ಏಜಾಚಿಗಳೂ ಸೇರಿಕೊಂಡು ಪಾದ್ರಿ ಕೈ ತೋರಿಸಿದವರ ಮೇಲೆ ತಮ್ಮ ಪ್ರಭಾವವನ್ನು ತೋರಿಸಿದರು. ಎಲ್ಲಿಯಲ್ಲಿ ರಾಷ್ಟ್ರ ರಕ್ಷಣೆಗಾಗಿ ಜೀವ ಮಡಿಪಾಗಿಟ್ಟಿರುವ ಸೈಕಾನ ಮುದಿ ತಾಯಿಗೇನೇ ಅಕ್ಷ ರಕ್ಷಣೆ ಸಿಗಲಿಲ್ಲ. ಅವಳಗೂ, ಸೋಲೀಸ್ ಲಾರಿಯ ಪೆಟ್ಟಿನ ರುಚಿ ತೋರಿಸಲಾಯಿತು. ಮುದುಕಿ ಎಂತ್ರವಲ್ಲ, ತರುಣಿ ಕೂಡಾ ಲಾರಿ ಪೆಟ್ಟಿನ ಅಭ್ಯಾಸ ಮಾಡಿಸಿಕೊಳ್ಳಲೇ ಬೇಕಾಯಿತು. ಪೋಲೀಸರು ಬಂದೊಡನೆ ಗಂಡಸರು ಗ್ರಾಮ ಬಿಟ್ಟು ತಲೆ ತಪ್ಪಿಸಿಕೊಂಡರು. ಕೆಲವರು ಮೂತ್ರ ಅಂದು ಅಲ್ಲಿದ್ದರು. ಅದುದರಿಂದ ಅಡೆತಡೆ ಇಲ್ಲದೆ ಪಾದ್ರಿಯ ಕೈ ಕೂಲಿಗಳ ಇಷ್ಟ ಬಂದಂತೆ ಸ್ತ್ರೀಯರ ಮೇಲೆ ಬಲಾತ್ಕಾರ ನಡೆಸಿರುವರು. ಅವರ ಅವಮಾನ, ಸಂಕಟಕ್ಕೆ ಅಡ್ಡ ಬಂದ ಕೈಕೂಸನ್ನೆತ್ತಿ ಅಪಕಾಚಿಗಳು ನೆಲಕ್ಕೆ ಬಡಿದು ಸಾಯಿಸಿದರು. ಅವರ ದೋಚಿ, ಬಲೆ ಇತ್ಯಾದಿ ವಸ್ತುಗಳಿಗೆ ಬೆಂಕಿ ಕೊಟ್ಟಲ್ಲದ ಸಾಗಿಸಲು ಸಾಧ್ಯ ಇರುವದನ್ನು ಲೂಟಿ ಮಾಡಿದರು. ಮೂಲೆಯಲ್ಲಿದ್ದ ದಂಡಸರನ್ನು ತಾಣಗೆಳೆದುಕೊಂಡು ಹೋಗಿ ಪೋಲೀಸರ ಪ್ರಧಾನವನ್ನು ಪ್ರಕಟಿಸಿದರು.

ಇದಾದ ಮೇಲೆ ಸರ್ವಾಧಿಕಾರಿ ಪಾದ್ರಿಯು, ಹಿಂದ ಯೇಸುವಿಭ ಸಾಯುಜ್ಯ ಪಡೆಯಲು ಮೋಕ್ಷ ಅನುಮತಿ ಕೊಡುತ್ತಿದ್ದವನು, ಅಕ್ಷರಲು ತನ್ನ ಪಕ್ಷದವರಿಗೆ ಗುರುತಿನ ಚೀಟಿನ್ನು ದಯ ಪಾಲಿಸಿರುವನು. ಆ ಚೀಟಿನಲ್ಲಿ ಇಂತಿಂತವನ್ನು ಇಲ್ಲಿಯ ನೈಜ ನಿವಾಸಿ (Bonafide resident)ಯೆಂದ್ದು, ಕೆಳಗ ಪಾದ್ರಿಯು (ಲೋಬೋ)ದಿನಾಂಕ ಸಹಿತ ಸಹಿ ಇದೆ, ಆ ಪತ್ರಕ ಇಲ್ಲದಿದ್ದವರ್ಲಿ ಅಕ್ಷ ಇರಲು ಸಾಧ್ಯವಿಲ್ಲ. ಊರಿನೊಳಗೆ ಹೋದ ಬೇರಾದಲ್ಲಿ ಆ ಪ್ರವೇಶ ಪತ್ರವನ್ನ ತೋರಿಸಲೇ ಬೇಕು. ಅದಿಲ್ಲದಿದ್ದಲ್ಲಿ ಪೋಲೀಸರು ಹಾಗೂ ಗೂಂಡಾ ಪಾದ್ರಿ ಪಕ್ಷದವರ ಹಿಂಸೆಗೊಳಗಾಗಲೇ ಬೇಕು.

ಅಕ್ಷಯು ಬೆಸ್ತರ್ಲಿ ಹೆಚ್ಚಿನವರು ಧೈರ್ಯ ನಡೆಸಿ ಹೊರಬಂದ ಕಾರಣ ಈ ರೀತಿಯ ಖಂಡೋಬಸ್ತಿಗಾಂದಿರುತ್ತದೆ. (ಇವರಲ್ಲಿ ಕೆಲವರು ಯಮತ್ತು ಮುಳಿ ತಾಯಿಯು ಮಂಗಳೂರು ವಂತೆ....ಎಂದೂ ಧರ್ಮಕ್ಕೆ ಬಂದಿದ್ದಾರೆ.) ಅಕ್ಷದಿದ್ದಲ್ಲಿ ಹೊರಡಾಗ್ಗೂ ಇದು ಗೊತ್ತಾಗುವುದು ಹೇಗೆ? ಈಗ ಅಲ್ಲೊಂದು ಮಠವಾಗಲೇಂಡ್ ಇವೆಯೆಂಬ.ದು ಗೊತ್ತಾಗಿರಬಹುದು, ಅಷ್ಟೇ. ಅದನ್ನೊದಯಲು ಬೆಗುರಿಂಲ್ಲೇ ಬೆಳಿಟ ಬಿಡಲು ಸಾಧ್ಯ ಇದೆ.

ಕಾರಣ ಸಿದ್ಧ ದೆಯೇ? ಅಲ್ಲಿ ಜನ ಜಾಗ್ರತಿ ಉಂಟು ಮಾಡಲು ಕಾಂಗ್ರೆಸ್ಸಿ ಕಾಲಿಟ್ಟಿತೇ? ಇವರು ತಮ್ಮ ಪಕ್ಷಕ್ಕೆ ಯಾರು ಮತದಾನ ಮಾಡುವರೆಂಬುದನ್ನು ಲೆಕ್ಕಿಸಿ ಹಾಕಿ ಲಾಭ ಇದೆಯೆಂದಾದಲ್ಲಿ ಮೊತ್ತ, ಕೋಲೂ ಮುರಿಯದಂತೆ, ನ್ಯಾಯಕ್ಕನುಸಾರವಾಗಿ ಕಾರ್ಯ ಪ್ರವೃತ್ತರಾಗಬಹುದು, ಅಷ್ಟೇ ಕೇಂದ್ರ ಸರಕಾರವಂತೂ ನೇರ ಪ್ರವೇಶಿಸುವಂತಿಲ್ಲ. ಬಂಡಾಯವೆದ್ದು, ಸೇನೆಯನ್ನೇ ಎದುರಿಸಿ ನಿಂತಿರುವ ನಾಗಾಗಳನ್ನು ಅಡಗಿಸಲಾಗದ ಕೇಂದ್ರಸರಕಾರ ಮುರಿ ನಾಗಾಗಳನ್ನು ಮಟ್ಟಿಸೀತೇ?

ತಮ್ಮ ಮತ ಪ್ರಸಾರಣೆಯ ಕಾರ್ಯಕ್ಕಾಗಿ ಜನತೆಯನ್ನು ಭಾಷಾ ಬಡಿದಾಟದ ಅಂಗಣದಲ್ಲಿ ತಳ್ಳಬಿಟ್ಟು ಕ್ರಿಶ್ಚಿಯರು ಕಾರಸ್ತಾನದ ರಂಗವನ್ನು ಅಧಿಕರಿಸುತ್ತಿದ್ದಾರೆ. ಅಧಿಕಾರ ವ್ಯಾಮೋಹದಲ್ಲಿ ಅಂಧರಾಗಿರುವ ರಾಜಕೀಯ ಮುದುಕರಂತೂ ಆಂಗ್ಲ ಭಾಷೆಯ ಹೆಸರಿನಲ್ಲಿ ತಮ್ಮ ಆಸನಕ್ಕೇನೇ ಸುರಂಗವಿಟ್ಟು ಕೊಳ್ಳುತ್ತಿದ್ದಾರೆ. ಹಾಗಾಲೇಂಡಿನ್ದುದ ನಾಂಗನೂರ್... ಹೀಗೆ ದೇಶದಾದ್ಯಂತ ನಾನಾ ನಾಗಾಲೇಂಡ್ ನಿರ್ಮಾಣಕ್ಕಾಗಿ, ಹಿಂದೂ ದೇಶವನ್ನು ಕ್ರಿಸ್ತ ಭೂಮಿಯನ್ನಾಗಿ ಮಾಡಲು ಕ್ರೈಸ್ತೀಯ ಮತ ಪ್ರಸಾರಕರು ತಮ್ಮ ಕಾರಸ್ತಾನದ ಕರಾಳ ಛಾಯೆಯ ನ್ನು ಹಬ್ಬಿಸುತ್ತಿದ್ದಾರೆ.

ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆ, ಕಟಪಾಡಿ, ದ. ಕ.

ಸ್ವರ್ಣ ಮಹೋತ್ಸವ ವಿಜ್ಞಾಪನೆ

ಪ್ರಿಯ ಹಳೆ ವಿದ್ಯಾರ್ಥಿಗಳೇ ಹಾಗೂ ಶಾಲಾ ಹಿತೈಷಿಗಳೇ,

ನಮ್ಮ ಕಟಪಾಡಿ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಯು 1910ರಲ್ಲಿ ಸ್ಥಾಪಿಸಲ್ಪಟ್ಟು 1960ರಲ್ಲಿ 50 ವರ್ಷಗಳು ಪೂರ್ಣಗೊಂಡಿತ್ತು. ಈ ಅರ್ಧ ಶತಮಾನದ ದೀರ್ಘ ಕಾಲಾವಧಿಯಲ್ಲಿ ಅದು ಕಟಪಾಡಿ ಹಾಗೂ ಆಸುಪಾಸಿನ ಅನೇಕ ಹಳ್ಳಿಗಳ ಸಹಸ್ರಾರ್ಜುನರಿಗೆ ವಿದ್ಯಾದಾನವನ್ನಿತ್ತು ವಿದ್ಯಾ ಪ್ರಸಾರದಲ್ಲಿ ಒಂದು ದೀಪಸ್ತಂಭವೆಂಬ ಕೀರ್ತಿಯನ್ನು ಗಳಿಸಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನಮಗೆಲ್ಲರಿಗೂ ಸದ್ವಿದ್ಯೆಯನ್ನಿತ್ತು ನಮ್ಮ ಬಾಳಿನಲ್ಲಿ ಬೆಳಕನ್ನು ಬೀರಿ ನಮ್ಮ ಜೀವನವನ್ನು ಸಾರ್ಥಮಯವನ್ನಾಗಿ ಮಾಡಿ ಸಲಹಿದ ಈ ವಿದ್ಯಾಮಾತೆಗೆ 50 ವರ್ಷ ತುಂಬಿದ ಮೇಲೆ ನಾವಲ್ಲರೂ ಅವಳ ಮಹೋತ್ಸವಕಾಲವನ್ನು ಸ್ಮರಿಸಿ ಅವಳ ಸ್ವರ್ಣ ಮಹೋತ್ಸವವನ್ನು ಯೋಗ್ಯ ರೀತಿಯಲ್ಲಿ ಆಚರಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ.

ಅಂತೆಯೇ 1967ನೇ ದಶಂಬರ ತಿಂಗಳಲ್ಲಿ ಸ್ವರ್ಣ ಮಹೋತ್ಸವವನ್ನು ಜರಗಿಸಬೇಕೆಂಗ ನಿರ್ಣಯಿಸಿರುತ್ತೇವೆ; ಅಲ್ಲದೆ ಆ ಸಂದರ್ಭದಲ್ಲಿ ಒಂದು ಸ್ಮಾರಕ ಸಂಚಿಕೆ (ಸೊವೆನೀರ್) ಯನ್ನು ಪ್ರಕಟಿಸಬೇಕೆಂಬುದಾಗಿಯೂ ನಿರ್ಣಯಿಸಿರುತ್ತೇವೆ.

ಈ ಸ್ವರ್ಣ ಮಹೋತ್ಸವದ ಸ್ಮಾರಕವಾಗಿ ರೂ. 15,000 ವೆಚ್ಚದಲ್ಲಿ ಒಂದು ಸುವರ್ಣ ಮಹೋತ್ಸವ ಸ್ಮಾರಕವನ್ನು ರಚಿಸಬೇಕಾಗಿಯೂ, ಶಾಲಾ ಆಡಳಿತೆಯು ಸುವ್ಯವಸ್ಥಿತವಾಗಿ ನಡೆಸಲು, ಆದುಕೂಲವಾಗುವಂತೆ ರೂ. 10,000ದ ಒಂದ ಶಾಶ್ವತ ನಿಧಿಯನ್ನು ಏರ್ಪಡಿಸಬೇಕಾಗಿಯೂ ನಿರ್ಣಯಿಸಿರುತ್ತೇವೆ.

ಆದುದರಿಂದ ಹಳೇ ವಿದ್ಯಾರ್ಥಿಗಳು ಹಾಗೂ ಶಾಲಾ ಹಿತೈಷಿಗಳು ಉದಾರ ಹಸ್ತದಿಂದ ಧನ ಸಹಾಯವನ್ನಿತ್ತು ಈ ಧನವಂದ ಉದ್ದೇಶಗಳು ಯಶಸ್ವಿಯಾಗುವಂತೆ ಸಹಕರಿಸಿ, ಸ್ವರ್ಣ ಮಹೋತ್ಸವವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತೇವೆ.

ಕಟಪಾಡಿ,
20-11-67.

ಸಿ. ರಾಮದಾಸ ನಾಯಕ್, B.A, L.T.
ಅಧ್ಯಕ್ಷರು,
ಸ್ವರ್ಣ ಮಹೋತ್ಸವ ಸಮಿತಿ.

ಇಂಗ್ಲಿಷ್ ಶಿಕ್ಷಣದ ವಿಚಾರಗೋಷ್ಠಿ

ಉಡುಪಿಯ ಎಂ. ಜಿ. ಎಂ. ಕಾಲೇಜು ಮತ್ತು ಪೂರ್ವಾಂಶ ವಿಶೇಷವಿಯ ಅಶ್ರಯದಲ್ಲಿ ಜರಗಿದ ಇಂಗ್ಲಿಷ್ ಶಿಕ್ಷಣದ ಕೊರತೆಯ ವಿಚಾರಗೋಷ್ಠಿಯನ್ನು ವಿಧಾನ ಪರಿಷತ್ ಸದಸ್ಯ ಶ್ರೀ ಕೆ. ಸಿಂಪೈನಾರಾಯಣ ಅಡಿಗರು ತಾ. 1—1—67ರಂದು ಎಂ. ಜಿ. ಎಂ. ಕಾಲೇಜಿನಲ್ಲಿ ಉದ್ಘಾಟಿಸಿದರು.

ಇಂಗ್ಲಿಷನ್ನು ಬದಲಿಸಲು ದೀರ್ಘಕಾಲದ ಪೂರ್ವತಯಾರಿ ಅವಶ್ಯವಾಗಿದೆ. ಇಂದು ಕಾಲೇಜಿನಲ್ಲಿ ಇಂಗ್ಲಿಷ್ ಮಾಧ್ಯಮವಾಗಿರಬೇಕಾದರೆ ಅದೊಂದು ಅಪವಾರ್ಯ ಪರಿಸ್ಥಿತಿ ಬೆರೆಯಲ್ಲಿಲ್ಲದ ಅವಶ್ಯಕ ದೃಷ್ಟಿಯಿಂದಲ್ಲವೆಂದು ಶ್ರೀ ಅಡಿಗರು ನುಡಿದರು. ಅವರು ಸಮಾರಂಭ ವಿಷಯ ಪ್ರಸ್ತಾಪಿಸಿ ಅದರ ಮಹತ್ವವನ್ನು ತಿಳಿಸಿದರು. ಯಾವ ಭಾಷೆಯೇ ಇಂಗಿ ಅದಲ್ಲಿ ಪರಿಣತಿ ಹೊಂದುವಂತೆ ವಿದ್ಯಾರ್ಥಿಗಳನ್ನು ತಯಾರಿಸಿಗಳಿಸಿವುದು ಅವಶ್ಯವಾಗಿದೆಯೆಂದರು.

ಪ್ರಿಟಿಷ್ ಕೌನ್ಸಿಲಿನ ಪಬ್ಲಿಸಿಟಿ ಆಫೀಸರ್ ಶ್ರೀ ಡಿ. ಸೈ. ಪೋಗರ್ನರವರು ಪ್ರಾಸ್ತಾವಿಕ ದಿನದಿಂದ ವಿನಿಕ್ಕೆ ಆಗುತ್ತಿರುವ ಸಂತೋಷವನ್ನು ಅನುಭವ ಹೊಂದಲೂ, ಜಗತ್ತಿನೊಡನೆ ಹೆಚ್ಚಿನ ಸಂಪರ್ಕವಿಸಿಕೊಳ್ಳಲೂ ಭಾಷೆಯ ತಿಳಿಗ್ಞಾನವನ್ನು ಕಲಿಯುವುದು ಅವಶ್ಯವೆಂದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತ ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರು ಜನತೆಯ ಅಭಿಪ್ರಾಯದಂತೆ ಶಿಕ್ಷಣ ಪದ್ಧತಿಯು ಇತ್ತೀಚೆಗಾಗಬೇಕೆ ವಿನಃ ಅದಿಕಾಂಶ ಪ್ರದೇಶದವರ ಏರ್ಪಡಿಸಿದಂತಿರಬಾರದು ಪ್ರಜಾಪ್ರಭುತ್ವದಲ್ಲಿ ಪ್ರಜಾಜನರ ಅಭಿಪ್ರಾಯಕ್ಕೆ ಮೊತ್ತ ತ ಇರಬೇಕೆಂದರು. ಯಾವ ಭಾಷೆಯೇ ಆಗಲಿ ಅದರ ಗುಣ, ಧರ್ಮ ಮತ್ತು ಪರಿಣತಿಯಾಂಶಗಳನ್ನು ಅಂಗೀಕರಿಸಿಕೊಳ್ಳಲು ಮನಸ್ಸನ್ನು ಅಂಗೀಕರಿಸಿಕೊಳ್ಳಲು ಅರ್ಥವಾಗುವಂತೆ ಪಠ್ಯ ಕ್ರಮವನ್ನು ಸಮಿನಾಂತರದಲ್ಲಿ ನಡೆಯುತ್ತಿರಬೇಕೆಂದು ಅವರು ಹೇಳಿದರು.

ಕೊನೆಯಲ್ಲಿ ಶ್ರೀ ಎನ್. ಎಸ್. ಪ್ರಭುಗಳಿಂದ ಧನ್ಯವಾದ ಸಮರ್ಪಣೆಯೊಂದಿಗೆ

ಪರಿಚಯ

ವಿಶಾಖದತ್ತ

ಬರೆದವರು— ಶ್ರೀ ಸ. ನಾರಾಯಣ

ಕವಿ ಕಾಳಿದಾಸ ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಸುಪ್ರಸಿದ್ಧ ನಾಟಕಕಾರ. ಆ ವನನ್ನು ನಿರಿಸಿದ ಕವಿಗಳು, ನಾಟಕ ಕಾರರು ಇಲ್ಲವಾದರೂ ಅವನೊಂದಿಗೆ ಸ ಮಾನ ಸ್ಥಾನದಲ್ಲಿ ನಿಲ್ಲ ಬಲ್ಲ ಕವಿಗಳು, ನಾಟಕಕಾರರು ಅನೇಕ ಜನ ಇದ್ದಾರೆ. ಅಂತಹವರಲ್ಲಿ ನಾಟಕಕಾರ ವಿಶಾಖದ ತ್ತನೂ ಒಬ್ಬ.

ಏಳು ಅಂಕಗಳ ಮುದ್ರಾರಾಕ್ಷಸ ನಾ ಟಕದ ಮೂಲಕ ವಿಶಾಖ ದತ್ತ ಸಂಸ್ಕೃತ ಸಾಹಿತ್ಯ ಪ್ರಿಯರಿಗೆ ಪರಿಚಿತ; ವಿಶಾಖ ದತ್ತನಿಗೆ ವಿಶಾಖದೇವ ಎನ್ನುವ ಇನ್ನೊಂ ದು ಹೆಸರು ಇದ್ದಂತೆಯೂ ತಿಳಿದು ಬರು ತ್ತದೆ. ಇವನು ಮಹಾರಾಜ ಭಾಸ್ಕರ ದ ತ್ತನ ಮಗ ಮತ್ತು ವಟೇಶ್ವರ ದತ್ತನ ಮೊಮ್ಮಗ.

ಮುದ್ರಾರಾಕ್ಷಸ, ಮಗಧ ಸಾಮ್ರಾ ಜ್ಯದ ಕಥಾವಸ್ತುವಿನ ಮೇಲೆ ರೂಪು ಗೊಂಡ ನಾಟಕ. ನಂದರ ಪ್ರಧಾನನಾದ ಶ್ರಿ ಪ್ರತಿಭಾವಂತ ಅಮಾತ್ಯ ರಾಕ್ಷಸನ ಮುದ್ರೆ ಯುಂಗರದ ವಿಷಯ ಪ್ರಧಾನ ವಾಗಿರುವುದರಿಂದ ನಾಟಕಕ್ಕೆ ಮುದ್ರಾ ರಾಕ್ಷಸ ಎಂಬ ಹೆಸರು ಬಂದಿದೆ. ಚಾಣಾ ಕ್ಯ ತನ್ನ ಜಾಣ್ಮೆಯನ್ನು ಉಪಯೋಗಿಸಿ ಅಮಾತ್ಯ ರಾಕ್ಷಸನನ್ನು ಚಂದ್ರಗುಪ್ತನ ಪ್ರಧಾನಿಯ ಸ್ಥಾನದಲ್ಲಿ ಕೂಡಿಸುವುದರ ಲ್ಲಿ ಯಶಸ್ವಿಯಾಗುವ ಅಂಶ ಈ ನಾಟಕ ದ ಮುಖ್ಯ ಕಥಾವಸ್ತುವಾಗಿದೆ.

ಮುದ್ರಾ ರಾಕ್ಷಸ ನಾಟಕದ ಕಥಾ ವಸ್ತು ಇತಿಹಾಸಕ್ಕೆ ಸಂಬಂಧಿಸಿದುದು. ನಾಟಕಕಾರ ಕೆಲ ಅಮೂಲ್ಯ ಸಂಗತಿಗ ಳನ್ನು ನಿರೂಪಿಸುತ್ತಾನೆ. ಐತ್ಯತೆಯ ಬಗೆ, ವಿಕ ಯೋಜನೆ ಮತ್ತು ಭಾವನೆಗಳನ್ನು ಒಳಗೊಂಡ ಸಮಗ್ರ ವ್ಯವಹಾರಗಳೂ ಮತ್ತು ಹೃತ್ಪೂರ್ವಕ, ಅನುಕಂಪ ಪೂರ್ಣ, ಅಭಿಮಾನ ಪೂರ್ಣ ಕಾರ್ಯೋನ್ಮುಖತೆಗಳು ನಾಟಕದಲ್ಲಿ ಪ್ರಧಾನವಾಗಿವೆ. ಈ ನಾಟಕದ ಕಥಾವಸ್ತು ಧಾರ್ಮಿಕ, ದೈವಿಕ ಚಿಂತನೆಗಳಿಂದ ದೂರವಾಗಿದ್ದು ಸಂಪೂರ್ಣವಾಗಿ ಇತಿಹಾಸಕ್ಕೆ ಅನ್ವಯಿಸಿ, ಹೊಂದಿಕೊಂಡಿರುವುದರಿಂದ ವಿ ಚಿತ್ರ ರೀತಿಯ ಮನೋಭಿಪ್ರಾಯ, ಯೋ ಜನೆ, ಚಿಂತನೆ, ಕುತೂಹಲಗಳು ಕೆರಳು ವುದು ಸ್ವಾಭಾವಿಕವಾಗಿದೆ. ಉಳಿದೆಲ್ಲ ಸಂಸ್ಕೃತ ನಾಟಕಗಳ ರೀತಿ-ನೀತಿ-ಶೈಲಿ ನಿರೂಪಣೆಗಳಿಂದ ಭಿನ್ನವಾಗಿದ್ದು ತನ್ನದೇ ಆದ ಸ್ಥಾನವನ್ನು ಗಳಿಸಿಕೊಂಡಿದೆ.

ಮುದ್ರಾ ರಾಕ್ಷಸ ನಾಟಕದಲ್ಲಿ ನಾಟ ಕಕಾರ ವಿಶಾಖ ದತ್ತನ ಜಾಣ್ಮೆ, ಪಾತ್ರ ನಿರೂಪಣೆ, ಕಥನ ಕುಶಲವೂ ವ್ಯಕ್ತವಾ ಗುತ್ತದೆ. ಆಯ್ಕೆ ಮಾಡಿ ಕೂಡಿರುವ ಕಥಾ ವಸ್ತು ಭಿನ್ನವಾಗಿದೆ. ಆದರೆ ಕುತೂ ಹಲಕಾರಿಯಾಗಿದೆ. ಆಶ್ಚರ್ಯಕರವಾಗಿ ದ್ದು ಆನಂದ ನೀಡುತ್ತದೆ. ಪೂರ್ವದ ಸಂ ಸ್ಕೃತ ನಾಟಕಕಾರರು ಅಳವಡಿಸಿದ ಎಷ್ಟೊತ ಕಥಾವಸ್ತು, ತಂತ್ರ, ಶೈಲಿಗಳನ್ನು ಬಳ ಸಿ ವಿಶಾಖದತ್ತ ಮುದ್ರಾ ರಾಕ್ಷಸ ನಾಟ ಕಕ್ಕೆ ಪ್ರತಿಭೆಯ ಮೆರುಗನ್ನು ಕೊಟ್ಟಿದ್ದಾ ನೆ. ಮುದ್ರಾ ರಾಕ್ಷಸ ನಾಟಕದ ಆರಂಭ ದಿಂದ ಅಂತ್ಯದ ವರೆಗೆ ನಾಟಕದ ವಸ್ತು ಒಡಗನ ಮೇಲೆ ಪರಿಣಾಮಕಾರಿ ಪ್ರ ಭಾವ ಬೀರುತ್ತದೆ. ಆಸಕ್ತಿಯನ್ನು ಕೆರಳಿ ಸುತ್ತದೆ. ವಿಶಾಖದತ್ತ ತನ್ನ ಈ ನಾಟಕ ಕ್ಕೆ ಐತಿಹಾಸಿಕ ಕಥಾವಸ್ತುವನ್ನೇ ಬಳ ಸಿಕೊಂಡಿರುವುದು ಸ್ವಾಗತಾರ್ಹ ಸಂಗ ತಿಯಾಗಿದೆ. ಮುದ್ರಾ ರಾಕ್ಷಸ ನಾಟಕದ ಲ್ಲಿ ಉಳಿದ ಸಂಸ್ಕೃತ ನಾಟಕಗಳಲ್ಲಿರುವಷ್ಟು ನೊತನ ಸ್ವರೂಪ ಸಂಪ್ರದಾಯಗಳನ್ನು ಮ ನ ಗಾ ಣ ಬಹುದಾಗಿದೆ. ಈ ಕಾರಣ ದಿಂದ ಸಂಸ್ಕೃತ ನಾಟಕ ಕ್ಷೇತ್ರದಲ್ಲಿ ವಿ ಶಾಖ ದತ್ತನ ಮುದ್ರಾ ರಾಕ್ಷಸ ನಾಟಕ ಕ್ಕೆ ವಿಶೇಷ ಗೌರವ— ಪ್ರಾಧಾನ್ಯತೆ.

ಮುದ್ರಾ ರಾಕ್ಷಸ ನಾಟಕದಲ್ಲಿ ಸ್ತ್ರೀ ಪಾತ್ರಗಳು ಸಂಖ್ಯಾರ್ಣವಾಗಿ ಇಲ್ಲವಿರು ವುದು ಮತ್ತೊಂದು ವೈಶಿಷ್ಟ್ಯ. ನಾಟಕದ ಕಥಾವಸ್ತು ಸರಳವಾಗಿದ್ದು, ಐತಿಹಾಸಿಕ ಘಟನೆಯೊಂದ ಆಯ್ಕೆ ಮಾಡಿರುವುದಾದು ದರಿಂದ ವಸ್ತು ಪ್ರೌಢಿಮೆಯ ಸ್ವಭಾವಗತಿ ಗನುಸಾರವಾಗಿ ಮಂದುವರಿದು ಓದುಗ ರಲ್ಲಿ ಆಸಕ್ತಿಯನ್ನು ಮೂಡಿಸಿ ಪ್ರಕಂಸೆಗೆ ಗುರಿಯಾಗಿ ಯಶಸ್ವಿಯಾಗುತ್ತದೆ.

ವಿಶಾಖದತ್ತನ ಜೀವನಕಾಲದ ಬಗೆಗೆ ಸ್ಪಷ್ಟವಾದ ಒಮ್ಮತವಿಲ್ಲ. ಅವನ ಕಾಲ್ಪ ನಿಕ ಶ್ರೀ. ಶ. ಸುಮಾರು ೯ನೆಯ ಶತ ಮಾ ನದ ವರೆಗೆ ಊಹಿಸುತ್ತಾರೆ. ಈ ಬಗ್ಗೆ ಪಂಡಿತರಲ್ಲಿ ಭಿನ್ನಾಭಿಪ್ರಾಯವಿದೆ. ಶ್ರಿ. ಶ. ೧೧ನೆಯ ಶತಮಾನದಲ್ಲಿ ರಚಿತವಾದ ಧನಂಜಯನ "ದಶರೂಪಕ"ದಲ್ಲಿ ಮೂ ರು ಪ್ರತ್ಯೇಕ ಸ್ಥಳಗಳಲ್ಲಿ ಮುದ್ರಾ ರಾಕ್ಷ ಸನ ಹೆಸರು ಪ್ರಸ್ತಾಪಿಸಿರುವುದಂದರ್ಭ ವು ಶತಮಾನಕ್ಕಿಂತ ಹಿಂದಿನ ಕೃತಿ ಎಂ ದು ಧಾವಿಸಬಹುದಾಗಿದೆ. ಕ್ರಿ ಶ. ೧೦ ನೆಯ ಶತಮಾನದ ಮಹಾ ರಾ ಜ ಭೋಜನ ಸರಸ್ವತಿ ಕಂ ರಾ ಭ ರ ಣ ದಲ್ಲಿ ಮುದ್ರಾ ರಾ ಕ್ಷ ಸ ನ ಕೆ ಲವು ಪದ್ಯಗಳನ್ನು ಕಾಣ ಬಹುದಾಗಿದೆ. ಮುದ್ರಾ ರಾಕ್ಷಸ ನಾಟಕದ ಭರತ ವಾ ಕ್ಯದಲ್ಲಿ "ಪಾರ್ಥಿಶ್ಚಂದ್ರಗುಪ್ತ" ಎಂದಿರು ವುದಂದ ಪಂಡಿತರು-ಸಂಶೋಧಕರು ಕ ವಿಯ ಕಾಲ ಕ್ರಿ.ಶ ಜನೆಯ ಶತಮಾನದಲ್ಲಿ ದ್ದ ಚಕ್ರವರ್ತಿ ಚಂದ್ರಗುಪ್ತನ ಕಾಲವಿರಬ ಹುದೆಂದು ಅಭಿಪ್ರಾಯ ಪಡುತ್ತಾರೆ. ದಂ ತಿ ವರ್ಮ, ರಂತಿ ವರ್ಮ ಮತ್ತು ಅವಂ ತಿವರ್ಮ ಈ ಮೂವರು ಅರಸರೂ ಪಲ್ಲ ವ ಕೂಟ ಮತ್ತು ರಾಷ್ಟ್ರಕೂಟ ಅರಸು ಮನೆತನದವರು. ಇವರ ಕಾಲ ಕ್ರಮವಾ ಗಿ ಕ್ರಿ. ಶ. ೮೦೦, ಕ್ರಿ. ಶ. ೮೫೦ ಮತ್ತು ಕ್ರಿ. ಶ. ೯೦೦-೯೫೦ರ ವರೆ ದಂತಿವರ್ಮನ ಹೆ ಸರು ಚರಿತ್ರೆಯಲ್ಲಿ ಪ್ರಸಿದ್ಧವಾಗಿದೆ. ಈ ಅರಸರ ಕಾಲದಲ್ಲಿ ವಿಶಾಖ ದತ್ತ ಇದ್ದಂತೆ ತಿಳಿದು ಬರುವುದ ಲ್ಲಿ. ರಂತಿ ವರ್ಮನ ಬಗೆಗೆ ಎನೂ ತಿ ಳಿಯುವುದಿಲ್ಲ. ಅವಂತಿ ವರ್ಮನ ಹೆಸರು ಚರಿತ್ರೆಗೆ ಪರಿಚಿತವಾದ ಹೆಸರು. ಇವನು ರಾಜಶ್ರೀಯ ಪಾವ (ಕರ್ನೂಜನ ಹರ್ಷ ವರ್ಧನನ ಸಹೋದರ) ಈ ಕಾರಣಗಳಿಂ ದಾಗಿ ವಿಶಾಖದತ್ತ ಕ್ರಿ. ಶ. ೬೦೦ರ ಸು ಮಾರಿನಲ್ಲಿ ಇದ್ದಿರಬಹುದೆಂದು ಊಹಿಂ ಬಹುದಾಗಿದೆ.

ಮುದ್ರಾ ರಾಕ್ಷಸ ವಿಶಾಖದತ್ತನ ಏ ಕೈಕ ಸುಪ್ರಸಿದ್ಧ ನಾಟಕ. ಕವಿಯ ಪ್ರತಿ ಭಾಪೂರ್ಣ ಗ್ರಂಥ. ನಾಟಕಕಾರನ ಪ್ರ ತಿಭೆಯ ಅಮರ ಕೃತಿ.

ವಿಶಾಖದತ್ತನು ರಾಮ ಕಥೆಯ ಆ ಧಾರದಿಂದ ಮೇರೆಗ ನಾಟಕ ಬಂದನ್ನು ಬರೆ ದಂತೆ ಅರ್ಥವಾಗುತ್ತದೆ. ಶ್ಲೋಕದ ಲ್ಲಿ ವಿಭೀಷಣ ರಾವಣರ ಸಂಧಾಷಣೆ ಇದೆ.

ದೇವಿ ಚಂದ್ರಗುಪ್ತ ಎಂಬ ನಾಟಕ ವಿಶಾಖ ದತ್ತನದೇ, ಇಂಬಹುದೆಂದು ರಾಮಚಂದ್ರ ಗುಣಚಂದ್ರರು ಅಭಿಪ್ರಾ ಯಪಡುತ್ತಾರೆ. ಇದು ಐದು ಅಂಕ ಗಳ ನಾಟಕ ಎಂಬ ಎಂಬೆಕೆ ತಿಪ್ಪ ಭೋಜ ನ ಶೃಂಗಾರ ಪ್ರಕಾಶ ಮತ್ತು ಅಭಿನವ ಗುಪ್ತರ ಭರತ ಮುನಿಯ ನಾಟ್ಯ ಶಾಸ್ತ್ರ ದ ಬಗೆಗೆ ಬರೆದ ಅಭಿಪ್ರಾಯಿಕಗಳಲ್ಲಿ ಈ ಸಂಗತಿಯು ಪ್ರಸ್ತಾಪವಿದೆ.

'ಅಭಿನಾವಿಕ ಚಂದ್ರಿತರ' ಎನ್ನುವ ಮೂ ತ್ರೊಂದು ಕೃತಿಯೂ ವಿಶಾಖ ದತ್ತನದೇ ಆಗಿದ್ದು ಈ ಸಂಗತಿ ಭೋಜ ಮತ್ತು ಅ ಭಿನವ ಗುಪ್ತರ ಗ್ರಂಥಗಳಲ್ಲಿ ಉಲ್ಲೇಖಿ ಸಲ್ಪಟ್ಟಿದೆ.

ಶಾರದಾ ದೇವಿ

ಕವಿ:

ನಿ। ಎಚ್. ವೆಂಕಟರಮಣಯ್ಯ.
ಸಂಗ್ರ ಹ: ಕೆ. ವೆಂಕಟರಾಯಾಚಾರ್ಯ.

(ಸರಸ್ವತಿಯ ಚಿತ್ರಗಾಂಕಿಯನ್ನು ನೂಡಿ ಗಳಿಂದಲೆ ಮನವರಿಕೆಗೊಳ್ಳುವಂತೆ ದ್ವಿಪದಿ ಯಲ್ಲಿ ಹೆಣೆದ ಹಾಡು; ಇದನ್ನು ಬಾಲಕಿಯು ಅಳ್ಳಕೆಯಿಂದ ಹಾಡಬಲ್ಲರು).

ನೋಡಿರೈ ಶಾರದೆಯು ಕುಳಿತಿರುವ
ಚೆಂದ।
ಬೇಡಿದುದ ಕೊಡುವ ಸಂತೋಷ
ಮುಖದಿಂದ ॥ ಪ ॥

ತೋರುತಿವೆ ನಾಲ್ಕು ಕೈಗಳು ಬೇರೆ ಬೇರೆ।
ಬೀರುತಿವೆ ಆನಂದ ಬಿಗಿದುಬ್ಬಿ ಸೀರೆ ॥೧॥
ಎಡಗಾಲ ಮೇಲೆ ಬಲಗಾಲ ನೆಗೆದಿಟ್ಟು।
ಕಡಗ ಕಂಕಣ ಕುಪ್ಪಸಾದಿಗಳ ತೊಟ್ಟು
॥ ೨ ॥

ಎಳೆಯುತಿದೆ ಮನವ ಕೈಗಳ
ವೀಣೆಯೊಟ।
ಹೊಳೆಯುತಿದೆ ತಲೆಯ ಮೇಲೇರಿಹ
ಕಿರೀಟ ॥ ೩ ॥

ಒಲೆ ಪುಸ್ತಕವಿರುವುದೊಂದು ಕೈಯೊಳಗೆ।
ಜೋಲುತಿದೆ ಜಪಮಾಲೆ
ಇನ್ನೊಂದರೊಳಗೆ ॥ ೪ ॥

ಅವಳ ಕಣ್ಣನೋಟಗಳು ಬರುವಳೆಂದು।
ಸೇವಿಸಲು ನೋಡುತಿದ ನವಿಲಲ್ಲಿ ನಿಂದು
॥ ೫ ॥

ಮಂಗಳರೆ ಮನೆಯಂತೆ ಮೆರೆಯುತಿವೆ
ಹಿಂದೆ।
ಹರುಷಗೊಳಿಸುವ ಸರೋವರ
ಇದಿರಿನಿಂದೆ ॥ ೬ ॥

ತಾವರೆಯು ತಲೆದೂಗುವುದ ಕಂಡು
ಬೇರೆ।
ಹೂವುಗಳು ನಗುವಂತಿಹವು ಕೊಳವ
ಸಾರೆ ॥ ೭ ॥

ಹಳುವಿನೊಳು ಶಿಲೆಯು (ಹಾಸನ) ಮೇಲೆ
ನೆಲಸಿ।
ಕುಳಿತಿಹಳು ತಾನೂಲಿವ
ತಾಣವಿದುಯೆನಿಸಿ ॥ ೮ ॥

ಅಮ್ಮಯ್ಯ ಬಾರಿ ಹುದಿ ನಾಲಿಗೆಯು
ಮೇಲೆ।
ದಮ್ಮಯ್ಯ ಬೇಡುವೆನು ದಯವಿಡು
ಸುಶೀಲೆ ॥ ೯ ॥

(ಇಂದು) ವಿದ್ಯಾದಾಯಿ ನಿ ಎಂಬ
ಹೆಸರಿಂದ।
ಬಂದು ಕುಳಿತಿಹೆ ತಾಯೆ ಸಲ್ಲಸಾನಂದ
॥ ೧೦ ॥

ಈ ಸವನ ಚೆಂದದೋರುವುದು
ಫಿನ್ನಂದ।
ವಾಸುದೇವನ ಸೊಸೆಯೆ ಸಲ್ಲಿಸಾನಂದ
॥ ೧೧ ॥

ವೆಂಕಟೇಶನ ಗಯವು ಬರುವಂತೆ ನಮ್ಮ।
ಪಂಕಜಾಸನ ಪ್ರಿಯೆ ಸಲಹೊ
ನಮ್ಮವ ॥ ೧೨ ॥

ಸುಬ್ರಹ್ಮಣ್ಯ ಜಾತ್ರೆ

ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ತಾಲ್ಲೂ ಸುಬ್ರಹ್ಮಣ್ಯ ಗ್ರಾಮದಲ್ಲಿರುವ
ಮಹತೋಭಾರ ಕುಕ್ಕೇ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸಾನದಲ್ಲಿ
ಪೂರ್ವಿಕ್ಕೆ ಸಂಪ್ರದಾಯ ಪ್ರಕಾರ ಇದೇ ಪ್ಲವಂಗ ಪದವಸ್ಸರದ ಕಾರ್ತಿಕ
ಬಹುಳ ೧೩ಯಲು ಬುಧವಾರ ತಾ. 29—11—67ರಿಂದ ಉತ್ಸವವು ಪ್ರಾರಂಭ
ವಾಗಿ ತಾ. 1—12—67ರಲ್ಲು ಲಕ್ಷ ದೀಪೋತ್ಸವ, ತಾ. 5—12—67ರಲ್ಲು
ಹೂವಿನ ತೇರು ಉತ್ಸವ, ತಾ. 6—12—67ರಲ್ಲು ಪಂಚಮಿ ರಥೋತ್ಸವ,
ತಾ. 7—12—67ರಲ್ಲು ಚಂಪಾ ಷಷ್ಠಿ ಮಹಾರಥೋತ್ಸವ,
ತಾ. 8—12—67ರಲ್ಲು ಅವಭೃತೋತ್ಸವದೇ ಮೊದಲಾದ ಮಹೋತ್ಸವಗಳು
ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

ಸರ್ವರೂ ಬಂದು ಗಂಧ ಪ್ರಸಾದಾದಿಗಳನ್ನು ಸ್ವೀಕರಿಸಿ ಶ್ರೀ ಸುಬ್ರಹ್ಮಣ್ಯ
ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗುವಂತೆ ಅಪೇಕ್ಷಿಸುತ್ತೇವೆ.

ಆಡಳಿತ ಸಮಿತಿ

ಬೋನಿನೊಳಗಿನ ಹುಲಿಗರ್ಜನೆ

(ನಾಲ್ಕನೇ ಪುಟದಿಂದ)

"ಏನಾಗುತ್ತೋ? ದಿನದಿನಕ್ಕೂ ನಮ್ಮ ಪಕ್ಷಗಳ ಸಂಖ್ಯೆಯೇ ಹೆಚ್ಚುತ್ತ ಹೋಗುತ್ತಿರುವಾಗ?'

"ಯಾಕೆ? ಹೊಸ ಪಕ್ಷೋದಯವಾಯಿತು?'

'ಇಂದೂಲಾಲ ಯಜ್ಞಿಕರು ತಮ್ಮದೇ ಆದ ಪಕ್ಷವೊಂದನ್ನು ಲೋಕಸಭೆಯಲ್ಲಿ ಕಟ್ಟಿದರಂತೆ...'

'ಹೋಗಲಿ ಬಿಡಿ. ಏಮಗೇನು? ನಮ್ಮಲ್ಲಿ ರಾಜಕೀಯ ಪುಡಾರಿಯೊಬ್ಬರೆ, ಎಂತಾದರೂ ಜೀವನ ನಿರ್ವಾಹ ಮಾಡಿಕೊಳ್ಳಬಹುದು ಎಂಬ ವಿಚಾರ ಬಲವಾಗಿ ಮೂಡಿದಂತಿದೆ. ಈ ಭಾವನೆ ದೂರವಾಗದೆ ದೇಶೋನ್ನತಿ ಕಂಡಿತಕ್ಕೂ ಸಾಧ್ಯವಿಲ್ಲ.'

'ಅಲ್ಲ, ನಿನಗಿರುವಷ್ಟು ಬುದ್ಧಿ ಈ ರಾಜಕೀಯ ಪುಡಾರಿಗಳಿಗಿದ್ದಿದ್ದರೆ...'

"ಅಲ್ರಿ, ಅಷ್ಟು ಬುದ್ಧಿಯಿರುತ್ತಿದ್ದರೆ ಅವ್ರು ನನ್ನ ಹಾಗೇನೇ ಉಳಿಯುತ್ತಿದ್ದರು. ಪುಡಾರಿಗಳೆನಿಸಿಕೊತ್ತಿದ್ದರೆ?"

'ಅಮ್ಮಾ ಶರಣ್ಣು. ಅವರ ಬಟ್ಟೆ ಅವರಿಗೆ, ನಮ್ಮ ದಾರಿ ನಮಗೆ...."

'ನಮ್ಮ ದಾರಿಗೆ ಬೇರೆ ಯಾರು ಅಡ್ಡ ಬರಬೇಕು?"

'ಬೇಡಾನ್ನು. ನಮಗೆ ಅವೇ ನಮ್ಮ ಒಡೆಯರು...'

"ಒಡೆಯರಲ್ಲ, ಸಾಮಂತರು...."

'ಹ್ಞೂಂ....ಹಾಗೇ ಸರಿ...."

"ಹ್ಞೂಂ....ಆಯ್ತೋ...."

"ಏಕೆ, ಏನಾಯ್ತು....?"

"...ಏನೂ ಇಲ್ಲಾಪ್ಪಿ..."

—ಗೋರಾ.

ಸಂಗ್ರಾಹ್ಯ ಸಂಕಲನಗಳು

‡

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	2—00
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಿಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಭುಡಿಮುಷ್ಟುಗಳು	1—50
ವಿಚಿತ್ರ ಕಳ್ಳಬೇಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1 - 00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಪುಷ್ಪ ವನ	2—00

ಕೆಸಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕೃಷಿಕ ರಂಗ

ಹಣ್ಣು ಉದುರದಂತೆ ಕಾಪಾಡಿ

ಮಾವು ಮತ್ತು ಜಂಭೀರ ಜಾತಿಯ ಹಣ್ಣುಗಳಾದ ನಿಂಬೆ, ಕಿತ್ತಳೆ ಮುಂತಾದುವುಗಳು ಬಲಿಯುವುದಕ್ಕೆ ಮುಂಚೆಯೇ ಗಿಡದಿಂದ ಹೆಚ್ಚು ಉದುರಿ ಹೋಗುವುದುಂಟು. ಸುವಾರು ಶೇಕಡ್ಕ ಭಾಗ ಈ ಹಣ್ಣುಗಳು ಒಂದಲ್ಲ ಒಂದು ವಿಧದಲ್ಲಿ ಉದುರಿ ಹೋಗುವುದರಿಂದ ಬೆಳೆಗಾರರಿಗೆ ನಷ್ಟ ವೂಹ್ಯವಲ್ಲ, ಇನ್ನೂ ಒಂದು ಸಮಸ್ಯೆಯೂನಿಯೇ ಉಳಿದಿದೆ.

ಜಂಭೀರ ಜಾತಿಯ ಹಣ್ಣುಗಳಾದರೆ, ಎಪ್ರಿಲ್ ತಿಂಗಳನಲ್ಲಿ ಕಾಯಿ ಬಿಡಲುಪಕ್ರಮವಾದ ಕೂಡಲೆಹೆಚ್ಚು ಉದುರಿಹೋಗುತ್ತವೆ. ಏಕೆಂದರೆ ಗಿಡತುಂಬ ಹಿಂದೆಗಳು ತುಂಬಿ ಹೋಗಿರುತ್ತವೆ. ಮತ್ತೆ ಬಿಸಿಲುಕಾಲದಲ್ಲಿ(ಜೂನ್ ತಿಂಗಳೊಳಗೆ)ಒಣಗಿದಹವೆಯಿಂದಾಗಿ ಉದುರಿ ಹೋಗುವುತ್ತ. ಇಷ್ಟೆ ಅಲ್ಲದೆ ಹಣ್ಣು ಕೊಯ್ಲಿಗೆ ಬರುವುದಕ್ಕೆ ಮುಂಚೆಯೂ ಉದುರಿ ಹೋಗುವುತ್ತ.

ಕೊಯ್ಲಿಗೆ ಬರುವುದಕ್ಕೆ ಮುಂಚೆ ಬಿದ್ದ ಹಣ್ಣನ್ನು ಮೊದಲು ಲಾಭ ಸಿಗದು. ಹೀಗಾಗಿ ಈ ಸಮಸ್ಯೆ ಸಮಸ್ಯೆರೂಪಗಿಯೇ ಉಳಿದು ನಿಂತಿದೆ ನಮ್ಮ ರೈತರಿಗೆ.

ಈ ರೀತಿ ಹಣ್ಣುಗಳು ಗಿಡದಿಂದ ಉದುರಿ ಹೋಗಲು ಅನೇಕ ಕಾರಣಗಳುಂಟು.

ಕಾಲವಲ್ಲದ ಕಾಲದಲ್ಲಿ ಹಣ್ಣು ಬಿಟ್ಟ ಅವು ಉದುರಿ ಹೋಗುವುವು. ಆವಾಗುಣ ಕೃಷಿ ಪದ್ಧತಿಯಲ್ಲಿ ವ್ಯತ್ಯಾಸವಿದ್ದರೂ ಗಿಡದಲ್ಲಿ ಹಣ್ಣುಗಳು ನಿಲ್ಲುವುದಿಲ್ಲ.

ಮಾವಿಗೆ ಗಿಡದಲ್ಲಿ ಪೀಚು ಬಿಟ್ಟ ಮೇಲೆ ೫—೬ ವಾರದ ವರೆಗೆ ಕಾಯಿಗಳು ತಪ್ಪದೆ ಉದುರುತ್ತಲೇ ಇರುತ್ತವೆ. ಉತ್ತರ ಧಾರವಾಡದಲ್ಲಿ, ಮೇ ತಿಂಗಳೊಳಗೆಯೇ ಹಣ್ಣು ಉದುರಿ ಹೋಗುವುದು ನಿಂತು ಹೋಗುತ್ತದೆ. ಆನಂತರ ಕಾಯೇನಾದರೂ ಉದುರಿತೆಂದರೆ ಅದು ಗಿಣಿ ಮುಂತಾದವುಗಳು ಹಿಂದು ಹಾಕಿದರಿ ಅಥವಾ ಗಾಳಿಯು ಹೊಡೆತಕ್ಕೆ ಮಾತ್ರ ಬಿದ್ದು ಹೋಗುವುತ್ತ.

ಕಾಯಿ ಚೆನ್ನಾಗಿ ಬಲಿತ ಕೂಡಲೆ ಉದುರಿ ಹೋಗುವುದುಂಟು ಇದನ್ನು ತಪ್ಪಿಸಲು ಸೇಬು, ಜಂಭೀರ ಜಾತಿಯ ಹಣ್ಣುಗಳನ್ನು ಬಲಿಕಾದ ಕೂಡಲೇ ಕೀಳುವುದು ಒಳ್ಳೆಯದ.

ಸಾಮಾನ್ಯವಾಗಿ ಮಣ್ಣಿನಲ್ಲಿ ಸಾಕಷ್ಟು ತೇವವಿಲ್ಲದಿದ್ದರೆ, ಸಾಕಷ್ಟು ಫಲವತ್ತಾಗಿಲ್ಲದಿದ್ದರೆ, ರೋಗಕೀಟಗಳು ಹೆತ್ತಿದರೆ, ಹೊಂದಾಡಿಕೆಯಲ್ಲದ ಹವಾಗುಣವಿದ್ದರೆ, ಹೀಗೆ ಮುಂತಾದ ಕಾರಣಗಳಿಂದ ಹಣ್ಣು ಉದುರಿ ಹೋಗುತ್ತವೆ. ಇಷ್ಟೆ ಅಲ್ಲದೆ ಗಿಡ ಚೆನ್ನಾಗಿ ಬೆಳೆದಿಲ್ಲದಿದ್ದರೂ ಕೂಡ ಹಣ್ಣು ಉದುರಿ ಹೋಗುವುದಂಟು.

೨೨—೨ ಮದ್ದು ಜಂಭೀರ ಜಾತಿಗಳ ಹಣ್ಣುಗಳು ಕೊಯ್ಲಿಗೆ ಬರುವುದಕ್ಕೆ ಮುಂಚೆ ಬೇಳದಂತೆ ಮಾಡಲು ಸಹಾಯಕಾರಿಯಾಗಿದೆ. ಈ ಮದ್ದು ಮಾರುಕಟ್ಟೆಯಲ್ಲಿ ಸುಲಭ ಬೆಲೆಗೆ ಸಿಗುತ್ತದೆ. ಅನಾನಸ್, ಮೋಸಂಬಿ, ಸಾತ್‌ಗುಡಿ ಮುಂತಾದ ಕಣ್ಣಿನ ಗಿಡಗಳಿಗೆ ೨.೨೦ ಪಿ. ಪಿ. ಎಮ್ ಬಲವಿರುವ ೨೨—೨ ಮದ್ದನ್ನು ಸಿಂಪಡಿಸಿದರೆ ಸಾಕು. ಇನ್ನು ಹೆಚ್ಚು ಬಲದ ಮದ್ದನ್ನು ಹಾಕಬಹುದು. ಆದರೆ ಅದು ಎಲೆಗಳನ್ನು ಹಾಳುಮಾಡುತ್ತವೆ.

ಈ ಜಂಭೀರ ಜಾತಿಯ ಹಣ್ಣಿನ ಗಿಡಗಳಿಗೆ ೨೨—೨ ಮದ್ದನ್ನು ಕಾಯಿಗಳು ಬುದರಲು ಮೂರು ತಿಂಗಳಿದೆಯೆನ್ನುವಾಗಲಿಂದ ಹಿಡಿದು ಹೆಚ್ಚು ಕಾಯಿಗಳು ಉದುರಲು ಪ್ರಾರಂಭವಾದ ಎರಡು ವಾರದ ವರೆಗೆ ಸಿಂಪಡಿಸಬೇಕು. ಇದರಿಂದ ಹಣ್ಣುಗಳೂ ಹೆಚ್ಚು ಬಿದುವುವು. ಕೊಯ್ಲಿಗೆ ಬರುವ ವೇಳೆಗೆ ಕಾಯಿ ಗಳೂ ದೊಡ್ಡದಾಗಿಯೂ ಇರುತ್ತದೆ. ಮತ್ತು ಕಾಯಿಯಲ್ಲಿನ ಯಾವ ಗುಣವೂ ಕುಂದಿ ಹೋಗುವುದಿಲ್ಲ.

ಮದ್ದನ್ನು ಸಿಂಪಡಿಸಿದಾಗ ಪ್ರತಿಯೊಂದುಕೊಂಬೆಯೂದ್ಯಾವಣದಿಂದ ನನೆಯುವಂತೆ ಎಚ್ಚರಿಕೆ ವಹಿಸಬೇಕು; ಗಿಡಗಳ ತುದಿಯ ಬಳಿ ಹಾಗೂ ಹೊಸ ಭಾಗಗಳಲ್ಲೂ ಮದ್ದನ್ನು ಸಿಂಪಡಿಸಬೇಕು.

ಎಷ್ಟು ಮದ್ದನ್ನು ನೀರಿನಲ್ಲಿ ಬೆರೆಸಿ ಗಿಡಗಳಿಗೆ ಸಿಂಪಡಿಸಬೇಕು ಎನ್ನುವುದು ಆವಾಗಆ ವಯಸ್ಸನ್ನು ಅವಲಂಬಿಸುತ್ತದೆ ಆದರೂ ಜಂಭೀರ ಜಾತಿಯ ಹಣ್ಣಿನ ಒಂದು ಎಕರೆ ತೋಟಕ್ಕೆ ೫೦೦ ಲೀಟರ್ ದ್ರಾವಣವಾದರೆ ಸಾಕು, ಹೆಚ್ಚು ಗ್ರ್ಯಾಂಪಿ-ಡಿ ಮದ್ದನ್ನು ಸ್ವಲ್ಪನೇ ಸ್ವಲ್ಪ ಅಲ್ಕೊಹಾಲ್‌ನಲ್ಲಿ ಹಾಕಿ, ಕರಗಿದ ಮೇಲೆ ೫೦೦ ಲೀಟರ್ ನೀರಿನಲ್ಲಿ ಬೆರೆಸಿ ದ್ರಾವಣವನ್ನು ತಯಾರಿಸಬೇಕು. ಈ ಮದ್ದನ್ನು ಆರೋಗ್ಯವಾಗಿರುವ ಗಿಡಗಳ ಮೇಲೆ ಮೂರ್ತಾ ಸಿಂಪಡಿಸಬೇಕು.

ಈ ಮದ್ದಿನ ಪರಿಣಾಮವು ಗಿಡಗಳ ಮೇಲೆ ಬಹಳ ಕಾಲ ಉಳಿಯುವುದರಿಂದ ಇತರ ಶಿಲೀಂಧ್ರನಾಶಕ ಮತ್ತು ಕೀಟನಾಶಕಗಳೊಂದಿಗೆ ಬೆರೆಸಿ ಸಿಂಪಡಿಸಬಹುದು. ಇದರಿಂದ ಕೂಲಿಯ ಹಣವೂ ಉಳಿತಾಯವಾಗುತ್ತದೆ.

ಈ ಮದ್ದನ್ನು ಸಿಂಪಡಿಸುವಾಗ ದಿನದ ಉಷ್ಣಾಂಶ ಅತಿಯಾಗಿರಬಾರದು. ವಿಪರೀತ ಗಾಳಿಯಿರುವ ದಿನ ಸಿಂಪಡಿಸಿದರೆ ಉಪಯೋಗವಿಲ್ಲ. ಸಿಂಪಡಿಕೆ ಯಂತ್ರವನ್ನು ಉಪಯೋಗಿಸುವುದಕ್ಕೆ ಮುಂಚೆ ಮತ್ತು ಉಪಯೋಗಿಸಿದ್ದಾದ ಮೇಲೆ ಚೆನ್ನಾಗಿ ತೊಳೆದಿಡಬೇಕು.

ಮಾವಿನ ಕಾಯಿಗಳೂ ಕೂಡ ಉದುರದಂತೆ ಕಾಪಾಡಲು ಕಳೆದ ಹತ್ತು ವರ್ಷಗಳಿಂದ ಪ್ರಯತ್ನ ನಾಗುತ್ತಲೇ ಇದೆ. ಇದಕ್ಕೂ ೨೨—೪-ಡಿ ಮದ್ದನ್ನು ಸಿಂಪಡಿಸುವುದು ಲಾಭದಾಯಕವಾಗಿ ಕಂಡುಬಂದಿದೆ.

ನವ್ಯ ಪಥಿಕ

ರಾಮರಾಜ್ಯದ ಮೇಲೆ ವ್ಯಾಖ್ಯಾನವೇಕು|
ದನದ ಚಿತ್ರದ ಕೆಳಗೆ—"ದನ"—
ಬರೆಯುವೇಕು! ||

ನೆಗೆ ಹಸಿಯ ತಲೆ ಬರಹ—"ನಕ್ಕು ಬಿಡಿ ಕೊಂಚ" |
ಕೃತಕವೇ? ಕೃತ ಯುಗವೇ—ನವ್ಯ
ಪ್ರಪಂಚ! ||೧||

ನಮ್ಮ ಹೇಳಿಕೆಯಂತೆ...?
ಖುಷಿ ಮೂಲ ಕುಲದವರು ನಮಗೆಲ್ಲ
ಸಾಧ್ಯ!

ಅತ್ತಿತ್ತ ಜಾವ—ಮುಂಗುಸಿ—ನಾವು
ಮಧ್ಯ ||

ಎಡದ ಕೈಯಲ್ಲಿ ಕಂಟೆ ಬಲದಲಿ ದಂಡ|
ನಮ್ಮ ಜೇಳಿಕೆಯಂತೆ ನಿವಿಳ
ಬ್ರಹ್ಮಾಂಡ ||೨||

ಕುಪೀ ರಾಜ್ಯ!
ಮಧ್ಯವಾನ ನಿರೋಧ ಕಾನೂನು ರದ್ದು|
ಕುಡಿದ ಜನ ಹೆಂಡರುಳುವರು ರಸ್ತೆಪಲಿ
ಬಿದ್ದು ||

ರಾಮರಾಮೂ ಸುಪೀ ರಾಜ್ಯವಿನ್ನೆ ಮಗೆ||
ಗಾಂಧಿ ನಗ ತಿಪನಲ್ಲಿ ಬೊಚ್ಚು ಬಾಯಿ
ನಗೆ ||೩||

? ? ?
ಕಾಶಿಯೊಳ್ ಜ್ಞಾನ್ಯಮ್ಯ ಭವ್ಯನ ದುವಾರ|
ಆದರೂ ಬದಲಿಲ್ಲ ವಿದ್ವನ್ಮನಿಲಾಸ! ||
ಮಂಡಿಸಿಹುದಿಲ್ಲಿ ಪುಣ್ಯ ಜಂದಲ್ಲಿ ಜಂಕ|
ದರ್ಭೆಯೂಗಿಲ್ಲವರ ಕೂದಲಿದು ತನಕ! ||೪||

ಕಾಲೇಜು—ಕನ್ನಡ.
ಕನ್ನಡದ ತರಗತಿ ೨೨ ಅಕ್ಷರ ಪ್ರಭಾತ|
ತನ್ನ ಮನೆಯಂದ ವ್ಯಾಧಿಗಳಿ
ಧ್ವಂಸ ||

ಕವಿ ಕಲಿಬೇಕಿಲ್ಲ—ತಪಗುಪನ್ನಾಳ |
ಹತ್ತಿ ಬಿಟ್ಟುತಪೆ ಕಾ—ಸುಲಭ ವಘ್ಯಾಳ|
||೫||

ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಪ್ರೀತಿ|
ಪ್ರೀತಿಯಿದ್ದರೆ ವಿಚಾರಿಸ ಬೇಡ ರೀತಿ||
"ಕುರಿತೋದದೆಯೆ ಚದುರ"ರೆಂದಾದ
ಮೇಲೆ!

(ನೃಪತುಂಗ ನಾತ್ಯ ಹಣ್ಣಿಗೆ—ದೂರ
ಮೇಲೆ) ||೬||

"ಕಶ್ಚಿತ್"

ದ. ಕ. ಜಿಲ್ಲೆಯ ವಿರೋಧ ಪಕ್ಷಗಳ ಶಾಸಕರ ಸೇವಾಪ್ರತಿಜ್ಞೆ

ಕಾಸ್ರ, ನವೆಂಬರ್ 12ರಂದು ಪ್ರಥಮ ಬಾರಿಗೆ ದ. ಕ. ಜಿಲ್ಲೆಯ ಎಲ್ಲಾ ವಿರೋಧ ಪಕ್ಷಗಳ ಶಾಸಕರ ಸಭೆಯೊಂದು ಶ್ರೀ ಬಿ. ಭಾಸ್ಕರ ಶೆಟ್ಟಿ ಎಂ. ಎಲ್. ಎ. ಅವರ ಮುಖ್ಯಂಡಿತ್ವದಲ್ಲಿ ಶ್ರೀ ಹೆಚ್. ಸುಬ್ಬರಾವ್ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಕಳ ಕ್ಷೇತ್ರದ ವಿಧಾನಸಭಾ ಸದಸ್ಯ ಶ್ರೀ ಬೋಳ ರಘುರಾಮ ಶೆಟ್ಟರು ಮೂತನಾಡುತ್ತಾ ಇಂದು ರೈತರಿಗೆ ಉತ್ತೇಜನ ದೊರಕುತ್ತಿಲ್ಲ. ರೈತಜನಾಂಗವು ಸರಕಾರದಿಂದ ಯಾವ ಪ್ರಯೋಜನವನ್ನೂ ಹೊಂದಿಲ್ಲವೆಂದು ಹೇಳಿದರು. ಸುರತ್ಕಲ್ ಕ್ಷೇತ್ರದ ವಿಧಾನಸಭಾ ಸದಸ್ಯ ಶ್ರೀ ಪಿ. ವಿ. ಐತಾಳರು ಮೂತನಾಡುತ್ತಾ ಮಂಗಳೂರು ಬಂದರ ಯೋಜನೆಯು ಅಕ್ಕಿ ಬೆಳೆಯುವ ಪ್ರದೇಶವನ್ನು ಬರಡು ಮಾಡಿ, ಬಡ ಕುಟುಂಬಗಳ ಹೊಟ್ಟೆಗೆ ಹೆಟ್ಟು ಹಾಕಿದೆ ಮೂತ್ರವಲ್ಲದೆ ಬೇರೇನು ಪ್ರಗತಿಯನ್ನು ಸಾಧಿಸಿಲ್ಲವೆಂದರು ಮಾಡಿದಿದ್ರೆಯ ವಿಧಾನಸಭಾ ಸದಸ್ಯ ರಕ್ಷಣಾಮೂರ ಕ ಟ್ಟೀಲ್ವೂರ್‌ರವರು ಕಾಂಗ್ರೆಸ್ಸಿಗೆ ನೈತಿಕ ಬೆಂ ಬಲವಿಲ್ಲವೆಂದೂ ಅದರ ಅಡಳಿತದ ಫಲವಾಗಿ ದೇಶದ ಅಭಿವೃದ್ಧಿ ಕುಂಠಿತವಾಗಿ ಕಾನೂನು ಗಳು ಜನತೆಗೆ ಬಿಡಿಸಲಾರದ ಸಮಸ್ಯೆಗಳಾಗಿ ಬೆಯೆಂದರು.

ಬ್ರಹ್ಮಾವರ ಕ್ಷೇತ್ರದ ವಿಧಾನಸಭಾ ಸದಸ್ಯ ಶ್ರೀ ಎಸ್. ಜಯಪ್ರಕಾಶ ಶೆಟ್ಟರು ನವ್ಯಾದೇಶದ ಯೋಜನೆಗಳೆಲ್ಲಾ ಅಡಂಬರದ ಯೋಜನೆಗಳೆಂದೂ ಜನತೆಯು ಇವುಗಳಿಂದ ಯಾವ ಪ್ರಯೋಜನಗಳನ್ನೂ ಪಡೆಯಲಿಲ್ಲವೆಂ ದರು. ಕಾಪು ಕ್ಷೇತ್ರದ ವಿಧಾನಸಭಾ ಸದಸ್ಯ ರಾದ ಶ್ರೀ ಬಿ. ಭಾಸ್ಕರ ಶೆಟ್ಟರು ಮೂತನಾಡುತ್ತಾ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗಾಗಿ ಜನತಾ ಪ್ರತಿನಿಧಿಗಳು ಒಗ್ಗಟ್ಟಾಗಿ ದುಡಿಯುವ ಪ್ರತಿಜ್ಞೆ ಕೈಕೊಂಡಿರುವುದು ಶುಭಸೂಚಕವೆಯೆಂದರು. ಕಾಂಗ್ರೆಸಿನ ಅಡಳಿತದಿಂದಾಗಿ ದೇಶದಲ್ಲಿ ಕ್ಷೋಭೆಯುಂಟಾಗಿದೆಯೆಂದೂ ಯುವಕರೆಲ್ಲರೂ ನವಸಮಾಜನಿರ್ಮಾಣ ಕ್ಕಾಗಿ ಶ್ರಮ ತೊಡಬೇಕೆಂದೂ ಹೇಳಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಎಚ್. ಸುಬ್ಬ ರಾವ್‌ರವರು ಮೂತನಾಡುತ್ತಾ ಜನತೆಯು ದೇಶದ ಸಮಸ್ಯೆಗಳನ್ನು ಎದುರಿಸಲಿಕ್ಕಾಗಿ ವಿರೋಧ ಪಕ್ಷಗಳಿಗೆ ಸಹಾಯ ನೀಡಬೇಕೆಂದರು. ಕೊನೆಯಲ್ಲಿ ಶ್ರೀ ಟಿ. ದೇವದಾಸ ಕಾಮತ ರವರು ಧನ್ಯವಾದ ಸಮರ್ಪಿಸಿದರು.

ಈ ಸಭೆಯಲ್ಲಿ ಕೆಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು. ಅಕ್ಟೋಬರ 3ರಂಗಳಲ್ಲಿ ರಾಜ್ಯದ ಮುಖ್ಯಮಂತ್ರಿಗಳು ದ. ಕ. ಜಿಲ್ಲೆಗೆ ಬಂದಾಗ ಬಡಜನರ ಪರವಾಗಿ ಅವರನ್ನು ಭೇಟಿಯಾಗಲು ಬಂದ ಸುರತ್ಕಲ್ ಶಾಸಕರಿಗೆ ಭೇಟಿ ಕೊಡದೆ ಇದ್ದುದ್ದನ್ನು ಖಂಡಿಸಲಾಯಿ ತು.

ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಕೆಲವು ಸರಕಾರೀ ಅಧಿಕಾರಿಗಳ ಮೇಲೆ ಅನೈತಿಕ ಒತ್ತಡ ಹೇರಿ, ವಿರೋಧಪಕ್ಷದ ಶಾಸಕರು ಆರಿಸಿಬಂದ ಕ್ಷೇತ್ರಗಳಲ್ಲಿ ಸಾರ್ವಜನಿಕ ಹಿತರಕ್ಷಣೆ ನ್ಯಾಯ ಮತ್ತು ಕಾನೂನುಗಳಿಗೆ ವಿರೋಧ ಕಾರ್ಯಗಳಲ್ಲಿ ತೊಡಗಿರುವುದನ್ನು ಸಭೆಯು ತೀವ್ರವಾಗಿ ಖಂಡಿಸಿತು.

ಮೈಸೂರು ಭೂಸುಧಾರಣಾ ಕಾನೂನಿಗೆ ಸೂಕ್ತ ಬದಲಾವಣೆಗಳನ್ನು ಕೋರಲಾಯಿತು. ರಾಜ್ಯದಲ್ಲಿ ಎನ್. ಜಿ. ಒ. ಗಳಿಗೆ ಕೇಂದ್ರ ಸರಕಾರದ ತುಟ್ಟಿಭತ್ತೆಯನ್ನು ಕೊಡಬೇಕೆಂದು ಕೋರಲಾಯಿತು. ಬಕ್ತ ಪರಿವಾ ಕಾನೂನನ್ನು ತೆಗೆದು ಹಾಕಬೇಕೆಂದಾಯಿತು. ಮಾಧಾಜನ ಕಮಿಶನ ಶಿಫಾರಸನ್ನು ಜಾರಿಗೆ ತರಬೇಕೆಂದು ಒತ್ತಾಯಿಸಲಾಯಿತು. ಕೇಂದ್ರಸರಕಾರವು ಶಿವಸೇನೆಯ ದಬ್ಬಾಳಿಕೆಯನ್ನು ಬಹಿಷ್ಕರಿಸಬೇಕೆಂದೂ ಒತ್ತಾಯಿಸಲಾಯಿತು.

ದಕ್ಷಿಣಕನ್ನಡ ಜಿಲ್ಲೆಯ ಯಂತ್ರಿಕ ದೋಣಿಯ ಪೊನ್ನು ಹಿಡಿಯುವ ತರಬೇತಿ ಕೇಂದ್ರ ಗಳಲ್ಲಿ ಕೇವಲ ಎರಡು ತಿಂಗಳ ಶಿಕ್ಷಣ ಕೊಡಬೇಕೆಂದು ಕೋರಲಾಯಿತು. ಮಂಗ ಳೂರು ಬಂದರ ಯೋಜನೆಯನ್ನು ತೀವ್ರವಾಗಿ ಖಂಡಿಸಿತು. ಬಂದರ ವಲಯದ ಸುತ್ತ ವಾಸಿಸುವವರನ್ನು ಮನೆಮರಗಳನ್ನು ಬಿಡಲು 1968ನೇ ಫೆಬ್ರವರಿಗೆ ವಾಯಿದೆ ಕೊಡಬೇ ಕೆಂದು ಕೇಳಿದರು.

ಸಭೆಯಲ್ಲಿ ದ. ಕ. ಜಿಲ್ಲೆಯ ವಿರೋಧ ಪಕ್ಷಗಳ ಶಾಸಕರ ಸಂಯುಕ್ತ ದಳದ ಸಮಿತಿಗೆ ಶ್ರೀಗಳಾದ ಎಚ್. ಸುಬ್ಬರಾವ್ (ಅಧ್ಯಕ್ಷ) ಬಿ. ಭಾಸ್ಕರ ಶೆಟ್ಟಿ (ಕಾರ್ಯದರ್ಶಿ) ಬೋಳ ರಘುರಾಮ ಶೆಟ್ಟಿ (ಸಹಕಾರ್ಯದರ್ಶಿ) ಮತ್ತು ರಕ್ಷಣಾವೇದಿಕೆ ಶೆಟ್ಟಿ (ವಿಜಾಂಚಿ)ಯವ ರನ್ನು ಆರಿಸಲಾಯಿತು.

ಪ್ರದೇಶ ಕಾಂಗ್ರೆಸ್ ಸಮಿತಿಗೆ ಜಿಲ್ಲೆಯ ಸದಸ್ಯರ ಆಯ್ಕೆ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಈ ಜಿಲ್ಲೆಯಿಂದ ಈ ಕೆಳಗಿನವರು ಆಯ್ಕೆಯಾಗಿದ್ದಾರೆಂದು ತಿಳಿದು ಬರುತ್ತದೆ. 1. ಬೈಂದೂರು- ಶ್ರೀ ಎ. ಜಿ. ಕೊಡ್ಗಿ 2) ಕುಂದಾಪುರ-ಶ್ರೀಎಸ್. ಎಸ್. ಕೊಳೆ ಬೈಲ್ 3) ಬ್ರಹ್ಮಾವರ- ಶ್ರೀ ಎಚ್. ಜಿ. ಗಂದೆ 4) ಉಡುಪಿ-ಶ್ರೀ ಸತೀಶ ಹೆಗ್ಡೆ 5) ಕಾರ್ಕಳ-ಶ್ರೀ ಎ. ನಾರಾಯಣ ಹೆಗ್ಡೆ 6) ಮೂಡಬಿದ್ರೆ- ಶ್ರೀ ಬಿ. ಗಂಗಾಧರದಾಸ 7) ಕಾಪು- ಶ್ರೀ ಎಫ್. ಎಕ್ಸ್. ಡಿ. ಪಿಂಟೊ. 8) ಮೂಲ್ಕಿ-ಶ್ರೀ ಎಂ. ಆರ್. ಎಚ್. ಸೂಂಜ್ಯ 9) ಸುರತ್ಕಲ್-ಡಾ. ಕೆ. ನಾಗಪ್ಪ ಆಳ್ವ 10) ಮಂಗಳೂರು ಉತ್ತರ- ಶ್ರೀ ಮಜೇಲ್ ಶ್ರೀನಿವಾಸ ನಾಯಕ್ ಎಂ. ಎಲ್. ಎ. 11) ಮಂಗಳೂರು ದಕ್ಷಿಣ- ಶ್ರೀ ಕೆ. ಎಸ್. ಅಡಿಗ, ಎಂ. ಎಲ್. ಸಿ. 12) ಉಳ್ಳಾಲ—ಶ್ರೀ ಎ. ಆನಂದ ಶೆಟ್ಟಿ, 18) ಬಂಟ್ವಾಳ—ಶ್ರೀಮತಿ ಲೀಲಾವತಿ ರೈ ಎಂ. ಎಲ್. ಎ, 14) ವಿಟ್ಲ—ಶ್ರೀ ಬಿ. ವಿಟ್ಟಲದಾಸ ಶೆಟ್ಟಿ ಎಂ. ಎಲ್. ಎ. 15) ಪುತ್ತೂರು—ಶ್ರೀ ಕೆ. ಜಕ್ಕಪ್ಪರೈ 16) ಕಡಬ—ಡಾ| ಕೆ. ಡಿ. ಶೆಟ್ಟಿ, 17) ಬೆಳ್ತಂಗಡಿ ಶ್ರೀ ಡಿ. ರತ್ನವರ್ಮ ಹೆಗ್ಡೆ. 18) ಸುಳ್ಯ— ಶ್ರೀ ಕೆ. ಎಂ. ವೆಂಕಟ್ರಮಣ.

ಜಿಲ್ಲಾ ಕಾಂಗ್ರೆಸ್ ಸದಸ್ಯರು

ಈ ಕೆಳಗೆ ಕಾಣಿಸಿದವರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟಿದ್ದಾರೆಂದು ತಿಳಿದು ಬರುತ್ತದೆ.

ಶ್ರೀಗಳಾದ ಆರ್. ಕೆ. ಸಂಜೀವರಾವ್ ಮತ್ತು ಎಚ್. ಭಾಸ್ಕರ ಕಾಮತ್ (ಬೈಂದೂರು), ಎಂ. ಎಂ. ಹೆಗ್ಡೆ ಮತ್ತು ಕೆ. ಸಂಜೀವ ಹೆಗ್ಡೆ (ಕುಂದಾಪುರ) ಸಿ. ರಾಜಗೋಪಾಲ ಶೆಟ್ಟಿ, ಮತ್ತು ಕೆ. ಪ್ರಭಾಕರ ರೈ (ಬ್ರಹ್ಮಾವರ) ಸಿ. ಶಿವಾಜಿ ಶೆಟ್ಟಿ, ಮತ್ತು ಕೆ. ಆರ್. ಶೆಟ್ಟಿ, (ಉಡುಪಿ), ಡಾ| ಯು. ಕೃಷ್ಣ ಮತ್ತು ಶ್ರೀಗಳಾದ ಎಂ. ಕೃಷ್ಣಯ್ಯ ಶೆಟ್ಟಿ (ಕಾರ್ಕಳ), ಎಂ ರಾಮಮೋಹನ ರೈ ಮತ್ತು ಬಿ. ಮಂಜಯ್ಯ ಹೆಗ್ಡೆ (ಮೂಡಬಿದಿರೆ) ಕೆ. ರಾಮಾರಾವ್ ಮತ್ತು ಕೆ. ಸುಂದರ್ ಶೆಟ್ಟಿ (ಕಾಪು), ಡಾ| ಎಸ್. ಚಂಪಾ ಮತ್ತು ಎಚ್. ನಾರಾಯಣ ಶೆಣೈ (ಮೂಲ್ಕಿ); ಕೆ. ನಾರಾಯಣ ಮಲ್ಲಿ ಮತ್ತು ಪಿ. ಶ್ರೀನಿವಾಸರಾವ್ (ಸುರತ್ಕಲ್); ಎಂ. ಕೃಷ್ಣಪ್ರಭು ಮತ್ತು ಎಂ. ಎ ಖಾದರ್ (ಮಂಗಳೂರು ಉತ್ತರ) ಜೆ. ದಿವಾಕರ ಶೆಟ್ಟಿ ಮತ್ತು ಎಚ್. ಎನ್. ಅಡ್ಯಂತಾಯ (ಮಂಗಳೂರು ದಕ್ಷಿಣ), ಕರುಣಾಕರ್ ಕೆ. ಉಚ್ಚಿಲ್ ಮತ್ತು ಕೆ. ಪುರುಷೋತ್ತಮ ಶೆಟ್ಟಿ (ಬಂಟ್ವಾಳ) ಕೆ. ಅಣ್ಣಪ್ಪ ಭಂಡಾರಿ ಮತ್ತು ಕೆ. ರಾಮಣ್ಣ ಶೆಟ್ಟಿ (ಬಂಟ್ವಾಳ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

ಕೃ.ದ.ನಂಬ್ರ 853/1967

ನರಸಿಂಹ ರಾಜ ಪ್ರಭು —ವಾದಿ.

ಮತ್ತು

ನಾಗಪ್ಪ ಹೆಬ್ಬಾರ ಕೂಡಾ—ಪ್ರತಿವಾದಿರು

ಮೂರನೇ ಪ್ರತಿವಾದಿಯ ಸಾಬ್ಬಸ್ಥ—ಶಾರೆಬೈಲು ಸಾಬ್ರಾಯನ ಹೆಂಡ್ತಿ, ಸ್ವ, ರಾಮಕೃಷ್ಣ ಹೆಬ್ಬಾರರ ಸಾಗಳು.

ನಾಲ್ಕನೇ ರುಜುಗಿ-ರಾಮಕೃಷ್ಣ ಹೆಬ್ಬಾರ ನ ಮಗಳು.

ಹದಿಮೂರನೇ ಸಾಬ್ರಾಯ ಹೆಬ್ಬಾರ- ಕೃಷ್ಣಪ್ಪ ಹೆಬ್ಬಾರನ ಮಗ.

ಹದಿನೈದನೇ ಚಂದ್ರಶೇಖರಯ್ಯ-ಬೆಟ್ಟಿನ ಮನೆ ಕೃಷ್ಣಪ್ಪಯ್ಯನವರ ಮಗ.

3, 5, 18ನೇಯವರು ಕುಂದಾಪುರ ತಾಲೂಕು ಅನಗಳ್ಳಿ ಗ್ರಾಮದಲ್ಲಿಯೂ, 16ನೇಯವನು ತೀರ್ಥಕೊಪ್ಪ ತಾಲೂಕು ಕರ್ತಿನೇರಿ ಗ್ರಾಮದಲ್ಲಿಯೂ ಇರುತ್ತಾರೆ.

ಸಾಬ್ರಾಯ ಹೆಬ್ಬಾರನ ಕುಟುಂಬದಲ್ಲಿ ತಾ. 10—2—1918ರಲ್ಲಿ ಅರಮಾಲ ಪಟ್ಟಾ ವಿಧಿಸ್ಕಾರ ಲಿಂಗಪ್ಪ ಹೆಬ್ಬಾರ ಮತ್ತು ವಾಸುದೇವ ಹೆಬ್ಬಾರ ಕೂಡಾ 2 ಜನರಿಗೆ ಸಿಕ್ಕ ಬೇಕಾದ ಮಿಗ್ತ ಲಕ್ಕಿಯ ವಸೂಲಿ ಹಕ್ಕನ್ನು ಪಡೆದ ವ್ಯಾದಿಗೆ ಬಂ ಬೇಕಾದ ಶುಭ್ರ ಕೃತು ಸಂವತ್ಸರದ ಆಗ್ರಾಯತು ಪಕಾಖನ ಸಂಪತ್ಸರವ ವರೆಗಿನ ಸಿಗ್ತೆ ಅಕ್ಕಿಮ ಕೃಯಾ ವ್ಯ ಬಡ್ಡಿ ಸಹಾ ಬರಮೂಡಿ ಕೊಳ್ಳುವರೀ ವಾದಿಯು ನೂಡಿದ ಮೇಲೆ ಕಾಸಿದ ದಾವೆಯು ತಾ. 21—12—67ಕ್ಕೆ ಕನ್ಸಗೆ ಇಟ್ಟಿರುತ್ತದೆಂತಲೂ ಆ ದಿವಸ ಹಗಲು 10 ಘಂಟೆಗೆ ಮೇಲೆ ಕಾಸಿದ 3, 4, 13, 15ನೇ ಪ್ರತಿವಾದಿರು ಹಾಜರಾಗಿ ಅವರ ಉದಾಸೀನತೆ ಇತ್ರೆ ಅದನ್ನು ಮುಖ್ಯ ಮಾಡ ಬೇಕಾಗಿಯೂ, ಹಾಗೆ ಅವರು ಹಾಜರಾಗಲಿಕ್ಕೆ ಕಟ್ಟಿದ್ದೆ ಸದ್ರಿ ದಾವೆಯ ಮುಂದಿನ ಕನ್ಸಯು ಸದ್ರಿ ಪ್ರತಿವಾದಿರ ಪರೋಕ್ಷದಲ್ಲಿ ನಡೆಯುವುದೆಂತಲೂ ಈ ಮೂಲಕ ತಿಳಿಸೋಡಾಗುತ್ತದೆ.

G. Sanjeeva Rao
Vakil for Plaintiff

ಕುಂದಾಪುರ, ತಾ. 21—11—67

ದಿ ವಿಜಯಾ ಬೇಂಕ್ ಲಿಮಿಟೆಡ್, ಉಡುಪಿ ಬ್ರಾಂಚ್.

ರಿಜಿಸ್ಟರ್ಡ್ ಆಫೀಸು:—ಲೈಟ್ ಹೌಸ್ ಹಿಲ್ ರೋಡು, ಮಂಗಳೂರು—3

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು, ನಮ್ಮ ಶಾಖೆಯಿಂದ ಚಿನ್ನಾಭರಣ ನಗದಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದಿಗೆ ಸರಿಯಾಗಿ ಮುರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ, ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿ ಕೊಂಡಿದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿನೋಟೀಸುಗಳು ಕಾರಣಾಂತರಗಳಿಂದ ನಮಗೆನೇ ವಾಪಾಸು ಬಂದರು ವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದ ಇದ್ದುದ ರಿಂದಲೂ, ಸದ್ರಿಯವರಿಗೆ—ವ—ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸು ವುದೇನೆಂದರೆ, ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 30—11—67ರ ಒಳಗಾಗಿ ಬೇಂಕಿಗೆ ಮುರುಪಾವತಿ ಮಾಡಲು ತಪ್ಪಿದ್ದಲ್ಲಿ, ಸದ್ರಿಯವರುನ ಮ್ಮಲ್ಲಿ ಅಡವಿಟ್ಟ ನಗದಗಳನ್ನು ತಾರೀಕು 8—12—1967ನೇ ಶುಕ್ರವಾರ ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾಯಿತು—ಯೂ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನ: ನೋಟೀಸು ಕೊಡದೇನೇ ಬಹಿರಂಗ ಯೂ—ಪಾಸಾಗಿಯೂ ಹರಾಜು ಮಾಡಲಾಯಿತು; ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸರ್ವ ಖರ್ಚು—ವ—ನಸ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿ ರುತ್ತಾರೆ, ತಿಳಿದಿರಲಿ.

ಸಾಲದ ಖಾತೆ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು ರೂ. ಪೈಸೆ
JL. 87/65	ಶ್ರೀಮತಿ ಯಶೋದಮ್ಮ, W/o ಯಂ. ಗುರುರಾಜ ಆಚಾರ್ಯ, ಹೆಡ್ ಪೋಸ್ಟ್ ಆಫೀಸ್, ಉಡುಪಿ.	178—85
JL. 90/65	ಶ್ರೀಮತಿ ಯಶೋದಮ್ಮ, W/o ಯಂ. ಗುರುರಾಜ ಆಚಾರ್ಯ, ಹೆಡ್ ಪೋಸ್ಟ್ ಆಫೀಸ್, ಉಡುಪಿ.	270—70
JL. 157/65	ಶ್ರೀ ಕೆ. ಶಾಡ್ಡ, ಕೇರಾಫ್ ಉಪ್ಪು ಬೆಂಬರ್ ಅಂಡ್ ಸಾ ಮಿಲ್, ಡೆರ್ಬ್ ರೋಡು, ಉಡುಪಿ.	97—99
JL. 176/65	ಶ್ರೀ ಸಿ. ಪಿ. ಜಾರ್ಜ್, ಕೇರಾಫ್ ವಿ. ವಿ. ಪೋರ್ಸ್, ನೋವಾ ಎನ್. ಕೆ ರೋಸ್, ಉಡುಪಿ.	118—86
JL. 241/65	ಶ್ರೀಮತಿ ಸಾನಕಿ ಬ್ಯಾ, ಕೇರಾಫ್ ಗಿರಿಜ ಹೆಬ್ಬಿ ಸಿಕ್ಕೋಡಿ ಮನೆ, ಉದ್ಯಾವರ, ಉಡುಪಿ.	94—99
JL. 396/67	ಶ್ರೀ ರಾಜು ಶೆಟ್ಟಿ, ಕೇರಾಫ್ ಸಂಕಯ್ಯ ಶೆಟ್ಟಿ, ಉಪ್ಪೂರು, ಉಡುಪಿ.	78—15

ಉಡುಪಿ
27—11—67

ಟಿ. ಆರ್. ಅಡ್ಯಂತಾಯ
ಮೇನೇಜರ್

(ಮೂರನೇ ಪುಟದಿಂದ)

ಸಲ್ಲಿಸಿದ್ದಾರೆ. ಆದರ ಉದ್ಘಾಟನೆಯಲ್ಲಿ ಭಾರತೀಯ ಹೈಕಮಿಶನರರು ಉಪಸ್ಥಿತರಿದ್ದುದನ್ನು ಸಮರ್ಥಿಸಿಕೊಂಡಿದ್ದಾರೆ. ಇವೆಲ್ಲ ಬರಿಯ ಶಿಷ್ಟ ಸಂಪ್ರದಾಯವೆಂದೂ ತಳಿಸಿದ್ದಾರೆ—ಲೋಕ ಸಭೆಯಲ್ಲಿ ಗದ್ದಲವೆದ್ದಾಗ.ಮಂಗಳಅಹಿಕಟ್ಟಿನ ರಜನೆಯಿಂದ ಕಾಶ್ಮೀರದ ಪಾಕ್ ಅಕ್ರಮಿತ ಭಾಗದ ಮೇಲಿನ ನಮ್ಮ ಸಾರ್ವಭೌಮತ್ವಕ್ಕೆ ಚ್ಯುತಿಯಿಲ್ಲ, ಸರಕಾರದ ನೀತಿ ಬದಲಾಗಿಲ್ಲವೆಂಬ ಆಶ್ವಾಸನೆ ನೀಡುವುದರೊಡನೆ, ಭಾರತವು ಇಷ್ಟು ಮುಂದೆ ಕಡಿಮೆ ಏನೂ ಪಾಕಿಸ್ತಾನಕ್ಕೆ ಪೂರ್ಣ ಸಿದರೆ ಸಾಕೆಂಬ ಲಾಭಾಂಶದಪೆಕ್ಷೆಯೂ ಬೊಟ್ಟುಮಾಡಿದರು. ಮಂಗಳಅಹಿಕಟ್ಟು ಕಟ್ಟುವ ಪಾಕಿಸ್ತಾನದ ಅಧಿಕಾರವನ್ನೇ ಪ್ರಶ್ನಿಸಿದ ಭಾರತೀಯರು, ಆಕ ಕಟ್ಟಿಗೆ ಶುಭಕೋರುವುದು ವಿರೋಧಾಭಾಸವಾಗುವುದೆಂದು ಹೇಳದೆ ಗತ್ಯಂತರವಿಲ್ಲ. ಶಿಷ್ಟ ಸಂಪ್ರದಾಯ ಶಿಷ್ಟರೊಡನೆ ಮಾತ್ರ; ಅಶಿಷ್ಟರೊಡನೆ ಅಲ್ಲವೆಂಬುದನ್ನು ಪ್ರಧಾನಿ ಗಾಂಧಿಯವರು ಇನ್ನಾದರೂ ಮಾಧವರಕೆ ಮಾಡಿಕೊಂಡು ತಿಳಿಯಬೇಕು. ದೇಶದ ಗೌರವ ಪ್ರತಿಷ್ಠೆಗಳನ್ನು ಮಾರುವುದು ಯಾವ ದೇಶಭಕ್ತನಿಗೂ ಹೇಳಿಸಿದ ಕೆಲಸವಲ್ಲ.

ಜೀವನನೆಂಬುದು ಆಕಾರವಿಲ್ಲದ ಜೆಲೆಯಂತೆ. ಅದಕ್ಕೆ ರೂಪ ಕೊಟ್ಟು ಸುಂದರವೋ, ವಿಕಾರವೋ ಮಾಡಿಕೊಳ್ಳುವುದು ಅವನವನಿಗೆ ಸೇರಿದ್ದು.

ಕಡಿಸಾಲಿತ್ತಿ

ತೃಯಮಾಸ ಪತ್ರಿಕೆ—ಮಂಗಳೂರು

ದೂರದ ಬೆಟ್ಟ ನುಣ್ಣಗೆ

ಟ ಣ್ಣ

(ಎರಡನೆಯ ಪುಟದಿಂದ)

ನಗ ಬಗ್ಗೆ ವಿವರಿಸಿದರೂ ಅವನು ಉದಾಸೀನದಿಂದಲೇ ಇದ್ದ. ಅವನಿಂದ ಯಾವ ಉತ್ಸಾಹದ ಪ್ರತಿಕ್ರಿಯೆಯೂ ಕಂಡು ಬರಲಿಲ್ಲ.

"ಅಷ್ಟೇ ತಾನೇ! ನೀನು ಅವಳಿಗಿಂತ ಏನು ಕಮ್ಮಿ?" ಎಂದ ಶ್ರೀಧರ ಒಮ್ಮೆ ವಿಮಲಾಳ ಬಗ್ಗೆ ಸುಮತಿ ಹಾಗೆ ಅಂದಾಗ.

"ನಿಮಗೆ ಹುಚ್ಚಾಬ್ಬವಪ್ಪೆ!? ಎಂದಳು ಸುಮತಿ.

ಆದರೆ ಶ್ರೀಧರನಿಗೆ ನಿಜಕ್ಕೂ ಬೇಸರ ಬರಿಸಿದ ವಿಷಯವೆಂದರೆ ಸುಮತಿ ಮಕ್ಕಳು ಊಟಕ್ಕೆ ತಮ್ಮೊಡನೆ ಕೂರುವುದು ಬೇಡ ಅಂದದ್ದು.

ಅವನಿಗೆ ತನ್ನೆರಡು ಪುಟ್ಟ ಮಕ್ಕಳನ್ನು ಕಂಡರೆ ಎಲ್ಲಿಲ್ಲದ ಪ್ರೀತಿ.

ದಿನವೂ ಆಫೀಸಿನಿಂದ ಬಂದಾಗ ಮಕ್ಕಳು ಕಾಣದಿದ್ದರೆ ಚಡಪಡಿಸುತ್ತಿದ್ದ.

ಮಕ್ಕಳೆಲ್ಲ? ಮಕ್ಕಳೆಲ್ಲಿ? ಎಂದು ಹತ್ತಾರು ಬಾರಿ ಕೇಳುತ್ತಿದ್ದ.

ತನ್ನ ಮಕ್ಕಳ ಬಗ್ಗೆ ಕೊಚ್ಚಿಕೊಳ್ಳುವುದರಲ್ಲಿ ಆತ ಸುಮತಿಗಿಂತ ಒಂದು ಕೈ ಬಲವೆಂದೇ ಹೇಳಬೇಕು.

'ಸಾಕು ನಿಮ್ಮ ಮಕ್ಕಳ ಪುರಾಣ. ಕೇಳುವವರಿಗೆ ತಲೆನೋವು ಬಂದೀತು' ಎನ್ನುತ್ತಿದ್ದರೂ—ಅವನು ತನ್ನ ಮಕ್ಕಳ ಬಗ್ಗೆ ಹೇಳಲು ಪ್ರಾರಂಭಿಸಿದರೆ.

ಮಕ್ಕಳಿಗೂ ಅಷ್ಟೆ. ಅಮ್ಮನಿಗಿಂತ ಅಪ್ಪನನ್ನು ಕಂಡರೆ ಹೆಚ್ಚು ಪ್ರೀತಿ.

"ಅಪ್ಪ, ಪಪ್ಪ...."ಎಂದು, ಅವನು ಮನೆಯಲ್ಲಿದ್ದರೆ ಅವಪೊಡನೆ ಹೆಚ್ಚು ಸಮಯ ಕಳೆಯುತ್ತಾರೆ.

ಹೀಗಿರುವಲ್ಲಿ ವಿಮಲ, ಊಟಕ್ಕೆ ಬಂದಾಗ ತನ್ನ ಮಕ್ಕಳು ಪಂಕ್ತಿಯಲ್ಲಿ ಕೂರುವುದು ಬೇಡ ಎಂದು ಹೇಳಿದಾಗ ಅವಳಿಗೆ ಸಹಜವಾಗಿಯೂ ಕೋಪ ಬಂತು.

"ಹಾಗಿದ್ದರೆ ನಾನೂ ನಿಮ್ಮೊಡನೆ ಕೂರುವುದಿಲ್ಲ." "ನಿಮ್ಮ ದಮ್ಮಯ್ಯ. ಹಾಗೆನ್ನಬೇಡಿ. ಆ ಮೇಲೆ ವಿಮಲಾ ಏನೇಂದು ಏನೆಂದುಕೊಂಡಾಳು? ಸುಮತಿ ಬಾ ಗೆಂಡ ಸೋಷಿಯಲ್ ಅಲ್ಲವೇ ಅಲ್ಲ ಎನ್ನುವುದಿನ್ನೇನೆ.'

'ಮತ್ತೆ ಮಕ್ಕಳೂ ನಮ್ಮೊಡನೆ ಕೂರಲಿ'

"ಇಷ್ಟೇ ನಿಮಗೆ ಗೊತ್ತಿರುವುದು, ಪುಟ್ಟ ಮಕ್ಕಳವು. ಅತಿಥಿ ಬಂದಾಗ ಹೇಗೆ ವರ್ತಿಸಬೇಕೆಂಬುದು ಅವಕ್ಕೇನು ಗೊತ್ತು? ಅವೂ ನಮ್ಮೊಡನೆ ಕೂತರೆ ಸುಮ್ಮನೆ ಇಲ್ಲದ ಸಲ್ಲದ ತೊಂದರೆ. ಇಷ್ಟರ ಮೇಲೆ ನಿಮ್ಮಿಷ್ಟ.'

ಒಲ್ಲದ ಮನದಿಂದ ಶ್ರೀಧರ 'ಹೂಂ' ಎಂದಿದ್ದ.

ನಿರೀಕ್ಷಿಸಿದ ಮಂಗಳವಾರ ಬಂದಿತು. ವಿಮಲಾ ಹೊತ್ತಿಗೆ ಸರಿಯಾಗಿ ಬಂದಳು. ತೆಳು ಫೀಲಿ ಸೀರೆ ಮತ್ತು ಅದೇ ಬಣ್ಣದ ರವಿಕೆಯಲ್ಲಿ ಆವಳು ತುಂಬಾ ಆಕರ್ಷಣೀಯವಾಗಿ ಕಾಣುತ್ತಿದ್ದಳು.

"ನಿಮ್ಮ ಮನೆ ಹುಟ್ಟಿದಿದ್ದರೂ ತುಂಬಾ ಆಕರ್ಷಕವಾಗಿಟ್ಟಿದ್ದೀರಿ" ಎಂದು ಅವಳು ಮೆಚ್ಚುಗೆಯ ಮಾತುಗಳಿಂದ ಶ್ರೀಧರನ ಮುಖದಲ್ಲಿ ಹೆಮ್ಮೆಯು ನಗೆ ಮಿಂಚಿ ಮಾಯವಾಯಿತು.

"ನಿನ್ನ ಮಕ್ಕಳು ಇಷ್ಟು ಮುದ್ದಾಗಿರಬಹುದೆಂದು ನಾನು ಎಣಿಸರಲಿಲ್ಲ, ಸುಮಿ" ಎಂದಾಗ, ಏಕೋ ಏನೋ ಎಂದೂ ಇಲ್ಲದ ಅಭಿಮಾನ ಸುಮಿಯಲ್ಲೂ ಉಂಟಾಯಿತು.

ಊಟದ ನಂತರ ಹೊರಗೆ ಕಾಂಪೌಂಡಿನಲ್ಲಿ ಮಾವಿನ ಮರದ ಕೆಳಗೆ ಈಜಿಗ ಚೇರ್‌ಗಳನ್ನು ಹಾಕಿಕೊಂಡು ಮೂವರೂ ಕುಳಿತರು.

ಸುಮತಿ ಸೇವಿನ ಹಣ್ಣನ್ನು ಕತ್ತರಿಸುತ್ತಿದ್ದಳು. ವಿಮಲಾ ಏನೋ ಹೇಳುತ್ತಿದ್ದುದನ್ನು ಕೇಳುತ್ತಿದ್ದ ಅವಳಿಗೆ ಹಠಾತ್ತಾದ ಚಾಕು ಸೇಬಿನೊಟ್ಟಿಗೆ ತನ್ನ ಬೆರಳನ್ನು ಕತ್ತರಿಸಿದ್ದು ಗೊತ್ತೇ ಇಲ್ಲ.

'ಏನಾಯ್ತು ಸುಮಿ? ಯಾಕೆ ರಕ್ತ?'

ಶ್ರೀಧರ ಥಿಗ್ಗನೆದ್ದ. ಗಾಬರಿ ಅವನ ಮುಖದಲ್ಲಿ ವಸ್ತುವಾಗಿ ಮೂಡಿತ್ತು. ಒಂದು ಕೈಯಿಂದ ಗಟ್ಟಿಯಾಗಿ ಅವಳ ಬೆರಳನ್ನು ಅದುಮಿ ಹಿಡಿದು ಮತ್ತೊಂದು ಕೈಯಿಂದ ಕರವಸ್ತ್ರವನ್ನು ಹೊರತೆಗೆದು ಅವಳ ಬೆರಳಿಗೆ ಸುತ್ತಿದ.

"ಹ್ಞಾಂ....ಸದ್ಯಕ್ಕೆ ಅಷ್ಟು ಗಾಯವಾಗಿಲ್ಲ, ಅಷ್ಟೇ ಸಾಕು" ಎನ್ನುತ್ತಾ ವಿಮಲಾಳತ್ತ ದೃಷ್ಟಿ ಬೀರಿದ.

ವಿಮಲಾ ಎಲ್ಲವನ್ನೂ ಏನೂ ಅನ್ನದಿಂದ ನೋಡುತ್ತಿದ್ದಳು. ಶ್ರೀಧರ ಎಷ್ಟು ಮುದ್ದಾಗಿ ಎಂತಹನಾಡುತ್ತಾನೆ ಎನ್ನಿಸಿತು ಆಕೆಗೆ. ವಿಮಲಾಳತ್ತ ನೋಡಿದಾಗ ಆಕೆಯ ಮುಖ ಯಾರೋ ಚಿಂತಾಗ್ರಸ್ತರಂತೆ ತೋರಿತ— ಶ್ರೀಧರನಿಗೆ.

ವಿಮಲಾ ಅವರಿಂದ ಬೀಳ್ಕೊಂಡಾಗ ಮೇಳೆ ಹತ್ತಾಗಿತ್ತು. ಆಗಲೆ ಮಂದಿ, ಮಕ್ಕಳಿಗೆ ಟಾ-ಟಾ ಹೇಳಿ ಹೊರಟು ಹೋದಳು.

o o o

ಸುಮಾರು ಹದಿನೈದು ದಿನಗಳ ಬಳಿಕ ವಿಮಲಾಳಿಂದ ಮತ್ತೊಂದು ಕಾಗದ ಬಂದಿತು.

"ಓ..... ವಿಮಲಾಳ ಕಾಗದ" ಎನ್ನುತ್ತಾ ಸುಮತಿ ಆತುರವಾಗಿ, ಸಡಗರದಿಂದ ಒಡೆಯ ತೊಡಗಿದಳು. ಪತ್ರ ಸಾಕಷ್ಟು ದಿಢೀರ್‌ವಾಗಿತ್ತು.

ಪ್ರೀತಿಯ ಸುಮೀ,

ನಿನಗೆ ಪತ್ರ ಬರೆಯಲು ಬೇಕೆಂದು ಎಷ್ಟು ಪ್ರಯತ್ನಿಸಿದರೂ ಅವಕಾಶ ಸಿಗಲಿಲ್ಲ. ಕ್ಷಮಿಸು. ನಿನ್ನ ಮನೆಯ ಟೂರಿಣ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಅದಕ್ಕಾಗಿ ವಂದನೆಗಳು.

ಸುಮೀ, ನಿನಗೊಂದು ಆಶ್ಚರ್ಯಕರ ಸುದ್ದಿ. ನನ್ನ ಮದುವೆ ನಿಶ್ಚಯವಾಗಿದೆ. ಹಾಂ! ಬೆಚ್ಚಿ ಬೀಳ ಬೇಡ--ಮದುವೆಯು ಊರಿಗೆ ಬೇಡವಾಗಿತ್ತೋ ಅವಳಿಗೆ ಮದುವೆಯೆಂದು.

ಸುಮೀ, ನಿನ್ನನ್ನು, ನಿಮ್ಮ ಮನೆಯನ್ನು ಕಂಡ ಬಳಿಕ ನನಗನ್ನಿಸಿತು—ಹೆಣ್ಣಿನ ನಿಜಸ್ಥಾನ ಮನೆಯಲ್ಲಿ— ಅವಳ ಸಂಪೂರ್ಣ ಸುಖ ದಾಂಪತ್ಯದಲ್ಲಿ ಎಂದು.

ನಾ ಎಷ್ಟು ಗಳಿಸಿದರೇನು?ಎಷ್ಟುಪೋಜು ಮಾಡಿದರೇನು ? ನಿನ್ನ ಮುದ್ದು ಮಕ್ಕಳ ವಾತ್ಸಲ್ಯಮಯ ಕೂಗಿಗೆ ನನ್ನೆಪೋಜು ಸಮನಾದೀತೆ?

ನಿನ್ನನ್ನು ತುಂಬಾ ಪ್ರೀತಿಸುವ ಶ್ರೀಧರನಂತಹ ಪತಿಯು ನೀನಿನ್ನ ಬಾಳಿನಲ್ಲಿರುವುದಕ್ಕಿಂತ ಹೆಚ್ಚಿನ ಶೋಭೆ ಸೊಗಸು ಏನುವುದಿದೆ?

ಹಕ್ಕಿ ಒಂಟಿಯಾಗಿದ್ದರೆ ಚೆನ್ನಲ್ಲ. ಹಕ್ಕಿಯೊಡನೆ ಹಕ್ಕಿ ಜೊತೆಗೂಡಿ ಪುಟ್ಟ ದೊಂದು ಗೂಡು ಕಟ್ಟಿ ಮರಿ ಮಾಡಿದರೆ ಸೊಗಸು. ಅದು ಬಾಳಿನ ಸಾರ್ಥಕತೆ. ಹೆಣ್ಣಿಗೆ ಪ್ರೀತಿಯ ಬಂಧನ, ಒಲವಿನ ರಕ್ಷಣೆ ಆಗತ್ಯ ಎಂಬ ವಿಷಯ ನಿನ್ನನ್ನು ಕಂಡ ನಂತರ ನವಗರಿವಾಯಿತು.

ಹುಂ!.....ಇಷ್ಟಾಯಿತು. ನನ್ನವರು ಏನೆಂದು ನಿನಗೆ ತಿಳಿಸಲೇ ಇಲ್ಲ. ಇಲ್ಲೇ ವಿಧಾನ ಸೌಧದಲ್ಲಿ ಕೆಲಸ....ಸೈಕ್ರಿಯೇಟ್ರಿಸ್ಟ್. ಬೆಂಗಳೂರಿನಲ್ಲೇ ವಾಸ. ನನ್ನ ಮದುವೆಯ ನಂತರ ನಾವು ಸದಾ ಸಂಧಿಸಬಹುದು.

ಶೀಘ್ರದಲ್ಲೇ ಆಮಂತ್ರಣ ಪತ್ರಿಕೆ ಕಳುಹಿಸುವೆ. ತಪ್ಪದೇ ಬಾ.

ಶ್ರೀ ಶ್ರೀಧರರವರಿಗೆ ತನ್ನ ಅನಂತ ನಮಸ್ಕಾರಗಳು.

ಮಕ್ಕಳಿಗೆ ಸಿಹಿ ಮುತ್ತುಗಳು.

ಗೆಳತಿ ಚಂಂವಾಗೂ ನನ್ನ ನಮಸ್ಕಾರ ತಿಳಿಸು.

ಇತೀ ನಿನ್ನೊಲವಿನ, ವಿಮಲ.

ಈ ಕಾಗದ ಓದಿದ ಸುಮಿ ದಿಙ್ಮೂಢಳಾದಳು. ಅವಳಿಗೆ ನಿಜಕ್ಕೂ ವಿಷಾದವಾಯಿತು. ಮತ್ತೊಮ್ಮೆ, ಮಗದೊಮ್ಮೆ ಕಾಗದವನ್ನವಳು ಓದಿದಳು.

ಹೌದು! ಸಂಶಯವಿಲ್ಲ. ಇದು ಖಂಡಿತ ವಿಮಲಾಳ ಕಾಗದವೇ. ಯಾವ ವಿಮಲಾಳನ್ನು ಕಂಡು ತಾನು ಮತ್ಸರಗೊಂಡಿದ್ದೆನೋ ಈಗ ಆದೇ ವಿಮಲಾ ತಪ್ಪ ಬಾಳಿನಗೆ ಮೋಡಗೊಂಡಿದ್ದಳು. ಸುಮತಿಯ ತಟಸ್ಥಂಚಿನಲ್ಲಿ ನಗೆಯರಳಿತು.

ಅಂದು ಸಂಜೆ ಶ್ರೀಧರ ಮನೆಗೆ ಬಂದಾಗ ವಾಡಿಕೆಯಂತೆ "ಮಕ್ಕಳೆಲ್ಲಿ?" ಎಂದಾಗ 'ಹೊರಗೆ ಆಡುತ್ತಿದ್ದಾರೆ' ಎಂದಳವಳು.

"ಸುಮಿ ಇಂದೇಕೋ ಎಂದಿಗಿಂತ ಉಲ್ಲಾಸಿಕಳಾಗಿದ್ದಾಳೆ.' ಎಂದುಕೊಂಡು ಅವಳ ಮುಖ ತೊಳೆಯಲು ಹೋದನು.

ಸಣ್ಣ ದಿಢಿಯಲ್ಲಿ ತನಗೆ ತಾನೇ ಹಾಡಿಕೊಳ್ಳುತ್ತಾ ಕಾಫಿ ಕಷಾಯಿಸಿ "ಕಾಫಿ ರೆಡಿ' ಅಂದಳು.

"ಏನು ಸಮಾಚಾರ ಸುಮೀ? ಅಮ್ಮ ಬರ್ತಾರಾ" ಕಪ್ ಚಿಯನ್ನು ಟೀಪಾಲ್ ಹತ್ತಿರಕ್ಕೆ ಎಳೆದುಕೊಳ್ಳುತ್ತಾ ಶ್ರೀಧರನೆಂದ.

'ಉಹುಂ....ಆದರೆ ಊಟಿಗೆ ಬಲ್ಲೆಂಗಾ.'

'ಚಕ್ರಬಂಧ ಸ್ಪರ್ಧೆಯಲ್ಲಿ ಗೆದ್ದೆಯಾ?'

"ನನ್ನ ಹೆಣೆಬರಹದಲ್ಲಿಲ್ಲ—"

"ಮತ್ತೆ...ಮತ್ತೇನೂ...ಹೋಗಲಿ.. ಸೋತೆ....ಹೇಳು.'

'ಏನು ಗೊತ್ತಾ? ನಾನು ಕೆಲಸಕ್ಕೆ ಸೇರಬಾರದೆಂತ ನಿಶ್ಚಯಿಸಿದ್ದೀನಿ."

ಶ್ರೀಧರನ ತಟಿಯಂಚಿನ ವರೆಗೆ ಬಂದಿದ್ದ ಕಾಫೀ ಕಪ್ಪು ಅಲ್ಲೇ ತಡೆದು ನಿಂತಿತು, ಅವನ ಮುಖವಲ್ಲಿ ಥಟ್ಟನೆ ನರ್ತಿಸತೊಡಗಿದ ಆಶ್ಚರ್ಯವನ್ನು ನೋಡಲೋ ಎಂಬಂತೆ.

ಸರಸ್ವತಿ ಶಾಲಾ ವಾರ್ಷಿಕೋತ್ಸವ

ಉಡುಪಿ ಕಿರಿದಾಡು ಸರಸ್ವತಿ ಪ್ರಾ. ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ಆ 18 ರಂದು ಪ್ರ. ಕ. ಜಲ್ಲಾ ವಿದ್ಯಾಧಿಕಾರಿ ಶ್ರೀ ಯಸ್. ಯಸ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಪ್ರಾರ್ಥನಾ ನಂತರ ಶಾಲಾ ಸಂಚಾಲಕ ಶ್ರೀ ಯಂ. ಮಧ್ವರಾಜರವರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಯಸ್. ನೇರಿಗಾರರು ಶಾಲಾ ವರದಿಯನ್ನು ಓದಿದರು. ವಿವಿಧ ಆಟೋಟಗಳಲ್ಲಿ ಗೆದ್ದ ಶಾಲಾ ಬಾಲಕ ಬಾಲಕಿಯರಿಗೆ ಉಡುಪಿ ರೋಟರಿ ಸಂಸ್ಥೆಯ ಪರೀಕ್ಷಾಧಿಕಾರಿ ಶ್ರೀ ಶ್ರೀಪತಿ ತಂತ್ರಿ ಪಲಿಮಾರುರವರು ಬಹುಮಾನಗಳನ್ನು ವಿತರಣೆ ಮಾಡಿದರು. ಶ್ರೀ ಎ. ಜಿ. ಅಲ್ಲೆಯವರು ಸಂದೇಶಗಳ ವಾಚನ ಗೈದರು. ಅಧ್ಯಕ್ಷರು ಶಾಲೆಯ ಸರ್ವತೋಮುಖವಾದ ಏಳಿಗೆಗೆ ಶ್ಲಾಘನೆಯನ್ನು ಸೂಚಿಸಿ ಸಾರ್ವಜನಿಕರ ಸಹಕಾರಕ್ಕಾಗಿ ಶ್ಲಾಘಿಸಿದರು. ಶಾಲಾ ಮಕ್ಕಳಿಂದ ನೃತ್ಯಗಳು ಮತ್ತು "ಶ್ರೀ ಕೃಷ್ಣ ಗಾರುಡಿ" ಎಂಬ ನಾಟಕವು ಪ್ರಶಂಸೆಕಲ್ಪಿಸಿತ್ತು. ಪ್ರ ವಾರ್ಷಿಕ ಉಡುಪಿ ವಲಯದ ಉಪ ವಿದ್ಯಾಧಿಕಾರಿ ಶ್ರೀ ಯಬ್. ಶ್ಯಾಮಭಟ್ ಇವರು ರಾಷ್ಟ್ರಧ್ವಜವನ್ನಂರಿಸಿದರು. ಶಾಲಾ ಪಬ್ಲಿಕ ಸಾಮಂದರ್ಭದಲ್ಲಿ ಕಿರಿದಾಡು ಪದ್ಮನಾಭ ಕಾಮತರ ಮಕ್ಕಳು ಶಾಲಾ ಮಕ್ಕಳಿಗೆ ಸಿಹಿಯಿಂದ ವಿತರಣೆಯನ್ನು ನಡೆಸಿದ್ದರು.

NAVAYUGA 30—11—1967
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ನೆಹರು ಹೇಳುವಂತೆ

ಭಾರತದ ಸಾರ ಸರ್ವಸ್ವ

ಭಾರತ ಎಂದರೇನು? ಅದರ ಸಾರ ಸರ್ವಸ್ವವೇನು? ಭಾರತ ನಿರ್ಮಾಣಕ್ಕೆ ಕಾರಣವಾದ ಶಕ್ತಿಗಳಾವುವು? ಹಿಂದಿನ ಮತ್ತು ಇಂದಿನ ವಿಶ್ವದಲ್ಲಿನ ಮಹಾ ಪ್ರಭಾವಗಳಿಗೆ ಹೇಗೆ ಸಂಬಂಧಿಸಿದೆ ಎಂದು ಸ್ವಚಿಂತನೆ ನೂಡಿದ್ದೇನೆ.

ಇದು ವ್ಯಾಪಕವಾದ ವಿಚಾರ: ಮಾನವ ಚಟುವಟಿಕೆಯ ಇಡೀ ಕ್ಷೇತ್ರವನ್ನು ಆವರಿಸುತ್ತದೆ. ಒಬ್ಬ ವ್ಯಕ್ತಿ ಇವೆಲ್ಲವನ್ನು ಆಳಿಯಲಾರ, ಆದರೆ ಈ ಚಟುವಟಿಕೆಯ ಕೆಲವು ವಿಭಾಗಗಳನ್ನು ಆಯ್ಕೆ ಮಾಡಿಕೊಂಡು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬಹುದು. ವಿಶ್ವದ ಬೃಹತ್ ಚಿತ್ರ ಕಾಣದಿದ್ದರೂ ನಾವು ಭಾರತವನ್ನು ಅರಿಯಲು ಯತ್ನಿಸಬಹುದು.

ಭಾರತದ ಸ್ಥಾನವೇನು? ಕೆಲವರು ಹಿಂದೂ, ಮುಸ್ಲೀಂ ಮತ್ತು ಕ್ರಿಶ್ಚಿಯನ್ ಸಂಸ್ಕೃತಿಗಳೆಂದೆಲ್ಲ ವರ್ಣನೆ ಮಾಡುತ್ತಾರೆ. ನನಗೆ ಈ ಪದಗಳ ಅರ್ಥ ತಿಳಿಯುವುದಿಲ್ಲ. ದೇಶವೊಂದರ ಹಾಗೂ ಜನಾಂಗವೊಂದರ ಸಂಸ್ಕೃತಿಗೆ ಮುಡಾಥಾರ್ಮಿಕ ಚಳುವಳಿಗಳು ಪ್ರಭಾವ ಬೀರಿರುವುದು ನಿಜ. ನಾನು ಭಾರತದೆಡೆ ದೃಷ್ಟಿ ಹಾಯಿಸಿದಾಗ, ಭಾರತೀಯರ ಸಾಂಸ್ಕೃತಿಕ ಸಂಗಮದ ಬೆಳವಣಿಗೆ ಗೋಚರಿಸುತ್ತದೆ.

ಭಾರತದ ಪ್ರಾಚೀನ ಪರಂಪರೆಯ ಅದರಲ್ಲೂ ಪ್ರಮುಖವಾಗಿ ದ್ರಾವಿಡ ಪರಂಪರೆ ಆರ್ಯ ಪರಂಪರೆಯ ಸಮಾಗಮದಿಂದ ನಮ್ಮ ದೇಶದಲ್ಲಿ ಅತ್ಯಂತ ಸ್ಪಷ್ಟವಾದ ಸಾಂಸ್ಕೃತಿಕ ಪರಂಪರೆಯು ಉಗಮವಾಯಿತು. ಪ್ರಸಿದ್ಧ ಪ್ರಾಚೀನ ಭಾಷೆ ಸಂಸ್ಕೃತದ ಪ್ರತಿನಿಧಿಯಾಗಿ ಮಹಾ ಸಂಸ್ಕೃತಿಯೊಂದು ತಲೆಯೆತ್ತಿತ್ತು. ಸಂಸ್ಕೃತ ಮೂಲ ಸೋದರಭಾಷೆಯಾದ ಪ್ರಾಚೀನ ಪಹ್ಲವಿಯೊಂದಿಗೆ ಮಧ್ಯ ಏಷ್ಯಾದಲ್ಲಿ ಜನಿಸಿದರೂ, ಭಾರತದ ರಾಷ್ಟ್ರಭಾಷೆಯೂ ಆಯಿತು. ಉತ್ತರ—ದಕ್ಷಿಣಗಳೆರಡೂ ಇದರ ಬೆಳವಣಿಗೆಗೆ ಸಹಾಯವನ್ನೂಡಿದುವು.

ಹಿಂದೆ ಭೌಗೋಳಿಕ ಕಾರಣಗಳಿಂದಾಗಿ ಭಾರತ ಹೊರ ಜಗತ್ತಿಗೆ ಗೋಚರಿಸಲಿಲ್ಲ. ಸಮುದ್ರಗಳಿಂದ ಅವ್ಯಕ್ತವಾಗಿ, ಬೃಹತ್ ಹಿಮಾಲಯ ಪರ್ವತದಿಂದ ಮುಚ್ಚಿ ಹೋಗಿತ್ತು. ಅನ್ಯರು ಒಳಗೆ ಬರುವುದು ಕಷ್ಟ ಸಾಧ್ಯವಾಗಿತ್ತು. ಇದರಿಂದ ವಿಚಿತ್ರ ಸ್ವಾಭಾವ ರೂಪುಗೊಂಡಿತು.

ನಮ್ಮ ಪೊಂದು ಅದ್ವಿತೀಯ ಜನಾಂಗ ವಾಯಿತು. ವಿಶ್ವದ ಇತರ ಭಾಗಗಳಲ್ಲಿ ಗೋತ್ರಿರದ ಹಾಗೂ ಅರ್ಥವಾಗದಿರುವಂತಹ ಸಂಪ್ರದಾಯಗಳನ್ನು ಬೆಳೆಸಿಕೊಂಡೆವು; ವಿವಿಧ ಜಾತಿಗಳು ಭಾರತದ ಈಡುಗೆಯಾಗಿವೆ. ಅಸ್ಪೃಶ್ಯತೆ, ಅಂತಾರ್ಜಾತೀಯ ಭೋಜನ, ವಿವಾಹಗಳಿಗೆ ವಿರೋಧ ಮುಂತಾದುವು ಇತರ ದೇಶಗಳಲ್ಲಿಲ್ಲ. ತಪ್ಪಲವಾಗಿ ಸಂಕುಚಿತ ಮನೋಧರ್ಮ ಬೆಳೆಯಿತು—

ಇಂದಿಗೂ ಭಾರತೀಯರು ಪರಸ್ಪರ ಕಲೆಯಲು ಹಿಂದಿರಿಯುತ್ತಾರೆ. ಪರದೇಶಗಳಿಗೆ ಹೋದಾಗಲೂ ಆಯಾ ಜಾತಿಯ ಜನರು ಪ್ರತ್ಯೇಕವಾಗಿರಲು ಯತ್ನಿಸುತ್ತಾರೆ. ನಾವು ಇವೆಲ್ಲವನ್ನೂ ಸಾಮಾನ್ಯನೆಂದು ಪರಿಗಣಿಸಿದರೂ, ಪರದೇಶದ ಜನರಿಗೆ ಎಂತಹ ವಿಸ್ಮಯ, ವಿಕ್ಷಿಪ್ತವೆಗಳಾಗಿ ಪುದೆಂಬುದನ್ನು ಅರಿತುಕೊಳ್ಳುತ್ತಿಲ್ಲ.

ಈ ರೀತಿ ಭಾರತೀಯರು ಒಂದೇ ಸಮಯದಲ್ಲಿ ಸಹಿಷ್ಣು ತೆ, ವಿಶಾಲ ಮನೋಧರ್ಮಗಳನ್ನೂ ಸಂಕುಚಿತ ಸಾಮೂಹಿಕ ಸ್ವಭಾವಚರ್ಯೆಗಳನ್ನೂ ಬೆಳೆಸಿಗೊಂಡಿವೆ. ಈ ಭಿನ್ನ ವ್ಯಕ್ತಿತ್ವ ಇಂದಿಗೂ ನಮ್ಮನ್ನು ಕಾಡುತ್ತಿದೆ: ಇದರ ವಿರುದ್ಧ ಇನ್ನೂ ಹೋರಾಡುತ್ತಿದ್ದೇವೆ. ನಮ್ಮ ವಂಶಿಕರಿಂದ ನಡೆದ ಮಹೋನ್ನತ ಪರಂಪರೆಯನ್ನೂ, ವಿಚಾರಪರತೆಯನ್ನೂ ಹಳೆದು ನಮ್ಮ ಸಂಕುಚಿತತೆಯನ್ನೂ, ಅಸಮರ್ಥತೆಯನ್ನೂ ಮುಚ್ಚಿಕೊಳ್ಳುತ್ತಿದ್ದೇವೆ. ಆದರೆ ಹಳೆತು—ಹೊಸತರ ಘರ್ಷಣೆ ಮುಂದುವರಿದಿದೆ. ಅದು ಪರಿಹಾರವಾಗುವ ವರೆಗೆ ಈ ಭಗ್ನ ಮನೋಧರ್ಮವಿರುತ್ತದೆ.

ಬದುಕು ಆರ್ಥಿಕ ಪ್ರಗತಿಗಿಂತಲೂ ಮಿಗಿಲಾದುದು. ಆದರೂ ಆರ್ಥಿಕ ಪ್ರಗತಿ ಬದುಕಿನ—ಪ್ರಗತಿಯ ಅಡಿಪಾಯ. ಅವಿಚ್ಛಿನ್ನತೆಯ ಹಾಗೂ ಬದಲಾವಣೆಯ ಎರಡು ತತ್ವಗಳು ಕಾರ್ಯಶೀಲವಾಗಿರುವುದು ಇತಿಹಾಸದಿಂದ ಗೋಚರಿಸುತ್ತದೆ ಅವು ಪರಸ್ಪರ ವಿರೋಧಿಗಳಾದರೂ ಪೂರಕಗಳಾಗಿವೆ.

ಭಾರತದಲ್ಲಿ ರಾಜಕೀಯ, ಆರ್ಥಿಕ ಮಹಾ ಸಮಸ್ಯೆಗಳನ್ನು ಎದುರಿಸುವಂತೆಯೇ ಭಾರತೀಯ ಧರ್ಮದ ಸಂದಿಗ್ಧತೆಯನ್ನೂ ಎದುರಿಸಬೇಕಾಗಿದೆ. ಭಾರತದಲ್ಲಿ ಕೈಗಾರಿಕಾ ಕ್ರಾಂತಿ ಆರಂಭವಾಗಿ ಮಹಾ ಬದಲಾವಣೆಗಳಾಗಿವೆ. ಭಾರತ ಒಂದು ದೇಶವಾಗಿ, ಒಂದು ಸಮೂಹವಾಗಿ ಉಳಿಯಬೇಕಾದರೆ ಸಮೂಹಿಕ ಬದಲಾವಣೆಗಳು ಅತ್ಯಗತ್ಯ.

ಸ್ವಧರ್ಮಗಳಾದ ಹಿಂದೂಧರ್ಮ, ಬೌದ್ಧ ಧರ್ಮಗಳೂ, ಹೊರದೇಶದಿಂದ ಆಗಮಿಸಿದ ಇಸ್ಲಾಂ, ಕ್ರೈಸ್ತ ಧರ್ಮಗಳೂ ಭಾರತದ ಮೇಲೆ ಪ್ರಭಾವ ಬೀರಿವೆ. ಈಗ ಧರ್ಮದ ಪ್ರಾಚೀನ ತತ್ವಗಳಿಗೆ ವಿಜ್ಞಾನ ಸವಾಲೆಸೆಯುತ್ತಿದೆ.

ಧರ್ಮವು ತತ್ವ, ಆಚರಣೆಗಳಲ್ಲಿ ವ್ಯವಹರಿಸಿದರೆ ವಿಜ್ಞಾನದೊಂದಿಗೆ ಘರ್ಷಣೆಯಿರುವುದಿಲ್ಲ. ವಿಜ್ಞಾನ—ಧರ್ಮಗಳ ಮಧ್ಯೆ ಸಾಮರಸ್ಯ ಏರ್ಪಡುತ್ತದೆ. ಈ ಸವಿ ಕಾರ್ಯ ಭಾರತದ ಕೆಲಸಕ್ಕೆ ಬರಲಿದೆ. ಆಗ ಅಶೋಕನ ಶಾಸನಗಳಲ್ಲಿ ಕಂಡಿರುವ ಭಾರತದ ಪ್ರಾಚೀನ ಪರಂಪರೆ ವಿಜೃಂಭಿಸುತ್ತದೆ.

ಅಂತರಿಕ, ಪ್ರಾದೇಶಿಕ ಹಾಗೂ ಭಾಷಾ ದ್ವೇಷ—ವೈಮನಸ್ಯಗಳಿಗೆ ಇಂದಿನ ಸಂದರ್ಭದ ಕಾರಣಗಳು. ಇಂತಹ ವಿಷಯಗಳನ್ನು ಪಕ್ಕಕ್ಕಿಟ್ಟು ನಾವು ಎದುರಿಸುವ ಬೃಹತ್ ಸಮಸ್ಯೆಗಳಿಗೆ ಗಮನ ಕೊಡಬೇಕು. ಆದ್ದರಿಂದ ಭಾರತಕ್ಕೆ ಅತ್ಯಗತ್ಯವಾದ ಒಗ್ಗಟ್ಟು, ಏಕತೆಗಳ ಬಗ್ಗೆ ವಿಶೇಷ ಗಮನ ಬೀರುವ ನಾವು ದೇಶದ ಪ್ರಗತಿ, ಅಭ್ಯುದಯ ಹಾಗೂ ಸಮೃದ್ಧತೆಗಾಗಿ ದುಡಿಯುವೆವು. ಇದು ಸಾಧ್ಯವಾದರೆ, ಕಾರ್ಯ ಸುಲಭವಾಗುತ್ತದೆ.

ವಿಶ್ವದಲ್ಲಿರುವ ಮಹಾ ಶಕ್ತಿಗಳನ್ನು ನಾವು ಅರಿಯುವುದು ಅಸಾಧ್ಯವಾದರೂ, ಭಾರತವನ್ನೂ, ಅದು ಬೆಳೆಸಿಕೊಂಡಿರುವ ಸಮಗ್ರ ವ್ಯಕ್ತಿತ್ವದ ನಾನಾ ಮುಖಗಳನ್ನೂ ಅರಿತುಕೊಳ್ಳಬೇಕು.

ಭಾರತೀಯ ವಿಜ್ಞಾನದಂತೆ ಹಾಗೂ ಅಂತಃಶಕ್ತಿ ಭಾರತ ವೊಂದು ಜಾತಿಯ ಸ್ವತಂತ್ರವಾಗಿದ್ದು, ಭಾರತ ಪ್ರತಿಯೊಂದೂ ವೀಕ್ಷಣಾಜನಿಗೆ ಕಾಣಿ ಕೊಡಿತು. ನಾವು ಇದನ್ನು ಅರಿಯದಿದ್ದರೆ, ತಾಯಿನಾಡನ್ನು ಅರಿಯಲು ಸಾಧ್ಯವಾಗಲಾರದು. ಭಾರತೀಯತೆಯನ್ನೂ ಕಾಡಲಾರದು.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಸ್.

'Ably written- Quite up-to-date valuable service'

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಡಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ!

ಬೆಲೆ: ರೂ. ೨-೦೦ (ಟ್ಯಾಕ್ಸ್ ಬೇರೆ)

—ಪ್ರತಿಗಳಿಗೆ ಅರಿಯಿರಿ—,

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

S. C. 355/1967

ವಾದಿ—ಗಿರಿಯಮ್ಮ ಸೆಟ್ತಿ.

ಪ್ರತಿವಾದಿಯು 1 ತೇಜಪ್ಪ ಸೆಟ್ಟಿ, 2 ಚಂದಯ್ಯ ಸೆಟ್ಟಿ

ಇವರ ಪ್ರತಿವಾದಿ—ಚಂದಯ್ಯ ಸೆಟ್ಟಿ, ತೇಜಪ್ಪ ಸೆಟ್ಟಿ ಮಗ್ಗ ಉಪ್ಪಿ ಕೊಲ್ಲ, ಕಾವಡಿ ಗ್ರಾಮವಾದ ಬಡಾಕಾನಡಿಯಲ್ಲಿರುವವರು.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯಿಂದ ಬರತಕ್ಕ ಡಿವೋರ್ಸು ನೋಟಿನ ಅಸಲು ಬಡ್ಡಿ ಬಗ್ಗೆ ವಾದಿಯು ಮೂಡಿದ ಮೇಲಿನ ದಾವೆಯು ತಾ. 16—12—1967ಕ್ಕೆ ತಪ್ಪಿಗೆ ಯಿರಿತ್ತದೆ. ಆ ಗುಂತು ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಅದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟ್‌ನಲ್ಲಿ ಹಾಜರಾಗಿ ಜವಾಬ್ದಿರು ಮಾಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

ಕೋರ್ಟು ಹುಕುಂ ಪ್ರಕಾರ

Y. Tejappa Shetty
Advocate for Plff.

Coondapoor, 18—11—67

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦,

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



NAVAYUGA

7—12—1967

೧೦ ಪೈಸೆ

ಕಥಾ ಪ್ರಪಂಚ

ತಾಯಿ - ಮಗಳು

ಬರೆದವರು — ಶ್ರೀ ಸ. ನಾರಾಯಣ

ಶಾರದಮ್ಮ ಪತಿಯು ಆಗಮನವನ್ನೇ ಪ್ರತೀಕ್ಷಿಸುತ್ತಾ ಕುಳಿತಿದ್ದರು.

ಎಂಟು ಗಂಟೆಗೆ ಮುಂಚೆ ಎಂದೂ ಆ ಪ್ರತೈಯಿಂದ ಮನೆಗೆ ಹಿಂದಿರುಗುವ ಆ ಧ್ಯಾಸವನ್ನು ಇಟ್ಟು ಕೊಂಡಿರಲಿಲ್ಲ ಡಾ। ಮೋಹನರಾಯರು. ಆದಿಂದು ಅವರು ಮನೆ ತಲುಪಿದಾಗ ರಾತ್ರಿ ಹತ್ತುಗಂಟೆ ಯಾಗಿತ್ತು.

ಮೋಹನರಾಯರು ಆರೆ ಗಂಟೆಯನ್ನು ಒತ್ತಿದಾಗ ಶಾರದಮ್ಮನವರೇ ಬಾಗಿಲನ್ನು ತೆಗೆದರು. ರಾಯರು ಕುರ್ಚಿಯಲ್ಲಿ ಕೂಳಿತು ಬೂಡ್ಸು ಬಿಚ್ಚುತ್ತಾ "ಇವತ್ತು ಆಸ್ಪತ್ರೆಯಿಂದ ಹೊರಟದ್ದೇ ಹೊತ್ತು ಶಾರದಾ, ಅನಂತರ ರಾಜು ಸಿಕ್ಕಿದ ಕಬ್ಬಿಗೆ ಹೋದೆ ಹೊತ್ತಾಯ್ತು' ಎಂದರು.

"ಸದ್ಯ ಇಷ್ಟು ಹೊತ್ತಿಗಾದರೂ ಮನೆ ನೆನಪಾಯಿತಲ್ಲ.... ಫಿಮ್ಮದು ನಿತ್ಯವೂ ಏನಾದರೊಂದು ರಾದ್ಧಾಂತ ಇದ್ದೇ ಇರುತ್ತದೆ' ಎಂದರು ಶಾರದಮ್ಮ. ಅವರ ಮಾತಿನಲ್ಲಿ ಕೋಪ, ಬೇಸರ ಎರಡೂ ಸಮವಾಗಿ ಸೇರಿದ್ದವು.

"ಹೋಗಲಿ ಬಿಡು ಶಾರದಾ, ಇವಳೆಯಿಂದ ಮುಂಚೆ ಖುರುತ್ತೇನೆ'

"ಅಂತಹ ನಾಳೆಗಳು ಎಷ್ಟು ಮುಗಿದು ಹೋದವೋ?'

'ತುಂಬಾ ಹೊತ್ತಾಯಿತು ಕಣೆ....ಲಕ್ಷ್ಮಿ ಊಟ ಆಯಿತ?'

"ನಿನ್ನೇನೂ ಕೇಳ ಬೇಡಿ... ನೀವುಂಟು ನಿಮ್ಮ ಮಗಳುಂಟು, ಅವಳನ್ನೆ ಕೇಳಿ' ಎಂದು ಅಡಿಗೆಯ ಮನೆಯ ಕಡೆ ನಡೆದರು ಶಾರದಮ್ಮ.

. "ಈ ತಾಯಿ ಮಗಳ ಗಲಾಟೆ ಇದ್ದೇ ಇರುತ್ತದೆ." ಎಂದು ಮೋಹನ ರಾಯರು ಮಗಳ ಕೋಣೆಯ ಕಡೆಗೆ ಧಡದರು.

ಲಕ್ಷ್ಮಿ ಆಪ್ತ ಕೋಣೆಯಲ್ಲಿ ತನ್ನ ರಾಲೇಜು ಸಾರಥಿಗಳನ್ನು ಓದುತ್ತಾ ಕುಳಿತಿದ್ದಳು. ಅವಳ ದೃಷ್ಟಿ ಪುಸ್ತಕದ ಕಡಗಿದ್ದರೂ ಕಿವಿ ತಂದೆ-ತಾಯಿಯರ ಸಂಧಾಷಣೆಯನ್ನು ಆಲಿಸಿತ್ತು. ಮೋಹನರಾಯರು ಕೋಣೆಯ ಬಾಗಿಲಲ್ಲಿ ನಿಂತು "ಲಕ್ಷ್ಮಿ" ಎಂದರು.

ಲಕ್ಷ್ಮಿ ಕೈಯಲ್ಲಿದ್ದ ಪುಸ್ತಕವನ್ನು ಮೇಜಿನ ಮೇಲಿಟ್ಟು "ಏನಪ್ಪಾ" ಎಂದಳು.

'ಊಟ ಆಯ್ತೇನಮ್ಮ"

"ನನಗೆ ಹಸಿವೆ ಇಲ್ಲಪ್ಪಾ ನಾನು ಊಟ ಮಾಡೋಲ್ಲ"

"ಅಂತೂ ಅಮ್ಮ ಮಗಳು ಅತ್ತೆ ಸೊಸೆಗಿಂತ ಚೆನ್ನಾಗಿ ಜಗಳ ಮಾಡಿದ್ದೀರಿ. ಬಾರಮ್ಮ ಬಾ. ನೀವಿಬ್ಬರೂ ಅದೂಮು ಅನ್ಯೋನ್ಯವಾಗಿರುತ್ತೀರೋ ನಾನು ಬೇರೆ ಕಾಣ' ಎಂದರು ಮೋಹನರಾಯರು.

"ನನಗೆ ಬಳಗ್ಗೆಯಿಂದ ಮನೆ ಕೆಲಸ ಮಾಡಿ ಸಾಕಾಗಿ ಹೋಗಿದೆ. ಊಟ ಮಾಡಿ ಅದೇನು ಮಾತನಾಡುತ್ತೀರೋ ಮಾತನಾಡಿ, ಈಗ ಇಬ್ಬರೂ ಊಟಕ್ಕೆ ಬನ್ನಿ' ಎಂದು ಅಡಿಗೆಯ ಮನೆಯ ಬಾಗಿಲಲ್ಲಿ ನಿಂತು ಕರೆದರು ಶಾರದಮ್ಮ.

"ನನಗೆ ಹಸಿವೆ ಇಲ್ಲಣ್ಣಾ, ನಾನು ಬರೋಲ್ಲ'

"ನೀನು ಸುಮ್ನೆ ಬಾರಮ್ಮ...ನೀನು ಬರದಿದ್ದರೆ ನಾನೂ ಹೋಗೋಲ್ಲ' ಎಂದರು ಮೋಹನರಾಯರು. ಲಕ್ಷ್ಮಿಯು ಬಿಗು ಮೂತಿ ತಂದೆಯು ಎದುರಿನಲ್ಲಿ ಇಳಿದು ಹೋಯಿತು.

ಇಬ್ಬರೂ ಊಟಕ್ಕೆ ಕುಳಿತರು. ಶಾರದಮ್ಮ ತುಟಿ ಎರಡು ಮೂಡದೆ ಬಡಿಸುತ್ತಿದ್ದರು. ಅರ್ಧ ಊಟ ಮುಗಿಯುವ ವರೆಗೆ ಯಾರೂ ಮಾತನಾಡಲಿಲ್ಲ. ಮೋಹನರಾಯರೇ ಮಾತಿಗಾರಂಭಿಸಿದರು.

"ಯಾಕಮ್ಮ ಲಕ್ಷ್ಮಿ, ನಿಮ್ಮಮ್ಮನಿಗೆ ತುಂಬ ಕೋಪ ಬಂದಿದೆ?'

'ನನಗೇನಣ್ಣ ಗೊತ್ತು?'

'ಅಯ್ಯೋ ಪಾಪ! ನೀನಿನ್ನು ಕೂಸು ಬಾಯಿಯಲ್ಲಿ ಬೆರಳಿಟ್ಟರೂ ಕಚ್ಚುವುದಕ್ಕೆ ಬರೋದಿಲ್ಲ" ಎಂದರು ಶಾರದಮ್ಮ.

'ನಾನು ಅಣ್ಣನಿಗೆ ಹೇಳಿದ್ದು, ನಿನಗಲ್ಲ" ಎಂದಳು ಲಕ್ಷ್ಮಿ.

"ಈ ಮನೆಯಲ್ಲಿ ನನ್ನ ಮಾತಿಗೆ ಏನು ಬೆಲೆ ಇದೆ? ನೀವು ತಂದೆ ಮಗಳು ಯಾವಾಗಲೂ ಒಂದು. ನಾನು ತಾನೆ ಬೇರೆ'

'ನನಗೆ ಈ ವಿಷಯ ಗೊತ್ತೇ ಇರಲಿಲ್ಲ ನೋಡು" ಎಂದು ನಡುತ್ತಾ ನುಡಿದರು ಮೋಹನರಾಯರು.

"ನಿನಗೆ ಹಾಸ್ಯ ಇವನಿಗೆ ಪ್ರಾಣ ಸಂಕಟ."

'ಅಂತಹದೇನಾಯ್ತೇ?"

'ಅವಳನ್ನೇ ಕೇಳಿ. ನಿಮ್ಮ ಮುದ್ದು ಮಗಳು ಇದ್ದಾಳಲ್ಲ?"

"ಅಂತೂ ವಿರಸ ಪ್ರಸಂಗ ನಡೆದು ಹೋಗಿದೆ. ಅಮ್ಮ ಮಗಳು ಪೂರ್ವ ಪಶ್ಚಿಮ ಆಗಿದ್ದೀರಿ. ವಿಷಯ ಏನಮ್ಮ ಲಕ್ಷ್ಮೀ?" ಎಂದು ಪ್ರಶ್ನಿಸಿದರು ಮೋಹನರಾಯರು.

"ವಿರಸ ಮಾಡಿಕೊಂಡು ಜಗಳವಾಡೋದಿಕ್ಕೆ ನಾನೇನು ಅವಳ ಮಲ ತಾಯಿಯಲ್ಲ.....ಆದೇನು ಹೇಳಮ್ಮ, ಯಾಕೆ ಅಂತ."

"ನಾನೇಕೆ ಹೇಳಲಿ? ನೀನೇ ಹೇಳಿಕೋ"

'ಆಯ್ತು ಕಣೆ ನಾನೇ ಹೇಳ್ತೀನಿ. ಸಂಜೆ ಎಷ್ಟು ಹೊತ್ತಿಗೆ ಮನೆಗೆ ಬಂದಳಂತೆ ನಿಮ್ಮ ಮಗಳು, ಕೇಳಿ' ಎಂದರು ಶಾರದಮ್ಮ.

"ಪಾಟ ಸವಾಲು ಆರಂಭವಾಯ್ತು. ಉತ್ತರ ಹೇಳಮ್ಮ... ಹೈಕೋರ್ಟು ವಿಚಾರಣೆ."

'ಎಂಟು ಗಂಟೆಗೆ ಮನೆಗೆ ಬಂದೆ ಕಣಣ್ಣಾ"

"ಯಾಕಮ್ಮ ಅಷ್ಟು ಹೊತ್ತು? ರಾಲೇಜು ಮುಗಿಯೋದು ಎಷ್ಟು ಹೊತ್ತಿಗೆ?' ಎಂದರು ಶಾರದಮ್ಮ.

"ಸಂಜೆ ರಾಲೇಜು ಮುಗಿದ ನಂತರ ನಾಗು, ರಮ್ಯಾ, ಪದ್ಮ, ನಳಿನಿ ಕ್ಯಾಂಟೀನಿನಲ್ಲಿ ತಿಂಡಿ ರಾಫಿ ಮುಗಿಸಿ ಲೈಬ್ರರಿಗೆ ಹೋದೆವು. ಅದಕ್ಕೆ ಹೊತ್ತಾಯ್ತು ಕಣಣ್ಣಾ ಅಷ್ಟೆ' ಎಂದಳು ಲಕ್ಷ್ಮಿ.

'ಅದು ಸರಿ ಯಾರ ಜೊತೆಗೆ ಎಂದಳು ಕೇಳಿ'

'ಪ್ರಸಾದ ಲೈಬ್ರರಿಯಲ್ಲಿಯೇ ಇದ್ದ ರಣ್ಣಾ. ಕತ್ತಲೆಯಾಯಿತು ಅಂತ ಜೊತೆಯಲ್ಲಿ ಬಂದರು. ಮನೆಯ ವರೆಗೂ ಬಿಟ್ಟು ಹೋದರು" ಎಂದಳು ಲಕ್ಷ್ಮಿ.

"ಕೇಳಿದಿರಾ ಅವಳ ಮಾತನ್ನು? ನೋಡಿ ಎಷ್ಟು ಚನ್ನಾಗಿ ಹೇಳ್ತಾಳೆ. ಎಂಟು ಗಂಟೆಗೆ ನುನೆಗೆ ಬಂದೆ. ಪ್ರಸಾದ ಜೊತೆಯಲ್ಲಿ ಬಂದ ಅಂತ. ಆಕ್ಷಣಕ್ಕಾದವರು, ನೋಡಿದವರು ಏನಂದುಕೊಳ್ಳುತ್ತಾರೆ? ನಾಳೆ ಮದುವೆಯೂಗಿಸು ಬಂದಾಗ ಬೇಕಾದೋಳು. ಅವಳ ಬಗ್ಗೆ ಕೆಟ್ಟ ಹೆಸರು ಬಂದರೆ ಏನು ಮಾಡೋದು? ನಾನು ಎಷ್ಟೋ ಸಾರಿ ಸಂಜೆಗೆ ಮುಂಚೆ ಮನೆಗೆ ಬಾ, ಯಾವ ಪ್ರಸಾದನ ಸಹವಾಸವೂ ಬೇಡ ಅಂತ ಹೇಳಿದ್ದೇನೆ. ಅವಳ ಬಗ್ಗೆ ಕೆಟ್ಟ ಮಾತನಾಡಿದರೆ, ಅಪಚಾರ ಮಾಡಿದರೆ ಅನುಭವಿಸೋದು ಯಾರು? ನೀವು ಲಕ್ಷ್ಮಿಗೆ ಸಲುಗೆ ಕೊಟ್ಟು ಹೀಗೆ ಮಾಡಿದಿರಿ. ನಾನು ಏನಾದರೂ ಹೇಳಿದರೆ ಇಬ್ಬರೂ ನನ್ನನ್ನೂ ಗೇಲಿ ಮಾಡುತ್ತೀರಿ. ಹೆತ್ತ ಒಡಲಿನ ಸಂಕಟ ನೀವೇನು ಬಲ್ಲಿರಿ? ಎಂದು ನುಡಿದರು ಶಾರದಮ್ಮ. ಅವರ ಮಾತಿನಲ್ಲಿ ಮಾತೃ ವಾತ್ಸಲ್ಯ ತುಂಬಿತ್ತು.

ಲಕ್ಷ್ಮಿ ತಲೆ ಬಗ್ಗಿಸಿ ಕುಳಿತಿದ್ದಳು.

'ಯಾವ ಪ್ರಸಾದ ಲಕ್ಷ್ಮಿ'

'ಅವತ್ತು ಮನೆಗೆ ಬಂದಂಲಿಲ್ಲವೇ ನಣ್ಣ'

ಯಾರು ಎಂ.ಎ ತರಗತಿಯಲ್ಲಿ ಓದುತ್ತಿರೋ ಹುಡುಗ. ಅವತ್ತು ಟ್ಯೂಷ್ ಹಾಲಿನಲ್ಲಿ ವಿವೇಕಾನಂದರ ವಿಷಯವಾಗಿಯೂ ತನಾಡಿದವನಲ್ಲ .ಆ ಹುಡುಗನೇ ತಾನೇ" ಎಂದರು ಮೋಹನರಾಯರು.

'ಆ ಹುಡುಗನೇನೊ ಸಂಧ್ಯಾವಿತ್ಯ, ಮರ್ಯಾದಸ್ಥ, ವಿದ್ಯಾವಂತ, ವಿನೇಯಶಾಲಿ ಎಲ್ಲ ಸರಿ ಲಕ್ಷ್ಮಿ. ನಾವು ಸಮಾಜವನ್ನು ನೋಡ ಬೇಕಾಗುತ್ತದೆ. ನಿಮ್ಮಮ್ಮ ಹೇಳೋ ಮಾತು ನಿಜ. ಇನ್ನು ಮೇಲೆ ಹಾಗೆಲ್ಲ ಶತ್ರುಲಾದ ಮೇಲೆ ಬರಬೇಡಮ್ಮ" ಎಂದು ಮಗಳಿಗೆ ಉಪದೇಶಿಸಿದರು ಮೋಹನ ರಾಯರು.

— ೨ —

ಲಕ್ಷ್ಮಿ ಮೋಹನರಾಯರು ಮತ್ತು ಶಾರದಮ್ಮನವರ ಏಕ ಮಾತ್ರ ಪುತ್ರಿ. ಬಹು ದಿನಗಳ ನಂತರ ಹುಟ್ಟಿದ ಒಬ್ಬಳೇ ಮಗಳನ್ನು ತಂದ ತಾಯಿ ಬಹು ಆಕ್ಕರೆಯಿಂದ ಬೆಳೆಸಿದರು. ಮೋಹನ ರಾಯರಿಗೆ ಮಗಳ ಮೇಲೆ ಅಪಾರ ಮಮತೆ ತಂದೆ ನೀಡಿದ ಸಲುಗೆ, ಸ್ವಾತಂತ್ರ್ಯಗಳಿಂದ ಲಕ್ಷ್ಮಿಯಲ್ಲಿ ಮೊದಲಿಂದಲೂ ಹಟ ಬೆಳೆಯಿತು.

ಶಾರದಮ್ಮನವರಿಗೆ ಮಗಳ ಬಗೆಗೆ ಅಭಿಮಾನ, ಅಕ್ಕರೆ ಇಲ್ಲದಿರಲಿಲ್ಲ. ಆದರೆ ಅವರ ಮಾತೃ ಹೃದಯ ಮಗಳು ಸದ್ಗುಣ ಸಂಪನ್ನೆ ಆಗಬೇಕು ಎಂದು ಹಾರೈಸುತ್ತಿತ್ತು. ಕೆಲ ಬಾರಿ ತಾಯಿಯ ವಿರೋಧ ವಿದ್ದರೂ ತಂದೆ ಸಮ್ಮತಿಸುತ್ತಿದ್ದ ಕಾರಣ ಲಕ್ಷ್ಮಿಯು ಹಟವನ್ನೇ ಗೆಲ್ಲುತ್ತಿತ್ತು. ಲಕ್ಷ್ಮಿಯು ಹಲವು ಕೆಲ ಬಾರಿ ತಂದೆ ತಾಯಿಯವರಿಗೆ ವಿರಸ ತರಿಸುತ್ತಿತ್ತು. ಮೋಹನರಾಯರು ಎಂತಹ ವೇಸರ, ಕೋಪಗಳ ಪ್ರಸಂದರ್ಭದಲ್ಲಾದರೂ ಮುದ್ದು ಮಗಳ ಬೇಡಿಕೆಯನ್ನು ವಿರೋಧಿಸುತ್ತಿರಲ್ಲಿಲ್ಲ, ನಿರಾಕರಿಸುತ್ತಿರಲಿಲ್ಲ. ಈ ಕಾರಣದಿಂದಾಗಿ ಲಕ್ಷ್ಮಿಗೆ ತಾಯಿಗಿಂತಲೂ ತಂದೆಯಲ್ಲಿ ಸಲುಗೆ, ವಿಶ್ವಾಸ ಹೆಚ್ಚಾಗಿತ್ತು.

ತಾಯಿಯ ಬಗೆಗೆ ಲಕ್ಷ್ಮಿಗೆ ಕೋಪ

(ಹದಿನೈದನೇ ಪುಟ ನೋಡಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವ ಪ್ರಸಾದ

ಕುಂದಾಪುರ, ದ.ಕ.

ಫೋನ್: 77!

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ. ಸಕಲ ವಿಧದ ತಿಂಡಿತಿನಿಸು. ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಫೋನ್ 226

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೧೪	೭—೧೨—೧೯೬೨	No. 14

ವಿವಾದಕ್ಕೊಂದು ಕೊನೆ

ಭಾರತದಲ್ಲಿನ ಭಾಷಾ ವಿವಾದಕ್ಕೊಂದು ಪೂರ್ಣವಿರಾಮವೇ ಇಲ್ಲವೆ? ಸಂವಿಧಾನದಲ್ಲಿ ಹಿಂದಿಯನ್ನೇ ರಾಷ್ಟ್ರ ಭಾಷೆಯೆಂದು ಸ್ವೀಕರಿಸಲಾಗಿತ್ತು ನಿಜ. ಆದರೆ, ಇದಕ್ಕೆ ಸಮಯಾವಕಾಶ ನೀಡಿದ್ದರ ಪರಿಣಾಮವಾಗಿಯೋ ಎಂಬಂತೆ ಆದಕ್ಕೆ ವಿರೋಧ ಹೆಚ್ಚಿತು. ಕೊನೆಗೆ, ಪ್ರಧಾನಿಯಾಗಿದ್ದ ಪಂಡಿತ ನೆಹರೂರವರು ವಿಶ್ವಾಸ ನೀಡಬೇಕಾಯಿತು--ಹಿಂದೀತರರು ಬಯಸುವಷ್ಟು ಸಮಯ ಹಿಂದಿಯೊಡನೆ ಇಂಗ್ಲಿಷ್ ಭಾಷೆಯ ಬಳಕೆಗೂ ಅವಕಾಶ ಕಲ್ಪಿಸಿ ಕೊಡಲಾಗುವುದು. ಈ ಆಶ್ವಾಸನೆಕೊಂದು ಶಾಸನ ರೂಪವನ್ನು ಕೊಡಲು ಕಾಂಗ್ರೆಸ್ಸಿಗರಲ್ಲಿ ಬಿನ್ನಮತವು ಆಡ್ಡಪೊಡ್ಡಿತು. ಸೇರ್ ಗೋವಿಂದದಾಸರಂತಹ ಮಹನೀಯರು ಅತಿರೇಕ ಹಿಂದೀ ಪ್ರೇಮಿಯಾಗಿದ್ದು, ಇಂಗ್ಲಿಷನ್ನು ಅವರು ತೀವ್ರ ವಿರೋಧಿಸುತ್ತಾರೆ. ಆದರೆ, ದಕ್ಷಿಣದ ರಾಜ್ಯಗಳು—ಮುಖ್ಯವಾಗಿ ಮದ್ರಾಸು—ಅಷ್ಟೇ ತೀವ್ರತೆಯಿಂದ ಇಂಗ್ಲಿಷನ್ನು ಬೆಂಬಲಿಸಿ, ಹಿಂದಿಯನ್ನು ವಿರೋಧಿಸುತ್ತಿದೆ- ಹೀಗೆ ಎತ್ತ ಏಂಗೆಳೆದರೆ, ಹೋರಿ ನೀರಿಗೆಳೆಯ ತ್ತಿರುವ ಭಾಷಾ ಪ್ರಶ್ನೆಗೊಂದು ಕೊನೆಯುತ್ತರ ಪೀಡಲು ಪ್ರಧಾನಿ ಇಂದಿರಾ ಗಾಂಧಿಯವರ ಸಂಪುಟ ದೃಢ ಮನಸ್ಸು ಮಾಡಿ ಮಸೂದೆಯೊಂದನ್ನ ಸಂಸತ್ತಿನಲ್ಲಿ ಮಂಡಿಸಿದೆ.

ಮಸೂದೆಯು ಶಾಸನ ರೂಪಕ್ಕೆ ಬರುವಾಗ, ಬಿ| ಪ್ರಧಾನಿ ನೆಹರೂರವರು ನೀಡಿದಭರವಸೆಗಳಿಗೆ ಶಾಸನ ಬದ್ಧತೆ ಲಭಿಸುವುದು. ಈ ಮಸೂದೆಯು ಹಿಂದೀ ಮತ್ತು ಇಂಗ್ಲಿಷ್ ಭಾಷೆಗಳೆರಡನ್ನೂ ಮನ್ನಿಸುವುದು. ಹಿಂದೀ ವಿರೋಧಿಗಳಿಗೆ ಇದರಿಂದ ತೃಪ್ತಿಯಾದರೂ ಸಂವಿಧಾನದಲ್ಲಿಯೆ ತಿದ್ದುಪಡಿ ಮಾಡಿ ಇಂಗ್ಲಿಷಿನ ಬಳಕೆಗೆ ಅವಕಾಶ ನೀಡಬೇಕೆಂಬ ಬೇಡಿಕೆ ಅವರದ್ದು. ಆದರೂ ಸಂವಿಧಾನದ ಅನು-ಚ್ಛೇದದಪ್ರಕಾರ ಈ ಶಾಸನವೂ ಪ್ರಭಾವಶಾಲಿಯಾಗುವುದು ಎಂಬ ಇಂದಿರಾ ಗಾಂಧಿಯವರ ಆಶೆಯೆ ಅವರಿಗೆ ತೃಪ್ತಿ ನೀಡಬೇಕು. ಸಂವಿಧಾನ ತಿದ್ದುಪಡಿ ಮಾಡುವುದೆಂದರೆ,ಅದು ಇಂದಿನಪರಿಸ್ಥಿತಿಯಲ್ಲಿ ಕಷ್ಟಸಾಧ್ಯ.ಮಸೂದೆ ವಲ್ಲಂಈಗ ಶಾಸನಬದ್ಧ ಅವಕಾಶ ನೀಡುವಂತೆಮುಂದೊಂದು ದಿನ ಈ ಅವಕಾಶವನ್ನು ಮರಳಿತೆಗೆದುಕೊಳ್ಳುವುದೂ ಸರಳವಾಗುತ್ತದೆ. ವಿವಿಧ ಮುಖಗಳು ಭಾಷಾ ವಿಧೇಯಕವನ್ನು ನಾನಾ ವಿಧವಾಗಿ ಟೀಕಿಸುತ್ತವೆ. ಹಿಂದೊಮ್ಮೆ ಮದ್ರಾಸಿನಲ್ಲಿ ಹಿಂದೀ ವಿರೋಧಿ ಚಳುವಳಿಯಲ್ಲಿ ಹಲವಾರು ಅಶಾಂತಿ ನಡೆದುದನ್ನೂ ನಾವಿನ್ನೂ ಮರೆತಿಲ್ಲ. ಈಗ, ಕಾಶಿಯಲ್ಲಿ ಇದೇ ಮೂದರಿಯಲ್ಲಿ ಇಂಗ್ಲಿಷ್ ವಿರೋಧಿ ಚಳುವಳಿ ಆರಂಭವಾಗಿದೆ—ಇದರ ಗಾಳಿ ಇತರೆಡೆಯೂ ಹರಡಬಹುದು. ಚಳವಳ ಉಲ್ಬಣಗೊಳ್ಳಲೂ ಬಹುದು. ಹಾಗಾದಲ್ಲಿ, ಮದ್ರಾಸಿನ ಚಳವಳವನ್ನೂ ಇದು ಮೆಟ್ಟಿ ನಿಂತರೂ ಆಚ್ಚರಿಯಿಲ್ಲ. ಇದು ಏನನ್ನು ತೋರಿಸುತ್ತದೆ? ಹಿಂದೀ ವಿರೋಧಿಗಳಿರುವಂತೆಯೇ ಇಂಗ್ಲಿಷ್ ವಿರೋಧಿಗಳೂ ದೇಶದಲ್ಲಿದ್ದಾರೆ. ರಾವಣನ ಸ್ಮತಿಮೆಯನ್ನು ಸುಡುವವರಿರುವಂತೆಯೇ ರಾಮನನ್ನೂ ಸುಡುವ ಜನವಳಿಗಾರರಿದ್ದಾರೆ. ವೈವಿಧ್ಯವೇ ಭಾರತದ ವೈಶಿಷ್ಟ್ಯ ಆದರೂ ಒಂದು ವಿಶೇಷವೆಂದರೆ, ಈ ವೈವಿಧ್ಯದಲ್ಲೂ ಏಕತೆಯಿದೆ. ಭಿನ್ನತೆಯಲ್ಲೂ ಏಕತೆಯನ್ನು ಕಂಡಿದ್ದೇವೆ —ಇದು ಭಾರತೀಯ ಸಂಸ್ಕೃತಿಯ ಹಿರಿಮೆ. ಪ್ರಧಾನಿ ಗಾಂಧಿಯವರು ಹೇಳುವಂತೆ, ಭಾರತದಂತಹ ಹಲವು ಭಾಷಾ ರಾಷ್ಟ್ರದಲ್ಲಿ ತುಸು ಹೊಂದಾಣಿಕೆ ಮಾಡಿಕೊಳ್ಳದೆ ಈ ಸಮಸ್ಯೆಯನ್ನು ಎಲ್ಲರಿಗೂ ಸಮೂಹಾನತರು ವಂತೆ ಕೊನೆಗಾಣಿಸುವುದು ಸಾಧ್ಯವಿಲ್ಲ ಆದುದುಂದಲೇ ನೆನೆಗುದಿಗೆ ಬಿದ್ದಿದ್ದ ಈ ಪ್ರಶ್ನೆಗೊಂದು ಉತ್ತರ ನೀಡಲು ಇಂದಿರಾ ಗಾಂಧಿ ಸೊಂಟ ಕಟ್ಟಿದ್ದಾರೆ. ಕಾಂಗ್ರೆಸ್ ಸಕ್ತದ ಬೆಂಬಲವನ್ನೂ ಇದಕ್ಕೆ ಪಡೆದು ಕೊಂಡಿದ್ದಾರೆ. ವಿಧೇಯಕದ ಏಕ ಮಾತ್ರ(?) ವಿರೋಧಿ ಸೇರ್ ಗೋವಿಂದ ದಾಸರಿಗೆ ಸೂಕ್ತ ಎಚ್ಚರಿಕೆಯನ್ನೂ ನೀಡಲಾಗಿದೆಯೆಂದು ಸುದ್ದಿಯಿದೆ. ಅದೇನೇ ಇದ್ದರೂ ಪ್ರಧಾನಿಯವರ ಅಭಿಪ್ರಾಯವಷ್ಟೂ ಹಿಂದೀ ಅಭಿವೃದ್ಧಿಗೂ ಹಿಂದೀ ವಿರೋಧಿಗಳೂ ಅನುಮೋದಿಸಲೇ ಬೇಕು.

ಭಾಷೆಯನ್ನು ಹಿಡಿದು ಚಳುವಳಿಗಳಿಗೆ ತೊಡಗಿದರೆ, ವಿದೇಶೀಯರು ಭಾವನೆ ಮಾಡುವುದು, ಬಿನ್ನತೆ ಹರಡುವುದು, ಏಕತೆ ಪ್ರಾಮುಖತೆಯೆಷ್ಟಾಗುವುದು. ಸಮಗ್ರ ದೇಶದ ಐಕ್ಯ ದೃಷ್ಟಿಯಿಂದ, ಸದ್ಯದ ವಿಧೇಯಕಕ್ಕೆ ಶಾಸನ ರೂಪವನ್ನು ಕೊಡುವಲ್ಲಿ ಸಂಶಯ ಹಿಂದೆ ಮುಂದೆ ನೋಡಬಾರದು. ಈ ಶಾಸನದಿಂದಲೇ ಹಿಂದೀ ಪ್ರೇಮಿಗಳೂ ಹಿಂದೀ ವಿರೋಧಿಗಳೂ ತೃಪ್ತಿಪಟ್ಟು ದೇಶೋನ್ನತಿಯತ್ತ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಬೇಕು. ಶ್ರೀ ಭಾಷಾ ಸೂತ್ರವನ್ನೂ ಈ ಶಾಸನವನ್ನೂ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದರೆ, ಭಾಷಾ ಸಮಸ್ಯೆ ಇಲ್ಲದಾಗುವುದು.

ಸರ್ವಸಮ್ಮತ ಅಭ್ಯರ್ಥಿ

ಸರ್ವ-ಸಮ್ಮತ ಅಭ್ಯರ್ಥಿಯನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವ ಹೊಸ ಗಾಳಿಕಳಿಯನ್ನು ಕಾಂಗ್ರೆಸ್ ಕಾರ್ಯಕಾರಿಣಿಯು ಕಾಮರಾಜ—ಇಂದಿರಾ ಗಾಂಧಿಯವರಿಗೆ ನೀಡಿತು. ಆದರೆ ಜತೆಗೆ ಕಾಂಗ್ರೆಸ್ಸಿನ ಒಂದೊಂದು ಸಂಗಡವೂ ತನು ಗೆ' ಒಪ್ಪಿಗೆಯೂಗುವ ಅಭ್ಯರ್ಥಿಯೂಗಬೇಕೆಂದು ಎಚ್ಚರಿಕೆಯನ್ನೂ ನೀಡಿತು. ಎಲ್ಲರಮ್ಮ ಕೃಪ್ತಿಪಡಿಸುವುದು ಕಚ್ಚುತನವೇ ಆದರೂ ಪಕ್ಷದ ಐಕ್ಯ ರಕ್ಷಣೆಗಾಗಿ ಪಾಯಕರ್ದ್ಯಯರು ತುಂಬ ಕಲೆ ತುರಿಸಿಕೊಳ್ಳ ಬೇಕಾಯಿತು. ಅರಂಭದಿಂದಲೂ 'ಒಲ್ಲೆ ಒಲ್ಲೆ' ಎಂದನ್ನುತ್ತಲೇ ಬಂದಿರುವ ಕರ್ನಾಟಕದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರನ್ನು ನಾಯಕರು ಹುದ್ದೆಗೆ ಒಪ್ಪಿಸಿದ್ದೇ ಬಿಟ್ಟರು. ಶ್ರೀ ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿಯೂ ಮುಂದುವರಿಯ ಬಹುದೆಂದು ಇಂದಿರಾ ಗಾಂಧಿಯುವರೆಂದರೆಂದೂ, ಇದು ಕೂಡುದೆಂದು ಕಾಮರಾಜರುಂದರೆಂದೂ, ಗೊಳ್ತಾಗುತ್ತದೆ. ಶ್ರೀ ನಿಜಲಿಂಗಪ್ಪನವರ ಆಯ್ಕೆಯ ಹಿಂದಿರುವ ಭಿನ್ನ ಮತ ಇದುವೆನ್ನಲಾಗಿದೆ. ಈಗ ಮುಖ್ಯ ಮಂತ್ರಿ ಪದವನ್ನು ಆದಷ್ಟು ಶೀಘ್ರವಾಗಿ ತ್ಯಜಿಸಬೇಕೆಂದು ಒಪ್ಪಲಾಗಿದೆ. ಶ್ರೀ ನಿಜಲಿಂಗಪ್ಪನವರಲ್ಲದೆ ಶ್ರೀಗಳಾದ ಎಸ್. ಕೆ. ಪಾಟೀಲ್ರು, ಫಂಪಾ, ಕೆಂಗಲ್ ಹನುಮಂತಯ್ಯರೂ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಾಮ ಪತ್ರ ಸಲ್ಲಿಸಿದ್ದಾರೆಂದೂ ಆದರೆ, ಇವರೆಲ್ಲರೂ ನಾಮ ಪತ್ರಗಳನ್ನು ಮರಳಿ ಪಡೆಯುವಂತೆ ನೀಕ್ಷೆಯಿದೆಯೆಂದೂ ಗೊಕ್ಕಾಗಿದೆ. ಹಾಗಾದಲ್ಲಿ ಶ್ರೀ ನಿಜಲಿಂಗಪ್ಪನವರ ಅವಿರೋಧ ಆಯ್ಕೆ ನಿಶ್ಚಿತವೆಂದಂತಾಯಿತು. ಹೀಗಾದಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷ ಸ್ಥಾನವನ್ನ ಪಡೆದ ಮೊತ್ತಮೊದಲ ಕನ್ನಡಿಗನಾಗುವ ಕೀರ್ತಿ ಇವರಿಗೆ ಸಲ್ಲುತ್ತದೆ. ತನ್ನ ಸಂಘಟನಾ ಶಕ್ತಿ—ಅಮಭವಗಳಿಗೆ ಹೆಸರಾದ ನಿಜಲಿಂಗಪ್ಪನವರು ಕಾಂಗ್ರೆಸ್ ಘನತೆ ಹೆಚ್ಚಿಸುವಲ್ಲಿ ಯಶಗಳಿಸಲಿ.

ಧರ್ಮಸ್ಥಳದಲ್ಲಿ ಧರ್ಮ ಸಮ್ಮೇಳನ

ಧರ್ಮಸ್ಥಳ ಕ್ಷೇತ್ರದಲ್ಲಿ ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನಗಳು ನಡೆದುವು. ಧರ್ಮಸಮ್ಮೇಳನದ ಉದ್ಘಾಟನೆಯನ್ನು ರಾಜ್ಯಪಾಲ ಶ್ರೀ ಬಿ ಎಸ್. ಸಾರಕರು ನಡೆಸಿದರು. ಅವರು ತಮ್ಮ ಭಾಷಣದಲ್ಲಿ "ಎಲ್ಲ ಮತಗಳ ತತ್ವಗಳೂ ಒಂದೇ, ಅವುಗಳನ್ನು ಭೋಧಿಸಿದ ಸ್ಥಳ ಮತ್ತು ಸಮಯಗಳು ಬೇರೆ ಬೇರೆಯಾಮದರಿಂದ ಬೇರೆಬೇರೆ ಮತಗಳಂತೆ ಕಾಣುತ್ತವೆ. ಎಲ್ಲವುಗಳ ಸಾಮಾನ್ಯ ತತ್ವವನ್ನಗಳನ್ನು ರಚಿಸುವುದೇ ನಮ್ಮ ಕರ್ತವ್ಯವಾಗಬೇಕು. ವಿಶ್ವ ಸಾರ್ವಧರ್ಮ ಸ್ಥಾಪನೆಯನ್ನು ಸಾಧಿಸುವಲ್ಲಿ ಮತಧರ್ಮಗಳು ಪೂರಕ ನೆರವಾಗುವುದು. ಮಾನವನ ಪ್ರಗತಿಗೆ ನ್ಯಾಯ, ಸಹನೆ, ಶಾಂತಿ ಮತ್ತು ಪ್ರೀತಿಗಳು ಅತ್ಯವಶ್ಯವಿದ್ದು ಇವನ್ನೇ ಎಲ್ಲ ಮತಗಳು ಬೋಧಿಸುತ್ತವೆ" ಎಂದರು. ಕಾರ್ಕಳ ಮಾಸದಲ್ಲಿ ನಡೆಯುವ ಲಕ್ಷದೀಪೋತ್ಸವದ ವೇಳೆ ನೆರೆಯುವ ಅಸಂಖ್ಯ ಭಕ್ತರಿಗೆ ಸರ್ವಧರ್ಮ ಸಾರವನ್ನರಿಯುವ ಅವಕಾಶವನ್ನು ಬಿ| ಮುಂಜಯ್ಯ ಹೆಗ್ಗಡೆಯವರು ಒದಗಿಸಿದ್ದು ಅದನ್ನು ಶ್ರೀ ರತ್ನವರ್ಮ ಹೆಗ್ಗಡೆಯವರೂ ಮುಂದುವರಿಸುತ್ತಿರುವುದನ್ನು ಶ್ಲಾಘಿಸಿದರು.

ಅಧ್ಯಕ್ಷಸ್ಥಾನದಿಂದ ಭಾರತೀಯ ಸ್ಕೌಟ್ ದಳದ ಬೇಷ್ಗಾಮಿಶನರ್ ಶ್ರೀ ಪಿ. ಶಿವಶಂಕರರು ಮಾತಾಡುತ್ತ "ಶ್ರೀಧರ್ಮಸ್ಥಳದ ದೇವ ಪ್ರತಿಷ್ಠಾಪನೆಯು ಶೈವ ಮತೀಯ ಅರ್ಜನೆ ವೈಷ್ಣವ ಮತೀಯ, ಯಜಮಾನ್ಯ ಜೈನ ಮತೀಯವೆಂದು ದೇಗಿ, ಸರ್ವಧರ್ಮಗಳ ಸಮನ್ವಯಕ್ಕೆ ಶ್ರೀ ಕ್ಷೇತ್ರವೇ ಪ್ರತ್ಯಕ್ಷ ನಿದರ್ಶನವೆಂದರೆ ಅತಿಶಯೋಕ್ತಿ ಸಾಲದು. ಸ್ಥಳ ಸಾಕ್ಷಿಬಸ್ಸು, ಏಸಾ ಸ್ತ್ರಿಸ್ತ, ಬುದ್ಧ, ಮಹಾವೀರ, ಬಸವ, ಸ್ವಗಂಬರ್, ಗಾಂಧಿ ಎಲ್ಲರೂ ಶ್ರಮಿಸಿದ್ದು, ದುಡಿದ ದ್ದು ಈ ಧರ್ಮಕ್ಕಾಗಿ. ಹಿಂದೂನ ಮತ್ತು ಧರ್ಮಗಳು ಒಂದಕ್ಕೊಂದು ಸೂರಕ್ಕೆ. ಒಂದೇ ಜಗತ್ತು, ಒಂದೇ ಧರ್ಮ ಎಂಬ ಭಾವನೆ ಬೆಳೆಸಲು ಇಂತಹ ಇಡಕ್ಕಾಗಿ ದೆಯೆ ಅಹಿಂಸೆಯಿಂದ ಕೂಡಿದ ಮಾನವಧರ್ಮ ಬೆಳೆಯಲಿ" ಎಂದರು.

ಧರ್ಮ-ರಾಷ್ಟ್ರಧರ್ಮ ಮತ್ತು ಯುಗ ಧರ್ಮ ಹಾಗೂ ವಿಜ್ಞಾನವು ದಾರವರ್ಶನವೂ ಜೀವನ ರಥದ ಎರಡು ಚಕ್ರಗಳು ಎಂಬ ವಿಷಯಗಳ ಮೇಲೆ ಶ್ರೀವರ್ಧಮಾನ ಕಾಲೇಜಿನ ಡಾ| ಪಿ. ಎಸ್. ತಿಮರಾಯಪ್ಪ, ಜಯಕರ್ನಾಟಕ ಸಂಸ್ಕೃತ ಕಾಲೇಜು, ಶ್ರೀಮತಿ ಸುಧಾ ಪಾಧರ್ ಜೆ ಜೇಮಿಯರ್, ಪ್ರೊ| ಎ. ಆರ್. ಗುರುರಾಜರಾವ್, ಪ್ರೊ| ಎಂ. ಜಂಧ್ರಶೇಖರ ಉಪನ್ಯಾಸ ನೀಡಿದರು.

ಶ್ರೀಮತಿ ಚೊಕ್ಕಮ್ಮಾ ಮತ್ತು ಸಂಗಡಿಗರ ಸಂಗೀತ, ಶ್ರೀಮತಿ ಶಕುಂತಲಾ ದಾಯಿ ಪಾಂಡುರಂಗರಾಯರಿಂದ ಕಾವ್ಯವಾಚನ ಮಾಸ್ಟರ್ ವಿಠಲ ಮತ್ತು ಪಾರ್ಟಿಯವರಿಂದ ನೃತ್ಯ, ಜಿಲ್ಲಾ ಪ್ರಚಾರಾಧಿಕಾರಿಗಳಿಂದ ಚಲಚಿತ್ರ ಪ್ರದರ್ಶನಗಳೂ ನಡೆದುವು. ಯಕ್ಷಗಾನ ಕಲಾವಿದ ಶ್ರೀ ಕುರ್ಯಾ ವಿಠಲ ಶಾಸ್ತ್ರಿಯವರನ್ನು ಮಾನಪತ್ರ ಸಂಭಾವನೆ ನೀಡಿ ಗೌರವಿಸಲಾಯಿತು.

ಆಕಂಭದಲ್ಲಿ ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ವಿ. ರತ್ನವರ್ಮ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡಿದರು.

ಸಾಹಿತ್ಯ ಸಮ್ಮೇಳನ

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಸಾಹಿತ್ಯ ಸಮ್ಮೇಳನವು ತ್ರಿ ನಡೆದು ಶ್ರೀ ಹಿರಿಯ ಪುರಾಣಿಕರ ಅಧ್ಯಕ್ಷತೆಯಲ್ಲಿ ನಡೆಯಿತು. ಹೆಸರನ್ನು ವೈಸಾಲಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ| ಶ್ರೀವೆಂಕಟಯ್ಯನವರು ಉದ್ಘಾಟಿಸಿದರು. ಡಾ| ಶ್ರೀವೆಂಕಟಯ್ಯನವರು "ವಿವಿಧ ಧರ್ಮಸಮಾವೇಶಗಳು ಅರಾಧಿಸುತ್ತಿರುವ ದೇವನೊಬ್ಬನೇ ವಿಶಾಲ ಭಾವನೆಯಲ್ಲಿ ತೋರಿಕೆಗೆ ವೈವಿಧ್ಯ ಕಂಡು ಬಂದರೂ ವಿಕಸಿಯನ್ನು ಪಡೆಯುವ ಶಕ್ತಿ ನಮ್ಮವಾಗಿದೆ. ಇತಕ್ಕೆ ಧರ್ಮಸ್ಥಳವೇ ಒಂದು ನಿದರ್ಶನ. ಸಾಸ್ಕೃತಿಯೊಂದು ಮಾರ್ ಆದು ಮೇಲ ಬೆಳೆದಂತೆಯೇ ಆಯಿಷ್ಯವೂ ಬಲವಾಗುತ್ತ ಹೋಗುತ್ತದೆ. ವಿಜ್ಞಾನವು ಸಂಸ್ಕೃತಿಯ ಬಾಹ್ಯಸ್ವರೂಪವಾದರೆ ಆಧ್ಯಾತ್ಮಿಕವಿದರ ಆಂತರಿಕ ಸ್ವರೂಪಕ್ಕವಿ ಸಾಹಿತಿಗಳು ವ್ಯಾಖ್ಯಾತಿಕ ಸೌಂದರ್ಯವೆಂದರೆ ಕೃಷ್ಣರಾಗೆ ಜನತೆಯ ನೋವುಗಳತ್ತವೂ ಗವನ ಹರಿಸಿ ಚೀಸು ಧ್ಯಾತ್ಮಿಕ ವಿಕಾಸ ಸಂಧನೆಗೂ ಇವರ ಸೇವೆ ಸಲ್ಲಬೇಕು ಭಕ್ತಿಜನ ಸಮುದಾಯ ಸೇರುವ ಉತ್ಸವದ ಅನಕಾರದಲ್ಲಿ ಸಾಹಿತ್ಯಸಮ್ಮೇಳನಗಳು ನಡೆಯುವುದು ಅತ್ಯಂತ ಪ್ರಯೋಜನಕಾರಿ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರು ನೀಡುವ ತಿಕ್ಷಣ, ಆಶ್ರಯ, ಆದಾನ ಮತ್ತು ಪೈಸಲ ದಾನಗಳೊಡನೆ ಸಾ

(ಪದಿನಾಲ್ಕನೇ ಪುಟ ನೋಡಿರಿ)

ಮುಖ ಚಿತ್ರ

ಟುಡಾನೆಸ್ಕೊ ವಿಶ್ವವಿದ್ಯಾಲಯದ ಬೃಹತ್ ಕಟ್ಟಡದ ಒಂದು ಭಾಗ.

ಗೇಹ್ ರಾಜ್ಯದಲ್ಲಿ

ಬಾಲ ಮುಂದು, ನಾಯಿ ಹಿಂದು?

'ಏನದು? ಬಾಯಿ ಇನ್ನೂ ಒರಸಿ ಕೊಳ್ಳುತ್ತೀರಿ?'

'ಅಯ್ಯೋ, ಏನನ್ನೋದು? ನನ್ನ ಕರ್ಮ.'

"ಹೌದ್ರೀ, ನಿಮ್ಮ ಕರ್ಮಾನೇ ಫಿಜ. ಏನದೂಂತ ನಾನು ಕೇಳೋದು..."

'ಈ ದಿನ ಮರಳುವಾಗ ನಮ್ಮ ರಾಜಣ್ಣ ಸಿಕ್ಕಿದ್ದ. ಆಪರೂಪಕ್ಕೆ ಸಿಕ್ಕಿದೀಯೊ, ಒಂದು ಕಪ್....ಅಂದ.'

'ಆಗೋಲ್ಲಾಂತನ್ನೋಕಾಗುತ್ತೆ?'

"ಹ್ಞೂನ್ನು, ಹೋಯಿತು ಸವಾರಿ....ಗೆ .... ಅಲ್ಲಿನ ಕಾಫಿ ಕುಡ್ದ ನೆನಪು ಸಾಯೋವರ್ಗೂ ಮರೆಯೋಲ್ಲ...."

"ಯಾಕೆ, ಏನಾಯ್ತು?'

"ಆಗೋದೇನೆ? ಅದು ಕಾಫೀನೋ, ಕಷಾಯಾನೋ ತಿಳಿಯದಾಯ್ತು."

"ಫಾರೀ ಸ್ಟ್ರಾಂಗ್ ಮಾಡಿದ್ದರೇನು?'

"ಸ್ಟ್ರಾಂಗೋ ರಾಂಗೋ ಒಂದೂ ತಿಳಿಯದ್ದು. ನಾಲಗೆ ಇನ್ನೂ ಶಹಿಯಾಗಿಯೇ ಇದೆ.'

'ಸಕ್ಕೆ ಕಡಿಮೆಯಾಗಿತ್ತೋ ಏನೋ! ತುಸ ಕೇಳಿ ಹಾಕಿಕೊಳ್ಳಬಾರದಿತ್ತೆ?'

"ಅದ್ರ ಕತೆ ಕೇಳ್ಬೇಡಾ? ಆರಂಭದಲ್ಲಿ ಸಕ್ಕರ್ನೇ ತೋರ್ಸಿಲ್ಲ. ಮತ್ತೆ ಕೇಳಿ ಕೊಂಡೇ ಚಮಚಾರ್ಧ ಹಾಕಿಕೊಳ್ಳಬೇಕಾಯ್ತು. ಇನ್ನು ಡಿಕಾಕ್ಷನ್ನೋ! ಬರೀ ಶಹಿ...'

"ಆಲ್ರಿ, ಹೋಟೇಲು ಕಾಫಿ ಭಾರಿ ಚಲೋವಾಗುತ್ತೇಂತ ಅನ್ನತ್ತಾರೆ....ಮನೇಲಿ ಹೊಟ್ಟೆ ಉಬ್ಬರಿಸುವಷ್ಟು ತಿಂದ್ರೂ ....'

"ನಾಕು ಬಿಡೇ, ನಾಳೆ ಮನೆಮರವಿಲ್ಲದ ಅನಾಥರು ಮತ್ತ ಬೀದಿಯಲ್ಲಿ ಉಪವಾಸ ಬಿದ್ದು ಸಾಯಬೇಕೂಂತಿದ್ದೂ?"

"ಹಾಗೇನಿಲ್ಲ, ಬಿಡಿ. ಅದ್ರೂ ಉಡುಪಿ ಹೋಟೆಲ್ ಅಂದರೆ ಆಲ್ ಇಂಡಿಯಾ ಪ್ರಸಿದ್ಧಿ. ನಾಡದ್ದು ಸಾಂಗ್ಲಿಯಲ್ಲಿ ಕಾಂಗ್ರೆಸ್ ಅಧಿವೇಶನಕ್ಕೆ ಉಡುಪಿ ಉಡುಗೇಂತ ನ್ಯೂಸ್. ಹಾಗಿರುವಾಗ...."

"ಅಲ್ಲಮ್ಮ, ಯಾರಾದ್ರೂ ಏನು ಮಾಡ ಬೇಕು? ಸರಕಾರ ಅವರಿಗೆ ಕಡಿಮೆದರದಲ್ಲಿ ಸಕ್ಕೆ ಪೂರೈಯೆಸ್ಲೀದಿಲ್ಲ. ಈಗ ಅವರು ಮೂಟೆಗೆ ೩೫೦—೪೦೦ಕೊಡ ಬೇಕಾಗಿದೆಯಂತೆ..."

"ಅಂದ್ರು ಸರ್ಕಾರ ಸಕ್ಕೆ ನಿಯಂತ್ರಣ ವನ್ನು ಆಂಶಿಕವಾಗಿ ಕೆತ್ತು ಹಾಕಿದ್ದರಿಂದ ಮೂರುಕಟ್ಟೆಯಲ್ಲಿ, ಕೊಳ್ಳಬೇಕಾಯ್ತು. ಅಲ್ಲಿ ರೇಟು ಹೈ ಅಂತ ತಾನೇ.ನೀವನ್ನೋದು...."

'ಹ್ಞೂಂ...ಸರಿ..."

"ಅದ್ರೆ ಒಂದು ಮಾತು ನೋಡಿ. ಸರಕಾರ ಇವರಿಗೆ ಸಕ್ಕೆ ಸರಬರಾಜು ಮಾಡ್ತಿದ್ದಾಗ ಅನ್ನುತಿದ್ರು—ಅವ್ರು ಕೊಡೋ ಸಕ್ಕೆ ಸಾಲದು, ನಾವು ಬ್ಲಾಕ್‌ಫಿಂದಲೇ ತರಬೇಕಾಗುತ್ತೆ ಅಂತ. ಈಗ ಬ್ಲಾಕಿನ ಮೇಲೆ ಸರಕಾರ ಪೈಟ್‌ವಾಷ್ ಮಾಡಿತು. ಏನು ತಪ್ಪು?"

"ಅದ್ರೂ ಬೆಲೆಯೆ ೀರಿದ್ದರಿಂದ ಕಾಫಿ ತಿಂಡಿಗಳ ಬೆಲೆಯನ್ನೂ ಏರಿಸಬೇಕಾಯ್ತೆ ಅಂತ ಅವರ ವಾದ..."

"ಸರೀನ್ನಿ. ಇಲ್ಲವಾದರೆ, ಹಣ ಕೂಡಿ ಸುನ್ನುದು ಹೇಗೆ?"

"ಅಂದ್ರೆ?"

"ನೋಡಿ, ಇಂದು ಹಣವಿರುವುದು ಯಾರತ್ರ ಅಂದ್ರೆ ಮೊದಲಿಗೆ ಮುಂದೆ ಬರುವವರು ಇವರು. ಆಸ್ತಿ-ಪಾಸ್ತಿಗಳನ್ನು ವರ್ಷ ವರ್ಷವೂ ಹೆಚ್ಚಿಸುತ್ತೇ ಹೋಗ್ತಾರೆ—ಇದು ರಾಜಾ ಸುಲಿಗೆ, ಕಾನೂನುಬದ್ಧ ಸುಲಿಗೆ ಎನ್ನಿ ಬೇಕಾದ್ರೆ. ಅಲ್ಲ, ನಾವು ಸಕ್ಕೆ ಬೇಕಾದಾಗ ಕೆಲೋಗೆ ಆರೂವರೆ ಪ್ರಕಾರ ಇನ್ನೂರೈವತ್ತು ಗ್ರಾವ್ ತಂದದ್ದು ಮರೆತೇ ಬಿಟ್ಟೀರೇನು?'

'ಅಯ್ಯೋ, ಅದನ್ನ ಮರೆಯೋದಕ್ಕೆ ಹೇಗೆ ಸಾಧ್ಯ? ಜನ್ಮದಲ್ಲಿ ಮೊತ್ತ ಮೊದಲಿಗೆ ಮಾಡಿದ ಬ್ಲಾಕ್ ಮಾರ್ಕೆಟ್ ವ್ಯವಹಾರವದು".

'ಹಾಗಿರುವಾಗ ಆಗಲೂ ಹೋಟೇಲಿನವರು ೪—೫ ಕೊಟ್ಟು ತರುತಿದ್ರು. ಈಗ ಯಾಕೆ ಅಳೋದು?'

'ಯಾಕೆ ಅಂದ್ರೆ ಏನೇ, ಸರಕಾರ ಕೊಟ್ಟ ಸಕ್ಕೆಯಷ್ಟನ್ನೂ ಈಗ ಹೆಚ್ಚು ಬೆಲೆ ಕೊಟ್ಟೇ ತರಬೇಕಾಯ್ತಲ್ಲಾಂತಿರಬೇಕು.....?'

"ಏನಾಯಿತು?"

'ಆಗೋದೇನು? ಲಾಭ ಕಡಿಮೆಯಾಯ್ತು. ನಾವು ಬದುಕೋದು ಹೇಗೇಂತ ಅವರ ಸವಾಲು. ಆದ್ರಿಂದ ಮತ್ತೆ ಬೆಲೆಗಳ ಪರಿಷ್ಕರಣ...."

"ಸರೀನ್ನಿ. ಅದಕ್ಕೆ ಅವ್ರನ್ನ ಯಾಕೆ ದೂರದೀಕು? ಪರಿಸ್ಥಿತಿಯ ಲಾಭವನ್ನು ಪ್ರತಿಯೊಬ್ಬರೂ ಪಡೆದೇ ತೀರುತ್ತಾರೆ. ಯಾರಾದರೂ ಇದಕ್ಕೆ ಅಪವಾದವಿದ್ದರೆ, ಅವರು ಮೂರ್ಖರೇ ಸರಿ...."

"ಅಂದ್ರೆ, ನನ್ನನ್ನ ಬೊಟ್ಟುಮಾಡಿ...."

"ಅಲ್ಲವೇ ಮತ್ತೆ? ನಿಮಗೂ ಆಫೀಸ ಶ್ರಿಗೂ ಭಾರಿ ಭಾರಿ ದೋಸ್ತಿಯಿದ್ರಾನೂ ಒಂದು ಟ್ರಾನ್ಸ್‌ಫರ್ ಮಾಡಿಕೊಳ್ಳೋದಕ್ಕೆ ಆಗ್ಲಿಲ್ಲ...."

"ಹ್ಞೂಂ...ಪರಿಸ್ಥಿತಿಯ ದುರ್ಲಾಭ ಪಡೆದುಕೊಳ್ಳುವುದೂ ಸವ, ಈಜುತಿದ್ದವನನ್ನು ಮುಳುಗಿಸಿಡುವುದೂ ಸವ..."

'ಅದೇ ಅಂದದ್ದಲ್ಲ, ನಿಮ್ಮ ಜೀವನ ವೇದಾಂತ—ಆದರ್ಶಗಳಲ್ಲೇ ಕಳೆಯಿತು. ಅದುದರಿಂದ್ಲೇ ಹೀಗೇ ನಾವಿದ್ದೇವೆ.'

"ಮತ್ತೆ ಎಲ್ಲವನ್ನೂ ಬಿಟ್ಟು ಬಿಟ್ಟು ಬೀದಿ ನಾಯಿಯಂತಿರ ಬೇಕೂಂತೀಯ?'

(ಹದಿಮೂರನೇ ಪುಟ ನೋಡಿರಿ)

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 175/1967.

ವಾದಿಯ ಕ್ಯಾನುಭಾಗ — ವಾದಿ

ಮತ್ತು

ಕೆ. ಲಕ್ಷ್ಮಣ ರಾವ್ ಕೂಡಾ ೬ಜನ — ಪ್ರತಿವಾದಿಗಳು.

ಇವರೊಳಿಗೆ

೬ನೇ ಪ್ರತಿವಾದಿಯು— ಗೋದಾವರಿ ಅಂಬು—ಕೆ. ನಾರಾಯಣರಾಯರ ವಿಧವೆ—ಉಡ್ಪಿ ತಾಲ್ಲು ಪೆಜಮಂಗೂರು ಗ್ರಾಮದ ಕಟಿಕೈರ್ಯಲ್ಲಿರುವವಳು—

೧೦ಂದ ೫ನೇ ವರೆಗಿನ ಪ್ರತಿವಾದಿಗಳು ಮತ್ತು ೬ನೆ ಪ್ರತಿವಾದಿಳ ಗಂಡ—ಕೆ. ನಾರಾಯಣರಾವ್ ಇವರು ಸಹೋದರರಾಗಿ ನಡಿಸುತ್ತಿದ್ದ ವ್ಯಾಪಾರದ ಗಜಿನ ಬಗ್ಗೆ ೬ನೆ ಪ್ರತಿವಾದಿಯು ಕೈಪಟ್ಟಿ ಬರಕೊಟ್ಟು ತಾ.೧೬.೨.೬೪ ರಲ್ಲಿ ವಾದಿಯಿಂದ ತರಿಸಿದ ಲೆಜಿನ ಪೈಕಿ ಬಾಕಿ ಉಳಿದಿರುವ ಲೆವೆಲು ರೂಪ್ಯಾ ೨೫೫೨-೬೦ನ್ನು ಬರಮಾಡುವರೆ ದಾಖ್ಲು ಮಾಡಿದ ನೋಟಿನ ದಾವೆಯಲ್ಲಿ ೬ನೇ ಪ್ರತಿವಾದಿಗೆ ೫ ನಾರಿಯೂ ನೋಟೀಸ್ ಜಾರಿ ಆಗಿದ್ರಿಂದ ಯಾಗ ತಾ. ೫—೨—೬೫ನೆಗೆ ಯಿಪ್ಪೆರುವ ನಂಬ್ರದಲ್ಲಿ ಉದಾಹರಣೆಯಿದ್ದು ೨ ದಿವಸ ಹೆಚ್ಚಿಕೊಳ್ಳಬೇಕು. ಇಲ್ಲವಾದ್ರೆ ಏಕಪಕ್ಷವಾಗಿ ತೀರ್ಮಾನವಾಗುವದು.

[ಕೋರ್ಟಿನ ಹ್ಯಂ ಪ್ರಕಾರ]

B. Yogishwara Holla

Advocate for Plaintiff.

ಉಡ್ಪಿ, ತಾ. ೨೯—೧೧—೬೪.

ಆತ ಕಾರ್ಖಾನೆಯೊಂದರಲ್ಲಿ ಅಸಿಸ್ಟೆಂಟ್ ಫೋರ್‌ಮನ್. ಪ್ರಯೋಗ ಶಾಲೆಯ ಅಸಿಸ್ಟೆಂಟ್ ಆಗಿ ಆತ ಜೀವನೋಪಾಯವನ್ನು ಪ್ರಾರಂಭಿಸಿದ. ಕೇವಲ ಏಳು ವರ್ಷಗಳಲ್ಲಿ ಈ ಹುದ್ದೆಗೇರಿದ್ದಾನೆ. ಹೇಗೆ? ಆತನ ಮಾತಿನಲ್ಲೇ ಕೇಳೋಣ: "ಇತರರು ಕಷ್ಟದ ದುಡಿಮೆಯಿಂದ ಮಾಡಲಾರದೆ ಇರುವುದೇ ನನ್ನೂ ನಾನು ಸಾಧಿಸಿಲ್ಲ. ನಿಜ, ನಾನು ಯಾವುದೇ ಕೆಲಸವನ್ನಾದರೂ ಜವಾಬ್ದಾರಿಯ ಭಾವನೆಯೊಡನೆ ನೂಡುತ್ತೇನೆ. ನನ್ನ ಕೆಲವು ಸಹೋದ್ಯೋಗಿಗಳು ತುಂಬ ಮುಳ್ಳುಳನ್ನು ಹೊಂದಿದ್ದು, ಅವರನ್ನು ಸಾಕಲು ಸಡುತ್ತಿರುವ ಕಷ್ಟವನ್ನು ಕಂಡಿದ್ದೇನೆ. ನನಗೆ ಇಬ್ಬರೇ ಮಕ್ಕಳು. ನನ್ನಿಂದ ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಅವರನ್ನು ಮುಂದಕ್ಕೆ ತರುವುದು ನನ್ನ ಆಪೇಕ್ಷೆ. ನಾನು ಸುಖಿ..."



ಆತ ಸುಖಿ—

ನೀವು?

KENP 67/184

ರಾಷ್ಟ್ರ ಪ್ರಶಸ್ತಿ ವಿಜೇತ - ಶಿಕ್ಷಣ ತಪಸ್ವಿ ಶ್ರೀ ಎಂ. ವಾಸುದೇವರಾಯರ ಕೃತಿಗಳು

ಲೇಖಕರು:— ಶ್ರೀ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ಪ್ರಾಂತೀಯ ರಾಜ್ಯಗಳ ಉದಯವಾಗಿರುವುದರಿಂದ ಒದಗಿದ ಮಹತ್ತ್ವದ ಸಂಗತಿಗಳು ಅನೇಕ ಇವೆ. ನಾಗೂಜಿಕರ ಸುಖ ಸೌಕರ್ಯಗಳ ಬಗೆಗೆ ಹೆಚ್ಚಿನ ಏಗಾ ಕೊಡಲಾದಂತೆ, ವಿದ್ವದ್ಗ್ರಂಥಗಳಿಗೆ ಸಂಭಾವನೆ ಹಾಗೂ ವಿದ್ಯಾವಂತರಿಗೆ ಸನ್ಮಾನ ಪ್ರಶಸ್ತಿಗಳು ಲೌಕಿಕವಾಗಿಯೂ ಸರಕಾರೀಕರವಾಗಿಯೂ ನಡೆಯುತ್ತಿವೆ. ಪ್ರಸಕ್ತ ವರ್ಷದಲ್ಲಿ ಭಾರತದ ವಿವಿಧ ರಾಜ್ಯಗಳ 99 ಶಿಕ್ಷಣ ತತ್ತ್ವಜ್ಞರಿಗೆ ಕೇಂದ್ರ ಸರ್ಕಾರದ ವತಿಯಿಂದ ಇದೇ ತಿಂಗಳಲ್ಲಿ ಮೊದಲ ಹಪ್ತೆಯಲ್ಲಿ ಪ್ರಶಸ್ತಿ—ಬಹುಮಾನ ಧನಗಳ ವಿತರಣ ನಡೆದುದು ಪತ್ರಿಕೆಗಳಿಂದ ನಮಗೆಲ್ಲಾ ತಿಳಿದುದೇ ಆಗಿದೆ. ಅಂತಹರಲ್ಲಿ ಕನ್ನಡದ 7 ಮಂದಿ ಶಿಕ್ಷಕರೂ ಸೇರಿದ್ದಾರೆ. ಅವರಲ್ಲಿ ಶ್ರೀ ಎಂ. ವಾಸುದೇವರಾವ್ ಒಬ್ಬರು.

ಇವರು ಸುರತ್ಕಲ್ಲು ಕೇಂದ್ರದ ಮೈರ್ಪಾಡಿಯಲ್ಲಿ ಜನಿಸಿದರು.(ಇಸ್ವಿ 1909) ಬಾಲ್ಯದ ವಿದ್ಯಾಭ್ಯಾಸವು ನೆರೆಯ ಹೊಸಬೆಟ್ಟು ಹಾಗೂ ಇಡ್ಯ ಚರ್ಚ್ ಶಾಲೆಗಳಲ್ಲಿ ನಡೆಯಿತು. 1916ರಲ್ಲಿ ಇಡ್ಯ ಶ್ರೀ ಮಹಾಲಿಂಗೇಶ್ವರ ದೇವಾಲಯದ ಗೋಪುರದಲ್ಲಿ ತೊಡಗಿದ, ಹಿಂದೂ ವಿದ್ಯಾದಾಯಿನೀ ಸಂಸ್ಥೆಯು ನಡೆಯಿಸುತ್ತಿದ್ದ ವಿದ್ಯಾದಾಯಿನೀ ಶಾಲೆಯಲ್ಲಿ ಮೂರ್ನಾಲ್ಕು ವರ್ಷಗಳಲ್ಲಿ ಕಲಿತರು (ಇಸ್ವಿ 1916—22ರತನಕ) ಪ್ರೌಢ ವಿದ್ಯಾರ್ಜನೆಗಾಗಿ ಮಂಗಳೂರು ಕನರಾ ಹೈಸ್ಕೂಲಿಗೆ ಸೇರಿದರು. ಮತ್ತೆರಡು ವರ್ಷಕ್ಕೆ ಸೈ. ಎಂ. ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಪರೀಕ್ಷೆಯನ್ನು ಪಾಸ್ ಮಾಡಿಕೊಂಡರು. ಈ ಕೊನೆಯಲ್ಲಿ ಇವರ ಬಾಸಾ ಅಜ್ಜನು ಆಕಾಲ ನಿಧನಕ್ಕೊಳಗಾದುದರಿಂದ ಮುಂದಿನ ವಿದ್ಯಾಭ್ಯಾಸಕ್ಕೆ ತುಸತೊಡಕಾಯಿತು. 1926 ರಿಂದ 1939ರ ನಕ ತಾನು ಕಲಿತ ವಿದ್ಯಾದಾಯಿನೀ ಹಾ. ಎ. ಶಾಲೆಯಲ್ಲಿ ಅಧ್ಯಾಪಕರಾಗಿದ್ದು,

ಮತ್ತ 1939—41ರಲ್ಲಿ ಉಚ್ಚ ಶಿಕ್ಷಣಕ್ಕಾಗಿ ಮದ್ರಾಸಿನಲ್ಲಿದ್ದರು. ಒಂದೆರಡು ವರ್ಷ ಮಂಗಳೂರು ಗಣಪತಿ ಹೈಸ್ಕೂಲ್‌ಗಳಲ್ಲಿ ಸಹಾಯಕ ಅಧ್ಯಾಪಕರಾಗಿದ್ದು 1944ರಲ್ಲಿ ತೊಡಗಿದ ಇಲ್ಲಿನ ವಿದ್ಯಾದಾಯಿನೀ ಹೈಸ್ಕೂಲಲ್ಲಿ ಮುಖ್ಯೋಪಾಧ್ಯಾಯರಾಗಿದ್ದಾರೆ. ಇದಿಷ್ಟು ಇವರ ವಿದ್ಯಾವಲಯದ ಮೌಲಿಕ ವಿಚಾರವಾಗಿದೆ. ಇದರಿಂದಾಗಿ ಇವರು ಆ ಮುಂದೆ ತೊಡಗಿದ ಕಲವು ಲೇಖನಗಳು, ಕೆಲವು ಪದ್ಯ ಪುಸ್ತಕಗಳು ಪ್ರಕಟವಾಗಲು ಅವಾಯವಾಯಿತು.

ಚಿಕ್ಕ ಕೃತಿಗಳು:—ಇವರ ಲೇಖನಗಳು ನಾಲ್ಕು ಮಾತ್ರ ಪ್ರಕಟನಾಗಿವೆ:1)ಕಮ್ಮ ಕನ್ನಡ ನಾಡಿನಲ್ಲಿ ನನ್ನು ಕನ್ನಡ ಜಿಲ್ಲೆಯೆಂಬುದು 1946—7ರಲ್ಲಿ ಮಂಗಳೂರ 'ಕಾಂತೇರಿ'ದಲ್ಲಿ "ಕಿಶೋರ" ಬಾಲ್ಯಾವಸ್ಥೆಯಲ್ಲಿ ಬರೆದುದು. ಇದು ಆಂದಿನ ದ. ಕ. ಜಿಲ್ಲೆಯ ವಿವಿಧ ವಿಚಾರಗಳ ಸ್ಕೂಲ ಪರಿಚಯದಲ್ಲಿ (5ಸಂಚಿಕೆಗಳಲ್ಲಿ) ಮುಕ್ತಾಯವಾಗಿದೆ. ಆದರೆ, ಆಂದೇ ಈ ಜಿಲ್ಲೆಯ ಭಾವೀ ಪ್ರಗತಿಯ ಕಣ್ಣಸ್ಪೆಗಳಾಗಿ ಹೇಳಿದ ಮಾತುಗಳವು.

ಉಲ್ಲೇಖನೀಯಗಳು: ನಮ್ಮ ಜಿಲ್ಲಾ ಶೀಕ್ಷಣದಲ್ಲೆ ಕರ್ನಾಟಕ ಪ್ರಾಂತ್ಯದ ಅಂಗವಾಗಿರುವುದರಿಂದ ಪೂರ್ವಭಾವಿಯಾಗಿ ಈ ಕೆಲವು ಸೌಕರ್ಯ ಮತ್ತು ವಿಪ್ಲವಾಡುಗಳು ಆಗುವುದು ಅತ್ಯಾವಶ್ಯಕ.

1) ಜಲ ವಿದ್ಯುತ್ ಯೋಜನೆಗಳ ಪ್ರಸಾರ

2) ಆಕಾಶವಾಣಿ ಪ್ರಸಾರ ಕೇಂದ್ರದ ರಾಣ್ಯ.

3) ರೈಲು ದಾರಿಯ ವಿಸ್ತರಣ.

4) ಕನ್ನಡ ಸಂಶೋಧನಾ ಸಂಸ್ಥೆ ಮತ್ತು ಪುಸ್ತಕಾಲಯ ಸ್ಥಾಪನೆ.

ಇವುಗಳಲ್ಲಿ ಕಲವು ಈಗಾಗಲೇ ನಿರೂಪಿತವಾಗಿವೆ, ಕೆಲವು ಆಪಲಿವೆ! ಈ 'ಕಿಶೋರ' ಲೇಖನದ ಭವಿಷ್ಯವಾಣಿ ಸುಳ್ಳಾಗಿಲ್ಲವೆಂಬುದೇ ಉಲ್ಲೇಖನೀಯವು!

(2) ಇನ್ನೊಂದು ಬರೆಹವೆಂದರೆ, 'ತ್ರಿವೇಣಿ' ಪತ್ರಿಕೆಯಲ್ಲಿ 'ವಿಜಯ'ವೆಂಬ ಕಾವ್ಯನಾಮದಿಂದ ಪ್ರಕಟನಾದ 'ನಿದ್ದೆ'ಯ ಮೇಲಿನ ಚಿಕ್ಕ ಹರಟೆಯು. ಇದು ಸುರತ್ಕಲ್ಲು ವಿಜಯ ಸಾಹಿತ್ಯ ಮಾಲೆಯ 'ಉದ್ಯಾನ'ದಲ್ಲಿ ಪುನರ್ಮುದ್ರಣವಾಗಿದೆ.

(3) ಮತ್ತೊಂದು ಲೇಖನವಾದರೋ, 1959—60ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾಗ 'ಇಂದಿನ ಕನ್ನಡದ ಅಗತ್ಯಗಳು' ಎಂಬ ಬಗೆಗೆ ಮೂಡಾಡಿದುದನ್ನು ಲೇಖರೂಪದಲ್ಲಿ ಪ್ರಕಟಿಸಿದುದು (ಕನ್ನಡ ನುಡಿಯಲ್ಲಿ ನೋಡಿರಿ).

(4) ನಾಲ್ಕನೆಯ ಬರೆಹವು ಉಡುಪಿ 'ಸುದರ್ಶನ'ದಲ್ಲಿ ಆಚ್ಚಾದುದು, 'ವಿದ್ಯಾಧ್ಯಾಸದ ಧೋರಣೆಗಳ' ಬಗೆಗೆ ಕೆಲವು ವಿಚಾರಕಣಗಳವೆ. ಈ ನಾಲ್ಕು ಚಿಕ್ಕ ಬರೆಹಗಳ ವಿಷಯ, ಭಾಷಾಶೈಲಿ, ನಿರೂಪಣಾ ಕ್ರಮಗಳು ಅನ್ಯಾದೃಶವಾಗಿದ್ದು, ಆಯಾ ಕಾಲಿಕ ವಿಚಾರಗಳನ್ನೊಳಗೊಂಡಿದೆ.

ಅನಂತರ ಇವರು ಆದಾವ ಹೆಚ್ಚಿನ ಲೇಖನಕ್ಕೂ ಕೈಹಚ್ಚಿಲ್ಲ. ಮದ್ರಾಸ್ ಸರ್ಕಾರದ ಕನ್ನಡ ಪಾಠಶಾಲೆಗಳಿಗೆ ಚಿಕ್ಕ ದೊಡ್ಡ ಪುಸ್ತಕಗಳಿಗೆ ಬೇಕಾದ ಭೂಗೋಳ ಹಾಗೂ ಅಧುನಿಕ ಚರಿತ್ರೆಗಳ ಪುಸ್ತಕಗಳು ಹಲವಿವೆ. ಇವೆಲ್ಲಾ ಸರ್ಕಾರದ ಫರೂಸದಂತೆ ಬರೆದುದರಿಂದ ವಿಷಯಗಳ ಬಗ್ಗೆ ಹೆಚ್ಚಾಗಿ ಹೇಳಬೇಕಾದುದಿಲ್ಲ. ದರೂ, ಇವುಗಳಲ್ಲೂ ಇವರ ಸರಳ ಹಾಗೂ ಸುಂದರ ಶೈಲಿ ಹಾಗೂ ಅನ್ಯೋನ್ಯ ಸಂಬಂಧವುಳ್ಳ ನಿರೂಪಣೆಗಳು ಸ್ಮರಣೀಯಗಳಾಗಿವೆ.

ನಾಲ್ಕು ಉದ್ಗ್ರಂಥಗಳು: ಶ್ರೀ ವಾಸುದೇವರಾಯರ ನಾಲ್ಕು ಉದ್ಗ್ರಂಥಗಳು ಮದರಾಸ್ ಸರ್ಕಾರದ ಅಧಿಪತ್ಯದಲ್ಲಿ ದ. ಕ. ಜಿಲ್ಲೆ ಸೇರಿದಾಗ ಬರೆದವು. ಅವಲ್ಲಿ ಎರಡು ಸ್ವತಃ ಅಭಿರುಚಿಯಲ್ಲಿ ಬರೆದವು, ಇನ್ನೆರಡು ಸರ್ಕಾರದಿಂದ ನಿಯುಕ್ತರಾಗಿಯೂ ಸ್ವಯಂ ಆಸಕ್ತಿಯುಳ್ಳ ವಿಷಯದ ಗ್ರಂಥಗಳ ಆನುವಾದಿತಗಳು. ಸ್ವಯಂ ಬರೆದ "ದಕ್ಷಿಣ ಭಾರತದ ಐನಿಜ ಮತ್ತು ಕೈಗಾರಿಕೆಗಳು" 'ನಮ್ಮ ದೇಶ ಭಾರತ'ಗಳಿಗೆ ವಿಶ್ವವಿದ್ಯಾಲಯದಿಂದ ಸಹಾಯಕ ಬಹುಮಾನಗಳು ದೊರಕಿವೆ (1944 ಮತ್ತು 1954ರಲ್ಲಿ) ಖನಿಜ ಸಂಪತ್ತಿನ ಗ್ರಂಥದ ಬಗೆಗೆ ಮೈಸೂರು ಸರ್ಕಾರದ ಭೂಶಾಸ್ತ್ರ ಇಲಾಖಾ ಡೈರೆಕ್ಟರ್ ಶ್ರೀ ಬಿ. ರಾಮರಾವ್ ಸಂತೋಷದಿಂದ 'ಮುನ್ನುಡಿ'ಯನ್ನು ದಯಪಾಲಿಸಿರುತ್ತಾರೆ. ಇದನ್ನು ಬರೆಯಲು ಪರಿಶೀಲಿಸಿದ ಇತರ 41 ಲೇಖನ, ಪುಸ್ತಕ ವಗೈರೆ ಓದುಗಾಂಕೆಯಲ್ಲದೆ ಬೇರೆ ಬೇರೆಡೆಯ ವಾಸ್ತವಿತತೆಯನ್ನು ಒಳಗೊಳ್ಳಲು ಶಕ್ಯಂತೆ 20 ನಕ್ಷೆಗಳೂ ಇದರಲ್ಲಿ ಪಡಿಮೂಡಿವೆ. ಇಲ್ಲಿ ಕೊನೆಗೆ ದ. ಭಾ. ಪ್ರದೇಶದಲ್ಲಿ ಮುಂದೇನೆಲ್ಲಾ ತಿಳಿದು ವಿವರಿಸಿಮುನ್ನುಡಿಯಸಕ್ಯವೆಂದೂ ಹೇಳಿದುದು ಗಮನೀಯವು "ಈ ಭಾಗದಲ್ಲಿ ಕಲ್ಲಿದ್ದಿಲ್ಲ. ಇಲ್ಲ. ಕಲ್ಲಿದ್ದಲು ೧-೨ ಮಿಲಿಯ ಟನ್‌ಗಳಷ್ಟೆ, ಈ ಲೋಪವನ್ನು ಪೂರ್ತಿಗೊಳಿಸಲಿಕ್ಕಾಗಿಯೋ ಎಂಬಂತೆ ಒಂದು ನಿಸರ್ಗದ ವರದಂತಿರುವ ಇನ್ನೊಂದು ಸೌಕರ್ಯವು ಜಲ ವಿದ್ಯುತ್ತಿದಕ್ಷಿಣ ಭಾರತದ ಕಾಲೇಜುಗಳಲ್ಲಿ ವೈಸೂರು ಮದ್ರಾಸ್‌ಗಳನ್ನು ಬಿಟ್ಟು ಉಳಿದ ಕ್ಷೇತ್ರಗಳಲ್ಲಿ ಖನಿಜ ವಿಜ್ಞಾನಕ್ಕೆ ಈಗ ಸ್ಥಾನನೇ ಇಲ್ಲ "ಎಂದುದು ಇಂದಿಗೂ ನಿಜವಾದ ಮೂತಾಗಿದೆಯಷ್ಟೆ!

2) "ನಮ್ಮ ದೇಶ, ಭಾರತ" ಎಂಬುದು 1954ರಲ್ಲಿ ವಿಶ್ವವಿದ್ಯಾಲಯದ ಪ್ರೋತ್ಸಾಹಕ ಧನ ಸಂಭಾವನೆ ಪಡೆದ ಕೃತಿಯು. ಇದರ 'ಮೊದಲ ಮಾತು'ದಲ್ಲಿ:

"ಚರಿತ್ರೆ ಮತ್ತು ಭೂ ವಿವರಣೆಗಳು ಮೂಢವ ಸಮಾಜ ವ್ಯಾಸಂಗದ ವೈಶ್ವದ ಎರಡು ಶಾಖೆಗಳು. ಒಂದನೆಯದು ಮೂಲ ಜ್ಞಾನವನ್ನು ದರಿ, ಉಳಿದದ್ದು ದೇಶಾಭಿವೃದ್ಧಿ ಮತ್ತು ಪುನರ್ನಿರ್ಮಾಣಗಳಿಗಾಗಿ ಕೈಕೊಳ್ಳಬೇಕಾದ ಭೌಗೋಳಿಕ ಮೂರ್ವಾಟುಗಳಿಗೆ ಅವಶ್ಯವಾದವುಗಳು" ಇದರಲ್ಲಿ ನೆಲ, ಗಾಳಿ, ಜಲ, ವನ, ಭೂ, ಖನಿಜ, ಹಾಗೂ ಜನರ ಆರ್ಥಿಕ ಮತ್ತು ಜನ ಜೀವನದ ಬಗೆ ವಿವರಿಸಲಾಗಿದೆ. ಒಟ್ಟು 48 ಭೂಪಟಗಳೂ, 27 ಚಿತ್ರಪಟಗಳೂ ಇತರ ಪೀಠಿಕಾರು ಕೃತಿಗಳ ಉಲ್ಲೇಖನಗಳೂ ಇದ್ದು ಆಂತರಿಕ ಮೌಲ್ಯವನ್ನು ಹೆಚ್ಚಿಸಿವೆ. ಇಂದಿನ ಜನನ ನಿಯಂತ್ರಣಾದಿಗಳ ಬಗೆಗೆ ಆ ಗ್ರಂಥದ ರೀತಿಯ ಶಕ್ಯ ಉತ್ತರವಿದು (297 ಪುಟ):"ಜನರ ಮುಖ್ಯ ಜೀವನೋಪಾಯವಾದ ಕೃಷಿಯ ದೃಷ್ಟಿಯಲ್ಲಿ ನೋಡಿದರೆ ಜನ ಸಂಖ್ಯೆಯ ಒತ್ತಡವು ಬಹಳ ಅಧಿಕವೆಂದು ತಜ್ಞರ ಮತ. 1891ರಲ್ಲಿ ತಲಾ ಇಂದರ ಸರಾಸರಿ109 ಸೆಂಟ್ಸ್ ಕೃಷಿಯೋಗ್ಯ ಭೂಮಿಯಿದ್ದರೆ, 1951ರಲ್ಲಿ ಅದು ಬರೆ 84 ಸೆಂಟ್ಸ್ ಮಾತ್ರ. ಆದರೆ ನಮ್ಮ ದೇಶದ ಭೂ, ಜಲ, ಖನಿಜ ಮತ್ತು ಅರಣ್ಯ ಸಂಪತ್ತುಗಳು ಜನ ಸಂಖ್ಯೆಯನ್ನೇ ವಿಜ್ಞಾನಿಗಳ ಶಾಸ್ತ್ರೀಯ ಮಿಕ್ಷಣೆ, ಸಂರಕ್ಷಣೆ ಮತ್ತು ಸದ್ವಿನಿಯೋಗಗಳಿಂದ ಜಪ ಜೀವನವು ಉತ್ತಮಗೊಳ್ಳಲು ಸಾಧ್ಯ...."

3) 'ಸರಳ ಭೂವಿಜ್ಞಾನ'ವು 'Earth lore Geology' ಎಂಬುದರ ಕನ್ನಡ

(ಹಿನ್ನೆರಡನೇ ಪ.ಟ ನೋಡಿರಿ)



ಹಿಂದೂಸ್ಥಾನದಲ್ಲೂ ಹಿಂದೂಗಳು ಹಿಂದೂಗಳಾಗಿರಲಸಾಧ್ಯವೇನು ?

ಬರೆದವರು :
ಶ್ರೀ ಶಿವಶಂಕರ

೧೯೪೭ ಆಗೋಸ್ಟ್ ಆಮಾವಾಸ್ಯೆಯ ಅತೀವ ಅಂಧಕಾರದಲ್ಲಿ ನಡೆದ ಘೋರ ಪಾಪಕೃತ್ಯದಿಂದಾಗಿ ಪಾಕಿಸ್ತಾನಿ ಪ್ರೇತವು ಉಂಟಾಯಿತು. ವೈಶಾಚಿಕ ಪೀಡೆಗೆ ಬಲಿಯಾದ ಅಸಂಘಟಿತ ಹಿಂದೂಗಳು ಪ್ರಾಣ ಉಳಿದರೆ ಸಾಕೆಂದು ದಿಲ್ಲಿ ದೊರೆಗಳ ದೈನ್ಯತೆಗಾಗಿ ಧಾವಿಸಿ ಬಂದರು. ಹಿಂದುಳಿದಿರುವ ಹಿಂದೂಗಳ ಪಾಡು ಹಿಂದೆಯೂ ಹಾಗೆಯೇ ಆಗಿತ್ತು. ಇದು ಪಾಕಿಸ್ತಾನದಲ್ಲಿ ನಡೆಯುವಂತಹದ್ದು. ಭಾರತೀಯ ಸರಕಾರದ ಅಧಿಕಾರ ಅಲ್ಲಿ ಪಡೆಯುವಂತಿಲ್ಲವಾದ ಕಾರಣ ಅದೇನೂ ಮಾಡುವಂತಿಲ್ಲ— ಹೆಚ್ಚೆಂದರೆ ಪ್ರತಿಭಟನಾ ಪತ್ರವನ್ನು ಕಳುಹಿಸಬಹುದು ಅಷ್ಟೆ. ಇಲ್ಲಿ ನಮ್ಮ ಮನೆಯೊಳಗೇನೇ ಆದೀತು ಪಡೆಯುತ್ತಿದೆ?

ಕಾಶ್ಮೀರದ ಕರುಣಾಜನಕ ಕಥೆ ಆದಾದಲೇ ಪ್ರಕಟವಾಗಿರುತ್ತದೆ. ಅಲ್ಲಿ ಹಿಂದೂಗಳು ಮೂನ್ನೆಂದಿಂದ ಬಾಳುವದು ಕಷ್ಟಕರವಾಗಿದೆ. ಹಿಂದೊಮ್ಮೆ ಅದು ಆಸ್ಥಾಜ್ಯೋತಿ ಜವಾಹರಲಾಲ್ ನೆಹ್ರೂಜೀಯವರು ಪ್ರಧಾನಿಯಾಗಿದ್ದಾಗ—ಶೇಖ್ ಅಬ್ದುಲ್ಲಾ ಕಾಶ್ಮೀರದಲ್ಲಿ ಪ್ರಧಾನಿಯಾಗಿದ್ದಾಗ—ಅಲ್ಲಿನ ಜನತೆಯು ಕಷ್ಟಕೋಟಲೆಗಳನ್ನು ಕಣ್ಣಾರೆ ಕಂಡು ಸಂಸತ್ ಸಭೆಯ ಮುಂದಕ್ಕೆಡುತ್ತೇನೆಂದು ಡಾಕ್ಟರ್ ಶ್ಯಾಮ ಪ್ರಸಾದ ಮುಖರ್ಜಿ— ಜನತಾ ಪ್ರತಿನಿಧಿಯವರು ಹೊರಟಾಗ ಅಲ್ಲಿಗೆ ಬರಕೂಡದೆಂದು ಶೇಖ್ ಅಬ್ದುಲ್ಲಾ ಹರ ಮೂಡಿದರೂ, ಅದಕ್ಕೆ ಜಗ್ಗದೆ ಅವರು ಮುಂದರಿದಾಗ, ಅವರನ್ನು ಬಂಧಿಸಿ, ರಾತ್ರಾಗ್ಯಹದಲ್ಲಿ ಕೊಲೆಗೈದರೆನ್ನಲಾಗುತ್ತಿದೆ. ಅನಂತರ ಶೇಖ್ ಅಬ್ದುಲ್ಲಾರನ್ನು ಬಂಧಿಸಿದರಾದರೂ ಅವನಿಗಿಂದೂ ರಾಜಭೋಗ ಸಿಗುತ್ತದೆಯೇ ವಿನಃ ನ್ಯಾಯ ವಿಚಾರಣೆ ನಡೆದಿರುವದಿಲ್ಲ. ಅಷ್ಟೇ ಅಲ್ಲ ಇದೀಗ ಅವನ ಬಿಡುಗಡೆಗಾಗಿ 'ತುಮ್ ಪರಿಸ್ಥಿತಿ'ಯನ್ನು ರದ್ದುಗೊಳಿಸುವ ಸುದ್ದಿ ಪ್ರಕಟವಾಗಿರುತ್ತದೆ. ಅಲ್ಲಿಯ ಹಿಂದೂಗಳಿಗೆ ಧರ್ಮೋಪದೇಶಮಾಡಲು ಪುರಿಯ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರುಹೊರಟಾಗ, ಅವರಲ್ಲಿಗೆ ಬರಕೂಡದೆಂದು ಹೇಳಲಾಯಿತು. ಈ ಸಬ ಅದಕ್ಕೆ ವಿರುದ್ಧ ಸ್ವರ ಕೇಳಿ ಬಂದೊಡನೆ, ಬರಕೂಡದನ್ನಲಿಲ್ಲ; ಅಲ್ಲಿ ಮೂತಾಡಕೂಡದೆಂದು ಹೇಳಲಾಯಿತು. ಹುಟ್ಟಿ ಎರಡು ನೂಡದೆಂದಾದಲ್ಲಿ ಅಲ್ಲಿಗೆ ಅವರು ಬಿಜಯಂಗೈಯ್ಯುವದಾದರೂ ಯಾತಕ್ಕೆ? ಅವರು 'ಬಿಡುವಿಗಾಗಿ' ಅಲ್ಲಿಗೆ ಹೋಗುವದೇನು? ಪರ್ವ ಸಾಮಾನ್ಯ ಹಿಂದೂ ಹಾಗಿರಲಿ, ಹಿಂದೂಗಳ ಧಾರ್ಮಿಕ ನಾಯಕರುಗುರುಪರೊಪ್ಪುವ ಭಾರತದ ಇನ್ನೊಂದು ಪ್ರಾಂತ್ಯಕ್ಕೆ ಹೋಗುವಂತಿಲ್ಲ! ಸಂವಿಧಾನದ ಹಕ್ಕಿನ ವಿಷಯ ಹಾಗಿರಲಿ—ಎಳ ಪ್ರಾಪ್ತೆಯ ದೃಷ್ಟಿಯಿಂದ, ಅಮೂ ಬೇಡ—ಸರ್ವಸಾಮಾನ್ಯ ದೃಷ್ಟಿಯಿಂದಲಾದರೂ ಇದು ಸರಿ ಏನು? ಜನತಾ ಪ್ರತಿನಿಧಿ ಶ್ಯಾಮ ಪ್ರಸಾದ ಮುಖರ್ಜಿಯವರನ್ನೇ ಕಂಡು ಬೆಟ್ಟುರುವ ಶೇಖ್ ಅಬ್ದುಲ್ಲಾ ಸಾಮಾನ್ಯ ಹಿಂದೂವನ್ನು ಹಿಂದೂವಾಗಿರಲು ಬಿಟ್ಟಾನೇ?

ಕಾಶ್ಮೀರದ ಒಂದು ಭಾಗವನ್ನು ಪಾಕಿಸ್ತಾನಿ ಪಿಶಾಚಿ ತನ್ನ ಕ್ರೂರ ಹಿಡಿತದಲ್ಲಿ ಟ್ಟುಕೊಂಡು ಅವರಿಗೆ ಮಂಗಲಕರವಾದ ಮಂಗಲಾ ಅಣೆಕಟ್ಟನ್ನು ಕಟ್ಟುರುತ್ತದೆ. ಆಗ ನವ್ಯ ಸರಕಾರ ಅವರಿಗೆ ಪ್ರತಿಭಟನಾ ಪತ್ರವನ್ನು ಕಳುಹಿಸಿತ್ತು. ಆ ಪತ್ರದಿಂದ ದೋಣಿಯನ್ನು ಮಾಡಿ ಆ ಫೀರಂಗಿಯಲ್ಲಿ ಅಯೂಬ್‌ಖಾನ್ ಬಿಟ್ಟುರುವದು ಮಾತ್ರವಲ್ಲ, ಆದರಲ್ಲಿ ಕುಳಿತುಕೊಂಡು ಸುಖ ಪ್ರಯಾಣ ಮಾಡಲು ಕರೆಯುತ್ತಿದ್ದಾನೆ! ಅನಂದ ತುಂದಿಲರಾದ ಧರ್ಮ ಇಂದಿರಾ ಗಾಂಧೀಜೀಯವರು ಅಯೂಬ್‌ಖಾನಿಗೆ ಬೆನ್ನು ತಟ್ಟುವಂತಹ ಸಂದೇಶವನ್ನು ಕಳುಹಿಸಿದ್ದಾರೆ. ಇದೇ ಅಯೂಬ್ ನಾಳೆ ದಿಲ್ಲಿಯಲ್ಲಿ ಬಂದು ಅಂತಹದ್ದೇ ಕೆಲಸ ಮಾಡಿದಲ್ಲೂ ಶ್ರೀಮತಿಜೀಯವರು "ಶಹಬಾಸ್" ಎನ್ನದಿರುವರೇ? ಕಾಶ್ಮೀರದ ಹಿಂದೂಗಳು ಕಾಲನ ಹಿಂದುಗಡೆಯೇ ಇದ್ದಾರೆ. ಅದ್ಯಾವ ಅಣೆಕಟ್ಟು ಅವರನ್ನುಳಿಸುವಂತಿಲ್ಲ.

ಪಾಕಿಸ್ತಾನದ ವಿಷಯವೇ ಬೇಡ. ಕಾಶ್ಮೀರ, ರಾಜಸ್ಥಾನ, ಬಂಗಾಲ ಅಥವಾ ಅಸ್ಸಾಮಿನ ಕುರಿತೂ ಹೇಳುವದು ಬೇಡ. ಅಲ್ಲಿ ದಿನ ಹೋದಂತೆ ಹಿಂದೂಗಳ ಸಂಖ್ಯೆ ಕಮ್ಮಿಯಾಗುತ್ತಿದ್ದು ಮಹಮ್ಮದೀಯರ ಹಾಗೂ ಕ್ರೈಸ್ತೀಯರ ಸಂಖ್ಯೆ ಅಲ್ಲದೆ ಅನ್ಯ ದೇಶೀಯರ ಸಂಖ್ಯೆಯೂ ಹೆಚ್ಚುತ್ತಿರುವದು ಗಮನೀಯವಿದೆ. ಅಸ್ಸಾಮಿನ ಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಕಷ್ಟವಾಗ ಬಹುದೆಂದು ಅಲ್ಲಿಯ ಮುಖ್ಯ ಮಂತ್ರಿ ಶ್ರೀ ಛಲಿಹಾಭಯ ವ್ಯಕ್ತಪಡಿಸಿದ್ದಾರೆ. ನಾಗಾಲೇಂಡಿನಲ್ಲಿ ಹಿಂದೂಗಳ ಸಂಖ್ಯೆ ಕಮ್ಮಿ ಇಲ್ಲವಾದರೂ, ಅದಿಂದು ನಾಮ ಮಾತ್ರ ಭಾರತ ಸರಕಾರದ 'ಅಧೀನ'ದಲ್ಲಿದೆ. ಕ್ರೈಸ್ತೀಯರ ಪ್ರತ್ಯೇಕತಾ ಭಾವನೆಯನ್ನು ಹತ್ತಿಕ್ಕಲು ಅಲ್ಲಿಯ ಹಿಂದೂಗಳಿಗೆ ಸಾಧ್ಯವಾಗಿಲ್ಲ. ಅದಕ್ಕೆ ಕಾರಣವಂದರೆ, ಅವರನ್ನು ಭಾರತ ಸರಕಾರವು ಹಿಂದೂಗಳೆಂದು ಪರಿಗಣಿಸದೆ ತೊರೆದುಬಿಟ್ಟಿರುವದು. ಅವರೊಡನೆ ಸಂಪರ್ಕ ಇಟ್ಟುಕೊಳ್ಳದೆ ಇದ್ದದ್ದೇ ಇದೆ. ಈ ರೀತಿ ಉತ್ತರದ ತುದಿಯಲ್ಲಿ ನವ್ಯತ್ವವಲ್ಲ ಪೂರ್ವ-ಪಶ್ಚಿಮಗಳಲ್ಲೂ ಹಿಂದೂಗಳಿಂದು ಹಿಂದೂಗಳಾಗಿರಲು ಸಾಧ್ಯ ಇರುವದಿಲ್ಲ. ಕಾಶ್ಮೀರದಂತೆ ಅಸ್ಸಾಮಿನ ಕರೀಂಗಂಜ ಏಲ್ಲೂ ಹಿಂದೂ ಹುಡುಗಿಯರು ಮನೆಯಿಂದ ಹೊರಗೆ ಒಬ್ಬಂಟಿಗಳಾಗಿ ಹೋಗುವಂತಿಲ್ಲ! ಇವು ಗಡಿ ಪ್ರದೇಶದಲ್ಲಿ ಇರುವದರಿಂದ, ಅಲ್ಲಿ ಪಾಕಿಸ್ತಾನಿಗಳ ಸೈಶಾಚಿಕ ಆಟ ನಡೆಯುವದರಲ್ಲಿ ಆಶ್ಚರ್ಯವಿಲ್ಲ—ಅದನ್ನು ಒಳಪ್ರದೇಶದವರು ಗುಡ್ಡೆಯನ್ನಾಗಿ ಮಾಡಿ ಮತೀಯ ಕಲಹಕ್ಕೆ ಕಾರಣವಾಗಬಾರದೆಂದು ಕೆಲ ಶಾಂತಿಪ್ರಿಯರು ಹೇಳುವದುಂಟು. ಆದರ ದೃಷ್ಟಿಯಲ್ಲಿ ಪಾತಕಿಗಳದ್ದೇನೂ ತಪ್ಪಿರುವದಿಲ್ಲ. ತಪ್ಪು ಆ ಭೂಪ್ರದೇಶದಲ್ಲಿ—ಅದೇಕೆ ಪಾಕಿಸ್ತಾನದ ಪಕ್ಕದಲ್ಲೇ ಇರಬೇಕು? ಅಲ್ಲವೇ ಮತ್ತೆ? ಅವರ ಈ ಪ್ರಶ್ನೆಗೆ ಉತ್ತರ ಕೊಡಲು ಯಾರಿಗಾದರೂ ಸಾಧ್ಯವೇನು?

ಅದು ಹೋಗಲಿ. ಇಲ್ಲಿ ಹಾಗೇನೂ ಇಲ್ಲವೇನು?

ಪ್ರತೀ ವರ್ಷ ಪಡೆಯುವಂತೆ ಈ ವರ್ಷವೂ ದೇಶದ ನಾನಾ ಭಾಗಗಳಲ್ಲಿ ಮಹಾರಾಷ್ಟ್ರ, ಉತ್ತರಪ್ರದೇಶ, ಬಿಹಾರ್, ಗುಜರಾತ್ ಮುಂತಾದೆಡೆಗಳಲ್ಲಿ- ಗಣೇಶೋತ್ಸವ ಹಾಗೂ ನಂತರ ದುರ್ಗಾಪೂಜೆಯ ಸಮಯ ಮೊರವಣಿಗೆಯ ಮೇಲೆ ಧಾಳಿ ಮತ್ತೆ ಮೂರ್ತಿಗಳ ಮೇಲೆ ಅಮಾನುಷ ವರ್ತನೆ ನಡೆದಿರುತ್ತದೆ. ಅದರಲ್ಲೂ ವಿಶೇಷ ಹಾಗೂ ನಾಚಿಕೆಗೇಡಿನ ವಿಷಯ ವೆಂದರೆ ಕಳೆದವರ್ಷ ಎಲ್ಲಿ ಗಲಾಟೆಯೂ ತ್ತೋ ಅಲ್ಲೇ ಈ ವರ್ಷವು ಗಲಾಟೆಯಾಗಿದೆ. ಅಂದರೆ ಅಲ್ಲಿ ವಿದ್ರೋಹಿಗಳ ಅಥವಾ ಧರ್ಮ ವಿರೋಧಿಗಳ ಶೈವಾಡ ಹಾಗೂ ಪ್ರಾಬಲ್ಯ ಹೇಗಿದೆಂಬುದನ್ನು ಸುಲಭವಾಗಿ ಶ್ರೀ ಸಾಮಾನ್ಯ ತಿಳಿದು ಕೊಳ್ಳಬಹುದು. ಇದರಿಂದ ಉತ್ತೇಜನಗೊಂಡಿರುವ ಧರ್ಮದ್ರೋಹಿಗಳುಹಾಗೂಮೂರ್ತಿಭಂಜಕರು ದೇವಾಲಯಗಳೊಳಗೆ ನುಗ್ಗಿ ವಿಗ್ರಹಗಳನ್ನು ವಿದ್ರೂಪಗೊಳಿಸಲಂರಂಭಿಸಿರುವರು. ಈ ಹಿಂದೆ ವಿಗ್ರಹಗಳ ಳಲಿನ ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದು ಇದೀಗ ಆ ಪಥದಲ್ಲಿ ನಡೆದಿರುವ ಪ್ರಗತಿಯೂ ಪ್ರಕಟವಾದಲಂರಂಭಿಸಿದೆ. ಕಾಶ್ಮೀರದ ವಿಷಯವನ್ನು ಹೇಳುವದಲ್ಲ. ಒಳಪ್ರದೇಶಗಳಲ್ಲಿ ಹಾಗೂ ಮುಖ್ಯ ನಗರದಳಲ್ಲಿ ಪಡೆದಿರುವ ದುರ್ಘಟನೆಗಳನ್ನು ಜ್ಞಾಪಕಕ್ಕೇ ತರುವದು. ಅಹ್ಮದ್ ನಗರದಲ್ಲಿ ಮೋರ್ಚಾಂಡೇಯ ಮಂದಿರದಲ್ಲಿ ವಿಗ್ರಹವನ್ನು ಮತೀಯ ಗೂಂಡಾಗಳು ವಿದ್ರೂಪಗೊಳಿಸಿ ಬಿಟ್ಟರು. ಕೆಲವರಲ್ಲಿ ಮತೀಯ ಮನೋಧಾವನೆ ಎಚ್ಚತ್ತೆದ್ದಿತು. ಅದನ್ನು ಬಡಿದು ನಾಶಮಾಡಿ ಬಿಡಲು ಗೂಂಡಾಗಳು ಮುಂದಾದರು; ಮಾತ್ರವಲ್ಲ ತಮ್ಮ ಕಾರ್ಯರಂಗವನ್ನು ವಿಸ್ತಾರಗೊಳಿಸಿದರು. ಸೋಲಾಪುರದಲ್ಲಿ ಅವರು ಅದೇ ರೀತಿಯ ಹೇಯ ಕೃತ್ಯ ನಡೆಸಿ ಹೇಡಿ ಹಿಂದೂಗಳಿಗೆ ಸವಾಲು (ಕರೆ) ಕೊಟ್ಟರು. ಹೇಡಿಗಳಷ್ಟೆ ಧೈರ್ಯ ಬರುವಾಗ ಪೋಲೀಸರು ಅಲ್ಲಿಗೆ ಬಂದು ಬಿಡುತ್ತಾರೆ. ಒಡನೆ ಅವರನ್ನು ಬಂಧಿಸುತ್ತಾರೆ, ಶಿಕ್ಷೆ ಸುತ್ತಾರೆ!

ವಿಜಯದಶಮಿಯು ಸಮಯದಲ್ಲಿ ಬಿಹಾರ್‌ನ ಸುರಸಂಡ ಪಟ್ಟಣದಲ್ಲಿ ಮೆರವಣಿಗೆ ಹೋಗುತ್ತಿತ್ತು; ಹೋಗುವ ದಾರಿಯಲ್ಲಿ ಒಂದೆಡೆ ಮಹಮ್ಮದೀಯರು ಅಧಿಕವಾಗಿರುವ ಒಂದು ಸ್ಥಳ. ಮೆರವಣಿಗೆ ಅಲ್ಲಿಗೆ ಬಂದೊಡನೆ' ಅಲ್ಲಿಯ ಫಿನಾಸಿಗಳು ಮೆರವಣಿಗೆ ಹೋಗುತ್ತಿದ್ದವರ ಮೇಲೆ ಬಿದ್ದು, ಮೂರ್ತಿಯನ್ನು ಹಾಳು ಗೆಡವಿದರು. ಮಾತ್ರವಲ್ಲ, ಅದೇ 'ವಿಜಯೋತ್ಸಾಹದಲ್ಲೇ' ಹತ್ತಿರದ ಹರಿಜನ ಕಾಲೋನಿಯನ್ನು ಸುಟ್ಟುಹಾಕಿಬಿಟ್ಟರು! ಸುರಸಂಡಿನ ಆಜೆಗೆ ಸುಮಾರು ಹದಿನಾಲ್ಕು ಮೈಲು ದೂರದಲ್ಲಿ ಜನಕಪುರದಾಮವಿದೆ. ಜನಕಪುರದಾಮವೆಂದರೆ ಮಾತೆ ಸೀತಾದೇವಿಯ ಜನ್ಮಸ್ಥಳವೆನ್ನಲಾಗುತ್ತಿದೆ. ಸುರಸಂಡಿನ ಈಜೆಗೆ ಹದಿನಾರು ಮೈಲು ದೂರದಲ್ಲಿ ಸೀತಾಮಡಿ ಕ್ಷೇತ್ರವಿದೆ. ಧರ್ಮದ್ರೋಹಿಗಳು ಸೀತಾಮಡಿಯ ಹೆಸರಿನಲ್ಲಿ ಅದಾಗಲೇ ಪ್ರಸಿದ್ಧಗೊಳಿಸಿಬಿಟ್ಟಿದ್ದಾರೆ. ಈ ಕ್ಷೇತ್ರಗಳ ನಡುವೆ ಇರುವ ಹಿಂದೂಗಳ ಅವಸ್ಥೆ ಹೀಗಾದಲ್ಲಿ ಸಾಧಾರಣ ಸ್ಥಳದಲ್ಲಿರುವವನ ಪಾಡೆಂತಿದ್ದೀತು?

ಇದಲ್ಲಾ ಉತ್ತರದ ಕಥೆ— ನಮಗೆ ಬೇಡ. ಅಲ್ಲಿ ಯಾವಾಗಲೂ ಮತೀಯ ಮಾರಾಮಾರಿ ನಡೆಯುತ್ತಿದೆ. ದಕ್ಷಿಣದಲ್ಲಿ ನಾವು ಹಾಯಾಗಿದ್ದೇವೆ. ಆದುವರೆಂದಲೇ ನಾವು ಸ್ವತಂತ್ರ ದ್ರಾವಿಡ ನಾಡು ಅಥವಾ ದಕ್ಷಿಣ ಪ್ರದೇಶವನ್ನು ಕೇಳುತ್ತಿದ್ದೇವೆ. ಇಲ್ಲಿ ಹಾಗೆ ಪಡೆಯುವಂತಿಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ತಲೆಗೆ ಸುರಿದ ಫೀರು ಕಾಲಿಗೆ ಬಂಬೆ ಇರುತ್ತದೆಯೇ? ಪೃಥ್ವೀರಾಜನನ್ನು ಹಿಡಿದುಕೊಟ್ಟ ಜಯಚಂದನ ಅವಸ್ಥೆ ಏನಾಯ್ತು? ಇಂತಹ ಕಲ್ಪನೆಗಳಿಗೆ ಇಲ್ಲಿ ಅವಕಾಶ ಇಲ್ಲ. ಮತೀಯ ಜ್ವಾಲಾಗ್ನಿಗಿಲ್ಲಿ ಸ್ಥಳವಿಲ್ಲವೆಂದವರದಕ್ಕೆ ಉತ್ತರಿಸುವದು.

ದ್ರಾವಿಡ ನಾಡು ಯಾನೆ ದಕ್ಷಿಣ ಪ್ರದೇಶದ ಕೂಗು ಕೇಳಿ ಬರುತ್ತಿರುವ ಮಧ್ಯಾಸು ಅಥವಾ ತಮಿಳ್ನಾಡಿನಲ್ಲಿ ನಡೆಯುತ್ತಿರುವದಾದರೂ ಏನು? ಈಗ ಇಲ್ಲಿ "ಉತ್ತರದಲ್ಲಿ ಪಕ್ಷ" ಕಾಂಗ್ರೆಸ್ಸಿನ ಬಲ್ಲಿಕೆ ಇರುವದಿಲ್ಲ. ದ್ರಾವಿಡ ಮುನ್ನಟ್ರ ಕಳಗಮಿನ ಆಲ್ಬಿಕೆ ಇದೆ. ಅದುದರಿಂದ ಕಾಂಗ್ರೆಸ್ಸಿನವರ ಕಾಲದಲ್ಲಿ ನಡೆದ "ವಿವೇಕಾನಂದ ಶಿಲಾ ಪ್ರಕರಣ' ಇನ್ನು ನಡೆಯಲಾರದೆಂದು ಅವರು ಹೇಳುವುದುಂಟು. ಆದರ ಅವರ ಕಣ್ಣಿದುರಿನಲ್ಲೇ ತಿರುನೆಲ್ವೇಲಿಯ ಇಡಿಂದಕರೈಯುಷ್ಣ ಅದೇ ಘ ನಡೆದಿದೆಂಬುದನ್ನು ಕಳೆದವಾರ ತಿಳಿದುಕೊಂಡಿರುವೆವು. ಅಲ್ಲಿ ಎಂಟೂರಕ್ಕೂ ಮೇಲ್ಪಟ್ಟವರು ಪಾತ್ರಿಯ ಪೈಶಾಚಿಕ ಪಿಡಿತದಿಂದ ತಪ್ಪಿಸಿಕೊಂಡು ಮಂಲೆ ವಾತ್ಸಲ್ಯಧರ್ಮಕ್ಕೆ ಬಂದಿರುವದನ್ನು ಕೇಳಿದೊಡನೆ ಇದಲ್ಲವೇ ದ್ರಾವಿಡರ ಮುನ್ನೇಟ್ರವೆಂದು [ಪ್ರಗತಿ] ಕಲವರು ಹೇಳಬಹುದು. ಆದರ ಅನಂತರ ಅಲ್ಲಿ ನಡೆದ ದಾದರೂ ಏನು? ಅಲ್ಲಿನ ಕ್ರೈಸ್ತೀಯ ಸಭಾ ಇನ್ಸ್‌ಪೆಕ್ಟರಮ ಆ ಬಡಪಾಯಿ ಗೆಳಯನ್ನು ಬಂಧಿಸಿದ್ದನು. ಪಾದ್ರಿ ಸರ್ಪದವನ್ನು ಪೀಡೆ ಕೊಡಲಾರಂಭಿಸಿದ್ದರು. ಹಾಗಿದ್ದರೂ ಪರಳಿ ಬಂದವರು ಒಂದು ಗುಡಿಯನ್ನು ಕ

ಟ್ಟಿದರು. ಆದರೆ ಅವರು, ಬೆಸ್ಕರು. ತ ವ್ಯೈದೈನಂದಿನ ಕೆಲಸಕ್ಕಾಗಿ ಹೋಗಿದ್ದಾ ಗ ಖಾದ್ರಿ ಪಕ್ಷದವರು ಅದನ್ನು ಹಾಳು ಗೆಡವಿ ಬಿಟ್ಟಿದ್ದಾರೆ. ಹಾಗಾದರೆ ಈ ಖಡ ಜನತೆ ಹಿಂದೂಗಳಾಗಿರಲು ಸಾಧ್ಯವಿಲ್ಲ ವೇನು?

ಕೇರಳದಲ್ಲಾದರೂ ಶಾಂತಿಪ್ರಿಯೇ? ಅದನ್ನು ಅಲ್ಲಿ ಬಯಸಲೂ ಸಾಧ್ಯವೇ ಇ ರುವದಿಲ್ಲ. ಅಲ್ಲಿನ ಮಿಶ್ರ ಸರಕಾರವಾದ ರೋ ಧರ್ಮ ವಿರೋಧಿಯೇ ಇದೆ. ಕಮ್ಯೂ ನಿಸ್ಟರ ಪಾಲಿನಂತೂ ದೇಶ, ಧರ್ಮ, ದೇವ ರು—ಡಿಂಡಿರೆಲ್ಲಾ ಬಂಡವಾಳಗಳ ಜಾ ಲವೇ ಇದೆ. ಅದನ್ನು ಕಡಿದೊಗೆಯಲು ಅವರು ಪರಿಶ್ರಮಿಸುತ್ತಿದ್ದಾರೆ. ಹಾಗಿದ್ದ ರೂ ಈಗಿನ ಪರಿಸ್ಥಿತಿಯಲ್ಲಿ ಅಂತಹ ಎಡೆ ಗಾಂಕೆ ಅವರಿಗೆ ಖಂಡೀತೆಂದು ಯಾರೂ ಭಾವಿಸಿರಲಿಕ್ಕಿಲ್ಲ. ಹಿಂದೆ, ಫೇಫಾಲದಿಂದ ಯಂತ್ರ ವಿಶಾರದರೊಬ್ಬರು ಹೊರ ವೂ ರಿನ ಕ್ರೈಸ್ತೀಯ ವೈದ್ಯರ ಕುತಂತ್ರಕ್ಕೆ ಬಲಿಯಾಗಿ ಬಂದು ಆದೆಂತು ತಪ್ಪಿ ಸಿ ಕೊಂಡು ಹೋದರೆಂಬುದೂ, ಸಂಬಂಧಪಟ್ಟ ಘಟನೆಯೂ ಜ್ಞಾಪಕದಿಂ ದ ಹೋಗಿಲವಾಂದ. ಅಲ್ಲಿನ ಕ್ರಿಸ್ತೀಯರೂ ಮಹಮ್ಮದೀಯರೂ ಕಮ್ಯೂನಿಸ್ಟರ ಸಹಾಯದಿಂದ ಅದೆಂಥೂ ಹಿಂದೂಗಳ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳುತ್ತಿ ದ್ದಾರೆ; ದೇವಸ್ಥಾನದ ಭೂಮಿಗಳನ್ನು ಆ ಕ್ರಮಿಸಿಕೊಳ್ಳುತ್ತಿದ್ದಾರೆಂಬುದೂ, ಆ ರ ಅದೇ ಕಮ್ಯೂನಿಸ್ಟ್ರಂಗ ಮಹಮ್ಮದೀಯ ರ ಜಮೀನಾಗಳನ್ನು ತಗಡುಕೊಳ್ಳಲು ಸಾ ಧ್ಯವಾಗದೆ ಹೋಗಿಂತ್ತಿದೆಂಬುದೂ ಮ ರೆವಿ.ಲಾಗದ ಘಟನೆಗಳೇ ಇವೆ. ಇದಕ್ಕಿಂ ತಲೂ ಹೇಯವಾಗಿ, ಪ್ರತ್ಯಕ್ಷವಾಗಿ, ಅ ಲ್ಲಿಯ ಕಮ್ಯೂನಿಸ್ಟ್ ಮುಸ್ಲಿಂಸಂಕಾದವು ಶ್ರದ್ಧಾಕೇಂದ್ರ ದೇವಾಲಯವನ್ನು ಅಪವಿ ತ್ರಗೊಳಿಸಲು ಮುಂದಾಗಿ ಬಿಟ್ಟದಂಯಾ ದು ಶೋಚನೀಯ ಎಲ್ಲದೆ ಖಂಡನೀಯ ವಿಷಯವಿದೆ. ಕಮ್ಯೂನಿಸ್ಟ್ ಮುಸ್ಲಿಂ ದುಃ ಶಕ್ತಿದಳೆಂಂದಾಗಿ'ಕೇರಳ ಬಂದ' ಖಂಡ ಖಾಂಡವಾಗಿದಾಗ ಭಾರತೀಯ ಜನಸಂಘ ದವರು ಅದನ್ನೆದುರಿಸಿದರಂತೆ. ಆದರಿಂದ ರೊಚ್ಚಿಗೆದ್ದ ದುಃಶಕ್ತಿಗಳು ದೇವಸ್ಥಾನ ವನ್ನು ಹುಡಿಕೆಕೊಂಡು ಹೊರಟುವು. ದೇವಸ್ಥಾನದ ಮೇಲೆ ದುಂಡು ದಾರಿಸಿದ ರು. ವೀರ ಬಾಲಕರಿಬ್ಬರ ಪ್ರಾಣವನ್ನು ಹೀರಿಬಿಟ್ಟರು.

ಆಂಧ್ರ, ಕರ್ನಾಟಕಗಳೂ ಈ ವಿಷ ಯದಲ್ಲಿ ಹಿಂದಕ್ಕೆ ಬಿದ್ದಿಲ್ಲ. ಕರ್ನಾಟಕದ ಲ್ಲಿ ಗೋವಧೆ ನಿಷೇಧಿಸಲ್ಪಟ್ಟಿದೆಯೊದರೂ ಮತಾಂಧರು ಧೈರ್ಯದಿಂದಲೇ ಗೋಹತ್ಯೆ ನಡೆಸುತ್ತಿದ್ದಾರೆ. ಇತರ ರಾಜ್ಯಗಳಲ್ಲಂತು ಂತೆ ಈ ರಾಜ್ಯಗಳಲ್ಲೂ ಗ್ರಾಮಾಗ್ರಾಮಗಳಲ್ಲಿ ಕ್ರೈಸ್ತೀಯ ಮತಪ್ರಸಾರಕರು ಹೋಗಿ ಮತಾಂತರ ನಡೆಸಿರುವರು. ವಿವ ಮೊಗ್ಗ ಸಂಗರಂಗಳಲ್ಲಿ ಇದರ ಪ್ರತಿಕ್ರಿಯೆ ಕಂಡು ಬರುತ್ತಿದೆ.

ಹೀಗೆ ದೇಶದಾದ್ಯಂತ ಈ ದುಃಶಕ್ತಿದ ಳು ಹಬ್ಬಕೂಂಡಿದ್ದು ಹಿಂದೂಗಳಾಗಿರ ಲು ಯಾಂಸ್ಸೂ ಬಿಡಕೂಡದೆಂಬ ತೀರ್ಮಾ ನಕ್ಕೆ ಬಂದಿರುವರೂ ವಿಹಂಂನಲ್ಲಿಂತೂ ಕ್ರೈಸ್ತೀಯ ಮತಪ್ರಸಾರಕರು ಜಹೀರಂಗ ವಾಗಿಯೇ ತಮ್ಮ ಮತಕ್ಕೆ ಸೇರಿದಲ್ಲಿ ಸೂತ್ರ ಸಹಾಯ ಮಾಡುವುದಾಗಿ ಸಾರಿ

ಇದು ನಮ್ಮ ಭಾರತ

ವಂಚನ ಪ್ರವೀಣೆ, ತ್ಯಾಗ ಶಿರೋಮಣಿ

ಇತ್ತೀಚೆಗಿನ ದಿನಗಳಲ್ಲಿ ಭಾರತೀಯ ಮಹಿಳೆಯರು ತುಂಬ ಮುಂದುವರಿದಿ ದ್ದಾರೆ. ಪುರುಷರಿಗೆ ಸರಿ ಸಮಾನವಾದ ಹಕ್ಕು ಭಾಧ್ಯತೆಗಳನ್ನು ಪಡೆದಿರುವ ಮ ಹಿಳೆಯರು ಪುರುಷರನ್ನು ವಿಮರ್ಶೆಯೇ ಮುಂದುವರಿಯುತ್ತಿರುವಂತೆ ಭಾಸವಾಗು ತ್ತದೆ. ಕಳ್ಳತನ, ಕೊಲೆ, ವಂಚನೆ ಮೊದ ಲಾದ ಹೀನ ಕೃತ್ಯಗಳು ಪುರುಷರಿಗೆ ಮಾತ್ರ ಮೀಸಲಿದ್ದ ದಿನಗಳು ಕಳೆಸುವು. ಇತ್ತೀಚೆಗೆ ದೆಂಗಳೂರಿನಲ್ಲಿ ನಡೆದ ಘಟ ನೆಯಿದು.

ಬೆರಗುಗೊಳಿಸುವಮಾತುಗಳನ್ನು ಆಡಿ ಜನರನ್ನು ನೋಸಗೊಳಿಸಿದ ಒಬ್ಬಾಕೆ ಯುವತಿಯನ್ನು ಪೋಲೀಸರು ಬಂಧಿಸಿ ದರು. ಈ ಆರೋಪಿಯ ಹೆಸರು ಶಾಂತಾ. ಪ್ರಾಯ ಸುಮಾರು ೨೦. ಈಕೆ ಮಾಡುತ್ತಿ ದ್ದುದೇನು?

ಬೆರಗು ಮಾತುಗಳನ್ನಾಡುವುದು ಮ ತ್ತು ವಂಚಿಸಿ ವಸ್ತುಗಳನ್ನು ಪಡೆಯುವು ದು. ಶಾಂತಾ ಬೆರಗು ಮಾತುಗಳಿಂದ ಬೆಂಗಳೂರು ನಗರದ ನಾಲ್ವರನ್ನು ವಂಚಿ ಸಿ ಚಿನ್ನದ ನೆಕ್ಲೇಸ್, ಗಡಿಯಾರ ಮ ತ್ತು ಉಂಗುರಗಳನ್ನು ಪಡೆದಿದ್ದಳು. ಒ ಬ್ಬೆಬ್ಬರೊಡನೆ ತಾನು ಒಂದೊಂದು ಹುದ್ದೆಯಲ್ಲಿರುವದಾಗಿ ಸುಳ್ಳು ಹೇಳಿ ತ್ತಿದ್ದಳು. ಖಾಯಂಕೊಂದರೆ ಉದ್ಯೋಗಿನಿ ತಾ ನೆಂದು ಹೇಳಿಕೊಂಡು ಓರ್ವ ರಿಂದ ಗಡಿಯಾರವನ್ನು ಪಡೆದಿದ್ದರೆ, ಲೇ ಡಿ ಡಾಕ್ಟರೆಂದು ಫಟಿಸಿ ಇನ್ನೊಬ್ಬರಿಂದ ನೆಕ್ಲೇಸ್ ಪಡೆದಿದ್ದಳು. ಪ್ರತಿ ವಂಚನೆ ಯ ಪ್ರಕರಣದಲ್ಲೂ ಶಾಂತಾ ತನ್ನ ಹು ದ್ದೆಯನ್ನೂ ಹೆಸರನ್ನೂ ಬದಲಿಸಿ ಹೇಳುತಿ ದ್ದಳು. ಒಮ್ಮೆ ಆಕೆ ಶಾಂತಾ ಆದರೆ, ಮ ತ್ತೊಮ್ಮೆ ಮೊಲತಿಯೆನ್ನಿಸಿಕೊಳ್ಳುತ್ತಿದ್ದಳು ಇನ್ನೊಮ್ಮೆ ಉಮಾ ಆದರೆ, ಮಗುದೊ ಮ್ಮೆ ಬೇರೆಯೇ....

ಶಾಂತಾ ಈ ಕಸುಬಿಗೆ ತೀರ ಹೊಸಬ ಳು ಎನ್ನುವಂತಿಲ್ಲ. ಈ ಸೊದಲು ಈ ಯುವತಿಗೆ ಎರಡು ಬಾರಿ ಶಿಕ್ಷೆಯೂ ಗಿದೆ. 'ಮೂವನೆ ಮನೆಗೆ ಹೋಗಿ ಖ ರುವ ' ಈ ಖಗೆಯ ಚಟ ಗಂಡಸ ರಿಂದ ಹೆಂಗುಸರಿಗೂ ಹರಡುತ್ತಿರುವುದು ಭಾರತದ ಕ್ಷೇಮಕ್ಕೆ ಉಚಿತವೆನ್ನುವಂ ತಿಲ್ಲ.

ಶಾಂತಾ ಪರದೇಶಿ ಹುಡುಗಿಯಲ್ಲ; ತೀ ರ ಬಡವಳುಎನ್ನುವಂತಿಯೂ ಇಲ್ಲ. ಬೆಂಗ ಳೂರಿನ ಹೆಸುಮಂತ ನಗರದ ಓರ್ವ ಶ್ರೀ ಮಂತ ಮಹಿಳೆ! ಇವಳಿಗೆ ಈ ವಂಚಕ ಪ್ರವೃತ್ತಿ ಹೇಗೆ ಅಂಟಿತು—ಎಂಬುದೇ ಜೋರ್ದಾದ ಸಂಗತಿ.

ಭಾರತದ ನೈತಿಕ ಅಧಃಪತನ ಹೀಗೆ ರಭಸವಾಗಿ ನಡೆಯುತ್ತಿದೆ ಎಂಬುದಕ್ಕೆ ಶಾಂತಳ ಪ್ರಕರಣ ಒಂದು ನಿದರ್ಶನ ಮಾತ್ರ.

ಶಾಂತಾಳ ವಂಚಕ ಪ್ರವೃತ್ತಿ ಭಾರತದ "ಹೊಸ" ಮುಖವಾದರೆ, ಇನ್ನಿ ಭಾರತದ ಜೆಳೆಯ ಮುಖವೂ ಒಂದಿದೆ. ಈ ಮುಖ ವನ್ನುದ್ದೇಶಿಸಾಳದ ಶ್ರೀಮತಿ ಗಂಗಮ್ಮನವರು ಶ್ರೀಮತಿ ಗಂಗಮ್ಮನವರಂ ತ ಹರು ಬೆರಳೆಣಿಕೆಗೂ ದೂರವಾದರೆ, ಶಾಂತಾಳಂತವರು ದಿನದಿನಕ್ಕೂ ಹೆಚ್ಚು ತಿದ್ದಾರೆ.

ಶ್ರೀಮತಿ ಗಂಗಮ್ಮ ವೀರಪ್ಪ ಚಿನಿವಾ ಲರಿಗೆ ಮಕ್ಕಳಿಲ್ಲ. ಮಕ್ಕಳಿಲ್ಲದವರು ಪತ್ರ ಕ ತೆಗೆದು ಕೊಳ್ಳುವುದು ಸಹಜ ಮತ್ತು ಸ್ವಾಭಾವಿಕ. ಶ್ರೀಮತಿಯವರು ತುಂಬ ಶ್ರೀಮಂತರು. ತಮ್ಮ ಸಂಪತ್ತಿಗೊಬ್ಬ ಉತ್ತರಾಧಿಕಾರಿಯನ್ನು ಆಯ್ದುಕೊಳ್ಳಲು ಕಷ್ಟವೇನೂ ಆಗುತ್ತಿರಲಿಲ್ಲ ಆದರೆ, ಶ್ರೀ ಮತಿಯವರು ಹೊಟ್ಟೆಯಲ್ಲಿ ಮಕ್ಕಳಿಲ್ಲ ದುದಕ್ಕೆ ಒಬ್ಬನನ್ನಲ್ಲ, ಊರಿನ ಎಲ್ಲ ಮ ಕ್ಕಳನ್ನೂ ತನ್ನವರೆನ್ನಾಗಿ ಮಾಡಿಕೊಂಡಿ ದ್ದಾರೆ. ತನ್ನ ಸರ್ವ ಸಂಪತ್ತನ್ನೂ ಶಿಕ್ಷ ಣಕ್ಕಾಗಿ ಧಾರೆಯೆರೆದಿದ್ದಾರೆ. ಇವರ ಸಂ ಪತ್ತು ಸುಮಾರು ಐದು ಲಕ್ಷ ರೂಪಾಯಿ ಗಳು!

ಶ್ರೀಮತಿ ಗಂಗಮ್ಮನವರು ಕೊದಲಿಂ ದಲೂ ಮಕ್ಕಳ ರಕ್ಷಕರು; ಶಿಕ್ಷಣ ಪ್ರೇಮಿ ಗಳು. ಅನೇಕ ವರ್ಷಗಳ ವರೆಗೆ ಬಡ ಮಕ್ಕಳನ್ನು ಮನೆಯಲ್ಲಿರಿಸಿ ಕೈಯಾರೆ ಉ ಣಿಸಿದ್ದಾರೆ. ಈಗಲೂ ಅವರ ಸಹಾಯ ದಿಂದ ಲಂವ.ಕ್ಕಳಿರುವ ಉಚಿತ ಪ್ರಸಾದ ಫಿಲಯೊಂದು ನಡೆದು ಬರುತ್ತಿದೆ.

"ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮ ತ್ತೊಂದು ಕ್ರಿಯೆ ಮಾಡೆನು; ನಿಮ್ಮ ಸೊ ಮ್ಮಿಂಗೆ ಸಲ್ಲಿಸುವೆನು; ನಿಮ್ಮಾಣೆ ಕೂಡ ಲಸಂಗಮ ದೇವಾ" ಎಂಬ ಬಸವಣ್ಣನ ವರ ವಚನದಂತೆ ದೇವರು ಕೊಡಿದ ಸಂಪ ತ್ತನ್ನು ದೇವರಂತಹ ಮಕ್ಕಳ ಶಿಕ್ಷಣಕ್ಕಾ ಗಿ ವಿನಿಯೋಗಿಸಿ ತ್ಯಾಗ ಶಿರೋಮಣಿ ಶ್ರೀ ಮತಿ ಗಂಗಮ್ಮನವರು ಸಂಸ್ಕೃತಿಯ ಜ್ವ ಲಂತ ಮೂರ್ತಿ.

ಯುವ ಜನಾಂಗದ ನೈತಿಕ ಅಧಃಪತ ನವು ನಮ್ಮ ಶಿಕ್ಷಣಪ್ರಣಾಲಿಯ ದೋಷ ದ ಪರಿಣಾಮವೆಂಬುದರಲ್ಲಿ ಸತ್ಯಾಂಶವಿಲ್ಲ ದಿಲ್ಲ. ಧಾರ್ಮಿಕ ಬಂಧನಗಳಿಂದ ಮುಕ್ತ ವಾಗುತ್ತ ಬರುತ್ತಿರುವ ಯುವ ಭಾರತೀ ಯರಿಗೆ ನೈತಿಕ ಶಿಕ್ಷಣದ ಅವಶ್ಯ ಎಂದಿ ಗಿಂತಲೂ ಇಂದು ಹೆಚ್ಚಾಗಿದೆ. ದೇಶ ಶಾಂ ತಿಕ್ರಾಂತಿಯ ಸಂಕ್ರಾಂತಿ ಕಾಲದಲ್ಲಿ ನಾ ದವೆಳೆಯುತ್ತಿರುವಾಗ, ಜನತೆಯ ನೈತಿಕ ಸ್ಥರವನ್ನು ಉತ್ಕರ್ಷಿಸುವ ಕ್ರಮ ಬೆಳೆಯ ಬೇಕು. ಕಾಗದ ಪತ್ರಗಳಲ್ಲಿ ಇವು ಎಂದಿ ಗೂ ಸಾಧ್ಯವಿಲ್ಲ—ರಚನಾತ್ಮಕ ಕೃತಿಯಿಂ ದ ಮಾತ್ರ ಸಾಧ್ಯ.

ರುವರು; ಅಷ್ಟೇ ಅಲ್ಲ, ಈ ವಿಷಯದಲ್ಲಿ ಅವರಿಕದೊಂದಿಗೆ ಭಾರತ ಸರಕಾರವು ಸಂಧಾನಮಾಡಿಕೊಂಡಿರುವದಾಗಿ ಮತ ಪ್ರಸಾರಕರು ತಿಳಿಸಿರುವರು. ಅವರಿಗಾದ ರೋ ತನ್ನ ಹಿಂದುಗಡೆ ಸಮಗ್ರ ಕ್ರೈಸ್ತ ಸಮುದಾಯ ಇದೆಯೆಂಬ ಧೈರ್ಯವಿದೆ. ಕೆ ಲ ಪರದೇಶಿ ಶಂಟಲಮೂರಿ ಮತಪ್ರಸಾರ ಕಂನ್ನು ಹೊರಗಟ್ಟುತ್ತೇನೆಂದು ಭಾರತ ಸರಕಾರ ಗುಸಿರುಬಿಟ್ಟದ್ದೇ ತಡ, ದೇಶ ದಾದ್ಯಂತ ಕ್ರೈಸ್ತೀಯರು ಕೂಗೆಬ್ಬಿಸಿದ ರು. ಭಾರತ ಸರಕಾರ ಸುಮ್ಮಗಾಗದೇ ಕಾಯಿತು.

ಭಾರತ ಸರಕಾಂವಾದರೋ, ಬ್ರಿಟಿ ಷಂ—ಪೋರ್ಚುಗೀಸರು—ಫ್ರೆಂಚರ ಉ ತ್ತರಾಧಿಕಾರಿ ತಾನೆಂಬಂತೆ ಪಾಗೂ ಪರ ದೇಶವೆಂದಲ್ಲಿ ಪರಮ ಪವಿತ್ರವೆಂಬಂತೆ ವರ್ತಿಸುತ್ತಿದೆ. ಆದು ಹಿಂದೂಗಳಿಗಾಗಿ ಹಿಂದೂ ಕೋಡು ಬಿಲ್ಲನ್ನು ತಂದಿದೆ; ದೇ ವಸ್ಥಾನಗಳನ್ನು ವಶಪಡಿಸಿಕೊಂಡಿದೆ. ಈ ರೀತಿ ಭಾರತ ಸರಕಾರ ಪ್ರಿಮಾಂಬ ನೀತಿ ಯನ್ನು ಅನುಸರಿಸುತ್ತಿದೆ ಆದರಿಂದ ಪ್ರೋ ತ್ಸಾಹಗೊಂಡ ಮತಾಂಧಮೀಯರುಪ್ರತ್ಯೇ ಕ ಪಾಕಿಸ್ತಾನವನ್ನು ಕೇಳಿತ್ತಂತೆಯೂ ಸ್ವ ತಂತ್ರ ಜಿಲ್ಲಾ, ಊರು, ಏರಿಯಾಗಳು, ನಿಲ ಯ ಇತ್ಯಾದಿಯಾಗಿಯನ್ನು ಕೇಳಿತ್ತಿದ್ದಾರೆಯೆಂದು ಉರ್ದುವಿನ ಹೆಸರಿನಲ್ಲೂ ಹಗಂಜಿ ನಡೆ ಸುತ್ತಿದ್ದಾರೆ. [ಈ ವಿಷಯ ಮುಂದಿನ ವಾರ ನೋಡೋಣ.] ಇಷ್ಟೆಲ್ಲಾ ಏಕೆ? ರಾಷ್ಟ್ರಪತಿಗಳ ಸ್ಥಾನಕ್ಕೆ ಶ್ರೀ ಸುಬ್ಬ ರಾಯರು ಸ್ಪರ್ಧಿಸಿದಾಗ ಅವರು ಹಿಂದೂ ವೆಂಬ ಏಕಮೇವ ಕಾರಣದಿಂದ ಅವರಿಗೆ ಮತದಾನ ಮಾಡದಾರದೆಂದು ಕಾಂಗ್ರೆಸ್ಸು ತಪ್ಪ ಮತದಾನಿಗಳಿಗೆ ಎಚ್ಚರಿಕೆ ಕೊ ಟ್ಟಿತ್ತು (?) ಇದೀಗ ಜಬ್ಬಲ್‌ಪುರದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸೇರಿದ್ದಾಗ, ಅಲ್ಲಿ ಶ್ರೀ ಸದೋಬಾ ಪಾಟೀಲರು ಹಿಂದೂಗಳು ಇನ್ನಷ್ಟು ತ್ಯಾಗಕ್ಕೆ (?) ಮುಂದಾಗಬೇಕು; ಅನ್ಯ ಮತೀಯರಿಗೆ ಎಲ್ಲಾ ಸಲುಗೆ ಕೊಡಬೇಕೆಂದು ಹೇಳಿರು ವರು.

ಇದೇ ಗತಿಯಲ್ಲಿ ನುನ್ನಡೆದರೆ ಹಿಂ ದೂಸ್ಥಾನದಲ್ಲೂ ಹಿಂದೂಧರ್ಮ ಹಿಂದೂ ಗಳಾಗಿರಲು ಅಸಾಧ್ಯವಾಗುವ ದುರಿಸ್ಥ ಖಯವದರಲ್ಲಿ ಸಂದೇಹವಿಲ್ಲ. ಇದನ್ನು ತ ಪ್ಪಿಸಬೇಕಾದಲ್ಲಿ ಹಿಂದೂಗಳು ಜಾಗೃತ ರಾಗಬೇಕು—ಎಚ್ಚತ್ತಿದ್ದಲೇ ಬೇಕು ಮತ್ತು ದುಃಸ್ಥಿತಿಯನ್ನು ಖದಲಾಯಿಸಲು ಸಂಘಟಿತರಾಗಿ ಕಾರ್ಯಸನ್ನಖರಾಗಲೇ ಬೇಕು. ಇದೇ ವಿಷಯವನ್ನು ಸ್ವಿಮಿ ವಿವೇಕಾನಂದ, ಬಂಗಂಗಂಧಿ ತಿಲಕ, ಎಮದಿನೋ ನಾಯಿ ಮೊಲಿಯನ್ನು ಲಿಪಿಯಲಿರಿಂ ಖಿಸ್ಟಿವಿಂದ್ ಮುಂತಾ ದವರು ಹೇಳುತ್ತ ಬಂದಿದ್ದಾರೆ. ಪರ್ಯಾಯ ಪೀಠವನ್ನಲಂಕರಿಸಿರುವ ಪೇಜಾವರ ಮಠಾ ಧೀಶ ಶ್ರೀ ಶ್ರೀ ವಿಶ್ವೇಶತೀರ್ಥ ಸ್ವಾಮಿ ಜೀಯವರೂ ಈ ವಿಷಯವನ್ನು ಘೋಷಿ ಸುತ್ತಿದ್ದಾರೆ. ಇದುವೇ ನಮ್ಮ ಷಷ್ಠಿಯ ವೃತವಾದಲ್ಲಿ ನಾವು ವಿಜಯಶಾಲಿಗಳಾಗ ಖಹುದು.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ದೇಶದ ಐಕ್ಯದಲ್ಲಿ

ಭಾಷಾ-ಸಂಘ-ಸಂಸ್ಥೆಗಳ ಪಾತ್ರ

ಲೇಖಕರು:
ಶ್ರೀ ಬಿ. ನರಸಿಂಗರಾವ್, ಕಾಸರಗೋಡು.

ಇಂದು ಭಾರತದಲ್ಲಿ ಎಲ್ಲೆಲ್ಲೂ ಕೇಳಿ ಬರುತ್ತಿರುವುದು 'ಭಾವೈಕ್ಯ'ದ ಸೊಲ್ಲು. ದಕ್ಷಿಣದಲ್ಲಿ ಹಿಂದೀ ವಿರೋಧಿ ದ್ರಾವಿಡ ಪಕ್ಷ, ಉತ್ತರದಲ್ಲಿ ದಕ್ಷಿಣ ಭಾರತೀಯರನ್ನೆ ಉಚ್ಚಾಟನೆ ಗೈಯ ಹೊರಟ ಶಿವಸೇನೆಯ ಹಾವಳಿ. ಇದೆಲ್ಲಾ ಕಾಣುವಾಗ ಸರದಾರ ಪಟೇಲರ ಶ್ರಮದಿಂದ ಒಂದಾದ ಭಾರತವು ಮತ್ತೆ ಹುಡಿಯಾದೀತೆ ಎಂಬ ಸಂಶಯವೇಳುವುದು ಸಹಜವೇ.

ಅಂತಿದ್ದರೆ ದೇಶದ ಐಕ್ಯಕ್ಕೆ ಧಾರಿಯಾವುದು? ಭಾಷಾ ವೈಷಮ್ಯ ತೊಡೆಯಲು ಯಾರು, ಯಾವುದು ಸಹಾಯಕ? ಉತ್ತರ—ಕನ್ನಡ ಸಂಘ, ಮಲೆಯಾಳೀ ಸಂಘಗಳಂತಹ ಸಂಸ್ಥೆಗಳು ಪರಭಾಷಾ ಪ್ರಾಂತ್ಯದಲ್ಲಿ ದುಡಿಯುವ, ಇತರ ಭಾಷಾ ಜನತೆಯು, ಮಾತೃ ಭಾಷೆಯ ಮೇಲಿನ ಹೆಮ್ಮೆಯಿಂದ, ಪ್ರೀತಿ, ಗೌರವದಿಂದ ಅನರ ಭಾಷೆಯನ್ನು ದ್ವೇಷಿಸಲಿಲ್ಲ! ತನ್ನದೊಂದು ಸಂಘವನ್ನು ಸ್ಥಾಪಿಸಿ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳನ್ನು ಆಚರಿಸುವುದು ಇಂದು ತೀರ ಸಾಮಾನ್ಯವೆನಿಸಿದೆ. ಈ ದಿಶೆಯಲ್ಲಿ ಮಲೆಯಾಳೀ ಸಂಘಗಳು ಬಹಳಷ್ಟು ಮುಂದಿರುವುದೆ. ಕೇವಲಭಾಷಾಭಿಮಾನದಲ್ಲಷ್ಟೆ ಅಲ್ಲ, ವಿಶ್ವದಾದ್ಯಂತವೂ ಮಲೆಯಾಳೀ ಸಂಸ್ಕೃತಿಯ ಹರಡುವುದರಲ್ಲೂ, ಇತರ ಭಾಷೆಗಳನ್ನಾಡುವ ಜನರಲ್ಲಿ ಸ್ವಭಾಷಾ ಜ್ಞಾನವನ್ನು ತುಂಬುವುದರಲ್ಲೂ ಇವು ಸಹಾಯಕವಾಗಿವೆ. ಈ ಮಲೆಯಾಳೀ ಸಂಘಗಳು ತಮ್ಮ ಚಟುವಟಿಕೆಗಳ ವರದಿಯನ್ನು ಪ್ರಸಿದ್ಧ ಮಲೆಯಾಳೀ ಪತ್ರಿಕೆಗಳಲ್ಲಿ ಪ್ರಕಟಿಸುತ್ತವೆ. ಈ ವರದಿಗಳನ್ನು ಕೇರಳದ ಮಲೆಯಾಳಿಗಳು ಬಹಳ ಗೌರವಾದರಗಳಿಂದ ಓದುತ್ತಾರೆ.

ಇತ್ತೀಚೆಗೆ ಕನ್ನಡಿಗರಲ್ಲೂ ಈ ತರದ ಸಂಘ ಸಂಸ್ಥಗಳನ್ನು ಸ್ಥಾಪಿಸುವ ಉತ್ಸಾಹ ಬಹಳಷ್ಟು ಕಾಣಬರುವುದು ಸ್ವಾಗತಾರ್ಹ.ಮುಂಬೈಯಂತಹ ನಗರಗಳಲ್ಲಿ ಹಲವಾರು ಕನ್ನಡ ಸಂಘಗಳು ಹಬ್ಬಿಕೊಂಡು ಉತ್ತಮ ಸಮಾಜ ಸೇವೆ, ಭಾಷಾ ಸೇವೆ ಗೈಯುತ್ತಿವೆ. ಯಾಸ್ಪಗಾವಬಯಲಾಟ, ಹಂಕಿತ್ತೆ, ಸುರಂದರ ದಾಸರಂತಹ ಕನ್ನಡ ಸಂತರ ಪುಣ್ಯ ಸಮಾರಂಭಗಳನ್ನೂ ನಡೆಸಿ ಕನ್ನಡ ಸಾಂಸ್ಕೃತಿಕ ಪ್ರಜ್ಞಾರಕ್ಕೆ ಬಹಳಷ್ಟು ನೆರವಾಗುತ್ತಿವೆ—ಈ ಸಂಘಗಳು. ಕನ್ನಡ ಪ್ರಸಿದ್ಧ ಲೇಖಕರನ್ನೂ, ಕವಿಪರ್ಯರನ್ನು ಗೌರವಿಸಿ, ಅದರಿಸುವ ಪುಣ್ಯ ಕಾರ್ಯವನ್ನೂ ಈ ಹೊರನಾಡ ಕನ್ನಡಿಗರು ಗೈದು ಪ್ರಶಂಸಾಪಾತ್ರರೆನಿಸಿದ್ದಾರೆ. ಕನ್ನಡೇತರ ನಾಗರಿಕರಿಗೆ ಕನ್ನಡ ಸಂಸ್ಕೃತಿಯ ರಸವುಣಿಸುವುದಷ್ಟೆ ಅಲ್ಲ, ಕನ್ನಡಗ್ರಂಥಗಳನ್ನೂ, ಪತ್ರಿಕೆಗಳನ್ನೂ ಇಲ್ಲಿ ದಾಕಿ ಉತ್ತಮ ಗ್ರಂಥ ಶಾಲೆಯನ್ನೂ ಅಲ್ಲಿ ಸ್ಥಾಪಿಸಲಾಗಿವೆ. ಒಂದೆರಡು ಕನ್ನಡ ಪತ್ರಿಕೆಗಳನ್ನೂ ಈ ಮುಂಬೈ ಕನ್ನಡಿಗರ ಸಂಘವು ಹೊರಡಿಸುತ್ತಿದೆಯೆಂಬಾಗ ಈ ಹೊರನಾಡ ಕನ್ನಡಿಗರ ಸಾಹಸ ಶ್ಲಾಘನಾರ್ಹ.

ಪರಭಾಷಾ ಪ್ರಾಂತ್ಯಗಳಲ್ಲಿ ಕನ್ನಡವನ್ನು ಕಲಿಯಲು ಅಭಿರುಚಿಯುಳ್ಳ ಪರಭಾಷೆಯನ್ನಾಡುವವರಿಗೆ, ಕನ್ನಡವನ್ನು ಅಲ್ಪ ಸ್ವಲ್ಪ ಕಲಿಸಿ ಕೊಡುವ ಕಾರ್ಯವನ್ನು ಈ ಸಂಘಗಳು ಮಾಡಬಹುದು. ಇದರಿಂದ ಕನ್ನಡೇತರರೂ ಕನ್ನಡ ಸಂಸ್ಕೃತಿಯೊಂದಿಗೆ ಒಂದಾಗಿ ರಾಷ್ಟ್ರೀಯ ಭಾವೈಕ್ಯಕ್ಕು ನಾಂದಿಯಾಡೀತು.

ಎರ್ನಾಕುಲದ ಕನ್ನಡ ಸಂಘವು ನನ್ನ ಅನುಭವಕ್ಕೆ ತೀರಾ ಹೊಸದು. ಇಲ್ಲೊಂದು ಕನ್ನಡ ಸಂಘವಿದೆ, ಬಹಳಷ್ಟು ಚಟುವಟಿಕೆಗಳ ಮೂಡುತ್ತಿದೆ ಎಂದು ತಿಳಿದಾಗಲಂತೂ ನನಗೆ ಬಹಳ ಸಂತಸವಾಯಿತು. ಈ ಸಂಘದ ಕುರಿತಾದ ಪ್ರಚಾರ ಬಹಳಷ್ಟು ಆಗಿಲ್ಲವೆಂಬುದೇ ನನಗೆ ಹೊಳೆಯುವ ಅಂಶ. ತನ್ನ ಚಟುವಟಿಕೆಗಳ ಕುರಿತಾದ ವರದಿಯನ್ನು ಮಲೆಯಾಳೀ ಸಂಘಗಳಂತೆ-ಆಗಾಗ ಕನ್ನಡ ದೈನಿಕಗಳಲ್ಲಿ ಪ್ರಕಟಿಸಿಕೊಳಿಸುವ ಕಾರ್ಯವು ಆಗತ್ಯವಾಗಿ ನಡೆಯಬೇಕಾಗಿದೆ. ಇದು ಕೇವಲ ಪ್ರಾಪ್ತಿ ಪ್ರಚಾರಕ್ಕಷ್ಟೇ ಆಗಿರದೆ, ಸ್ವಭಾಷಾ ಬಾಂಧವರಿಗೆ ಜೈತನ್ಯ ಪ್ರದವೂ ಆದೀತು. ಉದಾಹರಣೆಗೆ ಒಬ್ಬಾತಲದೇ ಪ್ರಥಮವಾಗಿ ಮೈಸೂರು ಪ್ರಾಂತ್ಯದ ಹಾಸನದಿಂದ ಎರ್ನಾಕುಲಕ್ಕೆ ಉದ್ಯೋಗ ನಿಮಿತ್ತವಾಗಿ ಬರುವನೆಂದಿಟ್ಟುಕೊಳ್ಳುವ. ಮಲೆಯಾಳ ನಡೆ ನುಡಿ ಆತನ ಪಾಲಿಗೆ ತೀರಾ ಹೊಸದು. ಎರ್ನಾಕುಲಂ ನಗರವೂ ಆತನಿಗೆ ಅಪರಿಚಿತ. ಆಗ ಆತನಿಗೆ ಸಹಾಯ ಗೈಯುವುದಾದರೆ ಕರ್ನಾಟಕದ ಸಂಘವಷ್ಟೇ. ಕನ್ನಡ ಸಂಘದ ಸದಸ್ಯರ ನೆರವಿನಿಂದ ವಸತಿ, ಸಂಪರ್ಕ ಭಾಷಾ ಸಮಸ್ಯಾಯವನ್ನೂ ಆತ ಬಯಸಿ, ಪಡೆಯುವುದು ಸಾಧ್ಯ. ಈ ದಿಶೆಯಲ್ಲಿ ಕನ್ನಡ ಸಂಘಕ್ಕೆ ಕೊಂಚ ಪ್ರಚಾರದ ಅಗತ್ಯವಿದೆ.

ಕನ್ನಡ ಸಂಘದ ವತಿಯಿಂದ ಆಗಾಗ ಕನ್ನಡ ನಾಟಕ, ಚಲಚ್ಚಿತ್ರಗಳನ್ನು ಪ್ರದರ್ಶಿಸುವುದು ಸ್ತುತ್ಯ ಕಾರ್ಯ. ಈ ಸಮಾರಂಭಕ್ಕೆ ಕನ್ನಡೇತರರನ್ನೂ ಆಮಂತ್ರಿಸುವುದು ಉತ್ತಮ. ಈ ತರದ ಸಮಾರಂಭಗಳಲ್ಲಿ ಭಾಷವಹಿಸುವ ಕನ್ನಡಿಗರಿಗೆ ತಮ್ಮ ಹುಟ್ಟೂರಿನಲ್ಲಿ ದೃಷ್ಟ ಸಂತಸ ದೊರೆಯುತ್ತದೆ. ಮನುಷ್ಯನೆಂದ ಮೇಲೆ ಆತನಿಗೆ ಹುಟ್ಟೂರು ಬಹಳ ಪ್ರಿಯ; ಮಾತೃ ಭಾಷೆ ಅಮೃತ ಪ್ರದಾಯಿನೀ. ಎರ್ನಾಕುಲಂ ನಗರವೇ ಇರಲಿ, ಮುಂಬೈ ಮಹಾ ನಗರವೇ ಆಗಲಿ, ಮೈಸೂರು ಪ್ರಾಂತದ ಹಳ್ಳಿಯಿಂದಾಗಮಿಸಿದ ಓರ್ವ ಉದ್ಯೋಗಸ್ಥನು ಅಲ್ಲಿ ವಾಸಿಸುತ್ತಾನೆಂದಿರಲ್ಲಿ. ಆತನಿಗೆ ಆಗಾಗ ಹುಟ್ಟೂರಿನ್ನ ನೆನಪು ಮರುಕಳಿಸಿ, ಸ್ವಭಾಷಾ ನಾಟಕ, ಚಲಚ್ಚಿತ್ರ ಕಾಣಲು ತವಕವಾಗುವುದಿದೆ. ಯಕ್ಷಗಾನ ಬಯಲಾಟದಿಕಾಣಲೂ, ಕನ್ನಡ ಸಂತರ ಕುರಿತಾದ ಹರಿಕಥೆ ಕೇಳಲೂ ಬಯಕೆಯಾಗುವುದೂ ಇದೆ. ಆಗ ಆತನು ಮೊರೆಹೋಗುವುದು ಸ್ಥಳೀಯ ಕನ್ನಡ ಸಂಘವನ್ನೇ.

ಪರ ಪ್ರಾಂತ್ಯದಲ್ಲಿ ಇರಲಿ, ಪರ ದೇಶದಲ್ಲೆ ಇರಲಿ, ಸ್ವಭಾಷೆಯನ್ನಾಡುವ ಇಬ್ಬರು ಅಪರಿಚಿತರು ಅಕಸ್ಮಾತ್ ಭೆಟ್ಟಿಯಾದಾಗ ಅವರಲ್ಲೇಳುವ ಆತ್ಮೀಯ ಮೈತ್ರಿಯೆಷ್ಟು! ಅವರಿಗಾಗುವ ಆನಂದ ವೆಷ್ಟು!! ಕನಿಷ್ಟ ಪಕ್ಷ ವಾರಕ್ಕೊಂದಾವರ್ತಿಯಾದರೂ ಪರಸ್ಪರ ಒಬ್ಬರನ್ನೊಬ್ಬರು ಕಾಣುವ ಬಯಕೆ ಅವರಿಗೇಳುತ್ತದೆ. ಈ ರೀತಿ ಹಲವು ಕನ್ನಡಿಗರು ಉದ್ಯೋಗ ನಿಮಿತ್ತ ಎರ್ನಾಕುಲಂನಲ್ಲಿ ನೆಲೆಸಿ, ಒಂದಾಗಿ ಕನ್ನಡ ಸಂಘವನ್ನು ಸ್ಥಾಪಿಸಿ, ಆಗಾಗ ಒಂದುಗೂಡಿ ಮಾತೃಭಾಷೆಯ ಸವಿಯನ್ನುಂಡು, ಪರಸ್ಪರ ಪರಿಚಯಗೊಳ್ಳುವುದರಲ್ಲಿ ಅತ್ಮೀಯ ಆನಂದವೇ ಅನುಭವಕ್ಕೆ ಬರುತ್ತದೆ.

ಕೇವಲ ಕನ್ನಡಿಗರಿಗಾಗಿಯಷ್ಟೆ ಅಲ್ಲದೆ ಇತರ ಆಸಕ್ತ ಪರಭಾಷಾ ನಾಗರಿಕರನ್ನು ಕನ್ನಡ ಸಂಘದ ಸಂಪರ್ಕಕ್ಕೆ ಬರುವಂತೆ ಮಾಡುವುದು ಉತ್ತಮ. ಇದರಿಂದ ಪರಸ್ಪರ ಸಂಸ್ಕೃತಿಯ ಮಿಶ್ರಣವಾಗಿ ಭಾಷಾ ದ್ವೇಷವು ಇಲ್ಲವಾಗಿ, ಭಾರತದ ಇನ್ನತ ಭಾಷಾ ಸಂಕೀರ್ಣತೆಯಿಂದ ಮುಕ್ತಗೊಂಡುಏಕ್ಯಗೊಳ್ಳುವುದರಲ್ಲಿ ಸಂಶಯವಿಲ್ಲ. ಕನ್ನಡ ಸಂಘವೂ ಇದೇ ದಿಶೆಯಲ್ಲಿ ದುಡಿಯುವುದಂತು ಹಾರೈಕೆ.

ಕನ್ನಡಾಂಬೆಗೆ ಜಯವಾಗಲಿ

ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಣ ತಪಸ್ವಿ ಶ್ರೀ ಎಂ. ವಾಸುದೇವ ರಾಯರ ಕೃತಿಗಳು

(ಐದನೇ ಪುಟದಿಂದ)

ಭಾಷಾನುವಾದವು ಮದ್ರಾಸ್ ವಿಶ್ವವಿದ್ಯಾಲಯದ ನಿರ್ದೇಶದಲ್ಲಿ ಇವರಿಂದ ಬರೆಯಲಾಗಿದೆ. (1954ಇ). ಬೆಂಗಳೂರ ಸೆಂಟ್ರಲ್ ಕಾಲೇಜಿನ ಭೂವಿಜ್ಞಾನ ಮುಖ್ಯೋಪಾಧ್ಯಾಯ ಪ್ರೊ! ಎಲ್. ರಾಮರಾಯರು ಅಧಿಕೃತರಾಗಿ ಇದನ್ನು ಪರಿಶೋಧಿಸಿದ್ದು, ಹದಿನೈದು ಪ್ರಕರಣಗಳಲ್ಲಿ 'ಮಾನವ ಪೂರ್ವಜ ಆವನ ವಂಶಜರಿಗೆ ಅರ್ಥಮಾಡಿಕೊಳ್ಳಲು ಸಾಧ್ಯವೆನಿಸಿದ ಪ್ರಮುಖ ವಿಷಯಗಳನ್ನೆಳೆಗೊಂಡ ಭೂತಿಹಿಪ್ಪದ ಕಥೆ'ಯಾಗಿದೆ. ಸಮನ್ವೇಷಣ ವಿಚಾರವಿದು.

4) 'ಭಾರತದ ಸಂಕ್ಷಿಪ್ತ ಚರಿತ್ರೆ' ಯೂ ಅದೊಂದು ಇವರಿಂದ ಅನುವಾದಿತ ಕೃತಿಯು (1951ಇ). ಮೈಸೂರು ವಿಶ್ವವಿದ್ಯಾಲಯದ ಇತಿಹಾಸ ಶಾಖಾಧಿಕಾರಿಗಳಾದ ಪ್ರಾ। ವಿ. ರಾಘವೇಂದ್ರರಾಯರು ಇದನ್ನು ಅಧಿಕೃತರಾಗಿ ಪರಿಶೋಧಿಸಿದರು. ಇದರ ಮೂಲ ಕೃತಿಯಲ್ಲಿಯೂ ದರೋ, "ಭಾರತೀಯ ಸಂಸ್ಕೃತಿಯ ವಿಕಾಸ ಮತ್ತು ಅನುಕ್ರಮವಾಗಿ ಪರಕೀಯ ಸಂಪರ್ಕಗಳಾದಾಗ ಸಂಭವಿಸಿದ ಪ್ರತಿ ಕ್ರಿಯೆ ಇವಕ್ಕೇನೆ ಹೆಚ್ಚು ಗಮನ ವಿಡಲು ಸಾಧ್ಯವಾದುವಂತ ಗೌಣ ವಿಷಯಗಳನ್ನೆಲ್ಲಾ ಬಿಟ್ಟು ಬಿಡಬೇಕಾಗಿ ಬಂತು' ಇದು ಕೇವಲ ಅನುವಾದ ಕೃತಿ, ಆ ಗ್ರಂಥಕರ್ತರ ನಿಲುಮೆ ಇಲ್ಲಿ ಪ್ರತಿಗೊಂಡಿದೆ. ಆದರೂ "ಇದನ್ನು ಬರೆದು (ಅನುವಾದಿಸಿ) ಮುಗಿಸಿದುದು 1949 ದಶಂಬರದಲ್ಲಿ.ಅನುವಾದ ಕಾರ್ಯಕ್ಕೆ ದೊರೆತ ಸಮಯಾಭಾವದ ಕಾರಣದಿಂದಲೂ, ಅನುವಾದಕನ ಅನಭಿಜ್ಞತೆಯಿಂದಲೂ ಈ ಅನುವಾದದಲ್ಲಿ ಹಲವಾರು ಲೋಪ ದೋಷಗಳಿರ ಬಹುದು. ಸಹೃದಯರಾದ ಓದುಗರು ಅದನ್ನು ಮನ್ನಿಸಬೇಕಾಗಿ ಬಿನ್ನಹ"ವೆಂದು ಪ್ರಾಂಜಲ ಮನಸ್ಸಿಂದಲೆ ಹೇಳಿದ್ದಾರೆ. ಪ್ರಾಚೀನದಿಂದ ಅರ್ವಾಚೀನದ [ಬ್ರಿಟಿಷರ ಆಳಿಕೆಯಲ್ಲಿ ಭಾರತವೆಂಬವರೆಗೆ] ಚರಿತ್ರೆಯಿಲ್ಲಿದೆ. 56 ಪ್ರಕರಣಗಳಲ್ಲಿ ವಿವರಿಸಲಾದ ಈ ಕೃತಿಯು 420ಕ್ಕೂ ಮಿಕ್ಕಿದ ದೊಡ್ಡ ಪುಟಗಳಲ್ಲಿ ಅಚ್ಚಾಗಿದೆ. [ಇವೆಲ್ಲಾ [4] ಗ್ರಂಥದಳು ಮುದ್ದಾಗಿ ಮಂಗಳೂರು ಶಾರದಾ ಮುದ್ರಣಾಲಯದಲ್ಲಿ ಅಚ್ಚಾದುವೆಂಬುದೂ ಉಲ್ಲೇಖನೀಯವೇ.ಸೈ!]ಶ್ರೀವಾಸುದೇವರಾಯರು ಇನ್ನು ಮುಂದಯೂ ವಿಶೇಷ ಸಕ್ತಿಯಿಂದ ಓದಿ ಹಲವು ಉತ್ತಮ ಕೃತಿಗಳ ರಚಕರೂ, ಅನುವಾದಕರೂ ಆಗಲೆಡೆಯಿದೆ! ಕನ್ನಡ ವಿಶ್ವಕೋಶಕ್ಕೆ ಇವರು ಭೂಗೋಲಿಕ ಲೇಖನವೊದಗಿಸಿದುದೂ, ಡಿಲ್ಲಿಯ ಸಮಿತಿಗೆ ಪ್ರತಿನಿಧಿಯಾಗಿ ಮೈಸೂರಿಂದ ಹೋದುದೂ ಇದಕ್ಕೆ ಸಾಕ್ಷಿಯಾವೆಗಳಾಗಿವೆ. ಶ್ರೀಯುತರ ಜೀವನ ಸುಖವಾಗಿ ಸಾಗಲೆಂದೂ ಹಾರೈಸೋಣ!

ಸುಮನಸ್ಕತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ

ಶೇವಹಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಠಿ

ಠಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

READ & ADVERTISE IN
NAVAYUGA WEEKLY

ಬಾಲ ಮುಂದು, ನಾಯಿ ಹಿಂದು

(ನಾಳ್ಕನೇ ಸುಟದಿಂದ)

"ಬೇಡ ಬೇಡ ಯೂರು ಹಾಗನ್ನುತ್ತಾರೆ? ಆದ್ರೆ, ಹೀಗೇ ಆದರೆ, ಮುಂದೇನೂಂತ?"

"ನೋಡಮ್ಮ, ರಾಣದ ಮುಂದಿನದನ್ನು ನಮ್ಮ ನಮ್ಮಗೆ ನೆನೆದು ಆಳುವುದೇಕೆ? ಬದುಕಿಗೂ ಒಂದು ಅರ್ಥವಿದೆ. ಆ ಅರ್ಥವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡೋದು.... ಆದ್ರುಲ್ಲೂ ಜನು ನಿಗುತ್ತೇಂತ ಗ್ಯಾರಂಟಿಯೇನು?"

"ಹ್ಞೂಂ....ಅದೂ ಇಲ್ಲ. ಸಕ್ಕೆಯನ್ನ ಹಂದ ಮೇಲೆ...."

"ಅದು ಸರಿ. ಆದಕ್ಕೆ ಪ್ರಾಯಶ್ಚಿತ್ತ ಮಂಗಬೇಕಾದ್ರೆ, ಇನ್ನೂ ಕಟ್ಟು ನಿಟ್ಟಿನಂದ ಇರಬೇಕು...."

'ಇದು ತಪ್ಪಲ್ಯರ್ಯ...'

"ಮತ್ತೆಂಥದು? ಪೊಳ್ಳು ರಾಜಕಾರಣಾಂತ ತಿಳಿದಿದ್ಯಾ?"

"ರಾಜಕೀಯ? ಯಾಕೆ?"

"ರಾಜಕೀಯದ ಚಂದ ನೋಡು, ಒಂದು ನೀತಿಯಿಲ್ಲ, ರೀತಿಯಿಲ್ಲ, ಮತಿಯಿಲ್ಲ ಗತಿಯಿಲ್ಲದವರೇ ರಾಜ ನೀತಿಯಲ್ಲಿ ತಲೆ ಹಾಕುತ್ತಾರೆಯೇಂತ ಸಂದೇಹ..."

"ಅದು ಸರಿನ್ನಿ. ನೋಡಿ, ಪಶ್ಚಿಮ ಬಂಗಾಳದ ಕತೆ ಧಾರಿ ಚಲೋದು. ರಾಜ್ಯಪಾಲರು ಅಜಯ ಮುಖರ್ಜಿಯವರ ಸಂಪುಟವನ್ನು ಕಿತ್ತು ಹಾಕಿದುದು, ವಿಧಾನ ಸಭೆಯನ್ನು ಕರೆದುದು ಅನ್ಯಾಯ ಅಂತ ಸ್ವೀಕರ್ ಬೆನರ್ಜಿಯವರು ರೂಲಿಂಗ್ ನೀಡಿ, ಸಭೆಯನ್ನು ಮುಂದುವರಿಸಿರಂತೆ!'

"ನೋಡು, ಅಲ್ಲಿನ ರಾಜ್ಯಕೀಯದೇ ಒಂದುತರ. ರಾಷ್ಟ್ರಪತಿಗಳು ತನಗೆ ಬೇಕಾದರೆ ಸುಪ್ರೀಂ ಕೋರ್ಟಿನ ಸಲಹೆ ಕೇಳಬಹುದು; ಅಟರ್ನಿ ಜನರಲ್ಲರ ಸಲಹೆ ಪಡೆಯಬಹುದು. ಆದರೆ, ಅವರು ಸಲಹೆ ಪಡೆಯಬೇಕೆಂದು ಆಡಳಿಯ ಮುಖರ್ಜಿ ಸಂಪುಟ ಅವರಿಗೆ ನಿರ್ದೇಶನಿಸಲು ಮುಂದೆ ಬಂದಿತು".

"ಹ್ಞೂಂ....ಆದನ್ನು ರಾಷ್ಟ್ರಪತಿಗಳಿಗೆ ರಿಂದ್ಯಏಂಬರ ಮೂಲಕ ಕಳಿಸಿದೆ ನೇರವಾಗಿ ಕಳಿಸಿತ್ತಂತೆ...."

'ಈಗ ಎಂತ್ರೂಂದು. ವಿಧಾನ ಸಭೆಯ ಅಧ್ಯಕ್ಷರು ಸರಕಾರವನ್ನು ಮನ್ಸಿಸುವ ಬಿಡುವ ಅಧಿಕಾರ ತೋರಿಸಿದ್ದಾರೆ..."

'ಅಲ್ರಿ, ವಿಧಾನ ಸಭಾಧ್ಯಕ್ಷರು ಸಭೆಯ ಕಾರ್ಯಕಲಾಪಗಳನ್ನು ನಿಯಂತ್ರಣ ಮಾತ್ರ ಜುಗಿಸುವುದಷ್ಟೇ ಮಾತಬೇಕ್ಷಿನೆ ರಾಜ್ಯಪಾಲರನ್ನು ಟೀಕಿಸುವುದು ಹೇಗೆ ನ್ಯಾಯ?'

'ಅದೇ ಅಂದದ್ದಲ್ಲಾ! ಬಂಗಾಳದ ನರೆಭಕ್ಷಕ ಹುಲಿಗಳು ಮೂರಾಬಟ್ಟೆ ಹಾರುತ್ತಿವೆ. ಅವನ್ನು ಸಂದಾಗಿ ಹೇಗ್ತೆತರುವುದು ಎಂಬುದೇ ಪ್ರಶ್ನೆ...'

'ನ್ಯಾಯಯನ್ನು ತ್ಕೇಳುವ ಅಧಿಕಾರ ಬಾಲಕ್ಕಿದೆಯೇ ಎಂಬುದು ಈಗ ಎದ್ದ ಮೂಲಭೂತ ಪ್ರಶ್ನೆ.'

'ಕೇಳಬಾರದೆಂದೇನು, ಬಾಲಕ್ಕೆ ಹೆಚ್ಚಾಗಿಯೋ ಮತ್ತೆ ಕೆಲವು ಕಾರಣದಿಂದಲೋ ಅದು ನಾಯಿಯ ಗಮನವನ್ನು ತನ್ನತ್ತ ಹರಿಸಬಹುದು. ಅದೇನೇ ಇದ್ದರೂ ನಾಯಿ ಮುಂದೆ ಅದರ ಹಿಂದೆ ಬಾಲ, ನಾಯಿಗೆ ಬಾಲವನ್ನು ಕಡಿಯುವ ಅಧಿಕಾರವಿದೆ, ಬೇರೆ ಬಾಲವನ್ನು ಕಟ್ಟಿಕೊಳ್ಳುವ ಅಧಿಕಾರವೂ ಇದೆ.'

'ಆದರೆ ನೋಡಿ, ಬಾಲ ಬೀಗಿ ಕೇವಾದರೆ, ನಾಯಿಯ ಪ್ರಾಣವನ್ನೂ ಅಪಹರಿಸಬಹುದಲ್ಲ...'

'ಹ್ಞೂಂ...'

'ಹಾಗಿರುವಾಗ ನಾಯಿ—ಬಾಲಗಳು ಒಂದಾಗಿರಬೇಕು; ಅನ್ಯೋನ್ಯವಿರಬೇಕು.'

'ವಿರಸ ಮೂಡಿದಾಗ ಬಾಲವನ್ನು ಕಡಿದುಕೊಳ್ಳಲೂ ಬಹುದು ನಾಯಿ...'

'ಹ್ಞೂಂ....ಅದು ಸರೀನಿ. ರಾಜ್ಯಪಾಲರು ಮಂತ್ರಿ ಮಂಡಳದ ಸಲಹೆಯಂತೆ ರಾಜ್ಯಭಾರ ಮಾಡುತ್ತಾರೆ. ಆದರೆ ಮುಖ್ಯ ಮಂತ್ರಿಯನ್ನು ನೇಮಿಸುವವರು ರಾಜ್ಯಪಾಲರು. ಅವರು ಇಷ್ಟ ಪಡುವಷ್ಟು ಕಾಲ ಮಾತ್ರ ಒಟ್ಟನು ಮುಖ್ಯ ಮಂತ್ರಿಯಾಗಿರಬಲ್ಲನು."

"ಧರ್ಮವೀರರ ಧರ್ಮ ಚಕ್ರದ ಆಕ್ಷನೇ ಇದು...."

"ಹ್ಞೂಂ...ಅಂತೂ ಒಂದು ಸೋಜಿಗದ ಮುಂದೆ ವಿಸ್ತ್ರೂಂದು ಸೋಜಿಗ..."

"ನೋಡೋಣ, ಮುಂದೇನಾದೀತೂಂತ...."

"ಆಗೋದೇನು?..."

"ಅಯ್ಯೋ...!"

"ಶ್ಯೂ...."

—ಗೋರಾ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
P and S. C 36/1967.

ಶ್ರೀಮತಿ ಕಮಲ S. ಸಿಟ್ಟಿ—ಅರ್ಜಿದಾರಳು
ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ;—

ಅರ್ಜಿದಾರಳ ಗಂಡ ಹಂಲಿ ಮೃತಪಟ್ಟ ರಾವ ಶ್ರೀ H. S. ಶೆಟ್ಟಿಯವರಿಗೆ ಬಿಂಜಕ್ಕೆ ಸಂದ್ರಿ ಅರ್ಜಿಯಲ್ಲಿ ಕಾಣಿಸಿದ ಐವೇಜನ್ನು ಮತ್ತು ಸೊತ್ತನ್ನು ವಸೂಲು ಮಾಡುವರಿತ ಪಡಕೊಳ್ಳುವರಿತ ಸರ್ಕಾಸೇತನ್ ಸರ್ಟಿಫಿಕೇಟ್ (Succession Certificate) ಕೊಡಿಸಬೇಕಾಗಿ ಅರ್ಜಿದಾರರು ದಾಕಲು ಮಾಡಿದ ಸದ್ರಿ ಅರ್ಜಿಯು ತಾ. 9—1—1968 ಕ್ಕೆ ನೋಟೀಸಿನ ಬಗ್ಗೆ ಇಟ್ಟರುತ್ತದೆ. ಆಕ್ಷೇಪ ಇದ್ದವರು ಸದ್ರಿ ದಿನ ಬೆಳಿಗ್ಗೆ ಗಂಟೆ 10 ಕ್ಕೆ ಸರಿಯಾಗಿ ಮೇಲ್ಕಂಡ ಕೋರ್ಟಿಗೆ ಮುಂದಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ದಲ್ಲಿ ತಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ಕಾರ್ಯನಿತಲ್ಲಾಯಿತು ಎಂತಕೋರ್ಟ್ ಹುಕುಂ ಪ್ರಕಾರ ತಿಳಿಸಿಯಿದೆ.

Vittala Shetty, Perody
Advocate for the Petitioner
ಉಡುಪಿ, ತಾ. 1—12—67.

ದೈವಜ್ಞ ಬ್ರಾಹ್ಮಣರ ಸಂಘದ ವಾರ್ಷಿಕೋತ್ಸವ

ಮಂಗಳೂರು, ದೈವಜ್ಞ ಬ್ರಾಹ್ಮಣರ ಸಂಘ, [ರಿಜಿಸ್ಟರ್ಡ್.] ಮಂಗಳೂರು ತಾ. ಇದರ ವಾರ್ಷಿಕೋತ್ಸವವು ತಾ. 26—11—67ರಲ್ಲಿ ಸ್ಥಳೀಯ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಶ್ರೀ ಯು. ಲಕ್ಷ್ಮಣ ಶೆಟ್ಟಿ, ಎಕ್ಸಿಕ್ಯುಟಿವ್ ಇಂಜಿನಿಯರ್, ಉಡುಪಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. 1967—1968ರ ವರ್ಷಕ್ಕೆ, ಈ ಕೆಳಗಿನವರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಶ್ರೀಗಳಾದ ಎಸ್. ಎಲ್. ಶೆಟ್ಟಿ (ಅಧ್ಯಕ್ಷ), ಕೆ. ಕೆ. ಆರ್. ಶೆಟ್ಟಿ, (ಉಪಾಧ್ಯಕ್ಷ) ಎಸ್. ಲಕ್ಷ್ಮೀನಾರಾಯಣ ಶೆಟ್ಟಿ (ಕಾರ್ಯದರ್ಶಿ) ಎಂ. ಸಾಬ್ಬರಾವ್, (ಉಪಕಾರ್ಯದರ್ಶಿ) ಬಿ. ವಾಸುದೇವ ಶೆಟ್ಟಿ, (ಕೋಶಾಧಿಕಾರಿ) ಯು. ಸುಬ್ರಾಯ, ಸಿ. ಪಾಂಡುರಂಗ ಶೆಟ್ಟಿ, ಎಸ್. ಸಂಜೀವ ಶೆಟ್ಟಿ, ಎಸ್. ಸಂಜೀವ ಶೆಟ್ಟಿ, ಎಮ್. ವಿ. ಕಾರೇಕರ್, ಕೆ. ಭೂಸ್ವರ ಶೆಟ್ಟಿ, ಎಸ್. ವಾಸುದೇವ ಶೆಟ್ಟಿ, ಯು. ಗೋಪಾಲ ಕೃಷ್ಣ ಶೆಟ್ಟಿ, ಎಸ್. ನಾಗೇಶ ಶೆಟ್ಟಿ, [ಸದಸ್ಯರುಗಳು]

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಎಸ್. ಎಲ್. ಶೆಟ್ಟರವರು ಈ ಹಿಂದೆ ತಾವಾಗಿಯೆ ವಾಗ್ದಾನ ಮಾಡಿದ ಸ್ಕಾರರ ಸಂಘಕ್ಕಾಗಿ ಒಂದು ಕಲ್ಯಾಣ ಮಂದಿರದ ಕಟ್ಟಡವನ್ನು ಏನೂಣವಾಮಡಿಸುವೆನೆಂದು ರೂ. 10000 [ಹತ್ತು ಸಾವಿರ]ವನ್ನು ತಮ್ಮ ಮಾತ್ರ ತಮ್ಮ ಧರ್ಮಪತ್ನಿಯವರ ಜೆಸರಿನಲ್ಲಿ ಚೆಕ್ ಮೂಲಕ ದಾನವಿತ್ತರು. ಕಲ್ಯಾಣ ಮಂದಿರದ ಕಾರ್ಯವು ಬೇಗನೆ ಸೂಣಗೊಳ್ಳುವಂತೆ ಸಮಾಜದ ಬಾಂಧವರೆಲ್ಲರೂ ತನು, ಮನ, ಧನಗಳಿಂದ ಸಹಕರಿಸಿದಲ್ಲಿ ತಾನು ಇನ್ನೂ ಹೆಚ್ಚಿನ ಸಹಾಯ ನೀಡುವೆನೆಂದು ಸೂಚಿಸಿದರು. ಶ್ಲಾಘನೀಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಈ ಕೆಳಗಿನವರ ಒಂದು ಸಮಿತಿಯನ್ನು ರಚಿಸಲಾಯಿತು.

ಶ್ರೀಗಳಾದ ಎಸ್. ಎಲ್. ಶೆಟ್ಟಿ [ಅಧ್ಯಕ್ಷ] ಎಸ್. ಸಂಜೀವ ಶೆಟ್ಟಿ, (ಕಾರ್ಯದರ್ಶಿ) ಕೆ. ಕೆ. ಆರ್. ಶೆಟ್ಟಿ, (ಕೋಶಾಧಿಕಾರಿ) ಎಸ್. ಲಕ್ಷ್ಮೀನಾರಾಯಣ ಶೆಟ್ಟಿ, ಬಿ. ವಾಸುದೇವ ಶೆಟ್ಟಿ, ಎಸ್. ಶ್ರೀಧರ ರಾವ್, ಎಂ. ಸುಬ್ಬರಾವ್, ಯು. ಸುಬ್ರಾಯ, ಬಿ. ನಾರಾಯಣರಾವ್ [ಸದಸ್ಯರುಗಳು] ಸಂಘದ ಪರವಾಗಿ ಶ್ರೀ ಎಸ್. ಸಂಜೀವ ಶೆಟ್ಟರವರು ಧನ್ಯವಾದ ಅರ್ಪಣೆ ಮಾಡುತ್ತ, ಶ್ರೀ ಎಸ್. ಎಲ್. ಶೆಟ್ಟರವರು ಸಂಘಕ್ಕೆ ಮಾಡಿದ ಉದಾರ ದಾನಕ್ಕಾಗಿ ಉಪಕಾರ ಸ್ಮರಣೆ ಮಾಡಿದರು.

ಇದೀಗಲೇ ಹೊಸತಾಗಿ ತೆರೆಯಲ್ಪಟ್ಟಿದೆ.

ನೇತ್ರ ರಕ್ಷಣೆಗಾಗಿ— ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ
ಅತ್ಯಾಧುನಿಕ ಆಕರ್ಷಕ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)

Phone: 261448

The only Qualified optometrist of South

Shetty's Optics & Contact Lens Clinic

London, Qualified Optometrists

೭ ಈಗೆನ್ ಬೋಸ್ ಸ್ಟ್ರೀಟ್, ಬಾಡುಸಾರ್ ಗೇಟ್ ಪೋಸ್ಟ್ ಆಫೀಸಿನ ಎದುರು

ಬೊಂಬಾಯಿ-೧.

ಲಂಡನ್ ಕರಬೇತಾದ ಹಾಗೂ ಜಡದ್ಯಾಟ್ಟಣುಭವವುಳ್ಳ ನೇತ್ರ ತಜ್ಞರಿಂದ ನೇತ್ರ ಪರೀಕ್ಷೆ.

ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು.

ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವಾನ ಗಳಿಗೆ ಆದ್ಯೆಕ್ಷ ಭಾಗಗಳಿರುವ 'ಬೈಲೆಕ್ಸ್ ಲೆನ್ಸ್'ನ ತಜ್ಞರು.



(ಮೂರನೇ ಪುಟದಿಂದ)

ಹಿಕ್ಕಿಸರ ಮೂಗ್ರದರ್ಶನವೂ ಜನತೆಗೆ ಲಭಿಸುತ್ತಿದೆ' ಎಂದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಸುರಾಣರವರು ಮಾತನಾಡಿ 'ಜಗತ್ತಿನಲ್ಲಿ ಶ್ರೇಷ್ಠ ಸಂಸ್ಕೃತಿಗಳಿರುವಂತೆಯೇ ಮೌಢ್ಯ-ಬ್ರಷ್ಟಾಚಾರಗಳೂ ಇವೆ. ಸಾಹಿತಿ ಒಳಿತು ಕೆಡುಕುಗಳೊಡನೆ ಸಂಬಂಧ ಸ್ಥಾಪಿಸುತ್ತಾನೆ. ಹಸ್ತ ಜನರೊಡನೆ ಬೆರೆತು ಅರಿಯುವ ನೋವು ವೇದನೆಗಳನ್ನು ಸಾಹಿತಿಯು ಯಥಾವತ್ತಾಗಿ ಚಿತ್ರಿಸ ಬೇಕು. ಎಲ್ಲರೂ ಬಯಸುವ ಸಾಂಂಡರ್ಯದ ಪ್ರೇರಣೆಯನ್ನು ಕೊಡಲು ಸಾಹಿತಿ ಸಮಾಜಕ್ಕೆ ನೀಡಬೇಕು ಸಮಾಜಕ್ಕೆ ಭದ್ರವಾದುದನ್ನು ಮಾಡುವ ಸಾಹಿತ್ಯ ನರ್ಮಾಣವಿಂದಾಗ ಬೇಕು" ಎಂದು ನುಡಿದರು.

"ಹಳದು ಕಿನ್ನರಿಯಲ್ಲಿ ಹೊಸತು ಹಾಡನುಕ್ಕಿಸು" ಮತ್ತು "ಸಾಹಿತ್ಯದಲ್ಲಿ ಸೌಂದರ್ಯ ನಿರೂಪಣೆ" ಎಂಬ ವಿಷಯಗಳನ್ನು ಕುರಿತು ಶ್ರೀಗಳಾದ ಜವರೇಗೌಡ್ರ, ಜಾಂತಿಕೇರಿಯ್ಯ, ವೃಷಭೇಂದ್ರ ಸ್ವಾಮಿ, ಅಜ್ಜಾರಾಯ, ಇಂದಿರಬ್ಬ, ಕೃಷ್ಣಮೂರ್ತಿ ಪುರಾಣಿಕ, ಧರ್ಮೇಂದ್ರಯ್ಯ ಮತ್ತು ಶ್ರೀಮತಿ ಅನ್ನಪೂರ್ಣಮ್ಮನವರು ಮಾತನಾಡಿದರು. ಶ್ರೀಮತಿ ಆರ್. ಎಸ್. ಜಾನಕಿ ಮತ್ತು ಮಂಡಳಿಯವರ ಸಂಗೀತ, ಶ್ರೀಮತಿ ಅನ್ನಪೂರ್ಣಮ್ಮ ರಘುಪತಿ ಶಾಸ್ತ್ರಿಯವರಿಂದ ಶಾಸ್ತ್ರವಾಚನ, ಕು. ಲತಾ ಮತ್ತು ಕು. ತಾರಾರಿಂದ ನೃತ್ಯ, ಕು. ಉಷಾ ಮತ್ತು ಕು. ಶಶಿಯವರಿಂದ ಭೇವರ ನಾಮ ಕೀರ್ತನೆಯೂ ನಡೆಯಿತು.

ರಾಜ್ಯಪಾಲ ಪಾರಕ ಮತ್ತು ಶ್ರೀ ಸಿದ್ದಯ್ಯ ಪುರಾಣಿಕರಿಗೆ ಸನ್ಮಾನ ಪತ್ರಗಳನ್ನೂ ಅರ್ಪಿಸಲಾಯಿತು.

ಶ್ರೀ ಎಂ. ವಾಸುದೇವರಾಯರಿಗೆ ಸನ್ಮಾನ

ಸುರತ್ಕಲ್, ನವಂಬರ್ 24, ಸುರತ್ಕಲ್ ಕೇಂದ್ರಶಿಕ್ಷಣಾಧಿಕಾರಿಯಾಗಿ ರಾಷ್ಟ್ರಪ್ರಶಸ್ತಿ ವಿಜೇತ ಶ್ರೀ ವಾಸುದೇವರಾಯರಿಗೆ ಸರ್ವದಿಸಿದ್ದ ಸತ್ಕಾರ ಕೂಟದಲ್ಲಿ ಮಾತನಾಡುತ್ತಾ, ಜನತೆಯು ತನ್ನವರನ್ನು ಪ್ರೋತ್ಸಾಹಿಸಲು ಕಲಿಯಬೇಕು, ವಾಸುದೇವರಾಯರಂಥಾ ಉತ್ತಮ ಶಿಕ್ಷಕರಿಗೆ ರಾಷ್ಟ್ರ ಪ್ರಶಸ್ತಿ ದೊರೆಯದ್ದು ಸುರತ್ಕಲ್ ಕೇಂದ್ರಕ್ಕೆ ಹೆಮ್ಮೆಯಲ್ಲದೆ, ಇಡೀ ಜಿಲ್ಲೆಗೇ ಒಂದು ಹೆಮ್ಮೆಯ ವಿಷಯ ಎಂದು ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಟಿ. ಎ. ಪೈ ಗಳವರು ಹೇಳಿದರು.

ಗೌರವಾರ್ಪಣ ಭಾಷಣದಲ್ಲಿ ಡಾ॥ ಎ. ಎಸ್. ಆಡ್ಯಯವರು ಶ್ರೀಯುತರಿಗೆ ಪುಷ್ಪ ಹಾರ್ಪಿಸಿದರು. ಪರಿಚಯ ಭಾಷಣದಲ್ಲಿ ಸಿಥಳೀಯ ಪಂಚಾಯತ್ತಿನ ಸದಸ್ಯ ಶ್ರೀ ಕೆ. ಎಸ್. ಎನ್., ಅಡಿಗರು ಶ್ರೀಯುತರು ಪೈ ಸ್ಕೂಲ್‌ಗಳಲ್ಲಿದ್ದಾಗಿನ ಅದರ್ಶರೀತಿ, ಮಾಧ್ಯಮ ವಿಶ್ವವಿದ್ಯಾನಿಲಯದಿಂದ ಇವರ ಗ್ರಂಥಗಳಿಗೆ ದೊರೆತ ಬಹುಮಾನವನ್ನು ಸ್ಮರಿಸಿದರು. ವಿಧಾನ ಸಭಾ ಸದಸ್ಯರಾದ ಶ್ರೀ ಬಿ. ಎಂ. ಇದಿನಬ್ಬರು, ಕುರಾನಾನಲ್ಲಿ ವಿವರಿಸಲಾಗಿರುವ ಗುರುವಿನ ಮಹತ್ವವನ್ನು ತಿಳಿಸಿ, ಶ್ರೀಯುತರು ಲೇಖನಗಳ ಕುರಿತು ಪ್ರಶಂಸಿದರು. ಶ್ರೀ ಯು. ಪದ್ಮನಾಭ ಭಟ್ಟರು, ಶ್ರೀ ವಾಸುದೇವರಾಯರ ಗುಣಗಾನ ಮಾಡುತ್ತಾ, ಅವರ ಅತ್ಯುತ್ತಮ ಮಾತನ್ನು ಖ್ಯಾತಿಸಿ, ಅವರು ಬರೆದಿರುವ "ಡಕ್ಷಿಣ ಭಾರತ ಖಸಜ ಸಂಪತ್ತು' ಎಂಬ ಪುಸ್ತಕದ ಮುನ್ನುಡಿಯನ್ನು ಉಲ್ಲೇಖಿಸಿ ಶ್ರೀಯುತರ ನಾಲ್ಕು ಉಪ್ಪಿಂಥಗಳನ್ನು ಪ್ರಶಂಸಿದರು.

ಶ್ರೀ ವಾಸುದೇವರಾಯರು ಸನ್ಮಾನಕ್ಕೆ ಉತ್ತರಿಸುತ್ತಾ, ವಿದ್ಯಾದಾನವು ಸೇವೆಯು ತನ್ನ ಕರ್ತವ್ಯವೆಂದೂ, ಇನ್ನು ಮುಂದೂ ತನ್ನ ಕೈಲಾದಷ್ಟು ಶಿಕ್ಷಣ ಕ್ಷೇತ್ರದಲ್ಲಿ ಸೇವೆಯನ್ನು ಮಾಡಲು ಪರಮಾತ್ಮನು ಅನುಗ್ರಹಿಸಲಿ, ಎಂದಾಶಿಸುತ್ತಾ ಕೃತಜ್ಞತೆಯನ್ನು ಅರ್ಪಿಸಿದರು.

ಸ್ವಾರಂಭದಲ್ಲಿ ಕುಮಾರಿ ಚಂದ್ರಕಲಾ ಪ್ರಾರ್ಥಿಸಿ ಮಾಡಿದರು. ಶ್ರೀ ಯುಂ. ವೆಂಕಟ್ರಮಣರಾಯರು ಸ್ವಾಗತಿಸಿದರು. ಈ ಸತ್ಕಾರ್ಯದ ಉದ್ದೇಶ ಜನತೆಯ ಸಹಕಾರವನ್ನು ವಿನಂತಿಸಿದರು. ಶ್ರೀ ಚಂದ್ರಶೇಖರ ಕೆಟ್ಟರು ಸಂದೇಶಗಳನ್ನು ವಾಚಿಸಿದರು. ಅಮಂತಾಸಿನ ಪಂಚಾಯತುಗಳು, ವಿವಿಧ ಸಂಘಗಳು ಸಾಹಿತ್ಯಮಿತ್ರ ಮತ್ತು ಸಾರ್ವಜನಿಕ ಮುಖಂಡರು ಶ್ರೀ ವಾಸುದೇವರಾಯರಿಗೆ ಹಾರಾರ್ಪಣೆ ಮಾಡಿದರು. ಸನ್ಮಾನ ಪತ್ರವನ್ನು ಡಾ॥ ಎ. ಎಸ್. ಆಡ್ಯಯವರು ಅರ್ಪಿಸಿದರು. ಅಧ್ಯಕ್ಷರು ಶ್ರೀ ಟಿ. ಎ. ಪೈಗಳವರು, ಜನತೆಯ ವತಿಯಿಂದ ಕಂಚಿನ ಸಂಭಾವನೆಯನ್ನು ಏರ್ಪಿಸಿದರು.

ಕೊನೆಗೆ ಶ್ರೀಮಾಬಾಮೂರ್ತಿರವರು ಈ ಸಮಾರಂಭವನ್ನು ಯಶಸ್ವಿಯಾಗಿಸಿಕೊಟ್ಟವರಿಗೆ ಮಹನೀಯರುಗಳಿಗೆಲ್ಲಾ ಕೃತಜ್ಞತೆಯನ್ನು ಸಾಚಿಸಿದರು.

ಲಾ ಕಾಲೇಜ್ ಕಟ್ಟಡದ ಉದ್ಘಾಟನೆ

ಉಡುಪಿ, ೧೯ಜಿ೨೦ರಲ್ಲಿ ಎಳೆಡೆಮಿ ಆಫ್ ಜನರಲ್ ಎಜುಕೇಶನ್, ಮಣಿಪಾಲದ ಆಶ್ರಯದಲ್ಲಿ ಆರಂಭವಾದ ಉಡುಪಿ ಲಾ ಕಾಲೇಜಿನ ಹೊಸ ಕಟ್ಟಡದ ಉದ್ಘಾಟನೆಯು ರಾಜ್ಯಪಾಲ ಜಿ. ಎಸ್. ಪಾಠಕರಿಂದ ತಾ. ೨೨ರಂದು ನೆರವೇರಿತು. ರಿಜಿಸ್ಟ್ರಾರ್ ಪದ್ಮಶ್ರೀ ಮೂಧನ ಪೈಯವರು ಸ್ವಾಗತಿಸಿದ ಬಳಿಕ ವಿದ್ಯಾರ್ಥಿ ಅಧ್ಯಕ್ಷ ಶ್ರೀ ಶ್ರೀಧರ ಅಂಬಾರರು ಸಂದೇಶವೀಯಲಿದರು.

ವಿದ್ಯಾರ್ಥಿಗಳು ನ್ಯಾಯ ಶಾಸ್ತ್ರದನ್ನು ನಿಷ್ಣೆಯಿಂದ ಆಳವಾಗಿ ಅಭ್ಯಸಿಸ ಬೇಕೆಂದು ಕರೆ ನೀಡಿದ ರಾಜ್ಯಪಾಲರು ಎಳೆಡೆಮಿಯ ಹಾಗೂ ಡಾ॥ ಪೈಯವರ ಸೇವೆಯನ್ನು ಹೃತ್ಪೂರ್ವಕ ಶ್ಲಾಘಿಸಿದರು.

ಪ್ರಿನ್ಸಿಪಲ್ ಶ್ರೀ ಡಿ. ಜಿ. ದೇಶಪಾಂಡೆಯವರು ವಂದನಾರ್ಪಣೆಗೈದರು.

ಉಚಿತ ವಾರ್ಡ್ ಉದ್ಘಾಟನೆ

ಮಣಿಪಾಲದ ಕಸ್ತೂರ್ಬಾ ಜನರಲ್ ಹಾಸ್ಪಿಟಲ್‌ನಲ್ಲಿ 'ದಾನವಾಗಿ ನೀಡಿದ ಹಾಸಿಗೆ'ಗಳ ಉಚಿತ ವಾರ್ಡನ್ನು ತಾ. ೨೨ರಂದು ರಾಜ್ಯಪಾಲ ಶ್ರೀ ಜಿ. ಎಸ್. ಪಾಠಕರು ಉದ್ಘಾಟಿಸಿದರು. ರಿಜಿಸ್ಟ್ರಾರ್ ಡಾ॥ ಮೂಧನ ಪೈಯವರು ಸ್ವಾಗತ ಭಾಷಣ ಮಾಡುತ್ತ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಹುಟ್ಟು ಬೆಳವಣಿಗೆಗಳನ್ನೂ ಆಸ್ಪತ್ರೆಯ ಪ್ರಗತಿಯನ್ನೂ ವಿವರಿಸಿ ಸದ್ಯ ಉದ್ಘಾಟನೆಯಾಗಲಿರುವ ಉಚಿತ ವಾರ್ಡಿನ ತಲಾ ರೂ. 1000ವನ್ನು ನೀಡಿದ ೧೪ ದಾನಿಗಳ ನೆರವಿನಿಂದಾಗಿದೆಂದು ಹೇಳಿದರು. ರಾಜ್ಯಪಾಲರು ಆಸ್ಪತ್ರೆಯ ಯಶಸ್ಸನ್ನು ಹಾರೈಸಿದರು. ಸರ್ವಾಂಗೀಣ ಪ್ರಗತಿಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಆಸ್ಪತ್ರೆಯ ಸಾಲಿಸಿಟೆಂಡೆಂಟ್ ಡಾ॥ ಸಿ. ಎಚ್. ಶಿವರಾಮನ್ ಧನ್ಯವಾದರ್ಪಿಸಿದರು.

ಉಡುಪಿಯಲ್ಲಿ ನಾಟಕ ಸ್ಪರ್ಧೆ

ಉಡುಪಿ, ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನವರು ಮುಂದಿನ ಜನವರಿ ತಿಂಗಳಲ್ಲಿ ನಾಮಾಂಕಿತ ಕನ್ನಡ ನಾಟಕ ಪ್ರದರ್ಶನದ ಸ್ಪರ್ಧೆಯನ್ನು ಏರ್ಪಡಿಸಲಿದ್ದಾರೆ.

ಉಡುಪಿ ತಾಲೂಕಿನಲ್ಲಿರುವ ಕಲಾವಿಲಾಸಿ ತಂಡಗಳು ಹಾಗೂ ವಿದ್ಯಾ ಸಂಸ್ಥೆಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಇದೆ. ಒಂದು 'ರೋಲಿಂಗ್ ಶೀಲ್ಡ್'ನ್ನು ಪ್ರಥಮ ಬಹುಮಾನ ಪಡೆದ ನಾಟಕಕ್ಕೆ ಕೊಡಲಾಗುವುದಲ್ಲದೆ ಉತ್ತಮ ಅಭಿನಯ, ಹಾಡುಗಾರಿಕೆ ಇತ್ಯಾದಿ ವೈಯಕ್ತಿಕ ಬಹುಮಾನಗಳನ್ನೂ ನೀಡಲಾಗುವುದು. ಸ್ಪರ್ಧೆಗೆ 7 ನಾಟಕಗಳನ್ನು ಮಾತ್ರ ಆರಿಸಲಾಗುವುದು ನಾಲ್ಕಕ್ಕಿಂತ ಕಡಿಮೆ ಪ್ರವೇಶ ಅಪೇಕ್ಷೆ ಬಂದಲ್ಲಿ ಸ್ಪರ್ಧೆಯನ್ನು ರದ್ದು ಮಾಡುವ ಸಂಭವನೀಯ.

ಸ್ಪರ್ಧೆಯ ಸಂಚಾಲಕರಾಗಲು ಉಡುಪಿಯ ರಂಗಭೂಮಿ [ರಿ] ಒಪ್ಪಿರುವುದರಿಂದ ಅವರು ಸ್ಪರ್ಧೆಯಲ್ಲಿ ಭಾಗವಹಿಸುವುದಿಲ್ಲ. ಇತರ ಎಲ್ಲಾ ನಿಯಮ ಮತ್ತು ವಿವರಗಳನ್ನು ರಂಗಭೂಮಿ ಕಾರ್ಯದರ್ಶಿಗಳಿಂದ ಪಡೆಯಬಹುದಾಗಿ ತಿಳಿದು ಬರುತ್ತದೆ.

ಮನೆಯಲ್ಲಿ ಕ್ಷಯ ನಿರೋಧಕ ಔಷಧಗಳ ಕ್ರಮಬದ್ಧ ಸೇವನೆಯಿಂದ ಕೂಡಿದ ಚಿಕಿತ್ಸೆಯು ಸೆನಿಟೋರಿಯಂಗಳಲ್ಲಿ ಪಡೆದ ಚಿಕಿತ್ಸೆಯಷ್ಟೇ ಪರಿಣಾಮಕಾರಿಯಾಗಿದೆ. ಕ್ಷಯ ನಿರೋಧಕ ಔಷಧಗಳನ್ನು ಪಡೆದುಕೊಳ್ಳಲು ಅಶಕ್ತರಾದ ರೋಗಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅವನ್ನು ಧರ್ಮಾರ್ಥ ಒದಗಿಸ ಬೇಕು. ಇದಕ್ಕಾಗಿ ಈ ಕೆಳಗಿನವುದಕ್ಕೆ ಅತ್ಯವಶ್ಯವಾಗಿವೆ—

1. ಸುಸಜ್ಜಿತವಾದ, ಸಾಕಷ್ಟು ಶಿಬಂದಿಯುಳ್ಳ ಪರ್ಮಾಪ್ತ ಪ್ರಮಾಣದ ಔಷಧಿಗಳುಳ್ಳ ಟಿ ಬಿ ಕ್ಲಿನಿಕಿನ ಸೇವೆ. ಮನೆಯಲ್ಲಿನ ಚಿಕಿತ್ಸೆಯಷ್ಟು ಕ್ಲಿನಿಕಿನ ಶಿಬಂಧಿಯು ಪರಿಶೀಲಿಸಬೇಕು. ಮತ್ತು ಔಷಧಿಗಳನ್ನು ಕ್ರಮವಾಗಿ ಸೇವಿಸಬೇಕು.

2. ಕ್ಲಿನಿಕ್ ಮತ್ತು ಖಾಸಗಿ ವೈದ್ಯರು, ಇತರ ಹೆಲ್ತ್ ಏಜನ್ಸಿಗಳು ಮತ್ತು ವೈದ್ಯಕೀಯ ಸೇವೆಗಳ ನಡುವೆ ನಿಕಟ ಸಹಕಾರ.

3. ಅಗತ್ಯವುಳ್ಳ ರೋಗಿಗಳಿಗೆ ಸಹಾಯವೊದಗಿಸಲು ಮತ್ತು ಕ್ಲಿನಿಕಿಗೆ ವಿಶೇಷವಾಗಿ ಬೆಂಬಲ ನೀಡಲು ಸ್ವಯಂ ಸೇವಕ ಕೆಲಸಗಾರರ, ಕೇರ್ ಮತ್ತು ಆಫ್ಟರ್ ಕೇರ್ ಏಜನ್ಸಿಗಳ ಸೇವೆ.

ಇದು ಕ್ಷಯ ರೋಗ ಮೊಹರು ಮಾರಾಟ ಚಳವಳಿಯ ಕಾಲ. ಕ್ಷಯ ರೋಗ ಮೊಹರುಗಳನ್ನು ಕೊಳ್ಳಿರಿ ಮತ್ತು ಕ್ಷಯರೋಗದೊಡನೆ ಹೋರಾಡಲು ನೆರವಾಗಿರಿ.

ಒಂದು ಮೊಹರಿನ ಬೆಲೆ—
10 ಪೈಸೆ ಮಾತ್ರ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟಿಬಿ ಎಸೋಸಿಯೇಶನ್, ಮಂಗಳೂರು ಮತ್ತು ಇತರ ವಿವಿಧ ಏಜನ್ಸಿಗಳಲ್ಲಿ ಮೊಹರುಗಳು ಸಿಗುತ್ತವೆ.

18ನೇ ಕ್ಷಯ ರೋಗ ಮೊಹರು ಮಾರಾಟ ಚಳವಳಿ

(ಅಖಿಲ ಭಾರತ ಕ್ಷಯರೋಗ ಸಂಸ್ಥೆ, ನವದೆಹಲಿ ಇವರಿಂದ ಪ್ರಚೋದಿತ)

ಸ್ಥಳದಾನಿಗಳು:
Navin Chandra Mafatlal Charity Trust,
Bombay.

ಶ್ರೀ ಧನ್ವಂತರಿ ಜಯಂತಿ

ನಂಜನಗೂಡು, ತಾ. 29—11—67ರಂದು ಸದ್ವೈದ್ಯ ಶಾಲಾ (ಪ್ರೈವೇಟ್) ಲಿ. ನ ಧನ್ವಂತರಿ ಫಾರ್ಮಸಿಯಲ್ಲಿ ಶ್ರೀ ಧನ್ವಂತರಿ ಜಯಂತಿಯನ್ನು ಎಂದಿನಂತೆ ವಿಜೃಂಭಣೆಯಿಂದ ನೆರವೇರಿಸಲಾಯಿತು. ಪ್ರೊ. ಎಸ್. ಎಸ್. ರಾಘವಾಚಾರ್ ಅವರ ಭಾಷಣ, ಸಂಗೀತ ವಿದ್ವಾನ್ ಶ್ರೀ ಸಲಭ್ಯಾವಂದನಂ ಎಸ್. ಶ್ರೀನಿವಾಸರಾಯರ ಸಂಗೀತ ಕಚೇರಿ ಮೊದಲಾದ ಕಾರ್ಯಕ್ರಮಗಳಿದ್ದವು.

ನೆಹರೂ ಸ್ಮಾರಕ ಲೈಬ್ರೇರಿಯ ಉದ್ಘಾಟನೆ

ಮಣಿಪಾಲ, ನವೆಂಬರ 25, ಮಣಿಪಾಲದಲ್ಲಿ ಎಳೆಡೆಮಿಯ ಆಶ್ರಯದಲ್ಲಿ ನೂತನವಾಗಿ ರಚಿಸಲ್ಪಟ್ಟ ನೆಹರೂ ಸ್ಮಾರಕ ಲೈಬ್ರೇರಿಯ ಉದ್ಘಾಟನಾ ಸಮಾರಂಭವನ್ನು ರಾಜ್ಯದ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಆರ್. ಎಂ. ಪಾಟೀಲರು ನೆರವೇರಿಸುತ್ತಾ ಯೋಗ್ಯ ಮುಂದಾಳತ್ವವನ್ನು ನಿರ್ವಿವಾದವು ದೇಶದ ಅವಶ್ಯಕತೆಗಳಲ್ಲೊಂದು, ಈಗಿನ ಶಿಕ್ಷಣ ಪದ್ಧತಿಯು ಅಮೂಲಾಗ್ರ ಬದಲಾಗ ಬೇಕು, ಮತ್ತು ಜ್ಞಾನಾರ್ಜನೆಗೆ ಅವಶ್ಯವಾದುದು ಈ ಪುಸ್ತಕ ಭಂಡಾರ ಎಂದು ಹೇಳಿದರು. ಕೃಷಿ ಸಮಸ್ಯೆಯ ಕುರಿತೂ ಪ್ರಸ್ತಾಪಿಸುತ್ತಾ, ಕೃಷಿ ಕರಿಗೆ ಕೃಷಿ ಆಧಿವೃದ್ಧಿಗಾಗಿ ಸಾಲ ಕೊಡುವ ಯೋಜನೆಯನ್ನು ಪ್ರಶಂಸಿಸಿ ಈ ಯೋಜನೆಯ ಮೂಲ ಪುರುಷ ಶ್ರೀ ಟಿ. ಎ. ಪೈಗಳವರು ಇಟ್ಟ ದಿಟ್ಟ ಹೆಜ್ಜೆ ಆಧನಂದನಾರ್ಹ ಎಂದರು.

ಆರಂಭದಲ್ಲಿ ಎಳೆಡೆಮಿ ರಿಜಿಸ್ಟ್ರಾರರಾದ ಡಾ॥ ಟಿ. ಮೂಧನ ಪೈಗಳವರು ಸ್ವಾಗತಿಸಿ ರೂ. 1ಲಕ್ಷ 60ಸಾವಿರ ವೆಚ್ಚದಲ್ಲಿ ನರ್ಮಿತವಾದ ಈ ಕಟ್ಟಡಕ್ಕೆ ಕೇಂದ್ರ ಸರಕಾರವು ರೂ. 80ಸಾವಿರ ನೆರವು ನೀಡಿದೆ ಎಂದು ನುಡಿದರು. ಈ ಕಟ್ಟಡದಲ್ಲಿ ಯುನೆಸ್ಕೋ ವಿಭಾಗವನ್ನು ಏರ್ಪಡಿಸಿರುವುದು ಮೂಲಕ್ಕಷ್ಟಿದೆ, ಚಲಿಟ್ಟಿಶ್ರೀ ಪ್ರದರ್ಶನಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ ಎಂದರು.

ಶ್ರೀ ಟಿ. ಎ. ಪೈಗಳವರು ಒಡಿನ ಮಹತ್ವದ ಕುರಿತು ಪ್ರಸ್ತಾಪಿಸಿ, ಒಡುವ ಮನನ ಮಾಡಿಕೊಳ್ಳುವ ಪ್ರವೃತ್ತಿಯನ್ನು ನಾವು ಬೆಳಸಿಕೊಳ್ಳಬೇಕೆಂದರು.

ಡಾ॥ ವಜ್ರಣ್ಣಯವರು ಮಣಿಪಾಲದ ಜೂನಿಯರ್ ಚೇಂಬರಿನ ಪರವಾಗಿ ಪುಸ್ತಕದ ಪುಸ್ತಕವನ್ನು ಅರ್ಪಿಸಿದರು. ಶ್ರೀ ಟಿ. ರ ಮೇಜ್ ಪೈಯವರು ಲೈಬ್ರೇರಿಗೆ ದಾನ ಮಾಡಿದವರಿಗೆ ಕೃತಜ್ಞತೆ ಸಲ್ಲಿಸಿದರು. ಶ್ರೀ ಗೋವಿಂದ ಧನ್ವಂತರಿ ಎಂ. ಎಲ್. ಎ. ಅವರು ಹೂತನಾಡಿದ ನಂತರ ಡಾ. ಶಾಂತಾರಾಮರವರು ವಂದನಾರ್ಪಣೆ ಮಾಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ಕೆ. ಕೆ. ಶೆಟ್ಟರ ಆಯ್ಕೆ

ತಾ. 26—11—67ರಂದು ಜರಗಿದ ಜಿಲ್ಲಾ ಕಾಂಗ್ರೆಸ್ ಸಮಿತಿಯ ಹೊಸ ಸದಸ್ಯರ ಸಭೆಯಲ್ಲಿ ಶ್ರೀ ಕೆ. ಕೆ. ಶೆಟ್ಟರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಪುಟ ಸಂಖ್ಯೆ 16ರಂತೆ ಇದ್ದರೂ ಈ ಸಂಚಿಕೆಯಲ್ಲಿ ಬರೇ 12 ಪುಟಗಳನ್ನೆ ಪ್ರೇ ಕೊಡಲಾಗಿದೆ.

WANTED

Wanted a Sec. grade trained teacher to serve in the A. P. Aided Elem. School, Handady, Brahmavar (S. K.) on a temporary Post up to May 1968. Apply before 9—12—67 with a copy to the Inspector of Schools, Udipi Range.

Correspondent,
A. P. Aided School, Handady,
Brahmavara

ತಾಯಿ - ಮಗಳು

(ಎರಡನೇ ಪುಟದಿಂದ)

ಬೇಸರಗಳಿರಲಿಲ್ಲ. ಆದರೆ ಅಮ್ಮ ನನ್ನ ಅಭಿಪ್ರಾಯ ಆಸೆ ಆಕಾಂಕ್ಷೆಗಳಿಗೆ ಪ್ರತಿ ಹೇಳುತ್ತಾಳೆ ಎನ್ನುವ ಭಾವನೆ ಅವಳ ಮನಸ್ಸಿನಲ್ಲಿ ಬೆಳೆದಿತ್ತು.

ಮೋಹನರಾಯರು ಸುಪ್ರಸಿದ್ಧ ವೈದ್ಯರಾಗಿದ್ದಂತೆಯೇ ಸಮೂಜದಲ್ಲಿ ಗಣ್ಯ ವ್ಯಕ್ತಿ, ಆದರ್ಶವಾದ ಎಂದು ಕೀರ್ತಿ ಪಡೆದಿದ್ದರು. ಅವರದು ನಿಸ್ವಾರ್ಥ ಸೇವೆ. ಅಂತಃಕರಣ ಪೂರ್ಣ ಹೃದಯ. ರೋಗಿಗಳನ್ನು ತಮ್ಮ ಬಂಧುಗಳಂದೇ ಭಾವಿಸಿ ಚಿಕಿತ್ಸೆ ನಡೆಸುತ್ತಿದ್ದರು. ಅವರು ಮಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದರು. 'ತಮ್ಮ ಮಗಳು ವಿದ್ಯಾವಂತೆ, ಅವಳು ಅನುಚಿತ ಮಾರ್ಗ ಅನುಸರಿಸುವುದಿಲ್ಲ. ಅವಳ ಆಸೆ—ಆಕಾಂಕ್ಷೆಗಳಿಗೆ ಅಡ್ಡಿ ಪಡಿಸುವುದು' ಬೇಡ ಎಂದು ನಿರ್ಧರಿಸಿದ್ದರು.

ಶಾರದಮ್ಮನವರಿಗೆ ಪತಿ ಮತ್ತು ಮಗಳ ಬಗ್ಗೆ ಯಾವ ಬಗೆಯ ದ್ವೇಷವೂ ಇರಲಿಲ್ಲ. ತನ್ನ ಮನದ ಅಭಿಪ್ರಾಯವನ್ನು ಇಬ್ಬರೂ ಅರ್ಥಮಾಡಿ ಕೊಳ್ಳುವುದಿಲ್ಲ ಎಂದು ಮರುಗುತ್ತಿದ್ದರು.

ಪ್ರಸಾದ್ ಎಂ. ಎ. ತರಗತಿಯ ಕೊನೆಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ. ಅವನದು ಬಹುಮುಖ ಪ್ರತಿಭೆ. ತನ್ನ ಉತ್ಕೃಷ್ಟ ಲೇಖನಗಳ ಮೂಲಕ, ಭಾಷಣಗಳ ಮೂಲಕ ಚಿರ ಪರಿಚಿತನಾಗಿದ್ದ. ಅವನ ಉನ್ನತ ಆದರ್ಶ ಗುಣಗಳನ್ನು ಕಂಡು ಆನಂದಿಸಿದವರಲ್ಲಿ, ಆಕರ್ಷಿಸಲ್ಪಟ್ಟವರಲ್ಲಿ ಲಕ್ಷ್ಮಿಯು ಒಬ್ಬಳು. ಲಕ್ಷ್ಮಿ ಅವನಿಗೆ ಮೂರು ಹೂಗಲು ಅವನ ನಿಷ್ಕಪಟ, ಸರಳ ಮನೋಭಾವವೇ ಮುಖ್ಯ ಕಾರಣ. ಲಕ್ಷ್ಮಿಯ ಗುಣ, ಸೌಂದರ್ಯಗಳು ಅವನನ್ನು ಬಲವಾಗಿ ಆಕರ್ಷಿಸಿದ್ದವು. ಅವರಲ್ಲಿ ಸ್ನೇಹ, ಸಲುಗೆಗಳು ಇದ್ದರೂ ಅವರ ನೇರೆಲೆ ಕಳಂಕ ಹೊರಿಸಿ ದೂಷಿಸುವಂತಿರಲಿಲ್ಲ.

ಲಕ್ಷ್ಮಿ ಸಂಕೋಚವಿಲ್ಲದೆ ತನ್ನ ಅಭಿಪ್ರಾಯವನ್ನು ತಿಳಿಸಿದಾಗ "ಯಾವ ಆಧಾರವೂ ಇಲ್ಲದೆ ಮುಂದಡಿ ಇಡಲು ನಾ ಧೈರ್ಯವಿಲ್ಲ. ನನಗೆ ಉದ್ಯೋಗ ಮೊರೆಯುವ ತನಕ ಈ ಚಿಂತೆ ಬೇಡ. ಇನ್ನೆ ನಿನ್ನ ತಂದೆ-ತಾಯಿ ಒಪ್ಪುವರೋ ಇಲ್ಲವೋ! ನೀನು ಶ್ರೀಮಂತ ಮನೆಯಲ್ಲಿ ಹುಟ್ಟಿ ಬೆಳೆದವಳು. ಬಡತನದಲ್ಲಿನ್ನ ಬಾಳ್ವೆಯೇ ಹಿತವೆಂದು ನಿಶ್ಚಿತವಾಗಿ ಹೇಳಲಾರೆ. ಮುಂದೆ ಒಳ್ಳೆಯ ಸಂಗ ಒದಗಿ ಬರಬಾರದೆ' ಎಂದು ಪ್ರಸಾದ.

'ನನ್ನ ಅಪೇಕ್ಷೆ, ಆಸೆಯನ್ನು ತಂದೆ ತಾಯಿ ಖಂಡಿತ ವಿರೋಧಿಸುವುದಿಲ್ಲ. ನಮ್ಮ ಮತಿಸುತ್ತಾರೆ' ಎಂದು ತಿಳಿಸಿದಳು ಲಕ್ಷ್ಮಿ.

ದಿನದಿನಕ್ಕೆ ಅವರ ಸ್ನೇಹ ಬೆಳೆಯುತ್ತಿತ್ತು.

ಲಕ್ಷ್ಮಿ ಪ್ರಸಾದನನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತಾಳೆ ಎಂಬುದನ್ನು ಮೋಹನರಾಯರು ಅರಿತರು.

— ೩ —

ಆಕಸ್ಮಿಕವಾಗಿ ಆಸ್ಪತ್ರೆಗೆ ತಮ್ಮನ್ನು ಭೇಟಿ ಮಾಡಲು ಬಂದ ಪ್ರಸಾದನನ್ನು ಮೋಹನ ರಾಯರು ಹಾರ್ದಿಕವಾಗಿ ಸ್ವಾಗತಿಸಿದರು.

"ಅಪರೂಪವಾಗಿ ಇಷ್ಟು ದೂರ ಬಂದಿರಲ್ಲ ಪ್ರಸಾದ್"

"ನಿಮ್ಮನ್ನು ನೋಡಿ ಹೋಗಲು ಬಂದೆ"

'ನನ್ನಿಂದ ಏನಾದರೂ ಸಹಾಯವಾಗುವುದಿತ್ತೆ? .... ಸಂಕೋಚವಿಲ್ಲದೆ ಹೇಳಿ. ಕೈಲಾದ ಸಹಾಯ ಮಾಡುತ್ತೇನೆ.... ಹಣ ಬೇಕಿತ್ತೆ"

'ಅಂತಹ ಅಗತ್ಯವೇನೂ ಇಲ್ಲ ಸಾರ್'

'ನಿಮ್ಮ ಸಮೀಪದ ಬಂಧುಗಳು ಯಾರಾದರೂ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದಾರೇನು?' ಎಂದರು ಮೋಹನರಾಯರು.

'ಇಲ್ಲ ಸಾರ್' ಎಂದು ತಲೆ ಅಲುಗಿಸಿ ಪ್ರಸಾದ "ಎಂ. ಎ. ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದೇನೆ ಸಾರ್. ಹೇಳಿ ಹೋಗಲು ಬಂದೆ' ಎಂದ ಪ್ರಸಾದ.

ಮೋಹನ ರಾಯರು ಅವನ ಕೈ ಕುಲುಕುತ್ತಾ 'ಕಂಗ್ರಾಜುಲೇಷನ್ ಮಿ. ಪ್ರಸಾದ್' ಎಂದು ಸಂತೋಷದಿಂದ ನುಡಿದರು.

ಮತ್ತೊಂದು ದಿನ ಮೋಹನರಾಯರು ಪ್ರಸಾದನನ್ನು ಪಾರ್ಕಿನಲ್ಲಿ ಸಂಧಿಸಿದರು. ಇಬ್ಬರೂ ಕಲ್ಲು ಬೆಂಚೊಂದರ ಮೇಲೆ ಕುಳಿತರು.

'ಮುಂದ ಎಲ್ಲಿಯಾದರೂ ಯತ್ನಿಸಿದ್ದೀರಾ ಪ್ರಸಾದ್' ಎಂದರು ಮೋಹನರಾಯರು.

'ನಾಲ್ಕಾರು ಕಾಲೇಜುಗಳಿಗೆ ಅರ್ಜಿ ಸಲ್ಲಿಸಿದ್ದೇನೆ. ಸೆಂಟ್ರಲ್ ಕಾಲೇಜಿನಲ್ಲಿ ಯೇ ಲೆಕ್ಚರ್‌ವೃತ್ತಿ ದೊರೆಯುವಂತೆ ಕಾಣುತ್ತದೆ. ಎಲ್ಲ ನಿಮ್ಮಂತಹವರ ಅಭಿವಾನ' ಎಂದ ಪ್ರಸಾದ.

"ಲಕ್ಷ್ಮಿಯೂ ಈ ವರ್ಷ ಬಿ. ಎ. ಪಾಸಾಯಿತು. ಈ ವರ್ಷ ಅವಳಿಗೆ ಯೋಗ್ಯ ಗಂಡು ನೋಡಿ ಮದುವೆ ಮಾಡಿದರೆ ನನ್ನ ಕರ್ತವ್ಯ ಮುಗಿದಂತೆ ಆಯಿತ್ತದೆ"

"ಅವರ ಕೈ ಹಿಡಿಯುವ ಗಂಡು ನಿಜಕ್ಕೂ ಭಾಗ್ಯಶಾಲಿ ಸಾರ್"

"ಎಷ್ಟು ಕಡೆ ಗಂಡುಗಳನ್ನು ನೋಡಿದರೂ ಏಕೋ ಮನಸ್ಸಿಗೆ ಒಪ್ಪುವುದಿಲ್ಲ"

"ಅದೇಕೆ ಸಾರ್?"

"ಲಕ್ಷ್ಮಿ ನಿಮಗೆ ಅಪರಿಚಿತಳೇನಲ್ಲ. ಅವಳ ಬಗ್ಗೆ ನಿಮ್ಮ ಅಭಿಪ್ರಾಯವೇನು ಪ್ರಸಾದ್?'

"ಅವರನ್ನು ಯಾವ ದೃಷ್ಟಿಯಿಂದಲೂ ಅಲ್ಲಗಳೆಯುವಂತಿಲ್ಲ. ಆದರ್ಶ ಗೃಹಿಣಿಯಾಗಿ ಬಾಳುವ ಶಕ್ತಿ ಅವರಿಗಿದೆ'

"ನಿಮ್ಮ ಪರಿಚಿತ ಮಿತ್ರರೊಬ್ಬರನ್ನು ಲಕ್ಷ್ಮಿ ಮನಸಾರ ಪ್ರೀತಿಸುತ್ತಾಳೆ ಎಂದು ತಿಳಿಯಿತು ಅವರ ಬಗ್ಗೆ ನಿಮ್ಮ ಅಭಿಪ್ರಾಯವೇನು".

"ಅವರ ಹೆಸರೇನು ಸಾರ್?"

'ಪ್ರಸಾದ್ ಅಂತ' ಎಂದು ನಗುತ್ತಾ ನುಡಿದರು ಮೋಹನರಾಯರು.

'ಸಾರ್....ನೀವು....ನನ್ನನ್ನು' ಎಂದ ಪ್ರಸಾದ.

"ನೀನೇನೂ ಹೇಳ ಬೇಕಾದುದಿಲ್ಲ ಲಕ್ಷ್ಮಿ ಎಲ್ಲವನ್ನು ಹೇಳಿದ್ದಾಳೆ' ಎಂದು ನಗುತ್ತಾ ನುಡಿದರು ಮೋಹನರಾಯರು.

ಮೋಹನರಾಯರು ಪ್ರಸಾದನ ಸಂಗತಿಯನ್ನು ತಿಳಿಸಿದರು.

"ಲಕ್ಷ್ಮಿ ಇನ್ನೂ ಹುಡುಗಿ. ಅವಳಿಗೆ ಬುದ್ಧಿ ಇಷ್ಟ' ಅಂದರೆ ನಿಮಗೂ ಬುದ್ಧಿ ಇಷ್ಟವೆ? ಹಿಂದು ಮುಂದು ಯೋಚಿಸದ ಪ್ರಸಾದ ಯೋಗ್ಯ ಅಂತ ತಿಳಿದು ಅವನ ಕೈಗೆ ಅವಳನ್ನು ಒಪ್ಪಿಸುವೆನೆ? ನಿಮ್ಮದು ಬಳ್ಳಗಿರುವುದೆಲ್ಲ ಹಾಲು ಎಂದು ನಂಬುವ ಸ್ವಭಾವ. ಎಲ್ಲಿವೆ ಆ ಹುಡುಗನಿಗೆ ವಿದ್ಯೆಯು ಏನ ಬೇರೆ ಆಸ್ತಿ ಎಸ್ಟಿದೆ?' ಎಂದರು ಶಾರದಮ್ಮ.

'ನೀನು ಲಾಗುರ ಮಗಳಾದುದಕ್ಕೂ ಸಾರ್ಥಕವಾಯ್ತು, ಶಾರದ. ನಮಗೆ ಲಕ್ಷ್ಮಿಯನ್ನು ಬಿಟ್ಟರೆ ಬೇರೆ ಯಾರಿದ್ದಾರೆ? ನಾವು ಸಂತೋಷಿಸಿರೋದು, ನಮ್ಮ ಆಸ್ತಿ ಎಲ್ಲವೂ ಲಕ್ಷ್ಮಿಗೆ ತಾನೆ ಸೇರುತ್ತದೆ. ನಮಗಿ ಲಕ್ಷ್ಮಿ ಸುಖಿಯಾಗಿರೋದು ಮುಖ್ಯ. ಅಲ್ಲದೆ ಅವಳೇ ಪ್ರಸಾದನನ್ನು ಒಪ್ಪಿಕೊಂಡಿದ್ದಾಳೆ. ಈಗ ಬೇಡವೆಂದರೆ ಇಷ್ಟದ ಹಗರಣ ಆಸ್ಪೆ' ಎಂದರು ಮೋಹನರಾಯರು.

"ನಿಮ್ಮ ಬೆಂಬಲವಿರುವಾಗ ಅವಳಿಗೇನು ಭಯ? ಎಲ್ಲದಕ್ಕು ನಾನೊಬ್ಬಳೇ ಈ ಮನೆಯಲ್ಲಿ ಕೆಟ್ಟವಳು. ಈ ಕಾಲದಹುಡುಗಿಯರ ಹಣೆಯ ಬರಹವೇ ಇಷ್ಟು. ಪ್ರೀತಿ, ಲವ್ ಅಂತ ಕೂಗಾಡುತ್ತಿದೆ. ನಮ್ಮ ಕಾಲದಲ್ಲಿ....'

"ಶಾರದ, ಫುಲ್ ಸ್ಟಾಪ್"

"ಯಾಕೆ?"

'ನೀನು ನನ್ನನ್ನು ಮದುವೆಯಾಗುವ ದಕ್ಕೆ ಮುಂಚೆ ನಿನಗೆಷ್ಟು ಆಸ್ತಿ ಇತ್ತು ನೀನೇ ಹೇಳು'

'.....'

"ನಾನು ಬಡವರ ಮನೆಯವಳು ಎಂದು ತಿಳಿದು ತಂದೆ-ತಾಯಿಯರೊಂದಿಗೆ ಜಗಳವಾಡಿ ಅವರನ್ನು ಮದುವೆಗೆ ಒಪ್ಪಿಸಿದೆ. ಕೆರೆ, ಬಾವಿಗಳಿಗೆ ಹಾರುವುದಾಗಿ ಬೆದರಿಸಿದೆ. ಆಗ ನಿನ್ನ ಕಾಲ, ಈಗ ನಿನ್ನ ಮಗಳ ಕಾಲ ಅಷ್ಟೇ ವ್ಯತ್ಯಾಸ"

'ನಾಕು ತಿಮ್ಮ ಬುದ್ಧಿಶ' ಎಂದು ಹುಸಿ ಮುನಿಸಿನಿಂದ ನುಡಿದರು ಶಾರದಮ್ಮ.

ಲಕ್ಷ್ಮಿ ಲಂಚುತ್ತಲೇ ಒಳಕ್ಕೆ ಪ್ರವೇಶಿಸಿದಳು. ಮಗಳ ಪದವಿ, ವಯಸ್ಸು ಮದುವೆಯ ಯೋಚನೆಯನ್ನು ಗಮನಿಸಿದ ಶಾರದಮ್ಮ 'ಆದೇನೆ ಲಕ್ಷ್ಮಿ ನಾಳೆ ಕೆದು ಕೊಂಡು ಬಾ ದೆ?' ಎಂದರು.

"ಏನೂ ಇಲ್ಲಮ್ಮ"

"ಅದೇನು ಹೇಳು ಅದೇಕೆ ಅಷ್ಟು ಭಯ?"

"ನಿನ್ನೂ ಇಲ್ಲಮ್ಮ ಅವರು ಬಂದಿದ್ದರು ....ಬಾಗಿಲಲ್ಲೇ ಇದ್ದರು.

"ಯಾರೇ ಅವರು?"

'ಅವರೇ ಕಡವ....ಅವರನ್ನು ಒಳಕ್ಕೆ ಕರೆಯಲೋ ಬೇಡವೋ ಅಂತ'

"ಪ್ರಸಾದನೇನೆ?'

'ಹೂನಮ್ಮ'

'ಅದೇನು ಇಷ್ಟು ಬಿಗುಮಾನ?'

"ನೀನು ಏನಂತೀಯೋ ಅಂತ"

'ಕಡೆ ಕೇಳಿಕೊಂಡು ಬಾ....ನಾಕಳ ಕನೆ ಈ ನಾಟಕ' ಎಂದರು ಶಾರದಮ್ಮ.

'ಯಾವ ನಾಟಕ ಲಕ್ಷ್ಮಿ' ಎನ್ನುತ್ತಾ ಮೋಹನರಾಯರು ಪ್ರಸಾದನೊಂದಿಗೆ ಒಳಕ್ಕೆ ಪ್ರವೇಶಿಸಿದರು.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)



ಶಕ್ತಿವರ್ಧಕ್ಕೆ, ಆರೋಗ್ಯದಾಯಕ ಪೂರ್ಣ ಉಲ್ಲಾಸಕರ ಟಾನಿಕ್ ಖಾತರಿಯಾದ ಆಯುರ್ವೇದ ವಿಧಿ ಸುಸ್ತು ಬೆಲ್ಲ ವೈದ್ಯರಿಯ ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

ಸಚಿತ್ರ ಹೊಸ ಪುಸ್ತಕ

ಲಾಲ್ ಬಹಾದುರ್ ಶಾಸ್ತ್ರಿ

ಲೇಖಕರು—
ಬಿ. ಆರ್. ಸ್ವಾಮೀಶ ರಾವ್, ಎಂ.ಎ.

ಮೈಸೂರು

ಸರಳವೂ ತ್ಯಾಗಮಯವೂ ಆದ
ಶ್ರೀ ಶಾಸ್ತ್ರಿಯವರ ಸಾರ್ಥಕ ಜೀವನದ
ಪರಿಚಯ

ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕ
ಬೆಲೆ ರೂ. 2/— ಮಾತ್ರ
ಅಂಚೆ ವೆಚ್ಚ ಪ್ರತ್ಯೇಕ

ಪ್ರತಿಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ

NAVAYUGA 7—12—1957
Registered with the Registrar of News Papers for India under No. R. N. 3546/57

REGD. No: B. G. 176
LICENCE No. 31
Licensed to Post without Prepayment

ನೀವು ತಿಳಿಯಿರಿ

ಭಾರತ - ಜರ್ಮನಿ ಸ್ನೇಹ ಸಂಬಂಧ

ಪಶ್ಚಿಮ ಜರ್ಮನಿಯು ಭಾರತದ ಮೇಲೆ ಆದರಾಭಿಮಾನವಿಟ್ಟಿದೆ. ಈ ಆದರಾಭಿಮಾನಗಳು ಎಳೆ ಪ್ರಶ್ನೆಯಾಗಿಲ್ಲ. ಉಭಯ ರಾಷ್ಟ್ರಗಳೂ ಸ್ನೇಹ ಸಂವರ್ಧನೆಗಾಗಿ ದುಡಿಯುತ್ತಿವೆ. ಎರಡೂ ಪಕ್ಷಗಳು ಭದ್ರ ಬುನಾದಿಯನ್ನು ನಿರ್ಮಿಸಿಯೇ ಈ ಸ್ನೇಹ ಭವನವನ್ನು ಕಟ್ಟುತ್ತಿವೆ.

ಇಂದಿನ ಭಾರತ—ಪಶ್ಚಿಮ ಜರ್ಮನಿಗಳ ಸ್ನೇಹ ಸೌಹಾರ್ದಗಳಿಗೆ ಸಾಂಸ್ಕೃತಿಕ ಬಂಧನ, ಆರ್ಥಿಕ ಸಹಕಾರ ಮತ್ತು ರಾಜಕೀಯ ಪ್ರಬೆಡಗೇ ಆಧಾರ ಸ್ತಂಭಗಳು ಎನ್ನಬಹುದು. ಎರಡೂ ದೇಶಗಳ ನಡುವಣ ಬಾಂಧವ್ಯವು ಶತಮಾನದಳಿ ಹಿಂದೆಯೇ ಆಳವಾಗಿ ಬೇರು ಬಿಟ್ಟಿದೆ. ಗತ ಕಾಲದಲ್ಲಿ ಎರಡೂ ದೇಶಗಳು ಸಾಮಾನ್ಯವಾಗಿ ಒಂದೇ ವಿಧವಾದ ಅನುಭವಗಳನ್ನು ಹೊಂದಿದ್ದುವು; ಎರಡೂ ದೇಶಗಳ ಆಶಯಗಳೂ ಒಂದೇ ಆಗಿದ್ದುವು. ಎಂಡರ ವ್ಯಾಜ್ಯನೇ ತಿಹಾಸಗಳೂ ಭವ್ಯವಾಗಿವೆ. ಭಾರತದಲ್ಲಿ ಮೌರ್ಯ ರಾಗೂ ಗುಪ್ತರ ಯುಗ ಮತ್ತು ಜರ್ಮನಿಯಲ್ಲಿ ಮಧ್ಯಯುಗದ ಕಾಲ ಡಾಗೂ ೧೯ನೆ ಶತಮಾನದ ಜರ್ಮನ್ ರೀಜ್‌ಗಳು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯ ಬೇಕಾದುವು. ರಾಷ್ಟ್ರದ ಪುನರುದ್ಧಾರ ಮತ್ತು ಸ್ವಾತಂತ್ರ್ಯಕ್ಕೆ ಪೇಕ್ಷೆಗಳು ಮತ್ತೆ ಮತ್ತೆ ಎಂಡೂ ದೇಶದಳನ್ನು ಹೋರಾಟಕ್ಕೆ ತಳ್ಳಿವ. ಭಾರತೀಯ ಸ್ವಾತಂತ್ರ್ಯ ಹೋರಾಟವನ್ನು ಸುದೃಷ್ಟಿಯಿಂದ ನೋಡುತಿದ್ದ ಪಶ್ಚಿಮ ಜರ್ಮನಿ ಭಾರತದ ಸ್ವಾತಂತ್ರ್ಯೋದಯಾನಂತರವೂ ಸಹಾನುಭೂತಿಯಿಂದಲೂ ನೀಕ್ಷಿಸಿತು.

ಉಭಯ ದೇಶಗಳ ಮೈತ್ರಿಯು ಹಿಂದಿನಿಂದಲೂ ಬಳಸುತ್ತ ಬಂದಿದೆ. ಭಾರತದ ಸಾಂಸ್ಕೃತಿಕ ಸಂಪದದ ಬಗ್ಗೆ ಹೆಚ್ಚು ಒಚ್ಚಾಗಿ ತಿಳಿದು ಕೊಳ್ಳಬೇಕೆಂಬ ಆಶಯದಿಂದ ಬರುವ ಜರ್ಮನ್ ವಿದ್ವಾಂಸರು, ವಿದ್ಯಾರ್ಥಿಗಳಿಗಂತೂ ಈ ಶತಮಾನದಲ್ಲಿ ಜರ್ಮನಿಗೆ ಕೇಳಿದ ಅಲ್ಲಿನ ಕಲಾ ಖಾರದ ಬಗ್ಗೆ ತಿಳಿಯಲು ಉತ್ಸಾಹಿಗಳಾಗಿರುವ ಭಾರತೀಯರ ಸಂಖ್ಯೆಯೇ ಅಧಿಕವಿದೆ.

ಈಗ ಜರ್ಮನಿಯಲ್ಲಿ ೧೪೦೦ ಭಾರತೀಯ ವಿದ್ಯಾರ್ಥಿಗಳಾಬ್ಯಸ ವಿದ್ಯಾಭ್ಯಾಸದಲ್ಲಿ ತೊಡಗಿದ್ದಾರೆ. ಸುಮಾರು೩೦೦೦ಭಾರತೀಯರು ಯೂರೋಪಿಕ ತರಬೇತಿ ಹೊಂದುತ್ತಿದ್ದಾರೆ. ಭಾರತದ ಯುವಜನರು ಜರ್ಮನ್ ಭಾಷೆಯನ್ನು ಕಲಿಯುವ ಉತ್ಸಾಹ ತೋರಿಸುವಂತೆಯೇ ಜರ್ಮನಿಯವರು ಭಾರತೀಯ ಕಲೆ, ನೃತ್ಯ, ಸಂಗೀತ ಗಳ ಬಗ್ಗೆ ಜ್ಞಾನ ಸಂವರ್ಧನೆ ಮಾಡಿಕೊಳ್ಳುವ ಆಸಕ್ತಿ ಹೆಚ್ಚುತ್ತಿದೆ. ಶಕ್ಷಲವಾಗಿ ಇಂಡೊ—ಜರ್ಮನ್ ಸ್ನೇಹ ಸಂಘಗಳು ಜರ್ಮನಿಯ ಪ್ರಮುಖ ನಗರಗಳಲ್ಲಿ ಆವಿರ್ಭವಿಸುತ್ತಿವೆ.

೧೯೫೬ನೆ ಇಸವಿ. ಜರ್ಮನಿ—ಭಾರತ ಸ್ನೇಹದಲ್ಲಿ ಹೊಸ ಘಟ್ಟವೊಂದು ಆರಂಭವಾಯಿತು. ಭಾರತದ ಅಭ್ಯುದಯಕ್ಕೆ ನೆರವು ನೀಡುವ ಮಿತ್ರ ರಾಷ್ಟ್ರ ಕೂಟದಲ್ಲಿ ಜರ್ಮನಿಯೂ ಸೇರಿಕೊಂಡಿತು. ದ್ವಿತೀಯ ಮಹಾಯುದ್ಧದ ಪೆಟ್ಟಿನಿಂದ ಚೇತರಿಸಿಕೊಳ್ಳುತಿದ್ದ ಜರ್ಮನಿಯೂ ಪುಟ್ಟ ಪ್ರಮಾಣದ ಸಹಾಯ ನೀಡಲು ಆವರ್ಷ ಮುಂದಾಯಿತು. ಇಂದಿಗೆ ಅಮೆರಿಕೆಯನ್ನು ಳಿದರೆ, ಜರ್ಮನಿಯೇ ಹೆಚ್ಚು ಸಹಾಯ ನೀಡುತ್ತಿದೆ.

ಭಾರತಕ್ಕೆ ಜರ್ಮನಿಯು ನಾಲ್ಕೂರು ಕೋಟಿ ಮಾರ್ಕ್ (ಸುಮಾರು ೧೦೦ ಕೋಟಿ ಡಾಲರ್)ಗಳ ಸಾಲವನ್ನು ನೀಡಿದೆ. ಸಾಲದ ಶರತ್ತುಗಳು ಸರಳ. ಇಪ್ಪತ್ತೈದು ವರ್ಷಗಳ ದೀರ್ಘಾವಧಿಯಲ್ಲಿ ಈ ಸಾಲವನ್ನು ಹಿಂತಿರುಗಿಸುವ ಸೌಲಭ್ಯವಿದೆ. ಒಂದು ವೇಳೆ ಇಷ್ಟು ವರ್ಷಗಳೂ ಸಾಕಾಗದೆ ಹೋದರೆ, ಮತ್ತೆ ಏಳು ವರ್ಷಗಳ ವರೆಗೆ ಅವಧಿಯನ್ನು ವಿಸ್ತರಿಸುವ ಅವಕಾಶವೂ ಇದೆ. ಬಡ್ಡಿಯು ದರವೂ ಬಲು ಸೇ. ಮೂರು ಮಾತ್ರ.

ಪಶ್ಚಿಮ ಜರ್ಮನಿಯು ಭಾರತಕ್ಕೆ ಯೋಜನೇತರ ಸಾಲವನ್ನು ಕೂಟ್ಟಿದೆ. ಇದರಿಂದ ಕಚ್ಚಾ ವಸ್ತುಗಳನ್ನು ಅವಯವ ಮೂಡಿಕೊಳ್ಳಲು ಅನುಕೂಲವಾಗುತ್ತದೆ; ಭಾರತದ ಉತ್ಪಾದನೆಯು ಹೆಚ್ಚಿ ಅವುಗಳಿಂದಲೇ ಸಾಲವನ್ನು ತೀರಿಸುವಂತಾಗುತ್ತದೆ.

ರೂರ್ಕೆಲಾದ ಉಕ್ಕು ಮತ್ತು ಗೊಬ್ಬರ ಕಾರ್ಖಾನೆಗಳು, ಭದ್ರಾವತಿಯ ಉಕ್ಕಿನ ಕಾರ್ಖಾನೆ, ನೈವೇಲಿ ಕೇಂದ್ರ ಮುಂತಾದವುಗಳಲ್ಲಿ ಜರ್ಮನಿಯು ಸಹಕಾರದಿಂದ ನಡೆಯುತ್ತಿವೆ. ಕಲ್ಲಿದ್ದಲು, ಉಕ್ಕು, ರೈಲ್ವೆ, ಹಡಗು ನಿರ್ಮಾಣ, ವಾಹನಗಳು ಮತ್ತು ವಿದ್ಯುತ್ ಕೈಗಾರಿಕೆಗಳಲ್ಲಿಯೂ ಬೇಕಾದಂತೆ ಸಹಕಾರವನ್ನು ನೀಡಲಾಗುತ್ತಿದೆ.

ಆರ್ಥಿಕ ಸಹಕಾರ ಮಾತ್ರವಲ್ಲದೆ ಪಶ್ಚಿಮ ಜರ್ಮನಿಯಿಂದ ತಾಂತ್ರಿಕ ಸಹಕಾರವೂ ಭಾರತಕ್ಕೆ ದೊರೆಯುತ್ತಿದೆ. ಮದ್ರಾಸಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ಇದಕ್ಕೊಂದು ಉಜ್ವಲ ನಿದರ್ಶನ. ಸಂಪೂರ್ಣ ಭಾರತೀಯ ಆಡಳಿತೆಯಲ್ಲಿರುವ ಈ ಸಂಸ್ಥೆಯು ಭಾರತೀಯ—ಜರ್ಮನ್ ಪರಿಣತರು ಶಿಕ್ಷಣ ನೀಡುತಿದ್ದು, ಇದು ದೇಶದ ಶ್ರೇಷ್ಠ ಸಂಸ್ಥೆಗಳಲ್ಲಿ ಒಂದಾಗಿದೆ. ಔದ್ಯೋಗಿಕ ಶಿಕ್ಷಣ ಕೇಂದ್ರ, ಕಲ್ಯಾಣದ ಪ್ರಾಯೋಗಿಕ ಕೇಂದ್ರ, ಬೆಂಗಳೂರಿನಲ್ಲಿನ ಫಿಯೋಜಿತ ಸಂಸ್ಥೆ ಮೊದಲಾದುವೆಲ್ಲ ಜರ್ಮನಿಯ ಸಹಕಾರದಿಂದ ನಡೆಯುತ್ತಿವೆ.

ಯೂರೋಪಿಕ ಸಹಕಾರಕ್ಕೆ ಉಬಾಹರಣೆ ಹಿಮಾಚಲ ಪ್ರದೇಶದ ಮೊಂಡಿ. ಅತ್ಯಲ್ಪ ಬಂಡವಾಳದ ಈ ಯೋಜನೆಯ ಉತ್ಪಾದನೆ ಬೆರಳು ಕಚ್ಚಿಕೊಳ್ಳುವಂತಿದೆ—ಮೂರು ವರ್ಷಗಳಲ್ಲಿ ಸೇ. ೪೦ರಷ್ಟು ಹೆಚ್ಚಿದೆ! ಈ ಫಲಿತಾಂಶವನ್ನು ಕಂಡವರು ಪಕ್ಕದ ರಾಜ್ಯಗಳಾದ ಸಿಕ್ಕಿಂ ಮತ್ತು ಕುಲಿ ಮುಂತಾದ್ಯಜಲ್ಲೆಗಳಿಗೂ ದಕ್ಷಿಣದ ನೀಲಗಿರಿ ಜಿಲ್ಲೆಗೂ ವಿಸ್ತರಿಸುವ ಯೋಜನೆಗೆ ತೊಡಗಿದ್ದಾರೆ. ಭಾರತ—ಜರ್ಮನಿ ಸಹಕಾರಗಳಲ್ಲಿ ಈಗಾಗಲೇ ೩೫೦ ಯೋಜನೆಗಳು ಭಾರತದಲ್ಲಿ ನಡೆಯುತ್ತಿವೆ.

ರಾಜಕೀಯ ವಿಷಯಗಳಲ್ಲಿಯೂ ಭಾರತ—ಜರ್ಮನಿಗಳು ಒಂದನ್ನೊಂದು ಪೂರ್ಣವಾಗಿ ಅರಿತುಕೊಂಡಿವೆ. ಜರ್ಮನಿಯು ವಾಶ್ಚಿತ್ಯ ಕೂಟಗಳಲ್ಲಿ ಸೇರಿದ್ದರೂ ಭಾರತವು ತಟಸ್ಥ ನೀತಿಯನ್ನು ಬಲವಾಗಿ ಮೆಚ್ಚಿಕೊಂಡಿದೆ; ಭಾರತವೂ ಜರ್ಮನಿಯ ವಿದೇಶಾಂಗ ನೀತಿಯನ್ನು ಬೆನ್ನಾಗಿ ಅರ್ಥ ಮಾಡಿಕೊಂಡಿದೆ. ಜರ್ಮನಿಯು ಏಕೀಕರಣಕ್ಕೆ ವಿರೋಧ ಬರುವ ಯಾವುದೇ ವಿಷಯಗಳಿಗೂ ಪ್ರೋತ್ಸಾಹ ನೀಡಲಾರದೆಂಬ ಬದ್ಧತೆಯನ್ನು ಭಾರತವು ಮೆಚ್ಚಿಗೆ ಸೂಚಿಸಿದೆ. ಜರ್ಮನಿಯ, ಜರ್ಮನ್ನರ ಕೃತಜ್ಞತೆಗೆ ಭಾರತವು ಪಾತ್ರವಾಗಿದೆ. ಪಶ್ಚಿಮ ಜರ್ಮನಿಯು ಚಾನ್ಸೆಲರ್ ಕೇ ಸಿಂಗರ್‌ರವರು ಇತ್ತೀಚೆಗಿನ ಭಾರತ ಸಂದರ್ಶನ ಉಭಯ ದೇಶಗಳ ಮೈತ್ರಿ-ಬಾಂಧವ್ಯಗಳನ್ನು ಹೆಚ್ಚಿಸುವುದು ಖಂಡಿತ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ ರೂ. ೨-೦೦ [ಟ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊಂಡ್ಕುಲ್ ವೆಂಕಟ್ರಾವ್, ಎಲ್. ಐ. ಎಮ್.

'Ably written- Quite up-to-date valuable service'

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಸ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಗಸರು, ವೃದ್ಧರಿಂದಿಡಿದು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ಪಿವರಿಸಲ್ಪಟ್ಟ ಗೃಹವೈದ್ಯ. ಹೆರಿಗೆ ವಿಧಾನ ಸವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ.

ಬೆಲೆ: ರೂ. ೨-೦೦ (ಟ್ಯಾ ವಿರ್ಚು ಬೇರೆ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ್, ಉಡುಪಿ, ದ. ಕ.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಅಂಡಲವಾದ ಮನಸ್ಸನ್ನು ಶುಭ್ರಗೊಳಿಸಿ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳನ್ನೆಯೇ ತತ್ಪರವಾಗುವಂತೆ ಸೂಡುವ ಕೃತಿ.

ಬೆಲೆ: 0-19 ವ್ಯಸೆ.

ರಿಯಾಯಿತಿ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್ಸ್ ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕ

14—12—1967

೨೦
ಪೈಸೆ

ಕಥಾ ಪ್ರಪಂಚ

ಜೆಂಗುಲಾಬಿ

ಬರೆದವರು: ಕವಿ ಹೆಜ್ಜಾರ್ಲ್ಯ ಧಾರವಾಡ

ಅದೇ ತಾನೆ ಅರುಣೋದಯವಾಗಿತ್ತು. ಶ್ರೀಪತಿ ತನ್ನ ಬಡಪಾಯಿ ದ್ಯೋತರದಂತಿದ್ದ ಹೆರಳು ಗುಡಿಸಲಿನಿಂದ ಹೊರಗೆ ಬಂದನು. ಅಂಗಳದ ಬದಿಯ ಗುಲಾಬಿ ಗಿಡವು ಹೂ ಬಿಟ್ಟಿತ್ತು. ಹೂಗಳನ್ನು ನೋಡುತ್ತಲೇ ಶ್ರೀಪತಿ ಕಟ್ಟನೆ ಅಲ್ಲಿ ನಿಂತು ಬಿಟ್ಟು ಹುಷ್ಪಗಳನ್ನೇ ತದೇಕ ಚಿತ್ತನಾಗಿ ನೋಡ ತೊಡಗಿದ. ಆತ ಯೋಚಿಸಿದ— "ಈಗ ಪುಟ್ಟ ತಂಗಿ 'ಪುಟ್ಟಮ್ಮ' ಸಹಿಹದಲ್ಲೇ ಇರುತ್ತಿದ್ದರೆ!' ಆರಳಿದ ಜೆಂಗುಲಾಬಿಯನ್ನು ದಿನಾ ಪ್ರೇಮದಿಂದ ಆಕೆಯು ಮುಡಿಗೇರಿಸುವುದು ಆತನ ಪದ್ಧತಿ. ಹೆಣಿಗೆ ಮಾಡ್ದಿಟ್ಟು ತಲೆ ನೇವರಿಸಿ ಹೇಳುತ್ತಿದ್ದ— 'ಅರುಣೋದಯದಲ್ಲಿ ಅಣ್ಣನ ಇನಾಮು! ನೋಡೆ! ನಿನ್ನ ಶ್ಯಾಮಲ ಕೇಶ ರಾಶಿಯಲ್ಲಿ ಜೆಂಗುಲಾಬಿ ಹೂಗಳು ಅದೆಷ್ಟು ಅಂದವಾಗಿ ತೋರುತ್ತವೆ!!' ಆ ಮಾತು ಕೇಳಿದಾಗ ಆಕೆಯು ಮುಸಿಸಾರವಿಂದವೂ ಜೆಂಗುಲಾಬಿಯಂತೆ ಅರಳುತ್ತಿತ್ತು. 'ಅಣ್ಣಯ್ಯ, ಇಂದು ಸಿನಿಮಾ ನೋಡಲು ಹೋದೋಣ. ಅನ್ನುವಾ ಬರುತ್ತಾಳೆ. ನಮ್ಮಿಬ್ಬರಿಗೂ ಟಿಕಟ್ಟು ಕೊಳ್ಳುವಿಯಲ್ಲ ವೇ?.... ಕೈಡಿಯೊಂಕ್ಕೆ ಜೊಸ ಜೆಲ್ ಇಂದು ಕೂಡಿಯೊಳ್ಳಲೇ ಬೇಕು,ಹ್ಞೂಂ ಆದರೆ ಆ ನಿಷ್ಕಲ್ಮಷ, ಶಂಖ ಹೃದಯದ ಮೃದು ಮಧುರ ವಂಣೆ ಈಗೆಲ್ಲಿ?! ಶ್ರೀಪತಿಯ ನೇತ್ರಗಳಿಂದ ಕಂಬನಿಯೊಂದು ಉದುರಿತು.

ಆತನ ಸ್ಮೃತಿ ಪಟಲದ ಮೇಲೆ ಅತೀ ಘಟನೆಗಳ ಅಲಗಳು ಒಂದರ ಮೇಲೊಂದು ಅಪ್ಪಳಿಸಿ ತೊಡಗಿದವು. 'ಪುಟ್ಟಮ್ಮ' ಶ್ರೀಪತಿಯ ಅಧ್ಯಾಪಕರ ಮಗಳು. ಆಕೆಯ ನಿಜನಾಮ ಹೆಸರು ಹೆಲೆನ್' ಎಂದಿತ್ತು. ಆದರೆ ಶ್ರೀಪತಿ ಸ್ನೇಹದಿಂದ ಆಕೆಯನ್ನು 'ಪುಟ್ಟಮ್ಮ' ಎಂದು ಕರೆಯುತ್ತಿದ್ದ. ಹಾಗೆಯೇ ಅಧ್ಯಾಪಕರು ತನ್ನ ಉದಾರ ಹೃದಯ—ಸಲಹೆ ಸಹಾನುಭೂತಿಗಳಿಂದಾಗಿ ಆತನಿಂದ "ಚಾಚಾ" ಎಂಬ ಬಿರುದನ್ನು ಪಡೆದಿದ್ದರು. ಪುಟ್ಟಮ್ಮನೂ ಶ್ರೀಪತಿಯೂ ಒಂದೇ ವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಿದ್ದರು. ಅಧ್ಯಾಪಕರು ಮನೆಯಲ್ಲಿ ಅವರಿಗೆ ಟ್ಯೂಶನ್ ಸಹ ಹೇಳುತ್ತಿದ್ದರು.

ಮೊತ್ತ ಮೊದಲು ಶ್ರೀಪತಿ 'ಚಾಚಾ' ವಳ್ಳಿ ಟ್ಯೂಶನಿಗಾಗಿ ಹೋದಾಗ ಆ ಕೋಮಲೆಯೂ ಪುಟ್ಟ ತಂಗಿ ಅಂಜುತ್ತ ಅಳುಕುತ್ತ ಆತನಿಗೆ ಶರಬತ್ತು ತಂದಿತ್ತು ಸರಳವಾಗಿ ಹೇಳಿದ್ದಳು—"ಬಡವರ ಕರು ಸತ್ಕಾರ, ಸ್ವೀಕರಿಸಿ!" ಶ್ರೀಪತಿ ಶರಬತ್ತಿನ ಲಂಬಣ್ಣವನ್ನೇ ನೋಡುತ್ತ ಏನೋ ಯೋಚಿಸುತ್ತಿದ್ದ.

"ಏನು ನೋಡತ್ತೀರಿ? ನೀರಿಂಶ ಹೆಚ್ಚಾಯೇ! ಸಕ್ಕರೆ ಬೇರೆ!" 'ಇಲ್ಲ, ಸ್ನೇಹದಿಂದ ಇತ್ತುದು ಮಾಧುರಮಯವಾಗಿಯೇ ಇರುತ್ತದೆ, ಅದೂ ಬಳೆಗಳ ಶಬ್ದದೊಂದಿಗೆ ಬಂದರೆ ಮತ್ತೆ ಹೇಳಬೇಕೆ? ಶ್ರೀಪತಿ ಏನೋದಿಸಿದ. ಆಕೆಯು ಪುಟ್ಟ ಮುಖವು ಮತ್ತೆ ಜೆಂಗುಲಾಬಿಯಂತೆ ಕೆಂಪೇರಿತ್ತು.

ಅಂದಿನಿಂದೀಚೆಗೆ ಮಳೆಗರೆಯುತ್ತಿದ್ದು ದರಿಂದ ಶ್ರೀಪತಿ ಮಳೆಕೋಟು ಮತ್ತು ಟೋಪಿ ಧರಿಸಿ ಚಾಚಾನ ಮನೆಗೆ ಆ ಮಳೆಯಲ್ಲೂನಡೆದಿದ್ದ. ಹೊಸತಾಗಿ ಕೊಂಡುಕೊಂಡ ಹೊಸಕೋಟನ್ನು ತೊಟ್ಟಾಗ ಆತನಮನ ನಲ್ಲೂ ಹೆಮ್ಮೆ ಮೂಡಿ ಬಂದಿತ್ತು. ಸ್ವತಃ ಪುಟ್ಟನ್ನ ಬಾಗಿಲು ತೆರೆದಳು, ಆಕೆ ಹಸನ್ಮುಖಿಯಾಗಿದ್ದಳು. ಕಾಂತಿಯುಕ್ತವಾದ ಆಕೆಯು ಶ್ಯಾಮಲ ಛಾಯೆಗಳು ಶ್ರೀಪತಿಯನ್ನು ಅಕ್ಕರೆಯಿಂದ ಸ್ವಾಗತಿಸುತ್ತಿದ್ದವು.

ಆತ ವಿನೋದಕ್ಕೆ ಕೇಳಿದ—'ಹೇಗೆ ತೋರುತ್ತೇನೆ?'

"ಛೇಟು ಯೂರೋಪಿನ ದರೋಡೆಕಾರನಂತೆ!"

"ಓ! ದರೋಡೆಕಾರನ ತಂಗಿ," ಎನ್ನುತ್ತ ಶ್ರೀಪತಿ ತನ್ನ ಟೋಪಿಯನ್ನು ಆಕೆಗೆ ತೊಡಿಸಿ ಚಪ್ಪಾಳೆ ಹೊಡೆದ. ಆಕೆಯ ವದನ ಭ್ರಾತೃತ್ವಸ್ನೇಹದ ಅನುಭವದಿಂದ ಪುಲಕಿತ ಗೊಂಡಿತು.

"ಇದನ್ನು ವಾಪಾಸು ಕೊಡಲಾರೆ, ಆ ಅಣ್ಣಯ್ಯನ ಟೋಪಿಯಲ್ಲಿ ನನಗೂ ಅಧಿಕಾರವಿದೆ!" ಆಕೆ ಅಂದಳು. ಶ್ರೀಪತಿ ಬದಲಿಗೇನಾದರೂ ಕೊಡಲೇ ಬೇಕೆಂದು ಜಗಳಾಡಿದ. ಆಕೆ ಫಲಕಂಕೋಚವಾಗಿ ತನ್ನ ಕೈಯ ಗಾಜಿನ ಬಳೆಗಳನ್ನು ತೆಗೆದು ಕೊಟ್ಟಳು.

"ಠೀ, ತಂಗಿಯವರೇ, ಏನಿದು? ಬಳೆ ತೊಡಿಸಿ ಅಣ್ಣನನ್ನು ಅಡಿಗೆ ಮನೆಗೆ ಕಳಿಸುತ್ತೀರಾ?'

'ಹಾಂ, ಈ ತಂಗಿಗಾಗಿಯೆಲ್ಲದಿದ್ದರೆ ಅತ್ತಿಗೆ ಬಂದಾಗಲಾದರೂ ಅದನ್ನು ಮಾಡಲೇ ಬೇಕಾಗುವುದು! ಇಲ್ಲಿ ಹೋದ್ರೇ ....!'

"ಪುಟ್ಟ ತಂಗಿಯ ದೊಡ್ಡ ಮೊತ್ತ!' ಶ್ರೀಪತಿ ಭಗಿನೀ ಸ್ನೇಹದಹೊಸಅನುಭವದಿಂದ ಸಂತಸಗೊಂಡು ನುಡಿದ. ಸಹೋದರಿಯ ಸ್ನೇಹ ಏನೆಂಬುದರ ಪರಿಚಯ ಆತನಿಗೆ ಇದೇ ಮೊದಲು. ಆಕೆಯ ಮೊಣಕಾಲು ವರೆಗಿನ ಲಂಗ, ತುಂಟ ಕಣ್ಣುಗಳು, ಪುಟ್ಟ ದೇಹ ಇವುಗಳನ್ನು ಕಂಡು ಶ್ರೀಪತಿ ಆಕೆಯನ್ನು 'ಪುಟ್ಟಮ್ಮ' ಎಂದು ಕರೆದ. ಅಂದಿನಿಂದ ಆಕೆ ಪುಟ್ಟಮ್ಮನೇ ಆದಳು. ಶ್ರೀಪತಿ ಅಣ್ಣಯ್ಯನಾದ. ಪುಟ್ಟಮ್ಮ ಸಂತೆಯ ಪ್ರಾರ್ಥನೆಗೆ ಹೊರಟಾಗ ಆತನೆಂದ—"ಈಸಾನಲ್ಲಿ ಅಣ್ಣನಿಗೂ ಆಶೀರ್ವಾದವನ್ನು ಕೇಳು. ನಾನು ಮಂದಿರದಲ್ಲಿ ನಿನ್ನ ಶ್ರೇಯಸಿಗಾಗಿ ಪ್ರಾರ್ಥಿಸುವೆನು".

ನಗುತ್ತಾ ಆಕೆ ಹಾಗೆಯೇ ಈಸಾನಲ್ಲಿ ಬೇಡಿದಳು. ಅಂದಿನಿಂದ ಶ್ರೀಪತಿ ಚಾಚಾನ ಮನೆಯವರಲ್ಲೇ ಒಬ್ಬನಾದ. ಚಾಚಿಗೂ ಈತನ ನಿಷ್ಕಲ್ಮಷ, ಫಲಭಿಮಾನ ಹೃದಯವನ್ನು ಕಂಡು ಆತನಲ್ಲಿ ಪುತ್ರಾನುರಾಗ ಉಂಟಾಯಿತು. ಶ್ರೀಪತಿ ಬಂದಾಗಲೆಲ್ಲ ಆತನ ತಲೆ ನೇವರಿಸಿ 'ಲೇ ಪುಟ್ಟಮ್ಮ, ಅಣ್ಣಯ್ಯ ಬಂದ ನೋಡೇ' ಎನ್ನುತ್ತ ಆತನ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದಳು.

ಬಾಲ್ಯದಲ್ಲೇ ಮಾತಾಪಿತೃಗಳನ್ನು ಕಳಕೊಂಡು ಆತ ತಬ್ಬಲಿಯಾಗಿದ್ದ. ಇದ್ದ ಒಬ್ಬಳು ಅಕ್ಕ ಕೂಡ ಚಿಕ್ಕಂದಿನಲ್ಲೇ ಪತಿಗೃಹ ಸೇರಿ ಸುಖದ ಸುಪ್ಪತ್ತಿಗೆಯಲ್ಲಿ ಮೆರೆದಳು. ಮತ್ತೆ ತಿರುಗಿ ಶ್ರೀಪತಿಯನ್ನು ವಿಚಾರಿಸಲೇ ಇಲ್ಲ. ಮಾತೃ ಪ್ರೇಮದಿಂದ ಬಾಲ್ಯದಲ್ಲೇ ವಂಚಿತನಾದ ಶ್ರೀಪತಿಗೆ ಅದು ಚಾಚಿಯಿಂದ ದೊರೆಯಿತು. ಚಾಚಾ ತಂದೆಯಂತೆ ಆತನ ಪಥ ಪ್ರದರ್ಶಕರಾದರು. ಸೋದರಿಯ ಅಭಾವವನ್ನು ಪುಟ್ಟಮ್ಮ ತುಂಬಿದಳು. ಶ್ರೀಪತಿಯಾಸಗಿಯೂಗಿ ಕಲಿತು ಮುಂದೆ ಬಂದಿದ್ದ. ಕಂಡಕಂಡವರಲ್ಲಿ ದುಡಿದಿದ್ದ. ದೊರೆತುದು ಮಾತ್ರ ಎರಡಾಲ್ಕು ಕಾಸಿನೊಂದಿಗೆ ಬಂದ ತಿರಸ್ಕಾರ. ಆದರೆ, ಇಂದು ಆತ ಸ್ವತಃ ಜೀವನ ನೌಕೆಯ ಚುಕ್ಕಾಣಿ ಹಿಡಿದಿದ್ದ, ಚಾಚಾ ಆತನ ವ್ಯಾಸಂಗದಲ್ಲಿ ನೆರವಾಗುತ್ತಿದ್ದರು. ಆರೋಗ್ಯ ಕೆಟ್ಟರೆ ಚಾಚಿಯೇ ದಾದಿಯೂ ಆಗುತ್ತಿದ್ದಳು. ಪುಟ್ಟಮ್ಮನ ಆಕಳಿಕೆ ಪ್ರೇಮ ಇವೆಲ್ಲಕ್ಕೂ ಕಳಸವಿಟ್ಟಂತಿತ್ತು. ಆದರೆ ಈ ಸಂತೋಷ, ಈ ಮನಃಶಾಂತಿ, ಈ ವಿಶ್ವಾಸ ಕೇವಲ ಕ್ಷಣಿಕವೆಂದು ಆತನಿಗೇನು ತಿಳಿದಿತ್ತು?! ಒಬ್ಬಂಟಿಗನಾದ ಮರುಭೂಮಿಯ ಪ್ರಯಾಣಿಕ ಬಾಯಾರಿದಾಗ ನೀರೆಂದು ಭ್ರಾಂತಿಪಟ್ಟು ಮೃಗತೃಷ್ಣಿಕೆಯತ್ತ ಓಡುತ್ತಿದ್ದ! ಬಾಯಾರಿ ಬಳಲಿದವಳಿಗೆ ಅದು ಬಿಸಿಲ್ಗುದುರೆಯೆಂದಾದರೂ ಹೇಗೆ ತಿಳಿಯುವುದು?

ಇತ್ತೀಚೆಗೆ ಆದೇಕೋ ಚಾಚಿಯ ಹೃದಯ ಸಂಕುಚಿತ ಭಾವನೆಗಳಿಂದ ತುಂಬ ತೊಡಗಿತ್ತು. ಸ್ತ್ರೀ ಸಹಜ ಶಂಕಾ ದೃಷ್ಟಿ ಆಕೆಯಲ್ಲಿ ಮೂಡಿತ್ತು. ಆಕೆ ಒಂದು ಕರಹ ಆಗಿದ್ದಳು. ಸಂಶಯ ಪಿಶಾಚಿ ತಲೆಯಲ್ಲಿ ಸವಾರಿ ಮಾಡಿತ್ತು. ಧನ, ಗಳಿತನ್ಯ, ಸಂಶಯ, ಇವು ಹಚ್ಚುವುದೂ ನಿರ್ನಾಮವಾಗುವುದೂ ಬಲುಬೇಗವಂತೆ. ಈ ಮಾತಿನ ಸತ್ಯತೆಯನ್ನು ಶ್ರೀಪತಿ ಚಾಚಿಯಿಂದ ಅರಿಯು ತೊಡಗಿದ. ಅನೇಕ ಬಾರಿ ಚಾಚಾನನ್ನಲ್ಲಿ ಹೋದಾಗಲೂ ಆತನಿಗೆ ಪುಟ್ಟಮ್ಮನ ದರ್ಶನವಾಗಲಿಲ್ಲ. ಶ್ರೀಪತಿಯು ನಯನದಳು ಆಕಯನ್ನು ಹುಡುಕುತ್ತಿದ್ದವು (ಶ್ರೀಪತಿಯೂಡನೆ ಬೆರೆಯುವುದನ್ನು ಚಾಚಿ ನಿಷೇಧಿಸಿದ್ದಳೆಂದು ಆತನಿಗೆ ಕ್ರಮೇಣ ತಿಳಿಯಿತು) ಒಮ್ಮೆ ಶ್ರೀಪತಿಗೆ—ತನ್ನ ವ್ಯಾಸಂಗವನ್ನು ಅಧಿಕ ಅಭಾವದಿಂದ ಸ್ಥಗಿತಗೊಳಿಸುವ ಪ್ರಸಂಗ ಬಂದಾಗ ತಾನು ದುಡಿದು ಸಂಪಾದಿಸಿ ಅಣ್ಣಯ್ಯನಿಗೆ ನೆರವಾಗಲು ಸಹ ಆಕ ಸಿದ್ಧಳಾಗಿದ್ದಳು. ಈ ಶುದ್ಧಾಂತಃಕರಣವನ್ನು ಸನಾಜವೇನು ಬಲ್ಲುದು! ಚಾಚಿಯೇನು ಬಲ್ಲಳು!! ವೇಳೆಯ ಪರಿವೆಯಿಲ್ಲದೆ ದಿನವಿಡೀ ಇನರೊಡನೆ ಪಟ್ಟಾಂಗ ಹೊಡೆಯುತ್ತಿದ್ದ ಚಾಚಿ ಈಗ ಒಂದರಡು ಮಾತಿನಲ್ಲೇ ಶ್ರೀಪತಿಯನ್ನು ಸಾಗ ಹಾಕುತ್ತಿದ್ದಳು. ತನ್ನ ತಾಯಿಯಂತಿದ್ದ ಚಾಚಿಯ ಈ ತೆರನ ಬದಲಾವಣೆಗೆ ಕಾರಣವರಿಯದೆ ಶ್ರೀಪತಿಗೆ ಪಡೆಯಲಾರದ ದುಃಖವಾಯಿತು. ಕಾರಣ ತಿಳಿಯಲು ಆತ ಕಾತುರನಾಗಿದ್ದ.

ಶ್ರೀಪತಿ ತನ್ನ ಈ ದೌರ್ಬಲ್ಯದ ಕಾರಣ ಪುಟ್ಟಮ್ಮನಿಗೆ ಪತ್ರ ಬರೆದು ವಿಚಾರಿಸಿದ. ಉತ್ತರ ಬಂದಿರಲಿಲ್ಲ ಎಂಡನೇ ಪತ್ರ ಬರೆದ. ಭಾವಿಸಿ ಸಹಿಸಿ ಸಹೃದಯಿಂದ ಆತ ಸ್ವಲ್ಪ ಹೆಚ್ಚೇ ಬರೆದು ಬಿಟ್ಟ.

'ನೀನು ಸುಂದರಾಯಲ್ಲದಿದ್ದರೂ ನನ್ನ ಸ್ನೇಹಕ್ಕೆ ಪಾತ್ರಳಾದೆ' ಇತ್ಯಾದಿ. ಇನು ಹೀಗೆ ಮೂಡಲಿಸಿ ಬರೆದುದು ನಿರಂಯ ಅಭಿಮಾನಕ್ಕೆ ಭಂಗ ತರುವಂತಾಯಿತು. ಸಾಲದ್ದಕ್ಕೆ ಪತ್ರಗಳನ್ನು ಆಕೆಯು ಗಳಿಕೆ

(ಪದನಿನ್ನದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 771
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು, ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶ್ವನಾಥ್ ಹೊಟೆಲ್.

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೦೭	೧೪ —೦೨—೧೯೬೭	No. 15

ಶ್ರೀ ಮಧ್ವರಾಜರ ಸಾಧನೆ

ನವ್ಯ ದೇಶದ ನೈಸರ್ಗಿಕ ಸಂಪತ್ತುಗಳಲ್ಲಿ ಜಲರಂಪತ್ತೂ ಅವೇಕ್ಷಣವಾದುದು. ಸಮುದ್ರದ ನೀರೂ ನಮಗೊಂದು ವರದಾನ. ದೇಶದ ಮುಮ್ಮೂಲೆಯಲ್ಲಿನ ಸಮುದ್ರ ಜಲರಾಶಿ ಅಪಾರವಿದೆ. ಇದರಿಂದಾಗಿಯೇ ಸದೀರ್ಘವಾದ ಕರಾವಳಿ ನಮಗಿದೆ. ಕಡಲು ಸಂಪತ್ತು ಮುಖ್ಯವಾಗಿ ಮೀನು. ಇದನ್ನು ಆಹಾರವನ್ನಾಗಿ ಉಪಯೋಗಿಸುತ್ತಾರೆ. ಮೂತ್ರವಲ್ಲ, ಕೆಲವೊಂದು ಬಗೆಯ ಮೀನುಗಳಿಂದ ಎಣ್ಣೆಯನ್ನೂ ತೆಗೆಯುತ್ತಾರೆ. ನೂತನ ವಿಧಾನಗಳನ್ನು ಅಳವಡಿಸಿಕೊಂಡು ಮೀನು ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಿದರೆ, ಇದು ದೇಶದ ಬೃಹತ್ ಉದ್ದಿಮೆಗಳಲ್ಲಿ ಒಂದಾಗುವುದು ಮಾತ್ರವಲ್ಲ, ದೇಶಕ್ಕೆ ವಿದೇಶೀ ವಿನಿಮಯ ಗಳಿಸಿ ಕೊಡುವ ಕೈಗಾರಿಕೆಯೂ ಆಗುವುದರಲ್ಲಿ ಸಂದೇಹ ವಿಲ್ಲ.

ನವ್ಯ ರಾಜ್ಯದ ಪಾಲಿಗೆ ೨೦೦ ಮೈಲು ದ್ದದ ಕರಾವಳಿ ಲಭಿಸಿದೆ. ಇದು ಶ್ರಮಾಣದಲ್ಲಿ ಅಲ್ಪವೆನಿಸಬಹುದಾದರೂ ಈ ಕರಾವಳಿಯ ಸಮುದ್ರ ಭಾಗದಲ್ಲಿ ಉತ್ಕೃಷ್ಟ ನೋಕ್ತ ಮೀನುಗಳು ದೊರೆಯುವುದರಿಂದ ಹಿಂದಿನಿಂದಲೂ ಇಲ್ಲಿ ಮೀನುಗಾರರ ಹಳ್ಳಿಗಳು ಬೆಳೆದು ಬಂದಿವೆ. ಮಲ್ಪೆಯೂ ಇಂತಹ ನೂರಾರು ಹಳ್ಳಿಗಳಲ್ಲಿ ಒಂದು. ಹಿಂದೆ ಸಾಮಾನ್ಯ ದೋಣಿಗಳಲ್ಲಿ ಮೀನುಗಾರರು ಮೀನು ಹಿಡಿಯಲು ಸಮುದ್ರಕ್ಕಿಳಿಯುತಿದ್ದುದು; ಪರಿಶ್ರಮದಿಂದ ತಂದ ತಮ್ಮ ಬವಣೆ ಬಲೆಗೆ ಸರಿಯಾದ ಬೆಲೆ ಬರಲಿ, ಬಾರದಿರಲಿ, ಕಡಲಿನಲ್ಲಿ ವ್ಯವಸ್ಥೆಯಿಲ್ಲವಾದುದರಿಂದ ಸಿಕ್ಕಿದ ಬಲೆಗೆ ಕೂಡಲೇ ಮಾರಿಬಿಡಬೇಕಾಗುತಿತ್ತು. ಆಷ್ಟು ಮಾತ್ರವಲ್ಲದೆ ಉದ್ಯಮವು ಕಲವೇ ತಿಂಗಳು ನಡೆಯಬಹುದಿತ್ತು. ಇದರಿಂದಾಗಿ ಸಂತಾಮುಮಿಮಂಗಿ ಕಷ್ಟ - ನಷ್ಟಗಳನ್ನು ನುಭವಿಸಿ ನವಯುತಿದ್ದ ಮಲ್ಪೆಯ ಮಾಗವೀರ ಮುಖ್ಯ ಶ್ರೀ ಮಲ್ಪೆ ಮಧ್ವರಾಜರು ಹುಟ್ಟಿಕೊಂಡರು. ತಮ್ಮ ತೀರ್ಥರೂಪಿಸರ ಆಶಯದಂತೆ ಸಮಾಜ ಬಾಂಧವರ ಕಷ್ಟ ನಷ್ಟ ದೂರೀಕರಿಸಲು ಸೊಂಟ ಕಟ್ಟಿದರು, ಇಂದು ಮಲ್ಪೆಯು ಆಧುನಿಕ ಕೈಗಾರಿಕೋದ್ಯಮದ ಗಂಧಯಿಂದ ವಾವನವಾಗಿದೆ; ಮೊಗವೀರರ ಭಾಗ್ಯದ ವಂದಿಂವೆನಿಸಿದೆ ಇಂದು ಶ್ರೀ ಮಧ್ವರಾಜರ ನೇತೃತ್ವದಲ್ಲಿ ಯಾಂತ್ರಿಕ ದೋಣಿಗಳಿವೆ. ಮೀನು ಕೆಡದಂತಿಡುವ ಶೀತಲೀಕರಣ ವ್ಯವಸ್ಥೆಯಿದೆ, ದೇಶ-ವಿದೇಶಗಳಿಗೆ ಮೀನು ಪೂರೈಸುವ ಕೊರೊನೆಟ್ ಕ್ಯಾನಿಂಗ್ ಕಂಪೆನಿ ಇದೆ. ಮೀನ ಪೋಷಯೋಗಿಯಲ್ಲದ ಮೀನುಗಳಿಂದ ಪಶುಗಳಿಗೆ ಆಹಾರ ತಯಾರಿಸುವ ಮತ್ತು ಎಣ್ಣೆ ತೆಗೆಯುವ ಕಾರ್ಖಾನೆಗಳನ್ನೂ ನೊನ್ನೆ ರಾಜ್ಯದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಉದ್ಘಾಟಿಸಿದರು ಈ ಸವನ್ನೂ ರಸವನ್ನಾಗಿ ಮಾಡಿ ಜೊರಟ ಶ್ರೀ ಮಧ್ವರಾಜರ ಸಾಹಸವನ್ನವರು ಪ್ರಶಂಸಿಸಿದರು. ನಿಜ—ಇದು ರಾಜಕಾರಣಿಗಳ ಬಾಯಿಯಿಂದ ಬರುವ ವ್ಯರ್ಥ ಪ್ರಶಂಸೆಯಲ್ಲ, ಶ್ರೀ ಮಧ್ವರಾಜರು ತಮ್ಮ ಸಾಧನೆಗಳಿಂದ ಜನದಲ್ಲಿ ರಸತೆಗೆಯುತ್ತಾರೆ, ಈ ರಸದಿಂದ ಸಮಾಜ ಕಷ್ಟ ದೇಶಕ್ಕೆ ಲಾಭವುಣ್ಣಲಿದ್ದಾರೆ. ಈ ಬಗೆಯ ಕಾರಖಾನೆಯು ಇಡಿಯ ಭಾರತದಲ್ಲಿ ಇದುವೇ ಮೊದಲನೆಯದು—ಈ ಮೊಹ್ಯಮೂದಲ ಸ್ಥಾನ ಮಲ್ಪೆಗೆ ಬಂದಿರುವಂತೆಯೂ ನಿಜಕ್ಕೂ ಮಲ್ಪೆಯ್ಲಿಗೆ ಅದೃಷ್ಟವೆನ್ನಲೇ ಬೇಕು.

ಶ್ರೀ ಮಧ್ವರಾಜರು ಮಧ್ಯಮ ವರ್ಗದಲ್ಲೇ ಹುಟ್ಟಿ ಬೆಳೆದವರು; ತನ್ನ ಜೀವನದಲ್ಲಿ ಅನೇಕ ಕಠಿಣ ಕಷ್ಟ ನಷ್ಟಗಳನ್ನು ಅನುಭವಿಸಿದವರು. ಇಂದವರು ತನ್ನ ಕಾಲ ಮೇಲೆ ಭದ್ರವಾಗಿ ನಿಂತಿರುವುದು ನಿಜವಾದರೂ ಇದಕ್ಕೆ ಅವರ ಶ್ರದ್ಧೆ, ಆಸಕ್ತಿ, ಪರಿಶ್ರಮಗಳೇ ಕಾರಣವೆನ್ನಬಹುದು. ಅವರು ತನ್ನ ಹಿಂದಿನ ದುಃಖದ ದಿನಗಳನ್ನು ಮೆಲಕಿಸಿದ್ದು; ಅಂತಹ ಅವರ ಕೈ ಬಹಳ ಮುಂದು. ಅವರು ಉದ್ಘಾಟನಾ ಸಮಾರಂಭದಲ್ಲಿ ನೂತನವಾಡುತ್ತ—"ಇದು ನನ್ನ ಶ್ರೀಮಂತಿಕೆಯ ಪ್ರದರ್ಶನವಲ್ಲ, ಈ ವರೆಗೆ ಇಂತಹ ಉದ್ಯಾಟನಾ ಸಮಾರಂಭವನ್ನು ನಾನು ಮಾಡಿದವನಲ್ಲವೆಂದಿದ್ದಾರೆ. ಇದು ನೂರಕ್ಕೆ ನೂರರಷ್ಟು ಸತ್ಯ ಸರಳ ಸ್ವಭಾವದ ಶ್ರೀ ಮಧ್ವರಾಜರು ಸಂಪತ್ತನ್ನು ಗಳಿಸುತ್ತಾರೆ, ಹಾಗೆಯೇ ಚೆಲ್ಲಿಯೂ ಬೆಲ್ಲುತ್ತಾರೆ. ಆದರೆ, ಇವರು ಚೆಲ್ಲುವ ಹಣ ಪೋಲಾಗುವುದಿಲ್ಲ, ಸದುದ್ದೇಶಗಳಿಗೆ ಉಪಯೋಗವಾಗುತ್ತದೆ. ಅವರಿಂದ ಉಪಕೃತರಾಗಿದವರು ಅಸಂಖ್ಯಾತರಿದ್ದಲ್ಲಿ ಯೂರೂ ಇರಲಾರರು. ೧೯೬೭—೭೮ ಆವಧಿಯಲ್ಲಿ ಉಡುಪಿ ಮತಕ್ಷೇತ್ರದ ವಿಧಾನ ಸಭೆಯಲ್ಲಿ ಪ್ರತಿನಿಧಿಸಿದ ವೇಳೆ ಶ್ರೀಯುತರು ದೂರದೃತನಿದ ಅರಿತು ಜನತೆಗೂ ಜನತಾ ಸರಕಾರಕ್ಕೂ ಎಂತಹ ಉದ್ಯಮವೂ ಮೀನುಗಾರಿಕೆಯು ಬಗ್ಗೆ ಶ್ರೀಯುತರ ಅಭಿಪ್ರಾಯವನ್ನು ಮನ್ನಿಸಿದರೆ ಆಶ್ಚರ್ಯವಿಲ್ಲ. ಸ್ಕೋಲೇಂಡ್ ಸರಕಾರದ ನೆರವಿನಿಂದ ೬ ಲ್ಪೆಯು ಮೀನು ಕೈಗಾರಿಕೆಯ ಕೇಂದ್ರವಾಗಿ ಬೆಳೆದು ಬಂಲಿದೆ, ಆಗ ಶ್ರೀ ಮಧ್ವರಾಜರ ಶ್ರಮ ವೃಕ್ಷವಿನ್ನೊಂದು ಸತ್ಫಲವನ್ನು ನೀಡಲಿದೆ. ಮಾರನ್ನು ತಪ್ಪಾಗಿ ಹಣ್ಣು ಬಿಡುವುದಿಲ್ಲ, ಸರೋವರ ತನಗಾಗಿ ಫೀರು ಸಂಗ್ರಹಿಸುವುದಿಲ್ಲ, ಸಜ್ಜನರು ಪರೋಪಕಾರಕ್ಕಾಗಿಯೇ ಹಣ ಗಳಿಸುವರು — ಇದಕ್ಕೆ ದೀಪ್ತಿಮಾನ ನಿದರ್ಶನ ನಡೆಯುವ ಹೊಸ್ತಿಲಲ್ಲಿರುವ ಯುವಕ ಶ್ರೀ ಮಧ್ವರಾಜರು.

ಜನರ ತಿಪ್ಪರಲಾಗ

ಮಹಾಜನ ಆಯೋಗದ ವರದಿಯನ್ನು ಎಲ್ಲರೂ ಒಪ್ಪಿಕೊಳ್ಳಬೇಕಂದು ಆರಂಭದಲ್ಲಿಯೇ ಹೇಳಿಕೊಳ್ಳಲಾಗಿತ್ತಾದರೂ ಮಾಜಾರಾಷ್ಟ್ರ ಸರಕಾರವೂ ವಿಧಾನ ಸಭೆಯೂ ಅದನ್ನು ತಿರಸ್ಕರಿಸಿದೆ. ಕೇರಳ ಸರಕಾರವೂ ಇದೇ ದಾರಿಯನ್ನು ತುಳಿದಿದ ಕರ್ನಾಟಕ ವೂತ್ರ ಹಿಂದಿನಿಂದಲೂ ಸಟ್ಟು, ಹಿಡಿದು ವರದಿಯನ್ನು ಒಪ್ಪಿ ಗೊಂಡಿದೆ. ಇದನ್ನು ಐತೀರ್ಪೆಂದು ಸರಗಣಿಸಬೇಕೆಂದೂ ಕೇಳಿಕೊಂಡಿದೆ. ಆದರೆ, ಗೃಹ ಮಂತ್ರಿ ಚವನರಿಗಿದು, ನ ಂಗಲಾರದ ಪುತ್ತಾಗಿದೆ. ಆಯೋಗದ ವರದಿಯನ್ನು ಒಪ್ಪಿಕೊಳ್ಳುವಂತ ವ ರಂಗಿಗಳನ್ನು ಒಪ್ಪಿಗುವ ತಂಕತ್ತು ಅವರಲ್ಲಿಲ್ಲ, ತಿರಸ್ಕರಿದರೆ ತನ್ನ ಪ್ರಭಾವಕ್ಕೆ ಮಸಿ ಬಳಿದಂತಾಗುವುದು. ಆದಕ್ಕಾಗಿ ಅವರೀಗ ಹೊಸ ರಾಗವೊಂದನ್ನು ಆರಂಭಿಸಿದ್ದಾರೆ—ಸಂಬಂಧಿಕ ಸರ್ವ ಪಕ್ಷಗಳ ಸಭೆ ಕರೆಯುವುದಂತೆ! ಇಂತಹ ಸಭೆಯಿಂದ ಆಗುವ ಲಾಭವೆಂದರೂ ಏನು? ಅದರ ಮೇಲೆ ಡಾ| ಖಾಪಸ್ಕರರು ತಮ್ಮ ಸೂತ್ರದಂತೆ ಕರ್ನಾಟಕ—ಮಹಾರಾಷ್ಟ್ರ ಗಡಿ ಇತ್ಯರ್ಥಗೊಳಿಸ ಬೇಕೆಂದು ಕರೆ ನೀಡಿದ್ದಾರೆ ಇದನ್ನು ಉಳಿದ ನಾರಾಗಿಗಳೂ ಈಗ ಒಪ್ಪ ಬಹುದು. ಆದರೆ, ಮಹಾಜನ ಆಯೋಗ ನೇಮಿಸುವ ಸಮಯದಲ್ಲಿ ಅದರ ಮುಂದೆ ಮೂಲ ಶರತ್ತನ್ನೂ ಯಾರೂ ಹಾಕರಲಿಲ್ಲ, ಯಾವ ಶರತ್ತನ್ನೂ ಮುಂಬಯ್ಸರಲ್ಲಿ ವ ರಂಗಿಗಳು ಹಂಚಿಕೆ ತಮ್ಮ ಬೇಳೆ ಬೇಯಿಸುವುದು. ರಾಜಕೀಯ ಸ್ವಾರ್ಥಕ್ಕೊಳಗಾಗಿ ಜನವನ್ನೂ ಜನರೊಂದಿಗೆ ಸರಿ ಒತ್ತಾಸ ನೀಡಿದರೆಂದರೆ, ಕನ್ನಡಿಗರು ಸುಮ್ಮನುಳಿಯುವುದು ಸಾಧ್ಯವಿಲ್ಲವೆಂದು ಶ್ರೀ ಹಳ್ಳಿಕೇರಿಯವರು ಈಗಾಗಲೇ ಎಚ್ಚರಿಕೆ ನೀಡಿದ್ದಾರೆ. ಜಾಗಾ ಕೇಂದ್ರ ಸರಕಾರ ದೃಢ ನೀತಿ ತಳೆಯದ ಹೊರತು, ಅವಾಂತರ ಕಂಡಿತ.

ವಚನ ಸುಧೆ

ಆಕ್ಕೋಶ ವಿವಾದಾ ಭ್ಯಾಂ
ವಿಪಿಂಸನ್ತ್ಯಬುಧಾ ಬುಧಾನ್
ವಕ್ಷಾ ಪಾಪಮಪಾದತ್ತೇ
ಕ್ಷೀಮ ಮೂಡೋ ವಿಮುಚ್ಯತೇ॥

ಬುದ್ಧಿಹೀನರು ವಿದ್ವಾಂಸರನ್ನು ಬೈದು ಹಂಗಿಸಿ ಕಷ್ಟಕ್ಕೆ ಗುರಿ ಮಾಡಬಹುದು. ಬೈದವನಲ್ಲಿ ಪಾಪ ಧಾಂಗಿಯಾಗುತ್ತಾನೆ, ಕ್ಷಮಾದಾನ ಮಾಡಿದವನು ಪಾಪ ಮುಕ್ತನಾಗುತ್ತಾನೆ.

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಜಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ದಯವಾಗಿ ಅವಶ್ಯ ಪ್ರಯತ್ನ ಕಳ್ಳಿಸಿ ಕೊಟ್ಟು ಸಹಕರಿಸುವಂತೆ ಕೋರಿಕೊಳ್ಳುತ್ತೇವೆ, ಎನ್ನಕ್ಕೂ ಪತ್ರಿಕೆ ಬೇಡವೆಂದಿರುವವರು ಹಾಗೆಯೇ ನಮಗೆ ತಿಳಿಸಿ, ಈ ವರೆಗಿನ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾಗುವುದು.

ಮೆನೇಜರ್, ನವಯುಗ

ಮುಖ ಚಿತ್ರ

ಇತ್ತೀಚೆಗೆ ದಕ್ಷಿಣ ಕನ್ನಡದ ಪ್ರವಾಸ ಮುಗಿಸಿ ಸದ್ಭಾವದಿಂದ ತೆರಳಿದ ನಮ್ಮ ರಾಜ್ಯದ ರಾಜ್ಯಪಾಲ ಶ್ರೀ ಜಿ. ಎಸ್. ಪಾರೇಕ್

ಮುಂದುವರಿದಿದೆ

ಗೇಹರರಾಜ್ಯದಲ್ಲಿ

ನ ಹಮ್ ಹಾರೇ ನ ತುಮ್ ಹಾರೇ

"ಕೇಳಿದ್ಯಾ, ಕೊನೆಗೂ ರಾಮರಾಜರೇ ಗೆದ್ದರು...."

"ಹೇಗೆ?"

"ಅಯ್ಯೋ, ಕೇಳಲಿಲ್ಲವೇನೆ? ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾದ ಕಲ್ಲಾ...."

'ಆಹ್ಹಹ್ಹ... ನಿಮ್ಮ ಮೂತಿ? ಅವ್ರು ನಿಮ್ಮ ಇಂದಿರಮ್ಮನವರ ಅಭ್ಯರ್ಥಿ...."

'ಅದು ಹೇಗಂತಿಯ? ಅವ್ರು ವಂದಾರ ಹೆಸ್ರನ್ನು ಮುಂದೆ ತಂದ್ರು, ನಾಮಪತ್ರ ಹಾಕಿಸಿದ್ರು.... ಮತ್ತೆ ಈಗ...."

"ಹಾಗೆಲ್ಲಾ ಹೇಳುವುದಾದರೆ, ಪಾಟೀಲರೇ ರಾಮರಾಜರ ಅಭ್ಯರ್ಥಿ ಎಂದು ಏಕೆ ಅನ್ನಬಾರದು?"

"ಅಂದುಕೊಳ್ಳೋಕೆ ಏನಿ? ಆದ್ರೂ ಅದ್ಯಲ್ಲಿ ಸತ್ಯ ಇರಬೇಕಲ್ಲಾ?

"ಮತ್ತೆ, ಫೀವನ್ನು ವಂತೆ ನಿಜಲಿಂಗಪ್ಪನವ್ರು ರಾಮರಾಜರ ಜನಾಂತ ಅನ್ನೋಕೆ ಸಮರ್ಥನೆ?

"ಓಹೋ, ಒಂದೇ ಅಂತೇನು, ಮೂರು, ನೂರು, ಸಾವಿರ...."

"ಬೇಡ ಮೂರಾಯ್ರು, ನೀನೇನೋ ಲಕ್ಷಾನೂ ಹೇಳಬಹುದು. ಆದ್ರೆ ಕೇಳಿ ಕೇಳಿ ನನ್ನ ಕಿವಿ ಹೂಟ್ಟು, ಹೋದ್ರೆ...."

"ಸರಿ ಹಾಗಾದ್ರೆ; ಹೇಳೋದಿಲ್ಲ."

"ಬೇಡ. ಆದ್ರೆ ಪಾಟೀಲರೇಕೆ ರಾಮರಾಜರ ಅಭ್ಯರ್ಥಿ ಆಗಬಾರದು? ಒಬ್ಬರು ಲೋಕಸಭೆಯಿಂದ ವಂಚಿತರಾದರೆ, ಮತ್ತೊಬ್ಬರು ವಿಧಾನಸಭೆಯಲ್ಲಿ ಸ್ಥಾನ ಕಳೆದು ಕೂಂಡವ್ರು...."

"ಆದ್ರೂ ಪಾಟೀಲರಿಗೂ ರಾಮರಾಜರಿಗೂ ಅಷ್ಟಕೃಷ್ಣ!.... ಮುಖ್ಯ ಹೇಳುವುದಾದರೆ, ನಂದಾರ ಹೆಸರನ್ನು ಹಿಂದೆ ತಳ್ಳಲು ಪಾಟೀಲರು ಸ್ವಯಂ ಅಭ್ಯರ್ಥಿಯೂ ದರು...."

"ಹ್ಞೂಂ, ಆದಾದ್ರೆ ಸರಿ. ಇರಬಹುದೂನ್ನಿ. ಮೋಹನಧಾರಿಯೂ ಯುವ ಜನರ ಅಭ್ಯರ್ಥಿಯಂತೆ. ಕೆಂಗಲ್ಲರು?"

'ಅವ್ರು?—ಕರ್ನಾಟಕಕ್ಕೆ ಕಾಂಗ್ರೆಸ್ ಅಧ್ಯಕ್ಷಪದ ಇದು ವರೆಗೂ ಕೊಡಲಿಲ್ಲ ವೆಂಬ ಕಲಂಕವುಳದರೂ ಚಿಂತೆಯಿಲ್ಲ; ಅಧ್ಯಕ್ಷ ಪದವಿಗೆ ಸಮರ್ಥ ಅಭ್ಯರ್ಥಿಗಳು ಕನ್ನಡಿಗರಲ್ಲಿದ್ದಾರೆಂದು ಡಂಗುರ ಸಾರಲು...."

"ಅಲ್ಲವೇ ಮತ್ತೆ? ಈ ಎಂಬತ್ತೆರಡು ವರ್ಷಗಳಲ್ಲಿ ಕನ್ನಡಾಂಬೆ ಒಬ್ಬ ಸಮರ್ಥನನ್ನೂ ಹಡೆದಿಲ್ಲವೇನ?"

"ಆಯ್ಯೋ, ಸಮರ್ಥರೇನು? ಎಲ್ಲರೂ ಸರ್ವ ಸಮರ್ಥರೇ ಅಮ್ಮ. ಏನು ಮಾಡೋದು? ಸ್ವಾತಂತ್ರ್ಯಕ್ಕೆ ಮೊದಲದು ಮಹಾರಾಜರ ಮೈಸೂರಾಗಿತ್ತು..... ಮುಂದೆ...."

"ಏನು ಮುಂದೆ?"

"ಏನೂಂತನ್ನೋದು? ಯೋಗ್ಯತೆಯು ಳ್ಳ ಕೆಲವರು ಹೈಕಮಾಂಡಿನ ಕುದೃಷ್ಟಿಗೆ ಪಕ್ಕಾದರು..."

"ಅದು ಸರೀನ್ಸಿ. ನೋಡೋಣಾ, ಈಗ ಹೇಳಿ ನಿಜಲಿಂಗಪ್ಪನವರು ಯೂರ ಅಭ್ಯರ್ಥಿ ಅಂತ?"

"ಯಾಕೆ? ರಾಮರಾಜರದು ಅನ್ನೋಕೆ ಇನ್ನೂ ಸಂದೇಹವೆ?'

"ಅಲ್ಲ, ಅಲ್ಲ, ಅಲ್ಲ. ಅವ್ರನ್ನ ಆರಿಸವ್ರು ಒಪ್ಪಿಸಿದವರು ಇಂದಿರಮ್ಮ...."

"ರಾಮರಾಜರೂ ಅವ್ರನ್ನ ಒಪ್ಪಿದ್ದಾರಿ, ಕಣೇ—"

'ಮತ್ತೆ ಅವ್ರು ಯಾಕೆ ಕರೀಲಿಲ್ಲ?'

"ಅಯ್ಯೋ, ಕರೆಯೋದೇನು ಬಂತೆ? ಯೂರು ಕರೆದರೇನಂತೆ? ಇಂದಿರಮ್ಮ ನಂದಾರ ಚೀಟಿ ಅಡಿಗೆ ಬೀಳುವ ಲಕ್ಷಣ ಕಂಡ ಕೂಡಲೇ ನಿಜಲಿಂಗಪ್ಪನವರತ್ರ ಹೊರಳಿದ್ರು...."

"ಹ್ಞೂಂ...."

"ರಾಮರಾಜರು ಮೊದಲೇ ಒಪ್ಪಿದ್ರು. ಆದರೆ ತುಸುವಿದ್ದ ಭಿನ್ನತೆ ಅಂದ್ರೆ, ಕರ್ನಾಟಕದ ರಾಜ್ಯಕೀಯು...."

"ಅಂದ್ರೆ?"

'ನಿಜಲಿಂಗಪ್ಪನವರು ಕರ್ನಾಟಕದ ಕಾಂಗ್ರೆಸ್ಸಿನಲ್ಲಿ ಒಂದು ಬಗೆಯ ರಾಮರಾಜ್ಯ ಸ್ಥಾಪಿಸಿದ್ದಾರೆ. ಅನ್ನನ್ನು ಅಲ್ಲಾಡಿಸಿದರೆ ಹೇಗೆ? ಮುಖ್ಯ ಮಂತ್ರಿಯಾಗಿದ್ದು ಕಾಂಗ್ರೆಸ್ ಅಧ್ಯಕ್ಷರಾಗಿರಬಹುದು ಎಂದು ಇಂದಿರಮ್ಮ ಅಂದ್ರೆ, ರಾಮರಾಜರು ಊ ಹೂಂ ಎಂದರು."

"ಯಾಕೆ?"

"ಯಾಕೆ ಅಂದ್ರೆ, ಕಾಂಗ್ರೆಸ್ ಪಕ್ಷದ ಕಾರ್ಯಕಲಾಪಗಳಿಗೆ ಮುಖ್ಯ ಮಂತ್ರಿಗೆ ಪುರುಸೊತ್ತೆಲ್ಲಿ? ಹೀಗೆ ಮಾಡುವುದಕ್ಕಿಂತ, ಇಂದಿರಮ್ಮನವರೇ ಅಧ್ಯಕ್ಷರಾಗಬಹುದು."

'ಅದು ಸರೀ. ಈಗ, ನಿಜಲಿಂಗಪ್ಪನವರು ಆದಷ್ಟು ಬೇಗನೇ ಮುಖ್ಯಮಂತ್ರಿ ಪದಕ್ಕೆ ರಾಜೀನಾಮೆ ನೀಡಬೇಕೆಂಬ ರಾಜಿ ಸೂತ್ರಕ್ಕೆ ಸರ್ವಸಮ್ಮತಿ ಬಂದಿದೆಯಲ್ಲಾ...."

"ಹೌದು. ಹೇಳು ನೋಡೋಣಾ, ಯಾರು ಗೆದ್ದರು? ಯಾರು ಸೋತರು?"

"ಹೆಮೋರೀ ಭೀ ಜಯ ಹೋ, ತುಮ್ಹಾರಿ ಭೀ ಜಯ ಹೋ | ನ ಹಮ್ ಹಾರೇ, ನ ತುಮ್ ಹಾರೇ ||"

'ಹಾಗೆ ಬಾ, ಇದನ್ನೇ ಪಾಲಿಟಿಕ್ಸ್ ಅನ್ನೋದು. ಹಾವು ಸಾಯಬಾರದು, ಕೋಲು ಮುರಿಯ ಬಾರದು...."

"ಕೋಲು ಮುರಿದ್ರೆ ಹೋಯಕ್ತಾಂತ. ಹಾವು ಸತ್ರೇನಂತೆ?"

"ಬೇರೆಯವನ್ನ ಹೆದ್ರಿಸೋಕೆ ಬೇರೆ ಹಾವನ್ನ ಹುಡುಕೋ ಪ್ರಯೂತ ಮಾಡ್ಬೇಕಲ್ಲಾ?"

"ಹ್ಞೂಂ....'ಅಲ್ರಿ, ಇನ್ನು ನಮ್ಮ ಕರ್ನಾಟಕದ ಮುಖ್ಯ ಮಂತ್ರಿಯೂರಾಗ ಬಹುದು?"

"ಯೂರೂಂತೇನು? ಇರೋ ಸದಸ್ಯರಲ್ಲಿ ಯೂರೂ ಆಗ ಬಹುದು..."

"ಅಲ್ರಿ, ಯೂರೂ ಆಗಬಹುದೂಂದ್ರೇನು? ಆದಕ್ಕೊಂದು ಯೋಗ್ಯತೆ ಬೇಡವೆ?"

'ಆಯ್ಯೋ, ನೀನೊಬ್ಬ. ಇಪ್ಪತ್ತೊಂದು ವರ್ಷ ದಾಟಿದ ಪ್ರತಿಯೊಬ್ಬ ಪ್ರಜೆಗೂ ಮತಾಧಿಕಾರವುಳ್ಳ ದೇಶದಲ್ಲಿ ಪ್ರತಿ ಎಮ್ಮೆಲ್ಯೆಯೂ ಮುಖ್ಯ ಮಂತ್ರಿ ಆಗೋದಕ್ಕೆ ಭಾರೀಲಾಯಕ್ಕು...."

"ನೀವು ಬೇದಾಂತ ಆಡಬೇಡಿ..."

"ಯಾಕೆ ಆಡಬೇಕೂಂತ....ಕಾಂಗ್ರೆಸ್ ಬಹುಮತವಿರುವುದರಿಂದ ಒಬ್ಬ ಕಾಂಗ್ರೆಸಿನ ಮುಖ್ಯ ಮಂತ್ರಿಯೂಗಬಹುದು ...."

"ಅಲ್ರಿ, ಆಗಬಹುದೂಂತೇನು ಸಂದೇಹ?"

"ಅಯ್ಯೋ, ರಾಜ್ಯಕೀಯದ ಪ್ರತಿಯೊಂದೂ ವೂತು ಪ್ರಶ್ನಾರ್ಥಕ ಚಿಹ್ನೆಯಿಂದಲೇ ಕೊನೆಗೊಳ್ಳುತ್ತದೆ...ನೋಡು, ಪಕ್ಷಾಂತರ ರೋಗ ಬೇರೆಯಿದೆಯಲ್ಲಾ...'

"ಹ್ಞೂಂ...ಹೌದೂನ್ನಿ. ಹಾಗೆ ಆದಲಿಲ್ಲ; ಆಗ..."

"ಯಾರಾದರೊಬ್ಬರು ಆಗ್ತಾರೆ..'

"ರಾಮಕೃಷ್ಣ ಹೆಗ್ಗಡೆ..."

'ಛೆ, ಛೆ... ಹೆಸ್ರು ಹೆಗ್ಗಡೆಯೆಂದಿದ್ರೂ ಅವ್ರು ಒಕ್ಕಲಿಗರೂ ಅಲ್ಲ, ಲಿಂಗಾಯುತ್ರೂ ಅಲ್ಲ.... ಅದ್ರ ನೇಲೆ ಮುಂದುವರಿದ ಜಾತಿಯವ್ರು. ಹಿಂದುಳಿದವರೇ ಅಧಿಕ ಸಂಖ್ಯಾಕರುವ ಕರ್ನಾಟಕದಲ್ಲಿ ಮುಂದುವರಿದವ್ರು ಮಂತ್ರಿಯಾದದ್ದೇ ಅನ್ಯಾಯ—ಇನ್ನು ಮುಖ್ಯಮಂತ್ರಿಯಾದರೆ...! ಇನ್ನೂ ಒಂದು ಸುದ್ದಿ...."

'ಏನು?"

"ನಿಜಲಿಂಗಪ್ಪನವ್ರು ಕಾಂಗ್ರೆಸ್ ಅಧ್ಯಕ್ಷರಾದಾಗ ಅವ್ರು ಕಾಂಗ್ರೆಸ್ ಕಾರ್ಯದರ್ಶಿಯೂಗ್ತಾರಂತೆ..."

'ಇದ್ದರೂ ಇರಬಹುದೂನ್ನಿ.... ಮತ್ತೆ ಜತ್ತಿಗುವರ ಚೀಟಿ...."

"ಏಕೋ ಏನೋ, ಎಂ. ವಿ. ಕೃಷ್ಣಪ್ಪನವರು ರಾಜ್ಯಧಾನಿಯಲ್ಲಿ ಕ್ಯಾಂಪ್ ಮಾಡಿದ್ದಾರಂತೆ...."

'ಆರ್. ಎಂ. ಪಾಟೀಲರ ಹೆಸರೂ ಕೇಳಿ ಬರುತ್ತಿದೆಯಂತೆ...."

"ಸ್ವಯಂವರದಲ್ಲಿ ಹಾಗೆಯೇ ನೋಡು, ಯಾರ ಕೈ ನೀಲಾಗುತ್ತೋ ಅವರ್ದೇ ಜಯ ಲಕ್ಷ್ಮಿ..."

"ಹ್ಞೂಂ....ನಿಜಲಿಂಗಪ್ಪನವರು ಕಾಂ

(ಹದಿಮೂರನೇ ಪುಟ ನೋಡಿರಿ)

ರಜತೋತ್ಸವ ಅಚರಣೆ!

ಮಿಗಿಲಾದ ಸೇವೆಯ ಆಶ್ವಾಸನೆ!

ಮಲೆನಾಡ ಪ್ರದೇಶದಲ್ಲಿ
ಕಳೆದ ಕಾಲು ಶತಮಾನಕ್ಕಿಂತಲೂ ಹೆಚ್ಚಿನ ಕಾಲ
ಹೋಟೆಲು ಉದ್ಯಮದ ಸೂಲಕ
ಸೇವೆಯನ್ನು ಕೈಕೊಂಡು ಬಂದಿರುವ—

ಮನೋಹರ ಕೆಫೆ

(ನೆಲ್ಲಿಪ್ರಕಾಶ್ ಬಿಲ್ಡಿಂಗ್)

ಉಪಹಾರ, ಊಟ ಮತ್ತು ವಸತಿ ಗೃಹ

ನೆಹರು ರೋಡ್ — ಶಿವಮೊಗ್ಗಾ — ಮೈಸೂರು ರಾಜ್ಯ.

ತಾ. 6—12—67ರಂದು

ತನ್ನ ಬೆಳ್ಳಿ ಹಬ್ಬವನ್ನು ಆಚರಿಸಿದ ಈ ಶುಭ ಸಂದರ್ಭದಲ್ಲಿ

ಆಗಂಖ್ಯಾತ ಗ್ರಾಹಕರಿಗೆ, ಹಿತೈಷಿಗಳಿಗೆ

ಇನ್ನೂ ಮಿಗಿಲಾದ ಸೇವೆಯನ್ನು ನೀಡುವ ಆಶ್ವಾಸನೆಯನ್ನು ನೀಡುತ್ತದೆ.

ಪರಿಶುದ್ಧ, ಪ್ರಾಮಾಣಿಕ ಸೇವೆಯ ಸಂಕೇತ:

ಮನೋಹರ ಕೆಫೆ

ಮಲೆನಾಡಿನ ಪ್ರಮುಖ ಹೋಟೆಲು

ಮಾಲೀಕರು: ಪಿ. ಕೆ. ಜನಾರ್ಧನ ನೆಲ್ಲಿ.

Phone: 399, 230.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 512/67

ವಾದಿ ಕುಂದಾಪುರದ ನಿವಾಸಿ ಶೇಷ ನಾಯ್ಕ ಸಹಾ —ಪ್ರತಿವಾದಿ ಸದ್ರಿ ವಾದಿಯ ಕಡೆಯಿಂದ ಈ ಮೂಲ್ಕ ಪಾಹೀರ್ ಮಾಡಿಕೊಳ್ಳುವುದೇನೆಂದ್ರೆ-

ಪ್ರತಿವಾದಿಯು 1 ಶೇಷ ನಾಯ್ಕ 2 ಉಮ ನಾಯ್ಕ—ಪೊಗೇರ ಸುಬ್ಬಣ ಅಳಿಯಂದಿರು ಕುಂದಾಪುರ ತಾಲ್ಲೂ ಹಳ್ಳಾಡಿ ಗ್ರಾಮದ ವಳಕೂರು ಕೊಪ್ಪಲ್ಲಿನವರು.

ವಾದಿಗೆ ಪ್ರತಿವಾದಿರು ತಾ. 28-7-64 ರಲ್ಲು ಬರಕೊಟ್ಟ ದಾವಾ ದಿನಾಂಕ ನೋಟದ ಅಸ್ಸು ಬಡ್ಡಿ ಪಡಗರವನ್ನು ಬರನಾಡಿ ತೊಳ್ಳುವರೆ ವಾದಿಲು ಮೂಡಿದ ದಾವೆಯು ತಾ. 5—1—68ಕ್ಕೆ ಅಯ್ಕೆರ ತಪ್ಪಗೆ ಬಾಟ್ಟಿದೆ. ಈ ಕಲಂತು ನಿಮ್ಮ ಉದಾಪರಣೆಯಾಜ್ಞೆ ಸದ್ರಿ ದಿವ್ಸ ಹಗ್ಲು 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಹೀರ್ ಮಾಡಿಕೊಳ್ಳಕ್ಕಾದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿ ಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವ ದೆಂದು ಸಂಗ್ತಿಗೆ ಈ ಮೂಲ್ಕ ತಿಳಿಯಪಡ್ಸಿದೆ.

M. M. Hebbar
Advocate for Plff.

Kundapoor, Date, 30—11—67

ಪರಿಚಯ

ಇಯಾನ್ ಫ್ಲೆಮಿಂಗ್ ಹಾಗೂ ಜೇಮ್ಸ್ ಬಾಂಡ್

ಲೇಖಕರು:— ಶ್ರೀ ಬಿ. ನರಸಿಂಗರಾವ್

ಅವಿವಾಹಿತನಾದ ಒರ್ವ ಬ್ರಿಟಿಷ್ ವ್ಯಕ್ತಿ ತನ್ನ ಅರವತ್ತೇ ವರ್ಷ ಪ್ರಾಯದಲ್ಲಿ ಹಠಾತ್ತನೆ ವಿವಾಹವಾಗಲು ಬಯಸಿದ. ಕೊನೆಗೂ ಅಂದವಾದ ಯುವತಿಯೇ ಅತನಿಗೆ ವಧುವಾದಳು. ಆನುರಾಗವು ಏಕ ಪಕ್ಷೀಯವಾಗಿರಲಿಲ್ಲ. ಕೊನೆಗೆ ಮದುವೆಯೂ ನೇರವೇರಿತು—ಸಾಂಗವಾಗಿ.

ಂ ಂ ಂ ಂ

ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಬ್ರಿಟಿಷ್ ಸೈನಿಕ ಸೇನೆಯಲ್ಲಿ ಗುಪ್ತಾಚಾರನಾಗಿ ದುಡಿದ ಅನುಭವವೂ ತನಗಿರುವುದರಿಂದ ಅದನ್ನೇ ಕೇಂದ್ರೀಕರಿಸಿ ಒಂದು ಕಾದಂಬರಿ ಬರೆಯುವ ವಿಚಾರವೂ ಅತನಿಗಿತ್ತು. ವಿವಾಹ ಗೈಯಬೇಕೆಂಬ ಇಚ್ಛೆ ಪ್ರಬಲವಾಗುತ್ತಲೆ, ಅದರಿಂದ ರಕ್ಷಣೆ ಹೊಂದುವ ಯೋಜನೆಯಿಂದ ಅತ ಕಾದಂಬರಿ ಬರೆಯಲು ಯತ್ನಿಸಿದ.

ಒಂದು ಕುಲೀನ ಕುಟುಂಬದ ಸದಸ್ಯನಾಗಿದ್ದ ಈತನಿಗೆ ಜನ್ಮಸಿದ್ಧವಾದ ಸ್ವಂತ ಬಂಗಲೆಯಿದೆ. ಎಲ್ಲಾ ವರ್ಷವೂ ಶಿಶಿರಕಾಲದಲ್ಲಿ ಅತ ಸುಖವಾಸಕ್ಕಾಗಿ ಅಲ್ಲಿ ತೆರಳಿ ವಾಸಿಸುವುದು ರೂಢಿಯಾಗಿತ್ತು. ಅಲ್ಲಿ ರುಳಿತೇ ಅತ ಕಾದಂಬರಿ ಬರೆಯಲು ನಿರ್ಧರಿಸಿದ. ತನ್ನ ಕಾದಂಬರಿಯ ಕಥಾ ನಾಯಕನಿಗೆ ಹೆಸರಿಡುವ ಬಗ್ಗೆ ಅತನಲ್ಲಿ ವಿಚಾರ ಲಹರಿಯುಂಟಾಯಿತು. ಕಪಾಟಿನಲ್ಲಿ ಪುಸ್ತಕವೊಂದು ಕಾಣಬಂತು.—ಅಮೇರಿಕನ್ ಪಕ್ಷಿ ಶಾಸ್ತ್ರಜ್ಞನೊಬ್ಬನು ಬರೆದ 'ವೆಸ್ಟ್ ಇಂಡೀಸಿನ ಹಕ್ಕಿದಳು'. ಆ ಗ್ರಂಥದ ರಚಯಿತನ ಹೆಸರು ಆ ಪುಸ್ತಕದ ಕವಚದಲ್ಲಿ ದಪ್ಪ ಅಕ್ಷರದಲ್ಲಿ ಕಂಡು ಬಂತು. ಆ ಹೆಸರನ್ನೆ ತನ್ನ ಕಥಾ ನಾಯಕನಿಗೆ ಅತ ನೀಡಿದ. ಕೊನೆಗೂ ಆ ಕಾದಂಬರಿ ಪೂರ್ತಿಯಾಯಿತು. ಅದೇ 'ಕಾಸಿನೊ ರೊಯಲ್' ಕಾದಂಬರಿ.

ಕಾದಂಬರಿ ಪೂರ್ತಿಗೊಂಡಂತೆ ವಿವಾಹದ ಇಚ್ಛೆಯನ್ನೂ ಜ್ವಲಿಸುತಿತ್ತು. ಅತನನ್ನು ಪ್ರೇಮಿಸಿದವಳು ಅದಾಗಲೇ ವಿವಾಹಿತಳಾಗಿದ್ದಳೂ, ಅವಳು ವಿವಾಹವಿಚ್ಛೇದನ ಕೈಗೊಂಡಳು. ಕೊನೆಗೆ ವಿವಾಹವೂ ನಡೆಯಿತು.

ಂ ಂ ಂ ಂ

ತಾನು ಬರೆದ ಕಾದಂಬರಿಯು ಬಹಳ ಹುಚ್ಚವೆಂದೇ ಆ ಕಾದಂಬರಿಯ ರಚಯಿತ ತಿಳಿದಿದ್ದ. ತನ್ನ ಮಿತ್ರರೆಲ್ಲಾದರೂ ಅದನ್ನು ಕಂಡಲ್ಲಿ ನಗಗೀಡಾದಾರು ಎಂದಾತ ಊಹಿಸಿದ್ದ. ಅಂತಲೇ ಆ ಹಸ್ತಪ್ರತಿಯನ್ನು ತುಂಬಾ ಸಮಯದ ವರೆಗೆ ಪೆಟ್ಟಿಗೆಯೊಂದರಲ್ಲಿ ಭದ್ರವಾಗಿರಿಸಿದ್ದ.

ಒಂದುದಿನ ತನ್ನ ಮಿತ್ರಹೊಡನೆಸಲ್ಲಾಪದಲ್ಲಿ ತೊಡಗಿದ್ದಾಗ ಅತ ತಾನು ಬರೆದ ಕಾದಂಬರಿಯ ಸೂತೆತ್ತಿದ. ಲಂಡನ್ನಿನ ಒಂದು ಪ್ರಕಾಶಕ ಸಂಸ್ಥೆಯಲ್ಲಿ ಆ ವ್ಯಕ್ತಿ ದುಡಿಯುತಿದ್ದ. ಕೌತುಕ ಪೂರ್ವಕವಾಗಿ ಆ ಹಸ್ತಪ್ರತಿಯನ್ನು ಈತ ಓದಿ ನೋಡಿದ:

"ದಿಳಿಗ್ಗೆ ಮೂರು ಘಂಟೆಗೆ ಒಂದು ಕಾಸಿನೋದ ಗಂಧವನ್ನೂ, ಹೊಗೆಯನ್ನೂ ಸೇವಿಸಿದಾಗ ಓಕರಿಕೆ ಬರುವಂತೆ ಕತ್ತು.....ಜೇಮ್ಸ್ ಬೋಂಡ್‌ನಿಗೂ ಘಕ್ಕನೆ ಅದೇಕೋ ಕ್ಷೀಣನಾದಂತೆ ಭಾಸವಾಯಿತು..... "

ಭವಿಷ್ಯದಲ್ಲಿ ತನ್ನ ಸೃಷ್ಟಿಕರ್ತನಿಗೆ ಗೌರವವನ್ನು ಧನವನ್ನು ಸಂಪಾದಿಸಿ ಕೊಟ್ಟ ಜೇಮ್ಸ್ ಬಾಂಡ್‌ನ ಸೃಷ್ಟಿಯಾದದ್ದು ಹೀಗೆ.

ಈ ಕಾದಂಬರಿ ರಚಯಿತನೇ ಇಯಾನ್ ಫ್ಲೆಮಿಂಗ್.

ಪಾಶ್ಚಾತ್ಯ ಪತ್ತೇದಾರಿ ಕಾದಂಬರಿಗಳ ಕೊಡನೆ ಅಲ್ಪ ಸಂಪರ್ಕವಿದ್ದವರಿಗೂ ಮೇಲೆ ಉಲ್ಲೇಖಿಸಿದ ಎರಡು ಹೆಸರುಗಳು ಸುಪರಿಚಿತವಾಗಿವೆ. ಹೆಚ್ಚು ಕಡಿಮೆ ಅತೀ ಶೀಘ್ರ ಗಳಿಗೆಯಲ್ಲಿ—ಒಂದು ದಶಾಬ್ದದೊಳಗಾಗಿ—ಇಷ್ಟೆಯಂದು ಕೀರ್ತಿಯೊಡಿಸಿದ ಪತ್ತೇದಾರಿ ಲೇಖಕನೋ, ಕಥಾ ಪಾತ್ರವೂ ಬೇರಿಲ್ಲ.

ಇಯಾನ್ ಫ್ಲೆಮಿಂಗ್ ಜನಿಸಿದ್ದು ೧೯೦೮ರಲ್ಲಿ. ಅತನ ತಂದೆಯೂಗಿದ್ದ ಮೇಜರ್ ವಾಲೆಂಟೈನ್ ಫ್ಲೆಮಿಂಗ್ ಬ್ರಿಟಿಷ್ ಪಾರ್ಲಿಮೆಂಟ್‌ನ ಸದಸ್ಯನಾಗಿದ್ದ. ಪ್ರಥಮ ಲೋಕ ಮಹಾ ಯುದ್ಧದ ಸಂದರ್ಭದಲ್ಲಿ ಯುದ್ಧದಲ್ಲಿ ಭಾಗವಹಿಸಿದ್ದ ಅತ ಫ್ರಾನ್ಸ್‌ನ ಯುದ್ಧರಂಗದಲ್ಲಿ ಕೂಲ್ಲಲ್ಪಟ್ಟನು.

ತಂದೆಯ ಮರಣಾನಂತರ ತಾಯಿಯೂವ ಎವಲಿನ್ ಫ್ಲೆಮಿಂಗ್ ಕುಟುಂಬದ ರಕ್ಷಣಾ ಭಾರವನ್ನು ಹೆಗಲೇರಿಸಿಕೊಂಡಳು. ಸಾಕಷ್ಟು ಧನ ಶೇಖರಣೆಯಿದ್ದ ಅವಳಿಗೆ ಬಾಳಿನಲ್ಲಿ ಆರ್ಥಿಕ ಅಡಚಣೆಗಳೇನೂ ಇರಲಿಲ್ಲ. ಪೀಟರ್, ಇಯಾನ್, ಮೈಕೆಲ್, ರಿಚಾರ್ಡ್—ಇವರೇ ನಾಲ್ವರು ಪುತ್ರರು. ಮಕ್ಕಳಿಗೆ ಶಿಕ್ಷಣ ವ್ಯವಸ್ಥೆ ನಡೆಯಿತು.

ಆಟದಲ್ಲಿ ಮುಂದಾದರೂ ಇಯಾನ್ ಪಾಠದಲ್ಲಿ ಹಿಂದೆ ಇದ್ದ. ಈಟನ್‌ನ ವಿದ್ಯಾಭ್ಯಾಸಾನಂತರ ತಂದೆಯಂತೆಯೇ ಸೇನಾ ಉದ್ಯೋಗಸ್ಥನಾಗಲು ಅತನು ಇಚ್ಛಿಸಿದ. ಮತ್ತೆ ಸಾನ್‌ಹರ್ಸ್ಟ್‌ನ ಸೈನಿಕ ಶಾಲೆಗೂ ಪ್ರವೇಶಿಸಿದ. ಬಳಿಕ ಸೆಕೆಂಡ್ ಲೆಫ್ಟಿನೆಂಟ್ ಆಗಿ ಉದ್ಯೋಗವೂ ದೊರೆಯಿತು. ಆದರೆ ವಿಧಿ ಬಡಬೇಕಲ್ಲ! ಆ ಉದ್ಯೋಗದಿಂದ ಕೃಪ್ತಿ ದೊರೆಯದೆ ರಾಜೀನಾಮೆ ಕೊಟ್ಟು ಹೊರಬಂದ.

ತದನಂತರ ಎರಡು ವರ್ಷಗಳ ವರೆಗೆ ಅತ ಜರ್ಮನ್ ಭಾಷೆಯನ್ನು, ಫ್ರೆಂಚ್ ಭಾಷೆಯನ್ನು ಕಲಿತ. ಅದರಲ್ಲಿ ಪ್ರವೀಣನೂ ಆದ. ಬ್ರಿಟಿಷ್ ವಿದೇಶ ಇಲಾಖೆಯು ಒಂದು ಪರೀಕ್ಷೆಯಲ್ಲಿ ಸೋತದ್ದು ಆಯಿತು.

ಇಷ್ಟಾಗುವಾಗ ಅತನ ಇತರ ಮೂವರು ಸಹೋದರರು ತಮ್ಮ ಜೀವನದ 'ಸಂಪಾದನೆಯ ಮಾರ್ಗ'ವನ್ನು ಅವಲಂಬಿಸಿಯಾಗಿತ್ತು. ರಿಚಾರ್ಡ್ ಬೀಂಕರ್ ಆಗಿದ್ದ; ಪೀಟರ್ ಸಂಚಾರಿ ಸಾಹಿತಿಯೂದನು; ಮೈಕಲ್ ಸೈನ್ಯದಲ್ಲಿ ಭರ್ತಿಯಾಗಿದ್ದ. ಪೀಟರ್, ರಿಚಾರ್ಡ್ ಕ್ರಮೇಣ ಪ್ರಸಿದ್ಧಿ ಗೊಳಿಸಿ ಛಡ್ಡಿಯನ್ನು ಪಡೆದರು. ಮೈಕೆಲ್ ತಂದೆಯಂತೆ ವೀರ ಮೃತ್ಯುವನ್ನೆ ಪಡೆದ.

ಇಯಾನ್‌ನ ಪಾಡೇನೋ ಎಂದು ತಾಯಿಗೂ ಚಿಂತೆ ಹಿಡಿಯಿತು. ಕಾನೇಫ ಮಾಡಬೇಕೆಂಬುದರ ಬಗ್ಗೆ ಅತ ಇದುವರೆಗೆ ತೀರ್ಮಾನ ಮಾಡಿರಲಿಲ್ಲ. ಕಲವೊಮ್ಮೆ ಶ್ರದ್ಧೆ ವಹಿಸಿ ಲೇಖನಗಳನ್ನು ಬರೆದ ಪತ್ರಿಕಾರಂಗದಲ್ಲಿ ದುಡಿಯುವ ಇಚ್ಛೆಯೂ ಅತನಲ್ಲಿತ್ತು. ಕೊನೆಗೆ ತಾಯಿಯೇ ಅತನಿಗೆ ರ್ಯೂಟರ್ ವಾರ್ತಾ ಸಂಸ್ಥೆಯಲ್ಲಿ ಭರ್ತಿ ಮಾಡಿದಳು.ಅಂದು! ಈ ಸಂಸ್ಥೆಯ ಅಧ್ಯಕ್ಷನಾಗಿದ್ದ ಸರ್ ರೊಡ್ರಿಕ್ಸ್ ಜೋನ್ಸ್, ಎವಲಿನ್‌ಳ ಮಿತ್ರನಾಗಿದ್ದ.

ತನ್ನ ಹೊಸ ಉದ್ಯೋಗವು ಅತನಿಗೆ ತುಂಬಾ ಹಿಡಿಯಿತು. ರ್ಯೂಟರ್ ಪ್ರತಿನಿಧಿಯಾಗಿ ಯುರೋಪನ್ನೆಲ್ಲ ಸಂಚರಿಸುವ ಅವಕಾಶ ಅತನಿಗೆ ಲಭಿಸಿತು.

ಮತ್ತೆ ಅದೊಂದು ದಿನ ರ್ಯೂಟರ್ ವಿದೇಶ ಪ್ರತಿನಿಧಿಗಳ ಪ್ರಮುಖನೊಬ್ಬ ಅತನನ್ನು ಸಮೀಪ ಕರೆದು ಕೇಳಿದ,

'ನಿನಗೆ ರಶ್ಯನ್ ಬರುತ್ತೇನೋ?'

"ಸರಿ ಜೆನ್ನಾಯ್ತು. ಬೇಗನೆ ಕಲಿತು ಬಿತುವಿಯಂತೆ ನಿನ್ನನ್ನು ಮಾಸ್ಕೋಗೆ ಕಳಿಸುವವನಿದ್ದೇನೆ."

ಹೀಗೆ ೧೯೩೯ರಲ್ಲಿ ಇಯಾನ್ ಫ್ಲೆಮಿಂಗ್ ರ್ಯೂಟರ್ ವಾರ್ತಾ ವಿಜನ್ಸಿಯು ಮಾಸ್ಕೋಬ್ಯುರೋದ ಮುಖ್ಯಸ್ಥನಾದ.

ಮಾಸ್ಕೋದಲ್ಲಿ ತನ್ನ ಉದ್ಯೋಗವನ್ನು ಶ್ರದ್ಧೆ ಪೂರ್ವಕವಾಗಿ ಗೈದು ಸ್ವದೇಶಕ್ಕೆ ಹಿಂತಿರುಗಿದ ಫ್ಲೆಮಿಂಗ್‌ನನ್ನು ಇನ್ನೂ ದೂರದ ದೇಶಗಳಿಗೆ ಕಳಿಸಲು ರ್ಯೂಟರ್ ನಿಶ್ಚಯಿಸಿತು. ಇದಕ್ಕೊಪ್ಪದೆ ಅತ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟ. ಹಲವಾರು ವರ್ಷ ಸ್ಟಾಕ್ ಬ್ರೋಕರ್ ಆಗಿ ದುಡಿದ.

೧೯೩೯ರಲ್ಲಿ ಇಂಗ್ಲೆಂಡಿನ "ಟೈಂಸ್" ಪತ್ರಿಕೆಯು ಫ್ಲೆಮಿಂಗನನ್ನು ವಿಶೇಷ ಪ್ರತಿನಿಧಿಯಾಗಿ ಮೋಸ್ಕೋಗೆ ಕಳಿಸಿತು, ಆದರೆ ಅತ ಈ ಬಾರಿ ಮೊಸ್ಕೋಗೆ ತೆರಳಿದ್ದು ಬ್ರಿಟಿಷ್ ಗುಪ್ತಚಾರನಾಗಿ—ಪತ್ರಿಕಾ ಪ್ರತಿನಿಧಿಯು ವೇಷದಲ್ಲಿ. ತದನಂತರ ಮೊಸ್ಕೋ ರೇಡಿಯೋ ಈತನನ್ನು "ಪ್ರಥಮ ದರ್ಜೆಯ ಗೂಢಚಾರಿ" ಎಂದು ಕರೆದಿದೆ.

೧೯೪೧ರಲ್ಲಿ ಫ್ಲೆಮಿಂಗ್ ಬ್ರಿಟಿಷ್ ನೌಕಾ ಸೇನೆಯ ಲ್ಲಿ ಗೂಢಚಾರನಾಗಿ ನೇಮಿಸಲ್ಪಟ್ಟ ಪ್ರಮುಖ ಚಾರನಾದ ಅಡ್ಮಿರಲ್ ಜೋನ್ ಗೋಡ್‌ಫ್ರೇಯ ಪರ್ಸನಲ್ ಆಗಿ ಫ್ಲೆಮಿಂಗ್ ದುಡಿದ. ಇವರಿಬ್ಬರೂ ಗೂಢಚಾರರಾಗಿ ಹಲವಾರು ಕಡೆ ಸಂಚರಿಸಿದರು.೧೯೪೨ರಲ್ಲಿ ಅತ ಒಂದು ಸನ್ಮೇಳನದಲ್ಲಿ ಪಾಲ್ಗೊಳ್ಳಲು ವೆಸ್ಟ್ ಇಂಡೀಸಿನ ಜಮೈಕಾಕ್ಕೆ ತೆರಳಿದ. ಆ ನಗರವು ಅತನ ಮನಸ್ಸನ್ನು ಸೂರೆಗೊಂಡು, ಸೆರೆ ಹಿಡಿಯಿತು. ೧೯೪೬ರಲ್ಲಿ ನಾವಿಕ ಸೇನೆಯಿಂದ ನಿವೃತ್ತನಾಗಿ ಅತ ಜಮೈಕಾಕ್ಕೆ ಬಗಮಿಸಿದ. ಅಲ್ಲಿ ಒಂದು ಬಂಗಲೆಯನ್ನು ಕಟ್ಟಲು ತೊಡಗಿದ. ಅದಕ್ಕೆ "ಗೋಲ್ಡನ್ ಐ" ಎಂದು ಹೆಸರಿಟ್ಟ. ತಿಶಿರ ಕಾಲವನ್ನು ಇಲ್ಲಿ ಕಳೆದು ಇಂಗ್ಲೆಂಡಿಗೆ ಹಿಂತಿರುಗಿದ. ಆದ "ಸಂಡೆ ಟೈಮ್ಸ್"ಗುಂಪಿನ ಅಧಿಕಾರಿಯೂದ ಟೈಂಪಲಿ ಪ್ರಭು ಅತನನ್ನು ಉದ್ಯೋಗಕ್ಕೆ ಸೇರಿಸಿಕೊಂಡ. ಫ್ಲೆಮಿಂಗ್ ತನಗೆ ಅಂದ ... ವರ್ಷದ ಮೂಸ, ಜಮೈಕಾಕ್ಕೆ ಕೆಂಪು ನಾಸವೂಸಲು ಪ್ರತಿ ವರ್ಷವೂ ಬಿಡುವು ದೊರೆಯು ಬೇಕೆಂದ. ಅದಕ್ಕೂ ಒಪ್ಪಿಗೆ ದೊರೆಯಿತು.

೧೯೫೩ರಲ್ಲಿ ಅತನು ಪತ್ರಿಕಾ ವೃತ್ತ ನಾಯಿಯೂಪ ರೊಥರ್ ವಿಲ್ಲರ್ ಪ್ರಭುವಿನ ಪುತ್ರಿಯೂದ ಆನಿಯನ್ನು ಕಂಡನು.

[ಹನ್ನೆರಡನೇ ಪುಟ ನೋಡಿರಿ]

ಸಿಂಡಿಕೇಟಿನ ಪಾಸ್‌ಬುಕ್

ನಿಮ್ಮ ಚಿಕ್ಕ ಮಗುವಿಗೂ ಒಂದು ಅಮೂಲ್ಯ ವಸ್ತು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಕಿರಿಯ ಬಾಲಿಕೆಯ ಹೆಸರಿನಲ್ಲಿ ನೀವು ತೆರೆದಿರುವ ಉಳಿತಾಯ ಖಾತೆ ಆಕೆಗೆ ಭವಿಷ್ಯದಾಯವನ್ನೆನಿಸಿದೆ. ನಿಮ್ಮ ಬಾಲಿಕೆಯ ಹೆಸರಿನಲ್ಲಿರುವ ಬ್ಯಾಂಕಿನ ಪಾಸ್‌ಬುಕ್ ಆಕೆಗೆ ಅಮೂಲ್ಯ ನಿಧಿಯೂ ಹೌದು. ಸಿಂಡಿಕೇಟ್ ಬ್ಯಾಂಕು ಕೇವಲ ಆಕೆಯ ತಂದೆಯ ಬ್ಯಾಂಕಲ್ಲ. ಆಕೆಯದು ಕೂಡಾ.

ಹಣವನ್ನು ಕೂಡಿಡುವ ಪರಿವಾರ ನಿಮ್ಮ ಬಾಲಿಕೆಗೆ ಎಷ್ಟು ಪ್ರಿಯವೋ ಕೂಡಿಟ್ಟ ಹಣವನ್ನು ತನ್ನ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡುವುದು ಆಕೆಗೆ ಅಷ್ಟೇ ಪ್ರಿಯವಾಗಬಲ್ಲುದು. ಜತೆಗೆ ಬ್ಯಾಂಕಿನಲ್ಲಿ ಆಕೆ ಸಂಧಿಸುವ ವಂದಿಯ ಸ್ನೇಹ-ವಿಶ್ವಾಸಗಳಿಂದಾಗಿ ಆ ಬ್ಯಾಂಕು ಆಕೆಗೆ ತೀರಾ ಪ್ರಿಯನೆಸಿಸಬಲ್ಲುದು.

ಎಳೆವಯಸ್ಸಿನಲ್ಲಿ ನಿಮ್ಮ ಮಕ್ಕಳ ಹೆಸರಿನಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯುವುದರಿಂದ ಬ್ಯಾಂಕಿಂಗ್ ಹವ್ಯಾಸವನ್ನು ಮೂಡಿಸಲು ನೆರವಾಗಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಒಂದು ಅವ್ಯಕ್ತ ಶಕ್ತಿಯ ಬಗ್ಗೆ ಸಂಗ್ರಹ ಲೇಖನ

ಹಿಪ್ನಾಟಿಸಂ ಬಗ್ಗೆ ನಿಮಗೇನು ತಿಳಿದಿದೆ?

ಬರೆದವರು— ಶ್ರೀ ಬಿ. ಚಂದ್ರಶೇಖರ ಅಡಿಗ.

ಜಗತ್ತಿನಲ್ಲಿ ಎಷ್ಟು ಜೀವಿಗಳಿಂತ ಮಾನವನು ಉಷ್ಣತೆ ಮಟ್ಟದ ಜೀವನವನ್ನು ಸಾಗಿಸುವುದಕ್ಕೆ ಅವನ ಮನಸ್ಸಿನ ಶಕ್ತಿಯೇ ಕಾರಣ. ಈ ಮನಶಕ್ತಿ ಯೂರಲ್ಲಿ ಹೆಚ್ಚಾಗಿರುತ್ತದೋ ಅವರು ಈ ಮಾನವ ಸಮೂಹದಲ್ಲಿ ತಮ್ಮದೇ ಆದ ಅಧಿಕಾರವನ್ನು ಹೊಂದಿ ತಮ್ಮ ಸುತ್ತಲಿರುವವರಮೇಲೆ ಅಧಿಕಾರ ನಡೆಸುತ್ತಾರೆ. ನೆಪೋಲಿಯನ್ ಬೋನಪಾರ್ಟೆ, ಹಿಟ್ಲರ್ ಮತ್ತು ಮಹಾತ್ಮಾ ಗಾಂಧಿಯವರನ್ನು ಈ ಬಗ್ಗೆ ಉದಾಹರಣೆಯಾಗಿ ತೆಗೆದು ಕೂಳ್ಳಬಹುದು. ಅವರ ಒಂದು ವಿಶೇಷವಾದ ಮನಃ ಶಕ್ತಿಯಿಂದ ಉಳಿದವರ ಮನಸ್ಸನ್ನು ಗೆಲ್ಲಲು ಸಾಧ್ಯವಾಯಿತು. ಇದನ್ನೇ ಹಿಪ್ನಾಟಿಸಂ ಅಥವಾ ಮನನೋಹಕ ಕಾಲವೆಂದು ಕರೆಯುತ್ತಾರೆ.

ಹಿಪ್ನಾಟಿಸಂ ಎಂದರೆ ಪ್ರಬಲವಾದ ಮನಸ್ಸು ದುರ್ಬಲ ಅಥವಾ ಬಲಹೀನವಾದ ಮನಸ್ಸಿನ ಮೇಲೆ ನಡೆಸುವ ಅಧಿಕಾರ ಎಂದು ಹೇಳಬಹುದು. ಆದರೂ ಇದರ ನಿರ್ದಿಷ್ಟ ರೂಪು ರೇಖೆಯನ್ನು ಹೇಳಲು ಸಾಧ್ಯವಿಲ್ಲ. ಇದನ್ನು ಮಾನವನ ಕಲ್ಯಾಣಕ್ಕೆ ಉಪಯೋಗಿಸುವ ಸಾಧ್ಯತೆ ಇದೆ. ಇದು ಭಾರತೀಯರಿಗೆ ಹೊಸ ವಿದ್ಯೆ ಅಲ್ಲ. ಹಿಂದಿನ ಕಾಲದ ಋಷಿಗಳು ಈ ವಿದ್ಯೆಯಲ್ಲಿ ಸಿದ್ಧಿಯನ್ನು ಪಡೆದಿದ್ದರು. ಇದನ್ನು ಮೂಲ ಮೂಟ್ನೆಂದಲಾದುವುಗಳ ಜೊತೆಗೆ ಸೇರಿಸಿ ಅದರ ವಿನಾಶಕಾರೀ ಉಪಯೋಗವನ್ನು ಪಡೆದುಕೊಂಡಿದ್ದರು.

ಹಿಪ್ನಾಟಿಸಂ ಮಾಡುವಾತನನ್ನು ಡಾಕ್ಟರ್ ಎಂದೂ ಹಿಪ್ನಾಟಿಸಂ ಮಾಡಿಸಿಕೊಳ್ಳುವವನನ್ನು ರೋಗಿ ಎಂದೂ ಇಟ್ಟುಕೊಂಡು ಹಿಪ್ನಾಟಿಸ್ಮ್ ಮಾಡುವ ವಿಧಾನವನ್ನು ನೋಡುವ ಮೊದಲು ರೋಗಿಯನ್ನು ಒಂದು ಆರಾಮಾಸನದಲ್ಲಿ ಕೂರಿಸಿ ಅತಿ ಪ್ರಕಾಶ ಮಾನವಾಗಿ ಉರಿಯುವ ಒಂದು ವಸ್ತುವನ್ನು ೫—೧೦ ನಿಮಿಷಗಳ ವರೆಗೆ ನೋಡುವಂತೆ ಡಾಕ್ಟರ್ ಮೃದುವಾಗಿ ಹೇಳುತ್ತಾನೆ. "ಈಗ ನಿಮಗೆ ಕಣ್ಣು ಭಾರವಾಗಿದ ನಿಶ್ರೆ ಮಾಡಬಯಸುವಿರಿ. ಈಗ ನಿಮ್ಮ ಕಾಲು ಭಾರವಾಗಿದೆ. ನಿಮ್ಮ ಕಣ್ಣು ಸಂಪೂರ್ಣ ಸೋತಿದೆ! 'ಈ ಸಮಯದಲ್ಲಿ ರೋಗಿಗೆ ತೂಕಡಿಕೆ, ಮೈ ಭಾರ ಶಾಖ ಉಂಟಾಗುತ್ತಾ ಬರುತ್ತದೆ. ಡಾಕ್ಟರ್ ಮೃದುವಾಗಿ ರೋಗಿಯ ತಲೆ, ಮೂಗು, ಎದೆ, ಹೊಟ್ಟೆ ಮುಂತಾದುವುಗಳನ್ನು ಮುಟ್ಟುತ್ತಾ ಬರುತ್ತಾನೆ.

ಕಲವೊಮ್ಮೆ ಡಾಕ್ಟರ್ ರೋಗಿಯ ಮುಖದಿಂದ ಕಳಭಾಗಕ್ಕೆ ಮೃದುವಾಗಿ ನೇವರಿಸುತ್ತಾನೆ. ಹಾಗೆ ಮಾಡುವುದರಿಂದ ರೋಗಿಯು ಡಾಕ್ಟರ್‌ನ ವಶೀಕರಣಕ್ಕೆ ಒಳಗಾಗಿ ಅವನು ಹೇಳಿದುದನ್ನು ಒಪ್ಪುತ್ತಾನೆ. ಆನಂತರ ಡಾಕ್ಟರ 'ನೀವು ಕಣ್ಣು ಮುಚ್ಚಬಹುದು' ಎಂದು ಹೇಳಿದರೆ ರೋಗಿಯು ಹಾಗೇ ಮಾಡುತ್ತಾನೆ. ಈಗ ಅವನು ಹಿಪ್ನಾಟೈಸ್ ಆಗಿದ್ದಾನೆ. ಎಂದು ಆಯಿತು. ಇದನ್ನು ದೃಢಪಡಿಸಲು ಡಾಕ್ಟರ್ ಅವನೊಡನೆ "ನೀವು ಕೆರಿಯ ಬೆರಳು ಮಡಿಸಲಾರಿ' ಎಂದರೆ ಅವನು ಕೈ ಬೆರಳು ಮಡಿಸಲು ಪ್ರಯತ್ನಿಸಿ ಸೋಲುತ್ತಾನೆ. ಆಗ ನೀವು ಆ ಕೈಯನ್ನು ಕತ್ತರಿಸಿದರೂ ಅವನಿಗೆ ನೋವುಂಟಾಗಲಾರದು. ಈ ಅವಸ್ಥೆಯಲ್ಲಿ ಕೈಗೆ ಆಪರೇಷನ್ ಮಾಡಿದರೂ ಅವನಿಗೆ ನೋವಾಗಲಾರದು, ಡಾಕ್ಟರ್ ರೋಗಿಯನ್ನು ಬಯಸುವ ವರೆಗೂ ತನ್ನ ಅಧೀನದಲ್ಲಿಟ್ಟುಕೊಳ್ಳಬೇಕಾದರೆ "ನಾನು ನಿಮ್ಮ ಹೆಸರನ್ನು ಮೂರು ಸಾರಿ ಕರೆಯುವವರೆಗೂ ಎಚ್ಚರಗೊಳ್ಳಲಾರಿ" ಎಂದು ತಿಳಿಸಬಿಟ್ಟರೆ ಮೂರು ಬಾರಿ ಕರೆಯುವವರೆಗೆ ಅವನಿಗೆ ಎಚ್ಚರವಾಗಲಾರದು. ಹೀಗೆ ಮಾಡಿದೆ, ಇದ್ದಲ್ಲಿ ರೋಗಿಯು ಅರ್ಧದಲ್ಲಿ ಎಚ್ಚರವಾಗುವ ಸಂಭವವಿದೆ.

ರೋಗಿಯು ಹಿಪ್ನಾಟೈಸ್ ಆದಾಗ ಒಂದು ಗಂಟೆಯ ನಿದ್ರಾವಸ್ಥೆಯಲ್ಲಿ ಇರುತ್ತಾನೆ. ಹೊರಗಿನ ಪ್ರಪಂಚದ ಜ್ಞಾನವನಿಗಿರುವುದಿಲ್ಲ. ಡಾಕ್ಟರನ ಮಾತ್ರ ರೋಗಿಗೆ ಸ್ಪಷ್ಟವಾಗಿ ಕೇಳಿಸಿದರೂ ಬೇರೆ ಎಷ್ಟೇ ದೊಡ್ಡ ಶಬ್ದವಾದರೂ ಅವನಿಗೆ ಕೇಳಿಸುವುದಿಲ್ಲ. ನಿದ್ರಾವಸ್ಥೆಯಲ್ಲಿ ಅವನಿಗೆ ಒಂದು ಗಂಟೆಯ ನಂತರ ಒಂದು ಸ್ಥಳಕ್ಕೆ ಬರಲಿಕ್ಕೆ ಹೇಳಿದರೆ ನಿದ್ರಾವಸ್ಥೆ ಮುಗಿದ ಮೇಲೆ ಒಂದು ಗಂಟೆಯ ನಂತರ ಅವನು ಅದೇ ಸ್ಥಳಕ್ಕೆ ಹೋಗುತ್ತಾನೆ. ರೋಗಿಯು ಹಿಪ್ನಾಟೈಸ್ ಆಗಿರುವಾಗ "ಸ್ವರ್ಗದಿಂದ ನಿನ್ನ ತುರುಗಳು ಬಂದರು ನಮಸ್ಕಾರ ಮಾಡು" ಎಂದರೆ ಹಾಗೇ ಮಾಡುತ್ತಾನೆ. ನೀವು ಕಹಿಯಾದ ಪದಾರ್ಥ ಕೂಟ್ಟು ಸಿಹಿಯಾಗಿದೆ ತಿನ್ನು ಎಂದರೆ ಸಿಹಿಯಾದ ಪದಾರ್ಥ ತಿಂದಂತೆ ತಿನ್ನುತ್ತಾನೆ. ಆದರೆ ಅತನು ತಾನು ಈ ಇನ್ನೊಬ್ಬನ ಒಂದು ಗುಟ್ಟನ್ನು ಯಾರಿಗೂ ಹೇಳಲಾರನೆಂದು ತಿಳಿದಿದ್ದರೆ ನೀವು ಅದನ್ನು ಬಹಿರಂಗ ಪಡಿಸಲಾರಿ. ಆದ ಅವನು ಚೈತನ್ಯಾವಸ್ಥೆಗೆ ಬರಬಹುದು. ಹಾಗೆಯೇ ಅತ್ಯಂತ ಗೌರವಸ್ಥಳಾದ ಹೆಂಗಸನ್ನು ಹಿಪ್ನಾಟೈಸ್ ಮಾಡಿ, ಬಕ್ಕಲೆಯಾಗಿ ತಿರುಗಾಡಲು ಹೇಳಿದರೆ ಅವಳು ಎಚ್ಚರಗೊಳ್ಳುವಳು. ಆದರೆ ಮೊದಲೇ ತಿಳಿದಿದ್ದರೆ ಡಾಕ್ಟರ್ ಹೇಳಿದಂತೆ ಕೇಳುವಳು. ನಾಡ್ಯಾದ ಇಸವಿಯನ್ನು ರೋಗಿಯಿಂದ ತಿಳಿದುಕೊಳ್ಳಬಹುದು. ನೀವು ಅವರ ಬಾಲ್ಯಾವಸ್ಥೆಯ ನೆನಪನ್ನು ಮಾಡಿದಲ್ಲಿ ಅವನು ಬಾಲ್ಯದಲ್ಲಿ ಗೀಚಿದಂತೆ ಅಕ್ಷರಗಳನ್ನು ಗೀಚುತ್ತಾರೆ ಮತ್ತು ಅವು ಒಂದೇ

(ಹನ್ನೊಂದನೇ ಪುಟ ನೋಡಿರಿ)

ಕ್ಷಯರೋಗವನ್ನು ಗುಣಪಡಿಸಬಹುದೇ?

ಕ್ಷಯರೋಗವನ್ನು ಅತ್ಯಂತ ಪರಿಣಾಮಕಾರಿಯಾಗಿರುವ ಆಧುನಿಕ ಔಷಧಿಗಳಿಂದ ಗುಣಪಡಿಸಬಹುದು. ಅವುಗಳನ್ನು ಕನಿಷ್ಠ ಪಕ್ಷ ಒಂದು ವರ್ಷದ ವರೆಗಾದರೂ ಕ್ರಮತಪ್ಪದೆ ಜಾಗರೂಕತೆಯಿಂದ ಕೊಟ್ಟರೆ, ಉತ್ತಮ ಫಲಿತಾಂಶದ ಭರವಸೆ ಹೇಳಬಹುದು. ಆದರೆ, ಚಿಕಿತ್ಸೆಯನ್ನು ಆರಂಭಿಸಿದೆಯಲ್ಲೇ ಶಕ್ತಿವಿದ್ದಷ್ಟು ಮೊದಲು ಆರಂಭಿಸುವುದು ಮುಖ್ಯ. ಮತ್ತು ಡಾಕ್ಟರರು ಹೇಳುವ ತನಕ, ಒಂದು ವರ್ಷದಿಂದ ಎರಡು ವರ್ಷಗಳ ವರೆಗೆ—ಕೊಡಬೇಕಾಗುವುದು. ಇಂದಿನ ದಿನಗಳಲ್ಲಿ, ಒಬ್ಬ ಕ್ಷಯರೋಗಿಯು ಮೊದಲಿನಂತೇ ತನ್ನ ಸಾಮಾನ್ಯ ಚಟುವಟಿಕೆಗಳ ಜೀವನವನ್ನು ನಡೆಸಲು ಸಾಧ್ಯವಾಗುತ್ತಿದೆ.

ಇದೀಗ ವಾರ್ಷಿಕ ಕ್ಷಯರೋಗ ಮುದ್ರೆ ಮಾರಾಟ ಚಳವಳದ ಕಾಲ. ಟಿ ಬಿ ಮುದ್ರೆಗಳನ್ನು ಕೊಂಡು ಕೊಂಡು ನಿಮ್ಮ ದಿನನಿತ್ಯದ ಟಪಾಲಿನಲ್ಲಿ ಶುಭಾಶಂಸೆ ಯ ಕಾರ್ಡುಗಳಲ್ಲಿ ಮತ್ತು ಉಡುಗೊರೆಯ ಪೆಟ್ಟಿಗೆಗಳ ಮೇಲೆ ಅಂಟಿಸಿರಿ. ಇದರಿಂದ ಸಂಗ್ರಹವಾಗುವ ಹಣವು ಬಡ ಕ್ಷಯರೋಗಿಗಳಿಗೆ ನೆರವಾಗುವಷ್ಟಾಗಿದೆ. ಒಂದು ಮುದ್ರೆಯ ಬೆಲೆ— 10 ಪೈಸೆ ಮಾತ್ರ.

ಮುದ್ರೆಗಳು ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಂಘ, ಮಂಗಳೂರು ಮತ್ತು ಅದರ ವಿವಿಧ ಏಜನ್ಸಿಗಳಿಂದ ದೊರೆಯುವುದು.

ನಿಮ್ಮ ಕುಟುಂಬವನ್ನು ಯೋಜಿಸಿರಿ — ಮತ್ತು ನಿಮ್ಮ ಮಕ್ಕಳನ್ನು ಆರೋಗ್ಯವಾಗಿಡಿರಿ.

18 ನೇ ಕ್ಷಯರೋಗ ಮುದ್ರೆ ಮಾರಾಟ ಚಳವಳ

(ಭಾರತ ಕ್ಷಯರೋಗ ಸಂಘ, ನವದೆಹಲಿ, ಇವರ ಹೊಣೆಗಾರಿಕೆಗೊಳಗಾದುದು.)

ಈ ಸ್ಥಳವನ್ನು ದಾನಮಾಡಿದವರು:

ನವಯುಗ, ಉಡುಪಿ

ಸುತ್ತ ಮುತ್ತಲಿಂದ—

ಬಂಗಾಳಿಗಳ ಹೊಸತಂತ್ರ

ಪಶ್ಚಿಮ ಬಂಗಾಳದ ರಾಜ್ಯಪಾಲರು ಸಂವಿಧಾನವನ್ನು ವಂಚಿಸಿ ತಳ್ಳಿ ಅಜಯ ಮುಖರ್ಜಿ ಸಂಪುಟವನ್ನು ಕೆತ್ತು ಹಾಕಿದರೆಂಬ ಆರೋಪ ಹೊತ್ತರು. ಡಾ। ಪಿ. ಸಿ. ಘೋಷರ ಸಂಪುಟವು ಸಂವಿಧಾನ ರೀತ್ಯಾ ರಚಿಸಲಾಗಿಲ್ಲವೆಂಬ ಕಾರಣದಿಂದ ವಿಧಾನ ಸಭೆಯು ಸಭಾಪತಿ ಬ್ಯಾನರ್ಜಿಯವರಿಂದ ಅದಕ್ಕೆ ಮನ್ನಣೆ ಸಿಗದೆ ಹೋಯಿತು. ಆದರೆ, ಕೇಂದ್ರ ಸರಕಾರ ಘೋಷ ಸಂಪುಟವನ್ನೂ, ರಾಜ್ಯ ವಿಧಾನ ಪರಿಷತ್ತೂ ರಾಜ್ಯಪಾಲರ ಕ್ರಮವನ್ನು ಅನಿವಾರ್ಯವೆಂದೂ ಘೋಷ ಸಂಪುಟವು ಕ್ರಮಬದ್ಧವೆಂದೂ ಸಾರಿತು. ಶ್ರೀ ಧರ್ಮವೀರ ಗೆ ಧರ್ಮಕಾರ್ಯವನ್ನೇ ಮಾಡಿ ಚೀನೀಯ ಪಡೆಗಳು ಬಡಕರನ್ನು ಬಗ್ಗು ಬಡೆದು, ದೇಶ ವಿಕ್ರಯದ ವಿಶ್ವಾಸಾರ್ಹ ಹೊರಟ ದೇಶದ್ರೋಹಿ ವೀರರನ್ನು ಅದುಮಿ ಹಿಡಿದರೆಂಬುದನ್ನೂ ಇದು ನ್ಯಾಯವೆಂಬುದನ್ನೂ ಸಂಸತ್ತು ಒಪ್ಪಿಕೊಂಡಿತು.

ಮುಂದಾದರೂ ಬಂಗಾಳದ ಹಿರಿಗಳು ಸುಮ್ಮನಿರುತ್ತಯೆ? ಬೆಡ್ಡಾದಲ್ಲಿ ಸಿಕ್ಕಿ ಬಿದ್ದ ಆನೆ ಉಮ್ಮಳಿಸುವಂತೆ ಅಜಯರು ಪರಾಜಯದಿಂದ ತಳಮಳಿಸಿತಮ್ಮ ಸಹಚರರೊಡಗೂಡಿ ಗುಡುಗಿಯೇ ಗುಡುಗುತ್ತಾರೆ. ರೆಕ್ಕೆ ಕಳಚಿದ ಹಕ್ಕಿಯ ಛಲದೆಯೂಗಿದೆ ಇವರದ್ದು. ಲಘಕಾರ ರಷ್ಟೆ' ತಮ್ಮ ಬಗಲಲ್ಲಿರುವಾಗ ಇವರು ಪೀಕಿಂಗಿನಪ್ತ ಹಾರವ ಪ್ರಯತ್ನ ಮಾಡಿದರು. ರೆಕ್ಕೆ ಬಡಿಯ ತೊಡಗುವಾಗಲೇ, (ಪ್ರಾಯಃ ತೋರಿಸಿದ ಶಕ್ತಿ ಹೆಚ್ಚಾಯಿತು) ಅದು ರಾಷ್ಟ್ರಪತಿ ಆಳ್ವಿಕೆಯ ಕುಣಿಕೆಯನ್ನು ಕಂಡರಿಸಿತು. ಇನ್ನು, ಬಂಗಾಳದಲ್ಲಿ ಸದ್ಯ ಶಾಂತಿ ಸ್ಥಾಪನೆ ಕಷ್ಟಸಾಧ್ಯ. ಆಶ್ಚರ್ಯ, ನೂಂದ್ರ ವಿನಧಿಂಗಿತವಾದ ಸಂಯುಕ್ತರಂಗವು ರಾಜ್ಯದಲ್ಲಿ ಒಂದಲ್ಲ ಒಂದು ಗೊಂದಲ ನಡೆಸುತ್ತಲೇ ಇರುವುದು. ಘೋಷ ಸಂಪುಟವು ಫಜಕ್ಕೂ ಮುಳ್ಳಿನ ಕಿರೀಟವನ್ನೆ ಹೊರುವ ಸಾಹಸ ತೋರಿಸಿದೆ, ಇದು ಯಶಗಳಿಸಬೇಕು, ಪ್ರಜಾಸತ್ತೆ ಉಳಿಯಬೇಕು.

ಬರಿಯ ಗುಲ್ಲಿನಿಂದ ಲಾಭವಿಲ್ಲವೆಂಬುದು ಸಂಯುಕ್ತರಂಗದವರಿಗೂ ಈಗೀಗ ಮನವರಿಕೆಯಾಗತೊಡಗಿದಯೋ ಏನೋ! ಘೋಷ ಸಚಿವ ಸಂಪುಟವನ್ನು ಮುಸ್ಲಿಸದ ರಾಜ್ಯಪಾಲರ ಕ್ರಮವನ್ನೆ ಅಕ್ರಮವೆಂದು ಕರೆಸಿ ವಿಧಾನ ಸಭಾಪತಿ ಬ್ಯಾನರ್ಜಿಯವರು ಬಂಗಾಳದ ಸಮಸ್ಯೆಗೆ ಸಧ್ಯಾವಧಿ ಜ್ಞಾನವಣೆಯೊಂದೇ ತಾರಕವೆಂದಿದ್ದಾರೆ, ರಾಷ್ಟ್ರಪತಿ ಆಳಿಕೆಯನ್ನು ಆದಕ್ಕೆ ಪೂರ್ವಭಾವಿಯಾಗಿ ಹೇರಬೇಕೆಂದೂ ಅವರನ್ನುತ್ತಾರೆ. ಜ್ಯೋತಿ ಬಸು ಕೂಡ ಇದನ್ನೇ ಅನುನೋದಿಸ ತೊಡಗಿದ್ದಾರೆ. ಇದರಿಂದ ಒಂದು ಮಾತು ಸತ್ಯವಾಗುವುದು. ಡಾ। ಪಿ. ಸಿ. ಘೋಷರು ನಿಜಕ್ಕೂ ಬಹುಮತ ಪಡೆದು ಕೂಡಿದ್ದಾರೆ. ಇದನ್ನು ವಿಧಾನ ಸಭೆಯಲ್ಲಿ ಪ್ರಕಟಗೊಳಿಸಿ ತಮ್ಮ ಮುಖಕ್ಕೆ ಮಸಿ ಬಳಿದುಕೊಳ್ಳಲೊಪ್ಪದ ಸಂಯುಕ್ತರಂಗವು ಅಧಿನೇಶನಕ್ಕೆ ಮುನ್ನಾ ದಿನವೇ 'ನಾಳೆ ಸೋಜಿಗದ ಘಟನೆ ನಡೆಯುವುದು' ಎಂದು ಭವಿಷ್ಯ ನುಡಿದಿತ್ತು. ಇದೀಗ ತಮ್ಮ ಬೇಳೆ ಬೇಯದೆ ಹೋದುದರಿಂದ ಸಧ್ಯಾವಧಿ ಜ್ಞಾನವಣೆಗೆ ಒತ್ತಾಯ ತರುತ್ತಿದೆ. ಆದರೆ, ಇದು ನ್ಯಾಯವಲ್ಲ. ವಿಧಾನ ಸಭಾಧ್ಯಕ್ಷರಲ್ಲಿ ಅವಿಶ್ವಾಸ ವ್ಯಕ್ತವಾಡಿ ಬೇರೊಬ್ಬರನ್ನು ಆ ಸ್ಥಾನಕ್ಕೆ ತರುವ ಯೋಚನೆಯೂ ಇದೆ.ಏಕೆಂದರೆ, ಬ್ಯಾನರ್ಜಿಯವನ್ನು ಫಲುಮೆಯನ್ನು ಬದಲಿಸುವುದಿಲ್ಲ. ಅವರು ಅಜಯರಿಗೇ ಜಯಕಾರ ಹಾಕುವವರು. ಆದುದರಿಂದ ವಿಧಾನ ಸಭೆಯಲ್ಲಿ ಅನಂತ್ಯೇ ಮುಖ್ಯಮಂತ್ರಿಯೆಂದು ಗೌರವಿಸುವ ನವ ಪಂಥ ಭ್ರಾಂತರು.

ಂ ಂ ಂ ಂ

ಇಂದಿರಾ ಗಾಂಧಿ — ಕಾಮರಾಜರು ಕೊನೆಗೂ ಸರ್ವ ಸಮ್ಮತ ನಿರ್ಧಾರಕ್ಕೆ ಬಂದು ಸದ್ಯ ಕರ್ನಾಟಕದ ಮುಖ್ಯಮಂತ್ರಿಯಾದ ನಿಜಲಿಂಗಪ್ಪನವರನ್ನು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಅಧಿಕೃತ ಹುರಿಯಾಳುವೆಂದು ಘೋಷಿಸಿದರು. ಚುನಾವಣಾ ಕಣಕ್ಕಿಳಿದ ಎಲ್ಲರೂ ಹಿಂದೆ ಸರಿದು ಹೋಗುತ್ತಾರೆ, ಅಥವಾ ಚುನಾವಣೆ ನಡೆದರೂ ಇವರು ಗೆದ್ದೇ ಗೆದಿಯುತ್ತಾರೆ —ಇವರು ಒಮ್ಮತದ ಅಭ್ಯರ್ಥಿ.

ನಿಜಲಿಂಗಪ್ಪನವರ ಹೆಸರು ಮೊದಲೂ ಕೇಳಿ ಬರುತ್ತಿತ್ತು. ಆದರೆ, ಅವರು ಕೊನೆಗೆ ಅತ್ಯಂತ ಒತ್ತಾಯದಿಂದ ಹೊಸ ಪದವಿ ಸ್ವೀಕರಿಸಿದರು. ಎಲ್ಲರೂ ತಮ್ಮನ್ನು ಬಯಸುವಾಗ, ತಾನು ನಲುವತ್ತು ವರ್ಷಗಳ ಕಾಲ ದುಡಿದ ಸಂಸ್ಥೆಗೆ ಸೇವೆ ಸಲ್ಲಿಸಲು ಹಿಂಜರಿಯಲು ಅವರು ಹಿಂಜರಿದರು. ಕಾಂಗ್ರೆಸ್‌ನ ಘನತೆ—ವೈಭವಗಳನ್ನು ಮೆರೆಯಿಸಲೇ ಬೇಕಾದ ಇಂದಿನ ಅಗತ್ಯದ ದಿನಗಳಲ್ಲಿ ನಿಜಲಿಂಗಪ್ಪನವರು ಹೊಸ ಹೊಣಗಾರಿಕೆ ಹೊರುತ್ತಾರೆ.

ಇದರಿಂದ ಕರ್ನಾಟಕದ ಕಾಂಗ್ರೆಸ್ಸು ಮತ್ತೆ ಕಜ್ಜಾಯವಾಯಿತೆಂದು ಆರಂಭದಿಂದಲೂ ಕಜ್ಜಾಟಕ್ಕೆ ಹೆಸರು ಪಡೆದ ಕರ್ನಾಟಕದ ಕಾಂಗ್ರೆಸ್ಸು ಇದೀಗ ಒಂದಾಗಿರುವುದಾದರೆ, ನಿಜಲಿಂಗಪ್ಪನವರ ನಾಯಕತ್ವದಲ್ಲಿ. ಇವರು ಹಿಂದೊಮ್ಮೆ ಕಜ್ಜಾಟದ ಸುರಳಿಯಲ್ಲಿ ಸಿಕ್ಕಿದುದರಿಂದ ಅಧಿಕಾರ ತ್ಯಾಗ ಮಾಡಿದರು. ಆದೇನೋ ಕಾರಣದಿಂದ ಚುನಾವಣೆಯಲ್ಲೂ ಸೋತರು. ಆ ಸಮಯದಲ್ಲಿ ಒಬ್ಬ ರಾಜಕಾರಣಿ ಏನೇನನ್ನು ಕೇಳಿಬಹುದೋ ಅವೆಲ್ಲವನ್ನೂ ಕೇಳಿದರು. ಆದರೆ ರಾಜಕಾರಣದಲ್ಲಿ ಏರಿಳಿವು, ಮಾನಾಪಮಾನವೆಲ್ಲವನ್ನೂ ಎದುರಿಸಬೇಕು-ಆದೂ ಪ್ರಜಾಪ್ರಭುತ್ವದಲ್ಲಿ.

ಸದ್ಯ ಕೆಲಕಾಲ ರಾಜ್ಯದ ಮುಖ್ಯಮಂತ್ರಿಯಾಗಿಯೂ ಮುಂದುವರಿದು ಮುಂದೆ, ಅಂದರೆ, ಅತೀ ಶೀಘ್ರದಲ್ಲೇ ಹೊಸ ನಾಯಕನ ಆಯ್ಕೆ ನಾಡಿಅವರಿಗೆ ಜವಾಬುದಾರಿ ಕೊಡುವ ಆಶಯ ಅವರಿಗಿರದು. ಈ ಹೊಸ ನಾಯಕನ ಆಯ್ಕೆಯೂ ಒಮ್ಮತದಿಂದ ನಡೆಯುವ ನೀತಿಯೂ ಅವರದು.

ಂ ಂ ಂ

ಮುಂದಿನ ತಿಂಗಳ ಆರಂಭದಲ್ಲಿ ಮಧ್ಯಪ್ರದೇಶದ ಸಾಂಗ್ಲಿಯಲ್ಲಿ ನಡೆಯುವ ಕಾಂಗ್ರೆಸ್ ಅಧಿವೇಶನವು ಮಹತ್ವಪೂರ್ಣವಾಗುವುದು. ಈ ಅಧಿವೇಶನದಲ್ಲಿಯೇ ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷ ಪದವನ್ನು ಗ್ರಹಿಸುವರು. ಇವರು ಕಾಂಗ್ರೆಸ್ ಅಧ್ಯಕ್ಷರಾಗುವುದರಿಂದಕರ್ನಾಟಕ-ಮಹಾರಾಷ್ಟ್ರ ಗಡಿ ತಂಟೆ ರಾಜಿಯಾಗಿ ತೀರ್ಮಾನವಾಗುವುದು ಸಾಧ್ಯ

(ಪಕ್ಕನೇ ಪುಟ ನೋಡಿ)

ಆತನು ಶಾಲಾ ಉಪಾಧ್ಯಾಯ ರಾಜ್ಯ ಪ್ರಶಸ್ತಿಯು ಲಭಿಸುವ ಮೂಲಕ ಆತನ ಶ್ರದ್ಧಾವಂತ ಸೇವೆಗೆ ಅನುಗುಣವಾದ ಮನ್ನಣೆ ದೊರಕಿತು. ಆದರೂ ಆತನ ನೆಮ್ಮದಿ—ಸಂತೋಷಕ್ಕೆ ಜೀವಲ ಈ ಗೌರವನೇ ಕಾರಣವಲ್ಲ. ಹಾಗಿದ್ದರೆ? ಆತನ ಮಾತಿನಲ್ಲೇ ಕೇಳೋಣ. "ನಾನು ಸುಖಿ ಏಕೆಂದರೆ ನನ್ನಮಕ್ಕಳು ಜೀವನದ ಉತ್ತಮ ಪಾಠಿಯಲ್ಲಿದ್ದಾರೆ. ನನಗಿರುವುದು ಇಬ್ಬರು ಹೆಣ್ಣು ಮಕ್ಕಳು ನೂತ್ರ ಒಬ್ಬಳು ಕಾಲೇಜಿನಲ್ಲಿ ಅಧ್ಯಾಪಕಿ. ಮತ್ತೊಬ್ಬಳು ವೈದ್ಯಕೀಯ ಕಾಲೇಜಿನಲ್ಲಿ ಕಲಿಯುತ್ತಿದ್ದಾಳೆ.

ಕಡಮೆ ಮಕ್ಕಳಿರಬೇಕು. ಇದರಿಂದ ಅವರಿಗೂ ಸುಖ. ನಮಗೂ ನೆಮ್ಮದಿ. ಇದೇ ನನ್ನ ಸುಖಿಕ್ಕೆ ಕಾರಣ."

ಆತ ಸುಖಿ—

ನೀವು?

ವಿವೇಚನೆ

ಬರಡು ಭಾಷಾ ಭಾವನೆಯಿಂದ ಬಡಿದಾಡುತ್ತಿರುವ ಬಡ ಭಾರತೀಯರು

ಬರೆದವರು: ಶ್ರೀ ಶಿವಶಂಕರ

ಮಾನವ ಸಂಪರ್ಕಕ್ಕಾಗಿ ಭಾಷೆಗಳ ಜನನವೆಂಬುದಾಗಿ ಮಾತು ಬಲ್ಲವರು ಹೇಳುವದುಂಟು. ಸಂಪರ್ಕದ ಫಲ ಸಹಯೋಗಿರಲೂ ಬಹುದು, ಕಹಿಯೋಗಿರಲೂ ಬಹುದು. ಬಹುಶಃ ಅದು ಮೊಳಕೆಯಲ್ಲಿರುವಾಗ ಗೊತ್ತಾಗುವದಿಲ್ಲವೆಂದು ಕಾಣುತ್ತದೆ. ಅಲ್ಲದೆ ಹಿಂದಿನವರು, ನಮ್ಮ ಪೂರ್ವಜರು ಕಹಿ ಫಲದ ಯೋಚನೆಯನ್ನೇ ಮಾಡಿಲ್ಲವೆಂದು ಕಾಣುತ್ತದೆ. ಆದುದರಿಂದಲೇ ಅವರು ಭಾಷೆಗಳೆಲ್ಲವನ್ನು ದೇವಿಯ ಸ್ವರೂಪದಲ್ಲಿ—ಮಾತೆಯ ಸ್ವರೂಪದಲ್ಲಿ— ಕಂಡುಕೊಂಡರು. ವಿಜಯದಶಮಿಯ ಸಮಯದಲ್ಲಿ —ನವರಾತ್ರಿಯ ಸಮಯದಲ್ಲಿ—ಶಾರದ ಪೂಜೆಯೂ ನಡೆಯುತ್ತದೆ. ವೀಣೆಯಿಂದ ಸಪ್ತಸ್ವರ ಬಂದಲ್ಲಿ ವೀಣಾವಾಹಿನಿ ಸರಸ್ವತಿಯು ಭಿನ್ನ ಭಿನ್ನ ಭಾಷೆಗಳ ಮೂಲಕ ದರ್ಶನ ಕೊಡುತ್ತಾಳೆ. ಎಲ್ಲವೂ ಅವಳದ್ದೇ ಅನ್ನ-ಗೃಹ. ಈ ಸಿದ್ಧಾಂತವನ್ನು—ಪ್ರಖರ ಸತ್ಯವನ್ನು—ಜಗತ್ತಿನ ಮುಂದಕ್ಕಿಟ್ಟವರು ಜಗತ್ಪ್ರಸಿದ್ಧ ಭಾರತ ಮಾತೆಯ ಸುಪುತ್ರರು. ಜಗತ್ತು ಇಂದು ಅದಕ್ಕೆ ಗೌರವ ಕೊಡುತ್ತಿದೆಯೇ? ಪ್ರಪಂಚ ಗೌರವ ಸಲ್ಲಿಸುವ ಮೊದಲು ಸತ್ಯದ ಸಾಕಾರ ಮೂಡಿಕೊಂಡವರು ಅದನ್ನೆಂದು ಯಾವ ರೀತಿಯಲ್ಲಿ ನಂಬಿಕೊಂಡಿದ್ದಾರೆನ್ನುವದೇ ಮುಖ್ಯ ವಿಷಯವಿದೆ.

ಪ್ರಪಂಚಕ್ಕೆನೇ ಭಾಷಾ ಪರಿಚಯ-ಸರಸ್ವತಿಯ ಸ್ವರೂಪ ದರ್ಶನ ಮಾಡಿಸಿಕೊಟ್ಟಿರುವ ಭಾರತೀಯರ ಪೀಳಿಗೆಯಿಂದು ಭಾಷಾಭ್ರಮೆಯಲ್ಲಿ ಬಡಿದಾಡಿಕೊಳ್ಳುತ್ತಿದೆ. ಅದು ತನ್ನೆಲ್ಲ ಭಾಷೆಗಳನ್ನೂ ಗಂಟುಮೂಟೆ ಕಟ್ಟಿ ಸಮುದ್ರದಲ್ಲಿ ಬಿಸಾಡಿಬಿಟ್ಟು, ಸಾಗರದಾಚೆಯಿಂದ ಭಾಷೆಯೊಂದನ್ನು ತರಲು ಪ್ರಯತ್ನಿಸುತ್ತಿದೆ. ಅದಕ್ಕಾಗಿ ಅದ್ಭಾವ ತುಚ್ಛ ಕೃತ್ಯ ನಡೆಸಲೂ ಅದು ಹಿಂಜರಿಯುತ್ತಿಲ್ಲ. ಅದರ ಪರಿಣಾಮವೇ ವಾಕಸ್ಥಾನ ಛಂಛಿಯಲ್ಲಿ ಕೊಡಗಾಕೊಂಗ್ರೆಸ್ ಭಾಷಾವಾರು ಪ್ರಾಂತರಚನೆಯ ತೀರ್ಮಾನವನ್ನು ಕಂಡೂಡನೆ, ಅದು ಇದಕ್ಕೆ ಮಾತೃಯ ನೆವನದ ಮೇಲೆ ಪ್ರತ್ಯೇಕ ಸ್ಥಾನವನ್ನು ಕೇಳುತಿದ್ದ ಲಿಂಗಾಯಿಗ ನ್ಯಾಯವಾದಿ ಶ್ರೀಜಯ ಪ್ರಕಾಶ ನಾರಾಯಣರಾಜಾಲಾಯರು ಭಾಷಾ ಭೂತಟನವನ್ನು ತೋರಿಸಿದರು. ಜಿನ್ನಾರಿಗೆ ಅದು ಅರ್ಥವಾಯಿತು. ಪ್ರತ್ಯೇಕ ಪ್ರಾಂತವನ್ನು ಮಾತ್ರವಲ್ಲ ಭಾಷೆಯ ಮೇಲೆ ಪ್ರತ್ಯೇಕ ಸ್ಥಾನವನ್ನೇ ಅವರು ಕೇಳಿದರು. ಶ್ರೀ ರಾಜಾಜಿ ಅವರಿಗೆ ಅನುಕೂಲವಾಗಿ ದಾರಿ ತೋರಿಸಿದರು, ಪ್ರತ್ಯೇಕಸ್ಥಾನ-ಪಾಕಿಸ್ಥಾನವು ಭಾಷೆಯ ಆಧಾರದ ಮೇಲೆ ಉಂಟಾಯಿತು. ಇದರಿಂದ ಅಖಂಡ ಸಿಖ್ಖರು ಸಿಟ್ಟಿಗೆದ್ದರು. ಅವರೂ ಪ್ರತ್ಯೇಕ ಸ್ಥಾನವನ್ನು ಕೇಳಲಾರಂಭಿಸಿದರೂ ಅದವರಿಗೆ ಸಿಗಲಿಲ್ಲ. ಅವರ ಪಾಲಿಗಿದೀಗ ಪ್ರತ್ಯೇಕ ಸ್ಥಾನಕ್ಕೆ ಅರ್ಥವಾ ರಾಜ್ಯ ಸಿಕ್ಕಿರುತ್ತದೆ. ಇತ್ತ ಆಂಧ್ರದವರ ಆಗ್ರಹದ ಮೇಲೆ ಪ್ರತ್ಯೇಕ ಆಂಧ್ರವೂ ಆಯಿತು. ಇಲ್ಲೂ ಶ್ರೀ ರಾಜಾಜಿಯವರ ಕೈವಾಡವನ್ನು ಕಾಣಬಹುದು. ಹೀಗೆ ಭಾಷಾ ಬಡಬಾಗ್ನಿ ಭುಗಿಲೆದ್ದಿತು. ಆದಲ್ಲಿಗೆನೇ ಕಮ್ಮಿಯೂಗಲಿಲ್ಲ; ಅದು ಬಲಿಯುತ್ತ ಹೋಗುತ್ತಿದೆ. ಅದೊಂದು ಸಾಂಕ್ರಾಮಿಕ ರೋಗವೇ ಆಗಿಬಿಟ್ಟಿದೆ.

ಪ್ರತ್ಯೇಕ ಪಾಕಿಸ್ಥಾನವನ್ನು ಭಾಷೆಯ ನೆವನದ ಮೇಲೆ ಕೇಳಿದ ಮೇಲಾದರೂ ಸಂಬಂಧಪಟ್ಟ ಭಾಷೆಯವರು ಗಮ್ಮನೆ ಇರುವದು ನ್ಯಾಯವಿದೆ. ಆದರೆ ಈ "ಭಾಷಾ ಪ್ರೇಮಿ"ಗಳು ಆಳ್ವಿಗೆನೇ ಶಾಂತವಾಗಲಿಲ್ಲ. ಅವರು ಉರ್ದು ಮಾತಾಡುವವರು ಅಧಿಕವಾಗಿರುವ ಕೆಲ ಸ್ಥಳಗಳನ್ನು ಒಂದಾಗಿಸಿ ಒಂದು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಬೇಕೆಂದೂ ಅದಕ್ಕೆ ಮೊಘಲ್ ಸ್ಥಾನವೆಂದು ಹೆಸರಿಡಬೇಕೆಂದೂ ಕೇಳಿಕೊಂಡರು. ಅದಕ್ಕಾಗಿ ಕೆರುಕುಳ್ಕೊಡಲೂ ಆರಂಭಿಸಿದ್ದಾರೆ. ಇನ್ನೊ ಕೆಲವೆಡೆಗಳಲ್ಲಿ ಉರ್ದು ಮಾತಾಡುವ ಜನರು ಅಧಿಕವಾಗಿರುವ ಕಾರ್ಖಿಕ ನಿವಾಸ ಸ್ಥಳಗಳಲ್ಲಿ ಅವರಿಗಾಗಿ ಪ್ರತ್ಯೇಕ ಗೃಹ ಸೌಕರ್ಯಗಳನ್ನೊದಗಿಸ ಬೇಕೆಂದೂ ಕೇಳಿಕೊಂಡರು.

ಅವರು ನಡೆಸಿರುವ ಕುತಂತ್ರ ಅಥವಾ ಕಾರಸ್ಥಾನವೇ ರಾಂಚಿ-ರಾದ್ಧಾಂತವಿದೆ. ರಾಂಚಿಯು ಕೈಗಾರಿಕಾ ಕ್ಷೇತ್ರವಿದೆ. ಅಲ್ಲಿ ಅನೇಕಾನೇಕ ಕಾರ್ಖಾನೆಗಳಿವೆ. ಇದೀಗ ಆ ರಾಂಚಿ ಇರುವ ರಾಜ್ಯ ಬಿಹಾರನಲ್ಲಿ ಸಂಯುಕ್ತ ರಂಗದ ಸರಕಾರವಿದೆ. ಅಂದರೆ ಕಾಂಗ್ರೆಸ್ ಸರಕಾರ ಇಲ್ಲ. ಆದುದರಿಂದ ಅದೆಂತಾದರೂ ಅಸಹಾಧೀಶರಾಗಲು ಕಾಂಗ್ರೆಸ್ಸಿಗರು ಕಸಬಿಟ್ಟು ನಡೆಯುವದರಲ್ಲಿ ಆಶ್ಚರ್ಯವೇನೂ ಇಲ್ಲ. ಅದಕ್ಕಾಗಿ ಅವರು ಉರ್ದೂದಾಳವನ್ನು ಉರುಳಿಸಿದರು. ಕಳೆದ ಇಪ್ಪತ್ತು ವರ್ಷಗಳಲ್ಲಿ ಆಳ್ವಿ ಕಾಂಗ್ರೆಸ್ ಸರಕಾರ ಇತ್ತು. ಅವರಿಗೆ ನಿಜವಾಗಿ ಉರ್ದೂವಿಗಾಗಿ ಅದೇನಾದರೂ ಅಂತಸ್ತು ಕೊಡಲು ಮನಸ್ಸಿದ್ದಲ್ಲಿ ಅದಾಗಲೇ ಕೊಟ್ಟು ಬಿಡುತ್ತಿದ್ದರು. ಆಗ ಹಾಗೆ ಮಾಡಲಿಲ್ಲ. ಸಂಯುಕ್ತ ರಂಗದ ಸರಕಾರ ಬಂದೊಡನೆ ಅವರು 'ಉರ್ದು ಪ್ರೇಮಿ'ಗಳನ್ನು ಎತ್ತಿ ಕಟ್ಟಿದರು. ರಾಜಕೀಯ ಪಕ್ಷಗಳು ಆದಕ್ಕೆ ಸುಲಭವಾಗಿ ಬಲಿಯಾಡುತ್ತ. ಮುಖ್ಯ ಮಂತ್ರಿ ಮಹಾಮಾಯ ಪ್ರಸಾದಸಿಂಹ ನಾರಾಯಣ ಭಾರತೀಯ ಜನಸಂಘದವರು ಬಹಳ ಮಟ್ಟಿಗೆ ಧೃತಿಗೆಡದೆ ಧೈರ್ಯದಿಂದಲೇ ವರ್ತಿಸಿದರು. ಸೋಷ್ಯಲಿಸ್ಟರೂ ಸಹಾ ಸೋಷಲಿಸ್ಟಾಣವಾಗಿ ಬಿಟ್ಟರು. ಕಮ್ಯುನಿಸ್ಟರು ತಮ್ಮ ಕಾರಸ್ಥಾನಕ್ಕೆ ಆರಂಭಿಸಿ ಬಿಟ್ಟರು. ಸ್ವತಂತ್ರ ಪಾರ್ಟಿಯವರಂತೂ ಸ್ವತಂತ್ರವಾಗಿ ಮಾತಾಡಿಬಿಟ್ಟರು.

ಇದಾಗಲೇ ಬಿಹಾರ್ ಕ್ಷಾಮ ನಂತರ ನೆರೆಹಾವಳಿ ಆದರೊಂದಿಗೆ ಕ್ರಿಸ್ತೀಯ ಮಿಷನರಿಗಳಿಂದ ಬಳಲಿ ಬಲು ಬೆಂಡಾಗಿ ಹೋಗಿರುವ ಸಂಧ್ಯಗ್ರ ಪರಿಸ್ಥಿತಿಯನ್ನು ಕಂಡು ಕಾಕ (ಕಾಂಗ್ರೆಸು+ಕಮ್ಯೂನಿಸ್ಟ್ ಪಕ್ಷ)ಗಳು ಬಲು ವೇಗವಾಗಿ ಮೇಲಕ್ಕೆದ್ದವು; ಮುಸ್ಲಿಂ ಲೀಗಿಗಳನ್ನು ಮುಂದಕ್ಕೆ ಹಾಕಿಕೊಂಡುದು. ಈ ಮುಸ್ಲಿಂ ಲೀಗಿಗಳು 'ಉರ್ದು'ವಿನ ಹೆಸರಿನ ಮೇಲೆ ಹೇಯ ಕೃತ್ಯಕ್ಕೆ ಮುಂದಾದರು—ಅತ್ಯಾಚಾರ ನಡೆಸಿದರು; ಪ್ರಾಣಹಾನಿ ಘಡಿಯಿಸು. ಸೊತ್ತು ನಷ್ಟವಾಯಿತು. ಎಲ್ಲದಕ್ಕಿಂತಲೂ ಭಾರತದ ಹೆಸರಿಗೆ ಕಳಂಕ ಹಚ್ಚಲು ಕಾರಸ್ಥಾನ ನಡೆಸಲಾಯಿತು. ಇದರಲ್ಲಿ ಹೆಚ್ಚಿನ ರಾಜಕೀಯ ಪಕ್ಷಗಳ ಪಾಲು ಇದ್ದೇ ಇದೆ; ಇಲ್ಲವೆಂದು ತಪ್ಪಿಸಿಕೊಳ್ಳಲು ಅವುಗಳಿಂದ ಸಾಧ್ಯವೇ ಇಲ್ಲ.

ರಾಂಚಿಯಲ್ಲಿ ಅಮೇರಿಕ ಅಲ್ಲದೆ ರಷ್ಯ ಬಿಟ್ಟು ಇತರ ಕೆಲವು ದೇಶಗಳ ದಲ್ಲಾಳಿಗಳು ಬೀಡು ಬಿಟ್ಟಿದ್ದು, ಅವರ ಹತ್ಯಾಕಾಂಡ ನಡೆಸುತ್ತಿದ್ದಾರೆಂದು ಬಿಹಾರನ ಮುಖ್ಯ ಮಂತ್ರಿಗಳು ಹೇಳಿರುವರು. ಯಾವ ದೇಶದ ದಲ್ಲಾಳಿಗಳಿದ್ದಾರೆಂಬುದನ್ನು ಸ್ಪಷ್ಟವಾಗಿ ಸೂಚಿಸಲು ಅವರೇತಕ್ಕೋ ಸಂಕೋಚ ಪಟ್ಟು ಕೊಂಡಿದ್ದಾರೆ. ಆದರೂ ಪಾಕಿಸ್ಥಾನ ಹಾಗೂ ಚೈನಾದ ದಲ್ಲಾಳಿಗಳು ಅಲ್ಲಿ ಅನೇಕರಿದ್ದಾರೆಂಬುದಂತೂ ಅವರ ಮಾತಿನಿಂದ ಸ್ಪಷ್ಟವಾಗುತ್ತದೆ. ಅವರೆಲ್ಲರೂ ಅದೆಂತು ಆಷ್ಟೊಗೆ ಆಗಮಿಸಿರುವರು? ಕಳೆದ ಇಪ್ಪತ್ತು ವರ್ಷಗಳಿಂದಲೂ ಈ ಕಾರಸ್ಥಾನ ಎಡೆ ಬಿಡದೆ ನಡೆಯುತ್ತಿದೆಯೆಂದಾಯಿತು. ಶ್ರೀ ಮಹಾವಾಯ ಪ್ರಸಾದ ಅದನ್ನೇತಕ್ಕೆ ತಡೆದಿಲ್ಲ? ಇದೀಗ ಕಾಲಿಟ್ಟಿದ್ದಾರೆ ಮಾತ್ರ ವಿನೇ ಇರಲಿ ಮುಸ್ಲಿಂ ಲೀಗಿ ಹಾಗೂ ಕಮ್ಯೂನಿಸ್ಟರ ಕಾರಸ್ಥಾನ ಅಲ್ಲಿ ನಡೆಯುತ್ತಿದೆಯೆಂದಂತಾಯಿತು. ಪಾಕಸ್ಥಾನವು ಚೈನಾದೊಂದಿಗೆ ಚೆಲ್ಲಾಟ ನಡೆಯುತ್ತಿರುವ ವರೆಗೆ ಈ ನೀಚ ದ್ರೋಹಗಳಲ್ಲೂ ಪರಸ್ಪರ ಬಡಿದಾಡುತ್ತ ಇರಬಹುದು. ರಾಂಚಿಯಲ್ಲಿ ಅವರು ಮೂವ್ವಾನಿಗೆ, ಅಯೂಬನಿಗೆ ಹಾಗೂ ಉರ್ದುವಿಗೆ ಜಯವಾಗಲೆಂದು ಬೊಬ್ಬೆ ಹಾಕಿದರು. ತನ್ನ ದೇಶದಲ್ಲಿ ಮಾಹಮ್ಮದೀಯರನ್ನು ಮೂವ್ವೋ ಸುಮ್ಮಗೆ ಬಿಡಲಿಲ್ಲ. ಅವರ ತಲೆಯು ಮೇಲೆ ಸುತ್ತಿಗೆಯೇಟನ್ನು ಕೊಟ್ಟೆರುವನು. ಇಲ್ಲಿ ಅವನ ಹಿಂಬಾಲಕರು ಉರ್ದುವಿನೊಂದಿಗೆ ಮಾನವನ್ನು ಬೆಸುತ್ತಿದ್ದಾರೆ!

ಆಗೋಸ್ಟ್ ಇಪ್ಪತ್ತರಂದು ರಾಂಚಿಯು ಕಾಂಗ್ರೆಸ್ಸಿಗರು ಕರೆತು ಕಾರಸ್ಥಾನದ ಬೀಜ ಬಿತ್ತಿದರು. ಆದರ ನೇತೃತ್ವವನ್ನು ಅಲಿಯಂಬ ವಿಧಾನ ಪರಿಷತ್ತಿನ ಸದಸ್ಯರು

ಪಟಯನುಗ ನಿಲ್ಲು

ಮೀನು ಕೈಗಾರಿಕೆಯಲ್ಲಿ ಇನ್ನೊಂದು ಮೈಲುಗಲ್ಲು

ಮಲ್ಪೆಯಲ್ಲಿ ಹೊಸ ಕಂಪೆನಿಗಳ ಉದ್ಘಾಟನೆ

ದಶಂಬರ ೫, ೧೯೬೭.

ಇದು ದಕ್ಷಿಣ ಕನ್ನಡ ಜಿಲ್ಲೆಯ, ಮೈಸೂರು ರಾಜ್ಯದ, ಭಾರತ ದೇಶದ ಇತಿಹಾಸದಲ್ಲೇ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ದಿನ.

ಅಂದು, ಮಂಗಳವಾರ ಸಂಜೆ-ರಾತ್ರಿ ಪಡುಕಾವಳಿಯ ಮಲ್ಪೆಯಲ್ಲಿ ಹೊಸ ಕಂಪೆನಿಯೊಂದು ಉದ್ಘಾಟಿತವಾಯಿತು.



ಮುಖ್ಯಮಂತ್ರಿ
ಶ್ರೀ ನಿಜಲಿಂಗಪ್ಪನವರು
(ಉದ್ಘಾಟಕರು)

ಉದ್ಘಾಟಿಸಿದವರು ರಾಜ್ಯದ ಮುಖ್ಯಮಂತ್ರಿ ಸಿದ್ಧವನಹಳ್ಳಿ ನಿಜಲಿಂಗಪ್ಪನವರು. (ಕಾಂಗ್ರೆಸ್ಸಿನ ಭಾವೀ ಅಧ್ಯಕ್ಷರು) ಸಮಾರಂಭದ ಅಧ್ಯಕ್ಷತೆ ವಹಿಸಿದವರು ರಾಜ್ಯದ ಮೀನುಗಾರಿಕೆಯ ಮಂತ್ರಿ ದೇವರಾಜ ಅರಸ್.

ಉದ್ಘಾಟಿತವಾದ ಕಂಪೆನಿಯ ಹೆಸರು ಕೊರೊನೇಟ್ ಫಿಶ್‌ಮೀಲ್ ಅಂಡ್ ಆಯಿಲ್ ಕಂಪೆನಿ, ಮತ್ತು ಕೊರೊನೇಟ್ ಕ್ವಿಕ್ ಫ್ರೀಸಿಂಗ್ ಪ್ಲಾಂಟ್. ಇವರ ಸ್ಥಾಪಕರು ಶ್ರೀ ಎಂ. ಮಧ್ವರಾಜರು.

ಇತರ ಶಸ್ತ್ರಾಸ್ತ್ರಗಳು ಸಿಕ್ಕಿದರೂ ಪೋಲೀಸುಮಂತ್ರಿಯವರು ಫಿಷ್ಪ್ಲಸ್ಸಾತ ದೃಷ್ಟಿಯಿಂದ ವರ್ತಿಸದೆ, ಬಹಳ "ಮೃದು ಸ್ವಭಾವ"ದವರಂತೆ ವರ್ತಿಸಿದರು. ಯಾಕೆಗೆ ಇಲ್ಲದಿದ್ದಲ್ಲಿ ಮುಂದಕ್ಕೆ ತನ್ನ ಪಕ್ಷದವರಿಗೆ 'ಉರ್ದು ಪ್ರೇಮಿಗಳ' ಮತ ದೊರಕಲಿಕ್ಕಿಲ್ಲವೆಂಬ ಭಯ!

ಆದರೂ ಅಲ್ಲಿನ ಮುಖ್ಯ ಮಂತ್ರಿಯವರು ಒಡನೆ ನಿರ್ಧಾರಣೆಗೆ ಒಪ್ಪಿದ್ದಾರೆ. ಆದಷ್ಟಾಗಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಿಸಲಾಗಿದೆ. ಈ ಕುರಿತು ಅಲ್ಲಿನ ಮಾಜಿ ರಾಜ್ಯಪಾಲ ಶ್ರೀ ಅನಂತಶಯನಂ ಅಯ್ಯಂಗಾರ್‌ರವರು ಪಂಚರಂಗಿಯನ್ನು ಹೆನ್ನಾಲಿಗೆ ಪ್ರತಿನಿಧಿಸಿದ್ದಾರೆ.

ಉರ್ದು ದ್ವಿತೀಯರಾಷ್ಟ್ರಭಾಷೆಯಾಗುವದನ್ನೆದುರಿಸಲು ಕಾರಣವೇನು? ಉರ್ದು ಭಾಷೆಯು ಹಿಂದುಗಡೆ ಇರುವ ಶಕ್ತಿಯಾವುದು? ಇವನ್ನು ಮುಂದಿನ ವಾರ ನೋಡುವ.

ಶ್ರೀ ಎಂ. ಮಧ್ವರಾಜರ ಹೆಸರಿಂದು ಮನೆಮಾತು. ಮಲ್ಪೆಯ ಹೊಗವೀರ ಹರಿವಾರದಲ್ಲಿ ಜನಿಸಿದ ಇವರು ತನ್ನ ಡಾಕ್ಟರಷಾಗಬೇಕೆಂಬ ಆಸೆಯನ್ನು ಅದುಮಿ ಹಿಡಿದು, ಮೊಗವೀರರ, ಅವರ ಉದ್ದಿಮೆಯ ಉನ್ನತಿಗಾಗಿ ಶ್ರಮಿಸ ತೊಡಗಿದ ತರುಣ ಉತ್ಸಾಹಿ ಕಾರ್ಯದರ್ಶಿಯಾಗಿದ್ದರು.

ಮೂರನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಉಡುಪಿ ಮತದಾರ ಕ್ಷೇತ್ರವಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದ ಮೇಲೆ, ಅವರ ಲೋಕ ಪರಿಚಯವೂ ಲೋಕ ಪ್ರಸಿದ್ಧವಾಯಿತೆನ್ನಬಹುದು. ಈ ಬಾರಿಯ ಚುನಾವಣೆಯಲ್ಲಿ ಉಡುಪಿಯಲ್ಲಿ ಕಾಂಗ್ರೆಸ್ಸಿನ ಅತ್ಯಂತ ಬಿರುಸಿನ ಸ್ಪರ್ಧೆಯನ್ನೆದುರಿಸಿ ಗೆಲ್ಲುವಂತಾದುದು ಶ್ರೀ ಮಧ್ವರಾಜಯ ವಿಜಯವೇ ಎನ್ನಬೇಕು.

ಶ್ರೀ ಮಧ್ವರಾಜರು ಮೊದಲೇ ಕೋರೊನೇಟ್ ಕ್ಯಾನಿಂಗ್ ಕಂಪೆನಿಯನ್ನು ಸ್ಥಾಪಿಸಿದ್ದು ಇದು ದೇಶ—ವಿದೇಶಗಳಲ್ಲಿ ತುಂಬ ಹೆಸರು ಪಡೆದಿದೆ. ಇದರ ಅಂಗ ಸಂಸ್ಥೆಗಳೇ ಫಿಶ್‌ಮೀಲ್ ಅಂಡ್ ಆಯಿಲ್ ಕಂಪೆನಿ ಮತ್ತು ಕ್ವಿಕ್ ಫ್ರೀಸಿಂಗ್ ಪ್ಲಾಂಟ್‌ಗಳು.



ಕೊರೊನೇಟ್ ಮೀನುಲಿಕ
ಸಾಹಸೋದ್ಯಮಿ ತರುಣ
ಶ್ರೀ ಎಂ ಮಧ್ವರಾಜರು, ಬಿ. ಎ.

ಇಲ್ಲಿ ಮನುಷ್ಯರು ತಿನ್ನಲು ಯೋಗ್ಯವಲ್ಲದ ಮೀನುಗಳಿಂದ ದಿನಕ್ಕೆ ಸುಮಾರು ೩೫ ಟನ್ನು ಪಲಸ್ಯಹಿಂದಿ, ಅಡು, ಕೋಳಿಗಳು ತಿನ್ನ ಬಹುದಾದ ಆಹಾರವನ್ನು ತಯಾರಿಸಲಾಗುವುದು. ಇದರಿಂದ ನವ್ಯ ಜಾನುವಾರುಗಳಿಗೆ ದೊಚ್ಚಿನ ಆಹಾರ ದೊರೆಯುವುದಲ್ಲದೆ ವಿದೇಶಗಳಿಗೆ ರಫ್ತು ಮಾಡಿ ವಿದೇಶೀ ವಿನಿಮಯವನ್ನೂ ಸಂಪಾದಿಸಬಹುದು. ಈ ಸಂಗತಿಗಳನ್ನು ಸಮಾರಂಭದಲ್ಲಿ ಸ್ವಾಗತ ಭಾಷಣ ಮಾಡುತ್ತ ಶ್ರೀ ಮಧ್ವರಾಜರು ತಿಳಿಸಿದರು. ಮೈಸೂರು ಸರಕಾರವು ಮತ್ಸ್ಯೋದ್ಯಮಕ್ಕೆ ಕೊಡು

(ಹದಿನಾಲ್ಕನೇ ಪುಟ ನೋಡಿ)

ವಹಿಸಿಕೊಂಡಿದ್ದನು. ಮುಂದೇನು ಮಾಡಬೇಕೆಂಬುದನ್ನು ಅವರಂದು ಆಲೋಚಿಸಿಕೊಂಡರು. ಬಿಹಾರ್ ವಿಧಾನ ಸಭೆಯಲ್ಲಿ ಉರ್ದುವನ್ನು ದ್ವಿತೀಯ ರಾಜ್ಯ ಭಾಷೆಯಷ್ಟಾಗಿ ಪರಿಗಣಿಸಬೇಕೆಂಬ ತೀರ್ಮಾನದ ಕುರಿತು ದಿನಂಕ ಇಪ್ಪತ್ತೆರಡರಂದು ಮತದಾನ ನಡೆಯಿತು. ಆ ನಿರ್ಣಯವನ್ನು ತಂದವರು ಓರ್ವ ಕಾಂಗ್ರೆಸ್ ಸದಸ್ಯ—ಮಹಮ್ಮದೀಯರೂ ಹೌದು. ಅದಕ್ಕೆ ತಮ್ಮ ವಿರುದ್ಧ ಅಭಿಪ್ರಾಯವನ್ನು ತಿಳಿಸಲು ಕಲಾ ಶಾಲಾ ಬಾಲಕರು ಪ್ರದರ್ಶನ ರೂಪವಾಗಿ ಮೆರವಣಿಗೆ ನಡೆಸಿದರು. ಈ ಮೆರವಣಿಗೆಯೂ ಮುಖ್ಯ ರಸ್ತೆಯಲ್ಲಿ ಒಂದು ಮಸೀದಿಯ ಹತ್ತಿರ ಬಂದದ್ದೇ ತಡ-ಬಾಲಕರ ಮೇಲೆ ಪಾಷಾಣ ವೃಷ್ಟಿ ನಡೆಯಿತು. ದಿಕ್ಕು ಗೆಟ್ಟ ಬಾಲಕರು ಸಿಕ್ಕಾ ಬಟ್ಟೆ ಓಡಿದರು. ಮಸೀದಿಯೊಳಗಿದ್ದ 'ಉರ್ದೂ ಪ್ರೇಮಿ'ಗಳು ಅವರನ್ನು ಅಟ್ಟಿಸಿಕೊಂಡು ಹೋದರು. ದಾರಿಯಲ್ಲಿ ಸಿಕ್ಕಿದವರ ಮೇಲೆ ಬಲ ಪ್ರಯೋಗ ನಡೆಸಿದರು, ಅಬಲೆಯರ ಮೇಲೆ ಅತ್ಯಾಚಾರ ನಡೆಸಿದರು. ಆದರಿಂದಾಗಿಯೇ ಕಲವರು ಸ್ತ್ರೀಯರು ಸತ್ತೇಹೋದರು. ದೇಶದ್ರೋಹಿಗಳ ದಮನ ಚಕ್ರ ಉರುಳುತ್ತ ಹೋಯಿತು, ಹಾಟೆಯೂ, ಜನುಶ್ರ್ ಪುರಗಳಿಗೂ ಹೋಯಿತು. ಭಾಷಾ ವಿದ್ವೇಷದ ಬಡಬಾಗ್ನಿ ನಾಲ್ದೆಸೆಗಳಿಗೂ ನಾಲಗೆಯನ್ನು ಚಾಚಿತು.

ಮುಖ್ಯ ಮಂತ್ರಿ ಹಾಗೂ ಗೃಹ ಮಂತ್ರಿಗಳು ಆಕ್ಷಣ ಧಾವಿಸಿದರು. ರಕ್ತದ ಹೊಳೆ ಹರಿಯುತ್ತಿರುವದನ್ನು ಕಂಡರು; ಎಕ್ಕ ನೋಡಿದರೂ ಹೆಣಗಳು ಬಿದ್ದಿರುವದನ್ನು ಕಂಡರು. ಗಂಡು ಪ್ರಯೋಗ ನಡೆಸಲೂ ಪೋಲೀಸರಿಗೆ ಆಜ್ಞೆ ಕೂಡಲಾಯಿತು. ಭಾಷಾ ಬಡಿದಾಟ ನಿಂತಿತ್ತು. ತರುವಾಯ ಸೈನಿಕರನ್ನು ಕರೆಸಲು ಬೇಕಾಯಿತು. ಸೈನಿಕರಿಗೆ ಸಹಾ ಪರಿಸ್ಥಿತಿಯನ್ನು ಹತೋಟಿಗೆ ತರಲು ಒಂದು ವಾರ ಕಾಲ ಹಿಡಿಯಿತು!

ಒಂದು ವಾರ! ಅದಕ್ಕೇನು ಕಾರಣ? ಇಪ್ಪತ್ತು ವರ್ಷಗಳಲ್ಲಿ ಉರ್ದುವನ್ನು ಬದಿಗೆ ಉರುಳಿಸಿ ಬಿಟ್ಟದ್ದ ಕಾಂಗ್ರೆಸಿಗರಿಗೆ ಪಂಚರಂಗಿ ಸಂಯುಕ್ತ ಸರಕಾರ ಬಂದೊಡನೆ ಇದಕ್ಕಿದ್ದಂತೆ ಬಂಗಾಲದ ಕಾಲಘಟ್ಟಿಯಲ್ಲಿ ಉರ್ದು ಪ್ರೇಮ ಉಕ್ಕಿ ಬಂತು. ಈ ಆಟದಲ್ಲಿ ಸಂಯುಕ್ತ ಸೋಷ್ಯಲಿಸ್ಟ್‌ರು ಸೋತು ಹೋದರು. ಅದಕ್ಕೆ ಕಾರಣವೆಂದರೆ ಪಂಚರಂಗಿಗಳು ಅಧಿಕಾರಕ್ಕೆ ಬರುವಾಗ ಮುಸ್ಲಿಮರೂರ್ವ ವಿಷಯಗಳಿರುವ ಒಂದು ಪತ್ರಕ್ಕೆ ಸಹಿ ಹಾಕಿ ಬೇರಾಗಿತ್ತು. ಅದರಲ್ಲಿಮುಸ್ಲಿಮರೂರನೇಯ ವಿಷಯವೇ ಉರ್ದೂ. ಅಂದರೆ ಉರ್ದು ವನ್ನು ದ್ವಿತೀಯ ರಾಜ್ಯಭಾಷೆಯನ್ನಾಗಿ ಘೋಷಿಸಿ ಕೈವೆನ್ನುವದನ್ನಾಗಿತ್ತು. ಭಾರತೀಯ ಜನ ಸಂಘದವರು ಆ ಒಂದು ವಿಷಯಕ್ಕೆ ಒಪ್ಪದೆ, ಮಾಡ್ವತ್ತೆರಡು ವಿಷಯಗಳಿಗೆ ಒಪ್ಪಿದ್ದುದರಿಂದ ಮುಸ್ಲಿಮರೂರನೇಯ ವಿಷಯದ ಮೇಲೆ ಜೋರ ಬೇಡವೆಂದು ಸುಮ್ಮಗಿರಲಾಗಿತ್ತು.

ಕ್ಷಾಮ, ಸ್ವಯಂಕೃತ ಮತಪ್ರದರ್ಶನಗಳ ಪಿಡುಗು, ಶೈತ್ಯದ ದಳಗಳೆಲ್ಲಾ ಇರುವಾಗ ಈ ಧಾಷಾಂದಗೆಯನ್ನೆದುರಿಸುವದು ಕಷ್ಟದ ಕೆಲಸವೇ ಸರಿ. ಅದರಲ್ಲೂ ಪೋಲೀಸುಮಂತ್ರಿ ಶ್ರೀ ರಮಾನಂದ ತಿವಾರಿಯವರು ಸಂಯುಕ್ತ ಸೋಷಿಯಲಿಸ್ಟ್ ಪಕ್ಷದವರು, ಅವರು ಉರ್ದುವನ್ನು ದ್ವಿತೀಯ ರಾಜ್ಯಭಾಷೆಯನ್ನಾಗಿ ಪರಿಗಣಿಸಬೇಕೆನ್ನುವ ಗುಂಪಿಗೆ ಸೇರಿದವರು. ಅಂತಹವರು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಉರ್ದುವನ್ನು ದ್ವಿತೀಯ ರಾಜ್ಯಭಾಷೆಯನ್ನಾಗಿ ತರಲು ಅಡ್ಡಿ ಬರುತ್ತಿರುವ ಭಾರತೀಯ ಜನಸಂಘದವರನ್ನು ಬಗ್ಗುಬಡಿಯಲು ಮುಂದಾಗಿದ್ದಲ್ಲಿ ಆಶ್ಚರ್ಯವೇನೂ ಆಗಿರಲಿಕ್ಕಿಲ್ಲ. ಆದರೆ ಭಾರತೀಯ ಜನಸಂಘದವರು ಮಹಿಸದ ಎಚ್ಚರಿಕೆಯಿಂದಾಗಿ ಅಂತಹ ಅಚಾತುರ್ಯ ನಡೆಯಲಿಲ್ಲ. ರಾಂಚಿಯ ವಿಧಾನಸಭಾ ಸ್ಥಾನವು ಜನಸಂಘದವರಿಗೆ ಸಿಕ್ಕಿದಯೆಂಬುದು ಗಮನಾರ್ಹ ವಿಷಯವಿದೆ.

ದಿಲ್ಲಿಯಿಂದ ಗೃಹಮಂತ್ರಿ ಶ್ರೀ ಚವಾಣರು ಭೂಗತೆ ಹಾರಿ ಬಂದರು. ಅವರು ಮುಸ್ಲಿಮ ರೊಡನೆ ಕೂಡಿಕೊಂಡು ಸೊಸಲೆ ಕಣ್ಣೀರು ಸುರಿಸಿದರು. ಮನೆ ಹಾಗೂ ಇತರ ಸೊತ್ತುಗಳನ್ನು ಕಳೆದುಕೊಂಡವರಿಗೆ ವಸತಿ ಕೇಂದ್ರುಗಳನ್ನೆಲ್ಲಿ ಏರ್ಪಡಿಸಿದ್ದರು. ಆಲ್ಲೂ ಉರ್ದು ಪ್ರೇಮಿಗಳು ಪ್ರತ್ಯಕ್ಷವಾಗಿ ಉಳಿದುಕೊಂಡರು.

ಪೋಲೀಸರ ಸ್ವದರ್ಶನದ ನೋಲೆ ಕಲ್ಲು ಇಟ್ಟಕಾಗಿ ಮಳೆ ಬಿದ್ದ ಗೂಂಡಾಗಳಿಗೆ ಆಶ್ರಯವಿತ್ತಿದ್ದ ವಸೀದಿಗಳಲ್ಲಿ ಕೆಲವನ್ನು ಧೈರ್ಯದಿಂದ ತಪಾಸಣೆ ನಡೆಸಿದಾಗ ಆಷ್ಟಿ ಹೇರಳ ಮದ್ದುಗುಂಡುಗಳೂ ಯುದ್ಧ ಗಳಿಸಿದ್ದ ಪೆಚರಂಗಿಯನ್ನು ಬೀಳಿಸಲು ಕಾಂಗ್ರೆಸಿಗರಿಗೆ ಬೇರೇನೂ ನೆವವೆ ಸಿಗಲಿಲ್ಲ. ಆವರು ಉರ್ದು ದಾಳವನ್ನು ಉರುಳಿಸಿದರೆ. ಹಿಂದಿನ ಅಭ್ಯಾಸಕ್ಕನುಸಾರವಾಗಿ ಮುಸ್ಲಿಮರನ್ನು ಎತ್ತಿ ಕಟ್ಟಿದರು. ಇದೆಲ್ಲವನ್ನೂ ಧೈರ್ಯದಿಂದ ಹಾಗೂ ಚಾಕಚಕ್ಯತೆಯಿಂದ ಎದುರಿಸಿತು. ಇತರ ಪಕ್ಷಗಳು ಕೈಕಾಲು ಬಿಟ್ಟಿದ್ದಾಗಲೂ ಭಾರತೀಯ ಜನಸಂಘದವರು ಸಾಹಸದಿಂದ ಗೂಂಡಾಗಿರಿಯನ್ನೆದಿರಿಸಿದರು. ಕಾಂಗ್ರೆಸ್ಸಿನ ಕಾಲು ಕಸಿಯಿತು. ಒಡನೆ ಅವರು ಇನ್ನೊಂದು ಆಟವನ್ನು ಆಡಿದರು. ಪಂಚರಂಗಿ ಮಂತ್ರಿಮಂಡಲದಲ್ಲಿ ಶ್ರೀ ಬಿ. ಪಿ. ಸಿಂಗರು ಸಂಯುಕ್ತ ಸೋಷಲಿಸ್ಟ್ ಪಕ್ಷದ ಲೋಕಸಭಾ ಸದಸ್ಯರು ಮಂತ್ರಿಯಾಗಿದ್ದರು. ದಿವಂಗತ ಡಾ| ರಾಮ್.ಮನೋಹರ ಲೋಹಿಯಾರವರಿಗೆ ಅದು ಹಿಡಿಸಲಿಲ್ಲ. ಮಂತ್ರಿಪದವಿಗೆ ರಾಜಿನಾಮೆ ಕೊಟ್ಟುಡಿಲ್ಲಿಗೆ ಅವರು ಬರಬೇಕೆಂದು ಶ್ರೀ ಲೋಹಿಯಾರವರೆಲ್ಲಿದ್ದಂತೆ ಅಧಿಕಾರಲಾಲಸಿ ಕಾಂಗ್ರೆಸಿಗರ ಕಾಕದೃಷ್ಟಿಗೆಶ್ರೀಸಿಂಘೆರುಸಿಕ್ಕಿ ಬಿದ್ದರು. ಅವರು ಶೋಷಿಪ್ಪ ದಳವನ್ನು ರಚಿಸಿಕೊಂಡರಲ್ಲದೆ, ಮಂತ್ರಿ ಮಂಡಲದಿಂದ ಹೊರಬಂದು ಪಂಚರಂಗಿ ಸರಕಾರವನ್ನುರುಳಿಸಲು ಪ್ರಯತ್ನಿಸಿದರು. ಇವೆಲ್ಲ ತಂಟೆತಂಬಾರುಗಳನ್ನೆದುರಿಸಿಕೊಂಡು ಶ್ರೀ ಮಹಾಮಾಯಾ ಪ್ರಸಾದ ಸಿಂಘೆರ ಪಂಚರಂಗಿ ಉಳಿದುಕೊಂಡಿತು.

ಮುಖ್ಯ ಮಂತ್ರಿ ಹಾಗೂ ಗೃಹ ಮಂತ್ರಿಗಳು ಆಕ್ಷಣ ಧಾವಿಸಿದರು. ರಕ್ತದ ಹೊಳೆ ಹರಿಯುತ್ತಿರುವದನ್ನು ಕಂಡರು; ಎಕ್ಕ ನೋಡಿದರೂ ಹೆಣಗಳು ಬಿದ್ದಿರುವದನ್ನು ಕಂಡರು. ಗಂಡು ಪ್ರಯೋಗ ನಡೆಸಲೂ ಪೋಲೀಸರಿಗೆ ಆಜ್ಞೆ ಕೂಡಲಾಯಿತು. ಭಾಷಾ ಬಡಿದಾಟ ನಿಂತಿತ್ತು. ತರುವಾಯ ಸೈನಿಕರನ್ನು ಕರೆಸಲು ಬೇಕಾಯಿತು. ಸೈನಿಕರಿಗೆ ಸಹಾ ಪರಿಸ್ಥಿತಿಯನ್ನು ಹತೋಟಿಗೆ ತರಲು ಒಂದು ವಾರ ಕಾಲ ಹಿಡಿಯಿತು!

ಒಂದು ವಾರ! ಅದಕ್ಕೇನು ಕಾರಣ? ಇಪ್ಪತ್ತು ವರ್ಷಗಳಲ್ಲಿ ಉರ್ದುವನ್ನು ಬದಿಗೆ ಉರುಳಿಸಿ ಬಿಟ್ಟದ್ದ ಕಾಂಗ್ರೆಸಿಗರಿಗೆ ಪಂಚರಂಗಿ ಸಂಯುಕ್ತ ಸರಕಾರ ಬಂದೊಡನೆ ಇದಕ್ಕಿದ್ದಂತೆ ಬಂಗಾಲದ ಕಾಲಘಟ್ಟಿಯಲ್ಲಿ ಉರ್ದು ಪ್ರೇಮ ಉಕ್ಕಿ ಬಂತು. ಈ ಆಟದಲ್ಲಿ ಸಂಯುಕ್ತ ಸೋಷ್ಯಲಿಸ್ಟ್‌ರು ಸೋತು ಹೋದರು. ಅದಕ್ಕೆ ಕಾರಣವೆಂದರೆ ಪಂಚರಂಗಿಗಳು ಅಧಿಕಾರಕ್ಕೆ ಬರುವಾಗ ಮುಸ್ಲಿಮರೂರ್ವ ವಿಷಯಗಳಿರುವ ಒಂದು ಪತ್ರಕ್ಕೆ ಸಹಿ ಹಾಕಿ ಬೇರಾಗಿತ್ತು. ಅದರಲ್ಲಿಮುಸ್ಲಿಮರೂರನೇಯ ವಿಷಯವೇ ಉರ್ದೂ. ಅಂದರೆ ಉರ್ದು ವನ್ನು ದ್ವಿತೀಯ ರಾಜ್ಯಭಾಷೆಯನ್ನಾಗಿ ಘೋಷಿಸಿ ಕೈವೆನ್ನುವದನ್ನಾಗಿತ್ತು. ಭಾರತೀಯ ಜನ ಸಂಘದವರು ಆ ಒಂದು ವಿಷಯಕ್ಕೆ ಒಪ್ಪದೆ, ಮಾಡ್ವತ್ತೆರಡು ವಿಷಯಗಳಿಗೆ ಒಪ್ಪಿದ್ದುದರಿಂದ ಮುಸ್ಲಿಮರೂರನೇಯ ವಿಷಯದ ಮೇಲೆ ಜೋರ ಬೇಡವೆಂದು ಸುಮ್ಮಗಿರಲಾಗಿತ್ತು.

ವಿಷಯಸೂಚಿಗೆ ಹಿಂತಿರುಗಿ

ಒಂಭತ್ತನ್ನು

ಬಂಗಾಳಿಗಳ ಹೊಸತಂತ್ರ

(ನಿನ್ನೆಯ ಸುದ್ದಿಯ ಮುಂದುವರಿದ ಭಾಗ)

ವಿಲ್ಲವೆಂದು ಮಂತ್ರಿಗಳ ಚಿಂತೆ. ಆದುದರಿಂದಲೇ ಸಾರ್ವಜನಿಕ ಮತಪ್ರದರ್ಶನ —ಇತ್ಯಾದಿ ಕಾರ್ಯಕ್ರಮ ಕೈಗೆತ್ತಿಕೊಳ್ಳಲು ಕೆಲವು ನಾಯಕರು ಕರೆಯಿತ್ತರೆ ಮತ್ತೆ ಕೆಲವರು ಹಾಗೆ ಮಾಡಬಾರದೆಂದೂ ಹೇಳುತ್ತಿದ್ದಾರೆ. ಪ್ರಸವಾ ಪಕ್ಷದ ಅಧ್ಯಕ್ಷ ಗೋರೆಯವರು ಚಳವಳಿಯನ್ನು ಖಂಡತುಂಡವಾಗಿ ಖಂಡಿಸಿದರೆ, ಎಸ್‌ಎಸ್‌ಪಿ ನಾಯಕ ಶ್ರೀ ಜೋತಿಯವರು ಅಷ್ಟೇ ಬಲವಾಗಿ ಸಮರ್ಥಿಸಿದ್ದಾರೆ. 'ಮಹಾರಾಷ್ಟ್ರದ ವಿವಿಧ ಪಕ್ಷಗಳು ಜನತೆಯಲ್ಲಿ ಕೇಂದ್ರ ಸರಕಾರದ ವಿರುದ್ಧ ಒಂದು ವಿಧವಾದ ತೀವ್ರ ಮತ್ಸರದ ಮನೋಭಾವ ಹುಟ್ಟಿಸಲು ಪ್ರಯತ್ನಿಸಿದಲ್ಲಿ ಮಹಾರಾಷ್ಟ್ರವೂ ಮಳ್ಕೊಂದು ಬಂಗಾಳವಾಗುವುದು" ಎಂದು ಗೋರೆಯವರು ಎಚ್ಚರಿಕೆ ನೀಡಿದ್ದಾರೆ. ಇನ್ನು ನ್ಯಾಯೋಚಿತವಾದುದು.

ಕರ್ನಾಟಕಕ್ಕೆ ಮಹಾಜನ ಆಯೋಗವು ಲಾಭವನ್ನೇನೂ ಮಾಡಿಲ್ಲ. ಹಲವು ಸಂಪದ್ಭರಿತ ಭೂಭಾಗವನ್ನು ಮಹಾರಾಷ್ಟ್ರಕ್ಕೇ ಕೊಡುವಂಥದ ಶಿಫಾರಸು ಮಾಡಿದೆ. ಹಾಗಿದ್ದರೂ, ಕರ್ನಾಟಕವು ಈ ವಿವಾದಗಳನ್ನು ಪರ್ವತ ಮಾಡಬಯಸುವುದಿಲ್ಲ. ದೇಶದ ಐಕ್ಯತೆಯು ಅಗ್ರ ಮಾನ್ಯವಾದುದು: ಆರಂಭದಿಂದಲೂ ಕಾಡುತ್ತಿದ್ದ ಮಹಾರಾಷ್ಟ್ರೀಯರ ಕಾಟವೊಂದು ಕೊನೆಗೊಳ್ಳಲಿ ಎಂದು, ವಿವಾದಕ್ಕೊಂದು ಕೊನೆಯಾಗಲೆಂದು ಕರ್ನಾಟಕ ನುಡಾಜನ ಆಯೋಗದ ವರದಿಯನ್ನು ಒಪ್ಪಿಕೊಂಡಿದೆ ಆಸ್ಪೈ, ಇಂತಹ ಭಾವನೆ ಮಹಾರಾಷ್ಟ್ರೀಯರಲ್ಲೂ ಮೂಡಬೇಕು. ಗೃಹಮಂತ್ರಿ ಚವನರು ಸಾಂಗ್ಲಿ ಅಧಿವೇಶನಕ್ಕೆ ಜಿಡ್ಡ ಬರಬಹುದಾದ ವಿಘ್ನವಿಘಾತಗಳನ್ನು ದೂರ ಮಾಡಿ ಕಾಂಗ್ರೆಸ್ ನಾಯಕರಿಂದ ಶಹಭಾಸ್‌ಗಿರಿ ಪಡೆದುಕೊಂಡರೆ ರಾಷ್ಟ್ರೈಕ್ಯಕ್ಕೆ ಸಂಧಿಸಮಯವಾಗಲಿಲ್ಲ. ಮಹಾಜನ ಆಯೋಪದ ವರದಿಯನ್ನು ಮಹಾರಾಷ್ಟ್ರವೀಗ ವಿರೋಧಿಸಿದೆ. ಅದನು ಸ್ವೀಕರಿಸುವಂತೆ ಮಾಡಬೇಕು. ಇದರಲ್ಲವರ ಘನತೆಯ ಪ್ರಶ್ನೆ ಇದೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 627/67

ವಾದಿಯ—ಶೇಷಮ್ಮ ಶೆಡ್ತಿ.

ಪ್ರತಿವಾದಿ—ಗೋವಿಂದ ಹಾಂಡ

ಉಪ್ಪಿಜಾಲ್ತ್ರು ವಂಡಾರು ಗ್ರಾಮದ ಬಿಸ್ತ ಕಟ್ಟಿಯಲ್ಲಿರುವ ಕೊರಗ ಹಾಂಡ್ತಿ ನಿಮಗ ಪ್ರತಿವಾದಿ ಗೋವಿಂದ ಹಾಂಡ ಯಿವರಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದರೆ.

ನಿಮ್ಮಿಂದಕಳದ ಕೆಪ್ರಾಧಿ ಸಂ|೭೮೪ ವಾದಿಗೆ ಬರಕ್ಕೆ ಗೇಣಿ ಯೂ ಸುಟ್ಟಳ್ಳಿಯನ್ನು ಬರವೂಡಿ ಕೊಳ್ಳುವ ಬಗ್ಗೆ ವಾದಿಯು ದಾಕ್ಷ್ಯ ದೂಡಿದ ಮೇಲಿನ ದಾವಾ ಮೇಲ್ಕಾಣುವ ಕೋರ್ಟಿನಲ್ಲಿ ತಾರೀಖು 6—1—1968ನೇ ಏನ ಬೆಳಿಗ್ಗೆ 11 ಗಂಟೆಗೆ ತಪ್ಪಗೆ ಯಿದೋ ಹಾಗಿದೆ ಎಂಬ ಸಂಗ್ತಿ ಈ ಮೂಲ್ಕ ನಿಮಗೆ ತಿಳಿಸೂಡಾಗಿದೆ. ಆಕ್ಷೇಪಯಿದ್ದರೆ ಜ್ಞಾಪೀಸು ಮಾಡಿಕೊಳ್ಳತಕ್ಕದ್ದು.

B. S. Shetty, B. A. B. L.
Vakil for Plaintiff
Coondapoor, 5—12—67

ಜಿಲ್ಲಾ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರಿಗೆ ತೊಟ್ಟ ಅಧಿಕಾರದಂತೆ ಅವರು ಈ ಕೆಳಗಿನ ಅಧಿಕಾರಿ ವರ್ಗವನ್ನು ರಚಿಸಿರುವರು, ಶ್ರೀಗಳಾದ ಕೆ. ಎಸ್. ಎನ್. ಭಡಿಗ, ಬಿ. ಗಂಗಾಧರ್‌ದಾಸ್ (ಉಪಾಧ್ಯಕ್ಷರು) ಬಿ. ಪರ್ಲಾದಾಸ್ ಶೆಟ್ಟಿ, ಎಸ್. ಎಸ್. ಕೊಳ್ಕೆಬೈಲ್ (ಪ್ರಧಾನ ಕಾರ್ಯದರ್ಶಿಗಳು) ಕೆ. ದೂಮಪ್ಪ, ಎಂ. ಶ್ರೀನಿವಾಸ ನಾಯ್ಕ್ (ಖಜಾನ್ಚಿ) ಬಿ. ಎಮ್. ಇದಿನಬ್ಬ, ಟಿ. ಪರಮೇಶ್ವರ ಗೌಡ, ಎಫ್. ಎಕ್ಸ್. ಡಿ. ಪಿಂಟೋ, ವಿ. ನಾರಾಯಣ ಹೆಗ್ಡೆ, ಶ್ರೀ ರಂಗನಾಥ ಶೆಣೈ, ಡಾ॥ ಎಸ್. ಜಂಪಾ, ಎಚ್. ಜಿ. ಹಂದೆ, ಶ್ರೀಮತಿ ಲೀಲಾವತಿ ಕೆ. ರೈ, [ಕಾರ್ಯಕಾರೀ ಸಮಿತಿಯ ಸದಸ್ಯರು] ಈ ಕೆಳಗಿನವರನ್ನು ಕಾಯಂ ಆಮಂತ್ರಿತರಾಗಿ ಆರಿಸಲಾಗಿದೆ. ಶ್ರೀಗಳಾದ ಧರ್ಮಸ್ಥಳ ರತ್ನವರ್ಮ ಹೆಗ್ಡೆ, ಎಚ್. ಕೆ. ತಿಂಗಳಾಯ, ಕೆ. ಜತ್ತಪ್ಪರೈ, ಡಾ॥ ಯು. ಕೃಷ್ಣ, ಎಂ. ನಾಧ್ವರಾಜ್, ಶ್ರೀಮತಿ ಒಲ್ಟೇರಿಯೊ ಅಲ್ಬುಕರ್ಕ್, ಡಾ॥ ಕೆ. ಬಿ. ಶೆಟ್ಟಿ, ವೈ. ಮಂಜಯ್ಯ ಶೆಟ್ಟಿ, ಬಿ. ಮಂಜಯ್ಯ ಹೆಗ್ಡೆ, ಬಿ. ರಾಜೀವ ಭಂಡಾರಿ, ಸಿರಿಲ್‌ಗೊನ್ಸಾಲ್ವೀಸ್, ಕೆ. ಸಿ ಶ್ರೀನಾಥ್ ಕಾಮತ್, ಕೆ. ಆರ್ ಆಚಾರ್, ವೈ. ಸಜೀವನೇವ ಶೆಣೈ, ಕೆ. ಸುಂದರ ಶೆಟ್ಟಿ.

ಬೊಂಬಾಯಿಯಲ್ಲಿ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ಪ್ರತಿನಿಧಿಗಳು

ಮೈಸೂರಿನಲ್ಲಿರುವ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ಕಟ್ಟಡದ ನಿಧಿಗಾಗಿ ಹಣ ಶೇಖರಿಸಲು ಬೊಂಬಾಯಿಗೆ ನಿಲಯದ ಅಧ್ಯಕ್ಷ ಶ್ರೀ ಕೆ. ದೇಜುಶೆಟ್ಟಿ, ಕಾರ್ಯದರ್ಶಿ ಶ್ರೀ ಎ. ರಾಮಣ್ಣ, ಸದಸ್ಯರುಗಳಾದ ಕೆ. ಪಿ. ಜಂಬುಗೌಡ ಮತ್ತು ಕೆ. ಶಂಭು ಶೆಟ್ಟರು ಹೋಗಿದ್ದು ಆಲ್ಲಿ ಕನ್ನಡ ನಾಡಿನ ಹಲವು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಇತರ ಪ್ರಮುಖರನ್ನು ಭೇಟಿಮಾಡಿ ಆ ರೂಪನೆ ವಿಚಾರ ವಿನಿಮಯ ನಡೆಸಿ ಉದಾರವಾಗಿ ಸಹಾಯ ನೀಡುವಂತೆ ಮನವಿ ಮಾಡಿದರು. ಈ ಭೇಟಿಯಲ್ಲಿ ನೀಡಿಕ್ಷಿಸಿದಷ್ಟು ಹಣ ಕೈಗೆ ಬಾರದಿದ್ದರೂ ಬರುವ ಭರವಸೆಯಿದೆ. ಈ ಭೇಟಿಯು ಕಾಲದಲ್ಲಿ ನಮಗೆ ಸಹಾಯ ನೂಡಿದ ಸದಕಾರ ನೀಡಿದ ಎಲ್ಲರನ್ನು ಈ ಮೂಲಕ ಮನಸಾರೆ ವಂದಿಸುತ್ತೇನೆ.ಮತ್ತೊಮ್ಮೆ ನಮ್ಮ ಪ್ರತಿನಿಧಿಗಳು ಬಂದಾಗ ಪೂರ್ಣ ಸಹಾಯ ನೀಡುವರೆಂದು ನಂಬಿದ್ದೇನೆ ಎಂದು ಕಾರ್ಯದರ್ಶಿ ಶ್ರೀ ಎ. ರಾಮಣ್ಣ ಅವರು ತಿಳಿಸಿತ್ತಾರೆ.

ಯಕ್ಷಗಾನ 'ಅಂಗದ ರಾಯಭಾರ'

ದೇಲಂಬಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ತಾ. 2—12—67ರಂದು 'ಅಂಗದ ರಾಯಭಾರ' ಎಂಬ ಕಥಾ ಭಾಗದ ಯಕ್ಷಗಾನ ಕೂಟವು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂಡಳಿಯವರಿಂದ ನಡೆಸಲ್ಪಟ್ಟಿತು.

ಶ್ರೀ ಮುದಿಯೂರು ಸಾಂಪ್ರದಾಯಿಕ ಪದ್ಯಗಳಿಂದ ಜರಗಲ್ಪಟ್ಟ ಈ ಕೂಟದಲ್ಲಿ ಶ್ರೀಗಳಾದ ಕೀ. ವ. ಕೇರಿಲ, ಹಳೆ ಮನೆ ರಾಮಯ್ಯ ಗೌಡ, ಬಿ. ವಿ. ವಿನೋದ, ಬಾಯಾರು ಸುಬ್ಬಣ್ಣ ಭಟ್ಟ,ಯನ್. ನಾರಾಯಣ ನಾಯಕ್ ಮಾಸ್ತರ್, ಬಂಡಿಡ್ಕ ಅಣ್ಣಯ್ಯಗೌಡ, ಬಿ. ಶ್ರೀಧರ, ಎಂ. ಎಸ್. ರೈ ಮುಂತಾದವರು ಪಾಲ್ಗೊಂಡಿದ್ದರು. ಆರಂಭದಲ್ಲಿ ಶ್ರೀ ಯನ್. ಯನ್. ನಾರಾಯಣರವರು ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದವಿತ್ತರು.

ಸತ್ಯಾರ್ಥಿ ಕೂಟ

ಪರ್ಕಳ, ತಾ. 4—12—1967ನೇ ರಾತ್ರಿ ಪರ್ಕಳ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಪರ್ಕಳ ಶ್ರೀ ಶಾರದಾ ಕಲಾ ಮಂಡಳಿಯವರ ವತಿಯಿಂದ ಸೈಸಾರು ಪ್ರದೇಶ ಕೋಂಗ್ರೆಸ್ ಕಮಿಟಿಗೆ ಮೆಂಬರರಾಗಿ ಉಡುಪಿ ತಾಲೂಕಿನಿಂದ ಆಯ್ಕೆಯಾಗಿ ಆಯ್ಕೆ ಹೊಂದಿರುವ ಶ್ರೀ ಆತ್ರಾಡಿ ಸತೀಶ ಹೆಗ್ಡೆ ಇವರನ್ನು ಸತ್ಕರಿಸುವ ಸಮಾರಂಭವು ಹೆರ್ಗ ಪಂಚಾಯತ್ ಬೋರ್ಡಿನ ಅಧ್ಯಕ್ಷ ಶ್ರೀ ಪಿ. ಮಂಜುನಾಥ ಶ್ಯಾನುಭಾಗರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಮಂಡಳಿಯ ಅಧ್ಯಕ್ಷ ಶ್ರೀ ಪಿ. ಗುರುರಾಜ ಜ್ಯೋತಿಷ್ಯರಿಂದ ಸ್ವಾಗತ ಭಾಷಣ ನಡೆದ ತರುವಾಯ ಸಭಿಕರ ಭಾಷಣದಲ್ಲಿ ಶ್ರೀಯುತರುಗಳಾದ ರಾಜೀವ ಕೋಟ್ಯಾನ್, ಪಿ. ನಾರಾಯಣ ನಾಯಕ್, ಬಿ. ಸೂರಪ್ಪ ಹೆಗ್ಡೆ, ನಾರಾಯಣ ಡಿ. ಶೆಟ್ಟಿಗಾರ ಮತ್ತು ಎಂ. ಎನ್. ಶ್ಯಾನುಭಾಗ್ ಇವರು ಅತಿಥಿಗಳ ಕಾರ್ಯ ಚಟುವಟಿಕೆಯನ್ನು ಪ್ರಶಂಸಿಸಿ ಮಾತನಾಡಿದರು. ಅತಿಥಿ ಶ್ರೀ ಸತೀಶ ಹೆಗ್ಡೆಯವರು ತನ್ನನ್ನು ಗೌರವಿಸಿದುದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿದ ನಂತರ ಅಧ್ಯಕ್ಷರು ಸಮಯೋಚಿತ ಭಾಷಣವಿತ್ತು ಅಶೀರ್ವದಿಸಿದರು. ಅಂತ್ಯದಲ್ಲಿ ಕಾರ್ಯದರ್ಶಿ ಮುರಲೀಧರರಾಯರು ತಂತ್ರಿಯವರು ಧನ್ಯವಾದಾರ್ಪಣೆ ಗೈದರು.

ರಂಭಾಪುರದಲ್ಲಿ ನಾಟಕ

ದಿನಾಂಕ 20—11—1967ರಂದು ರಂಭಾಪುರ ಶ್ರೀ ಮಹಾಗಣಪತಿ ದೇವಾಲಯದಲ್ಲಿ ವಾರ್ಷಿಕ ದೀಪೋತ್ಸವಗಳು ನಡೆದವು. ಈ ಸಂದರ್ಭದಲ್ಲಿ ಶ್ರೀ ಸಿದ್ಧಿ ವಿನಾಯಕ ಯುವಕ ರೈತ ಸಂಘ ರಂಭಾಪುರ ಇದರ ಆಶ್ರಯದಲ್ಲಿ ಸ್ಥಳೀಯ ಕನ್ನಡ ಶಾಲಾ ಬಾಲಕಯರಿಂದ 'ಎ. ಬಿ. ಸಿ. ಡಿ ಎಂಬ ನಾಟಕವೂ ಶ್ರೀ ಸಿದ್ಧಿ ವಿನಾಯಕ ಯುವಕ ರೈತ ಸಂಘದ ಸದಸ್ಯರು ಹಾಗೂ ಮಿತ್ರರಿಂದ 'ವಾತ್ಸಲ್ಯ' ಎಂಬ ನಾಟಕವೂ ಅಭಿನಯಿಸಲ್ಪಟ್ಟಿತು.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ರಿಜಿಸ್ಟರ್ಡ್ ಆಫೀಸು:—ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—3

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು, ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಪ್ರಾವಿಸಿಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ, ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿ ಕೊಂಡಿದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿನೋಟೀಸುಗಳು ಕಾರಣಾಂತರಗಳಿಂದ ನವುಗೇನೇ ವಾಪಾಸು ಬಂದರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ತೃಪ್ತಿ ತೆಗೆದುಕೊಳ್ಳದೆ ಇದ್ದುದರಿಂದಲೂ, ಸದ್ರಿಯವರಿಗೆ—ಮತ್ತು ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸಾಲದ ಬಾಬ್ತು ಬೇಂಕಿಗೆ ಸಲ್ಲಿತಕ್ಕ ಹೊಬಲಗನ್ನು ಇದೇ ತಿಂಗಳ ತಾರೀಖು 27.12.67ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಖು 28—12—1967ನೇ ಗುರುವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ಆವರಣದಲ್ಲಿ ಬಹಿರಂಗ ಹರಾಜು ಮೂಡಲಾಗಿದೆ ಮತ್ತು—ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನ: ನೋಟೀಸು ಕೊಡದೇನೇ ಬಹಿರಂಗಯಾ—ಪಾಸಾಗಿಯೂ ಹರಾಜು ಮೂಡಬಹುದೆಂತ; ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು—ವೆಚ್ಚವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ, ತಿಳಿದಿರಲಿ.

ಸಾಲದ ಖಂಜಾ ನಂಬರು	ಸಾಲಗಾರನ ಹೆಸರು ಮತ್ತು ನಿವಾಸ	ತಾರೀಖು 30—9—67ಕ್ಕೆ ಬಾಕಿಯಿರುವ ಶಿಲ್ಕು
600/65	ಶ್ರೀ ರಾಮಣ್ಣ ಬಿ. ಶೆಟ್ಟಿ, ಶ್ರೀರಾಮ ವಿಜಯ ಹಿಂದೂ ಹೋಟೆಲ್, "ಗೌತಮ ನಿವಾಸ" ಸೈಗಾನ್ ರಸ್ತೆ, ಬೊಂಬಾಯಿ—14.	951—66
622/65	ಶ್ರೀ ಎಸ್. ಜಿನರಾಜ ಹೆಗ್ಡೆ, ಶಾಂತಿರಾಜ ಹೆಗ್ಡೆಯವರ ಮಗ, ಜಾನಸಾಲೆ ರಸ್ತೆ, ಕಾರ್ಕಳ.	135—10
41/66	ಶ್ರೀ ಶೇಕ್ ಇಮಾಮ್ ಸಾಹೇಬ್, ಶೇಕ್ ಮಹಮ್ಮದ್ ಸಾಹೇಬರ ಮಗ, ಸಾಲ್ಮಾರ್, ಕಾರ್ಕಳ.	1869—90
189/66	ಶ್ರೀ ರಂಗ ಸ್ವಾಮಿ, ರಾಯಪ್ಪ ಮೇಸ್ತ್ರಿಯವರ ಮಗ, ಕಲ್ಲುಕುಟ್ಟಿಗ ಕಾಲೆಟ್ಟು, ಕಾರ್ಕಳ.	153—64
211/66	ಶ್ರೀ ಕೆ. ದೊಡ್ಡಣ್ಣ ಶೆಟ್ಟಿ, ಚಂದು ಶೆಟ್ಟಿ ಮಗ, ರಾಜಾರಾಮ ನಿವಾಸ, ಹಿರ್ಗಾನ ಗ್ರಾಮ, ಪೋಸ್ಟು ಹಿರ್ಗಾನ.	120—45
256/66	ಶ್ರೀ ಎಸ್. ಜಿನರಾಜ ಹೆಗ್ಡೆ, ಶಾಂತಿರಾಜ ಅಜ್ರಿಯವರ ಮಗ, ಜಾನಸಾಲೆ, ಕಾರ್ಕಳ.	247—70

ಸ್ಥಳ: ಕಾರ್ಕಳ,
ತಾರೀಖು 6—12—1967.

[ಸಹಿ] ಕೆ. ಭಾಸ್ಕರ ಹೆಗ್ಡೆ
ಮೆನೇಜರ್.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಸತ್ಯವ ಕಾಣುವರಾರುಂಟು

ತಿರುಗುವ ಕಾಲಚಕ್ರಕೆ ವಿರಮಿಸುವನು
ಹಾಕುವ ಮಾನವಂತರಿಹರು?
ಉರುಳಿದ ಸಮಯವಗಳಿಸುವುಪಾಯ
ಜಗದಲಿ ಬಲ್ಲವರಾರಿಹರು?
'ಯುಗ ಯುಗ ಕಳೆದಿದೆ ಯುಗ ಯುಗ ಉಳಿದಿದೆ'
ಅಳಿಯದೆ ಉಳಿಯುವುದೇನುಂಟು?
ಕೂಳಿಗೆ ಅಂಗೈ ಚಾಚುವ ಮಾನವ
ಮಾಡುವ ಕಾರ್ಯವದೇನುಂಟು?
ಸಮತೆಯ ನಿತ್ಯತೆ, ಭವ್ಯತೆ, ದಿವ್ಯತೆ
ಕಾಣುವ ಭಾಗ್ಯವದಿಲ್ಲಂಟು?
ಈ ನರ ಜೀವನ ಪಾವನವೆಂಬರು
ಸತ್ಯವ ಕಾಣುವರಾರುಂಟು?
ನಶ್ವರ ಭೋಗವ ವಿಶ್ವವೆ ಮೆಚ್ಚಿದೆ
ಸರಳತೆ ದೈನ್ಯತೆ ಕಾಣದಿದೆ
ಬೆಂದಲಿ ಸಿಂಧಿವ ಕಾಣುವ ಹಿಂಗುಣ
ಇಲ್ಲದೆ ವಿಷಮತೆ ಹರಡುತಿದೆ.
ಬಾಯೊಳು ಶಾಂತಿಯ ಮಂತ್ರವ ನುಸುರುತ
ಮನದೊಳು ಅಸ್ತ್ರವ ಮಸೆಯುತಿರೆ
ಸಿಗುವುದೆ ಶಾಂತಿಯು? ಅರಸಲು ಸುಖಲು?
ತೃಪ್ತಿಯು ಇಲ್ಲದೆ ಮನದೊಳಗೆ
ಮನ ಮನನವಿಯದೆ ಜಗವನು ತಿಳಿಯದೆ
ಬದುಕಿನ ತಿರುಳದು ಶಾಣುವುದೆ?
ಪ್ರೇಮದಮೃತ ಘನ ತತ್ವವನರಿಯುತ
ಇಡೆಯದೆ ಶಾಂತಿಯು ಜೊರೆಯುವುದೆ?

—ಶ್ರೀ ಕಾ. ಕೆ. ನಾ. ಭೆ.

ಹಿಪ್ನಾಟಿಸಂ ಬಗ್ಗೆ ನಿಮಗೇನು ತಿಳಿದಿದೆ ?

(ಆರನೇ ಪುಟದಿಂದ)

ರೀತಿಯಾಗಿರುತ್ತವೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಎರಡು ವ ನಸ್ಸು ಇರುತ್ತದೆ. ಒಂ ದೊಂ ದು ಭಾ ರಿ ಒಂ ದೊಂ ದು ಮ ನ ಸ್ಸು ಪ್ರ ಬ ಲ ಹೊಂ ದಿ ತವ್ಕು ಅಭಿಪ್ರಾಯದಂತೆ ಜನರನ್ನು ಕಾರ್ಯರೂಪಕ್ಕೆ ತಳ್ಳುವುದು. ಹಿಪ್ನಾಟೈಸ್ ಮಾಡಿದಾಗ ಬೇರ್ಪಟ್ಟ ಎರಡು ಮನವು ಒಂದಾಗಿ ನಿಲ್ಲುವುದು. ನಮ್ಮನ್ನು ನಾವೇ ಹಿಪ್ನಾಟೈಸ್ ಮಾಡುವುದನ್ನು ಯೋಗ ಸಮಾಧಿಯೆಂದು ಕರೆಯುತ್ತೇನೆ. ಆತ್ಮವಿಶ್ವಾಸದಿಂದ ಆತ್ಮವನ್ನು ಗೆಲ್ಲ ಬಹುದು. ಪ್ರತಿದಿನ ನ ಲಗುವಾಗ, ಏಳು ನಾಗ, ಅರೆ ನಿದ್ರಾವಸ್ಥೆಯಲ್ಲಿ ನಾವು ನಿನ್ನೆಗಿಂತ ಮುಂದುವರಿದ್ದೀನೆ, ನೆನ್ನೆ ತಿಳುವಳಿಕೆ ಕೂಡಾ ಅಭಿವೃದ್ಧಿ ಆಗಿದೆ ಎಂದು ತಿಳಿದರೆ ಕಷ್ಟವಾದ ವಿಚಾರಗಳು ಸುಲಭವಾಗಿ ತಿಳಿಯಲು ಅನುಕೂಲವಾಗುತ್ತದೆ.

ಅಂಟೋನ್ ಮೆಸ್ಮರ್ ಎಂಬವನು ಈ ವಿದ್ಯೆಯನ್ನು ಇಂದ್ರಜಾಲವಾಗಿ ಉಪಯೋಗಿಸಿದ್ದಾನೆ. ಇದು 'ಮೆಸ್ಮರಿಸಂ' ಎಂದು ಪ್ರಖ್ಯಾತವಾಗಿದ್ದರೂ ಈಚಿಗೆ ಹಿಪ್ನಟಿಸಂ ಎಂಬ ಶಬ್ದವೇ ಬಳಕೆಯಲ್ಲಿದೆ ಅವನ 'ನಿದ್ರಾಜಾಲಕ ಶಕ್ತಿ'ಯ ಕೆರಣಗಳಿಂದ ಇತರರಲ್ಲಿ ನಿದ್ರಾವಸ್ಥೆಯನ್ನು ಪ್ರೇರಿಸುತ್ತೇನೆ' ಎಂಬ ವಂದ ವೈಜ್ಞಾನಿಕವಾಗಿ ನಿರೂಪಿಸಿದ್ದಾನೆ. ಈ ವಿದ್ಯೆಯಿಂದ ಪ್ರೇಕ್ಷಕರನ್ನು ಮಂತ್ರಮುಗ್ಧರಿಳಿಸುವುದು ಸಾಧ್ಯವಿದೆ. ವ್ಯಾಧಿಗಳ ಮೇಲೆ ಈ ವಿದ್ಯೆ ಪ್ರೇರಿಸಿಲು ಸಾಧ್ಯವಿದೆ. ಒಂದು ಕೋಳಿಯು ಎದುರು ಬಿಳಿಯು ಗೆರೆ ಎಳೆದರೆ ಅದು ಗೆರೆಯ ಮೇಲೆಯೇ ನಡೆಯಲು ಪ್ರಯತ್ನಿಸುವುದು. ಕುರಿಯ ಹಿಂಡಿನಲ್ಲಿ ಒಂದು ಕುರಿಯು ಬಾವಿ ಯಾ ದರೆ ಬೇರೆ ದಾರಿ ಇದ್ದರೂ ಅಳಿದ ಕುರಿಗಳು ಬೇರೆ ದಾರಿಯಲ್ಲಿ ಹೋಗದೇ ಆ ಕುರಿಯನ್ನೇ ಹಿಂಬಾಲಿಸುವುವು. ಒಬ್ಬನು ಭಾಷಣಗಾರನ ಮೇಲೆ ಕಲ್ಲೆಸೆದರೆ ಎಲ್ಲರೂ ಹಾಗೇ ಮಾಡುವರು. ಒಬ್ಬನು ಕಾಲೇಜಿಗೆ ಸೂಟು ಹಾಕಿಕೊಂಡು ಬಂದರೆ ಉಳಿದವರೂ ಹಾಗೇ ಮಾಡಲು ಪ್ರಯತ್ನಿಸುವರು. ಇದೆಲ್ಲವೂ ಹಿಪ್ನಾಟಿಸಂನಿಂದ ಸಾಧ್ಯವಿದೆ. ಸ್ವಯಂ ಪ್ರೇರಣೆಯಿಂದ ಮಾನಸಿಕ ಶಿಕ್ಷೇತನ ಕೂಡಾ ಸಾಧ್ಯವಿದೆ. ಹಿಪ್ನಾಟಿಸಂನ ನಾಲ್ಕು ಹಂತಗಳು ಈ ರೀತಿ ಇವೆ. ನಿದ್ರಾವಸ್ಥೆಯ ಜೊಂಪು ಬರುವುದು ಮೊದಲನೆಯ ಹಂತ. ಎರಡನೆಯ ಹಂತದಲ್ಲಿ ಡಾಕ್ಟರನು ಕೊಟ್ಟ ಸೂಚನೆಯನ್ನು ಒಪ್ಪುತ್ತಾನೆ. ಮೂರನೆಯ ಅತಿಗಹನವಾದ ಹಂತದಲ್ಲಿ ವೈದ್ಯಕೀಯ ಅಪರೇಷನ್ ಕೂಡಾ ಮಾಡಬಹುದಾಗಿ . ನಾಲ್ಕನೆ ಹಂತದಲ್ಲಿ ವ್ಯಕ್ತಿ ತೀರ ಅಪಾಯಂಕರವಾದ ಹಂತಕ್ಕೆ ಬರುತ್ತಾನೆ. ಈ ಸ್ಥಿತಿಯು ವ್ಯಕ್ತಿಯ ಮನಸ್ಸನ್ನು ತೀರ ದುರ್ಬಲ ಮತ್ತು ನಿಸ್ಸಹಾಯಕವಾಗಿ ಮಾಡುವುದು, ವ್ಯಕ್ತಿಯ ಮರಣದ ಸಾಧ್ಯತೆ ಕೂಡಾ ಇದೆ. ಆದುದರಿಂದ ನಿರ್ಭಿ ಡಾಕ್ಟರ್ ಇಂತಹ ಸ್ಥಿತಿಯನ್ನು ಪ್ರೇರೇಪಿಸುವುದೇ ಇಲ್ಲ. ನಿದ್ರಾವಸ್ಥೆಯಲ್ಲಿನ ಕೂಡಾ ಹಿಪ್ನಾಟಿಸಂನಿಂದ ಆಗುವುದು, ಈ ಅವಸ್ಥೆಯಲ್ಲಿ ಕಂಪೌಂಡ್ ಗೋಡೆಗಳ ಮೇಲೆ ನಡೆಯುವುದು ಮುಂತಾದ ಕೆಲಸಗಳು ಅವನಿಗೆ ಸುಲಭವಾಗುವುದು. ಮನೆಗೆ ಹೋಗಿ ಮಲಗಿಕೊ ಎಂಬ ಸೂಚನೆಯನ್ನು ವ್ಯಕ್ತಿಯು ಕೂಟ್ಟಲ್ಲಿ ಅವನು ಹಾಗೇ ಮಾಡುವನು.

ಹಿಪ್ನಾಟಿಸಂನ್ನು ಜಗತ್ತಿನ ಉದ್ಧಾರಕ್ಕಾಗಿ ಉಪಯೋಗಿಸಬಹುದು. ಕಾಲೆಲೆಯನ್ನು ಹಿಪ್ನಾಟಿಸಂನಿಂದ ಗುಣಪಡಿಸಬಹುದು. ಅಂತರ್ಗತ ಮನಸ್ಸಿನ ಒಡಿತದಲ್ಲಿರುವ ಜೀರ್ಣಾಂಗ ಮತ್ತು ಶುದ್ಧೀಕರಣಾಂಗಗಳು ಸರಿಯಾಗಿ ತನ್ನ ಕೆಲಸ ನಿರ್ವಹಿಸುವಂತೆ ಈ ವಿದ್ಯೆಯಿಂದ ಮಾಡಬಹುದು. ಅಂತರ್ಗತ ಮನಸ್ಸಿಗೆ ಕೊಡುವ ಸೂಚನೆಯಿಂದ ಚೇಳು ಕುಟುಕಿದವನಿಗೆ ನೋವು ಇಳಿಯುತ್ತದೆ. ಮಾನಬದ್ಧತೆಯನ್ನು ಹೋಗಲಾಡಿಸುತ್ತದೆ. ಪ್ರಜ್ಞೆ ತಪ್ಪಿಸುವುದರಿಂದ ಹಲ್ಲು ಮುಂತಾದ ಅಪರೇಶನ್ ಮಾಡಲಿಕ್ಕೆ ಅನುಕೂಲವಾಗುತ್ತದೆ. ಧೂಮಪಾನ ಮನುಷ್ಯನಿಗೆಹಿಷ್ಕರದಮೇಲನಮೋಹಹೋಗಿಕೊಚ್ಚನ್ನು ಕರಗಿಸಲು ಸಾಧ್ಯವಾಗುತ್ತದೆ. ಡಯಾಬಿಟೀಸ್ ರೋಗಿಗೆ ಸಿಹಿ ವಸ್ತುಗಳ ಮೇಲಿನ ಆಶೆಯು ಮಾಯವಾಗುವುದು. ಹೆರಿಗೆಯ ಕಾಲದಲ್ಲಿ ನೋವನ್ನು ಮಾಯ ಮಾಡಲು ಸಾಧ್ಯವಿದೆ. ಯುದ್ಧಕಾಲದಲ್ಲಿ ಕೂಡಾ ಇದನ್ನು ಉಪಯೋಗಿಸುತ್ತಿದ್ದರು. ಒಬ್ಬನಿಗೆ ಕಾಲು ನೋವಿನಿಂದ ನಡೆಯಲು ಸಾಧ್ಯವಿಲ್ಲ ಎಂಬ ಭಾವನೆ ಬಂದು ನಡೆಯಲು ಅಸಾಧ್ಯವಾಗಿತ್ತು. ಅದನ್ನು ಹಿಪ್ನಾಟಿಸಂನಿಂದ ಹೋಗಲಾಡಿಸಿದ ಉದಾಹರಣೆ ಇದೆ.

ಕೊನೆಯದಾಗಿ ಹಿಪ್ನಾಟಿಸಂ ಮೂಲಕ ಪ್ರಶ್ನೆಗಳಿಗೆ ಮನಸ್ಸಿಗೆತೃಪ್ತಿ ಕೊಡುವಂತಹ ಉತ್ತರ ಪಡೆಯಬಹುದಾಗಿದೆ. ಇದನ್ನು Planchet ಎಂದೂ ಕರೆಯುತ್ತಾರೆ. ಮೂರು ಜನ ವ್ಯಕ್ತಿಗಳು ಒಂದು ವೃತ್ತದ ಸುತ್ತಲೂ ಕುಳಿತುಬಂದು ತಟ್ಟೆಯನ್ನು ಕವುಚಿ ಇಟ್ಟು ಅದನ್ನು ಕೈಯಿಂದ ಮುಟ್ಟಿಕೊಳ್ಳುತ್ತಾರೆ. ವೃತ್ತದಲ್ಲಿ ಸುತ್ತಲೂ ಅಕ್ಷರ ಮತ್ತು ಅಂಕೆಗಳು ಇರುತ್ತವೆ. ಅವರು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಬರುವಂತೆ ಅಕ್ಷರಗಳೆಡೆಗೆ ತಟ್ಟೆಯು ಓಡುತ್ತದೆ. ಅವರು ನಿಮಿತ್ತ ಮಾತ್ರ ತಟ್ಟೆಯನ್ನು ಮುಟ್ಟಿರುತ್ತಾರೆ. ಈ ಉತ್ತರದಲ್ಲಿ ಹಿಂದಿನ ಘಟನೆಗಳಲ್ಲಿ ಸ್ವಲ್ಪಾಂಶ ಸತ್ಯವಾಗಿರುತ್ತದೆ. ಭವಿಷ್ಯವು ಪೂರ್ಣವಾಗಿ ಸತ್ಯವಾಗುವುದಿಲ್ಲ. ಇದು ಮೂರು ಜನ ವ್ಯಕ್ತಿಗಳ ಅಂತರ್ಗತ ಮನಸ್ಸಿನ ಪರಿಣಾಮವಾಗಿ ಅವರು ಬಯಸಿದ ಉತ್ತರ ದೊರಕುತ್ತದೆ. ಇದನ್ನು ಈಗ ಕೂಡಾ ತುಂಬಾ ಜನರು (ಮುಖ್ಯವಾಗಿ ವಿದ್ಯಾರ್ಥಿಗಳು) ನಾವು ಮಾಡುವುದನ್ನು ನೋಡಬಹುದಾಗಿದೆ. ಇದರಲ್ಲಿ ಮಾಧ್ಯಮವಾಗಿ ಆತ್ಮವನ್ನು ಕೂಡಾ ಬರಮಾಡಿಕೊಳ್ಳುವುದೂ ಇದೆ. ಅವಿದ್ಯಾವಂತರು ಅಥವಾ ಅಲ್ಪ ವಿದ್ಯೆ ಇರುವವರು ಈ "ಸ್ಪೆಲಿಂಚೆಟ್" ಮಾಡಿದಲ್ಲಿ, Spelling mistakeನ್ನು ನಾವು ನೋಡಬಹುದು. ಅಂತೂ ಇದು ಮನಸ್ಸಿನ ಒಂದು ಪ್ರತೀಕ ಎಂದು ಹೇಳಬಹುದು. ಒಬ್ಬನು ಮಾಡಬಹುದಾದ ಸಾಧ್ಯತೆ ಕೂಡಾ ಇದೆ. ಇದನ್ನು ಮಾಡುವು ಮುಖ್ಯವಾಗಿ ನಂಬಿಕೆ ಮತ್ತು ಮನಸ್ಸಿನ ಕೇಂದ್ರೀಕರಣದ ಅಗತ್ಯ ಇದೆ. ಪವಿತ್ರವಾದ ಮನಸ್ಸಿನ ಅಗತ್ಯ ಇದೆ. ಸಿಗರೇಟು ಸೇದಿ ಕೂಡಲೇ "ಸ್ಪೆಲಿಂಚಿಟ್"ನ್ನು ಆಮಂತ್ರಣ ಮಾಡಿದಲ್ಲಿ ನಿಜವಾದ ಉತ್ತರ ಪಡೆಯಲು ಸಾಧ್ಯವಾಗುವುದಿಲ್ಲ. ಇದಕ್ಕೆ ಮುಂಚಿತವಾದ ಯೋಜನೆಯ ಅಗತ್ಯ ಇದೆ. ಪ್ರಶ್ನೆಯನ್ನು ಮೊದಲೇ ತಯಾರು ಮಾಡಿಕೊಂಡಿರಬೇಕು; ಒಂದು ಅಕ್ಷರದಿಂದ ಇನ್ನೊಂದು ಅಕ್ಷರಕ್ಕೆ ಇರುವ ದೂರವೂ ಒಂದೇ ಸಮವಾಗಿರಬೇಕು. ಮತ್ತು ಶುಚಿತ್ವದ ಕಡೆಗೆ ಮನ ಕೊಡಬೇಕು, ಕೈಯ ಬದಲಿಗೆ ಪೆನ್ಸಿಲು ಅಥವಾ ಪೆನ್ನಿನಿಂದ ಮುಟ್ಟಿಕೊಂಡಲ್ಲೂ ಚಲನೆಯು ಸಾಧ್ಯತೆ ಇದೆ ಅಥವಾ ಒಂದು ಕಾಗದದ ಮೇಲೆ ತ್ರಿಕೋಣಾಕಾರದಕಾಗದಕಟ್ಟು ಮಧ್ಯದಲ್ಲಿ ತೂತು ಮಾಡಿ ಪೆನ್ಸಿಲನ್ನು ಅದಕ್ಕೆ ಸಿಕ್ಕಿಸಿದಲ್ಲಿ ನಾವು ಅಪೇಕ್ಷಿಸಿದ ಉತ್ತರವನ್ನು ಚಲನೆಯು ಸಹಾಯದಿಂದ ಪೆನ್ಸಿಲಿನಿಂದ ಬರೆಯುವ ಸಾಧ್ಯತೆ ಕೂಡಾ ಇದೆ. ಅಥವಾ ಒಂದು ಕೋಲನ್ನು ನೂಲಿನ ಸಹಾಯದಿಂದ ನುಡಿ ಕಟ್ಟಿದಲ್ಲಿ ಆ ಕೋಲು ಪ್ರತಿ ಅಕ್ಷರಕ್ಕೆ ಹೋಗಿ ಬಡಿದು ಉತ್ತರವನ್ನು ಪಡೆಯುವ ಸಾಧ್ಯತೆ ಇದೆ. ನಂಬಿಕೆಯಿಂದ ಆವು ಏನನ್ನು ಸಾಧಿಸಲೂ ಸಾಧ್ಯವಿದೆ. ಅಂಜನ ಹಾಕಿ ಬಯಸಿದ್ದನ್ನು ನೋಡುವುದು ಕೂಡಾ ಹಿಪ್ನಾಟಿಸಂ ಅಥವಾ ವಶೀಕರಣ ವಿದ್ಯೆಯ ಒಂದು ಭಾಗವಾಗಿದೆ.

ಇನ್ನೂ ಅನೇಕ ಸಾಧ್ಯತೆಗಳವ್ಯಾಯೋಗಾತ್ಮಕ ಚಟುವಟಿಕೆಗಳಿಂದ ಈ ಬಗ್ಗೆ ಹೆಚ್ಚು ವಿಷಯ ತಿಳಿದು ಜನರಿಗೆ ಒಳಿತು ಮಾಡುವ ಸಾಧ್ಯತೆ ಇದೆ ಮತ್ತು ಪ್ರಯತ್ನವೂ ನಡೆಯಲಿ ಎಂದು ಹಾರೈಸುವ

ಇಂತಹ ಸಮಯದಲ್ಲಿ ನಾವು ಹಿಂದೂ ದೇಶದಲ್ಲಿ ಆ ಬಗ್ಗೆ ದೇಶ ವಿಖ್ಯಾತರಾದ ಪ್ರೊ|| ಪಿ. ಸಿ. ಸರ್ಕಾರ್, ಗೋಗಿಯಾ ಪಾಶಾರಂಥವರನ್ನು ನೆನಪಿಗೆ ತಂದು ಕೊಳ್ಳಬಹುದು. ಈ ರೀತಿಯಿಂದ ಒಬ್ಬರನ್ನಷ್ಟೆ ಇಡೀ ಜನಸಮುದಾಯವನ್ನೇ ವಶಪಡಿಸಿಕೊಳ್ಳುವ ಸಾಧ್ಯತೆ ಇದೆ. ಇಂತಹ ಸಮಯದಲ್ಲಿ ಅವರು open groundನ್ನು ಉಪಯೋಗಿಸುವುದಿಲ್ಲ. ಗೋಗಿಯಾ ಪಾಶಾರು ಇತ್ತೀಚೆಗೆ ಮಂಗಳೂರು, ಉಡುಪಿಗೆ ಬಂದಾಗ ನಡೆದ ಅದ್ಭುತ ಪ್ರದರ್ಶನಗಳು ಹಿಪ್ನಾಟಿಸಂನ ಶಕ್ತಿಯ ದರ್ಶನದ ಅರಿವು ಜನಸಾಮಾನ್ಯರಿಗೆ ಆಗುವಂತೆ ಮಾಡಿದೆ. ಅವರು ನಡೆಸಿದ ಅದ್ಭುತಗಳು ನಿಜವಾಗಿಯೂ ಪ್ರಶಂಸನೀಯ. ಶೀಘ್ರದಲ್ಲೇ ವಿದೇಶ ಪ್ರಯಾಣ ಮಾಡುತ್ತಿರುವ ಅವರು ಭಾರತದ ಕೀರ್ತಿಗೆ ಕಲಶಪ್ರಾಯಂತಾಗುವವರಲ್ಲಿ ನಂದೇಹವಿಲ್ಲ ಪ್ರೊ|| ಪಿ. ಸಿ. ಸರ್ಕಾರ್ ಮತ್ತು ಗೋಗಿಯಾ ಪಾಶಾರಂತಹ ಜನರಿಂದ ಹಿಪ್ನಾಟಿಸಂನ ಒಳ್ಳೆಯ ಉಪಯೋಗ ಆಗಲಿ ಎಂದು ಹಾರೈಸುವ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 235/67 R. I. A. 413/1967

ವೆಂಕಟ್ರಮಣ ಹೊಳ್ಳ —ವಾದಿ

ದೇವಂಡ ಶ್ಯಾನುಭೋಗ ಕೂಡಾ —ಪ್ರತಿವಾದಿಯು

ನೀನೇ ಪ್ರತಿವಾದಿ—ಮೂಡ ಯಾನೆ ಸುಬ್ರಾಯ ಶ್ಯಾನುಭೋಗ C/o K. Devedas Rao, Central Lodge, Doola-pet, Kolar Post. ಇವನಿಗೆ

ವಾದಿಯ ಅಂಗಡಿಯಲ್ಲಿ ಪ್ರತಿವಾದಿಯು ನಿನಿಸಿದ ಲೇವಾ ದೇವಿ ಬಾಕಿ ರೂಪಾಯಿ 64|88 22 ಬಾಕಿ ಬಗ್ಗೆ ನಿನ್ನ ವಿರುದ್ಧ ಮೇಲೆ ಆದಿಯು ಸದ್ರಿ ದಾವೆ ಎಡಿಯಾಗುವುದಲ್ಲದೇ ಪ್ರತಿವಾದಿಯ ಹಕ್ಕಿನ ಸ್ವಿರಾಸ್ತಿಯನ್ನು ಕೂಡಾ ಮೇಲ್ಕಂಡ ಅರ್ಜಿ ಪ್ರಕಾರ ಜಪ್ತಿಗೆ ಅಪೇಕ್ಷಿಸಿರುವುದರಿಂದ ಆ ಕುರಿತು ನಿನ್ನ ಮೇಲಾಪ್ರಿ ಜಪ್ತಿಯಬಿದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 9—1—1968ಕ್ಕೆ ತಪ್ಪಿಗೆ ಇಲ್ಲವೆ ವಕೀಲರ ಮುಖಾಂತರ ಹಾಜರಾಗಬೇಕು. ನಿನ್ನ ಮೇಲಾಪ್ರಿ ಜಪ್ತಿಯಾಗದಿದ್ದಲ್ಲಿ ಸದ್ರಿ ಕೋರ್ಟಿನಲ್ಲಿ ದಾವ್ಯ ಆಗಿ ಜ್ಯಾರೀಗೊಂಡಿ ಕೊಳ್ಳಬೇಕಾಗುವುದು. ತಪ್ಪಿದಲ್ಲಿ ನಿನ್ನನ್ನು ಎಕ್ಸ್‌ಪಾರ್ಟಿ ಎಂದ ಮಾಡಿ ನಿಮಿಂದಿನ ಮುಕಾಂ ಕೊಡಲಾದೀತು ಎಂಬ ಸಾಗ್ತಿ ಕೋರ್ಟು ಹುಕುಂ ಮೇರೆಗೆ ನಿಮಗೆ ಈ ನೋಟಿಸ ತಿಳಿಸಿದೆ.

K. Raghunatha Shenoy
Advocate for Plff
Coondapoor, 4—12—67

ಸುಸೂತ್ರವಾದ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ

ರೇವಣಾತಿಗಳ ಮೇಲೆ ೪% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 ½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಠಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

READ & ADVERTISE IN
NAVAYUGA WEEKLY

ಪ್ರಜಾಪ್ರಭುತ್ವ

ತಿಪಟೂರಿನಲ್ಲಿ ತಿಪರಲಾಗ

ತಿಪಟೂರು ವಿಧಾನಸಭಾ ಮತದಾನ ಕ್ಷೇತ್ರವು ಪ್ರಸವಾ ಪಕ್ಷಪ ಭದ್ರಕೋಟೆಯಾಗಿತ್ತು. ಆದನ್ನು ಕಳೆದ ಸಾರ್ವತ್ರಿಕ ಚುನಾವಣೆಗಳ ವೇಳೆ ಕಾಂಗ್ರೆಸ್ ಒಡೆಯಿತು. ಕಾಂಗ್ರೆಸ್ ಅಭ್ಯರ್ಥಿ ಶ್ರೀ ಎಂ. ಎಸ್. ನೀಲಕಂಠಪ್ಪನವರು ವಿರೋಧಿ ಪಕ್ಷಗಳ ನಿರೀಕ್ಷೆಯಿಲ್ಲವನ್ನೂ ಸುಳ್ಳುಮಾಡಿ ಅಶ್ಚರ್ಯಕರ ಮತ ಗಳಿಸಿದರು. ದುರ್ದೈವದಿಂದ ಅವರು ಅಲ್ಪ ಕಾಲದಲ್ಲೇ ನಿಧನರಾದುದರಿಂದ ಮತ್ತೆ ತಿಪಟೂರಿನಲ್ಲಿ ಮರು ಚುನಾವಣೆ ನಡೆಸು ಬೇಕಾಯಿತು. ಈ ಚುನಾವಣೆಯಲ್ಲಿ ಉಭಯ ಕಡೆಗಳಿಂದಲೂ ಘಟಾನಾ ಘಟಿಗಳು ರಂಗಕ್ಕಿಳಿದು ಹೊರಬಿಸಿಯಿಂದ ದಡಿದರೇನೋ ನಿಜ. ಪ್ರಸವಾ ಪಕ್ಷವು ಸುಮಾರು ಆರು ಸಾವಿರ ಕ್ಕೂ ಮೀರಿದ ಬಹುಮತದಿಂದ ಕಾಂಗ್ರೆಸ್ಸನ್ನು ಸೋಲಿಸಿತು.

ಕಾಂಗ್ರೆಸ್‌ನ ಅಭ್ಯರ್ಥಿ ಶ್ರೀ ಟಿ. ಎಂ. ಮಂಜುನಾಥ್ ಆಗಿದ್ದರು. ಪ್ರಸವಾ ಪಕ್ಷವು ಇಲ್ಲಿ ತಾಲೂ ರಾಜಕೀಯ ತಂತ್ರವನ್ನು ಅಡಿತು, ಮತ್ತು ಕೊನೆಗೆ ಅದರಲ್ಲಿ ಯಶವನ್ನೂ ಗಳಿಸಿತು. ಕಳೆದ ಬಾರಿ ಕಾಂಗ್ರೆಸಿಗೆ ವಿರುದ್ಧವಾಗಿ ಪ್ರಸವಾ ಪಕ್ಷದಿಂದ ಶ್ರೀ ಕೆ. ಪಿ. ರೇವಣ ಸಿದ್ಧಪ್ಪನವರಲ್ಲದೆ ಶ್ರೀ ವಿ. ಎಲ್. ಶಿವಪ್ಪ, ಶ್ರೀ ಟಿ. ತೋಪೇ ಗೌಡರು ಸ್ವತಂತ್ರ ಅಭ್ಯರ್ಥಿಯಾಗಿಯೂ ಸ್ಪರ್ಧಿಸಿದ್ದರು. ಇವರಲ್ಲಿ ಶ್ರೀ ಶಿವಪ್ಪನವರು ಗಣನೀಯ ಮತಗಳನ್ನು ಪಡೆದಿದ್ದರು. ಇವರನ್ನೇ ಪ್ರಸವಾ ಅಭ್ಯರ್ಥಿ ಮಾಡಿದರೆ ಹೇಗೆ ಎಂಬ ಯೋಚನೆ ಹುಟ್ಟಿತು. ತೋರಿದ ಅಲ್ಪ ಸ್ವಲ್ಪ ವಿರೋಧ, ಅಸಮಾಧಾನವೆಲ್ಲವನ್ನೂ ಮೆಟ್ಟಿ, ಕಾಂಗ್ರೆಸ್ ವಿದ್ವೇಷಾಗ್ನಿಯನ್ನು ಉದ್ರೇಕಿಸಿ ಶ್ರೀ ಶಿವಪ್ಪನವರನ್ನು ಪ್ರಸವಾದ ಅಧಿಕೃತ ಅಭ್ಯರ್ಥಿಯನ್ನಾಗಿಸಲಾಯಿತು.

ಪ್ರಸವಾ ತಾನು ಕಳೆದುಕೊಂಡಿದ್ದ ಸ್ಥಾನವನ್ನು ಈಗ ಮರು ಚುನಾವಣೆಯಲ್ಲಿ ಪಡೆಯಲು ಶಕ್ತವಾಯಿತು. ಕಾಂಗ್ರೆಸ್ಸು ಪಡೆದುದನ್ನು ಕಳೆದುಕೊಂಡಿತು. ಚುನಾವಣೆಯು ಕಾಂಗ್ರೆಸ್ ಪಕ್ಷದ ವಿದ್ವೇಷವೊಂದರಿಂದಲೇ ಪ್ರಸವಾಕ್ಕೆ ಜಯಮಾಲೆ ಹಾಕಿತು. ಇದರಿಂದ ಕಾಂಗ್ರೆಸ್ಸು ದುಃಖಿಸ ಬೇಕಾದ ಅಂಶವಿದೆಯೆಂದಲ್ಲವು ವಿದಿಲ್ಲ. ಕೊಟ್ಟ ದೇವರು ಕೊಂಡು ಹೋದನೆಂದು ಸಮಾಧಾನಪಟ್ಟು ಕೊಳ್ಳಬಹುದು. ಆದರೆ, ಇಡಿಯ ದೇಶದಲ್ಲೇ ದಿನ ದಿನಕ್ಕೆ ಹಬ್ಬಿ ಕಾಡುತ್ತಿರುವ ಈ ವಿರೋಧೀ ಭಾವನೆಯನ್ನು ಎದುರಿಸುವ ಶಾಕ ತ್ತು ತನಗಿದೆಯೆಂದು ಕಾಂಗ್ರೆಸ್ಸು ತೋರಿಸಿ ಕೊಡಬೇಕು. ಶಿಥಿಲವಾದ ಜನತೆಯನ್ನು ಸಂಘಟಿಸುವತ್ತ ಅಧಿಕ ಗಮನ ಹರಿಸಬೇಕು. ಅಧಿಕಾರ ನಿರ್ವಹಿಸುವುದು ಮೂಖ್ಯ ತನ್ನ ಕೆಲಸವೆಂದು ಸುಮ್ಮನುಳಿದರೆ, ಮುಂದೆ ಸಂಘಟನೆ ಆನಿವಾರ್ಯವಾದಾಗ ಒಬ್ಬ ಶ್ರೀ ಸಾಮಾನ್ಯನೂ ಅನಕ್ಕೆ ದೊರೆಯಲಾರ ಉಳಿದ ರಾಜಕೀಯ ಪಕ್ಷಗಳು ಮೂಖ್ಯ ತುಂಬಿ ತುಳುಕಾಡುತ್ತಿವೆ.

ಕಳೆದ ವಾರ ಭಾರತದ ಇಬ್ಬರು ವಯೋವೃದ್ಧ ಹುಟ್ಟಾ ಕ್ರಾಂತಿಕಾರರು ಏಧಿನರಾದ ವಾರ್ತೆಗಳು ಬಂದಿವೆ. ರಾಜಕೀಯ ದುರಂತ ನಾಟಕದೊಡನೆಯೇ ಈ ದುರಂತಗಳೂ ನಡೆದಿವೆ. ಆಕಾಲಿ ದಳದ ಪ್ರಶಾತೀಶ ತಾಯಕರಿಸಿಸಿ ಸ್ವಾತಂತ್ರ್ಯ ಪೂರ್ವದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಚಳುವಳಿಯಲ್ಲಿ ಭಾಗವಹಿಸಿ ಕ್ರಾಂತಿಯ ಜ್ವಾಲೆಯನ್ನು ಹರಡಿಸಿದ್ದರೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಂಜಾಬಿ ಸುಬಾದ ಬಗ್ಗೆ ಒಂದಲ್ಲ, ಹಲವು ಬಾರಿ ಉಪವಾಸ, ಚಳುವಳಿ ನಡೆಸಿದ ಮೂಸ್ಟರ್ ತಾರಾಸಿಂಗರು ನವಂಬರ್ ೨೨ರಂದು ನಿಧನರಾದರು. ಇವರ ವಯಸ್ಸು ಮರಣ ಕಾಲದಲ್ಲಿ ಎಳ ವರ್ಷಗಳು.

ಮೂಸ್ಟರ್ ತಾರಾಸಿಂಗರು ಭಾರತ ವಿಭಜನೆಯ ನ್ನು ಒಪ್ಪುತ್ತಿರಲಿಲ್ಲವಾದರೂ ಪ್ರತ್ಯೇಕ ಸಿಖ್ಖಿಸ್ತಾನವನ್ನು ಮೆಚ್ಚುತಿದ್ದರು. ಇವರ ಈ ಮೆಚ್ಚುಗೆಯ ದುರ್ಲಾಭವನ್ನು ಪಡೆದೇ ಪಾಕಿಸ್ತಾನಿ ನಾಯಕರು ಸಿಕ್ಖರ ಮೂಲಭೂತ ಅಧಿಕಾರವನ್ನು ಭಾರತ ಸರಕಾರ ಅದು ವು ತ್ತಿದೆ ಎಂಬ ಅಪಪ್ರಚಾರದ ಸಾಧನವನ್ನಾಗಿ ಮಾಡಿಕೊಂಡಿದ್ದೂ ಉಂಟು. ಇತ್ತೀಚೆಗಿನ ಒಂದೆರಡು ವರ್ಷಗಳಿಂದ ಸಂತ ಫತ್ತೇಸಿಂಗರು ತಾರಾಸಿಂಗರ ಸ್ವಾತಂತ್ರ್ಯವನ್ನಾಕ್ರಮಿಸಿದರೂ (ತಾತ್ವಿಕ ಮತ ಭೇದದಿಂದ) ತಾರಾಸಿಂಗರ ಗೌರವ ಕಡಿಮೆಯಾಗಿಲ್ಲ.

ಇನ್ನೊಬ್ಬ ಹುಟ್ಟಾ ಕ್ರಾಂತಿಕಾರ ನೇ ನಾಸತಿ ಬಾಬಟ್. ಶ್ರೀ ಬಾಬಟರೂ ಚಳುವಳಿ ಪ್ರಿಯರು, ಕ್ರಾಂತಿಕಾರಿಗಳು. ಕರ್ನಾಟಕ—ಮಹಾರಾಷ್ಟ್ರ ಸೀಮೆಯನ್ನು ಪರಿಶೀಲಿಸಿ ವರದಿ ಮಾಡಲು ಆಯೋಗ ನೇಮಿಸ ಬೇಕೆಂದಿವರು ಇತ್ತೀಚೆಗಿನ ವರೆಗೂ ಸತ್ಯಾಗ್ರಹವನ್ನು ಮಾಡಿದವರು. ಈಗ ನೇಮಿಕ ಮಹಾಜನ ಆಯೋಗದ ವರದಿಯನ್ನು ಸ್ವೀಕರಿಸದಂತೆಯೂ ಇವರು ಉಪವಾಸದ ಬೆದರಿಕೆ ಹಾಕಿದರು. ಆಲ ಸ್ವಾಯದ ಬಾಬಟರು ೭೭ರಂದು ನಿಧನರಾದರು.

ಕೆಲವರಿಗೆ ಚಳುವಳಿ, ಉಪವಾಸ, ಹರತಾಳ, ಗುಲ್ಲು, ಗಲಭೆಯೆಂದರೆ ಇಷ್ಟ; ಮಂತ್ರಿಗಳಿಗೆ ಉಟ್ಟಾಟನ್ನೆ ಅಧ್ಯಕ್ಷ ಪೀಠ, ಸಂಚಾರಗಳಲ್ಲಿ ಅಸಕ್ಕಿಯಿರುವಂತೆ ಮಂತ್ರಿ ಮಾಗಧರ ಚಟದಿಂದ ಬೊಕ್ಕಸಕ್ಕೆ ಮೂಖ್ಯ ಪೆಟ್ಟು. ಆದರೆ, ಸಿಂಗ್ ಬಾಬಟರಂತವರ ಹವ್ಯಾಸದಿಂದ ಎಲ್ಲರಿಗೂ ಅಶಾಂತಿ. ಸದ್ಯ, ಈ ಇರ್ವರೂ ಕ್ರಾಂತಿಕಾರರು ಇಳಿ ವಯಸ್ಸಿನಲ್ಲಿ ದೇಹಕ್ಕಾಗಿ ಮೂಡಿದ್ದರಿಂದ 'ಉಪವಾಸ', 'ಅಹಿಂಸಾತ್ಮಕ ಚಳುವಳಿ'ಗಳ ಯಬಗವೂ ಮುಗಿಯಿತೆಂದೇ ಹೇಳಬೇಕು. ಇದೀಗ ಹಿಂಸಾತ್ಮಕ ಕ್ರಾಂತಿಯು ಜ್ವಾಲೆ ಪಶ್ಚಿಮ ಬಂಗಾಳ, ಕೇರಳಗಳಲ್ಲಿ ಅವಿರ್ಭವಿಸಿದ್ದು ಅದನ್ನು ತಡೆ ಹಿಡಿಯದೆ ಹೋದರೆ, ಇಡಿಯ ದೇಶವನ್ನೂ ಸುಟ್ಟುರುಹುವುದು ನಿಸ್ಸಂದೇಹ.

ದಿವಂಗತ ಪ್ರಧಾನಿ ಜವಾಹರಲಾಲರು ಹಿಂದೀಶರರಿಗೆ ನೀಡಿದ್ದ ಭರವಸೆಯನ್ನು ಶಾಸನ ರೂಪಕ್ಕೆ ತರಬೇಕಾದರೆ, ಕೇಂದ್ರ ಸರಕಾರ (ಕಾಂಗ್ರೆಸ್)ಕ್ಕೆ ನೆಹರು ಸಕ್ತು ಎರಡೂವರೆ ವರ್ಷಕಾಲ ಬೇಕಾಯಿತು; ಪ್ರಶ್ನೆ ಇಷ್ಟೊಂದು ಉಲ್ಬಣಕ್ಕೆ ಏರಬೇಕಾಯಿತು. ಇದಕ್ಕೇನು ಕಾರಣ? ಆಂಗ್ಲೆ ನೋಡಲು ಕನ್ನಡಿ ಅನಗತ್ಯ. ಹಿಂದ ಹೆಚ್ಚಿನ ರಾಜ್ಯಗಳಲ್ಲಿ ಕಾಂಗ್ರೆಸ್ಸೇ ಅಧಿಕಾರದಲ್ಲಿತ್ತು. ಅತೀವ ಹಿಂದೀ ಅಭಿಮಾನಿಗಳು, ಉದಾಹರಣೆಗೆ ಸೇರ್ ಗೋವಿಂದದಾಸರಂತವರು ಮಹಾ ಪುರುಷರು, ನೆಹರೂ ನೀತಿಯಿಂದ ಅಸಮಾಧಾನಗೊಂಡರು. ಅವರಂತವರ ಆತಂಕದಿಂದ ನನೆಗುದಿಗೆ ಬಿದ್ದ ವಿಧೇಯಕ ಈಗ, ಹಲವೆಡೆ ಕಾಂಗ್ರೆಸ್ ಸರಕಾರ ಪತನಗೊಂಡ ಮೇಲೆ, ಸರ್ವಮಾನ್ಯ ನೀತಿಯೊಂದನ್ನು ರೂಪಿಸಿ, ಹಿಂದೀಶರರಿಗೆ ಧೈರ್ಯ ನೀಡುವುದು ಅತ್ಯಂತಾವಶ್ಯಕವಾದುದಾಗಿದೆ. ಹೊರ ಬರಲೇ ಬೇಕಾಯಿತು. ಇಲ್ಲವಾದರೆ, ಹಿಂದೀ ವಿರೋಧಿ ಚಳವಳಿ ಹುಟ್ಟಿ ಹಿಂಸಾತ್ಮಕತೆ—ಅನೈಕ್ಯಗಳಿಗೆ ನಾಂದಿಯಾಡುವ ಸಂಭವವಿತ್ತು.

ಹೀಗಿದ್ದರೂ ಶ್ರೀ ಸೇರ್ ಗೋವಿಂದ ದಾಸರು ಭಾಷಾ ವಿಧೇಯಕವನ್ನು ಒಪ್ಪುವುದಿಲ್ಲ. ಹಿಂದಿಯೊಡನೆ ಇಂಗ್ಲಿಷ್ ಭಾಷೆಯನ್ನೂ ಬಳಸುವುದು ಎಂದರೆ, ಹಿಂದಿಗೆ ಅಪಮಾನವೆನಿಂಬುದವರ ಇಂಗಿತವಿರಬಹುದು. ಹಿಂದೀ ದೇಶದ ಏಕಮಾತ್ರ ಅಧಿಗೃತ ಸಂಪರ್ಕ ಭಾಷೆಯಾಗಬೇಕು; ನಿಜ. ಆದರೆ, ಇನ್ನೇ ಆದರೆ ಸಾಲದು; ವಿವಿಧ ಭಾಷೆಯ ಜನತೆಯನ್ನೂ ಏಕ ಸೂತ್ರದಿಂದ ಬಂಧಿಸಬೇಕು. ಕಾನೂನು, ಶಾಸನಗಳಿಂಸಲೇ ರಾಜ್ಯಪಾಲನಿಗೆ ತೊಡಗಿದರೆ, ಆರಾಜಕತೆಗೆ ಮೂಲವಾಗುವುದು. ಸೇರರು ಖಂಡಿತ ಹಿಂದಿಯನ್ನು ಮೂಖ್ಯ ಪ್ರೇಮಿಸುತ್ತಾರೆ; ಹಿಂದೀಸು (ಭಾರತೀಯ)ರನ್ನಲ್ಲವಂದನ್ನ ಬೇಕಾಗುತ್ತದೆ. ಅತಿ ದೀರ್ಘ ವ್ಯಾಮೋಹ ಬಿತ್ತದೆ ಹೋದರೆ, ಅವರ ಬಗ್ಗೆ ನಿರಾದಂ ಭಾವನೆ ಮೂಡಲು ಹೆಚ್ಚು ಸಮಯ ಆನಗತ್ಯ.

ಇಯಾನ್ ಫ್ಲೆಮಿಂಗ್ ಹಾಗೂ ಜೇಮ್ಸ್ ಬಾಂಡ್

(ಎಡಕೇ ಮುಟದಿಂದ)

ನುತ್ತೆ ಫ್ಲೆಮಿಂಗ್ ಹಾಗೂ ಅನ ಪತ್ನಿಯರ ಕ್ರೂರಾದರು ಜೀವನದಲ್ಲೆ ಪ್ರಥಮ ಬಾರಿಗೆ ಅತಿಥಿಗೆ ವಿಚಾರಹದ ಬಯಕೆಯುಂಟಾಯಿತು. ಆನ ವಿವಾಹ ವಿಚ್ಛೆದಕ್ಕೋಸ್ಕರ ಕೇಸನ್ನು ದಾಖಲು ಮಾಡಿದಳು. ೧೯೫೨ರಲ್ಲಿ ಫೆಬ್ರವರಿ ೫ರಂಗಳು ವಿವಾಹ ವಿಚ್ಛೇದವೂ ದೊರೆಯಿತು ಮತ್ತೆ ಮಾರ್ಚ್ ೫ರಂಗಳಲ್ಲಿ ಜಮೈಕಾದಲ್ಲಿ ಫ್ಲೆಮಿಂಗ್‌ನೊಡನೆ ವಿವಾಹವೂ ನಡೆಯಿತು. ಆನಿಗೆ ಅದು ಮೂರನೇ ವಿವಾಹ! ಪ್ರಥಮ ವಿವಾಹದಿಂದ ಅವಳಿಗೆ ಒಂದು ಹೆಣ್ಣು ಸಂತತಿಯಿತ್ತು.

ವಿವಾಹವಾಗುವ ಇಚ್ಛೆಯು ನಂತರ, ವಿವಾಹವಾಗುವ ವರೆಗೆ ಫ್ಲೆಮಿಂಗ್‌ನ ಮನಸ್ಥಿತಿ ಅಶ್ಚಿತವಾಗಿತ್ತು. ಆಗಲೇ ಅದನ್ನು ಹತ್ತಿಕ್ಕಲು ಆತ ಕಾದಂಬರಿ ಬರೆಯಲು ಯತ್ನಿಸಿದ್ದು.

'ಕಾಸಿನೊ ರೊಯಲ್' ಪ್ರಕಟಿಸಿದ ವರ್ಷವೇ ಅದರ ೭೦೦೦ ಪ್ರತಿಗಳು ಮಾರಾಟವಾದವು. ಇದು ಗ್ರಂಥಕರ್ತನಿಗೆ ಸ್ಫೂರ್ತಿ ನೀಡಿತು. ಮತ್ತೆ ಪ್ರತಿ ವರ್ಷವೂ ಶಿಶಿರ ಕಾಲದಲ್ಲಿ ಆತ ಒಂದೊಂದಾಗಿಯೇ ಕಾದಂಬರಿಗಳನ್ನು ಬರೆದ. ೧೯೬೪ರಲ್ಲಿ ಆತನ ಮರಣದ ವರೆಗೆ ಈ ಬರೆಯುವಿಕೆ ಇದ್ದೇ ಇತ್ತು.

ಆತನು ಈ ವರೆಗೆ ಬರೆದ ಪುಸ್ತಕಗಳು ಒಟ್ಟಿಗೆ ೧೩.

ಎರಡು ಪುಸ್ತಕಗಳನ್ನು, ಮಕ್ಕಳಿಗಾಗಿ ಒಂದು ಪುಸ್ತಕವನ್ನೂ, ಹಲವಾರು ಕೆರಿಗಾತಿಗಳನ್ನೂ ಆತ ಬರೆದಿದ್ದಾನೆ.

"ಕಾಸಿನೊ ರೊಯಲ್"ನ ನಾಯಕ ಜೇಮ್ಸ್ ಬಾಂಡ್‌ನೇ ಎಲ್ಲಾ ಕಾದಂಬರಿಗಳಲ್ಲೂ ಪ್ರಮುಖ ವ್ಯಕ್ತಿತ್ವ. "ಸ್ವತಂತ್ರ ವಿಶ್ವ"ವೆಂದು ಕರೆಸಿಲ್ಪಡುವ ಅಂಗ್ಲೋ ಅಮೇರಿಕನ್ ಕೂಟದ ಸಂರಕ್ಷಕನಾಗಿ ಫ್ಲೇಮಿಂಗ್ ಜೇಮ್ಸ್ ಬಾಂಡನ ವ್ಯಕ್ತಿತ್ವವನ್ನು ಚಿತ್ರಿಸಿದ್ದಾನೆ. ಅಂತಲೇ ಅಮೇರಿಕ ಇಂಗ್ಲೆಂಡ್‌ಗಳಲ್ಲಿ ಇವುಗಳ ಪ್ರತಿ ಲಕ್ಷ ಸಂಖ್ಯೆಯಲ್ಲಿ ಮಾರಿ ಹೋದವು.

ಧನ ಸಂಪಾದನೆಯಲೆಂದೇ ತಾನು ಬರೆಯುವುದು ಎಂದು ಫ್ಲೆಮಿಂಗ್ ಸ್ವತಃ ಒಪ್ಪಿದ್ದಾನೆ. ಆದ್ದರಿಂದಲೇ ಜೀವನದ ಯಾರ್ಥ್ಯವಿಂದ ಜನರ ಶ್ರದ್ಧೆಯನ್ನು ಬೇರ್ಪಡಿಸಿ ಅಸಂಭಾವ್ಯವಾದ, ಸಾಹಸ ಚಿತ್ರಣವನ್ನೂ, ಲೈಂಗಿಕ ವರ್ಣನೆಯನ್ನೂ ಫ್ಲೆಮಿಂಗ್ ಮಾಡಿರುವುದು. ಆ ಪ್ರಯತ್ನದಲ್ಲಿ ಬಂಡವಾಳಶಾಹೀ ರಾಷ್ಟ್ರವನ್ನು ಪ್ರತಿನಿಧೀಕರಿಸುವುದರಲ್ಲಿ ಫ್ಲೆಮಿಂಗ್ ಜೇಮ್ಸ್ ಬೋಂಡನನ್ನು ಚಿತ್ರಿಸಿ ಜಯಶಾಲಿಯಾಗಿದ್ದಾನೆ.

ಸಚಿತ್ರ ಹೊಸ ಪುಸ್ತಕ

ಲಾಲ್ ಬಹಾದುರ್ ಶಾಸ್ತ್ರಿ

ಲೇಖಕರು—

ಬಿ. ಆರ್. ಪ್ರಾಣೇಶ ರಾವ್, ಎಂ.ಎ.

ಮೈ ಸೂ ರು.

ಸರಳವೂ ತ್ಯಾಗಮಯವೂ ಆಗಿದ್ದ ಶ್ರೀ ಶಾಸ್ತ್ರಿಯವರ ಸಾರ್ಥಕ ಜೀವನದ ಪರಿಚಯ

ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕ

ಬೆಲೆ ರೂ. 2/— ಮಾತ್ರ,

ಅಂಚೆ ವೆಚ್ಚ ಪ್ರತ್ಯೇಕ

ಪ್ರತಿಗಳಿಗೆ—

ನವಭಾರತ ಪುಸ್ತಕ ಭಂಡಾರ,

ಉಡುಪಿ

ನ ಹನುಂ ಹಾರೇ ನ ತುಮಂ ಹಾರೇ

(ನಾಲ್ಕನೇ ಪುಟದಿಂದ)

ಗ್ರೆಸ್ ಅಧ್ಯಕ್ಷರಾದುದರಿಂದ ಮಹಾರಾಷ್ಟ್ರೀಯರಿಗೆ ಬಲಿಕೆ ಕಳವಳವಂತೆ; ಚಿವನೆರಿಗೆ ಮುಖಿ ಭಂಗವಂತೆ....."

'ಇರಬಹುದೆಂದನ್ನಿ. ನಿಜಲಿಂಗಪ್ಪನ ಪಗು ಸೀಮಾ ವಿವಾದಕ್ಕೊಂದು ಕೊನೆ ಬೇಕೆನ್ನುವವರು. ಮಂರಾಠಿಗಳು ತಮ್ಮ ಕುದುರೆಗೆ ಮೂರು ಕಾಲೆಂದು ಕೂಗುವವರು. ಚವಪಥರಿಗೆ—ಖಾಪ, ನಪ್ಪಗೆ ಈ ತಾನಾಗಿಯೇ ದೊರೆತ "ಅನಭಿಷಿಕ್ತ ದೊರೆ" ಪಟ್ಟ ತಪ್ಪುವುದೋ ಎಂಬ ಭಯ....."

"ಅವ್ರೇನೋ ಭಾರಿ ತಂತ್ರ ಮಾಡ್ತಾ ಇದ್ದಾರಂತಲ್ಲಾ...."

'ಮಹಾಜನ ಆಯೋಗವನ್ನು ಮರಾಠಿಗಳ ಒತ್ತಾಯದಿಂದ ನೇಮಿಸುವಲ್ಲಿ ಚವನರದ್ದೇ ಮೇಲುಗೈ. ಈಗ ಅಂಗೈ ತೋರಿಸಿ ಅವಲಕ್ಷಣ ಹೇಳಿಸಿಕೊಂಡ ಮೇಲೆ, ಆ ವರದಿಯನ್ನು ತುಳಿಯುವುದಕಲ್ಲೂ ಅವರದ್ದೇ ಮೇಲುಗಾಲು. ಇನ್ನು ಸರ್ವ ಪಕ್ಷಗಳ ಸಭೆಯ ನಾಟಕವಂತೆ...."

"ಈ ನಾಟಕವಾಡುವುದಕ್ಕೆ ನಿಜಲಿಂಗಪ್ಪನವಂಥ ಅಡ್ಡಬರುತ್ತಾರೇಂಬ ಭಯ ವಿರಬಹುದು..."

"ಕಾಂಗ್ರೆಸ್ ಅಧ್ಯಕ್ಷರೇನು ಮಾಡಬಹುದು? ಪಾರ್ಲಿಮೆಂಟು ಇದೆಯಲ್ಲ? ನಿಜಲಿಂಗಪ್ಪನ್ನು ಬಿಡದಿದ್ರು ವಿರೋಧೀ ಪಕ್ಷಗಳ ಗೊಸ್ತುವಳಿಯಾಗಿ ತರಬಹುದು. ಅದಕ್ಕೆ ಕೆಲವು ಕಾಂಗ್ರೆಸಿಗರ ಬೆಂಬಲವೂ ಸಿಗಬಹುದು...."

"ಅಲ್ಲವೇ ಮತ್ತೆ. ಕರ್ನಾಟಕದಲ್ಲಿ ಎಷ್ಟೆಲ್ಲೆಗಳ ಸಂಖ್ಯೆ ನಾರಿಗೆ ಹೆಚ್ಚಿಸಿಕೊಂಡ ಹಾಗೆ..."

"ಹ್ಞೂಹ್ಞು. ಆದರೆ ಇಂತಹ ನಾಟಕವಾಡುವುದು ಭಾರೀ ಸುಲಭವಲ್ಲ...."

"ಇರಬಹುದೆನ್ನಿ. ಅಲ್ಲಿ, ಉತ್ತರ ಭಾರತದಲ್ಲಿ ಇಂಗ್ಲೀಷ್ ವಿರೋಧಿ ಚಳುವಳಿ ಭಾರೀ ತೀವ್ರವಾಗುತ್ತದಂತಲ್ಲಾ?"

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 338/67

ಗೋವಿಂದ ಶೆಟ್ಟಿ —ವಾದಿ
ನಾರಾಯಣ ಶೆಟ್ಟಿ —ಪ್ರತಿವಾದಿ

ಸದ್ರಿ ವಾದಿ ಕೊಡೆಯಂದ ಈ ಮೂಲ ಜಾಹೀರ್ ಮಾಡಿಕೊಳ್ಳುವದೇನೆಂದ್ರೆ—

ನಾರಾಯಣಶೆಟ್ಟಿ—ನಾಗಮ್ಮ ಶೆಟ್ತಿ ಮಗ, ಪಕ್ಕಾಡಿ ಗ್ರಾಮದ ಹಕ್ಕಾಡಿಹಾಡಿನ ಶೆಟ್ಟಿ ಎನೆಯಲ್ಲಿರುವವ.

ವಾದಿಗೆ ಪ್ರತಿವಾದಿಯಿಂದ ಬರತಕ್ಕ ರೂ ನೂರಾ ನೋಟಿನ ಆಸ್ಲು ಬಡ್ಡಿ ಕೊಡಾರೂ 208—87½ ಬರಮಾಡಿ ಕೊಳ್ಳುವರೇ ನಾದಿಯು ಮಾಡಿದ ಮೇಲ್ಕಂಡ ಪಾವೆಯು ಸದ್ರಿ ಕೋರ್ಟಿನಲ್ಲಿ ತಾ. 8—1—68ಕ್ಕೆ ಆಜೈರಿತಸ್ತಾಗ ಯಿಜೋಣಾಗಿಯದ್ದಿ ಆ ಕಾರಣ ನಿನ್ನ ಮೇನಾದ್ರು ಉದಾಸರಣೆಯಿದ್ರೆ ಮೇಲ್ಕಂಡ ಕೋರ್ಟು ಮುಂದೆ 11 ಗಂಟೆಗೆ ಸ್ವತಹಾ ವಕೀಲರ ದ್ವಾರಾ ಹಾಜ್ರಾಗಿ ಜ್ಯಾಬ್ತೆ ಮಾಡಿ ಕೊಳ್ಳ ತಕ್ಕದ್ದು. ತಪ್ಪಿದ್ರೆ ನಿನ್ನ ಗೈರ ಹಾಜರಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

M. M. Hebbar
Advocate for Plff.

Kundapoor, Date 6—12—67

ವಿನು ಕೈಗಾರಿಕೆಯಲ್ಲಿ ಇನ್ನೊಂದು ನೈಲುಗೆಲ್ಲು

(ಒಂಭತ್ತನೇ ಪುಟದಿಂದ)

ಕ್ತಿರುವ ಪ್ರೋತ್ಸಾಹವನ್ನು ಅವರು ಪ್ರಕಂಸಿಸಿದರು.

ಪ್ರಧಾನಿ, ಉಪಪ್ರಧಾನಿ, ಉಸರಾಷ್ಟ್ರ ಪತಿ ಮತ್ತಿತರ ಕೇಂದ್ರ-ರಾಜ್ಯಗಳ ಹಲವಾರು ಮಂತ್ರಿಗಳೂ, ಇತರ ಮಹನೀಯರೂ ಶುಭಕೋರಿ ಕಳುಹಿಸಿದ್ದ ಸಂದೇಶಗಳನ್ನು ಶ್ರೀ ಎ. ಜೆ. ಅಲ್ಪಿಯವರು ಓದಿದರು.

ತದ್ನಂ ಉದ್ಘಾಟನಾ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಮಲ್ಪೆಯು ಸೈಸರ್ಗಿಕ ಬಂದರೆಂಬುದನ್ನು ಒಪ್ಪಿಕೊಂಡು ಇದು ಪ್ರಜ್ಞ ದ್ಧ ಬಂದರಾಗದೆ ಹೋದರೂ ಮತ್ಸ್ಯೋದ್ಯಮ ಕೇಂದ್ರವಾಗಿ ಖಂಡಿತವಾಗ್ಯೂ ಉನ್ನತಿ ಹೊಂದೆ. ವುದು ಎಂದು ಭರವಸೆ ನೀಡಿದರು. ನಮ್ಮ ಕರಾವಳಿಯಲ್ಲಿ ಧಾರಾಳ ಮಿನು ದೊರೆಯುತ್ತಿದೆ. ಇದರಲ್ಲಿ ಸೇ. ೨೦-೪೪ ರಷ್ಟು ಮೇದಸ್ಸು ಬಿಡುರುತ್ತದೆ. ಆದುದರಿಂದ ಇದೊಂದು ಉತ್ತಮ ಆಹಾರ

"ಹೌದು, ಅಂದು ದಕ್ಷಿಣದ ಸಂದಿ, ಇಂದು ಉತ್ತರದ ಸಂದಿ.'

'ಅಲ್ಲಾ. ಹೀಗೆಲ್ಲಾ ಆದರೆ ನಮ್ಮ ಶಕ್ತಿಯೆಲ್ಲಾ ವ್ಯರ್ಥವಾಗೇ ಹರಿದುಹೋಗುತ್ತೆ! ಸಮಸ್ಯೆಗಳನ್ನು ಪರಿಹಾರ ಮಾಡುವುದು ಹೇಗೆ?'

'ಸಮಸ್ಯೆ ಪರಿಹಾರವಾಯಿತೆಂದರೆ, ಜೀವನ್ಮುಕ್ತಿ ಅಂತ ಅರ್ಥ. ದೀರ್ಘಾಯುವಾಗಿ ಬಾಳಬಯಸುವವರು ಮುಕ್ತಿಯನ್ನು ಬಯಸುತ್ತಾರೇನು? ಎಂತಲೇ ಸಮಸ್ಯೆ ಪರಿಹಾರ ಮಾಡುವ ನೆವದಿಂದ ಇನ್ನೊಂದಷ್ಟು ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ.'

'ಅದೇ ಅಂದದ್ದಲ್ಲಾ, ಮಟ್ಟಿಲು ಹೋದರೆ ಚುಚ್ಚಲು ಬರುತ್ತದೆ...."

"ಹಾಗೆಂದು ಮುಟ್ಟದಿರುವುದೂ ಗಾಳ್ಯವೇನು?

"ಅದು ಹೇಗೆ?"

"ಅದನ್ನೇ ಆ ದದ್ದೂ....ಹ್ಞೂಂ...."

"ಹ್ಞೂಂ...."

—ಗೋರಾ.

"ಕರುನಾಡು"

ಕರುನಾಡ ಪೈಸಿರಿಯು ಸೂರೆಗೊಂಬುದು ಮನವ
ಕಂಬನಿಯನುದಯಿಸುವ ಕಂಗೊಳಿಸಾತ್ಮಲ್ಲಿ
ಕರುವಿಡುವ ಉದಯದಲಿ ಉದಯಚಲದ ತಾನು
ಕನಕದಾಮರೆಮೂಡಿ ಮುಚ್ಚಬಿಡುವ॥

ಚಂದ್ರಿಕೆಯ ನೋಡಿದ್ದಿ ಕಡಲಣಂಗ ಬಂದಿಪನು
ಚಂಗಾಟವಾಡುತಲಿ ನಲಿಯುತಿಪನು
ಜಲ್ಲವಾಡುತ ತಾನು ಚಿಂದೊನ್ನು ಬೀರುವನು
ಚೆನ್ನಗಿರಿಯನ್ನೆರಿ ಕಂಗೊಳಿಸುತಿಪನು॥

ಚಂದ್ರಿಕೆಯು ಇಂಚರವು ಕೇಳಿ ಬರುತಿದೆ ಇಲ್ಲಿ
ಚಕ್ಕವಾಕವು ಚರಕೆ ಚಕಟಿಗಳ ಜೀಡು
ಚಕ್ಕೋತ ಚಕ್ರಾಗಿ ಚಲದಂಕರನು ನೋಡು
ಚೈತ್ರದೂತಕೆ ಜೋಡಿ ಚೈತ್ರ ಆಗಲು॥

ಶಿಲಿನೇತ್ರ ನಿಶದಲ್ಲಿ ನುಡಿವೆಣ್ಣ ಳಿಯಲ್ಲಿ,
ಶರ್ವಾಣಿ ಶತದಲಗಳಿಪತ್ತ ಇಲ್ಲಿ

ವೆಂದ ಮುಖ್ಯ ಮಂತ್ರಿಗಳು ಶ್ರೀ ಮಧ್ವರಾಜರ ಪ್ರಯತ್ನ, ಸಾಧನೆ, ಉದಾರತೆ, ಸೌಹಾರ್ದತೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

ಮೈಸೂರು ರಾಜ್ಯದ ಫಿಶರೀಸ್ ಇಲಾಖೆಯ ಡೈರೆಕ್ಟರರಾದ ಶ್ರೀ ಜಿ. ಎಲ್. ರಾವ್ ಅವರು ಪಾಲಾಗುತ್ತಿದ್ದ ಸಾರ್ಡಿನ್ ಮಿನಿನ ಸಂಪೂರ್ಣಪ್ರಯೋಜನ ಪಡೆದುಬರುವ ಈ ಯೋಜನೆಯನ್ನು ಸ್ವಾಗತಿಸಿದರು. ಶ್ರೀ ದೇವರಾಜ ಅರಸು ಮಲ್ಪೆಯು ಅತಿದೊಡ್ಡ ಮಿನು ಕೇಂದ್ರವಿದ್ದು ಇಲ್ಲಿ ದೊರೆಯುವ ಮಿನು ಪಾಳಾಗದೆ ಉಪಯೋಗಕ್ಕೆ ಬರುವಂತಾದುದು ಪ್ರಶಂಸನೀಯವೆಂದು ಹೇಳಿ, ಫ್ಲೋಟೇಂಡ್ ಸರಕಾರದ ನೆರವಿನಿಂದ ಇಲ್ಲಿ ಮಿನುಗಾರಿಕೆಯನ್ನು ಅಭಿವೃದ್ಧಿಗೊಳಿಸುವ ಯೋಜನೆಯನ್ನು ತಿಳಿಸಿದರು. ಇಲ್ಲಿನ ಉತ್ಪನ್ನಗಳು ದೇಶದ ಉಪಯೋಗಕ್ಕೆ ದೊರಕಿದೆ. ವಿದೇಶಕ್ಕೆ ಪೂರ್ಣ ನಿರ್ಯಾತವಾಗದಂತೆ ನೋಡಿಕೊಳ್ಳಬೇಕೆಂದೂ ಕರೆಯಿತ್ತರು.

ಕೊನೆಯಲ್ಲಿ ಶ್ರೀ ಮಧ್ವರಾಜರ ತಮ್ಮ ವಂಗಳೂರಿನ ಮತ್ಸ್ಯ ಇಲಾಖಾಧಿಕಾರಿ ಶ್ರೀ ಎಂ. ಕೃಷ್ಣರಾಜರು ವಂದನಾರ್ಪಣೆ ಗೈದರು.

ಜನವರಿ ೨೬

ಭಾರತೀಯರಿಂದ ನಮಗೊಂದು ಪರಮ ಪವಿತ್ರ ದಿನ. ಪ್ರಜಾರಾಜ್ಯ ದಿನೋತ್ಸವದ ಸವಿ ನೆನಪನ್ನು ಚಿರಂತನವಾಗಿರಿಸಲು

ನವಯುಗವು

ಪಾಡಿನ ಸವಿಸ್ತೃತ ಇರಹಗಾರರ ರಾಜಕೀಯ, ಪಾಗೂ ಸಾಂಸ್ಕೃತಿಕ ಮೌಲ್ಯವಿರುವ ಲೇಖನಗಳಿಂದ ಕೂಡಿದ

ಪ್ರಜಾರಾಜ್ಯ ವಿಶೇಷ ಸಂಚಿಕೆಯನ್ನು

ಹೊರಡಿಸುವುದು.

ಕರ್ನಾಟಕದಲ್ಲೂ ಕನ್ನಡಿಗರು ನೆಲಸಿರುವ ಪ್ರತಿಯೆ ಜೆರುಲ್ಲೂ ವಿಶಾಲವಾಗಿ ಪ್ರಚಾರವಾಗುವ ಈ ಸಂಚಿಕೆಯು ಜಾಹೀರಾತಿಗೆ ಉತ್ತಮ ವೂಪ್ಯವಾಗಿದೆ.

ದರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ, ಪಿ. ಕೆ.

ಇದೋ ನೋಡು ಶಂಬೂಕ ಶುಕ ಶಕುಂತದ ಬೀಡು
ಶ್ರೀ ಗಂಧ ಶ್ರೀ ತುಲಸಿ ಶ್ರೀವನಂಕ ನಾಡು॥

—ಎಂ. ವಿ. ಶರ್ಮಾ

ಹೊಸ ಪ್ರಕಟಣೆಗಳು

೧ ಸುಧನ್ವಕಾಳಗ [ಆಖ್ಯಾನಸಹಿತ]

ಲೇಖಕರು: ಶ್ರೀ ಸೀತಾನದಿ ಗಣಪಯ್ಯ ಶೆಟ್ಟಿ.

ಪ್ರಕಾಶಕರು: ಶ್ರೀ ಎಸ್. ರವೀಂದ್ರನಾಥ ಶೆಟ್ಟಿ.

ಸುಬೋಧ ಸಾಹಿತ್ಯ ಭಂಡಾರ, ಹಿರಿಯಡಕ (ದ ಕ.)

ಪುಟಗಳು: ೬೪. ಬೆಲೆ: ರೂ. ೧-೦೦

೨ ಯೋಗಿರಾಜ ಸ್ವಾಮಿ ಭೂದಯಾನಂದ ಸರಸ್ವತಿ

ರೇಖಾಕರು: ಶ್ರೀ ಪಂಡಿತ್ ಬಿ. ಲಕ್ಷ್ಮಣ ದೇವ ವಿದ್ಯಾರ್ಥಿ.

ಪ್ರಕಾಶಕರು: ಸದ್ಧರ್ಮ ಪ್ರಚಾರಕ ಗ್ರಂಥಮಾಲೆ, ಮಂಗಳೂರು.

ಪುಟಗಳು: ೬೬. ಬೆಲೆ: ರೂ. ೩-೦೦

೩ ಕೇಲಕ ಸಂಗರದ ಶ್ರೀಕೃಷ್ಣ ಪಂಚಾಂಗ

ಶ್ರೀ ಸಾರಂಪಳ್ಳಿ ಲಕ್ಷ್ಮೀನಾರಾಯಣ ಅಡಿಗರಿಂದ ಗುಣಸಿ ಪರತೋಧಿಸಲ್ಪಟ್ಟದ್ದು.

ಪ್ರಕಾಶನ: ಮೆಜೆಸ್ಟಿಕ್ ಪ್ರೆಸ್, ಉಡುಪಿ. ಬೆಲೆ: ರೂ. ೨೫.

ಯಥಾನಕಾಶ ವಿನುರ್ಕೆ

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. I. A. 553/1967

O. S. 1/1967

ಚಕ್ಕ ಮಡಿವಾಳ —ಆರ್ಜಿದಾರ

1. ಮುದ್ದ ಪೂಜಾರಿ, ಕಣಜು ಹೆಂಗ್ಸಿನ ಮಗ 2. ಸೋಮಯ್ಯ ಪೂಜಾರಿ, 3. ಪೂವಣಿ ಪೂಜಾರಿ, 4. ನಾಗಮ್ಮ, 5. ನಾರಾಯಣ—ಅಕ್ಕ ಹೆಂಗ್ಸಿನ ಮಕ್ಕಳು

6. ಚಿನ್ನಪ್ಪ ಪೂಜಾರಿ—ಮಂಗಳೂರು ತಾಲ್ಲೂ ಕೊಪ್ಪಲೂರು ಗ್ರಾಮದಲ್ಲಿರುವವರು —ಎದ್ರಿರು

ಸದ್ರಿ ಎದ್ರಿರಾದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ಮೇಲಿನ ದಾವೆಯಲ್ಲಿ ತಾ. 30—8—1967 ರಲ್ಲಾದ ಪ್ರಲಿಮಿನರಿ ಡಿಕ್ರಿಗೆ ಅನುಸರಿಸಿ ಸ್ಥಿರಾಸ್ತಿ ಯೇಲಂ ಬಗ್ಗೆ ಆರ್ಜಿದಾರನ ಗುಣಕ್ಕೆ ಪೈನಲ್ ಡಿಕ್ರಿ ಕೊಡಿಸ ಬೇಕಾಗಿ ಆರ್ಜಿದಾರನು ದಾಕಲು ಮಾಡಿದ ಸದ್ರಿ ಆರ್ಜಿಯು ತಾ. 18—12—67ಕ್ಕೆ ನಮಗೆ ಆಕ್ಷೇರ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಆದಾಪರಚೆ ಕೊಡತಕ್ಕದ್ದು. ತಪ್ಪಿದ್ರೆ ನಿನ್ನ ಗೈರು ಹಾಜ್ರಿಯಲ್ಲಿ ಆರ್ಜಿ ತೀರ್ಮಾನವಾಗುವುದು ಎಂತ ಕೋರ್ಟು ಹ್ಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Petitioner

Karkala, 8—12—67

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಖಂಡಲವಾದ ಮನಸ್ಸನ್ನು ಶುಭ್ರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

ರಿಯಂ ಪ್ರತಿಗಳಿಗೆ ವಿಚಾರಿಸಿರಿ:—

ನವಯುಗ ಪೈಸ್, ಉಡುಪಿ.

ಎಲ್ಲೆಲ್ಲಿ ಏನೇನು?

ಮಹಾ ಮೈಸೂರು ವಿಮಾನುಗಾರರ ಪರಿಷತ್ ಸಮ್ಮೇಳನದ ಉದ್ಘಾಟನೆ

ಇದೇ ತಾ. 5ರಂದು ಮಂಗಳೂರಿನಲ್ಲಿ ಮೈಸೂರೇ ಕುಸಾ ಮೈಸೂರು ವಿಮಾನುಗಾರರ ಪರಿಷತ್ತಿನ ಅಧಿವೇಶನವನ್ನು ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಉದ್ಘಾಟಿಸಿದರು. ಪುರಭವನದಲ್ಲಿ ಸೇರಿದ ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಿಮಾನುಗಾರಿಕೆ ಸಮೂಹಾರ ಸಚಿವ ಶ್ರೀ ದೇವಂಗಾಜ ಅರಸರವರು ವಹಿಸಿದ್ದರು.

ಮುಖ್ಯಮಂತ್ರಿಗಳು ಮಂತ್ರಿಮಂಡಲದ ಅಭಿವೃದ್ಧಿಗೆ ಸರಕಾರದಿಂದ ಸರ್ವ ನೆರವು ನೀಡಲಿರುವುದೆಂಬ ಆಶ್ವಾಸನೆಯಿತ್ತರು. ವಿಮಾನುಗಾರರ ಅಭ್ಯುದಯಕ್ಕೆ ತಾಂತ್ರಿಕ ಪರಮೋಪಾಧಿ ಪ್ರಯೋಜನ ಪಡೆಯಲು ಅವಿರತವಾಗಿ ಯುದಿಯಬೇಕು ಎಂದರು ಇಂದಿನ ವೈಜ್ಞಾನಿಕ ಯುಗದಲ್ಲಿ ಉದ್ಯಮಕ್ಕೆ ಹೊಂದಿಕೊಂಡು ತಮ್ಮನ್ನು ಸಮರ್ಥಗೊಳಿಸಿಕೊಳ್ಳಬೇಕು. ಪುಷ್ಟಿಕರ ಆಹಾರವಸ್ತುಗಳ ಧಾರಾಳ ವಿದೇಶೀ ವಿನಿಮಯವನ್ನು ಕೊಡುವ ಈ ಉದ್ಯಮವು ಸರಕಾರದ ಉತ್ತೇಜನಕ್ಕಾಗಿ ಮತ್ತು ಉಪಯೋಗಕ್ಕಾಗಿ ಬೆಳೆಯಬೇಕು ಎಂದರು. ಶ್ರೀ ದೇವರಾಜ ಅರಸರವರು ರಾಷ್ಟ್ರದಲ್ಲಿಂದು ಆಹಾರದ ಅಭಾವ ಮತ್ತು ಬೆಲೆ ಏರಿಕೆಗಳೇ ಎಲ್ಲೆಲ್ಲೂ ಕೇಳಿಬರುವ ಸೊಲ್ಲು. ಇದಕ್ಕೆ ಯಾವುದೇ ಉದ್ಯಮವಾಗಲಿ ಅನಭಿವೃದ್ಧಿಗೊಂಡಿರುವುದೇ ಮುಖ್ಯ ಕಾರಣ. ಉದ್ಯಮದ ಅನಭಿವೃದ್ಧಿಗೆ ಜನರ ನಿರಾಸಕ್ತಿಯೇ ಮೂಲ. ಹೀಗಾಗಲು ಜನತೆ ಅಧ್ಯಾತ್ಮಿಕ ಬೆಡಗಿಗೆ ಆಕರ್ಷಿತರಾಗಿರುವುದೇ ಕಾರಣ. ಆದ್ದರಿಂದ ಕಠಿಣವಾಗಿ ದುಡಿಯುವ ಶಕ್ತಿಯನ್ನು ಪಡೆದಿಲ್ಲ ಎಂದರು.

ಮಹಾ ಮೈಸೂರು ವಿಮಾನುಗಾರರ ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ಸ್ಥಾನಿಕ ಸಂಚಾಲಕೆಯನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಾ| ನಾಗಪ್ಪಾಳ್ವರು ಬಿಡುಗಡೆಗೊಳಿಸಿದರು. ವಿಮಾನುಗಾರರ ಸಂಘಟನೆಯನ್ನು ಸಾಧಿಸಿ ಮುಖಂಡತ್ವವನ್ನು ಎಳೆಸಿಸಬೇಕು. ವಿಮಾನ ಕಾಂತ್ರಿಕ ಜ್ಞಾನವನ್ನೀಯುವ ಕಾಲೇಜೊಂದನ್ನು ಮಂಗಳೂರಲ್ಲಿ ಸ್ಥಾಪಿಸಬೇಕು. ರಾಷ್ಟ್ರದ ಅಜ್ಞಾನ, ಬಡತನ, ಅನಾರೋಗ್ಯಗಳು ನಿರ್ನಾಮವಾಗಲು ಈ ಉದ್ಯಮಗಳನ್ನು ಎಲ್ಲಿಯಾವ ಉದ್ಯಮದಲ್ಲಿ ಬೆಳೆಸಬೇಕು ಎಂದು ತಿಳುವಳಿಕೆ ಜನತೆಯಲ್ಲಿ ಬರಬೇಕು. ಆ ಎಚ್ಚರಿಕೆ ನವಸಾಜಬಲ್ಲಿ ಹುಟ್ಟಿ ಸಮಾಜದ ಶೋಷಣೆ ಮತ್ತು ಸೈಸರ್ಗಿಕ ದುರುಪಯೋಗವು ಕೊನೆಗೊಳ್ಳುವಂತಾಗಲಿ ಎಂದು ಹೇಳಿದರು.

ವಾರ್ಷಿಕ ಸಭೆಯಲ್ಲಿ ಪ್ರಾರ್ಥನೆಯೊಡನೆ ಬಳಿಕ ಮಹಾಮೈಸೂರು ವಿಮಾನುಗಾರರ ಪರಿಷತ್ತಿನ ಅಧ್ಯಕ್ಷ ಡಾ| ಎಸ್. ಚಂದ್ರಾರವರು ಸಮ್ಮೇಳನದ ಉದ್ಘೋಷನೆಯನ್ನು ವಿಜ್ಞಾಪಿಸಿದರು.

ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಎಸ್. ಕೆ. ಅಮೊನರು ಸ್ವಾಗತ ಭಾಷಣ ಮಾಡಿದರು.

ಶ್ರೀ ವಾಸುದೇವ ಬೋಳೂರುರವರು ಸಮೂಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನು ಓದಿದರು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ಕೆ. ತಿಂಗಳಾಯರು ಧನ್ಯವಾದ ಸಮರ್ಪಿಸಿದರು.

ಕಡೆಕಾರು ಗುರುರಾಯರ ನಿಧನ

ದಕ್ಷಿಣ ಕನ್ನಡಿಗರಾಗಿದ್ದು, ಹುಬ್ಬಳ್ಳಿಯಲ್ಲಿ ಪ್ರಮುಖ ಹೋಟೆಲು ಉದ್ದಿಮೆದಾರರಾಗಿ, ದೇಶಭಕ್ತರಾಗಿ, ಕಾಂಗ್ರೆಸ್ ಕಾರ್ಯಕರ್ತರಾಗಿ ಜನಪ್ರಿಯತೆ ಗಳಿಸಿದ್ದ, ಉಡುಪಿ ಸಮೀಪದ ಕಡೆಕಾರು ಗುರುರಾಯರು ತಾ. 25-11-67ರಂದು ಹೃತ್ಕ್ರಿಯೆ ಸ್ತಂಭ ತಮ್ಮ 70ನೇ ವಯಸ್ಸಿನಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ.

ಓಕುಡೆ ರಾಮಕೃಷ್ಣ ಭಟ್ಟರ ನಿಧನ

ಹುಬ್ಬಳ್ಳಿಯಲ್ಲಿ ಹೋಟೇಲು ಮತ್ತು ಚಾಪುಡಿ ವರ್ತಕರೆಂದಾರಿಗಿ ಸಂಪನ್ನರೂ ವ್ಯವಹಾರ ಚತುರರೂ ಆಗಿದ್ದ ಉಡುಪಿಯ ಓಕುಡೆ ರಾಮಕೃಷ್ಣ ಭಟ್ಟರು ತಾ. 27-11-67 ರಂದು ತಮ್ಮ 66ನೇ ಪ್ರಾಯದಲ್ಲಿ, ಹೃದಯಾಘಾತದಿಂದ ಉಡುಪಿಯ ಕುಂಜಿಬೆಟ್ಟು ಮನೆಯಲ್ಲಿ ನಿಧನಹೊಂದಿದರು.

ಕೈಗಾರಿಕೆ, ಕೃಷಿ ವಸ್ತುಪ್ರದರ್ಶನದ ಉದ್ಘಾಟನೆ

ಇದೇ ತಾ. 8ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ಮೂರನೇ ಅಖಿಲ ಭಾರತ ಕೈಗಾರಿಕೆ ಮತ್ತು ಕೃಷಿ ವಸ್ತು ಪ್ರದರ್ಶನವನ್ನು ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ| ಕೆ. ನಾಗಪ್ಪಾಳ್ವರು ವಹಿಸಿದರು. ರಾಜ್ಯದ ವಾರ್ತಾ ಸಚಿವ ಶ್ರೀ ಡಿ. ದೇವರಾಜ ಅರಸರವರು ಸಮಾರಂಭದ ಮುಖ್ಯ ಅತಿಥಿಯಾಗಿದ್ದರು. ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ನಮ್ಮ ಕೈಗಾರಿಕೆ ಕೃಷಿ ಪ್ರಗತಿಯೇನು ಎಂಬ ತಿಳುವಳಿಕೆಯೊಂದಿಗೆ ಸಂಪತ್ತು ಒಂದೆಡೆ ಕೇಂದ್ರೀಕೃತವಾಗದೆ ಸಂಚಲ್ಪಡಬಹುದೆಂಬ ಜ್ಞಾನವಿಯುವುದು. ರಾಷ್ಟ್ರದ ಬಡತನ ಯಾಗಿ ಶ್ರೀಮಂತ ಬಡವರೊಳಗಿನ ಅಂತರ ತಿಳಿಯುವಂಥ ಮಾರ್ಗದರ್ಶನವನ್ನು ಇಂತಹ ವಸ್ತುಪ್ರದರ್ಶನಗಳು ನೀಡುವುದೆಂದರು.

ಮುಖ್ಯ ಅತಿಥಿಗಳಾದ ಶ್ರೀ ದೇವರಾಜ ಅರಸ್ರವರು ಮಾತನಾಡುತ್ತಾ ಜನ ಬಡವರಾದರೂ ದೇಶವು ಸಂಪದ್ಭರಿತವಾಗಿದೆ. ಆದರೆ ಅವುಗಳು ಸರಿಯಾಗಿ ಉಪಯೋಗವಾಗುತ್ತಿಲ್ಲ. ಕೈಗಾರಿಕೆ ರಾಷ್ಟ್ರೀಯ ಕೃಷಿಪ್ರಗತಿಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸಬಹುದೆಂಬ ವಿವೇಚನೆಯೊಂದಿಗೆ ವಿಮರ್ಶೆ ನಡೆಸಿದೆ ವಿದೇಶಗಳನ್ನು ಅನುಸರಿಸಬಾರದೆಂಬ ಸ್ವತೋಚಿತನೂ ಮನೋಭಿಕಾಸಕ್ಕೆ ಇಂಥ ಪ್ರದರ್ಶನ ಆಕ್ಷತ್ಯವು ದಾರಿಯೆದರು.

ಈ ಪ್ರದರ್ಶನವನ್ನು ದೇಶಭಕ್ತ ದಿ| ಕಾರ್ನಾಡು ಸದಾಶಿವರಾಯರಿಗೊಂದು ಸ್ಮಾರಕ ರಚನೆಗಾಗಿ ಸದಾಶಿವ ರಾವ್ ಸ್ಮಾರಕ ಸಮಿತಿಯು ಈ ಪ್ರದರ್ಶನವನ್ನು ಏರ್ಪಡಿಸಿರುವುದಾಗಿದೆ.

ಡಾ| ಅಳ್ವರು ಮಾತನಾಡುತ್ತಾ ವಸ್ತು ಪ್ರದರ್ಶನದ ಪ್ರಯೋಜನವನ್ನು ವಿವರಿಸಿ ದಿ| ಸದಾಶಿವರಾಯರ ವಿಷಯ ಪ್ರಸ್ತಾಪಿಸುತ್ತಾ, ಅವರ ಒಳ್ಳೆಯ ಹೆಸರೂ ಒಳ್ಳೆಯ ಕಾರ್ಯವೂ ಚಿರಂತನ. ಈ ದೃಷ್ಟಿಯಿಂದ ಸದಾಶಿವ ರಾಯರ ಹೆಸರು ಏರಲಿ ತರ. ಇಂದು ದೇಶವು ಪರಿಸ್ಥಿತಿ ಬದಲಿಸಲು ಅಧಿಕಾರ ದಾಹವೇ ಕಾರಣ. ಕಾರ್ನಾಡ್ ಸದಾಶಿವರಾಯರಂತಹ ತ್ಯಾಗಶೀಲ ಭಾವನೆಯೇ ಅಧಿಕಾರ ದಾಹವನ್ನು ಪರಿಹರಿಸುವ ದಾರಿ. ಹೊಸರಾಷ್ಟ್ರ ನಿರ್ಮಾಣ ಮತ್ತು ಹೊಸ ಸಮಾಜ ರಚನೆಯಲ್ಲಿ ತ್ಯಾಗಶೀಲ ಭಾವನೆಯನ್ನು ಹುಟ್ಟಿಸಲು ವ್ಯಾಪಕವಾಗಿ ಈ ವಸ್ತುಪ್ರದರ್ಶನಗಳು ನಡೆಯುವಂತಾಗಬೇಕೆಂದರು. ಆರಂಭದಲ್ಲಿ ಶ್ರೀ ಕೆ. ಕೆ. ಶೆಟ್ಟರು ಸ್ವಾಗತಿಸಿದರು. ಶ್ರೀ ಎಚ್. ಕೆ. ತಿಂಗಳಾಯರು ವರದಿಯನ್ನೂ ಶ್ರೀ ನಾರಾಯಣ ರಾಯರು ಸಂದೇಶಗಳನ್ನೂ ಓದಿದರು.

ಮನೋಹರ ಕೆಫೆಯ ರಜತೋತ್ಸವ

ಶಿವಮೊಗ್ಗದ ಉತ್ತಮ ಶ್ರೇಣಿಯ ಹೋಟೆಲಾದ ಮನೋಹರ ಕೆಫೆಯು ರಜತೋತ್ಸವವನ್ನು ತಾ. 6ರಂದು ಆಪಾರಮಂತ್ರಿ ಶ್ರೀ ಬಿ. ಡಿ ಜತ್ತಿಯವರಿಂದ ನೆರವೇರಿಸಲ್ಪಟ್ಟಿತು. ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ಶಾಸನ ಸಭಾಸದಸ್ಯ ಶ್ರೀ ಎ. ಆರ್. ಬದರಿನಾರಾಯಣ ಆವರು ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಪ್ರಾರ್ಥನೆಯೊಡನೆ ಬಳಿಕ ಜನಪ್ರಿಯ ಹಾಗೂ ಖಾಪಸು ವ್ಯಾಪಾರಿ ಶ್ರೀ ಪಿ. ಕೆ. ಜನಾರ್ದನ ನೆಲ್ಲಿಯವರು ಸ್ವಾಗತ ಭಾಷಣ ಮಾಡಿದರು. ಅತ್ಯಪಲ್ಲಿ ಶ್ರೀ ಜಿ. ಜಿ. ಕೆ. ನೆಲ್ಲಿಯವರು ಅಭಿಪ್ರಾಯ ವ್ಯಕ್ತಪಡಿಸಿದರು.

ಕುಂದಾಪುರ ಮುನ್ಸೀಫ್ ಕೋರ್ಟ್‌ನಲ್ಲಿ

O. S. 265/1967.

ವಾದಿ—ಮಜ್ಜರಮಣ ಅಜಾಯರ್.

ಪ್ರತಿವಾದಿ - ಬೋಜರಾಜ ಬುಡ್ಕ.

ಕುಂದಾಪುರ ತಾಲ್ಲೂ ಬೀಜಾಡಿ ಗ್ರಾಮದ ಸರ್ವೇ ನಂಬ್ರದ ಮಗ ನಾಗರಾಜ ಬುಡ್ಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯಿಂದ ವಾದಿಗೆ ಬರತಕ್ಕ ಕಳೆದ ಕ್ರೋಧಿ ಸಂವತ್ಸರದ ಅದಿ ಲಂಗ್ಯಾಬಿನ ಮೂಲಗೇಣಿ ಗೇಣಿ ಬರಪೂಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ. 22-12-67ಕ್ಕೆ ತಪ್ಪಿಗೆ ಇರುತ್ತದೆ. ಆ ಕುರಿತು ಏನಾದರೂ ಅಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿಯದೆ.

(Sd.) N. S. Parameshwariah,
Advocate for Plaintiff.

Date 7—12—67. Coondapoor.

ಕುಂದಾಪುರ ಮುನ್ಸೀಫ್ ಕೋರ್ಟ್‌ನಲ್ಲಿ

O. S. 350/1967.

ಕೆ. ವೀರಪ್ಪ ಪೆಟ್ಟ —ವಾದಿ.

ಪುಟ್ಟಮ್ಮ ಸೆಟ್ತಿ ಕೂಡಾ—ಪ್ರತಿವಾದಿರು.

ಕುಂದಾಪುರ ತಾಲೂಕು ವಕ್ವಾಡಿ ಗ್ರಾಮದಲ್ಲಿರುವ ಪುಟ್ಟಮ್ಮ ಸೆಟ್ತಿರ ರಾಮ್ಯಳು ಅನಂದ ಸೆಟ್ಟಿ 1, ಕಮಲ ಸೆಟ್ತಿ 1, ಜಯಂಯ್ಯ ಜೆಗ್ಡೆ 1, ರಾಜೀವ ಸೆಟ್ಟಿ 1, ರವೀಂದ್ರ ಒಗ್ಡಾ 1, ಸುಲೋಚಿ ಸೆಟ್ತಿ 1, ಶಾಂತಾ ಸೆಟ್ತಿ 1, ವೆಂಕಪ್ಪ ಹೆಗ್ಡೆ 1, ಕೂಡಾ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿ ಪ್ರತಿವಾದಿರ ಕಾಮ್ಯಂಬದಲ್ಲಿ ತಾ 1-1-68ರಲ್ಲಾ ರೂ. 5ನೆ ಅಡ ವಿಭಾಗ ಸತ್ರ ಶರತ್ಪ್ರಕಾರ ತಾರೀಕು 22-3-66ರ ನೊಡಪ್ಪಿಂದು ತಾರೀಕು 22-3-66ರ ವರೆಗಿನ ಹಿಗ್ಗು ಅಕ್ಕೆ ಬರಪೂಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಕ್ಲು ಮಾಡಿದ ಮೇಲಿನ ದಾವೆಯು ತಾ. 19-12-67ಕ್ಕೆ ತಪ್ಪಿಗೆ ಇರುತ್ತದೆ. ಆ ಕುರಿತು ಏನಾದರೂ ಅಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿಯದೆ.

(Sd.) N. S. Parameshwariah
Advocate for Plaintiff.

Coondapoor, Date 7-12-67.

Announcement

"NAVAYUGA" established in 1921 by a nationalist leader of South India, Sri A. B Shetty proposes a sumptuous REPUBLIC DAY ISSUE on January 26, 1968 containing essays, skits and short stories by well-known authors of Karnataka.

Ever since it was founded amidst the din and bustle of our freedom struggle, "NAVAYUGA" has been serving the nation by disseminating news and views without fear or favour. Rightly has it carved for itself a unique position in the field of Kannada journalism.

In Independent India, journals like "NAVAYUGA" perform a significant part in spreading the message of economic and industrial development among the people of the country. If democracy is to survive in India, it is necessary that a bridge of sympathy and understanding must be erected between the leaders on the one hand and the public on the other.

Successful salesmanship likewise depends on your goods and services being understood and then value appreciated by the consumer. The Republic Day Special of the "NAVAYUGA" is a fitting instrument to publicize your products in the wide countryside of Mysore State.

Please permit us to serve you.

ADVERTISEMENT RATES:

Full Page	... Rs. 200/-	Back Cover Page	...Rs. 500/-
Half Page	... Rs 100/-	Inside 1st Cover Page	...Rs. 400/-
Quarter Page	... Rs. 60/-	Inside 2nd Cover Page	...Rs. 300/-

MECHANICAL DATA·

Paper Size ... 15" × 10" (37·5 Cm. × 25 Cm.)
Size of type page ... 13" × 8" (32·5 Cm. × 20 Cm.)

Date of Publication: 25—1—1968

Kindly send the advertisement matter to reach us on or before 10—1—1968.

Advt. Manager.

Navayuga, Udipi.

ಕುಂದಾಪುರ ಮುನ್ಸೀಫ್ ಕೋರ್ಟ್‌ನಲ್ಲಿ

O. S. 265/1967
R.E.P. 574/68

ಅರ್ಜಿದಾರರು—ಸಣ್ಣ ಸ್ಯಾಮಿ ಅಡಿಗ
ನೇತ್ರಾವತಿ ಅಮ್ಮ

ಎದ್ರಿರು—ರಾಮಭಟ್ಟ ಕೂಡಾ.

ಉಡುಪಿ ತಾಲ್ಲೂ ಕಳ್ಕಂಜೆ ಗ್ರಾಮದಲ್ಲಿರುವ ಶಿವರಾಮ ಭಟ್ಟರ ಮಗ ರಾಮಭಟ್ಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ವ್ಯವಹರಣೆಯಲ್ಲಿ ಅರ್ಜದಾರರಿಗೆ ವಿರುದ್ಧ ಬರತಕ್ಕ ಆದಾನಾರ್ಥ ಬರಪೂಡಿಕೊಳ್ಳುವರೆ ಅರ್ಜಿದಾರರು ಎದ್ರಿರ ಮೇಲೆ ದಾಖ್ಲು ಮಾಡಿದ ಮೇಲಿನ ಅಮಲ್ದಾರಿಯಲ್ಲಿ ಅರ್ಜಿದಾರರು ದಾಖ್ಲು ಮಾಡಿದ ಯೇಲಾ ಇಸ್ತಿಹಾರಿನ ಪರತುಗಳನ್ನು ನಿರ್ಣಯಿಸುವ ಬಗ್ಗೆ ತಾ. 28-12-67ಕ್ಕೆ ತಪ್ಪಿಗೆ ಇರುತ್ತದೆ. ಆ ಕುರಿತು ಏನಾದರೂ ಅಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿಯದೆ.

(Sd.) N.S. Parameshwariah
Advocate for Petr.

Date 7-12-67, Coondapur.

ಇತಿಹಾಸ ಸೃಷ್ಟಿ

ಆಗ್ರಾ ಕೋಟೆಯ ಕೈದಿ

ಬರೆದವರು: ಶ್ರೀ ಮ. ಗೋ. ರಾವ್.

ಆಗ್ರಾದ ಕೋಟೆಯಲ್ಲಿ ಔರಂಗಜೇಬ ತನ್ನ ತಂದೆಯನ್ನು ಬಂದೀಖಾನೆಯಲ್ಲಿ ಡಾಕಿ ರಾಜ್ಯಭಾರದ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡಿದ್ದ. ಸೆರೆಮನೆಯಲ್ಲಿ ಕುಳಿತ ಷಹಜಹಾನನು ತನ್ನ ಈ ದುಸ್ಥಿತಿಯನ್ನು ಯೋಚಿಸುತ್ತ ಚಿಂತಾಮಗ್ನನಾಗಿದ್ದ, ಆತನ ಕಣ್ಣುಗಳಲ್ಲಿ ದುಃಖಾಶ್ರು ತುಂಬಿತ್ತು. ಬಟ್ಟೆ ಅಸ್ತವ್ಯಸ್ತವಾಗಿತ್ತು.

ಬಂದೀಖಾನೆಯ ಎದುರು ಭಾಗದಲ್ಲಿದ್ದ ಕೋಟೆಯ ಗೋಡೆಯ ಕೆಲಸವು ಹಲವಾರು ಕೂಲಿಕಾರರಿಂದ ಭರದಲ್ಲಿ ನಡೆಯುತ್ತಿತ್ತು. ಷಹಜಹಾನ ತನ್ನ ಪುತ್ರಿ ಜಹನಾರಳನ್ನು ಬಳಿ ಕರೆದು ಹೇಳಿದ. "ಬೇಟೀ ಅಲ್ಲಿ ಮಜದೂರರು ಏನು ಮಾಡುತ್ತಿದ್ದಾರೆ?"

ಜಹನಾರ ಸಂಕೋಚದಿಂದ ಸುಮ್ಮನಿರುವಳು.

ಷಹಜಹಾನ ಪುನಃ ಪುನಃ ಅದೇ ಪ್ರಶ್ನೆ ಕೇಳಲು ಜಹನಾರ ಹೇಳಿದಳು. 'ಕೋಟೆಯ ಗೋಡೆಯನ್ನು ಇನ್ನೂ ಎತ್ತರಕ್ಕೆ ಏರಿಸುತ್ತಿದ್ದಾರೆ.'

ಷಹಜಹಾನ ಇದನ್ನು ಕೇಳಿ ದುಃಖಿತನಾದನು.

ಜಹನಾರ ತಾತನ ಮುಖಭಾವ ಕಂಡು ವಿಷಯ ಬದಲಿಸುವ ನೆಪದಲ್ಲಿ ಹೇಳಿದಳು 'ಪಿತಾಜೀ! ಓ ಆ ಕಡೆಯಿಂದ ಡಾಡೊಂದು ಕೇಳಿ ಬರುತ್ತಿದೆ. ಇಂಪಾದ ಗಾನ, ಅದನ್ನು ಕೇಳಿರಿ.'

ಆಗ ಷಹಜಹಾನ ಉದ್ವೇಗದಿಂದ— 'ಬೇಟೀ' ಹಾಡು ಅನಂತರ ಕೇಳುವ. ಮೊದಲು ನನಗೆ ಕೋಟೆಯನ್ನೇಕೆ ಇನ್ನೂ ಬಲಿಷ್ಠವಾಗಿ ಮೇಲೇರಿಸಿ ನಿರ್ಮಿಸುತ್ತಿದ್ದಾರೆ ಎಂಬುದನ್ನು ಹೇಳು'

ಜಹನಾರ ಮುಖ ತಿರುಗಿಸಿ ಸುಮ್ಮನಾಗುವಳು.

ಷಹಜಹಾನ ಉತ್ತರ ಕೇಳುವ ಆತುರದಿಂದ 'ದಾರಾನ ಸೈನ್ಯ ಆಗ್ರಾಕ್ಕೆ ದಂಡೆತ್ತಿ ಬಂದಿದೆಯೇ? ಹೇಳು, ಬೇಗ ಹೇಳು ಬೇಟಿ' ಎಂದನು.

ಆಗ ಜಹನಾರ—'ತಪ್ಪು ತಿಳುವಳಿಕೆ ತಪ್ಪಾಗಿದೆ ಪಿತಾಜಿ! ಸಿಂಧದ ರೇಗಿಸ್ತಾನ .....'

ಪಿಪಾಯಿಯೊಬ್ಬನ ಕಾಲಸಪ್ಪಳ ಕೇಳಿ ಮಾತು ಅರ್ಧದಲ್ಲೇ ನಿಲ್ಲಿಸಿದಳು ಜಹನಾರ.

ಆಗ ಷಹಜಹಾನ ಮತ್ತಷ್ಟು ಆತುರದಿಂದ "ದಾರಾಗಾದರೆ ಏನಾಗಿದೆ? ಫಿನಗೆ ಖಂಡಿತ ತಿಳಿದಿದೆ. ನನ್ನೊಡನೆ ಏಕೆ ಮುಚ್ಚುಮರೆ ಜಹನಾರ? ಬೇಗನೆ ಹೇಳಿ ಬಿಡು. ಬೇಗನೆ...." ಎಂದ.

ಆಗ ಜಹನಾರ ಶೋಕಭಯಂಕ್ಕ ಮುಖ ಭಾವದಿಂದ ಹೇಳಿದಳು—

"ತಾತ, ಷಹೋದರನಿಗೆ ನಾವೀ ಕೋಟೆಯನ್ನು ದಾಟಿ ಬಂಧನದಿಂದ ಪಾರಾಗುವೆವು ಎಂಬ ಅಪನಂಬಿಕೆ ಉಂಟಾಗಿರಬೇಕು. ಏಮ್ಮ ಮೇಲಿನ ಸಂಶಯದಿಂದ ಹೀಗೆ ಮಾಡಿರಬಹುದು."

'ಏನು? ನನ್ನ ಮಗ ನನ್ನನ್ನು ಜೋರನೆಂದು ತಿಳಿದೀತೆಂದು ಮಾಡಿದನೆ! ಆಯ್ಯೋ ಭೇಟೀ, ನಮ್ಮ ದುರವಸ್ಥೆಯೇ? ಒಂದು ಕಾಲದಲ್ಲಿ ಬಾದಷಹನೆಂದು ಮೆರೆದಾಡಿದ ನಾವಿಂದು...'

ಕಂಠ ಗದ್ಗದವಾಗಿ ಸ್ವರವು ಕೆಮ್ಮಿನೊಡನೆ ವಿಲೀನವಾಯಿತು. ಹುಕ್ಕಾದ ನಳ್ಳಿಯನ್ನು ಬಲವಂತವಾಗಿ ಸನಿಹಕ್ಕೆಳೆದು ಕೊಂಡು ಧೂಮ್ರಪಾನ ಮಾಡತೊಡಗಿದ ಷಹಜಹಾನ.

ಅಪ್ಪರಲ್ಲಿ ಹೊರಗಿಂದ ಖಾದಷಹರೇ ಅನ್ನ.... ಅಸ್ಸ... ಅಯ್ಯೋ!... ಅನ್ನಾ.... ಹಸಿವೇ.... ಹಸಿವೆಯಿಂದ ಸಾಯುತ್ತಿದ್ದೇನೆ' ಎಂಬ ಕರ್ಣಕಠೋರವಾದ ಆರ್ತನಾದ ಕೇಳಿಬಂದಿತು.

ಆಗ ಷಹಜಹಾನ—"ಜಹನಾರ, ಏನು? ನಮ್ಮಲ್ಲಿ ಈಗ ಬರಗಾಲ ಬಂದಿದೆಯೇ?" ಎನ್ನುವನು.

ಜಹನಾರ ಕುಳಿತಲ್ಲಿಂದ ಎದ್ದು 'ಜೇ ....ಪಿತಾಜೀ.... ಎರಡು ವರ್ಷಗಳಿಂದ ಲೂ ಬರಗಾಲವೆಂಬುದಿಲ್ಲ. ಆದರೂ ಜನರ ಜನರ ಸಂಕಷ್ಟಗಳು, ಉಪವಾಸದ ಕಷ್ಟವನ್ನು ಆ 'ಖುದಾ'ನೇ ತಿಳಿದಿದ್ದಾನೆ.

'ಈಗ ಅಲ್ಲಿ ರೋದಿಸುತ್ತಿರುವವರು ಯಾವ ಕಡೆಯವರು?' ಷಹಜಹಾನ ಉದ್ವೇಗದಿಂದ ಉಸುರಿದ.

"ಪಿತಾಜಿ, ಪ್ರಾಯಶಃ ಮೂರನಾಡದ ಕಡೆಯ ಜನರಾಗಿರಬೇಕು" ಜಹನಾರ ಸ್ವರವಳಿಸಿ ಹೇಳಿದಳು.

ಒಡಲೆಯೇ ಹೊರ ಹೆಬ್ಬಾಗಿಲಿನ ಕಡೆಯಿಂದ "ನಾವು ಫಿರಾಶ್ರಿತರು. ನಮಗೆ ಆಶ್ರಯಕೊಡಿ ಆಯ್ಯಾ, ಅನ್ನ ಕೊಡಿ' ಎಂಬ ರೋದನ ಕೇಳಿ ಬಂತು.

"ನಿರಾಶ್ರಿತರು ಜಂಗಲಾಜುವಾಗ ಆಶ್ರಯ ಕೊಡಲಾರದಂತಹ ನಿರ್ಧಾರ್ಯನು ನಾನು. ಹೇ! ಖುದಾ!...ನಿನ್ನಾಟವೇ?"

"ಪಿತಾಜೀ! ಎಲ್ಲ ಕಟ್ಟಡಗಳಿಗೆ ಕೆಲಸಗಳೂ ಸ್ಥಗಿತಗೊಂಡಿವೆ" ಜಹನಾರ ಹೆಬ್ಬಾಗಿಲ ಕಡೆಗೆ ನೋಟವಿಟ್ಟು ಹೇಳಿದಳು.

ಷಹಜಹಾನ ದಿಂಬಿನ ಮೇಲೆ ಸರಿಹೊಂದಿಸಿಕೊಂಡು ನಿಡಿದಾದ ಉಸಿರೆಳೆದು ಹೇಳಿದ. ಆತನು ಮೊತಿಗೆ ಪ್ರಾರಂಭಿಸಬೇಕೆಂದಿರುವಾಗ ಆತನ ಮುಖದ ಭಂಗಿ ಅನಾವೃತವೋ ಹೊಸದೊಂದು ಭಾವನೆಯು ತನ್ನ ಮನದಾಳದಲ್ಲಿ ಹೊರಹೊಮ್ಮುವಂತೆ ಭಾಸವಾಗುತ್ತಿತ್ತು.

"ದುರ್ಭಿಕ್ಷವೆ ಪ್ರಾಪ್ತವಾಗಿದೆ. ಬಹುಶಃ ಇದಕ್ಕಾಗಿ ಇದರ ಪರಿಹಾರಕ್ಕೋಸ್ಕರವಾಗಿ ಕೋಟೆಯ ಗೋಡೆಯನ್ನು ಏರಿಸುತ್ತಿರಲೂ ಬಹುದು. ನಾವು ಯಾವಾಗಲೂ ಹಿಂದೆ ಈ ರೀತಿ ಮಾಡುತ್ತಿದ್ದೆವು. ಯಾವಾಗ 'ಖುದಾ' ನಮ್ಮ ಮೇಲೆ ಕಟ್ಟಾಗುವನೋ ಮತ್ತು ಕಾದಂಬನಿಯು ಮಳೆಗರೆಯುವುದಿಲ್ಲವೋ ಆಗ ಕೂಲಿಗಾರರಿಗೆ, ಮಜದೂರರಿಗೆ ಜೀವನ ನಿರ್ವಹಣೆದ ದಾರಿಯೊಡಗಿ ಹೊಸ ಹೊಸ ಸೌಧಗಳನ್ನು, ಉದ್ಯಾನವನಗಳನ್ನು ನಿರ್ಮಿಸಿ ಅವರಿಗೆ ಸಂಪಾದನೆಯ ಮಾರ್ಗವನ್ನು ಜೀವನ ಪಥವನ್ನು ಸುಗಮ ಮಾಡಿಕೊಡುತ್ತಿದ್ದೆ. ಕಟ್ಟಡಕ್ಕೆ ಕಟ್ಟಡವಾಯಿತು, ಮಜೂರರಿಗೆ ಕೆಲಸ ಕೊಟ್ಟಂತಾಯಿತು."

ಜಹನಾರ ಏನನ್ನೂ ಹೇಳದೆ ಮುಗುಳು ನಕ್ಕಳು ಮತ್ತು ತಾತನನ್ನು ನೋಡಿದಳು, ಆ ಮುಗುಳು ನಗುವಿನ ಒಸ್ಸೆಲೆಯಲ್ಲಿ ಷಹಜಹಾನನ ಒಕ್ಕಾಜಿಗೆ ಯಾವ ವಿಚಾರವೂ ಕೂಲಂಕಷವಾಗಿ ತಿಳಿದಿಂಬಿಲ್ಲ ಎಂಬಂತಿತ್ತು.

ಆಗ ಷಹಜಹಾನ, "ಹೇಳು ಬೇಟೀ.... ನಮ್ಮ ಗ್ರಹಿಕ ಸರಿಯಲ್ಲವೇ?" ಎಂದನು.

ಜಹನಾರ "ಒಂದು ವೇಳೆ ಸರಿಯಾದರೆ ಕೊಡುವುದೆಂದಾದರೆ ಕೋಟೆಯ ಗೋಡೆಯನ್ನೇಕೆ ಏರಿಸಬೇಕು? ಹೊಸ ಕಟ್ಟಡ ಕಟ್ಟಿಸಬಹುದು. ಹೊಸ ಕೋಟೆ ಕಟ್ಟಿಸಬಹುದು."

ಷಹಜಹಾನನು ಎದುರಿಗಿರುವ ತಾಜ ಮದಾಲಿನ ಕಡೆಗೊಮ್ಮೆ [illegible] ನೋಡಿ ಹೇಳತೊಡಗಿದ—

"ನಿನ ಸುಕ್ರೀ...ನಿಜ ಬೇಟಿ. ಹಿಂದುಸ್ಥಾನದಲ್ಲಿ ನಿರ್ಮಿಸಲ್ಪಟ್ಟಿದ್ದಲ್ಲಿ ಷಹಜಹಾನನ ಕಾಲದಲ್ಲಿ ನಿರ್ಮಿತವಾಗಿದೆ. ಈಗ ಈ ಜನರು ದುರಸ್ತಿ ಮಾತ್ರ ಮಾಡುತ್ತಿರುವರಷ್ಟೆ. ಇರಲಿ. ದಿಲ್ಲಿಯ ಕೋಟೆ ಕಾಯುವಿಕೆಯ ಏನಾದರೂ ವದಂತಿ ಬಂದಿ

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ
ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50
ರಟ್ಟಿನ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಚೆಂಗುಲಾಬಿ

(ಎರಡನೇ ಪುಟದಿಂದ)

ಯರು ನೋಡಿ ತಪ್ಪು ತಿಳಿದುಕೊಂಡು ಎಂದರು:—

"ಯೂರೇ ಇವ ಮ್ಯಾರೇಜ್ ಗೀರೇಜ್ ಇದ್ದೆ ಇನ್ ವೈಟ್ ಮೂಡೇ"

'ಎಲ್ಲಾದ್ರೂ ಅವನ ಜೊತೆ ಕಾಲು ಕೆತ್ತಿಯೂ, ಜೋಕ್!"

"ಛಾನ್ಸ್! ಜೆನ್ನಾಗಿ ಗಿಟ್ಟಿಸಿ ಬಿಡೇ!"

"ಮೊದಲೇ ಫಾದರ್ ಬಳಿ ಹೋದರೆ ಎಲ್ಲಿ ಓಡ್ತಾಳೆ?!"

ಹೀಗೆ ಒಬ್ಬೊಬ್ಬರು ಒಂದೊಂದು ತರಹ ಕುಹಕ ನುಡಿದರು. ಮೊದಲೇ ರೋಗಿದ್ದ ಪುಟ್ಟಮ್ಮ ಈ ವ್ಯಂಗ್ಯ ಬಾಣಗಳನ್ನು ಸಹಿಸಲಾರದಾದಳು. ಗೆಳತಿಯರು ಹಾಕಿದ ಬೆದರಿಕೆಯಿಂದ ಆಕೆ ಭಯ ಕಂಪಿತಳಾದಳು. ತಾನು ನಿಂತ ನೆಲ ಕಿತ್ತು ಸರಿದಂತಾಯಿತು. ತಲೆ ತಿರುಗಿ ಬಂತು. ಬೆವರು ಹಂಯ್ ತೊಡಗಿತು. ಮಾಬು ಮತ್ತು ಅನೇಗಡಿಂದ ಮನೆ ಗೋಡಿದಳು. ಅವೇಶದಿಂದ ಸ್ವಲ್ಪ ಬಣ್ಣ ಹಚ್ಚಿಯೇ ಚಾಚಿಯಲ್ಲಿ ಹೇಳಿದಳು. ಇದರಿಂದ ಆಕೆಯ ಸೃದಯಕ್ಕೆಂತ ಗಳತಿಯರ ಅಭಿಪ್ರಾಯವೇ ಜಿಜ್ಞಾಸಿತ್ತು. ಈ ಉದ್ವೇಗದ ಬರುಗಾಳಿಯಲ್ಲಿ ಭಾತೃ ಸ್ನೇಹ ಒಡೆದು ಹೋಯಿತು. ಚಾಚಿಗೆ ಸಿಡಿಲೆರಗಿದಂತಾಯಿತು. ಕಡ್ಡಿಯನ್ನು ಪರ್ವತವನ್ನಾಗಿ ಮಾಡಿದಳು. ಸಂಶಯಾಗ್ನಿಗೆ ಇದೀಗ ತುಪ್ಪ ಎರೆದಂತಾಯಿತು. ಬೆಂಕಿ ಭುಗಿಲ್ ಎಂದು ಕಿಡಿಕಾರ ತೊಡಗಿತು. ಸ್ನೇಹ, ಗೆಳೆತನ, ಮಮತೆಗಳ ಆ ಜೆಂಗುಲಾಬಿಚಿನಫಿಜ್ಜೆತೆಯ ಕೆಂಗುಗಾಳಿ ಹಾಗೂ ಸಂಶಯದ ಬಿಸಿಗಾಳಿಯಿಂದ ನೆಲಕ್ಕುರುಳಿ ಬಾಡಿತು. ಸ್ನೇಹದ ಚೆಂದುಲಾಬಿ ಮತ್ತೆ ಅರಳಲೇ ಇಲ್ಲ!

NAVAYUGA 14—12—1967
Registered with the Registrar
of News Papers for India
under No, K. N. 3546/'67

REGD: No. B. G. 176
LICENCE No. 31
Licensed to Post without Prepayment

ದೆಯೋ? ಅಲ್ಲಿಯೂ ಗೋಜೆಯನ್ನು ಏರಿಸುತ್ತಿರುವರೇ?"

ಧಿಲಿಯಿಂದ ಯಾವ ವರ್ತಮಾನವೂ ಬಂದಿಲ್ಲ. ರೋಶನಾರಳು ಧಿಲ್ಲಿ ತಲಪಿರುವಳೆಂದು ಕೇಳಿ ತಿಳಿದೆ. ಸಾಮ್ರಾಜ್ಯ ವಶವಾಗಿ ಬಾದಷಹ ಗದ್ದುಗೆ ತನಗೆಯೇ ದಕ್ಕಿದರೆ ನಾನು ನಿನಗೆ ಎಂದವಾದ ಮಹಲು ನಿರ್ಮಿಸಿ ಕೊಡುವೆನೆಂದು ಸಹೋದರನು ವಜನೆವಿಕ್ತಿದ್ದಾನಂತೆ.

ಆದ ಷಹಜಹಾನ್'ಯಾರಿಗೆ ತಂದೆಯ ಮೇಲೆಯೇ ವಿಶ್ವಾಸವಿಲ್ಲವೋ ಅಂತಹವರಿಗೆ ತಂಗಿಯ ಮೇಲೆ ಯಾವ ತರಹದ ವಿಶ್ವಾಸವಿದ್ದೀತು? ದೇವರ ಹೆಸರಿನಲ್ಲಿ ಅವನು ಜಗಳ ಮಾಡುತ್ತಾನೆ, ಆದರೆ ಏನನ್ನೂ ಮಾಡಲಾರನು. ಧಿಲ್ಲಿ ಬಿಜಾಪುರವಲ್ಲ, ಆದು ಷಹಜಹಾನನದ್ದು. ಎಂದಿನ ತನಕ ಧಿಲ್ಲಿಯಲ್ಲಿ ಕೆಂಪು ಕೋಟೆ ಇದೆಯೋ ಅಂದಿನ ವರೆಗೆ ಷಹಜಹಾನನ ಸಂತತಿಯವರಿಗೆ ಮತ್ತಾವ ಮಹಲುಗಳನ್ನು ಮಾಡಿಸಲು ಹೆಕ್ಕಿಲ್ಲ. ಮಹಲು ನಿರ್ಮಿಸಬಾರದೆಂದು ಹೇಳಿ ಕಳುಹು." ಆತನು ಕೆಂಡ ಕಾರುವಂತಹ ಕಣ್ಣುಗಳಿಂದ ಹೆಜ್ಜಾಜಿಲನ್ನು ನೋಡಿತ್ತ ಗಮಿಸಿದ.

ಜಹನಾರ ಸೆರಗಿನಿಂದ ಮುಖ ಒರಸಿಕೊಳ್ಳುತ್ತ ಮತ್ತೆ ಹೇಳತೊಡಗಿದಳು, "ದಾರನ ಕುರಿತು ಹೇಳುವುದಾದರೆ ಅವನೊಬ್ಬ ಸ್ವಾರ್ಥಾಂಧ್ಯ ಬಾದಷಹ ಪಿತಾಜೀ. ಅವನಂತೆ ಮತ್ತಾರೂ ಇರಲಾರರು. ಒಂದು ವೇಳೆ ಅವನು ಗದ್ದುಗ ಏರುತ್ತಿದ್ದರೆ ಕಾಬೂಲಿನಿಂದ ಬಂಗಾಲ ಸುಭೆಯ ತನಕ ಮತ್ತು ಧಿಲ್ಲಿಯಿಂದ ಗೋಲ್ಕೊಂಡದವರೆಗೆ ಶಾಂತವಾತಾವರಣವಿರುತ್ತಿತ್ತು. ಜನರು ಈ ರೀತಿ ಹಸಿವೆಯಿಂದ ನರಳುತ್ತಿರಲಿಲ್ಲ. ಮೋಸ ಅವನಿಂದ ಬಹುದೂರ ಓಡಿ ಹೋಗಿತ್ತು. ಸದ್ಭಾವನೆಗಳಿಗೆ ಆಶ್ರಿತವಾದ ಅತನನ್ನು ದೇವರೆಲ್ಲಿದ್ದರೂ ರಕ್ಷಿಸಲಿ."

ಷಹಜಹಾನ ಹುಕ್ಕದ ನಳ್ಳಿಯನ್ನು ಬರಸೆಳೆದು ಕೊಂಡು 'ದಾರಾನು ನಿಂದಾಸನವೇರುತ್ತಿದ್ದರೆ ನನ್ನ ಮನಸ್ಸಿಗೆ ಶಾಂತಿ ಸಿಗುತ್ತಿತ್ತು. ಜಹನಾರ, ಆದರೀಗ ಏನೂ ಅಂತರ ಪ್ರಳಯ ಸಂಭವನೀಯವಾಗಿದೆ....ಪ್ರಳಯ....ಪ್ರಳಯ...'

ಆವೇಶದಿಂದ ನಳ್ಳಿಯನ್ನು ದೂರಕ್ಕೆ ಸೆದನು.

ತಂದೆಯ ಮನೋ ಉದ್ವೇಗವನ್ನು ಮಸ್ಸಗಂಡ ಜಹನಾರ ಹೊರಗೋಡಿ "ಪೀಕ್ಷಿಸಿ—"ಸಮಯ ತುಂಬಾ ಆಗಿದೆ. ಆಹಾರ ಸ್ವಲ್ಪ ಸ್ವೀಕರಿಸಿರಿ- ಪಿತಾಜೀ." ಎಂದಳು.

'ಷಹಜಹಾನ ಆಕಯ ಮಾತನ್ನು ಕೇಳಿಯೂ ಕೇಳಿದವನಂತಿದ್ದ.

ಜಹನಾರ ಉತ್ತರನನ್ನು ಕಾಯದೆ ದಾಸಿಯನ್ನು ಕರೆದಳು.

"ಫಸೀಮ್....ನಸೀಮ್..."

ಫಸೀಮ್ ಬಂದು ನಮಸ್ಕರಿಸಿ "ಏನ ಪ್ಪಣೆ" ಎಂದಳು.

"ತಂದೆಗೆ ಊಟ ಬೇಗ ತಾ" ಜಹನಾರ ಆಂದಳು.

ತುಸು ಹೊತ್ತಿನಲ್ಲಿನಸೀಮ್ ಊಟದ ತಟ್ಟೆಯನ್ನು ತಂದಳು. ಅದರಲ್ಲಿ ಪತಾಬು ಮತ್ತು ಬ್ರಾಕ್ಷಾರಸದ ಪಾತ್ರೆಗಳು ಬರಿದಾಗಿದ್ದುವು.

"ಇದೇನು? ಊಟದ ಜೊತೆಗೆ ಶರಾಬು ತರಲಿಲ್ಲವೇ?

ಷಹಜಹಾನ್ ಬಟ್ಟಲ ಕಡೆಗೆ ದೃಷ್ಟಿ ಹರಿಯಿಸಿ ಕೇಳಿದ.

"ಊ ಹೂಂ"

'ಅದೇನು? ಬೇಗ ಒದರು.'

'ಪರಾಬು ಕಳುಹಿಸಬಾರದೆಂದು ಬಾದಷಹರ ಆಪ್ಪಣೆಯಾಗಿದೆ'.

"ಹಾಗಾದರೆ ನಾನಿಂದು ಊಟವನ್ನು ತ್ಯಾಗ ಮಾಡುವೆ."

ಹುಳ್ಳ ಸೇದುತ್ತ ತಾಡಮಹಾಲಿನ ಕಡೆಗೆ ಕಣ್ಣಿನ್ನೀಡಿಸಿ ಹೇಳಿದ ಷಹಜಹಾನ್.

ಜಹನಾರ ಪರಿಪರಿಯಿಂದ ತಾತನನ್ನು ಸಂತೈಸಲು ಯತ್ನಿಸಿ ವಿಫಲಳಾದಳು. ಆತನ ಉದ್ವೇಗಾಗ್ನಿ ಅವನ ಎದೆಯೊಳಗೆ ಉರಿಯುತಿತ್ತು. ಆತನ ಮೆದುಳನ್ನು ಕೊರೆಯುತಿತ್ತು. ಪ್ರಶಾಂತನಾಗಿ ಬೀಸಿ ಬರುತ್ತಿದ್ದ ಗಾಳಿಗೆ ಆತನ ತಲೆ ಕೂದಲು ಆಡಕೆಸುವಂತೆ ಕುಣಿಯುತಿತ್ತು. ವಿಕ್ತಾಣವು ಎಂದೋ ಆತನಲ್ಲಿ ಆಶ್ರಯ ಪಡೆದಿತ್ತು.

ಆಗ ಪುನಃ "ಅಮ್ಮಾ...ಒಡೆಯ.....ಸಾಯುತ್ತಿರುವೆವು...."ಎಂಬ ಕರ್ಣ ಕಠೋರ ಧ್ವನಿ ಕೇಳಿತು. ಸಿಪಾಯಿಗಳು ನಿರ್ದಯದಿಂದ ಲಾಥಿ ಪ್ರಹಾರ ಮಾಡುತ್ತ ನುಗ್ಗಿರಲು ಆದೇಶವೀಯುತ್ತಿದ್ದರು.

ಷಹಜಹಾನನ ಮನ ಕರಗಿತು. ಜಹನಾರಳನ್ನು ಕರೆದು 'ಅವರಿಗೆ ಸ್ವಲ್ಪ ರೊಕ್ಕ ಕೊಟ್ಟು ಬಿಡು' ಎಂದನು.

ಜಹನಾರ ಸಂಕೋಚಪಟ್ಟುವಳಂತೆ ಅತ್ತಿತ್ತ ನಡೆದು ಷಹಜಹಾನನನ್ನೊಮ್ಮೆ ನೋಡಿ 'ಎಲ್ಲಿಂದ ಕೊಡಲಿ' ಎಂದು ಕಂಪಿತ ಸ್ವರದಲ್ಲಿ ಹೇಳಿದಳು. ಆಗ ಷಹಜಹಾನ ಅಶ್ರುಪೂರಿತ ಕಣ್ಣುಗಳಿಂದ ತಾಡಮಹಾಲನ್ನೇ ಕಡೇಕ ದೃಷ್ಟಿಯಿಂದ ನೋಡುತ್ತ—ಒಂದು ಕಾಲದಲ್ಲಿ ಬಡಬಗ್ಗರಿಗೆ, ನಿರಾಶ್ರಿತರಿಗೆ ಕೈತುಂಬ ಸಹಾಯ ಮಾಡಿದ ನಾನು ಇಂದು ಇಲ್ಲ" ಎನ್ನುವ ಪರಿಸ್ಥಿತಿಗೆ "ಬಂದನೇ? ಅಕಟಕಟಾ! ಹೇ ಖುದಾ! ನಿನ್ನ ಆಟವೇ! ಹೇ ಖುದಾ!! ಎನ್ನುತ್ತ ಆವೇಶದಿಂದ ದಿಂಬಿಗೊರಗಿ ಕೊಂಡ.

ನನ್ನ ಸ್ವಪ್ನ
(ಗಾಂಧಿ)

- ಕೋಟ್ಯಾಂತರ ಅಜ್ಞಾ ಜನರಿಂದ ತುಂಬಿದ ಕಂಗಾಲ ಭಾರತವು ನನ್ನ ಕಲ್ಪನಾ ಚಿತ್ರವಲ್ಲ. ತನ್ನ ಪ್ರಕೃತಿ ಹಾಗೂ ಸಂಸ್ಕೃತಿಗೆ ಹೊಂದಿಕೊಂಡು ಉತ್ಕಮವಾಗಿ ಸಾಹಿತ್ಯಪೂರ್ವಕ ಪ್ರಗತಿ ಪಥದಲ್ಲಿ ನಡೆಯುವ ಭಾರತವೇ ನನ್ನ ಕಲ್ಪನಾ ಚಿತ್ರವಾಗಿದೆ. ಆದರೆ ಈಗಾಗಲೇ ಮರಣ ಪಥ ಹಿಡಿದಿರುವ ಪಾಶ್ಚಾತ್ಯ ಸುಧಾರಣೆ ಬಳಿ ನಿಕೃಷ್ಟ ಇಲ್ಲವೆ ಉತ್ಕೃಷ್ಟ ಪ್ರತಿಕೃತಿಯೂ ನಿರ್ಮಾಣವಾಗಿ ಭಾರತವು ರೂಪುಗೊಳ್ಳಬೇಕೆಂದು ನಾನು ಬಯಸುವುದಿಲ್ಲ.

ನನ್ನ ಸ್ವಪ್ನವು ಸಾಕಾರ ಹೊಂದಲಿ, ಮತ್ತು ಭಾರತದಲ್ಲಿಯ ಪ್ರತಿಯೊಂದು ಹಳ್ಳಿಯೂ ಸುಂದರವಾದ ಜೀವನ ಘಡಿಸುವ ಪ್ರಜಾತಂತ್ರವಾಗಲಿ. ಒಬ್ಬರೂ ನಿರಕ್ಷರರಾಗಿ ಉಳಿಯದಿರಲಿ. ಉದ್ಯೋಗ ದೊರೆಯದೆ ಯಾರೊಬ್ಬರೂ ಫಿರುದ್ಯೋಗಿಯೂಗದಿರಲಿ. ಪ್ರತಿಯೊಬ್ಬರು ಒಂದಿಲ್ಲ ಒಂದು ಉಪಯುಕ್ತ ಉದ್ಯೋಗದಲ್ಲಿ ತೊಡಗಿರಲಿ. ಪ್ರತಿಯೊಬ್ಬರಿಗೂ ಪೌಷ್ಟಿಕವಾದ ಆಹಾರ, ಉತ್ತಮ ಹವೆ ಹಾಗೂ ಬೆಳಕು ಇರುವ ಮನೆ ಮತ್ತು ಮೈಮುಚ್ಚಿಕೊಳ್ಳಲಿಕ್ಕೆ ಸಾಕಷ್ಟು ಖಾದಿ ಬಟ್ಟೆ ಸಿಗುವಂತಾಗಲಿ; ಎಲ್ಲ ಗ್ರಾಮವಾಸಿಗಳೂ ಶಂಕರದ ದಾರೂ ಊನ ಸ್ವಚ್ಛತೆಯ ನಿಯಮುಗಳನ್ನು ತಿಳಿದವರಾಗಿದ್ದು ಅದಂತೆ ನಡೆಯುವವರಾಗಲಿ. ಇಂಥ ರಾಜ್ಯಕ್ಕೆ ದಿನ ದಿನಕ್ಕೆ ವಿವಿಧ ಪ್ರಕಾರದ ಹೆಚ್ಚಿನ ಅವಶ್ಯಕತೆಗಳು ಬೇಕೇ ಬೇಕಾಗುವವು ಮತ್ತು ಅವುಗಳನ್ನೆಲ್ಲ ಪೂರೈಸಿಕೊಳ್ಳುತ್ತ ಮುನ್ನಡೆಯ ಬೇಕಾಗುವದು.

ಧರ್ಮವು ಎಲ್ಲರಿಗೂ ಅನ್ವಯಿಸಲೇಬೇಕು
(ವಿನೋಬಾ)

"ಧರ್ಮ"ವೆಂಬುದು ಎಲ್ಲರಿಗೂ ಮಾಡಲು ಬರುವಂತಿರಬೇಕು. ಉದಾಹರಣೆ ಕರುಣೆಯು ಶ್ರೀಮಂತರಿಗೆ ಮಾತ್ರ ಸಂಬಂಧಿಸುತ್ತದೆ. ಬಡವರಿಗೆ ಸಂಬಂಧಪಡುವದಿಲ್ಲ. ಬಡವರುಕೇವಲ "ಕರುಣಾ ಪಾತ್ರ"ರಾಗಿರಬೇಕು ಎಂದು ಹೇಳಿದರೆ ಕರುಣೆಯು ಸಾರ್ವಜನಿಕ ಧರ್ಮವಾಗುವದೇ ಇಲ್ಲ. ಎಲ್ಲರಿಗೂ ಅನ್ವಯಿಸುತ್ತಿರುವದೇ ಮಾತ್ರ ಧರ್ಮವಾಗ ಬಲ್ಲದು. ಸತ್ಯವು ಎಲ್ಲರಿಗೂ ಅನ್ವಯಿಸುತ್ತಿದ್ದರೆ ಮಾತ್ರ ಧರ್ಮವು ಆದ್ದರಿಂದ ಸತ್ಯ, ಪ್ರೇಮ, ಕರುಣೆ ಇವೂ ಎಲ್ಲರಿಗೂ ಅನ್ವಯಿಸುತ್ತವೆ. ಆದಲೇ ನನಗೆ ಹೊಳೆಯಿತು—ಜಗತ್ತಿನಲ್ಲಿ ಇರುವವರೆಲ್ಲರೂ "ಉಳ್ಳವರೇ" ಯಾರೊಬ್ಬರೂ "ಇಲ್ಲದವರು" ಆಗಿರದಂತೆ ಪರಮಾತ್ಮನು ಕೃಪೆಮಾಡಿದ್ದಾನೆ. ಪರಮಾತ್ಮನು ಪ್ರತಿಯೊಬ್ಬನಿಗೂ ಒಂದಿಲ್ಲೊಂದು ವಸ್ತು ಕೊಟ್ಟೇ ಇದ್ದಾನೆ. ಪ್ರೇಮಶಕ್ತಿ, ಬುದ್ಧಿ, ಭೂಮಿ, ಸಂಪತ್ತು, ಇವುಗಳಲ್ಲಿ ಒಂದಿಲ್ಲೊಂದು ಪ್ರತಿಯೊಬ್ಬನ ಹತ್ತಿರ ಇದ್ದೇ ಇರುತ್ತದೆ. ನಿನ್ನ ಹತ್ತರ ಏನಿದೆ ನೋಡಿಕೊಂಡು ಅದನ್ನೇ ಸಮಾಜಕ್ಕೆ ಅರ್ಪಿಸಬೇಕು. ಈ ವಿಚಾರಸರಣಿಯಿಂದ "ಇವರು ಅವರಿಗೆ ಕೊಡಬೇಕು" ಮುಂತಾದ ಪರಿಭಾಷೆಯೇ ಮುಕ್ತಾಯವಾಯಿತು. 'ಗ್ರಾಮದಾನದಲ್ಲಿ ಪ್ರತಿಯೊಬ್ಬರೂ ಕೊಡಬೇಕು' ಮೊದಲಾದ ಹೊಸ ಪರಿಭಾಷೆ ಆರಂಭವಾಯಿತು. ಇಲ್ಲಿ ಎಲ್ಲರೂ ಒಂದೇ ನೆಲದ ಮೇಲೆ ಬಂದಂತಾಯಿತು. ಇಷ್ಟೆಲ್ಲ ಶ್ರಮೋಣ ಫಲಿಸಿತು. ಒಮ್ಮಿಂದೊಮ್ಮೆಯಲ್ಲ.

ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
(English Made Easy)
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?
ಮನೆ-ಮದ್ದು HOME REMEDIES
ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ
ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.
'Ably written- Quite up-to-date valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೊರ್ಕಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.
ಮಕ್ಕಳು, ಹೆಂಗಸರು, ಗರ್ಭಿಣಿಯರ ಇತರ ಎಲ್ಲ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟ್ಯಾಕ್ಸ್ ಬೇರೆ)
—ಪ್ರತಿಗಳಿಗೆ ಹುಡುಕಾಟ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. U. Shetty at the Narayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

1—12—1967

೨೦
ಪೈಸೆ

ಕಥಾ ಪ್ರಪಂಚ

ಕೆಂಪಿನ ಫಣಿ

ಬರೆದವರು: ಶ್ರೀ ಪಿ. ಕೆ. ರೆಟ್ಟಿ, ಕರೋಪಾಡಿ.

ಅಂದು ಶನಿವಾರವಾದುದರಿಂದ ಮಧ್ಯಾಹ್ನವೇ ಮಕ್ಕಳೆಲ್ಲ ತಮ್ಮ ಬಳಪ—ಪುಸ್ತಕಗಳ ಸಂಗಡ ಲಘುಬಗೆಯಿಂದ ತಮ್ಮಿತಮ್ಮ ಮನೆಗಳಿಗೆ ಸಾಗುತ್ತಿದ್ದರು. ಬೇಗನೇ ಮನೆ ಸೇರಿ ಹಸಿವಿನಿಂದ 'ಚುರು ಚುರೆ'ನ್ನುತ್ತಿರುವ ಹೊಟ್ಟೆಗೆ ಸಮರ್ಥಾನ ಕೊಡುವ ಆತುರ ಆ ಮಕ್ಕಳಿಗೆ!

ಶಾಲೆಯ ಘಂಟೆ ಕೇಳಿಬೊಡನೆ ತಾನು ಮುಂದು—ತಾನು ಮುಂದೆಂದು ಹೊರಗೋಡಿದ ಮಕ್ಕಳು ಕಣ್ಮರೆಯಾಗುತ್ತಿದ್ದುದನ್ನು ನೋಡುತ್ತಾ ಕುಳಿತಿದ್ದ ಟೀಚರ್ ಸುಗುಣಾ ಮಾತ್ರ ತಾನು ಕುಳಿತಲ್ಲಿಂದ ಕದಲಿರಲಿಲ್ಲ. ಸುಗುಣಾಳ ತಮ್ಮ ಓಡಿ ಬಂದು, "ಅಕ್ಕಾ, ಮನೆಗೆ ಹೋಗೋಣವಾ?" ಎಂದಾಗ ಮಾತ್ರ ಆಕೆಗೆ ಎಚ್ಚರವಾದುದು! ಕೂಡಲೆ ಆಕೆ ಅವಸರ—ಅವಸರವಾಗಿ ಆ ಏಕೋಪಾಧ್ಯಾಯ ಶಾಲೆಯ ಕಿಟಕಿಗಳನ್ನು ಮುಚ್ಚ ತೊಡಗಿದಳು. ಕೊನೆಗೆ ತಪ್ಪ ಕೈಚೀಲದೊಂದಿಗೆ ಹೊರ ಬಂದು ಬಾಗಿಲಿಳಿದು ಕೊಂಡು, ಬಾಗಿಲಿಗೆ ಬೀಗವಿಕ್ಕಿ, ಆ ಪ್ರಾಥಮಿಕ ಶಾಲೆಯು ಸರ್ವಾಧಿಕಾರಿಣಿ ತಾಫೆಂಬಂತೆ ಜಗಲಿಯಿಂದ ಕೆಳಗಿಳಿದು ಬಂದಳು.

ನಾಲ್ಕು ತರಗತಿಗಳಿರುವ ಅವಳ ಪ್ರಾಥಮಿಕ ಶಾಲೆಯಲ್ಲಿ ಎಪ್ಪತ್ತೈದಕ್ಕಿಂತಲೂ ಬೆಚ್ಚು ಮಕ್ಕಳು ಸದಾ ಹಾಜರಾಗುತ್ತಿದ್ದರು. ಅಷ್ಟು ಮಕ್ಕಳನ್ನು ನೋಡಿ—ಕೊಳ್ಳುವುದೆಂದರೆ— ಆಕೆಗೆ ಸಾಕೋ ಸಾಕೆನಿಸುತ್ತಿತ್ತು. ಮುಂಜಾನೆ ಶಾಲೆ ಆರಂಭವಾದ ಬಳಿಕ ಶಾಲೆ ಬಿಡುವ ತನಕ ಆಕೆಗೆ ಎಳ್ಳಷ್ಟು ವಿರಾಮವೂ ದೊರೆಯುತ್ತಿರಲಿಲ್ಲ. ಅವಳಿಗೆ ಆ ಉದ್ಯೋಗದಲ್ಲಿ ಒಂದು ತೆರನಾದ ಬೇಸರವೇ ಬಂದಿತ್ತು. ಇನ್ನೊಬ್ಬ ಸಹಾಯಕರ ಅವಶ್ಯಕತೆಯನ್ನು ಸಂಬಂಧಪಟ್ಟವರಿಗೆ ಹಲವು ಬಾರಿ ತಿಳಿಸಿದ್ದರೂ ಆ ಬಗೆಗೆ ಯಾವ ಆಜ್ಞೆಯೂ ಬಂದಿರಲಿಲ್ಲ.

ಆ ಶಾಲೆ—ಬಸ್ಸು ಸಂಚಾರದ ರಸ್ತೆ ಸುಮಾರು ಅರ್ಧ ಮೈಲು ಅಂತರದಲ್ಲಿತ್ತು. ಆ ಶನಿವಾರ ಅವಳು ಶಾಲೆ ಬಿಟ್ಟು ಹೊರಟವಳು, ಆಗ ತಾನೇ ತನ್ನ ಮನೆಯೆಡಗೆ ಹೋಗುವ ಬಸ್ಸು ಇದ್ದುದರಿಂದ ತನ್ನ ತಮ್ಮನೊಡನೆ ವೇಗವಾಗಿ ಸಾಗಿದಳು ರಸ್ತೆಯೆಡಗೆ. ಪ್ರತಿದಿನ ಅವರಿಬ್ಬರಿಗೆ ಬೇಕಾಗುವಷ್ಟು ಊಟವನ್ನು ಹಿಡಿದು ತರುತ್ತಿದ್ದಳು. ಇಂಪು ಬೇಗನೇ ಮನಗ ಸೇರಿ ಊಟಬೇಕೆಷ್ಟೆ!

ಶಾಲೆಯಿಂದ ಹಾದುರ್ ರಸ್ತೆಯ ಮೇಲೆ ಬಸಿಲು ಝಳವನ್ನು ಸೀಳುತ್ತಾ ಜನರಿಂದ ತುಂಬಿತುಳುಕುತ್ತಿದ್ದ ಬಸ್ಸು ವೇಗವಾಗಿ ಸಾಗಿ ಬರುತ್ತಿತ್ತು. ಸುಗುಣಾ ಟೀಚರಿಗೆ ಹೋಗಿ ಬರಲು ದಿನಾಯತಿ ದರದ ಪಾಸು ಇದ್ದುದರಿಂದ ಆಕೆ ಸದಾ ಬಸ್ಸಿನಲ್ಲೇ ಪ್ರಯಾಣಿಸುತ್ತಿದ್ದರು. ಬಸ್ಸಿನ ಚಾಲಕ ಆಕೆಯನ್ನು ಕಂಡೊಡನೆ ಮುಗುಳ್ನಕ್ಕು ಬಸ್ಸಿನ ವೇಗವನ್ನು ಮಿತಿಗೆ ತಂದು ಬಸ್ಸನ್ನು ನಿಲ್ಲಿಸಿದನು. "ಸಾಸಿವೆಯೆಸೆದರೂ ಕೆಳಗೆ ಬೀಳಲಾರದು."ಎಂಬ ಗಾದೆಯಂತೆ ಬಸ್ಸಿನಲ್ಲಿ ಕುಳಿತು ಕೊಳ್ಳಲು ಏಕೆ—ನಿಲ್ಲಲು ಕೂಡಾ ಅವಕಾಶ ಇರಲಿಲ್ಲ. ಸುಗುಣಾ ಟೀಚರ್ ನಿತ್ಯದವಳಾದುದರಿಂದ ಅವಳನ್ನೂ ಅವಳ ತಮ್ಮನನ್ನೂ ತನ್ನ ಉದರ ದೊಳಗೆ ತುರುಕಿಸಿಕೊಂಡ ಬಸ್ಸು ಕೆರ್ರೋ ಎಂದು ದಫಗೈಯುತ್ತಾ ಮುಂದೆ ಸಾಗ ತೊಡಗಿತು.

ಬಸ್ಸಿನ ವೇಗಕ್ಕೆ ಇಕ್ಕೆಡೆಗಳಿಂದ "ರೊಯ್ಯ"ನೆ ಗಾಳಿ ಬೀಸುತ್ತಿದ್ದರೂ ಜನನಿಬಿಡತೆಯಿಂದ ಬಸ್ಸಿನ ಒಳಭಾಗಕ್ಕೆ ಗಾಳಿ ಪ್ರವೇಶದೆ ಬದಿಗಳಲ್ಲಿ ಕುಳಿತವರ ಕೇಶನೇವರಿಸಿ, ಅಲ್ಲಿಂದಲೇ ಹಿಂಬದಿಗೆ ಸಾಗುತ್ತಿತ್ತು. ನಿಂತು ಪ್ರಯಾಣಿಸುವವರೊಂದಿಗೆ ಸುಗುಣಾ ಮತ್ತು ಅವಳ ತಮ್ಮನೂ ಭಾಗ ತೆಗೆದುಕೊಳ್ಳದೆ ಗತ್ಯಂತರವಿರಲಿಲ್ಲ. ಆಕೆ ತನ್ನ ತಮ್ಮನನ್ನು ಸರಳ್ಳಿ ಗಟ್ಟಿಯಾಗಿ ಹಿಡಿದುಕೊಳ್ಳುವಂತೆ ಸೂಚಿಸಿ, ತಾನು ಮೇಲೆ ನೇತಾಡುವ "ಬೆಲ್ಟಿ"ಗಾಗಿ ಕಣ್ಣೋಡಿಸಿದಾಗ, ಇವಳಿಗಾಗಿ ಒಂದು "ಬೆಲ್ಟೂ" ಉಳಿದಿರಲಿಲ್ಲ. ಅಂತೂ ಆಕೆ ಹೇಗೋ ಸಾವರಿಸಿ ತನ್ನ ದೇಹದ ಸಮತೋಲನವನ್ನು ಕಾಯ್ದುಕೊಂಡು, ತಾನು ಇಳಿಯುವ ತನಕ ಆಕೆಯು ತಮ್ಮ ಹಿಡಿದುಕೊಂಡಿದ್ದ ಸರಳನ್ನೇ ಆಶ್ರಯಿಸಿಕೊಂಡು ನಿಲ್ಲುವ ಯೋಜನೆ ಮಾಡಿದಳು.

ಸುಗುಣಾ ಪ್ರತಿದಿನ ತನ್ನ ಮನೆಯಿಂದ ಬಂದು ಬಸ್ಸಿಗಾಗಿ ಕಾಯುವ ಸ್ಥಳದಲ್ಲಿ ಒಂದು ಸಣ್ಣ ಅಂಗಡಿ. ಅದರ ಮೂಲಿಕ ನವಯುವಕ ಕಾಸಿಮ. ಹೃಷ್ಟಪುಷ್ಟ ಬೆಳೆದ ದುಂಡು ದೇಹವವನದು. ಬಹಳ ಶೃಂಗಾರಿ. ಹಲವು ದಿನಗಳಿಂದ ಸುಗುಣಾಳನ್ನು ಆಸೆಗಣ್ಣಿನಿಂದ ನೋಡುತ್ತಿದ್ದ. ಆ ಕೆಯ ಒಲವು ಸಂಪಾದನೆಗಾಗಿ ಬಹಳ ಆಲೋಚಿಸಿದ್ದ.

ಪ್ರತಿದಿನ ತನ್ನ ಅಂಗಡಿಯ ಮುಂಭಾಗದಲ್ಲಿ ನಿಲ್ಲುತ್ತಿದ್ದ ಸುಗುಣಾಳೊಡನೆ ಮಾತನಾಡಲು ಯತ್ನಿಸುತ್ತಿದ್ದ .ಆಕೆಯ ಅಂಗಾಂಗಗಳ ಜೆಲುವನ್ನು ಕಣ್ತುಂಬ ಸವಿಯುತ್ತಿದ್ದ. ಅಂತರಂಗದಲ್ಲಿ ವೇದನೆ ಗೊಂಡು ಚಡಪಡಿಸುತ್ತಿದ್ದ.

ಸುಗುಣಾ ಅವನ ಮುಂದೆ ನಿಸ್ಸಂಕೋಚವಾಗಿಯೇ ವರ್ತಿಸುತ್ತಿದ್ದಳು. ಹೀಗಾಗಿ ಹಕ್ಕಿ ತನ್ನ ಬಲೆಗೆ ಬೀಳುವುದು ಖಂಡಿತವೆಂದು ಕಾಸಿಮ ದೃಢವಾಗಿ ನಂಬಿದ್ದ.

ಆ ಶನಿವಾರ ಕಾಸಿಮನೂ ಸುಗುಣಾ ಪ್ರಯಾಣಿಸುತ್ತಿದ್ದ. ಬಸ್ಸಿನಲ್ಲೇ ಎಲ್ಲಿಂದಲೋ ಬರುತಿದ್ದ ಆತನೂ ನಿಂತು ಪ್ರಯಾಣಿಸುವವರ ಸಾಲಿಗೇ ಸೇರಿದ್ದ. ಸುಗುಣಾಳನ್ನು ನೋಡಿದ ಆತನಿಗೆ ಸ್ವರ್ಗವೇ ತನ್ನಿದಿರು ಬಂದಂತಾಯಿತು. ಆಕೆ ಬಂದು ತನ್ನು ನಿಂತಲ್ಲೇ ನಿಂತಾಗ ಬಹಳ ದಂಭೀರ ಯಾಗೂ ಮಂದಸ್ಮಿತವದನನಾದ. ಅವನು ಸುಗುಣಾಳನ್ನೊಮ್ಮೆ ತೀಕ್ಷ್ಣವಾದ ನೋಟದಿಂದ ನೋಡಿ, ಆಯ ದೃಷ್ಟಿ ತನ್ನೆಡಗ ಹರಿಯುವಂತೆ ಒಮ್ಮೆ ತಿರುಗಿ ಕೊಂಡ.

ಎದುರಿನಿಂದ ಆಗಾಗ ವಾಹನಗಳು ಬರುತ್ತಿರುವುದರಿಂದ ಬಸ್ಸಿನ ವೇಗಕ್ಕೆ ಆಗಾಗ ಮಿತಿಯಿಟ್ಟುಕೊಳ್ಳುವಾಗ ಪ್ರಯಾಣಿಕರೆಲ್ಲ ಒಮ್ಮೆ ಮುಂದೆ ಬಾಗಿ ಹಿಂದೆ ಸರಿಯತೊಡಗಿದ್ದರು. ಅದೇ ಸಮಯವನ್ನು ಸಾಧಿಸಿ ಕಾಸಿಮನು ತನ್ನ ಶರೀರ ಹಿಂದೆ ಸರಿಯುತ್ತಿರುವ ವೇಳೆ ಬೇಕಾದುದಕ್ಕಿಂತಲೂ ತುಸು ಹಿಂದೆ ಬಾ" ಸುಗುಣಾಳ ಮೈಯನ್ನು ಸ್ಪರ್ಶ ಮಾಡದೆ ಬಿಡುತ್ತಿರಲಿಲ್ಲ. ಪ್ರಾರಂಭದಲ್ಲಿ ಕಾಸಿಮನ ವರ್ತನೆಯಲ್ಲಿ ಸುಗುಣಾಳಿಗೆ ಸಂದೇಹ ಬಂದಿರಲಿಲ್ಲ. ಒಂದೆರಡು ಬಾರಿ ಆತ ಸುಗುಣಾಳ ಮುಖದ ಅತಿ ಸಮೀಪ ತನ್ನ ಮುಖವನ್ನೊಯ್ಯುತ್ತಿದ್ದ. ಇನ್ನೂ ತುಸು ವೇಳೆಯಲ್ಲಿ ಕೈಯಿಂದ, ಕಾಲಿನ ಬೆರಳುಗಳಿಂದ ಅವಳನ್ನು ಸ್ಪರ್ಶಿಸತೊಡಗಿದ. ಆಕೆ ಆಸಹ್ಯಪಟ್ಟು ಹೋಗಾದರೂ ತಾನು ಇಳಿಯುವ ಜಾಗ ಬರಲೆಂದು ಮನದಲ್ಲೇ ದೇವರಿಗೆ ವಂದಿಸುತ್ತಿದ್ದಳು.

ಬಂತು! ಕೊನೆಗೆಂತೂ ಅವರಿಬ್ಬರೂ ಇಳಿಯುವ ಜಾಗ ಬಂದೇ ಬಂದಿತು. ತನ್ನ ತಮ್ಮಗೋಪಾಲನಿಗೆ ಇಳಿಯುವಂತೆ ಸೂಚಿಸಿ, ಸುಗುಣಾಳೂ ಅವಸರ ಅವಸರವಾಗಿ ಬಸ್ಸಿನಿಂದ ಇಳಿಯಲು ಆಣಿ ಸಾಡಳು. ಆಕೆಯ ಮುಖದಲ್ಲಿ ತರಸ್ಕಾರದ ಛಾಯೆ ವಿತ್ತು.

ಮುಂದೆ ಗೋಪಾಲನೂ, ಅವನ ಹಿಂದೆ ಸುಗುಣಾಳೂ, ಅವಳನ್ನು ಅನುಸರಿಸಿ ಕಾಸಿಮನೂ ಬಸ್ಸಿನಿಂದಿಳಿದು ರಸ್ತೆಗೆ ಕಾಲಿರಿಸಿದ್ದರಷ್ಟೆ. ಕ್ಷಣಾರ್ಧದಲ್ಲಿ "ಲಟ-ಲಟ್" ಎನ್ನುವ ಶಬ್ದ ಕೇಳಿಸಿತು. ಪ್ರಯಾಣಿಕರು ಹೂಂಗುಡಿಕೆ ನೂರಿಪ್ಪತ್ತರೆ—ಕಾಸಿಮನ ಮೂಗಿನ ಸೊಳ್ಳೆಗಳಿಂದ ಬಿಕ್ಕಪೂಸುರುತ್ತಿತ್ತು. ಕೆಂಕೆದ ಫಣಿಯಂತಾಗಿದ್ದ ಸುಗುಣಾಳ ಕೈಯಲ್ಲಿ ಆಕಯ್ಕೇ ಧರಿಸುತ್ತಿದ್ದ ಹಿಮ್ಮಡಿಯ ಶ್ರಾಪಾದರಕ್ಷೆಯಿತ್ತು. ಗೋಪಾಲ ಚಟ್ಟಿ ಬಟ್ಟಿಗಿ ತನ್ನ ಅಕ್ಕನನ್ನೇ ನೋಡುತ್ತಿದ್ದ.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸಾಕಲ್ಯಗಳ
ವಸತಿ ಗೃಹ

ಹೊಟೆಲ್ ತಿವಪ್ರಸಾದ
ಕುಂದಾಪುರ, ದ. ಕ.
ಫೋನ್: 771
ಶಿವಳ್ಳಿ ಬ್ರಾಹ್ಮಣರ ರುಚಿ-ರುಚಿಯಾದ ಭೋಜನ, ಶಕಲ ವಿಧದ್ಯೆತಿಂಡಿತಿನಸು
ಖಾಫೀಯಂಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿರಮಾತ್ರ ಹೊಟೆಲ್.

ಶ್ರೀ ತಿವ್ಪೇಶ

ಹರಡಿದೆ ನೋಡಿ
ಕಾಯ್ಕಿಣಿಯ ಹಟ್ಟಿ ಕ್ಷೇತ್ರಾ
ನೆಡೆದಿದೆ ಹಟ್ಟಿ
ತಿವ್ಪೇಶನ ಜಾತ್ರಾ.
ಹೊರಟನೆ ಕೂಡಿ
ಕುಂಬಿದ ನೇತ್ರಾ.
ಕ್ಷಯವಾಗಿದ ರಾಡಿ
ಕ್ಷಾಮವು ಮಾಕ್ರಾ.
ಬಣ್ಣೆಸಿರಿ ಚಿತ್ರ
ವಿಚಿತ್ರ ಕಲೆಯನ್ನು
ಪಡೆಯಿರಿ ಶ್ರೀ ಸ್ವಾಮಿಗಳ
ವಂಶಸ್ಥ
ತೂಗಿರಿ ತೂಗು ಮಂಚದ
ಸ್ವಾಮಿಯು ತೊಟ್ಟಿಲನ್ನು
ಮಾಡಿರಿ ಹಗಲಿರುಳು
ಶ್ರೀ ತಿವ್ಪೇಶನ ಪೂಜೆಯನ್ನು.
—ಕೆ. ಟಿ. ಸ್ವಾಮಿ,
ನಾಯಕನ ಹಟ್ಟಿ



ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೧೬	೨೧ —೧೨—೧೯೬೭	No. 16

ಪ್ರಾಯೆಶ್ಚಿತ್ತ

'ಮಹಾಜನ ಆಯೋಗ'ದ ವರದಿಯನ್ನು ಚರ್ಚಿಸುವುದಕ್ಕೆಂದು, ಅಲ್ಪಾವಧಿಗಾಗಿ ಸೇರಿದ್ದ ವಿಧಾನ ಸಭಾಧಿವೇಶನವು ಬಹಳ ಕಾವಿನಿಂದಲೇ ಹುಂಬಿತ್ತು, ಕರ್ನಾಟಕದಲ್ಲಿ. ಮಹಾಜನ ಆಯೋಗದ ಬಗ್ಗೆ ಕರ್ನಾಟಕ ಸರಕಾರದ ನಿಲುಮೆಯು ದೃಢವಿದ್ದರೂ, ಕೆಲವು ಸದಸ್ಯರು ಅಪಸ್ವರವೆಬ್ಬಿಸಿದರು. ಮಹಾರಾಷ್ಟ್ರ ಸರಕಾರ— ಜನತೆಯ ಸಂಪೂರ್ಣ ತಿರಸ್ಕಾರ ಕೇರಳ ಸರಕಾರದ ಸಂಪೂರ್ಣ ಅಸಹಕಾರ—ಕೇಂದ್ರ ಗೃಹಮಂತ್ರಿ ಚವನರ ಹೊಸ ರಾಗ ಮತ್ತೆದರ ಪರಿಣಾಮ ಮೊದಲಾದುವುಗಳಿಂದಾಗಿ ವಿಧಾನ ಸಭೆಯು ಬಿಸಿ ಬಹಳಬೇರಿತ್ತು. ಸಂಬಂಧಪಟ್ಟ ರಾಜ್ಯಕೀಯ ಪಕ್ಷಗಳ ಅಭಿಪ್ರಾಯವನ್ನು ತಿಳಿದು ಆದರಂತೆ ನಿರ್ಧಾರಕ್ಕೆ ಬರುವುದಾಗಿ ಕೇಂದ್ರದ ಸಚಿವ ಶುಕ್ಲಾರು ಚವನರ ರಾಗವನ್ನೇ ಪಾರ್ಲಿಮೆಂಟಿನಲ್ಲಿ ಮತ್ತೆ ಹಾಡಿದ್ದರಿಂದ ಆಯೋಗದ ವರದಿ ಕಸದ ಬುಟ್ಟಿಗೆ ಸಂದಿತೆಂದು ಯಾರಾದರೂ ಹೇಳಲೇ ಬಹುದು. ಈ ಹೇಳಿಕೆಯು ಪ್ರತಿಧ್ವನಿ ವಿಧಾನ ಸಭೆಯಲ್ಲೂ ಎದ್ದು ಶ್ರೀ ನಿಜಲಿಂಗಪ್ಪ ಸಚಿವ ಸಂಪುಟವು ರಾಜೀನಾಮೆ ಕೊಡಬೇಕೆಂಬ ಕೇಳಿಕೆಯೂ ಬಂತು. ಈ ಕೇಳಿಕೆಯು ತೋರಿಕೆಯದಾಗಿದೆಯೆಂದರೂ ಕರ್ನಾಟಕದ ಜನರ ತೀವ್ರ ಪ್ರತಿಕ್ರಿಯೆಯಿದು ಎಂಬುದು ನಿಜ.

ಇದಕ್ಕೆಂದ ಹಚ್ಚಿಳ ಬಿಸಿ ವಾತಾವರಣವೆದ್ದುದು 'ಮಧುಗಿರಿ' ಪ್ರಕರಣದಲ್ಲಿ. ಮಧುಗಿರಿಯಲ್ಲಿ ಪೋಲೀಸರು ವಿಪರೀತ ಅತ್ಯಾಚಾರ ನಡೆಸಿರುವರು ಎಂದು ವಿರೋಧಿ ಪಕ್ಷಗಳು ಬೊಬ್ಬೆ ಹಾಕಿದುವು. ತಮ್ಮ ಅಸ್ತಿತ್ವವನ್ನು ತೋರಿಸಲು ವಿರೋಧಿ ಪಕ್ಷಗಳು ಹೃಣಿವನ್ನೂ ಸರ್ವತನವನ್ನೂ ಧಾರೆಯೆರೆದುವುದು ಅನಿಹಿದವೇನಲ್ಲ. ಹಾಗೆಂದೇ ಗೃಹ ಮಂತ್ರಿ ಶ್ರೀ ಎಂ. ವಿ. ರಾಮಾರಾಯರು ಆರೋಪವನ್ನು ಬಲವಾಗಿ ವಿರೋಧಿಸಿ, ಪೋಲೀಸರ ಕ್ರಮವನ್ನು ಪ್ರಬಲವಾಗಿ ಸಮರ್ಥಿಸಿಕೊಂಡರು. ಆದರೂ ಮಧುಗಿರಿಗೆ ಸಂದರ್ಶನ ನೀಡಿದ ಪತ್ರಿಕಾ ಕರ್ತರೂ ಇತರ ಸಂದರ್ಶಕರೂ ಪ್ರತ್ಯಕ್ಷದಿಂದ ಸಂಗ್ರಹಿಸಿದ ವಿವರಗಳನ್ನು ಕೇಳುವಾಗ, ಓದುವಾಗ, ಪ್ರತಿಯೊಬ್ಬರ ಕರುಳೂ ಕಿತ್ತು ಬರುತ್ತದೆ. ಎಂತಲೇ ಕಾಂಗ್ರೆಸ್ ಶಾಸಕರ ಸಭೆಯಲ್ಲೂ ಮಂತ್ರಿಯರ್ಯರ ಹೇಳಿಕೆಯು ಅಕ್ಷೇಪಾರ್ಹವಫಿಸಿತೆಂದು ತಿಳಿಯುತ್ತದೆ. ಆದುದರಿಂದಲೇ ಗೃಹ ಮಂತ್ರಿಯವರು ತಮ್ಮ ಮುಂದಿನ ಹೇಳಿಕೆಯು ಹಿಂದಿನ ರಾಗವನ್ನು ಬದಲಾಯಿಸಲೇಬೇಕಾಯಿತು. ಸರಕಾರದ ಕ್ರಮವನ್ನು ವಿರೋಧಿಸುವುದು ವಿರೋಧಿ ಪಕ್ಷಗಳ ಪರಮಾಧಿಕಾರವಾದರೆ, ಅದನ್ನು ಸಮರ್ಥಿಸುವುದು ಸಹಕಾರಿ ಪಕ್ಷದ ಪರಿಕ್ರಮ. ಕರ್ನಾಟಕದಲ್ಲಿ ಸ್ವಾತಂತ್ರ್ಯಾನಂತರ, ಇಂತಹ ದುರಂತಗಳು ನಡೆದಿದೆಯೆಂದೇ ನಿಶ್ಚಿ. ನಮ್ಮ ನೆರೆ ಹೊರೆಯ, ತುಸು ದೂರದ ರಾಜ್ಯಗಳೊಡನೆ ಹೋಲಿಸಿದರೆ, ನಮ್ಮದು ಶಾಂತಿರಾಜ್ಯ—ರಾಮರಾಜ್ಯ. ಇದಕ್ಕೆ ಜನತೆಯು ತಾಳ್ಮೆಯು ಪ್ರತಿಮೂರ್ತಿಯಾಗಿರುವುದೇ ಕಾರಣವೆನ್ನಲು ಸಂದೇಹವಿಲ್ಲ. ಆದರೂ ಸರಕಾರವು ಮಧುಗಿರಿ ಪ್ರಕರಣವನ್ನು ನ್ಯಾಯಾಂಗ ವಿಚಾರಣೆಗೊಪ್ಪಿಸಬೇಕು. ಎಂಬ ಶಾಸಕ ಬೇಡಿಕೆಯನ್ನು ಹೆಚ್ಚು ಹಿಂಬೆ—ಮುಂದೆ ನೋಡದೆ ಮುಖ್ಯ ಮಂತ್ರಿಯವರು ಒಪ್ಪಿಕೊಂಡರು.

ಕರ್ನಾಟಕ ಆರಂಭದಿಂದಲೂ ಶಾಂತರಾಜ್ಯ; ಇದರ ಚರಿತ್ರೆಯೂ ಶುಭ್ರ. ಸದ್ದು ಗದ್ದಲಗಳಿಲ್ಲದೆ ಸುಖದುಃಖಗಳನ್ನು ಸಹಿಸಿಕೊಂಡು ಬಾಳುವ ಜನ—ಇಂತಹ ರಾಜ್ಯದ ಘನತೆ—ಗೌರವ—ಶುಭ್ರತೆಗಳಿಗೆ ಮಧುಗಿರಿ ಪ್ರಕರಣವೊಂದು ಕಲಂಕಪ್ರಾಯವಾಯಿತು. ಸರಕಾರದಿಂದಾದ 'ಅತ್ಯಾಚಾರ'ವನ್ನು ನ್ಯಾಯಾಂಗ ವಿಚಾರಣೆಗೆ ಒಪ್ಪಿದ ಮುಖ್ಯಮಂತ್ರಿಯವರು ಪ್ರಜಾಸತ್ತೆಯನ್ನು ಉಳಿಸಿದರು; ಈ ಪ್ರಕರಣಕ್ಕೆ ಮೂಲವಾದ ಗೃಹ ಶಾಖೆಯ ಮಂತ್ರಿ ಶ್ರೀ ಎಂ. ವಿ. ರಾಮರಾವ್ ಇವರೂ ಪ್ರಜಾಪ್ರಭುತ್ವದ ಸರ್ವ ಸಂಪ್ರದಾಯದಂತೆ ರಾಜೀನಾಮೆಯನ್ನಿತ್ತಿದರು. ಇದರಿಂದ ರಾಷ್ಟ್ರವು ಸರ್ವ ಪರಂಪರೆ ಹಾಕಿಕೊಡುವಲ್ಲಿಯೂ ಹಿಂದುಳಿದಿಲ್ಲವೆನ್ನೆ ಬಹುದು. ತಪ್ಪುಗಳು ದೂರಿಂದಲೂ ನಡೆಯುತ್ತವೆ. ಆದರೆ, ತಪ್ಪು ನಡೆದಾಗ ಅದನ್ನು ಮುಚ್ಚಿಡದೆ ತಕ್ಕ ಪ್ರಾಯಶ್ಚಿತ್ತ ಮಾಡುವುದು ಪ್ರಜಾಸತ್ತೆಯ ಸಲ್ಲಕ್ಷಣ. ಕರ್ನಾಟಕದ ಇತಿಹಾಸದಲ್ಲಿ "ಮಧುಗಿರಿ ಪ್ರಕರಣ"ವು ಇಲ್ಲಿ ಸಲ್ಲಿಕ್ಷಣವನ್ನು ತೋರಿಸಿದ್ದು, ನ್ಯಾಯವಿದೆ.

ಶ್ರೀ ಟಿ. ಎ. ಪೈ

ಶ್ರೀ ಟಿ. ಎ. ಪೈ ಅವರು ವಿಜಯಾ ಬ್ಯಾಂಕಿನ ಅಧ್ಯಕ್ಷರಾಗಿದ್ದಾಗ ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷರ ಸ್ಥಾನವನ್ನು ಅಲಂಕರಿಸಲು ಅಧ್ಯಕ್ಷರು ಆಹ್ವಾನಿಸಿದರು. ಆದರೆ ಅವರು ಆಗ ಅದಕ್ಕೆ ಒಪ್ಪಲಿಲ್ಲ. ಆದರೆ ಈಗ ಅಧ್ಯಕ್ಷರ ಸ್ಥಾನವನ್ನು ಅಲಂಕರಿಸಲು ಅಧ್ಯಕ್ಷರು ಮತ್ತೆ ಆಹ್ವಾನಿಸಿದಾಗ ಅದನ್ನು ಒಪ್ಪಿಕೊಂಡರು. ಇದಕ್ಕೆ ಸೊದಲು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಆಗಿದ್ದರು. ಸಿಂಡಿಕೇಟ್ ಬ್ಯಾಂಕಿನ ಸಂಸ್ಥಾಪಕ — ಡೈರೆಕ್ಟರಾಗಿದ್ದ ಸದ್ಗೃಹಸ್ಥ ಡಾ|| ಸೂಫಯ್ಯ ಪೈಯವರು ಅಧ್ಯಕ್ಷ ಪದದಿಂದ ನಿವೃತ್ತರಾದರು. ಬ್ಯಾಂಕುಗಳ ಮೇಲೆ ರಾಷ್ಟ್ರೀಯ ಹಿತೋಪಯ ಗಾಳಿ ಬೀಸ ತೊಡಗುವುದಕ್ಕೆ ಬಹಳಷ್ಟು ಮೊದಲೇ ಸಿಂಡಿಕೇಟ್ ಬ್ಯಾಂಕು ತಾನಾಗಿಯೇ ಸಾಮಾಜಿಕ ಹಿತೋಪಯ ಕ್ಷತೆಗೆ ಒಳಪಡುವ ಮನೋಭಾವವನ್ನು ತೋರಿದ್ದು ಪ್ರಶಂಸನೀಯ.

ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷರು ನೇಮಕವೂ ನಿಯೋಜಿತ ಸಾಮಾಜಿಕ ಹಿತೋಪಯ ಮುಖ್ಯಾಂಶವೊಂದೆಂದು ಶ್ರೀ ಮುರಾರ್ಜಿ ದೇಸಾಯರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದರು. ಸಿಂಡಿಕೇಟ್ ಬ್ಯಾಂಕಿಗೆ ಇ



ದೇನೂ ಹೊಸತಲ್ಲ. ಶ್ರೀ ಟಿ. ಎ. ಪೈಯವರಂತಹ ಸಮರ್ಥ ಉತ್ಸಾಹಿಗಳನ್ನು ಅಧ್ಯಕ್ಷರನ್ನಾಗಿ ಪಡೆದುದರಿಂದ ಬ್ಯಾಂಕು ಪನ್ಮಶ್ರೀ ಪೈಯವರ ಉತ್ಕರ್ಷಾಧಿಕಾರಿಯಾಗಿ ಓರ್ವ ಸಮರ್ಥರನ್ನೇ ಪಡೆದಂತಾಯಿತು. ೧೯೪೬ರಲ್ಲಿ ಡಿಪ್ಯುಟಿ ಮೆನೇಜರರಾಗಿ ಬ್ಯಾಂಕು ಸೇರಿದ ಶ್ರೀ ಪೈಯವರು ಅಚಲ ಜನರಲ್ ಮೆನೇಜರರಾದರು. ೧೯೬೨ರಲ್ಲಿ ಮೆನೇಜಿಂಗ್ ಡೈರೆಕ್ಟರರಾದರು. ಶ್ರೀ ಟಿ. ಎ. ಪೈಯವರ ಲೋಕ ಜ್ಞಾನ—ಅನುಭವ, ಸಾಮರ್ಥ್ಯಗಳಿಂದ ಬ್ಯಾಂಕು ಪ್ರಗತಿಶೀಲ ಮಾರ್ಗದಲ್ಲಿ ಮುನ್ನಡೆಯುವುದೆಂದು ಆಶಿಸಿ ಶ್ರೀ ಪೈಯವರನ್ನು ಅಭಿನಂದಿಸುತ್ತೇನೆ.

ಉಡುಪಿಯಲ್ಲಿ ರೋಟರಿ ಗವರ್ನರ್

ಇದೇ ತಾ. ೨೦ರಂದು ಉಡುಪಿಯ ರೋಟರಿ ಕ್ಲಬ್ಬಿನಲ್ಲಿ ೧೯೭೦ನೇ ಡಿಸ್ಟ್ರಿಕ್ಟ್ ರೋಟರಿ ಗವರ್ನರರಾದ ಡಾ|| ಎನ್. ಆರ್. ಕಲಕರ್ಣಿಯವರು ಮಾತನಾಡುತ್ತಾ ಸಮಾಜಕ್ಕೆ ಉಪಯುಕ್ತ ಸೇವೆ ಸಲ್ಲಿಸುವುದೇ ರೋಟರಿ ಕ್ಲಬ್ಬುಗಳ ಉದ್ದೇಶವೆಂದರು. ಕ್ಲಬ್ಬಿನ ಕಾರ್ಯದರ್ಶಿ ಡಾ|| ಶಾಂತಾರಾಮರವರು ಸಭೆಗೆ ಆಗಮಿಸಿದ ಕ್ಲಬ್ಬಿನ ಸದಸ್ಯರ ಮತ್ತು ಶ್ರೀ ಟಿ. ಎಮ್ಮೇಶ ಪೈಯವರು ರೋಟರಿ ಗವರ್ನರರ ಭವ್ಯತೆಯ ಮಾತುಗಳಿಂದ ಸ್ವಾಗತಿಸಿದರು.

ಗವರ್ನರರು ಮಾತನಾಡುತ್ತಾ ರೋಟರಿ ಕ್ಲಬ್ಬುಗಳು ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಉಲ್ಲೇಖಿಸಿದರು. ಇಂದು 137 ದೇಶಗಳಲ್ಲಿ ಹಬ್ಬಿಕೊಂಡಿರುವ ರೋಟರಿಯು ಕಲು[illegible] ಸ್ಕಾಲರ್‌ಶಿಪ್ ರೂಪದಲ್ಲಿ ೧೯೬೭ ರೋಟರಿ ಫೆಲೋಷಿಪ್‌ಗಳನ್ನು ಒದಗಿಸುತ್ತಿದೆಯೆಂದರು. ಡಾ|| ಬಿ. ವಾಧವ ಪೈಗಳ ಮೂಲಕ ಮಣಿಪಾಲದಲ್ಲಿ ನಡೆದಿರುವ ರೋಟರಿಯ ಫೈಲೋಷಿಪ್‌ಗಳನ್ನು ಕಾರ್ಯಕ್ರಮ ಆಚಾರ್ಯಲ್ಲಿಟ್ಟಿವೆಯೆಂಬುದು ರೋಟರಿಯ ಫೈಲಿಯಕ್ಕೆ ಒಂದು ಜೀವಂತ ಸಾಕ್ಷಿಯೂ ನಿದೆಯೆಂದರು.

ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರಾಗಿರುವ ಡಾ|| ಬಿ. ವಾಧವ ಪೈಗಳು ಈ ಕೊಡುಗೆಯನ್ನು ಅಸ್ವೀಕರಿಸಿದರು. ಅವರು ಮಾತನಾಡುತ್ತಾ ಕಸ್ತೂರ್ಬಾ ಮೆಡಿಕಲ್ ಆಸ್ಪತ್ರೆಯಲ್ಲಿ ರಚಿಸಲಾಗುತ್ತಿರುವ ಈ ಬ್ಲಾಕು ಮನಸ್ಸನ್ನ ಸಂಕಲ್ಪ ಪರಿಹಾರ ಕಾರ್ಯಕ್ಕೆ ಒಂದು ಹೆಜ್ಜೆಯೆಂದರು.

ಶ್ರೀ ಶ್ರೀಪತಿ ಆಚಾರ್ಯರು ತಮ್ಮ ಅಧ್ಯಕ್ಷೋಪನ್ಯಾಸದಲ್ಲಿ ಕಲವು ವರ್ಷಗಳಿಂದ ನಡೆದು ಬಂದಿರುವ ಮಣಿಪಾಲದ ಸಂಸ್ಥೆಗಳ ಕಾರ್ಯ ಕಲಾಪಗಳನ್ನು ಮುಖ್ಯಕಂಡಿಂದ ಶ್ಲಾಘಿಸಿದರು.

ಕೊನೆಯಲ್ಲಿ ಮಣಿಪಾಲ ಇಂಜಿನಿಯರಿಂಗ್ ವಿದ್ಯಾರ್ಥಿ ಶ್ರೀ ಅದಿನಾರಾಯಣ ಇವರಿಂದ ರಚಿಸಲ್ಪಟ್ಟ ಗಡಿಯಾರ, ನೀರಿನ ಪಂಪು ಮತ್ತು ರೆಕಾರ್ಡ್ ಪ್ಲೇಯರ್‌ಗಳ ಪ್ರದರ್ಶನವಾದ ಮೇಲೆ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಂದ ಲಘು ಸಂಗೀತ ಕಾರ್ಯಕ್ರಮವಿತ್ತು. ಆನಂತರ ಡಾ|| ಶಾಂತಾರಾಮ್‌ರಿಂದ ಧನ್ಯವಾದ ಸಮರ್ಪಣೆಯಾಯಿತು.

ವಿಜ್ಞಾನ ಸುಧೆ

ಆಶ್ಮನ್ಮತ್ತಾತ್ತಾ ಪ್ರಲಪತೋ
ಬಾಲಾಜ್ಞ ಪರಿಜಲ್ಪತಃ ।
ಸರ್ವತಃ ಸಾರಮಾದದ್ಯಾ
ದ್ಧರ್ಮಜ್ಞ ಇವ ಕಾಂಚನಂ॥

ಕಲ್ಲುಗಳಿಂದ ಚನ್ನದ ಹರಳನ್ನು ಪಡೆಯುವಂತೆ ನಿರರ್ಥಕವಾಗಿ ಮಾತಾಡುವ ಮಗುವಿಂದಲೂ ಪ್ರಯೋಜನಕಾರಿ ವಿಚಾರಗಳನ್ನು ಗ್ರಹಿಸಬೇಕು.

ಮುಖ ಚಿತ್ರ

ನುದ್ರಾಸಿನ ರಾಜಕಾರಣದಲ್ಲಿ ಗೆದ್ದು, ನವದೆಹಲಿಗೆ ಹಾರಿ, ಅಲ್ಲಿ ದಿಗ್ವಿಜಯ ಭೇರಿ ಬಾರಿಸಿ ಇದೀಗ ನಿವೃತ್ತರಾಗಲಿರುವ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜ.

ಕೋರ್ಟ್ ನೋಟೀಸ್

In the Court of the Munsif of Coondapoor.

S. C No. 527/1967

Shreenappa Shetty ... Plaintiff

and

Nanu Menya, son of Hollaramane Naga Menya, Kaitbelthur Village, Coondapoor Taluk, Post Kaitbelthur.

To

The Defendant

Please take notice that the above suit filed by the plaintiff against you for recovering amounts due in respect of the pronote executed by you on 20—7—61, stands posted to 5-1-68 at 11A.M. before the above Court. If you fail to appear on that day at 11 A M. you will be declared Ex Parte and further orders will be passed in your absence.

(By order)

Sd K. Ramappayya,
B.A.,B.L.,
Advocate for Plaintiff.

Coondapoor, 15-12-1967.

ಮುಂದು

ಪ್ರದಕ್ಷಿಣೆ

ಸಂಪಾದಕೀಯಗಳಿಂದ ಹೆಚ್ಚು ಚಿಂತೆ

ರಾಜ್ಯದ ಎನ್. ಜಿ. ಓ. ಗಳಿಗೆ ಕೇಂದ್ರ ಮಟ್ಟದಲ್ಲಿ ತೆಟ್ಟಿ ಭತ್ತೆ ನೀಡಬೇಕೆಂಬ ವಿಚಾರದಲ್ಲಿ ಮಂತ್ರಿ ಮಂಡಳವು ಇನ್ನೂ ಯಾವ ನಿರ್ಧಾರವನ್ನೂ ಕೈಕೊಂಡಿಲ್ಲ. ರಾಜ್ಯದ ಎನ್‌ಜಿಓಗಳೂ ಈ ಬಗ್ಗೆ ಬೇಡಿಕೆಯನ್ನು ಸಲ್ಲಿಸಿ ಹಲವು ಸಮಯ ಕಳೆದಿಯಿತು. ಹುಕ್ಕೋಳಿ ಆಯೋಗವೂ ಸಿಫಾರಸು ಮಾಡಿ, ರಾಜ್ಯ ಸರಕಾರಕ್ಕೆ ವರದಿ ಕಳಿಸಿದೆ. ಈ ವಿಚಾರವನ್ನು ಸಚಿವ ಸಂಪುಟದ ಸಭೆಯಲ್ಲಿ ಪರಿಶೀಲಿಸಲಾಗುವುದೆಂದೂ ಕೆಲವು ಬಾರಿ ವರದಿಯೂ ಆಗಿತ್ತು. ಆದರೆ, ಸಭಾನಂತರ ಬಂದ ವರದಿ ಮಾತ್ರ ನಿರುತ್ಸಾಹಕಾರಿಯಾಗಿತ್ತು. ವಿಷಯವೆಂದರೆ, ಈ ಸಂಬಂಧದಲ್ಲಿ ತಟಿಬಿಚ್ಚುವುದಕ್ಕೂ ಸಚಿವರಿಗೆ ಬಿಡುವು ದೊರೆಯದೆ ಹೋದುದು.

ಮದ್ರಾಸ, ಕೇರಳ ಮೊದಲಾದ ಹೆಚ್ಚಿನ ರಾಜ್ಯ ಸರಕಾರಗಳೂ ಈಗಾಗಲೇ ಕೇಂದ್ರ ಮಟ್ಟದ ತೆಟ್ಟಿ ಭತ್ತೆಯನ್ನು ಕೊಡ ಮಾಡಿವೆ ಅಲ್ಲಿ ಯಾವ ಕೋಲಾಹಲ, ಸತ್ಯಾಗ್ರಹ-ಸಂಪುಟಗಳ ಆವಶ್ಯಕತೆ ಕಾಣಲಿಲ್ಲ. ನಮ್ಮ ಕರ್ನಾಟಕ ಸರಕಾರದ ಅರ್ಥ ಮಂತ್ರಿ ರಾಮಕೃಷ್ಣ ಹೆಗ್ಗಡೆಯವರು ಮತ್ತೆ ತಮ್ಮ ಹಳೆಯ ರಾಗವನ್ನೇ ವಿಧಾನ ಸಭೆಯಲ್ಲಿ ಹಾಡಿನ್ದನ್ನು ಕಾಣುವಾಗ, ಸದ್ಯ ಇವರು ತೆಟ್ಟಿ ಭತ್ತೆ ಹೆಚ್ಚಿಸಲು ಸಿದ್ಧರಿಲ್ಲವೆಂದೇ ಹೇಳಬೇಕು. ಶ್ರೀ ಟಿ. ಆರ್. ಶಾಮಣ್ಣನವರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಅವರಂದ ಮಾತುಗಳು ಇವು— 'ಸರಕಾರದ ನಾನ್‌ಗಜೆಟೆಡ್ ನೌಕರರಿಗೆ ಕೇಂದ್ರದ ತೆಟ್ಟಿ ಭತ್ತೆ ನೀಡುವ ವಿಷಯ ಸರಕಾರದ ಪರಿಶೀಲನೆಯಲ್ಲಿದೆ. ಆದರೆ, ನೀಡಬೇಕಾದ ಅಗತ್ಯ ವಿದೆಯೆಂದು ಹೇಳಬಯಸುವುದಿಲ್ಲ. ಕೇಂದ್ರ ಸರಕಾರಕ್ಕೆ ಹೆಚ್ಚಿನ ತೆಟ್ಟಿ ಭತ್ತೆ ಕೊಟ್ಟಿದೆಯೆಂದ ಮಾತ್ರಕ್ಕೆ ರಾಜ್ಯ ಸರಕಾರವೂ ಕೊಡಬೇಕೆಂಬ ನಿರ್ಬಂಧವಿಲ್ಲ. ಕೇಂದ್ರ ಸರಕಾರ ತನ್ನ ಹಣಕಾಸಿನ ಸ್ಥಿತಿಗೆ ಅನುಗುಣವಾಗಿ ನಿರ್ಧಾರ ಕೈಕೊಳ್ಳುತ್ತದೆ; ಆದರೆ, ರಾಜ್ಯ ಸರಕಾರ ತನ್ನ ಹಣಕಾಸಿನ ಪರಿಸ್ಥಿತಿಯನ್ನು ಸಂಗಣನೆಗೆ ತೆಗೆದು ಕೊಂಡು ವಿಷಯವನ್ನು ಪರಿಶೀಲಿಸಬೇಕಾಗಿದೆ...'

ಶಾಸಕರ ವೇತನ—ಭತ್ತೆಗಳನ್ನು ಹೆಚ್ಚಿಸುವ ಶಾಸನ ಮುಂದೆ ಬಂದಾಗ ಅದನ್ನು ಮಂಜೂರು ಮಾಡಲು ಯಾವ ಆರ್ಥಿಕ ಪರಿಶೀಲನೆಯೂ ಬೇಡವಾದ ಸಚಿವರು ತಮ್ಮ ಮಾತುಗಳಿಂದ ಎನ್‌ಜಿಓ ಗಳ ಸಹನೆಯನ್ನು ಬೆಂಕಿಗೆ ಹಿಡಿಯುತ್ತಿದ್ದಾರೆಂದೇ ಹೇಳಬೇಕು. ಜೀವನ ವೆಚ್ಚ ಏರುವುದು ಶಾಸಕರಿಗೆ ಮಾತ್ರವಲ್ಲ, ಸಾಮಾನ್ಯ ಜನತೆಗೂ ಎಂಬುದನ್ನು ಅವರು ಮರೆತರು, ಮತ್ತೆ ಎನ್‌ಜಿಓಗಳು ಕಿಂಡಿಕಲ್ಲು ಸುಮ್ಮಗಿರುವುದಿಲ್ಲ.

೦ ೦ ೦

ದೇಶದ ಸಹಕಾರಾತ್ಮಕತೆಯನ್ನು ದಿಕ್ಕು ತಪ್ಪಿಸಿ ಭೂಮಿಯ ಸಶ್ಚಿಮಭಾಗವನ್ನೂ ಪ್ರಜ್ಞಾಪೂರ್ವಕವಾಗಿ ಪ್ರಜ್ಞಾಪೂರ್ವಕವಾಗಿ ಭೂತಂಸ ದೇಶವನ್ನೇ ಒಂದು ಬಾರಿ ನಡುಗಿಸಿ ಬಿಟ್ಟಿತು. ಹಲವಾರು ಸಹಜ ಮತ್ತು ಕೃತಕ ಸಮಸ್ಯೆಗಳಿಂದ ಕಂಪಿಸುತ್ತಿದ್ದ ಭಾರತಕ್ಕೆ ದೊಂದು ಪೃಥ್ವಂಪನವೆನ್ನುವ ಗತ್ಯಂತರವಿಲ್ಲ. ಹಲವಾರು ಬೃಹತ್ ನಗರಗಳು ಬರಿಯ ಕಂಪನಕ್ಕೊಳಗಾದರೆ, ಕೊಯ್ನಾ ನಗರವೇ ಭೂಕಂಪಕ್ಕೆ ಆಹುತಿಯಾಗಿ ಹೋಯಿತು. ಪರಿಣಾಮವಾಗಿ ಸೇಡಾ ಲಂಕಂಶ ನಗರಪು ವಣ್ಣಿನಡಿಯಲ್ಲಿ ಹುಗಿದು ಹೋಗಿದೆ; ಈಗಾಗಲೇ ವರದಿಯಾದಂತೆ ಸುಮಾರು ಇನ್ನೂರಕ್ಕೂ ಮಿಕ್ಕಿ ಮೃತ್ಯು ಸಂಭವಿಸಿದೆ; ೧೦ ಕೋಟಿ ರೂಪಾಯಿಗಳ ಹಾನಿ ತಟ್ಟಿದೆ. ಕೈಟ್ಟಾಪ್ಪದಲ್ಲಿ [ಅವಿಭಾಜಿತ ಭಾರತ] ನಡೆದಿದ್ದ ಭೂಕಂಪದ ನಂತರ ಸಂಭವಿಸಿದ ದೊಡ್ಡ ಪ್ರಮಾಣದ ಭೂಕಂಪಗಳಲ್ಲಿ ಇದುವೇ ಮೊದಲನೆಯದು ಎನ್ನಬಹುದು.

ನಿರ್ವಾಸಿತರ ಪುನರ್ವಸತೀಕರಣ, ಗಾಯಾಳುಗಳ ಚಿಕಿತ್ಸೆ ಇತ್ಯಾದಿ ಕಾರ್ಯಗಳು ಕೂಡಲೇ ಆರಂಭವಾಗಿವೆ. ಮಹಾರಾಷ್ಟ್ರದ ವಿದ್ಯುದ್ಯೋಜನೆಗಳಲ್ಲಿ ಹೆಸರಾದ 'ಕೊಯ್ನಾ' ಯೋಜನೆಗೆ 'ಯಶವಂತ ಯೂ ಸಂಭವಿಸಲಿಲ್ಲ, ಸುದೈವ. ವಿದ್ಯುತ್ ಸರಬರಾಯಿ ಯಂತ್ರಗಳು ಮತ್ತೆ ಜಾತಳಿಯಲ್ಲಿ ಹುದುಗಿದ್ದು ಅನೇಕರಿಂದ ಕೆಲವು ಮಾಡಿಸಬೇಕಾಗಿದೆಯಷ್ಟೇ. ಅಂತೂ ತಲೆಗೆ ಬರುವ ಗಂಡಾಂತರ ಬೆರಳಲ್ಲಿ ಹೋಯಿತು ಎಂದು ಮಹಾರಾಷ್ಟ್ರ ಸರಕಾರ ತುಸು ನಿರಾಳವಾನ ಪಡಬಹುದು. ಆದರೆ, ಕೊಯ್ನಾ ನಗರದ ಅಸುಪಾಸಿನಲ್ಲಿ ಮತ್ತೂ ಕೆಲವೊಮ್ಮೆ ಕಂಪನಗಳು ನಡೆದ ವರದಿಗಳು ಬಂದಿವೆ, ಮುಂದೆಯೂ ನಗರಕ್ಕೆ ಭೂಕಂಪದ ಭೀತಿಯಿದೆಯಂತೆ. ಈ ಬಾರಿಯು ಭೂಕಂಪ ಕೊಯ್ನಾ ನಗರವನ್ನೇ ಕೇಂದ್ರ ಬಿಂದುವಾಗಿ ಆರಿಸಿಕೊಂಡಿರುವುದರಿಂದ ನೆಮ್ಮದಿಯ ಉಸಿರು ಇಷ್ಟರಲ್ಲೇ ಬಿಡುವಂತಿಲ್ಲ.

ಕರ್ನಾಟಕ ಸರಕಾರವು ಕೊಯ್ನಾ ಸಂತ್ರಸ್ತರಿಗೆಂದು ಒಂದು ಲಕ್ಷ ರೂಪಾಯಿಗಳನ್ನು ಕೊಡಮಾಡಿದೆ. ಇದರ ಪರಿಣಾಮವೇನಾಗ ಬಹುದು? ಕರ್ನಾಟಕ ಮಹಾರಾಷ್ಟ್ರ ಸೀಮಾ ವಿವಾದದಲ್ಲಿ ತಂತಮ್ಮ ನೀತಿಗಳಿಗೆ ಪಟ್ಟು ಹಿಡಿದಿರುವ ಎರಡು ರಾಜ್ಯಗಳಲ್ಲಿ ಸೌಹಾರ್ದ ತಿಳುವಳಿಕೆ ಹೆಚ್ಚಬಹುದೆ? ಸಾಂಗಲಿಯಲ್ಲಿ ನಡೆಯುವ ಕಾಂಗ್ರೆಸ್ ಅಧಿವೇಶನದ ಮೇಲೆ ಕೊಯ್ನಾ ಪ್ರಭಾವ ಬೀರ ಬಹುದೆ? ಮಹಾಜನರ ನಿರ್ಧನದೊಂದಿಗೆ ಮಹಾಜನ ವರದಿಯೂ ತಿಪ್ಪೆಗೆ ಬಿತ್ತೆಂದು ತಿಳಿಯಬಹುದೆ?

೦ ೦ ೦

ಲೋಕ ಸಭೆಯಲ್ಲಿ, ವಿವಾದ—ಗದ್ದಲಗಳಿಗೂ ಉತ್ತರ ಭಾರತದಲ್ಲಿ ಹಿಂಸಾತ್ಮಕ ಚಟುವಟಿಕೆಗಳಿಗೂ ಕಾರಣವಾದ, ಭಾಷಾ ವಿಧೇಯಕ ಸಾಮಾನ್ಯ ಒಪ್ಪಿಗೆಯನ್ನು ಪಡೆಯಿತು. ವಿವರ ಚರ್ಚೆಗೆ ಆರಂಭವಾಯಿತು. ಸಾಕಷ್ಟು ತಿದ್ದುಪಡಿಗಳನ್ನು ಪಡೆದು ಮಸೂದೆಯು ಶಿಸ್ತಿನವಾಗಿ ಪರಿಣಮಿಸುವ ನೀರೀಕ್ಷೆಯಿದೆ. ಭಾಷಾ ಸಂಬಂಧದಲ್ಲಿ ವಿವಿಧ ಪಕ್ಷಗಳ ನಿಲುವು ಒಂದೊಂದಾಗಿದೆ. ಅಧಿಕಾರಾರೂಢ ಪಕ್ಷ ಕಾಂಗ್ರೆಸ್‌ನಲ್ಲೂ ಭಿನ್ನಮತ ವಿರುವುದು ಗುಣನೀಯವೇ. ಸೇರ್ ಗೋವಿಂದದಾಸರಂತಹ ಶಿಷ್ಟಾವಂತ ಕಾಂಗ್ರೆಸಿಗರೂ ಕಟ್ಟಾ ಹಿಂದೀವಾದಿಗಳೂ ವಿಧೇಯಕಕ್ಕೆ ವಿರೋಧವಾಗಿ ಮತ ನೀಡಿದರು. ಇನ್ನು ಕೆಲವು ಸದಸ್ಯರು ಮತದಾನ ತಂತ್ರವನ್ನು ಬಯಸಿದರು. ಉತ್ತರ ಪ್ರದೇಶದ ಎಸ್‌ಎಸ್‌ಪಿ ಸಚಿವರೇ ಕಾನೂನನ್ನು ಉಲ್ಲಂಘಿಸಿ ಇಂಗ್ಲಿಷ್ ವಿರೋಧಿ ಚಳವಳಿಯಲ್ಲಿ ಭಾಗವಹಿಸಿ ದಂಡನೆಗೂ ಗುರಿಯಾದರು. ಸ್ವತಂತ್ರ ಭಾರತದಲ್ಲಿ ಸಚಿವರ ಬಂಧನವನ್ನು ಮೊದಲ ಬಾರಿಗೆ ಮಾಡಿಸಿಕೊಂಡ ಕೀರ್ತಿ ಭಾಜನರಾದರು.

ಭಾಷಾ ವಿಧೇಯಕಕ್ಕೆ ಇಷ್ಟೊಂದು ವ್ಯಾಮುಖ್ಯವೇಕೆ ಬಂತು? ಇದಕ್ಕೆ ಏಕ್ಯ ಭಾವನೆಯ ಅಭಾವ ಮತ್ತು ಮಿತಿಮೀರಿದ (ಸ್ವ?) ಭಾಷಾಭಿಮಾನ ಅಥವಾ (ಪರ?) ಭಾಷಾ ವಿರೋಧ ಭಾವನೆಯೇ ಕಾರಣವೆನ್ನಬೇಕು. ಭಾರತದಂತಹ ಬಹುಭಾಷಾ ದೇಶಕ್ಕೆ ಸದ್ಯ ತ್ರಿಭಾಷಾ ಸೂತ್ರವೊಂದೇ ಪರಿಹಾರ. ಹಿಂದೀ—ಇಂಗ್ಲಿಷ್ ವಿರೋಧಿಗಳು ಸಾಮಾನ್ಯವಾಗಿ ಸಮಪ್ರಮಾಣ (?)ದಲ್ಲಿಯೇ ಇರುವುದರಿಂದ ಹಿಂಎಯೊತನ ಇಂಗ್ಲಿಷ್ ಭಾಷೆಯನ್ನೂ ವ್ಯಾವಹಾರಿಕವಾಗಿ ಮುಂದುವರಿಸಲು ಅವಕಾಶ ಕೊಡುವುದರಿಂದಲೇ ಸಮಸ್ಯೆ ಒಗೆಹರಿಯಬಹುದು. ಪ್ರಾದೇಶಿಕ ಭಾಷಾಮಾಧ್ಯಮವನ್ನೇ ಎಲ್ಲ ರಾಜ್ಯಗಳೂ ಸ್ವೀಕರಿಸಲು ಮುಂಚೆ ಬಂದಿರುವುದರಿಂದ, ಮುಂದೆ ಇಂಗ್ಲಿಷ್ ವೇಲಿನ ಮಿತಿಮೀರಿದ ಮೋಹ ಕಾಲಕ್ರಮೇಣ ತಾನಾಗಿಯೇ ಕಡಿಮೆಯಾಗುತ್ತ ಬರಬಹುದು. ಸ್ವೇಚ್ಛೆಯಿಂದಲೇ ಹಿಂದೀ ಕಲಿಯುವವರ ಸಂಖ್ಯೆಯೂ ಹೆಚ್ಚುವುದು, ಹಿಂದಿಯ ಮೇಲಿನ ವಿರೋಧವೂ ದೂರವಾಗಿ ಸಮಸ್ಯೆ ತಾನಾಗಿಯೇ ಬಗೆಹರಿಯುವ ದಿನವನ್ನು ಎದುರು ನೋಡಬೇಕೇ ಹೊರತು, ಒತ್ತಾಯ, ಬಲವಂತ, ಆಗ್ರಹಗಳಿಂದಾಗಲೀ, ಪ್ರದರ್ಶನ- ಚಳುವಳಿಗಳಿಂದಾಗಲೀ ಯಾವ ಸಮಸ್ಯೆಯೂ ಪರಿಹಾರವಾಗುವುದಿಲ್ಲ. ನಮ್ಮ ಎಂಪಿಗಳೂ ಸಾರ್ವಜನಿಕರೂ ಸತ್ಯಾನ್ವೇಷಕರಾಗುವ ಅವಶ್ಯಕತೆ ಇಂದು ಹಿಂದಿಗಿಂತ ಹೆಚ್ಚು ಇದೆ ಎನಿಸುತ್ತದೆ.

Announcement

"NAVAYUGA" established in 1921 by a nationalist leader of South India, Sri A. B Shetty proposes a sumptuous REPUBLIC DAY ISSUE on January 26, 1968 containing essays, skits and short stories by well-known authors of Karnataka.

Ever since it was born in a midst the din and bustle of our freedom struggle, "NAVAYUGA" has been serving the nation by disseminating news and views without fear or favour. Rightly has it carved for itself a unique position in the field of Kannada journalism.

In Independent India, journals like "NAVAYUGA" perform a significant part in spreading the message of economic and industrial development among the people of the country. If democracy is to survive in India, it is necessary that a bridge of sympathy and understanding must be erected between the leaders on the one hand and the public on the other.

Successful salesmanship likewise depends on your goods and services being understood and their value appreciated by the consumer. The Republic Day Special of the "NAVAYUGA" is a fitting instrument to publicize your products in the wide countryside of Mysore State.

Please permit us to serve you.

ADVERTISEMENT RATES.

Full Page	... Rs. 200/-	Back Cover Page	...Rs. 500/-
Half Page	... Rs 100/-	Inside 1st Cover Page	...Rs. 400/-
Quarter Page	... Rs. 60/-	Inside 2nd Cover Page	...Rs. 300/-

MECHANICAL DATA

Paper Size ... 15" × 10" (37·5 Cm × 25 Cm.) Size of type page ... 13" × 8" (34·5 Cm. × 20 Cm.)

Date of Publication. 25—1—1968

Kindly send the advertisement matter to reach us on or before 10—1—1968.

Advt. Manager.

NaVayuga, Udipi.

ಸಚಿತ್ರ ಹೊಸ ಪುಸ್ತಕ

ಲಾಲ್ ಬಹಾದುರ್ ಶಾಸ್ತ್ರಿ

ಲೇಖಕರು—

ಬಿ. ಆರ್. ಪ್ರಾಣೇಶ ರಾವ್, ಎಂ.ಎ.

ಮೈಸೂರು

ಸರಳವೂ, ತ್ಯಾಗಮಯವೂ ಆಗಿದ್ದ ಶ್ರೀ ಶಾಸ್ತ್ರಿಯವರ ಸಾರ್ಥಕ ಜೀವನದ ಪರಿಚಯ

ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕ

ಬೆಲೆ ರೂ. 2/— ಮಾತ್ರ,

ಅಂಚೆ ವೆಚ್ಚ ಸ್ವತ್ಯೇಕ

ಪ್ರತಿಗಳಿಗೆ—

ನವಭಾರತ ಪುಸ್ತಕ ಭಂಡಾರ,

ಉಡುಪಿ

ಮೂಕ ವರ್ಗಗಳೆಡೆಯಲ್ಲಿ ಸ್ನೇಹ!! ವೈರ!!

ಸಸ್ಯ - ಕೀಟ ಸಂಬಂಧ

ಬರೆದವರು. ಶ್ರೀ ರಾಜಗೋಪಾಲ. ಪಿ. ಕೆ.

ಬುದ್ಧಿ ಜೀವಿಯೂಪ ಮಾನವನಿಗಂತ ಎಷ್ಟೋ ಕೆಳಮಟ್ಟದವುಗಳೆಂದು ಪರಿಗಣಿಸಲ್ಪಟ್ಟ ಕೀಟ ಹಾಗೂ ಸಸ್ಯ ವರ್ಗ— ಇವುಗಳೆರಡರಲ್ಲೂ ಪರಸ್ಪರ ಹರಡಿರುವ ಭಾವ ಮಯವಾದ, ಸ್ನೇಹಪೂರ್ಣವಾದ ಕೃತಜ್ಞತಾ ಮನೋಭಾವವನ್ನು ಅವುಗಳಲ್ಲಿ ಹಬ್ಬಿರುವ ಸಹಕಾರ ಸಂಬಂಧದ ಬಗ್ಗೆ ಒಂದು ಹೆಕ್ಕಿ ನೋಟವನ್ನು ಹರಿಸಿದಾಗ ಮಾನವರಾದ ನಾವು ಕೆಲವೊಮ್ಮೆ ನಾಚಿಕೆ ಪಡಬೇಕಾದ ಸ್ವಸಂಗ ಬರಬಹುದು. ಏಕೆಯೆಂದರೆ ಸಣ್ಣ ಚೂರು ಉಪಹಾರವನ್ನು ಕಂಡರೆ ತನ್ನ ಬಳಗವನ್ನೇ ಕರೆಯುತ್ತದೆ. ಇದುವೆಯೊಂದು ಸಕ್ಕರೆಯ ಕಣವನ್ನು ಕಂಡರೆ ತನ್ನ ಸಂಸಾರವನ್ನೇ ಅಲ್ಲಿಗೆ ಕರೆತರುತ್ತದೆ. ಇಂತಹ ಒಗ್ಗಟ್ಟಿನ ಜೀವನ, ನಾಮೂಹಿಕ ಬಾಂಧವ್ಯ, ರೀತಿ ಕಟ್ಟಳೆ ಅಂತಹ ಕಳೆ ಮಟ್ಟದ ಜೀವಿಗಳಲ್ಲೂ ಇರುವಾಗ ಮಾನವರಾದ ನಮ್ಮಲ್ಲಿ ಕೆಲವೊಮ್ಮೆ ಇಲ್ಲದೇ ಹೋಗುವುದೂ ಉಂಟು. ಇಡಿ ವಿಶ್ವದಲ್ಲ ತನ್ನ ಸ್ವಂತ ಆಹಾರವನ್ನು ತಾನೇ ತಯಾರಿಸಲು ಹಸಿರನ್ನು ಹೊಂದಿದ ಸಸ್ಯಗಳಿಗೆ ಮಾತ್ರ ಸಾಧ್ಯ. ಈ ದೃಷ್ಟಿಯಿಂದ ನೋಡಿದರೆ ಮಾನವರಾದ ನಾವು ಸಂಪೂರ್ಣವಾಗಿ ಸಸ್ಯ ಸಮುದಾಯ ಹಾಗೂ ಸಸ್ಯ ಸಮುದಾಯವನ್ನವಲಂಬಿಸಿದೆ. ನಾವೆಲ್ಲರೂ ಸಸ್ಯ ಸಂಪತ್ತಿನ ಒಂದು ಮೂರಂಶವಾಗಿ ಪರಿಣಮ

ವಿಶೇಷ ಲೇಖನ
ಕುಟುಂಬ ಯೋಜನಾ
ದ್ವಿಸಪ್ತಾಹ 1967
ದಶಂಬರ 16ರಿಂದ 31

ಭಾರತ ಕುಟುಂಬ ಯೋಜನೆಯ ಧ್ಯೇಯ

ಲೇ: ಡಾ। ಎಸ್. ಚಂದ್ರಶೇಖರ್
(ಆರೋಗ್ಯ ಹಾಗೂ ಕುಟುಂಬ
ಯೋಜನಾ ಶಾಖೆಯ ಸ್ಟೇಟ್
ಸಚಿವರು)

ಭಾರತದ ಜನಸಂಖ್ಯೆ ಪ್ರತಿದಿನ 34,650ರಷ್ಟು ಏರುತ್ತದೆ. ಈ ವರ್ಷ ಅಕ್ಟೋಬರ್ ನುದ್ಯದಲ್ಲಿ ಜನಸಂಖ್ಯೆ 51 ಕೋಟಿ 50 ಲಕ್ಷ ನೀರಿತು. ಶೇಕಡ 2.5 ಪ್ರಮಾಣದಲ್ಲಿ ವರ್ಷಂಪ್ರತಿ ಜನ ಸಂಖ್ಯೆ ಏರುತ್ತಿದೆ.

ಪಾಶ್ಚಾತ್ಯ ದೇಶಗಳಲ್ಲಿ ಆರ್ಥಿಕ ಬೆಳವಣಿಗೆಯೊಂದಿಗೆ ಜನಸಂಖ್ಯೆ ಕುಗ್ಗುತ್ತದೆ. ಆದರೆ ಭಾರತದಲ್ಲಿ ಆರ್ಥಿಕ ಬೆಳವಣಿಗೆಗೆ ಅವಕಾಶ ಮಾಡಿಕೊಡಲು ಜನನ ನಿಯಂತ್ರಣ ಮಾಡುವುದು ಅನಿವಾರ್ಯವಾಗಿರುವುದು ವಿರೋಧಾಭಾಸದ ಸಂಗತಿಯಾಗಿದೆ.

ಕಳೆದು ಎರಡು ದಶಕಗಳಲ್ಲಿ ಭಾರತದಲ್ಲಿ ಜನಸಂಖ್ಯೆ ಕುಗ್ಗಿಸಿ ಕೈಕಾರಿಕೆ ಹಾಗೂ ಕೃಷಿ ಅಭಿವೃದ್ಧಿ ತ್ವರಿತಗೊಳಿಸಲು ಕಾರ್ಯಶೀಲರಾಗಿದ್ದೇವೆ. ಅಭಿವೃದ್ಧಿ ಕ್ಷೇತ್ರದಲ್ಲಿ ಮಹಾ ಜಿಗಸ್ಸು ಗಳಿಸಿದ್ದೇವೆ. ವರ್ಷಕ್ಕೆ ಶೇಕಡ 3. 8 ಪ್ರಮಾಣದಲ್ಲಿ ಆರ್ಥಿಕ ಮುನ್ನಡೆಯಾಗಿದೆ.

ನಿಯಂತ್ರಿತ ಕುಟುಂಬ ಹೊಂದಿರುವಂತೆ ಜನರ ಮನವೊಲಿಸಿ, ಶಿಕ್ಷಣ ನೀಡಿ ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ಅಳವಡಿಸುವುದೇ ಪ್ರಥಮ ಕರ್ತವ್ಯವಾಗಿದೆ. ಆಗಾಧವಾಗಿ ಹರಡಿರುವ ಅನಕ್ಷರತೆ ಬದಲಾವಣೆಗೆ ಹಿಂದರಿಯುವಿಕೆ, ಭಾಷಾ ವೈವಿಧ್ಯ, ವಿವಿಧ ಆಚರಣೆಗಳು ಹಾಗೂ ಬೃಹತ್ತಾಗಿ ವ್ಯಾಪಿಸಿರುವ ದೇಶ-ಇವುಗಳನ್ನು ಜಯಿಸಿ ಕುಟುಂಬ ಯೋಜನೆಯ ಸಂದೇಶ ಫಲಕಾರಿಯಾಗಿ ಮಾಡುವುದು ಮಹಾ ಸಾಹಸವೇ ಸರಿ. 5,60,000 ಹಳ್ಳಿಗಳು 3, 000 ನಗರ, ಪಟ್ಟಣಗಳಲ್ಲಿ ವಾಸಿಸುವವರಲ್ಲಿ ಶೇಕಡ 20 ಜನ ಸಂಖ್ಯೆಗೆ ಮಾತ್ರ ಜನತಾ ಸಂಪರ್ಕ ಮಾಧ್ಯಮಗಳಾದ ರೇಡಿಯೊ, ಪತ್ರಿಕೆ, ಚಲನಚಿತ್ರ ಮತ್ತು ಟೆಲಿವಿಷನ್ ಮೂಲಕ ಈ ಯೋಜನೆಯ ಸಂದೇಶ ತಲುಪಿಸಲಾಗಿದೆ.

ಈ ಸವಾಲನ್ನು ತ್ವರಿತಗತಿಯಲ್ಲಿ ಅತ್ಯಂತ ಜಾಣ್ಮೆಯಿಂದ ಹಾಗೂ ಸಂಘಟನೆಗಳಿಂದ ಎದುರಿಸಬೇಕಾಗಿದೆ. ಆಡಳಿತಗಾರರು ಹಾಗೂ ತಂತ್ರಜ್ಞರಿಗೆ ಇದೊಂದು ಮಹಾ ಪ್ರಯೋಗದ ಕಾರ್ಯ.

ಯೋಜನೆಯ ಧ್ಯೇಯ

ಭಾರತದ ಕುಟುಂಬ ಯೋಜನಾ ಕಾರ್ಯಕ್ರಮದ ನೀತಿ ಪ್ರಣಾಳಿಕೆ ಈ ರೀತಿಯಿದೆ:—

1. ಜನತೆ ಕುಟುಂಬ ಯೋಜನೆ ಸ್ವೀಕರಿಸಲು ಅಗತ್ಯವಾದುವಂತಹ ಸೇವೆಗೆ ಸಿದ್ಧತೆ ಮಾಡುವುದು.

2. ದಂಪತಿಗಳು ಮಾತ್ರವೇ ತಮಗೆ ಅಗತ್ಯವಾದ ಮಕ್ಕಳ ಸಂಖ್ಯೆ ನಿರ್ಣಯಿಸಬೇಕು. ಈ ಕಾರ್ಯದಲ್ಲಿ ಪರಸ್ಪರ ಹೊಣೆಗಾರಿಕೆ; ಮಕ್ಕಳನ್ನು ಪಾಲಿಸುವ ಕರ್ತವ್ಯ ಹಾಗೂ ಸಮಾಜ ಯೋಜನೆ, ಅವರು ಪರಿಶೀಲಿಸುವಂತೆ ಮಾಡಬೇಕು.

3. ಜನತೆಗೆ ಸಮೀಪದಿಂದಲೇ ಸೇವೆ ಸಲ್ಲಿಸಲು ಸಜ್ಜಾಗುವುದು.

4. ಜನತೆಯು ಅಂಗೀಕರಿಸುವ ಮಾಧ್ಯಮದ ಮೂಲಕ, ನಂಬಿಕೆಗೆ, ಅರ್ಹರಾದ ನಾಯಕರ ಮೂಲಕ ಧಾರ್ಮಿಕ ಪ್ರವೃತ್ತಿ, ನೈತಿಕ ಧರ್ಮ, ಕುಟುಂಬ ಜೊತೆಗಾರಿಕೆಗೆ ಲೋಪವಾಗದಿರುವ ರೀತಿಯಲ್ಲಿ ಈ ಕಾರ್ಯಕ್ರಮಕ್ಕೆ ಆಕರ್ಷಿಸಬೇಕು.

ಈ ಕಾರ್ಯಕ್ರಮವು ತೀವ್ರಗತಿಯಲ್ಲಿ ಸಾಮಾಜಿಕ ಪರಿವರ್ತನೆ ಮೂಡಿಸಲು ಕರ್ತವ್ಯ ಪ್ರಜ್ಞೆಯಿಂದ ಹಾಗೂ ಮಾನವೀಯ ದೃಷ್ಟಿಯಿಂದ ಕಾರ್ಯಶೀಲವಾಗಬೇಕಾಗಿದೆ. ಇದಕ್ಕೆ ಸಹಕಾರಿಯಾಗಿ ಆಡಳಿತ, ಹಣ, ತರಬೇತಿ ಹಾಗೂ ಸಂಶೋಧನೆಗಳಿರಬೇಕು. ಕಾಲಾವಧಿಗೆ ಸೂಕ್ತವಾಗಿ ಗುರಿ ಸಾಧಿಸಲು ಮೌಲ್ಯ ಮಾಪನದ ನಿಯಂತ್ರಣವಿರಬೇಕು. ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ಈ ಸಹಾಯ ಒದಗಿ ಬಂದಿದೆ.

ಆಡಳಿತ ಸಹಾಯ

ರಾಷ್ಟ್ರೀಯ ಮಟ್ಟದಲ್ಲಿ ಆರೋಗ್ಯ ಹಾಗೂ ಕುಟುಂಬ ಯೋಜನಾ ಮಂತ್ರಿ ಶಾಖೆಗೆ ಸೇರಿರುವ ಪ್ರತ್ಯೇಕ ಶಾಖೆಯಿದೆ. ಯೋಜನಾ ಕಾರ್ಯಕ್ರಮದ ಚಟುವಟಿಕೆಗಳ ಸಮನ್ವಯ ಹಣ ಒದಗಿಸುವುದು ಹಾಗೂ ರಾಜ್ಯಗಳೊಂದಿಗೆ ಚರ್ಚೆ ನಡೆಸಲು ಈ ಶಾಖೆ ಜವಾಬ್ದಾರಿ ಹೊಂದಿದೆ. ರಾಜ್ಯಗಳು ಈ ಶಾಖೆಯಿಂದ ಶೇಕಡ 100 ರ ಅನುದಾನ, ವೆಚ್ಚವನ್ನೂ, ಶೇಕಡ 90 ಆವರ್ತ ವೆಚ್ಚವನ್ನೂ ಪಡೆಯುತ್ತವೆ.

ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲೂ ಇದೇ ರೀತಿ ಕಾರ್ಯ ಸಮನ್ವಯ ನಡೆಯುತ್ತದೆ. ಕ್ಷೇತ್ರಮಟ್ಟದಲ್ಲಿ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರವೂ 80,000 ಜನರಿಗೆ ಅನುಕೂಲವಾಗುವಂತೆ ಕುಟುಂಬ ಯೋಜನಾ ಚಿಕಿತ್ಸಾಲಯ ಹೊಂದಿದೆ. ಈ ಆರೋಗ್ಯ ಕೇಂದ್ರ ಹೊಂದಿರುವ ಎಂಟು ಉಪಕೇಂದ್ರಗಳು ಪ್ರತಿ ಸಾವಿರ ಜನರಿಗೂ ಕುಟುಂಬ ಯೋಜನೆಯ ಸಲಹೆ, ಸೇವೆಗಳನ್ನು ಒದಗಿಸುತ್ತದೆ.

ಶಿಕ್ಷಣ ಮತ್ತು ಮನವೊಲಿಸುವಿಕೆ ಎಲ್ಲ ಸುತ್ತುಗಳಲ್ಲೂ ಪ್ರಮುಖವಾಂಗಗಳಾಗಿವೆ. ಈ ಸಂಸ್ಥೆಯ ಹೊಣೆಗಾರಿಕೆ ಗುರುತರವಾದುದು, ಜಾಗೂ ಸೈಕ್ಷಣಿಕವಾದುದು.

ಆರ್ಥಿಕ ಬೆಂಬಲ

ಕೇಂದ್ರ ಸರ್ಕಾರವು ಈ ಮಹಾಕಾರ್ಯಕ್ಕೆ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ 202-9 ಕೋಟಿ ರೂ.ಗಳನ್ನು ಮೀಸಲಾಗಿಟ್ಟಿದೆ. ಆದರೆ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ 14 5 ಲಕ್ಷ ರೂ.ಗಳನ್ನು ವೆಚ್ಚವಾಗಿತ್ತು. ಎರಡನೇ ಯೋಜನೆಯಲ್ಲಿ 2.2 ಕೋಟಿ ರೂ. ಹಾಗೂ ಮೂರನೇ ಯೋಜನೆಯಲ್ಲಿ 27.9 ಕೋಟಿ ರೂ.ಗಳನ್ನು ಈ ಕಾರ್ಯಕ್ಕೆ ವಿನಿಯೋಗಿಸಲಾಯಿತು. ಆದ್ದರಿಂದ ಹಣಕ್ಕೆ ಕೊರತೆಯಿಲ್ಲ.

ತರಬೇತಿಯ ಅಗತ್ಯ

ಈ ಕಾರ್ಯಕ್ಕೆ ಅಗತ್ಯವಾದ 1,25,000 ಜನರು ವಿಶೇಷ ತರಬೇತಿ ಪಡೆಯಬೇಕು; ಇದಕ್ಕಾಗಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕಾರ್ಯಕ್ಕಾಗಿ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ದುಡಿಯುವಂತೆ ತರಬೇತಿ ನೀಡಲು ನವದೆಹಲಿಯಲ್ಲಿರುವ ಕೇಂದ್ರ ಕುಟುಂಬ ಯೋಜನಾ ಸಂಸ್ಥೆ ಹಾಗೂ ಕೇಂದ್ರ ಆರೋಗ್ಯ ಶಿಕ್ಷಣ ಸಂಸ್ಥೆಗಳಿವೆ. ಕಲ್ಯತ್ತದಲ್ಲಿ ಸಾರ್ವಜನಿಕ ಆರೋಗ್ಯ ಕೇಂದ್ರ ಸಂಸ್ಥೆಯಿದೆ. ಅಲ್ಲದೆ ವಿವಿಧ ರಾಜ್ಯಗಳಲ್ಲಿರುವ 46 ತರಬೇತಿ ಕೇಂದ್ರಗಳು ಕಾರ್ಯಕರ್ತರನ್ನು ತಯಾರು ಮಾಡುತ್ತಿವೆ. ರಾಜ್ಯ ಮಟ್ಟದಲ್ಲಿ ಕೇಂದ್ರ ಕುಟುಂಬ ಯೋಜನಾ ಕ್ಷೇತ್ರ ತಂಡಗಳನ್ನು ಕೊಡಲಾಗಿದೆ.

ಇದುವರೆಗೆ 2773 ವೈದ್ಯರು, 10,507 ಇತರ ಕಾರ್ಯಕರ್ತರು; 7457 ದಾದಿ—ಸೂಲಗಿತ್ತಿಯರು ಹಾಗೂ 261 ವಿಸ್ತರಣ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಆಗಲೆ 1,668 ದಾದಿ—ಸೂಲಗಿತ್ತಿಯರು ಹಾಗೂ 652 ವಿಸ್ತರಣ ಶಿಕ್ಷಕರ ಅಗತ್ಯವಿದೆ.

ಸಂಶೋಧನೆ

ಈ ಕಾರ್ಯಕ್ರಮವು ಪ್ರದರ್ಶಿತೆ ಸಾಧಿಸಲು ದೇಹಾರೋಗ್ಯ, ಜನಸಂಖ್ಯೆ, ಸಂಪರ್ಕ ಮತ್ತು ಸಾಮಾಜಿಕ ವಿಜ್ಞಾನಗಳಲ್ಲಿ ಸಂಶೋಧನ ಫಲಗಳನ್ನು ಒದಗಿಸುತ್ತಿರಬೇಕು. ಇದಕ್ಕೆ ಸಹಾಯ ಒದಗಿಸಿ ಸಂಶೋಧನೆಯೊಂದಿಗೆ ಹೊಂದಾಣಿಕೆ ಕಲ್ಪಿಸಲು 8 ದೇಹಾರೋಗ್ಯ ಸಂಶೋಧನ ಕೇಂದ್ರಗಳು, 11 ಜನಸಂಖ್ಯಾ ಸಂಶೋಧನ ಕೇಂದ್ರಗಳು ಹಾಗೂ 10 ಸಂಪರ್ಕ ಸಂಶೋಧನಾ ಯೋಜನೆಗಳಿವೆ. ಸಂಶೋಧನೆಗಾಗಿ ನಾಲ್ಕನೇ ಯೋಜನೆಯಲ್ಲಿ 5.3 ಕೋಟಿರೂಪಾಯಿ ವಿನಿಯೋಗಿಸಲಾಗಿದೆ.

ಕಾರ್ಯ ವಿಧಾನ

ಕೇಂದ್ರ, ರಾಜ್ಯ, ಜಿಲ್ಲೆ, ಗ್ರಾಮ ಹಾಗೂ ವ್ಯಕ್ತಿಯ ಮಟ್ಟದಲ್ಲಿ ಸಾಧಿಸಬೇಕಾದ ಗುರಿ ನಿರ್ಧರಿಸಿ, ಉತ್ಪೇಜನ ಹಾಗೂ ಪ್ರಶಸ್ತಿ ವಿತರಣ ಕಾರ್ಯವನ್ನು ಏರ್ಪಡಿಸಲಾಗಿದೆ. ಈ ಕಾರ್ಯದಲ್ಲಿ ವಿಮಾ ಕಂಪೆನಿಗಳು ಹಾಗೂ 10 ಸಂಪರ್ಕ ಸಂಶೋಧನಾ ಯೋಜನೆಗಳಿವೆ. ಸಂಶೋಧನೆಗಾಗಿ ನಾಲ್ಕನೇ ಯೋಜನೆಯಲ್ಲಿ 5.3 ಕೋಟಿರೂಪಾಯಿ ವಿನಿಯೋಗಿಸಲಾಗಿದೆ.

ಕಾರ್ಯ ವಿಧಾನ

ಕೇಂದ್ರ, ರಾಜ್ಯ, ಜಿಲ್ಲೆ, ಗ್ರಾಮ ಹಾಗೂ ವ್ಯಕ್ತಿಯ ಮಟ್ಟದಲ್ಲಿ ಸಾಧಿಸಬೇಕಾದ ಗುರಿ ನಿರ್ಧರಿಸಿ, ಉತ್ಪೇಜನ ಹಾಗೂ ಪ್ರಶಸ್ತಿ ವಿತರಣ ಕಾರ್ಯವನ್ನು ಏರ್ಪಡಿಸಲಾಗಿದೆ. ಈ ಕಾರ್ಯಕ್ಕಾಗಿ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ದುಡಿಯುವಂತೆ ತರಬೇತಿ ನೀಡಲು ನವದೆಹಲಿಯಲ್ಲಿರುವ ಕೇಂದ್ರ ಕುಟುಂಬ ಯೋಜನಾ ಸಂಸ್ಥೆ ಹಾಗೂ ಕೇಂದ್ರ ಆರೋಗ್ಯ ಶಿಕ್ಷಣ ಸಂಸ್ಥೆಗಳಿವೆ. ಕಲ್ಯತ್ತದಲ್ಲಿ ಸಾರ್ವಜನಿಕ ಆರೋಗ್ಯ ಕೇಂದ್ರ ಸಂಸ್ಥೆಯಿದೆ. ಅಲ್ಲದೆ ವಿವಿಧ ರಾಜ್ಯಗಳಲ್ಲಿರುವ 46 ತರಬೇತಿ ಕೇಂದ್ರಗಳು ಕಾರ್ಯಕರ್ತರನ್ನು ತಯಾರು ಮಾಡುತ್ತಿವೆ. ರಾಜ್ಯ ಮಟ್ಟದಲ್ಲಿ ಕೇಂದ್ರ ಕುಟುಂಬ ಯೋಜನಾ ಕ್ಷೇತ್ರ ತಂಡಗಳನ್ನು ಕೊಡಲಾಗಿದೆ.

ಇದುವರೆಗೆ 2773 ವೈದ್ಯರು, 10,507 ಇತರ ಕಾರ್ಯಕರ್ತರು; 7457 ದಾದಿ—ಸೂಲಗಿತ್ತಿಯರು ಹಾಗೂ 261 ವಿಸ್ತರಣ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಆಗಲೆ 1,668 ದಾದಿ—ಸೂಲಗಿತ್ತಿಯರು ಹಾಗೂ 652 ವಿಸ್ತರಣ ಶಿಕ್ಷಕರ ಅಗತ್ಯವಿದೆ.

ಸಂಶೋಧನೆ

ಈ ಕಾರ್ಯಕ್ರಮವು ಪ್ರದರ್ಶಿತೆ ಸಾಧಿಸಲು ದೇಹಾರೋಗ್ಯ, ಜನಸಂಖ್ಯೆ, ಸಂಪರ್ಕ ಮತ್ತು ಸಾಮಾಜಿಕ ವಿಜ್ಞಾನಗಳಲ್ಲಿ ಸಂಶೋಧನ ಫಲಗಳನ್ನು ಒದಗಿಸುತ್ತಿರಬೇಕು. ಇದಕ್ಕೆ ಸಹಾಯ ಒದಗಿಸಿ ಸಂಶೋಧನೆಯೊಂದಿಗೆ ಹೊಂದಾಣಿಕೆ ಕಲ್ಪಿಸಲು 8 ದೇಹಾರೋಗ್ಯ ಸಂಶೋಧನ ಕೇಂದ್ರಗಳು, 11 ಜನಸಂಖ್ಯಾ ಸಂಶೋಧನ ಕೇಂದ್ರ

ಶ್ರದ್ಧಾಂಜಲಿ

ದಿವಂಗತ ಬಾಲಗಂಧರ್ವ

ಬರೆದವರು: ಶ್ರೀ ಬಿ. ನರಸಿಂಗರಾವ್

ತನ್ನ ಜೀವನ ಕಾಲದಲ್ಲೆ 'ಇತಿಹಾಸ ಪುರುಷ'ನೆನಿಸಿದ ಗಾಯಕ-ನಟ ಬಾಲ ಗಂಧರ್ವನು ಇದೇ ತಾನೆ ಜರ್ಲ್ಯಾಣಿಸೇ ತಾರೀಕಿಗೆ ನಿಧನನಾದನು. ಆತನ ಮರಾಠಿ ರಂಗಭೂಮಿಯ ಸುಪ್ರಸಿದ್ಧ ಗಾಯಕ ಹಾಗೂ ನಟ ಚತುರನಾಗಿದ್ದ. ಪದ್ಮಶ್ರೀ ಬಿರುದನ್ನೂ, ಸಂಗೀತ—ನಾಟಕ ಅಕಾ ಡೆಮಿಯ ಅನೇಕ ಬಿರುದು ಬಾವಲಿಗಳನ್ನು ಗಳಿಸಿದ್ದ. 1961ರಿಂದ ಪ್ರಭಾವ ವೂ ಮಹಾರಾಷ್ಟ್ರ ಸರಕಾರವು ಆತನಿಗೆ 300 ರೂಪ್ಯಾಯನ್ನು 'ಗೌರವ ಪೇನ' ವಾಗಿ ನೀಡುತ್ತಲಿತ್ತು. 1964ರಿಂದ ಆ ಮೊತ್ತವನ್ನು ತಿಂಗಳೊಂದರ 750 ರೂಪ್ಯಾಗೇರಿಸಲಾಯಿತು. ಮಂಬೈಯ ಹಾಗೂ ಜಲಗಾಂವದ ಹಲವಾರು ಪ್ರಸಿದ್ಧ ನಾಟಕ ಸಂಸ್ಥೆಗಳು ಈತನ ಹೆಸರಿನಿಂದಲೇ ಪ್ರಸಿದ್ಧಿಯಾಗಿವೆ. ಆತನ ಪುಣ್ಯ ಸ್ಮರಣೆಯನ್ನು ಚಿರಾಯುವಾಗಿರಿಸಲು ಪೂನಾದ ಮುನಿಸಿಪಲ್ ಕೋರ್ಪೊರೇಶನ್ ವಿಶೇಷ ರೀತಿಯ ಥಿಯೇಟರ್ ಒಂದನ್ನು ಸ್ಥಾಪಿಸಲು ಹವಣಿಸಿದೆ. ಬಾಲಗಂಧರ್ವನು ಮಹಾರಾಷ್ಟ್ರದ ಜಳ್ಳಿ-ಹಳ್ಳಿಗೂ, ಮನೆ-ಮನೆಗೂ 'ಚಿರಪರಿಚಿತ' ನೆಕ್ತಿ.

50 ವರ್ಷಗಳ ಎರೆಗೆ ಎಡೆಬಿಡದೆ ರಂಗಮಂಚದಲ್ಲಿ ಸೇವಾನಿರತನಾಗಿ ಸಿನಿಮಾ ನಟನಾಗಿದ್ದಾ ಅದೇ ಸಂದರ್ಭದಲ್ಲಿ ಜನ ವನ್ನೆಯನ್ನು ಕಳೆದು ಕೊಳ್ಳದೇ ಇರುವುದು ನಿಜವಾಗಿಯೂ ಬಾಲಗಂಧರ್ವನದ್ದು ಸಾಹಸಕಾರ್ಯವೇ. ಮಹಾರಾಷ್ಟ್ರ ಗುಜರಾತಿನ ರಸಿಕರನ್ನು ತನ್ನ ಅಪ್ರತಿಮ ನಟನ ಕೌಶಲದಿಂದ ಮಂತ್ರ ಮುಗ್ಧನಾಗಿಸಿದ್ದ ನೀತ. ಆತನ ನಟನೆಯನ್ನು ಕಾಣಲು ನೂರು ರೂಪ್ಯಾಯಿವರೆಗೆ ಟಿಕೇಟಿನ ಹಣತೆತ್ತು ಜನರು ಬರುತ್ತಿದ್ದರು. ಬಾಲ ಗಂಧರ್ವನು ಮರಾಠೀ ನಾಟಕ ದೇವತೆಯ ಸುವರ್ಣ ಯುಗಕ್ಕೆ ಕಾರಣನಾದನೆಂದರೆ ಅತಿಶಯೋಕ್ತಿಯೆನಿಸದು.

ನಾರಾಯಣ ರಾವ್ ಶ್ರೀ ನಾರಾಯಣ ಹಂಸ ಎಂದು ಬಾಲಗಂಧರ್ವನ ನೈಜ ಹೆಸರು. 1888ನೇ ಇಸವಿ ಜೂನ್ 26 ರಂದು ನೀರಾವರಿ ಇಲಾಖೆಯಲ್ಲಿ ಓರ್ವ ಉದ್ಯೋಗಸ್ಥನ ಮಗನಾಗಿ ಈತ ಜನಿಸಿದ. ತನ್ನ ತಂದೆಯಿಂದಲೇ ಬಾಲ ಗಂಧರ್ವನು ಸಂಗೀತಪಡೆ ಒಲಿಯಲ್ಪಟ್ಟನು. ತಂದೆಯು ಸೋದರಿ ಹರಿಭಾಯಿಯೇ ಈತನ ಸಂಗೀತಾಭಿರುಚಿಗೆ ಸ್ಫೋತ್ಸಾಹವಿತ್ತಿದ್ದು. ಚಿಕ್ಕಂದಿನಲ್ಲೇ ಈತನಿಗ ನಾಟಕದೆಡೆ ಒಲವು, ಪಾರದೆಡೆ ಆಸ್ಥೆಯಿಂದು ಸಮನಿವಿರುತ್ತಿರಲಿಲ್ಲ. ಆತನ ಬಂಧುಗಳಲ್ಲೊಬ್ಬರಾದ ಯಶವಂತ ರಾವ್ ಕುಲಕರ್ಣಿ 'ಕೇಸರಿ' ಪತ್ರಿಕೆಯ ಸಹಸಂಪಾದಕರಾಗಿದ್ದರು. ಅವರೊಡಗೂಡಿ ಬಾಲಕ ನಾರಾಯಣರಾವ್ ಒಮ್ಮೆ ತಿಲಕರಲ್ಲಿಗೆ ತೆರಳಿದ್ದ. ಈ ಬಾಲಕನು ಅಲ್ಲಿ ಹಾಡಿದ ಹಾಡಿನಿಂದ ತಿಲಕರು ಬಹಳ ಪ್ರಸನ್ನರಾದರು. ತಿಲಕರೆಂದರು- "ಹುಶ್ಶಂತ! ಎಷ್ಟು ಚೆನ್ನಾಗಿ ಹಾಡ್ತಾನಪ್ಪಾ ಈ ಬಾಲಗಂಧರ್ವ!" ಅಂದಿನಿಂದ ಲೇ ನಾರಾಯಣರಾವ್ 'ಬಾಲಗಂಧರ್ವ' ನೆಂಬ ಹೆಸರಿನಲ್ಲಿ ಪ್ರಖ್ಯಾತನಾದ.

ಹದಿನೈದರ ಹರೆಯದಲ್ಲೆ ಬಾಲಗಂಧರ್ವನು ಜೀವನದ ಕ್ಲೇಶಗಳನ್ನೆದರಿಸಲು ತೊಡಗಿದ. ಅನಪೇಕ್ಷಿತವೊಂದರಿಂದಾಗಿ ಅಂಗವಿಕಲನಾದ ಆತನ ತಂದೆಯವರ ಸಂಬಳವನ್ನಿಪ್ಪಿ ರಜೆಯಲ್ಲಿರಬೇಕಾಯಿತು. ಬಾಲಗಂಧರ್ವನಿಗೆ ಹುಜ್ಜನಾಯಿಯ ಕಡಿತವುಂಟಾಗಿ ಆತನು ಚಿಕಿತ್ಸೆಗಾಗಿ ಕೊಲ್ಲಾಪುರಕ್ಕೆ ತೆರಳಲೇ ಬೇಕಾಯಿತು. ಆದರೆ ಕೊಲ್ಲಾಪುರ ಸಂದರ್ಶನವು ಆತನಿಗೆ 'ವರ'ವಾಗಿ ಪರಿಣಮಿಸಿತು. ಕೊಲ್ಲಾಪುರದಲ್ಲಿ ತನ್ನ ಅಜ್ಜನೊಂದಿಗೆ ಬಾಲಗಂಧರ್ವನು ಉಳಕೊಂಡ ಇಲ್ಲಿ ಛತ್ರಪತಿ ಸಾಹು ಮಹಾರಾಂಜ್ ಬಾಲಗಂಧರ್ವನು ಹಾಡಿದ್ದನ್ನು ಕೇಳಲು ಎಡೆಯಾಯಿತು. ಸಂತೋಷಗೊಂಡ ಆ ರಾಜಕುವರನು ಬಾಲ ಗಂಧರ್ವನನ್ನು ಜೆಕೆಪ್ಪೆಗೇಸ್ವರ ವಿದ್ಯಾಲಯಕ್ಕೆ ಕಳುಹಿಸಿದನು. ಅಲ್ಲಿ ಕೆಲೋಸ್ಕರ್ ನಾಟಕ ಮಂಡಳಿಯಲ್ಲಿ ಆತನಿಗೆ ಉಳಕೊಳ್ಳಲು ವ್ಯವಸ್ಥೆ ನೆಯಿತು. ಇಲ್ಲೆ ಆ ನಾಟಕ ಮಂಡಳಿಯಲ್ಲಿ ನಾಟಕ ರಚಯಿತನಾಗಿದ್ದ ಗೋವಿಂದರಾವ್ ದಿವಾನ್‌ನೆನ್ನ ಬಾಲಗಂಧರ್ವನು ಭೆಟ್ಟಿಯಾದದ್ದು. ವಿರಮಿಸದೆ ಬಾಲಗಂಧರ್ವನನ್ನು ನಾಟಕ ಮಂಡಳಿಗೆ ಸೇರಿಸಿದ್ದ ಆಯಿತ 'ಎಕಾದ' ಎಂಬ ನಾಟಕದಲ್ಲಿ ಸ್ತ್ರೀ ವೇಷಧಾರಿಯಾಗಿ ಬಾಲಗಂಧರ್ವನ ಸ್ವಯನು ಅಭಿನಯನ ನಡೆಯಿತು. ಮೊದಲಿಗೆ 75 ರೂಪ್ಯಾಯಗಿದ್ದ ಮಾಸಿಕ ವೇತನವು ಮುಂ 1911 ರಲ್ಲಿ ಅದು 200 ರೂಪ್ಯಗೇರಿತು. 1913ರಲ್ಲಿ ಇಬ್ಬರು ಸಹ ನಟರೊಡನೂಡಿ ಗಂಧರ್ವ ನಾಟಕ ಮಂಡಳಿಯನ್ನು ಸ್ಥಾಪಿಸಲಾಯಿತು. ಅಗಲೇ ತಿಲಕರ ಅನುಯಾಯಿಯೂ, 'ಕೇಸರಿ ಪತ್ರಿಕೆಯ ಸಹಸಂಪಾದಕರೂ ಆಗಿದ್ದ ಕಾಕಾ ಸಾಹೇಬ ಖಾಡಿಲ್ಕಾರರೊಡನೆ ಬಾಲಗಂಧರ್ವನು ಪರಿಚಯ ಹೊಂದಿದ್ದು. ಬಾಲ ಗಂಧರ್ವನ ಸುಮಧುರ ಸಂಗೀತ ಮತ್ತು ಥೆಯರ್ಯದಿಂದ ಆಕರ್ಷಿತನಾದ ಖಾಡಿಲ್ಕಾರ್ ಆತನಿಗಾಗಿ ಸಂಗೀತ ನಾಟಕಗಳನ್ನು ರಚಿಸತೊಡಗಿದ.

ನಾಟಕ ವೇದಿಕೆಯಲ್ಲಿ ಬಹಳ ಯಶಸ್ಸನ್ನು ಪೊರಕರೂ ಬಾಲಗಂಧರ್ವನು ಅಧಿಕಾರ ಆಡಚಣೆಗೆ ಒಳಗಾಗಬೇಕಾಯಿತ. 1921ರಲ್ಲಿ ಆತನು 18000 ರೂಪ್ಯಾಯ ಬೆಲೆಬಾಳುವ ಫೆರ್ಡೊಗಾಗಿದ್ದನು. ಕೆಲ ಮಿತ್ರರೂ, ಶ್ರೇಯೋಭಿಲಾಷಿಗಳೂ ಆತನಿಗೆ ಸಹಾಯ ನೀಡಲು ಮುಂದಾದರು. ಆದರೆ ಆತ್ಮಾಭಿಮಾನವನ್ನಿದ್ದ ಬಾಲಗಂಧರ್ವನು ಅದನ್ನು ಸ್ವೀಕರಿಸಿದ ಆಗಲೇ ಆತನಿಗೆ ಸಿನಿಮಾ ನಟನಾಗಲು ಆಹ್ವಾನವೊದಗಿತ್ತು. 1931ರಲ್ಲಿ ಸ್ವಭಾತ್ ಕಂಪೆನಿಯೊಡನೆ, ವರ್ಷಕ್ಕೆ ಎರಡು ಚಿತ್ರಗಳಲ್ಲಿ ನಟಿಸುವ ಒಪ್ಪಂದಕ್ಕೆ ಸಹಿಹಾಕಿದನು. ಸಂತ ಏಕನಾಥ್ ಎಂಬ ಚಿತ್ರದಲ್ಲಿ ಆತನಿಗೆ ಪ್ರಮುಖ ಪಾತ್ರವನ್ನಿತ್ತರು. ಕೂಡಲೇ ಸ್ವಭಾತ್ ಸ್ಟುಡಿಯೋದ ವಾತಾವರಣವು ತನಗೆ ಹಿಡಿಸುವುದೆಂದು ಆತನಿಗೆ ಮನವರಿಕೆಯಾಯಿತು ಹಾಡುಗಳನ್ನು ಏಧ ಸಿಮಿಷದ ಅವಧಿಯಲ್ಲೇ ಮುಗಿಸುವುದು ಆತನಿಗೆ ಅನಾಧ್ಯವನಿಸಿತು. ಸ್ಟುಡಿಯೋದಲ್ಲಿ ವಿದ್ಯುತ್ ಪ್ರಕಾಶವು ಆತನನ್ನು ಕೊಂದರೆಗೀಡುಮಾಡಿತ. ಕೊನೆಗೆ ಸಂತ ಏಕನಾಥ್ 'ಧರ್ಮಾತ್ಮ' ಎಂಬ ಹೆಸರಿನಲ್ಲಿ ರಿಲೀಸ್ ಆಯಿತು. ಆತನ ಅಭಿನಯವನ್ನು ಸಿನಿಮಾದಲ್ಲಿ ಕಾಣಲು ಬಯಸಿದ ಭಾರೀಜನಸ್ತೋಮಕ್ಕೆ ಈ ಚಿತ್ರವು ಏನು ತೃಪ್ತಿಯನ್ನೀಯಲು ಮಾಡಿತು. ಸ್ತ್ರೀ ವೇಷದಲ್ಲೆ ಸಾವಂತ್ಯವಾಗಿ ಅಭಿನಯಿಸುತ್ತಿದ್ದ ಬಾಲಗಂಧರ್ವನ ಪುರುಷ ವೇಷಾಭಿನಯವು ತೀರ ಕಳಪೆ ಟೈಪಾಗಿ ಕಾಣಿಸಿತು. ಮತ್ತೆ ಪುನಃ ಆತ ಗಂಧರ್ವ ನಾಟಕ ಮಂಡಳಿಯನ್ನು ಸೇರಿದ. ಆದರೂ ಆತನಿಗೆ ದುಃಖವೆನ್ನಿಸಿನಿಮಾಕ್ಕೆ ಸೇರಲು ಇಚ್ಛೆಯಾಯಿತು. ಈ ಬಾರಿ ಅವ್ಯಕ್ತ ಸಿದ್ಧಿಯಲ್ಲಿ ಆತನು ಸ್ತ್ರೀ ಪಾತ್ರಧಾರಿಯಾದನು ಆದರೆ ಈ ಚಿತ್ರವೂ ಫಿರಂಗಾದಾಯಕವಾಗಿತ್ತು. ಅಂದಿನಿಂದ ಬಾಲಗಂಧರ್ವನು ಸಿನಿಮಾ ಲೋಕಕ್ಕೆ ಎಂದೆಂದಿಗೂ ಬೆನ್ನು ಹಾಕಿ ಓಡಿದನು.

ನಂತ್ರ ನಾಟಕ ಮಂಡಳಿಯನ್ನು ಆತ ಸೇರಿದ್ದಾಯಿತು. ಈ ಬಾರಿ ಆತ ಪುರುಷ ಪಾತ್ರಗಳನ್ನೆಲ್ಲೇ ನಟಿಸತೊಡಗಿದ. ಸ್ತ್ರೀ ವೇಷವನ್ನು ಗೋಹರ್ ಬಾಯಿಯೆಂಬ ವಳಿಗೆ ಒಪ್ಪಿಸಿದ. ಆದರೂ ಈ ನಾಟಕವು ಅಷ್ಟೊಂದು ಪ್ರಸಿದ್ಧವಾಗಲಿಲ್ಲ. ಏಕೆಂದರೆ ಪ್ರೇಕ್ಷಕ ವ್ಯಂಬವು ಆತನನ್ನು ಸ್ತ್ರೀ ವೇಷದಲ್ಲೆ ಕಾಣಲಿಚ್ಛಿಸುತ್ತಿತ್ತು. ತನ್ನ ಪತ್ನಿಯ ಮರಣಾನಂತರ ಆತನು ತನ್ನ ಸಹಪ್ರವರ್ತಿಕೆಯಾದ ಗೋಹರ ಬಾಯಿಯನ್ನೆ ವಿವಾಹವಾದನ.

ಇಂದೂ ಬಾಲಗಂಧರ್ವನ ಸ್ತ್ರೀವೇಷಾಭಿನಯವನ್ನು ಮಹಾರಾಷ್ಟ್ರದಲ್ಲಿ ರಸಿಕರು ಹಾಡಿ ಹೊಗಳಿಕೊಂಡಿದ್ದಾರೆ. ಆತನು ಕ್ಷೇತ್ರವೇಷನಾಗಿ ಮರಾಠೀ ನಾಟಕ ವೇದಿಕೆಯಲ್ಲಿರುವುದು ನಿಸ್ಸಂಶಯ.

ಕುಂದಾಪುರ
ಮುನ್ಸಿಫ್ ಕೋರ್ಟಿನಲ್ಲಿ
ಓ. S. 274/1967.
ವಾದಿ: ರಾಮಯ್ಯ ಶೆಟ್ಟ.
ಪ್ರತಿವಾದಿ ಪೆರಿಯಣ್ಣ ಶೆಟ್ಟ, ಪಂಡ್ಸಿಡೊಡ್ಡ ಮನೆ ನಾಗಯ್ಯ ಶೆಟ್ಟ, ಅಳಿಯ, ಹರ್ಕೂರು ಗ್ರಾಮದ ನಾರ್ಕಳಿಯವ್ವರು.

ಸದ್ರಿ ಪ್ರತಿವಾದಿಗೆ ಈ ವಮಲ್ಕ ತಿಳಿಯಪಡಿಸುವುದೇನಂದ್ರೆ—

ನಮ್ಮ ಪರ ವಾದಿಗೆ ಸಲ್ಲತಕ್ಕ ದಿನಾಂಕು ನೋಟಿನ ಲ್ಲಲು ಬಡ್ಡಿ ಹಣಗಳ ಬಗ್ಗೆ ವಾದಿಯು ಮಾಡಿದ ಮೇಲಿನ ದಾವೆಯು ಕಾ. 6.1.1968ಕ್ಕೆ ತಪ್ಪಿಗೆಯಾಗುತ್ತದೆ. ಆ ಕೂರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಆ ದಿನ ಬೆಳಿಗ್ಗೆ 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪಿಸಲು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳ್ಳಿಸಿಯದೆ.

ಕೋರ್ಟು ಹುಕುಂ ಪ್ರಕಾರ.
Y. Tejappa Shetty,
Advocate for Plff.
Coondapur, 12-12-1967.



ಬಡ ಕ್ಷಯ ರೋಗಿಗಳಿಗೆ ಸಹಾಯ ಮಾಡುವುದಕ್ಕಾಗಿ ನಿಮ್ಮ ರಾಜ್ಯ ಕ್ಷಯ ರೋಗ ಸಮಿತಿಗೆ ಹಣದ ಅಗತ್ಯವಿದೆ. ಅವರಿಗೆ ಹಲವಾರು ಅವಶ್ಯಕತೆಗಳಿರುತ್ತವೆ. ಅವರಿಗೆ ಅವರ ಮನೆಯಲ್ಲಿ ಸರಿ ಅವರ ಜಾಗ್ರತೆ ನೋಡ ವವರು ಯಾರೂ ಇರುವುದಿಲ್ಲ. ಟಿ ಬಿ ಮೊಹರು ಗಳನ್ನು ಪಡಕೊಳ್ಳುವುದರ ಮೂಲಕ ನಿಮ್ಮ ಶಕ್ತ್ಯಾನುಸಾರ ಸಹಾಯ ಮಾಡಿರಿ.
ಒಂದು ಟಿ ಬಿ ಮೊಹರಿನ ಬೆಲೆ ಬರೆ 10 ನೈಸೆ.

ಮೊಹರುಗಳು ದಕ್ಷಿಣ ಕನ್ನಡ ಜಿಲ್ಲಾ ಕ್ಷಯ ರೋಗ ಸಂಘ ಮಂಗಳೂರು ಮತ್ತು ಅದರ ವಿವಿಧ ವಿಜನ್ಸಿಗಳಲ್ಲಿ ದೊರೆಯುತ್ತವೆ.

ನಕಾಶೆಗಳ ಬೇಕಾಗಿದೆ ಮುಂಬಯಿ ಮೊಹರು ಚಳುವಳಿಗಾಗಿ ಟಿ ಬಿ ಮೊಹರಿನ ನಕಾಶೆಗಳು ಬೇಕಾಗಿವೆ. ಆರಿಸಿದ ನಕಾಶೆಗೆ ರೂ. 1000ದ ಬಹುಮಾನವಿದೆ. ವಿವರಗಳಿಗೆ ಬರೆಯಿರಿ— ಭಾರತದ ಕ್ಷಯರೋಗ ಸಂಘ, 3, ಕಿಡ್ ಸ್ಟ್ರೀಟ್ ರೋಡು, ಕಲಿಂಬಿ.

18ನೇ ಕ್ಷಯರೋಗ ಮೊಹರು ಮಾರಾಟ ಚಳವಳ

(ಭಾರತ ಕ್ಷಯರೋಗ ಸಂಘ, ನವದೆಹಲಿ ಇವರ ಪೂರೈಕೆಗಾರಿಕೆಗೊಳಗಾದುದು)

ಈ ಸ್ಥಳ ದಾನ ಮಾಡಿದವರು:
National Organic Chemical Industries Ltd., Bombay.

ಸಸ್ಯ-ಕೀಟ ಸಂಬಂಧ

(ಇದನೇ ಪುಟದಿಂದ)

ಸ್ಥಿತಿ ಬಂದಾಗ ಅವು ಮೊಳೆಯು ಮರವಾ ಗುತ್ತವೆ. ಪಕ್ಷಿ, ಪಶು, ಕೀಟ ವರ್ಗಗಳಿಗೆ ತಮ್ಮ ಉದರವೂ ತುಂಬಿಸು; ಸಸ್ಯ ವರ್ಗಗಳಿಗೆ ತಮ್ಮ ಬೀಜ ಪ್ರಸಾರ ಕಾರ್ಯವೂ ಆಯಿತು. ಎಂತಹ ಗುಪ್ತ ಸಂಬಂಧ!

Acia sphaerocephala ಎಂಬ ಒಂದು ಸಸ್ಯ ಹಾಡೂ ಇರುವೆಗಳ ಸಂಬಂಧ ಬಹಳ ಆಶ್ಚರ್ಯಮಯವಾಗಿದೆ. ಆ ಸಸ್ಯಗಳು ತಮ್ಮ ದೇಹದ ಒಂದು ಭಾಗವಾದ stipuleಗಳಲ್ಲಿ ಒಂದು ಜಾತಿಯ ಇರುವೆಗಳಿಗೆ ರಕ್ಷಣೆಯನ್ನು ಕೊಡುತ್ತವೆ. ಆ ಇರುವೆಗಳು, ಎಲೆಗಳು ಪಡೆದಿರುವ Belt's corpuscle ಎಂಬ ವಸ್ತುವನ್ನು ಆಹಾರವಾಗಿ ಸೇವಿಸುತ್ತಾ ಆ ಕೋಣೆಯಂತಹ stipuleಗಳಲ್ಲಿ ವಿನಾಗ ಕೆಯುತ್ತವೆ. ಆ ಸಸ್ಯಗಳಲ್ಲಿ ವಾಸ ಹಾಗೂ ಊಟ ಎರಡನ್ನು ಧಾರ್ಮಾರ್ಥವಾಗಿ ಪಡೆಯುವ ಆ ಕೀಟ ವರ್ಗ ಎಂದೂ ಶತ್ರುಪ್ಪ ವಾಗಿ ಇರಲಾರದು. ಅವು ಸಸ್ಯಗಳ ಈ ಉಪಕಾರಕ್ಕೆ ಪ್ರತಿಯಾಗಿ ಸನ್ನದ್ಧರೇ ಇಲ್ಲವೆ? ಇದೆ. ಅವು ತಮ್ಮ ಆಶ್ರಯದಾತ ಸಸ್ಯಗಳ ಹೂವು ಹಣ್ಣುಗಳನ್ನು ಹಾಳುಮಾಡುವ ಇತರ ಕೀಟಗಳನ್ನು ಹೊಡೆದೋಡಿಸಿ, ಕೊಂದು ನಾಶಪಡಿಸಿ "ಉಪಕಾರಕ್ಕೆ ಪ್ರತ್ಯುಪಕಾರದ ಮನೋಧರ್ಮ"ವನ್ನು ಪ್ರಾಣಿಯಲ್ಲಿ ಲೋಕಕ್ಕೇ ಸಾರುತ್ತವೆ.

ಅಕ್ಷಗಟ್ಟಲೆ ಸಂಖ್ಯೆಯಲ್ಲಿ ಮಣ್ಣಿನಲ್ಲಿ ವಾಸಿಸುತ್ತಿರುವ ಏಕಕಣ ಜೀವಿಗಳಾದ ಬೆಕ್ಟೀರಿಯಗಳು ಪ್ರಾಣಿ ವರ್ಗಕ್ಕೆ ಮಾಡುವ ಸಹಾಯ ಅಸಾಧಾರಣವಾದುದು. ಮಣ್ಣಿನಲ್ಲಿರುವ ಎಲ್ಲಾ ಲವಣಾಂಶಗಳೂ ಸಸ್ಯಗಳಿಗೆ ದೊರಕುವ ರೂಪದಲ್ಲಿ ಇರುವುದಿಲ್ಲ. ಬೆಕ್ಟೀರಿಯಗಳು ಇಂತಹ ಲವಣಾಂಶಗಳನ್ನು ಬೇರುಗಳಿಗೆ ದೊರಕುವ ರೂಪಕ್ಕೆ ಪರಿವರ್ತಿಸುತ್ತವೆ. ವಾತಾವರಣದ ಸಾರಜನಕವನ್ನು ಬೇರುಗಳಿಗೆ ದೊರಕಿಸಿ ಕೊಡುತ್ತವೆ. ಹೀಗೆ ಉಪಕಾರಿಗಳಾದ ಬೆಕ್ಟೀರಿಯಗಳು ಸಸ್ಯ ವರ್ಗಕ್ಕೆ ಅಧಿಕ ಆಹಾರ ಸಂಗ್ರಹಣದಲ್ಲಿ ಸಹಾಯ ಮಾಡಿ ಪರೋಕ್ಷವಾಗಿ ಮಾನವನ ಮಿತ್ರನಾಗಿಯೂ ಪರಿಗಣಿಸಲ್ಪಟ್ಟಿವೆ.

ಪ್ರಾಣಿ ಸಸ್ಯಗಳ ಸಂಬಂಧ ಇಲ್ಲಿಗೇ ತೀರಿಕೆಲ್ಲ. ಇಂತಹ ಉದಾಹರಣೆಗಳು ಎಷ್ಟೋ ಇವೆ. ಅಂತಹವುಗಳಲ್ಲಿ ಕೆಲವನ್ನು ಮಾತ್ರ ಮೇಲೆ ಚರ್ಚಿಸಲಾಗಿದೆ. ಇಷ್ಟು ಮಾತ್ರವಲ್ಲ; ಎಲ್ಲಾ ಸಂದರ್ಭದಲ್ಲೂ ಈ ಪ್ರಾಣಿ ಸಸ್ಯಗಳ ಸಂಬಂಧ ಸ್ನೇಹವಾಗಿಯೇ ಇರಬೇಕೆಂದಿಲ್ಲ. ಕೆಲವು ಸಸ್ಯ ವರ್ಗಗಳು ತಮ್ಮಲ್ಲೇ ಜಗಳಾಡಿ ಕೊಳ್ಳುವುದೂ ಇದೆ. ಕೀಟ, ಸಸ್ಯ—ಇವೆರಡು ತಮ್ಮೊಳಗೆ ಹೊಡೆದಾಡಿ ಕೊಳ್ಳುವುದೂ ಇದೆ. ಸಸ್ಯ ಕೀಟಗಳೆರಡೂ ಸೇರಿ ಇನ್ನೊಂದು ಕೀಟವನ್ನು ಹೊಡೆದಟ್ಟುವುದೂ ಇದೆ. ಆದುದರಿಂದ ಒಂದು ರೀತಿಯಿಂದ ನೋಡಿದರೆ ಹೇಗೆ ಮಾನವ ಜೀವನವೋ ಹಾಗೆಯೇ ಕೀಟ ಜೀವನ; ಪಾಗೆಯೇ ಸಸ್ಯ ಜೀವನ. ನಮ್ಮ ಪರಿಸರದಲ್ಲಿಗ ಈ ರೀತಿಯ ಸಸ್ಯ-ಸಸ್ಯ ಕಲಹ ಕಾಣಲೇ ಇರಬಹುದು. ಆದರೆ, ಅವುಗಳಕ್ಕೆ ಬೈಜ್ಞಾನಿಕ ಕಣ್ಣನ್ನು ಹರಿಯಿಕೊಟ್ಟರೆ ಇದು ಸಂಪತಿಕ ರುಜುವಾಗುವುದು. ಉದಾಹರಣೆಗೆ ಒಂದು ಜಲಾಶಯದ ಮಗ್ಗುಲಲ್ಲಿ ಒಂದು ಚಿಕ್ಕ ಗಿಡವು ತನ್ನ ಬೇರುಗಳನ್ನು ಸಂಯಿಗೊಟ್ಟುಸಮೃದ್ಧ ಜೀವನವನ್ನು ನಡೆಸುತ್ತಿದ್ದೆಂದೆಣಿಸೋಣ! ಅದೇ ಕೊಳದಿಂದ ಆನತಿ ದೂರದಲ್ಲಿರುವ ಇನ್ನೊಂದು ದೊಡ್ಡ ಮರವು ತನ್ನ ಬೇರುಗಳನ್ನು ಬೆಳೆಸಿಬೆಳೆಸಿ ಕಟ್ಟಕಡೆಗೆ ಈ ನೀರಿನ ಜಲಾಶ್ರಯದ ಇರವನ್ನು ತಿಳಿಯುತ್ತದೇ ತಡ; ಅದು ತನ್ನ ಎಲ್ಲ ಬೇರುಗಳನ್ನು ಅದೇ ಕೆಡೆಗೆ ಬೆಳೆಸಿ ನೀರನ್ನೆಲ್ಲಾ ತಾನೇ ಹೀರಿ ತನ್ನ ಭಯಂಕರವಾದ ಬೇರುಗಳಿಂದ ಸಣ್ಣ ಗಿಡದ ಬೇರುಗಳನ್ನು ತುಂಡರಿಸಿ ಅದನ್ನು ನಾಶಪಡಿಸುವುದರಲ್ಲಿ ನಿರತವಾಗಿರುತ್ತದೆ. ಹೇಗೆ ಮಾನವವರ್ಗದಲ್ಲಿ ಸ್ವಾರ್ಥಿಗಳಿದ್ದಾರೋ ಹಾಗೆಯೇ ಸಸ್ಯ ವರ್ಗದಲ್ಲೂ!

ಇನ್ನು ಕೆಲವು ಪ್ರಾಣಿಗಳನ್ನೇ ತಿನ್ನುವ ಕೆಲವು ಸಸ್ಯವರ್ಗಗಳಿವೆ Pitcher Plant ಎಂಬ ಗಿಡದ ಎಲೆಗಳ ತುದಿಯ ಭಾಗ ಒಂದು ಹೂಜೆಯ ಆಕಾರವನ್ನು ತಳೆಯುತ್ತವೆ. ಯಾವುದಾದರೂ ಕೀಟಗಳು ಬಂದು ಆ ಹೂಜೆಯಾಕಾರದ ಎಲೆಯ ತುದಿಯಲ್ಲಿ ಕುಳಿತರೆ ತಡ; ಹೂಜೆಯ ಮುಚ್ಚಳ ಮುಚ್ಚಿ ಬಿಡುತ್ತದೆ. ಆ ಕೀಟವನ್ನೇ ಆಹಾರವಾಗಿ ಸೇವಿಸುತ್ತದೆ. Bladder wort ಎಂಬ ಇನ್ನೊಂದು ಸಸ್ಯವೂ ಪ್ರಾಣಿಗಳನ್ನೇ ಆಹಾರವಾಗಿ ಸೇವಿಸುವ ನಿತ್ಯ ಸಂಗತಿ ಇದೆ. ಇಂತಹ ಇನ್ನೂ ಅಪೂರ್ವ ಕೀಟಾಹಾರಿ ಸಸ್ಯಗಳಿವೆ.

ಪ್ರಾಣಿವರ್ಗಗಳೆರಡರಲ್ಲಿ ನಡೆಯುವ ಈ ರೀತಿಯ ಸಂಬಂಧ ಗುಪ್ತವಾಗಿದ್ದು ಬಹಳ ವಿಶೇಷವಾಗಿದೆ. ಮಾನವವರ್ಗ ಪ್ರಾಣಿ ವರ್ಗ, ಸಸ್ಯ ವರ್ಗಗಳೆಲ್ಲೆಲ್ಲಾ ಈ ರೀತಿಯ ಸಮಾನತೆಯನ್ನು ಕಾಣುವಾಗ, ದೇವರೆಂದರೆ ಬೇರೆ ಏನು?' ಪ್ರಕೃತಿಯೇ ದೇವರು, ದೇವರೇ ಪ್ರಕೃತಿ" ಎಂಬ ಉಪ ಸಂಹಾರ ನಮ್ಮ ಮನದಲ್ಲಿ ಏಳುವುದು ಸಹಜ. ಮನುಷ್ಯರಾದ ನಾವು ಪರಸ್ಪರ ಸಂಘಟಿಸಿ ಸ್ನೇಹವನ್ನು ಗಳಿಸಿದರೆ, ವಿಶ್ವತ್ಯವನ್ನು ಸಂಪಾದಿಸಿದರೆ ಈ ಕೀಟ ಸಸ್ಯ ವರ್ಗ ಯಾವ ಸಂಘಾಷಣೆಯನ್ನೂ ಮಾಡದೆ, ಯಾವ ರೀತಿಯ ಪೂರ್ವ ನಿರ್ದೇಶಿತ ಅಂಕಿತಗಳನ್ನೂ ಕೊಡದ ಸ್ನೇಹವನ್ನು ಸಂಪಾದಿಸಬಲ್ಲವು ಎಂಬುದನ್ನು ಅರಿತಾಗ ಅವು ಕೂಡಾ ನಮ್ಮಂತೆಯೇ ಬುದ್ಧಿ ಮತ್ತೆಯನ್ನು ತಳೆದಿವೆ, ಎಂಬುದನ್ನು ಖಾತ್ರಿ ಅನಿವಾರ್ಯವಾಗಿ ಒಪ್ಪಲೇ ಬೇಕಾಗುತ್ತದೆ. ಅವೂ ನಮ್ಮಂತೆಯೇ ಸ್ನೇಹಿತರು, ವೈರಿಗಳು. ಉತ್ಸವರು, ಕೆಟ್ಟವರು, ಶ್ರೀಮಂತರು ಬಡವರು.

ಹೋದಹಾಗಲ್ಲಿ

"ಏನ್ರೀ, ರೇಸಿಗೆ ಹೋಗಿದ್ದಿರಂತೆ... ಹೇಗಿತ್ತು..."

"ಹೇಗಿತ್ತೆಂದೊ? ಭೇಷ್...ನಾನು ಹೋದದ್ದು ಸ್ವಂತ ಆಂಬಾಸಡರ್ ಕಾರಿನಲ್ಲಿ....ಬಂದದ್ದು ಬಸ್ಸಿನಲ್ಲಿ..."

"ಅಂತೂ ಹೆಚ್ಚು ಕ್ರಯದ ವಾಹನದಲ್ಲೇ ಮರುಪಯಣವಾಗಿತ್ತೆಂದು ಸಂತುಷ್ಟನಾಗಬಹುದುತಾನೆ...."

—ಎಚ್. ಎಂ. ವಿಜಯನಾರಾಯಣ

In the Court of the Munsif of Udipi

O. S. No. 147/67

Between

Laxmi Bai ... Plaintiff

and

Seethamma and others ... Defendants

NOTICE

Is hereby given to 1st deft' Seethamma, the 3rd deft. Krishnamoorthy Ninjura and the 5th deft. Vyasaraya Ninjura widow and sons of Srinivasa Ninjura residing in Tenkanidiyoor village of Udipi Tq. and to defts. 6 and 7 Venkataya Ninjura and Sripathi Ninjura, sons of Laxminarayana Ninjura residing at M. S. E. B. Canteen bhadravathi Town, Shimoga Dt' that the above suit filed by the plff. against you and others for recovery of the plaint mortgage amounts, has been posted to 9—1—1968 and that you may state your objections if any before Court at 10-30 a. m. on that day.

By Order.

P. N. K. Rao, *B.A., LL.B.,*
Advocate, Udipi.

Udipi, S. K. Dated 12-12-67.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

R. E. P. 175/1967
in
O. S. 406/1962

ಅದಸ್ಪ ಶೆಟ್ಟಿ —ಅರ್ಜಿದಾರ

ಮತ್ತು

ಬಿಕ್ಕಯ್ಯ ಶೆಟ್ಟಿ ಕೂಡಾ —ಎದ್ರಿರು

ಎದ್ರಿರು. 1. ಪರಂತೆಟ್ಟು, 2. ಕಮಲು ಶೆಟ್ತಿ 3. ಸಂಜೀವ ಶೆಟ್ಟಿ, 5. ರಾಜು ಶೆಟ್ಟಿ 6. ಕುಯಿಂತ. ಶೆಟ್ಟಿ ಬಿಕ್ಕಯ್ಯ ಶೆಟ್ಟಿ ಮಕ್ಕಳು, ಉಡ್ಪಿ ತಾಲೂಕು ಪೆರಂಪಳ್ಳಿ ಗ್ರಾಮ ದಲ್ಲಿರುವವರು—ಇವರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ.

ಮೇಲ್ಕಂಡ ಅರ್ಜಿದಾರರು ಪ್ರತಿವಾದಿಗಳ ವಿರುದ್ಧ ಪಡಿಸಿದ ಸ್ಥಿರಾಸ್ತಿ ಸಂಬಂಧದ ಇನ್ಸ್ಟಾಲ್‌ಮೆಂಟ್ ಹಣದ ಬಗ್ಗೆ ದಾಖಲಿಸಿರುವ ಕೇಸು ನಂ. 9—1—1968ಕ್ಕೆ ಇಟ್ಟಿದೆ. ನಿಮ್ಮ ಮೇಲಿನವರಲ್ಲಿ ಆಕ್ಷೇಪಣೆಯಿದ್ದರೆ ಅದನ್ನು ಮಾರ್ಚ್ 11 ಗಂಟೆಗೆ ಸರಿಯಾಗಿ ಕೋರ್ಟಿಗೆ ಮುಂದೆ ಹಾಜರಾಗಿ ಜ್ಞಾಪಿಸಿರಿ ಮಾಡಿಕೊಳ್ಳಿ ತಕ್ಕದ್ದು, ತಪ್ಪಿದ್ದಲ್ಲಿ ಏಂಮಾ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Balachandra Rao
Advocate for Petitioner

Udipi, 12—12—67.

Ask for

AZAD

nitbit

BISCUITS

Azad Industries, Mangalore-1

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ

"ನವಜೀವ ಕಲ್ಪಂ" (ರಿ.)

(ಆಯುರ್ವೇದಿಯ ಟಾನಿಕ್)



ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್ ಖಾತರಿಯಾದ ಆಯುರ್ವೇದ ರೀತಿಯ ನಾಮ್ಮ ವಕ್ಷ್ಯೈಸ್ಧೀತೀಯ ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY

BHADRAVATI (MYSORE)

ಎಲ್ಲೆಲ್ಲಿ ಏನೇನು?

ಜೀವ ವಿಮಾ ವ್ಯವಹಾರ ಸ್ಪರ್ಧೆಯಲ್ಲಿ ವಿಜಯ

ಸರಸ್ವತಿ ತಾ|| 12—6—67ರ ೦ದ 31—7—67ನೇ ಅವಧಿಯ ಜೀವ ವಿಮಾ ವ್ಯವಹಾರದ ಸ್ಪರ್ಧೆಯ ಫಲಿತಾಂಶ ಇದೀಗ ಪ್ರಕಟವಾಗಿದ್ದು ಉಡುಪಿ ವಿಭಾಜನ್ನದ 16 ಬ್ರಾಂಚುಗಳಿಗೆ A ಗ್ರೂಪಿನಲ್ಲಿ ಸರಸ್ವತಿ ಬ್ರಾಂಚಿನ ಏಜೆಂಟ್ ಶ್ರೀ ಎ. ಆರ್. ಭಾಗ್ವತರು 5½ ಲಕ್ಷದ ವ್ಯವಹಾರದಿಂದ ಪ್ರಥಮ ಬಹುಮಾನಕ್ಕೆ ಪಾತ್ರರಾಗಿದ್ದಾರೆ. ಶ್ರೀ ಭಾಗ್ವತರು 5-6 ವರ್ಷಗಳಿಂದ ಸತತವಾಗಿ ಸ್ಪರ್ಧೆಯಲ್ಲಿ ಜಯಗಳಿಸುತ್ತಾ ಇದ್ದು ಆವರ 1967ನೇ ಇಸ್ವಿಯಲ್ಲಿಯ ೨ನೇ ವಿಜಯವು ಇದಾಗಿದೆ. ಭಾಗ್ವತರ ಕುಟುಂಬಸ್ಥನಿಂದ ಹೆವಲಪ್‌ಮೆಂಟ್ ಆಫೀಸರ್ ಶ್ರೀ ಪಿ. ಎ. ಹೆಗಡೆಯವರಿಗೂ ಈ ಸಾರಿ ಪ್ರಥಮ ಬಹುಮಾನಕ್ಕೆ ಕಾರಣರಾಗಿ ಸರಸ್ವತಿ ಬ್ರೇಂಚ್ ಕೂಡ ಬಹುಮಾನಕ್ಕೆ ಪಾತ್ರವಾಗಿದೆ. ತಾ|| 30-11-67ನೇ ಅವೇರೆ ಮೂರನೇ ಸ್ಪರ್ಧೆಯಲ್ಲೂ ಭಾಗ್ವತರು ಭಾಗವಹಿಸಿದ್ದು ಅವರು ಪಾಲಿಸಿದಾರರಿಗೆ ನೀಡುತ್ತಿರುವ ಸೇವೆಯಿಂದ ಅವರೇ ಪುನಃ ಜಯಗಳಿಸುವ ಸಾಧ್ಯತೆ ಇದೆ ಎನ್ನಬಹುದು.

ಬಂದರ ನಿರ್ವಾಸಿತರ ಬಿನ್ನಹ ಪತ್ರ ಸಮರ್ಪಣೆ ಮುಖ್ಯಮಂತ್ರಿಗಳ ಆಶ್ವಾಸನೆ

ಪಣಂಬೂರು, ಡಿಸೆಂಬರ್ 6—ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಇಂದು ಮಂಗಳೂರಿನಿಂದ ಮಟ್ಟೆಗೆ ತೆರಳುವಾಗ ಪಣಂಬೂರು, ಬೈಕಂಪಾಡಿ, ತಡ್ಡೇರಬೈಲಿ, ಪಡುಕೋಡಿ ಗ್ರಾಮಗಳ ನಿರ್ವಾಸಿತರು ನವ ಭಾರತದ ಸಂಪಾದಕರಾದ ಶ್ರೀ ಸಂಜೀವ ವಿ. ಕುಡ್ವರ ಮುಂದಾಳ್ತನದಲ್ಲಿ ಒಂದು ಬಿನ್ನಹ ಪತ್ರವನ್ನು ಅರ್ಪಿಸಿ ತಮ್ಮ ಸಂಕಷ್ಟಗಳ ಪರಿಹಾರಕ್ಕೆ ಶೀಘ್ರವೇ ಸೂಕ್ತ ಕ್ರಮ ಕೈಗೆದುಕೊಳ್ಳಲು ವಿನಂತಿಸಿದರು.

ಮುಖ್ಯ ಮಂತ್ರಿಗಳು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಾ|| ನಾಗಪ್ಪ ಆಳ್ವರೊಂದಿಗೆ ಆಗಮಿಸಿದಾಗ ಆಲ್ಲಿ ನೆರೆದ ಜನತೆ ಅವರಿಗೆ ಹಾರ್ದಿಕ ಸ್ವಾಗತ ನೀಡಿತು. ಪಣಂಬೂರು ಪಟೇಲ್ ಶ್ರೀ ಪಿ. ಸಿ. ಶ್ರೀನಿವಾಸರಾಯರು ಮುಖ್ಯ ಮಂತ್ರಿಗಳಿಗೆ ಜನರ ಪರವಾಗಿ ಹಾರಾರ್ಪಣೆ ಗೈದರು. ಶ್ರೀ ಸಂಜೀವ ವಿ. ಕುಡ್ವರು ಜನತೆಯ ಪರವಾಗಿ ಮುಖ್ಯಮಂತ್ರಿಗಳಿಗೆ ಬಿನ್ನಹ ಪತ್ರವನ್ನು ಅರ್ಪಿಸಿದರು.

ಸರಕಾರದವರು ತಮ್ಮ ಹಿಂದಿನ ಮನವಿಗಳಿಗೆ ಮನ್ನಣೆಯನ್ನು ನೀಡಿ ತಮ್ಮ ಕಷ್ಟಕೆರ್ಪುಗಳನ್ನು ಮುಂಜೂರು ಮಾಡಿ ಇಲ್ಲಿನ ಅಧಿಕಾರಿಗಳಿಗೆ ಕಳುಹಿಸಿದ್ದರೂ ಅವು ಇನ್ನೂ ಕಾರ್ಯಗತ ಗಾಗಿಲ್ಲವೆಂದೂ ಆ ನಿರ್ದೇಶಿತ ಸನಲತ್ತುಗಳ ನ್ವಯಿಲ್ಲ ಕೂಡಲೇ ಕಾರ್ಯಗತಗೊಳಿಸುವಂತೆ ಬಿನ್ನಹಪತ್ರದಲ್ಲಿ ವಿನಂತಿಸಲಾಗಿತ್ತಲ್ಲದೆ ಪುನರ್ವಸತಿ ಕೇಂದ್ರದಲ್ಲಿ ಪುನರ್ವಸತಿಕ ಸೌಕರ್ಯಗಳನ್ನು ಒದಗಿಸುವ ತನಕ ಸೆಕ್ಷನ್ 47ನ್ನು ಮುಂದೂಡಬೇಕು. ಅಂಗಡಿ-ಮುಂಟಿಲ್‌ಗಳಿಗೆ ಪರ್ಯಾಸಿತ ಕೇಂದ್ರದಲ್ಲಿ ಕನಿಷ್ಠ ಐದು ಸೆಂಟ್ಸ್, ಅಥವಾ ಧಣವಾರ್ಥಿ ಸ್ಥಳವನ್ನು ಒದಗಿಸಬೇಕು. ಅಂಗಡಿ ಇತ್ಯಾದಿ ಕಟ್ಟಡ ಕಟ್ಟಿಸಲು ಕೊಡಲ್ಪಡುವ ಸಾಲ ರೂ 8000 ರೂಪಾಯಿಗಳಂತೆ ಒದಗಿಸಲು ಸೊಸೈಟಿಗೆ ಕೂಡಲೇ ಹಣ ಒದಗಿಸಬೇಕು, ಪುನರ್ವೇಸ ಕಟ್ಟಡದಲ್ಲಿ ಸರಕಾರದವರೇ ಫೈನಾನ್ಸಿಲ್ ಕಟ್ಟಡ ಕಟ್ಟಿಸಿ ಕೊಡಬೇಕು ಪುನರ್ವೇಶವ ಕೇಂದ್ರದಲ್ಲಿ ರಸ್ತೆಗಳಿಗೆ ವಿದ್ಯುದ್ದೀಪವೊದಗಿಸಬೇಕು, ಪುನರ್ವಾವೇಶನ ಕೇಂದ್ರದಲ್ಲಿ ಒಂದು ಗರ್ವಸಜ್ಜಿತ ಪೋಸ್ಟಾಫೀಸ್ಸು, ಒಂದು ಆಸ್ಪತ್ರೆ ಕೇಂದ್ರ ಆಸ್ಪತ್ರೆ—ಹಿಂದೂ ಭಜನಾ ಮಂದಿರ—ಒಂದು ಪೋಲೀಸ್ ಸ್ಟೇಷನ್ ಇವನ್ನು ಒದಗಿಸಬೇಕು. ಪುನರ್ವೇಶನ ಕೇಂದ್ರವನ್ನು ದೆವನ್ನೂ ಗ್ರಾಮವೆಂದು ಘೋಷಿಸಿ ಪಂಚಾಯತ್ ಸಿರ್ವಿಸ ಬೇಕು. ಒಂದನೆ ಹಂತದವರಿಗೆ ಕೊಟ್ಟಂತೆ ಎರಡನೇ ಹಂತದವರಿಗೂ ನಳ್ಳಿನೀರು ಒದಗಿಸಬೇಕು, ಕುಳ್ಳಾಪಿತ್ರಾಪುರ ರಸ್ತೆಯು ಬಡಿಯಲ್ಲಿ ಕನ್ನೀರು ಬಾವಿಯ ಸಮೀಪದ

ಅಭಿಪ್ರಾಯ

ಅಧಿಕಾರಕ್ಕಾಗಿ ಪಕ್ಷತ್ಯಾಗ ಸಲ್ಲದು

ನಮ್ಮ ದೇಶವು ಪ್ರಜಾತಂತ್ರಾಡಳಿತದಲ್ಲಿ ಇದ್ದಾಗ ಚುನಾವಣೆಯಿಂದ ನಾವು ಅತ್ಯಂತ ದೇಶ ಪ್ರೇಮವುಳ್ಳ ಪ್ರಜೆಗಳಾಗಿದ್ದರೂ ಅಂಥ ದೇಶಕ್ಕೆಮನವು ಈ ಸ್ಥಿತಿಗೆ ಇಡಳಿತದಲ್ಲಿ ಕಷ್ಟಕರವಾಗಿರುತ್ತದೆ. ಅದಕ್ಕೆ ಕಾರಣ ಪ್ರತಿಯೊಬ್ಬರೂ ತಮ್ಮತನ ವಿರೋಧಿಕ್ಯಾಗಿ ಬೇಕಾಗಿರುವ ಅಧಿಕಾರ ಗಮ್ಯಕ್ಕೆ. ಈ ಅಧಿಕಾರ ಗದ್ದುಗೆ ಪ್ರೇಮವು ಹೊಸ ರಕ್ತದ ರಾಜಕಾರಣಿಗಳಲ್ಲಿರಲಿ, ಗಾಂಧಿಗರಡಿಯಲ್ಲಿ ಮನಪ್ಪನ್ನು ಕಂಡ ರಾಜಕಾರಣಿಗಳೂ ಇಂದು ಬಾಂದು ಹುದ್ದೆ ದಕ್ಕುವಿನಿದ್ದರೆ ಆ ಕಾರಣ ಈ ಕಾರಣ ಹೇಳಿ ಪಕ್ಷಾಂತರ್ಗಾರ್ಗ ಹೊಡೆಯುವುದನ್ನು ರಾಜ್ಯಮಟ್ಟ ರಾಷ್ಟ್ರಮಟ್ಟದಲ್ಲಿ ಕಾಣಬಹುದು.

ರಾಜಕೀಯ ಧುರೀಣರು ಪಕ್ಷದಿಂದ ಪಕ್ಷಕ್ಕೆ ನೆಗೆಯುವುದು ದೇಶಹಿತ ದೃಷ್ಟಿಯಿಂದ ಒಳ್ಳೆಯದಲ್ಲ

ರಾಜಕಾರಣಿಗಳು ತಮ್ಮ ಹಿತಕ್ಕಿಂತ ದೇಶ ದೊಡ್ಡದು ಎಂದು ತಿಳಿಯುವುದು ಅವಶ್ಯ. ಅನಂತರ ಪಕ್ಷನಿಷ್ಠರ್ಗ ಒಳ್ಳೆಯದಲ್ಲಿ ವೆಂದು ತಿಳಿಯುತ್ತೇವೆಂದು ನಾವು ಇನ್ನೂ ಕೈ ಕಟ್ಟಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಈ ಪಕ್ಷಾಂತರ ಹನ್ಯಾಸವನ್ನು ಈಗಲೇ ತಡೆಗಟ್ಟದಿದ್ದರೆ ಇಮು ಸಾಂಕ್ರಾಮಿಕ ರೋಗದಂತೆ ಪಂಡಿ ಎಲ್ಲರೂ ಅಧಿಕಾರಕ್ಕಾಗಿ ಅಲೆಸುವಂತಾಗುತ್ತದೆ ಎಂಬುದಕ್ಕೆ ಹೆಂಯಾಣವೇ ಸಾಕು. ಈ ಸಮಾಜ ದುಂತವನ್ನು ತಪ್ಪಿಸಲಿಕ್ಕಾಗಿ ಈ ಕೆಳಗಿನ ಕೆಲವು ಚಿಕಿತ್ಸೆಗಳನ್ನು ಕಾರ್ಯಗತ ಮಾಡಬೇಕಾಗಿ ಜನತಾ ಧುರೀಣರಲ್ಲಿ ಕೇಳಿಕೊಳ್ಳುತ್ತೇವೆ:—

ಯಾವ ಪಕ್ಷಪನರೇ ಆಗಲಿ, ಪಕ್ಷ ಬಿಟ್ಟು ಮತ್ತೊಂದು ಪಕ್ಷ ಸೇರಲಿಚ್ಛೆ ವರುಷದಪ್ಪಿ ಕೆಲವು ತಿಂಗಳು ನಿಗದಿ ಇರಬೇಕು. ಆ ನಂತರ ಪಕ್ಷ ಬಿಟ್ಟು ಪಕ್ಷ ಸೇರುವಂತಿರಬಾರದು. ಒಬ್ಬ ವ್ಯಕ್ತಿಗೆ ಜೀವಮಾನದಲ್ಲಿ ಒಂದೇ ಸಲ ಪಕ್ಷ ಬದಲಾಯಿಸುವಂತಿರಬೇಕು. ಅಕನು ರೋಕಸಭಾ ಸದಸ್ಯನೋ ವಾನಸಭಾ ಸದಸ್ಯನೋ ಆಗಿದ್ದ ಪಕ್ಷದಲ್ಲಿ ಪಾರ್ಟಿಗೆ ರಾಜಿನಾಮೆ ಕೊಡುವಾಗ ಸಭಾಸ್ಥಾನಕ್ಕೂ ರಾಜಿನಾಮೆ ಕೊಡಬೇಕು. ಇಂತಹ ಹಲವು ಕಟ್ಟುನಿಟ್ಟಾದ ಕ್ರಮ ಕೈಗೊಂಡರೆ ನಮ್ಮ ರಾಜಕೀಯ ಚಕ್ರವ್ಯ ಒಂದು ಬಿಟ್ಟನಲ್ಲಿ ನಿಂತೀತು. ನಮ್ಮದು ಜನತಾ ಪ್ರಭುತ್ವ ದೇಶ. ಇಲ್ಲಿ ಸರ್ವರಿಗೂ ವೈಯಕ್ತಿಕ ಸ್ವಾತಂತ್ರ್ಯ ಉಂಟೆಂದು ಸಲ್ಲದ ಮಾರ್ಗದಲ್ಲಿ ರಾಜಕಾರಣಗಳನು ನಡೆಯಗೊಡುವುದು ಸರಿಯಲ್ಲ. ವೈಯಕ್ತಿಕ ಸ್ವಾತಂತ್ರ್ಯ ಇರಬೇಕಾದ್ದು ನಿಜ. ಆದರೆ ದೇಶದ ಕ್ಷೇತ್ರ ಬಂದಾಗ ವೈಯಕ್ತಿಕ ಸ್ವಾತಂತ್ರ್ಯ ಎಂದು ಕೂರುವುದು ತರವಲ್ಲ.

ದಿ। ರಾಮಮನೋಹರ ಲೋಹಿಯಾ ಇವರ ವಿಚಾರಗಳು

ನಮ್ಮ ರಾಷ್ಟ್ರವು ಕೆಲವರ್ಗಗಳ ರಂಗ್ಷ್ಟ ವಾಗಿದೆ. ಅವಾರಿ ಸ್ವಾರ್ಥ ತ್ಯಾಗ ಮಾಡಲಿಲ್ಲ ಜನರೆಮ್ಮೇ ನಮ್ಮ, ತಮಣರಲ್ಲಿ ಇದ್ದಾರೆ. ಆದರೆ ಸಾತತ್ಯಪೂರ್ವಕ ಕೆಲಸ ಮಾಡುವ ಹಾಗೂ ಜನರನ್ನು ಆಕರ್ಷಿಸಿ ಕೊಳ್ಳುವ ಶಕ್ತಿ ಅವರಲ್ಲಿ ಇಲ್ಲ. ಅನ್ಯಾಯ ವನ್ನು ಪ್ರತಿಭಟಿಸಿ ಜೈಲು ಸೇರಲಿಕ್ಕೆ ಸಾವಿರಗಟ್ಟಲೆ ಸ್ವಯಂ ಸೇವಕರನ್ನು ಒಟ್ಟು ಗೂಡಿರಲಿಲ್ಲ್ಲು. ಆದರೆ ಕಾಲುವೆ ತೋಡುವದು, ಒಡ್ಡು ಕಟ್ಟುವದು, ಮೊದಲಾದ ಚಿಜನಾತ್ಮಕ ಕಲಸಗಳಿಗೆ ಇಷ್ಟೊಂದು ಜನರನ್ನು ಕೂಡಿಸುವದು ನಮ್ಮಿಂದ ಸಾಧ್ಯವಾಗುತ್ತಿಲ್ಲ.

ದೇಶದಲ್ಲಿಯ ಅಶಾಂತಿ ಹಾಗೂ ಕಿಮ್ಮತ್ತಿನತ ಕಂಡು ನಾನು ಸ್ವಲ್ಪುಟ್ಟನಾಗಿದ್ದೇನೆ. ಕೆಲಸವನ್ನು ಶಕ್ತವಾದಷ್ಟು ಕಡಿಮೆ ಮಾಡಬೇಕು ಎಂಬ ವಿಷಮದಲ್ಲಿ ಪೂರ್ಣ ಎಲ್ಲ ಪಕ್ಷಗಳ ಒಳ್ಳತ್ತರುವಂತೆ ಕಾಣುತ್ತದೆ.

ಇನ್ನು ಸಮಾಜವಾದಿ ಪಾರ್ಟಿ ಸಾಮ್ಯವಾದಿ ಕಾರ್ಯಕರ್ತರು ಕೇವಲ ಪಗಾರು ಮತ್ತು ಬೋನಸ ಬಗ್ಗೇ ಬಡಿದಾಡುತ್ತ ಕೂಡುವ ರಾಲ ಏಂಂ ಹೋಗಿದ. ಹಚ್ಚು ಕಲಸ ಹಾಗೂ ಹೆಚ್ಚು ಪರಿಶ್ರಮ ಮಾಡುವಂತೆ ಅವರು ನೌಕರರನ್ನು ಕೊಡಲು ಮುಂದಾಗಬೇಕು. ವಿಷಮಕ್ಕೆ ಡಾಗೂ ದುಂದು ವೆಚ್ಚಗಳನ್ನು ಪ್ರತಿಭಟಿಸಲೇ ಬೇಕು. ಆದರೆ ಅದು ಜತೆಯಲ್ಲಿ ದುಡಿಯಬೇಕೆಂಬ ಇಚ್ಛೆಯೂ ಬೇಕು.

ಜಾತಿ ಪದ್ಧತಿ ಹಾಗೂ ಸ್ತ್ರೀಯರೊಡನೆ ದುರ್ವ್ಯವಹಾರ, ಇವೆರಡು ಭಾರತೀಯ ಸಮಾಜದಲ್ಲಿಯ ದೊಡ್ಡ ತುರಂಗಗಳಾಗಿವೆ. ಸ್ತ್ರೀಯರೂ ಶೂದ್ರರೂ ಕೂಡಿದರೆ ನಮ್ಮ ಸಮಾಜದ ನೂರರಲ್ಲಿ ೯೦ ನೆಯ ಭಾಗವೇ ಆಗುತ್ತದೆ ಇಷ್ಟು ದೊಡ್ಡ ಸಮಾಜವನ್ನು ಪ್ರತ್ಯೇಕವಾಗಿರಿಸಿ ಬಹಿಷ್ಕರಿಸಿದ್ದರಿಂದ ಭಾರತೀಯ ಅಕ್ಷತ್ವ ಪತಿತವಾಗಿದೆ. ನಿಜವಾಗಿಯೂ ವಿಚಾರ ಮಾಡಿದರೆ ಇವರಿಬ್ಬರಲ್ಲಿ ಪರಮವಧಿಯ ಶಕ್ತಿ ಇದೆ. ಆದರೆ ಇವೆರಡು ಜೈಲುಗಳನ್ನು ಕಾಯಂ ಇರಿಸಿದ್ದರಿಂದ ಸಮಾಜದಲ್ಲಿಯ ಐಡನತ್ವ, ಉಲ್ಲಾಸ, ಸಾಹಸ ಹಾಗೂ ಕರ್ತೃತ್ವಶಕ್ತಿ ಕೊಳೆಯು ಹತ್ತಿವೆ. ಇವೆರಡೂ ಜೈಲುಗಳು ಒಂದಕ್ಕೊಂದು ಸಂಬಂಧಪಟ್ಟಿದ್ದು ಪರಸ್ಪರರಿಗೆ ಪೋಷಕವಾಗಿವೆ. ಮತ್ತು ಆದಂದಲೇ ಅವುಗಳನ್ನು ನಷ್ಟಪಡಿಸುವ ಕುರಿತು ಬುದ್ಧಿಪುರಸ್ಸರವಾಗಿ ಪ್ರಯತ್ನಿಸದೆ ಉಳಿದರೆ ನಮ್ಮ ಕ್ರಾಂತಿಯ ಧಾಷೆಗೆ ಅರ್ಥವೇ ಇಲ್ಲ. ಆರ್ಥಿಕ ಕ್ರಾಂತಿಯೊಂದಾದರೆ ಈ ಜೇಲುಗಳೂ ಕೆತ್ತು ಹೋಗುವವೆಂದು ತಿಳಿಯುವದು ಒಳ್ಳೆ ಭ್ರಮೆ.

ನಿಸರ್ಗ ನಿನಾದ

ಮೇಲಿಂದ ಕೆಳಗೆಸss
ಬಾನಿಂದ ಭುವಿಗೆsss
ಇಳಿದಿಳಿದು ಹರಿದಿತ್ತು ಬೆಳದಿಂಗಳು.
ಬಾನಾಜೆಯಲ್ಲಿ
ತಾರಾ ಕಿರಣ ಬಳ್ಳಿ
ಮಧುರತರವೆಸೆದಿತ್ತು ಜೆಲುಕಂಗಳು
ಮಿನುಗುವಾ ಚುಕ್ಕೆಗಳು
ಥಕ ಥಕನೆ ಮಿಣುಕುಹುಳು
ಸುಖದಿಂದ ಕುಣಿಯುತೆ ಮೆರೆದಿದ್ದಿತು.
ಸೊಬಗಿನಾ ಸೋನೆಯಿದು
ನಭವಿಂದ ಇಳಿಗಿಳಿದು
ಕಲೆಯು ಚೆಲುವೇ ಕರಗಿ ಒನರಿದ್ದಿತು
ಫಲರ್ಗ ಕುಂಭದಲೊಂದು
ರಸವನಂತ ರಸಬಿಂದು
ಉಮುಂಡೊಡೆ ಮನವು ತಾನದರಲ್ಲಿ
ತೊಯ್ದು.
ಮೊಗ್ಗು ಮಲ್ಲಿಗೆ ಮನವು
ಹಿಗ್ಗಿ ಅಪ್ಪಲಾದಲಿ
ಸುಗ್ಗಿಯನ್ನೊಡನೊಡನೆ ತಾಬಳಿಗೆ
ಒಯ್ದು.
ಸೃಷ್ಟಿ ಮಾಯಜಾಲ
ದೃಷ್ಟಿಯನು ಕಳ್ಳಹಿತ್ತು
ದೃಷ್ಟಿ ಮಾನದ ದೃಷ್ಟಿ ನೀರವತೆಯು.
ಮಂತ್ರವಾದಿನು ಮಂತ್ರ
ತಂತ್ರಕ್ಕೆ ಸಿಲುಕಿದಾ
ಫಣಿಯುತೆರವಿಟ್ಟು ತ [illegible]

—ಶ್ರೀ ಮ. ಗೋ. ರಾವ್.

ಜನವರಿ ೨೬

ಭಾರತೀಯಂ ಪನ ಗೊಂಗ. ಪರಮ ಪವಿತ್ರ ದಿನ. ಪ್ರಜಾರಾಜ್ಯ ದಿನೋತ್ಸವದ ನವಿ ನೆನಪನ್ನು ಚಿರಂತನವಾಗಿರಿಸಲು

ನವಯುಗವು

ನಾಂಡಿನ ಪ್ರಮಿಖ್ಯಾತ ಬರಹಗಾರರ ರಾಜಕೀಯ, ಪಾಗೂ ಸಾಂಸ್ಕೃತಿಕ ಮೌಲ್ಯವಿರುವ ಲೇಖನಗಳಿಂದ ಕೂಡಿದ

ಪ್ರಜಾರಾಜ್ಯ ವಿಶೇಷ ಸಂಚಿಕೆಯನ್ನು

ಹೊರಡಿಸುವುದು.

ಕರ್ನಾಟಕದಲ್ಲೂ ಕನ್ನಡಿಗರು ನಲಿಸಿರುವ ಪ್ರತಿಯೆಡೆಗಳಲ್ಲಿ ವಿಶಾಲವಾಗಿ ಸ್ವೀಕಾರವಾಗುವ ಈ ಸಂಚಿಕೆಯು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ವಿವರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ, ದ. ಕ.

READ & ADVERTISE IN NAVAYUGA WEEKLY

ಗೇಹ ರಾಜ್ಯದಲ್ಲಿ

ಕೊನೆಗೂ ಉತ್ತರ ಕೊಡಲೇ ಬೇಕು

"ಹೌದ್ರೀ..."

'ಹ್ಞೂಂ, ಏನೂಂತ?"

'ಭೂಕಂಪದಿಂದಾಗಿ ಕಾಂಗ್ರೆಸ್ ಅಧಿವೇಶನ ಮುಂದೆ ಹೋಯ್ತಂತಲ್ಲಾ?"

"ಯಾರು ಹೇಳಿದ್ರೆ?'

"ಮತ್ಯಾರು? ಕಾಮರಾಜರೇ ಫೋಷಣೆ ಮಾಡಿದ್ದಾರಂತೆ...."

"ಭೂಕಂಪಕ್ಕೂ ಕಾಂಗ್ರೆಸ್ ಅಧಿವೇಶನಕ್ಕೂ ಯಾವ ಸಂಬಂಧವೂ ಇಲ್ಲ; ಅದು ಯೋಜಿಸಿದ್ದಂತೆ ಜನವರಿ ೫ಕ್ಕೆ ನಡೆದೇ ನಡೆಯುವುದು ಎಂದು ಮೊನ್ನೆ ಅನ್ನುತಿದ್ರು—"

'ಅದು ಮೊನ್ನೆಯಾಯ್ತು; ಇವತ್ತು ಹೀಗೆ; ಇನ್ನು ನಾಳೆ ಹೇಗೇಂತ ಕಾದು ನೋಡ ಬೇಕು...'

'ಹ್ಞೂಂ....ಅದೂ ಸರಿಯೇ ಅನ್ನಿ...'

'ಯಾನುಪು?'

'ಅಧಿವೇಶನ ಮುಂದೆ ಹಾಕಿದ್ದು....'

'ಯಾಕೆ?'

'ಸಾಂಗ್ಲಿಯಲ್ಲಿ ತಾನೆ ಅಧಿವೇಶನ ನಡೆಸು ಬೇಕಾದ್ದು?"

"ಹೌದು..."

"ಕೊಯ್ನಾದಿಂದ ಸಾಂಗ್ಲಿ ಬರೇ ಹತ್ತು ಮೈಲು ದೂರ...."

'ಏತಾಯಿತು?'

"ಆಗೋದೇನೂ ಇಲ್ಲ. 'ಕೆಂಯ್ನಾ ನಗರ'ಕ್ಕೆ ಇನ್ನೂ ಭೂಕಂಪದ ಭೀತಿ ದೂರವಾಗಿಲ್ಲವಂತೆ...."

"ಓಹೋ, ಹಾಗೆ ಬನ್ನಿ.ಪಾಪ ಅಧಿವೇಶನ ವೇಳೇನೇ ಭೂಕಂಪವಾದ್ರು ನಮ್ಮ ಸೈಫ್ಸಂಪವೂ ಆಗ ಬಹುದೂಂತ ಹೆದ್ರಿಕೆ ಯಾಯ್ತೇನು?"

'ಛೆ....ಛೆ.... ಹಾಗೇನೂ ಇಲ್ಲ. ಕೊಯ್ನಾ ನಗರ—ನಡರವಾಸಿಗಳ ಪುನರ್ವಿವೇಶನ ಕಾರ್ಯ ಕಾಂಗ್ರೆಸ್ ಅಧಿವೇಶನ ಕ್ಕಿಂತ ಹೆಚ್ಚು. ಇದನ್ನು ಕಂಡೇ ಮಂತ್ರಿ ನಾಯಕರು ಮಹಾರಾಷ್ಟ್ರದಲ್ಲೇ ಅಧಿವೇಶನ ನಡೆಯಬೇಕಾದ್ರೆ ಮಾರ್ಚಿಗೆ ಮೊದಲು ಸಾಧ್ಯವಿಲ್ಲ ಅಂತಾರೆ, ತೋರುತ್ತದೆ...."

"ಪೀವನ್ನುವಂತೆ ಆದೂ ಸರೀನ್ಸಿ. ದೇಪ್ರಿಗೆ ಜಾತ್ರೆ ಎಂದಾದರೇನಂತೆ? ಆದ್ರಾ...'

'ಏನು?"

'ಆ ಸಮಯ ಪ್ರದರ್ಶನ ಏರ್ಪಡಿಸಲು ಬೇಕಷ್ಟು ಏರ್ವಾಡು ಮಾಡಿಕೊಂಡಿದ್ದ ಸಂ. ಮ. ಸ. ಕೈ ಪಾಪ, ಬಾರಿ ನಷ್ಟ.'

'ಸಾಯಕರು ದೆಹಲಿಯಲ್ಲೇ ಅಧಿವೇಶನ ನಡೆಸಿ ಅಂದಿದ್ದಾರಂತೆ...."

'ಸರಿ ಹೋಯ್ತಲ್ಲಾ? ಸಂ. ಮ. ಸ. ದೆಹಲಿಗೆಹೋಗಿ ಪ್ರದರ್ಶನ ಮಾಡುವುದು ಸಾಧ್ಯವಿಲ್ಲ; ಇದ್ದರೂ ಹತ್ತಾರು ಜನರು ಕರಿ ಪತಾಕೆ ಎತ್ತಿ ಭೂತ ಘೋಷಣೆ ಮಾಡಿಯಾರು. ಮಹಾರಾಷ್ಟ್ರದಲ್ಲೇ ಆದರೆ, ಪ್ರದರ್ಶನ, ಬಿರುಸು—ಬಾಣಗಳೂ ಹೆಚ್ಚಬೇಕು....'

'ಒಮ್ಮೆ ಮಾಡಿದ ತಯಾರಿ ನಷ್ಟವಾಯಿತೂಂತ...ತಮ್ಮ ಪರವಾಗಿ ಪ್ರದರ್ಶನ ಮಾಡುತ್ತಿರುವವರಿಗೆ ತೊಂದರೆಯಾಗಬಾರದೂಂತ ನಾಯಕರು ಈ ಖಗೆಯ ಸಲಹೆ ಕೊಟ್ಟದ್ದಾರೆಯೆ?'

"ಆಯ್ಯೋ, ನಿನ್ನ ತಲೆಯೆ!'

"ನನ್ನ ತಲೆಯೇನಾಗಿದೆ? ಎನೋ ಮೂಗಿವಲ್ಲಿ ನೆಗಡಿಯೂದದ್ರಿಂತ ತಲೆ ಹುಸು ಭಾರವಾಗಿದೇಂತ ಅನ್ನಿಸುತ್ತಜೆ.'

"ಅಯ್ಯೋ, ನೀಲಗಿರಿ ಎಣ್ಣೆ ಒಳ್ಳೆ ಮೆಣಸು ರಷಾಯ ಒಂದು ಬೌಂಸು"

"ಛೆ, ಅದು ಭಾರಿ ಖಾರ....'

"ಹಾಗಾದರೆ, ಚಿಂತೆಯೂಕೆ? ಸಕಲ ರೋಗ ನಿವಾರಕ ಗುಳಿಗೆ ಅಸ್ಪ್ರೋ...ನಯೂ ಮೈಕ್ರೊಫ್ಲೈಗ್ರೆಡ್ ಅಸ್ಪ್ರೋ ಸಾರಿಡಾನ್, ಅವೇದನ್, ಒರಿಸಿಪ್ಲಾಲ್...."

"ಛೆ ಛೆ....ಅಲ್ರಿ, ಇಷ್ಟೆಲ್ಲ ಗುಳಿಗೆ ನುಂಗಿದ್ರೆ ಏಪ್ಪಾದೀತು?"

'ಸಿರಳಂಪ ನಿಂಪು ಹೋಗುತ್ತೆ, ಉದರಕಂಪ ತಡೆಯುತ್ತೆ, ಹೃತ್ಕಂಪ ನಡೆದು ಹೋಗುತ್ತೆ....'

ಛೆ...ಆಭದ್ರ ಮಾರಾಡ ಬೇಡ್ರಿ....ನನಗೆ ಯಾವ ಗುಳಿಗೇನೂ ಬೇಡ. ಎರಡು ದಿನದಲ್ಲಿ ಪೂರಾ ಸರಿಹೋಗುತ್ತೆ...."

"ನಿನಗಲ್ಲೆ, ಕರ್ನಾಟಕದ ಜನರಿಗೆ, ಮತ್ತೆ ಮುಖ್ಯವಾಗಿ ಪತ್ರಕರ್ತರಿಗೆ...'

"ಯಾಕಂತೀರಾ?'

'ಮತ್ಯಾಕೆ? ಎಸ್ಸೆಸ್ ಈಗಲೇ ಹೊಸ ನಾಯಕನನ್ನ ಆರಿಸಬೇಕಾಗಿಲ್ಲ. ಆದುದರಿಂದ ಅವರ ಉತ್ತರಾಧಿಕಾರಿ ಯಾರು, ಯಾರು ಹೇಗೆ ಅಂತ ಎಂತ ಊಹಾಪೋಹ ಮಾಡಿ, "ಉತ್ತರಾಧಿಕಾರಿ"ಯನ್ನು ಸುಳಿಯ ನಡುವಲ್ಲಿ ಇಡಿಸಲು ತಲೆಸಿಡಿಸಿಕೊಳ್ತಾರಲ್ಲಾ ಅಂಥವರಿಗೆ...'

'ಅದೀಗ ಸರೀನ್ಸಿ....ನೋಡಿ, ಇಂದಿರ ಮ್ಮನ ಸಚಿವ ಸಂಪುಟ ಪುನಾರಚನೆ ಆಗುತ್ತೆ, ಭಾರಿ ಭಾರಿ ಅಂತರ ನಡೆಯುತ್ತೆ ಅಂತ ಡಮಾಮಿ ಬಾರಿಸುತಿದ್ರು .... ಆದದ್ದು?"

"ಆಡ್ಕೇ ಅಂದದ್ದೆ. ಎಸ್ಸೆಸ್ ಹೇಳಿದ್ರಲ್ಲಾ..."

'ರಿ....ಈಗ ಬಂದೆ...."

"ಎಲ್ಲಿ ಹೋದ್ಯೇ...'

'....ರೀ, ನಾನು..."

"ಸರಿ ಹೋಗ್ಬಿಟ್ಟಿ ಬಿಡು....ನನಗೂ ನಿಮಗೂ ಅವಕಾಶ ದೊರೆಯತೂಂತೆ...'

"ಹೌದ್ರಿ....ಹೌದು....ಕೆಲದಿನ ಮಾತ್ರ ತಾನೆ? ಮತ್ತೆ ಉತ್ತರ ಕೊಡಲೇ ಬೇಕು'

'ಹ್ಞೂಂ...."

—ಗೋರಾ.

ಚೆಂದಾದಾರರೆಲ್ಲಿ ವಿನಂತಿ

ಇನ್ನೂ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ದಯಮಾಡಿ ಅಪಷ್ಟು ತ್ವರ್ಯ ಕಳುಹಿಸಿ ಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ, ಎಷ್ಟಕ್ಕೂ ಪತ್ರಿಕೆ ಬೇಡವೆಂದಿರುವವರು ಹಾಗೆಯೇ ನಮಗೆ ತಿಳಿಸಿ, ಈ ವರೆಗಿನ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾಗುವುದು.

ವೆನೇಜರ್, ನವಯುಗ

ಕಾಸರಗೋಡು ವಾರ್ತೆಗಳು

(ವಿಶೇಷ ಪ್ರತಿನಿಧಿಯಿಂದ)

ಕಾಸರಗೋಡು, ದಿ. ೧೧— ಈ ತಾಲೂಕಿನ ಆಹಾರ ಪರಿಸ್ಥಿತಿಯಂಗಲೇ ಗಂಭೀರವಾಗಿದೆ. ಅಕ್ಕಿ ಕಿಲೋಗೆ ರೂ. ೨೦ರಿಂದ ರೂ. ೨.೫೦; ಸಕ್ಕರೆಗೆ ರೂ. ೫ರಿಂದ ರೂ. ೭ ಎಂಬ ಧಾರಣೆಯಾಗಿದೆ. ರೇಶನ್ ಅಂಗಡಿಗಳಿಂದ ರೇಶನ್ ಪ್ರಮಾಣವನ್ನು ಆಪ ಮಾಲ್ಯಗೊಳಿಸಲಾಗಿದೆ. ಸಾಲ ಮುಡಿದ ಕೈ ಮಲಬಾರಿಗೆ ಲಾರಿಗಳಲ್ಲಿ ನಿರಾತಂಕವಾಗಿ ಅಕ್ಕಿ ಸಾಗಿಸುವ ಕಾಳಸಂತೆಗಾರರನ್ನು ಕೇಳುವವರಿಲ್ಲದಂತಾಗಿದೆ.

ಸ್ಥಾಪಕರ ದಿನಾಚರಣೆ

ಎಡನೀರು ಸ್ವಾಮಿಜಿ ಹೈಸ್ಕೂಲಿನ ಸ್ಥಾಪಕರ ದಿನವು ಕೇರಳ ಹಿಂದೂ ಧಾರ್ಮಿಕ ಮತ್ತು ಉಂಬಳಿಗಳ ಕಮಿಶನರ್ ಶ್ರೀ ಶಂಕರನ್ ನಾಯರ್‌ರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲ್ಪಟ್ಟಿತು.

ವಿಧಾನಸಭಾ ಸದಸ್ಯ ಶ್ರೀ ಕೆ. ಎಂ. ಭಂಡಾರಿ ಉದ್ಘಾಟಿಸಿದ್ದು ವಿಧಾನಸಭಾ ಸದಸ್ಯ ಶ್ರೀ ಯು. ಪಿ. ಕುಣಿಕುಳ್ಳಾಯರು ಭಾಷಣ ಮಾಡಿದರು. ಶ್ರೀ ಶ್ರೀ ಕೇಶವಾನಂದ ಭಾರತಿಯವರು ತಮ್ಮ ಸಂದೇಶವನ್ನು ವಿವರಿಸಿದರು.

ಕನ್ನಡಿಗರಿಗೆ ಕಿರುಕುಳ

ಈ ತಾಲೂಕಿನ ಕನ್ನಡ ಬಲ್ಲ ಅಧಿಕಾರಿಗಳಿಗೆ ಕೇರಳದ ಸಚಿವಕ್ಷೇತ್ರಗಳೂ ಸರಕಾರವೂ ವಿವಿಧ ಹಂಚಿಕೆಗಳನ್ನು ಹೂಡುತ್ತಿವೆ. ಈ ಪ್ರದೇಶದ ಅಭಿವೃದ್ಧಿ ಕಾರ್ಯಗಳನ್ನು ಅವಗಣಿಸಲಾಗುತ್ತಿದೆ. ಇಲ್ಲಿನ ಜನರ ಪ್ರಾಣ ಮತ್ತು ಸೊತ್ತುಗಳಿಗೂ ರಕ್ಷಣೆ ನೀಡುವುದರಲ್ಲಿಯೂ ಪಕ್ಷಪಾತವಾಗುತ್ತಿದೆಯೆಂದು ಕರ್ನಾಟಕ ಪ್ರಾಂತೀಕರಣ ಸಮಿತಿಯು ಇತ್ತೀಚೆಗೆ ಒಂದು ಠರಾವಿನ ಮೂಲಕ ಕೇಂದ್ರ ಸರಕಾರವೇ ರಕ್ಷಣೆಯೊದಗಿಸುವಂತೆಯೂ ಮಹಾಜನ ಆಯೋಗದ ಶಿಫಾರಸಿನನ್ವಯ ಬೇಗನೇ ಈ ಪ್ರದೇಶವನ್ನು ಮೈಸೂರಿನೊಂದಿಗೆ ಸೇರ್ಪಡೆಗೊಳಿಸುವಂತೆಯೂ ವಿನಂತಿಸಿದೆ.

ಬಸರೂರು ದೇವಾಲಯದಲ್ಲಿ ಕಳವು

ಬಸರೂರಿನ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಇತ್ತೀಚೆಗೆ ಸುಮಾರು ಒಂದು ಲಕ್ಷ ರೂ. ಬೆಲೆ ಬಾಳುವ ಚಿನ್ನಾಭರಣಗಳ ಕಳವಾಗಿದೆಯೆಂದು ತಿಳಿದು ಬಂದಿದೆ.

ಆ ದಿನ ದೇವಸ್ಥಾನದ ಆರ್ಚಕರಿಗೆ ಗರ್ಭಗುಡಿಯ ಬೀಗ ಮುರಿದುದು ಗೊತ್ತಾಗಿ ನೇರವಾಗಿ ಆಡಳ್ತೆ ಮೊಕ್ತೇಸರರಿಗೆ ವಿಷಯ ತಿಳಿಸಿದರೆಂದು ಹೇಳಲಾಗಿದೆ. ಕುಂದಾಪುರ ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 172/67.

ವಾದಿ: ಕೋಟಿ ವೆಂಕಟೇಶ ಭಟ್ಟ,

ಮತ್ತು

ಪ್ರತಿವಾದಿಗಳು: ಕುಂದಾಪುರ ಶ್ರೀ ವೆಂಕಟ್ರಮಣ ದೇವರ ಭಂಡಾರ ಸಹಾ. 3ನೇ ಪ್ರತಿವಾದಿ- ಕೋಟಿ ರಮಾನಾಥ ಭಟ್ಟ, ವಿಟ್ಟಲ ಭಟ್ಟರ ಮಗ, ರಾಜ ನಿವಾಸ, ಬಸವನ ಗಲ್ಲಿ, ಬೆಳಗಾವಿ—ಇವರಿಗೆ ತಿಳಿಯಪಡಿಸಿದ್ದು.

ಕುಂದಾಪುರ ಶ್ರೀ ಕೋಟಿ ಚನ್ನಯಂತ ದೇವಸ್ಥಾನದಲ್ಲಿ ಪೂಜೆ, ವಿನಿಯೋಗಾದಿ ನಡೆಸಲು ವಾದಿ ಮತ್ತು 2ರಿಂದ 6ನೇ ವರೆಗಿನ ಪ್ರತಿವಾದಿರ ಕುಟುಂಬಕ್ಕೆ ವಂಶಾನುಗತ ಹಕ್ಕಿರುವುದೆಂಕ ವಗೈರೆ ದಿಲ್ಲರೇಶನ್ ಬಗ್ಗೆ, ಸದ್ರಿ ಪೂಜೆ ವಗೈರೆ ನಡೆಸುವಲ್ಲಿ 1ನೇ ಪ್ರತಿವಾದಿಯು ಯಾವ ವಿಧದಿಂದಲೂ ಆಕ್ಷೇಪ ಮಾಡದಂತೆ ಶಾಶ್ವತ ಇಂಜಂಕ್ಷನ್ ಕೊಡಿಸ ಬೇಕೆಂತಲೂ ವಗೈರೆ ನಿವ್ಯಷ್ಟಿ ಬಗ್ಗೆ ವಾದಿ ಮಾಡಿದ ಮೇಲ್ಕಂಡ ದಾವಾ ತನಿಪಿ ಬಗ್ಗೆ ತಾ. 6.1.1968ಕ್ಕೆ ಇಟ್ಟಜೆ. ನಿಮಗೆ ಉದಾಹರಣೆ ಯಿದ್ದರೆ ಆ ದಿನ ಹಗಲು 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಹೇಳಿ ಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ತೀರ್ಮಾನಿಸಲ್ಪಡುತ್ತದೆ.

(ಕೋರ್ಟು ಹುಕುಂ ಪ್ರಕಾರ)

A. S. N. HEBBAR,
ವಾದಿ ಪರ ವಕೀಲ.

ಕುಂದಾಪುರ, 12.12.67.

ಕುಂದಾಪುರ ಮು. ಕೋರ್ಟಿನಲ್ಲಿ

O. S. 386/1967.

ವಾದಿರು: ಅಣ್ಣಪ್ಪ ದೇವಡಿಗ ಕೂಡಾ

ಪ್ರತಿವಾದಿರು: ನಾಗ ದೇವಡಿಗ ಕೂಡಾ 86 ಜನರು,

3, 4, 8, 24, 27, 28, 32ನೇ ಪ್ರತಿವಾದಿಗಳಿಗೆ ಯಾ ಮೂಲಕ ತಿಳಿಸುವದೇನೆಂದರೆ—

3ನೇ ಪ್ರ. ವೆಂಕಟ ದೇವಡಿಗ, 4ನೆ ಪ್ರ. ನಾರಾಯಣ ದೇವಡಿಗ—ನಾಗಹೆಂಗ್ಸಿನ ಮಕ್ಕಳು; 8ನೆ ಪ್ರ. ಸುಬ್ಬಿ ಹೆಂಗಸು, ಬಟ್ಟು ಹೆಂಗ್ಸಿನ ಮಗಳು; 24ನೆ ಪ್ರ. ದಾರ ದೇವಡಿಗ, ಮೂಕ ಹೆಂಗ್ಸಿನ ಮಗ; 27ನೆ ಪ್ರ. ಕೇಶ ದೇವಡಿಗ, 28ನೆ ಪ್ರ. ಬಡ್ಡ ದೇವಡಿಗ—ಕೃಷ್ಣಿ ಹೆಂಗ್ಸಿನ ಮಕ್ಕಳು; 32ನೆ ಪ್ರ. ಕುಪ್ಪ ದೇವಡಿಗ, ಮೂಕಿ ಹೆಂಗ್ಸಿನ ಮಗ—ಕುಂದಾಪುರ ತಾಲ್ಲೂ ಉಪ್ಪುಂದ ಗ್ರಾಮದವರು.

ವಾದಿರು ನಿಮ್ಮ ವಗೈರೆ ಮೇಲೆ ಕೈಕೇತನಲ್ಲಿ ಕಾಜಸಿದ ನಿವ್ಯತ್ತಿಗೋಸ್ಕರ ಮೇಲ್ಕಂಡ ದಾವೆಯಂನು ವಾಕಲು ಮಾಡಿರುತ್ತಾರೆ. ಸದ್ರಿ ದಾವೆಯು ತಾರೀಕು 6.1.1968ಕ್ಕೆ ತಪ್ಪಿಗೆ ಯಿಟ್ಟಿರುವದ್ರಿಂದ ಸದ್ರಿ ದಾವೆಯಲ್ಲಿ ನಿಮ್ಮ ಕಡೆಯಿಂದ ಉದಾಹರಣೆ ದಾಖಲು ಮಾಡುವ ದುಯಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಸಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ದಾವೆಯಂನು ನಿಮ್ಮ ಗೈರುಹಾಜರಿಯಲ್ಲಿ ಕೇಳಿ ಫೈಸಲು ಮಾಡೋಡಾದೀತೆಂತ ನೀವು ತಿಳಿದಿರತಕ್ಕದ್ದು.

M. Madhava Rao,
Advocate for Plaintiffs.

ತಾರೀಕು 15-12-67.
ಠಿಕಾಣಿ: ಕುಂದಾಪುರ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. P. 166/1967.

ವಾದಿ: ಉಪ್ಪುಂದ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಭಂಡಾರ,

ಪ್ರತಿವಾದಿರು: ಶಂಕರ ಭಟ್ಟ (ಪೇತ) ಕೂಡಾ

4. ಸಕ್ಕನಾರಾಯಣ ಭಟ್ಟ, ವೆಂಕಟ್ರಮಣ ಭಟ್ಟ ಮಗ.
7. ಲಕ್ಷ್ಮಿ ಅಮ್ಮ.
9. ರಾಮಕೃಷ್ಣ ಭಟ್ಟ.
10. ಸುನೆರಬಮ ಅಮ್ಮ.
11. ಪಾರ್ವತಿ ಅಮ್ಮ—1ನೇ ಪ್ರತಿವಾದಿ ಮಕ್ಕಳು.
16. ರುಕ್ಮಿಣಿ ಅಮ್ಮ—ಮೃತ ವೆಂಕಟ್ರಮಣ ಮಗಳು.

ಕುಂದಾಪುರ ತಾಲ್ಲೂ ಉಪ್ಪುಂದ ಗ್ರಾಮದಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದ್ರೆ—

ಮೇಲಿನ ಅಮಲ್ದಾರಿಯಲ್ಲಿ ಸ್ಪಿರಾ ಯೇಲಂನ ಬಗ್ಗೆ ವಾದಿಯು ಯೇಲಂ ಯಿಸ್ತಿ ಹಾರು ದಾಖಲು ಮಾಡಿರುತ್ತಾನೆ. ಯಿಸ್ತಿ ಹಾರಿನ ಶರ್ತ ನಿರ್ಣಯಿಸುವಂತೆ ಅಮಲ್ದಾರಯನ್ನು ತಾ. 10-1-1968ಕ್ಕೆ ಶಫ್ತಿಗೆ ಯಿಟ್ಟಿದೆ. ಆ ಕಂರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಆ ದಿನ ಬೆಳಿಗ್ಗೆ 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಲು ಕ್ತಿದೆ.

ಕೋರ್ಟು ಹ್ಯುಂ ಪ್ರಕಾರ.

Y. Tejappa Shetty,
Advocate for Plff.

Coondapur, 12-12-1967.

ಬೊಂಬಾಯಿಯ ಶಿವಸೇನೆ

ಬರೆದವರು: ಶ್ರೀ ಎ. ರಾಮಣ್ಣ, ಮೈಸೂರು.

ಇಂದೂರಿನಲ್ಲಿ ನಡೆದ ಭಾರತೀಯ ಕ್ರಾಂತಿ ದಳದ ಪ್ರಥಮ ಸಮ್ಮೇಳನಕ್ಕೆ ಮೈಸೂರು ಜಕ್ಷತಾ ಪಕ್ಷದ ಪ್ರತಿನಿಧಿಯಾಗಿ ಹೋಗಿದ್ದ ನಾನು ಹಿಂತಿರುಗಿ ಬರುವಾಗ ಬೊಂಬಾಯಿಯಲ್ಲಿ ಎಂಟು ದಿನಗಳ ಕಾಲ ಇದ್ದು ಅಲ್ಲಿಯ ಶಿವಸೇನೆಯ ಹುಟ್ಟು ಬೆಳವಣಿಗೆ ಹಾಗೂ ಇತ್ಯಾದಿಗಳ ಬಗ್ಗೆ ಸೂಕ್ಷ್ಮ ಪರಿಚಯ ಮಾಡಿಕೊಂಡೆ. ಈ ಕಾಲದಲ್ಲಿ ನಾನು ದಕ್ಷಿಣ ಭಾರತೀಯರು, ಮಹಾರಾಷ್ಟ್ರೀಯನ್ನರ ಹಾಗೂ ಇತರ ಎಲ್ಲಾ ವರ್ಗದ ಜನರೊಡನೆಯೂ ಸಾಧ್ಯವಾದಷ್ಟು ಕಲೆತು ಮಾತುಕತೆ ಪಡೆಸಿದ್ದೇನೆ.

ಶಿವಸೇನೆಯು ಇತ್ತೀಚಿನ ಶಿಕ್ಷ. ಬಹುಮಟ್ಟಿಗೆ ಅದು 1967ನೇ ಇಸವಿಯ ಚುನಾವಣೆ ಕಾಲದಲ್ಲಿ ಹುಟ್ಟಿಕೊಂಡಿತ್ತೆಂದೇ ಹೇಳಬೇಕು. ಬೃಹತ್ ಬೊಂಬಾಯಿಂದ ಈ ಸಾರಿಯ ಮಹಾ ಚುನಾವಣೆಯಲ್ಲಿ 3 ಮಂದಿ ಮಹಾರಾಷ್ಟ್ರೀಯನ್ನರಲ್ಲದವರು ಸ್ಪರ್ಧಿಸಿದ್ದರು. ಅವರಲ್ಲಿ ಇಬ್ಬರು ದಕ್ಷಿಣ ಭಾರತೀಯರು. ಆದರೆ ಒಬ್ಬರು ಕೇರಳೀಯರು ಮತ್ತೊಬ್ಬರು ವೈಕೂಂನವರು. ಈ ಇವರ ಪೈಕಿ ಒಬ್ಬರಾದ ಶ್ರೀ ವಿ. ಕೆ. ಕೃಷ್ಣಮೆನನ್‌ರವರು ಕಾಂಗ್ರೆಸ್ಸಿನಲ್ಲಿರುವಾಗಲೇ ಬೊಂಬಾಯಿಯ ಉಕ್ಕಿನ ಮನುಷ್ಯ, ಶ್ರೀ ಎಸ್. ಕೆ. ಪಾಟೀಲರ ಶತ್ರುಗಳು. ಅವರಿಗೆ ಬೊಂಬಾಯಿಯಲ್ಲಿ ಸ್ಪರ್ಧಿಸಲು ಅವಕಾಶ ಕೊಡಬಾರದೆಂದು ಶ್ರೀ ಪಾಟೀಲರು ಮೊದಲಿನಿಂದಲೂ ವಾದಿಸುತ್ತಿದ್ದರು. ಆದರೆ ನೆಹರೂರವರ ಪ್ರಭಾವದಿಂದ ಅದು ಸಾಧ್ಯವಾಗದಿತ್ತು. ಈ ಸಾರಿ ಅವರಿಗೆ ಸೀಟು ಕೊಡಲು ದಕ್ಷಿಣ ಭಾರತೀಯರಾದ ಶ್ರೀ ಕೆ. ಕಾಮರಾಜ್‌ರಿಂದಲೂ ಸಾಧ್ಯವಾಗಲಿಲ್ಲ. ಹಾಗಿರುವಾಗ ಅವರು ಕಾಂಗ್ರೆಸ್ಸಿಗೆ ರಾಜಿನಾಮೆಯಿತ್ತು, ಫಾಕರ್ರು ಅದು ಶ್ರೀ ಪಾಟೀಲರಿಗೆ ಸವಾಲಿನಂತಿತ್ತು.

ಇನ್ನೊಬ್ಬರು ಶ್ರೀ ಜಾರ್ಜ್‌ಫೆರ್ನಾಂಡೀಸರು ಅವರು ಶ್ರೀ ಪಾಟೀಲರ ವಿರುದ್ಧವೇ ಸ್ಪರ್ಧಿಸಿದ್ದು ಹೀಗಾಗಿ ಶ್ರೀ ಪಾಟೀಲರ ವ್ಯಕ್ತಿತ್ವವೇ ಹೋಗುವಂತಿತ್ತು. ಆದಕ್ಕಾಗಿ ಅವರು ಹೊಸದೊಂದು ಸೊಲ್ಲು ಹೊರಡಿಸಿದರು, ಮಹಾರಾಷ್ಟ್ರದ ಜನರಿಗೆ ಇದರಿಂದ ತೊಂದರೆಯೊಗಬಹುದೆಂದು ಅವರು ಒಳಗೊಳಗೇನೆ ಕೆಲವರನ್ನು ಎತ್ತಿ ಕಟ್ಟಿದರು; ಅದರಿಂದ ಈ ಶಿವಸೇನೆ ಹುಟ್ಟಿಕೊಂಡಿತು. ಅದಕ್ಕೆ ಪರೋಕ್ಷವಾದ ಬೆಂಬಲ ಬೊಂಬಾಯಿ ಕಾಂಗ್ರೆಸ್ ಬೊಂಬಾಯಿ ಸರಕಾರ ಹಾಗೂ ಇತರ ಪ್ರಮುಖರಿಂದ ದೊರೆಯಿತು. ಪ್ರಾರಂಭದಲ್ಲಿ ಶ್ರೀ ಕೃಷ್ಣ ಮೆನನ್‌ರವರನ್ನು ಸೋಲಿಸಲು, ಶ್ರೀ ಪಾಟೀಲರನ್ನು ಗೆಲ್ಲಿಸಲು ಈ ಶಿವಸೇನೆ ಹುಟ್ಟು ಕೊಂಡಿತು.

ಮೊದಲ ಚುನಾವಣೆಯಲ್ಲಿ ಈ ಸೇನೆಯ ಪಾವಳಿ ಅಸ್ಪು ಕಟ್ಟಿ ಪರಿಣಾಮ ಮಾಡಿಲ್ಲ. ದುರಾದೃಷ್ಟವಶಾತ್ ಶ್ರೀ ಕೃಷ್ಣಮೆನನ್‌ರವಂಸ್ಪುಸೋಲಿಸಿದವರು ಸಾಯಲಾಗಿ ಮತ್ತೆ ಶ್ರೀ ಕೃಷ್ಣ ಮೆನನ್‌ರವರು ಅಲ್ಲಿಂದಲೇ ಸ್ಪರ್ಧಿಸಿದರು. ಆವಾಗ (ಮೊದಲ ಚುನಾವಣೆಯಲ್ಲೂ) ದಕ್ಷಿಣ ಭಾರತೀಯರು (ಕನ್ನಡಿಗರು, ತಮಿಳರು ಮಲೆಯಾಳಿಗಳು) ಎಲ್ಲರೂ ಒಗ್ಗಟ್ಟಾಗಿ ಶ್ರೀ ಮೆನನ್‌ರವರಿಗೆ ಬೆಂಬಲಿಸಿದರಾದರು, ಇದು ಮಹಾರಾಷ್ಟ್ರೀಯನ್ನರಿಗೆ ಉರಿಯುವ ಬೆಂಕಿಗೆ ತುಪ್ಪ ಎರಚಿದಂತಾಯಿತು. ಅವರು ಆವಾಗ ದಕ್ಷಿಣ ಭಾರತೀಯರ ವಿರುದ್ಧ ಹೆಚ್ಚು ಕೋಪಗೊಳ್ಳುವಂತಾಯಿತು. ಅದು ಮಿತಿ ಮೀರಿತು.

ಮಹಾರಾಷ್ಟ್ರೀಯನ್ನರಿಗೆ ಕೋಪ ಬರಲು ಮೊದಲಿನದಲ್ಲೂ ಹಲವು ಕಾರಣಗಳಿದ್ದವು. ಬೊಂಬಾಯಿಯಲ್ಲಿ ದೊಡ್ಡ ವ್ಯಾಪಾರ, ಕೈಗಾರಿಕೆಗಳು, ಹೋಟೇಲುಗಳು ಬಹುತೇಕವಾಗಿ ಹೊರಗಿನವರಿಗೆಲ್ಲಾ ಇವೆ. ಹಾಗೆಯೇ ಉದ್ಯೋಗದಲ್ಲಿ ಸೊರಗಿನವರೆ ಇದ್ದಾರೆ. ಕೂಲಿಗಳು ಮಾತ್ರ ಅವರು ಹೆಚ್ಚು. ಅದು ಅವರಿಗೆ ಕೋಪಕ್ಕೆ ಕಾರಣವಾಗಿತ್ತು. ಈ ಸಂದರ್ಭ ಹೊರಗೆ ಬಂದು ಶಿವಸೇನೆಯು ಹೆಸರಿನಲ್ಲಿ ಸ್ಪೋಟವಾಯಿತು. ಅವರು ದಕ್ಷಿಣ ಭಾರತೀಯರು ಹೊರಡಬೇಕೆಂಬ ಕೂಗನ್ನು ಜಾಕ ತೊಡಗಿದರು.

ಚುನಾವಣೆ ಕಾಲದಲ್ಲಿ ಚುನಾವಣಾ ಹೆಸರಿನಲ್ಲಿ ಈ ಪ್ರಾಂತೀಯವಾದಿಗಳು ದಕ್ಷಿಣ ಭಾರತೀಯರಿಗೆ ಕೆರುಕುಳ ಕೊಡಲಾರಂಭಿಸಿದರು. ಹೋಟೇಲುಗಳ ಮೇಲೆ ಪಾವಳಿ ನಡೆಸುವುದು ಅವರ ಪ್ರತಿಕ್ರಿಯೆಯ ಮುಖ್ಯ ಕಾರ್ಯಕ್ರಮವಾಗಿತ್ತು. ಇದರಿಂದಾಗಿ ಅನೇಕ ಹೋಟೇಲುಗಳಿಗೆ ನಷ್ಟವೂ ಆಗಿದೆ.

ಈ ಶಿವಸೇನೆಯವರು ಹೋಟೇಲುಗಳಿಗೆ ನುಗ್ಗಿ ಗಲಭೆ ಮಾಡಿದಾಗ ಆ ಬಗ್ಗೆ ಪೋಲೀಸರಿಗೆ ದೂರು ಕೊಟ್ಟರೆ ಅದು ಗೂಂಡಗಳ ಪಾವಳಿಯೆಂದು ಪೋಲೀಸರು ಏನೊಂದು ಕಾರ್ಯಕ್ರಮ ಕೈಕೊಳ್ಳುತ್ತಿರಲಿಲ್ಲ. ಸಯೂರ್‌ನಲ್ಲಿ ಎರಡು ಮುಖ್ಯ ಹೋಟೇಲುಗಳು (ಕಾಫಿ ಸೆಂಟರ್) ಮೇಲೆ ದಾಳಿ ನಡೆಸಲು ಧಾನಾವಿಂದ ಶಿವಸೇನೆ ನಾಯಕರು ಎರಡು ಲಾರಿಗಳಲ್ಲಿ ಜನ ಕಳುಹಿಸಿದ್ದರು. ಆ ಧಾಳಿಯನ್ನು ಪೋಲೀಸರು ಗೂಂಡರದ್ದೆಂದು ಹೇಳಿದ್ದರು. ಆದರೆ ಅಲ್ಲಿ ದಕ್ಷಿಣ ಭಾರತೀಯರು ಶಿವಸೇನೆ ಇನ್ನೂ ಬೇಕೆಲ್ಲವೆನ್ನುವಂತೆ ಮಾಡಿದ್ದಾರೆ.

ಈಗ ಅವರು ಈ ರೀತಿ ಗೂಂಡಾಗಿರಿ ಮಾಡುವುದನ್ನು ಬಿಟ್ಟಿರುವಂತಾದರೂ ಆ ಶಿವಸೇನೆ ಮನೋಭಾವ ಪ್ರತಿಯೊಂದು ಹಂತದಲ್ಲಿ ನಡೆಯುತ್ತಿದೆ. ಎಲ್ಲಾ ಕಡೆಗಳಿಂದಲೂ ದಕ್ಷಿಣ ಭಾರತೀಯರಿಗೆ ಕೆರುಕುಳಗಳು, ಪುರಸಭೆ ಇತರ ಸರಕಾರಿ ಇಲಾಖೆಗಳು ಹೀಗೆ ಎಲ್ಲಾ ಹಂತದಲ್ಲೂ ಎಲ್ಲಾ ಕಡೆಗಳಿಂದಲೂ ಪರೋಕ್ಷವಾದ ಶಿವಸೇನಾ ಪ್ರತಿಕ್ರಿಯೆಗಳು ಉಂಟಾಗಿವೆ. ಇದು ದಕ್ಷಿಣ ಭಾರತೀಯರಿಗೆ ತುಂಬಾ ಭಯುತ್ಪಾದನೆ ಮಾಡಿವೆ. ತಮ್ಮ ವ್ಯಾಪಾರ ಉದ್ಯಮಗಳನ್ನು ಅಭಿವೃದ್ಧಿಗೊಳಿಸಲು ಹೆದರುತ್ತಿದ್ದಾರೆ. ಇದು ಮಹಾರಾಷ್ಟ್ರದ ಅಭಿವೃದ್ಧಿಗೆ ತಡೆಯೆಂಬುದನ್ನು ವಿದ್ಯಾವಂತರು ಅರಿತಿದ್ದಾರೆ. ಮನಗಂಡಿದ್ದಾರೆ. ಆದರೆ ಸಾಮಾನ್ಯ ಜನತೆ ಮಾತ್ರ ಬಿಗಿಯೂಗಿಯೇ ಇದೆ. ಸರಕಾರದ ಪ್ರಶ್ನೆಯೆ ಬೆಂಬಲವೂ ಇದೆ. ಈ ವಿಚಾರದಲ್ಲಿ ಕೇಂದ್ರ ಸರಕಾರ ಮನಸ್ಸು ಮಾಡಿ ಈ ಮನೋಭಾವವನ್ನು ಮಟ್ಟ ಹಾಕದಿದ್ದರೆ ಮುಂದಿನ ದಿನಗಳಲ್ಲಿ ಮತ್ತೆನಾಗಲಿ ಬಹುದೋ ಎಂದು ಹೇಳಲಾಗದು. ಆದರಲ್ಲೂ ಬೊಂಬಾಯಿ ಕಾರ್ಪೋರೇಶನ್ ಚುನಾವಣೆ ನಡೆದು ಆದರಲ್ಲಿ ಶಿವಸೇನಾ ಮನೋಭಾವದವರೇ ಬಹುಮತ ಗಳಿಸಿದರೆ ದಕ್ಷಿಣ ಭಾರತೀಯರ ಹೋಟೇಲುಗಳಿಗೆ ಎಂತಹ ವಿಪತ್ತು ಬರುತ್ತದೋ ಎಂಬುದನ್ನು ಈಗಲೇ ಊಹಿಸಲು ಸಾಧ್ಯವಾಗಲಾರದು. ಆತಂಕವಾಗಿ ಈ ಮುಖ್ಯ ವಿಷಯದ ಬಗ್ಗೆ ವಿಚಾರಪರರು ಗಮನ ಹರಿಸಿ ದೇಶದ ಐಕ್ಯತೆಗೆ ಕೊಡಲಿ ಪ್ರಾಯದೋ ಎಂಬಿಯ ಈ ಪಾವಳಿಯನ್ನು ತಪ್ಪಿಸಬೇಕಾಗಿದೆ.

ಸೋಟಿ!

ಮುಂಜಾವಿನಲಿ
ಚಂದಿರ ತಾಯೊಡಲ ಸೇರುತಿತ್ತು
ಕೆರೆಯಂಚಿನಲಿ
ಹಸಿರು ಮೈದಾನ ಹಾಸಿತ್ತು
ಹಿಮಸರದಿಂದಲಿ
ಹರಿದ ಹಿಮ ಮತ್ತು
ನಾಲಿಗೆ ಚಾಚುತಲಿ
ನಿಂತಿರುವ ಗರಿಕೆಯ ಮೇಲೆ
ಸುರಿಯುತಿತ್ತು.
ಮನದನ್ನೆಯಂದದಲಿ
ಹೊನ್ನಿನಾ ಮುತ್ತ ಕೊಡುತಿತ್ತು.
ಮೂಡಣ ದಿಕ್ಕಿನಲಿ
ಸೂರ್ಯ ಉದಯಿಸುತಿತ್ತು.
ಕೆರೆಯಂಚಿನಿಂದಲಿ
ತಂಗಾಳಿ ಬೀಸಿ ತಂಪ ಪ್ರೀಡುತಿತ್ತು
ಅಲ್ಲಲ್ಲಿ ಗಿಡಗಳಲಿ
ನೊಗ್ಗುಗಳ ರಂಗೋಲೆ ಹಾಕಿತ್ತು
ಅರಳಿದಾ ಕುಸುಮದಲಿ
ಭ್ರಮರ ಬಂಡನು ಹೀರುತಿತ್ತು.
ಇದನೆಲ್ಲ ನೋಡುತಲಿ
ನನ್ನೆ ಮನ ಕುಣಿಯುತಿತ್ತು!

—"ಮಲ್ಲಾರಿ"

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಸುಮವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ಕಸ್ಟ 87 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ರೇವಹಾತಿಗಳ ಮೇಲೆ ೮% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಶಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್"
ಬೈಪ್ ಹೌಸ್ ಹಿಲ್ ರೋಡ್
ಮಂಗಳೂರು—೩



NAVAYUGA 21—12—1967
Registered with the Registrar
of News Papers for India
under No. R. N. 3546/'67

REGD. No: B. G: 176
LICENCE No. 31
Licensed to Post without Prepayment

ನೀವೂ ತಿಳಿದುಕೊಳ್ಳಿ

ಗಂಧಕ

ಬರೆದವರು: ಶ್ರೀ ಸ. ನಾರಾಯಣ

ಗಂಧಕದ ಇತಿಹಾಸ ಅತಿ ಪುರಾತನ ವಾದುದು. ಸಹಸ್ರಾರು ವರ್ಷಗಳ ಪೂರ್ವದಲ್ಲಿಯೇ ಜನರು ಅದರ ಉಪಯೋಗವನ್ನು ಅರಿತಿದ್ದರು ಎನ್ನುವ ಸಂಗತಿ ತಿಳಿದು ಬರುತ್ತದೆ. ಪೂರ್ವದಲ್ಲಿ ಪ್ರಾಚೀನ ರೋಮನರು ಇದರ ಉಪಯೋಗವನ್ನು ಅರಿತಿದ್ದರು ಮತ್ತು ಅವರು ಗಂಧಕವನ್ನು ಉರಿಯುವ ಕಲ್ಲು ಅಥವಾ ಬೆಳಕಿನ ಕಲ್ಲು ಎಂದು ಕರೆಯುತ್ತಿದ್ದರು. ಗಂಧಕದ ಶೋಧ ಎಂದಾಯಿತು ಹೇಗಾಯಿತು ಎಂದು ಹೇಳುವುದು ಕಷ್ಟ. ಜ್ವಾಲಾಮುಖಿಗಳಿಂದ ಹೊರ ಬರುವ ಲಾವಾರಸ ಮೊದಲಾದುವುಗಳಲ್ಲಿ ಗಂಧಕದ ಅಂಶ ಇರುತ್ತದೆ.

ಪ್ರಾಚೀನ ಭಾರತೀಯ ಗ್ರಂಥಗಳಲ್ಲಿ ಗಂಧಕವನ್ನು 'ಶಲ್ಯರಿ' ಎಂಬ ಹೆಸರಿನಿಂದ ಕರೆಯುತ್ತಿದ್ದುದು ಕಂಡು ಬರುತ್ತದೆ. ಶಲ್ಯ+ಅರಿ ಅಂದರೆ ತಾಮ್ರದ ಶತ್ರು ಎಂದು ಇದರರ್ಥ. ಗಂಧಕ ಹತ್ತಿ ಉರಿಯುವಾಗ ಏಳುವ ತೀವ್ರತಮ ಉಗ್ರ ಗಂಧ (ಕಟುವಾಸನೆ)ದಿಂದಲೇ ಅದಕ್ಕೆ 'ಗಂಧಕ' ಎನ್ನುವ ಹೆಸರು ಬಂದಿರಬಹುದೆಂದು ತೋರುತ್ತದೆ.

ಶುದ್ಧ ಮತ್ತು ಸಮ್ಮಿಶ್ರ ಹೀಗೆ ಎರಡು ರೂಪಗಳಲ್ಲಿಯೂ ಗಂಧಕ ದೊರೆಯುತ್ತದೆ. ಶುದ್ಧ ಗಂಧಕವು ಭೂಗರ್ಭದಲ್ಲಿಯ ಪದರಗಳಲ್ಲಿ, ಜ್ವಾಲಾಮುಖಿ ಪ್ರದೇಶಗಳಲ್ಲಿ ದೊರೆಯುತ್ತದೆ. ಈ ಬಗೆಯ ಗಂಧಕ ಅಮೇರಿಕಾದ ಟೆಕ್ಸಾಸ್ ರಾಜ್ಯ, ಮೆಕ್ಸಿಕೋದ ಥಲ್ಲಿಂರೋಮ ಮತ್ತು ಇಟೆಲಿಯ ಸಮೀಪದ ಸಿಸಿಲಿ ದ್ವೀಪದಲ್ಲಿ ದೊರೆಯುತ್ತದೆ. ಜಪಾನ್, ಚಿಲಿ ಮತ್ತು ಇಂಡೋನೇಶಿಯಗಳಲ್ಲಿಯೂ ಗಂಧಕ ದೊರೆಯುತ್ತದೆ. ಜಪಾನ್ ದೇಶದ ಒಂದು ನಡುಗಡ್ಡೆಗೆ 'ಗಂಧಕ ದ್ವೀಪ' ಎನ್ನುವ ಹೆಸರಿದೆ! ಸಮ್ಮಿಶ್ರ ರೂಪದಲ್ಲಿ ದೊರೆಯುವ ಗಂಧಕವು ಸಲ್ಫೇಟ್, ಸಲ್ಫೈಡ್ ಮೊದಲಾದ ರೂಪಗಳಲ್ಲಿ ಧಾತು ಮಿಶ್ರಿತ ಅದಿರುಗಳಲ್ಲಿ ದೊರೆಯುತ್ತದೆ.

ಗಂಧಕವನ್ನು ಎರಡು ಬಗೆಯಲ್ಲಿ ಪಡೆಯಬಹುದು. ಮಣಿದರಿಂದ ಮತ್ತು ಜ್ವಾಲಾಮುಖಿ ಪ್ರದೇಶಗಳ ಭೂಮಿಯಿಂದ ಅಗೆದು ತೆಗೆಯುವ ರೀತಿ ಮೊದಲನೆಯದು. ಅಶುದ್ಧ ಅಥವಾ ಸಮ್ಮಿಶ್ರ ಸ್ವರೂಪದಲ್ಲಿ ದೊರೆಯುವ ಗಂಧಕದಲ್ಲಿ ರುಗಳನ್ನು ವೈಜ್ಞಾನಿಕ ಪ್ರಕ್ರಿಯೆಗಳಿಂದ ಶುದ್ಧಿಗೊಳಿಸುವುದು ಮತ್ತು ದ್ರವರೂಪದಲ್ಲಿ ದೊರೆಯುವ ಸಮ್ಮಿಶ್ರ ಗಂಧಕವನ್ನು ಫ್ಲೋಷ್ ಪದ್ಧತಿಯಿಂದ ಶುದ್ಧಗೊಳಿಸುವುದು ಎರಡನೆಯ ವಿಧಾನ.

ಗಣಿ ಅಥವಾ ಜ್ವಾಲಾಮುಖಿ ಪ್ರದೇಶಗಳಲ್ಲಿಯ ಭೂಮಿಯನ್ನು ಅಗೆದು ತೆಗೆಯುವ ಗಂಧಕದಲ್ಲಿ ಮರಳು ಮತ್ತು ಸುಣ್ಣಕಲ್ಲಿನ ಮಿಶ್ರಣ ಸೇರಿರುತ್ತದೆ. ಈ ಬಗೆಯ ಅಶುದ್ಧ ಗಂಧಕವನ್ನು ಭಟ್ಟಿಯಲ್ಲಿ ಹಾಕಿ ವೈಜ್ಞಾನಿಕ ರೀತಿಗಳಿಂದ ಶುದ್ಧಪಡಿಸಬೇಕಾಗುತ್ತದೆ.

ಸುಮಾರು ಆರು ದಶಕಗಳಿಂದ ಸಿಸಿಲಿಯಲ್ಲಿ ಅಧಿಕ ಪ್ರಮಾಣದಲ್ಲಿ ಗಂಧಕವು ಗಣಿಗಳ ಮೂಲಕ ದೊರೆಯುತ್ತಲಿದೆ. ಮೆಕ್ಸಿಕೋ, ಟೆಕ್ಸಾಸ್ ಮೊದಲಾದ ಪ್ರದೇಶಗಳಲ್ಲಿಯೂ ಸುಮಾರು ಐದು ನೂರರಿಂದ ಎರಡು ಸಾವಿರ ಅಡಿಗಳ ಆಳದ ಭೂಗರ್ಭದಲ್ಲಿ ಗಂಧಕವು ವಿಶೇಷವಾಗಿ ದೊರೆಯುತ್ತಿದೆ.

ಗಂಧಕದ ಶೋಧನೆಯ ಅನಂತರ ಅಮೇರಿಕಾದ ಔದ್ಯೋಗಿಕ ಕ್ಷೇತ್ರದಲ್ಲಿ ಮಹತ್ವಪೂರ್ಣ ಬದಲಾವಣೆಗಳಾದವು. ಭೂ ಸಂಶೋಧನೆಯೂ ಧರದಿಂದ ಬೆಳೆಯಲಾರಂಭಿಸಿತು. ಭೂಗರ್ಭ ಸಂಶೋಧನೆಗಳಿಂದ ತಜ್ಞರಿಗೆ ಬಹು ಬಗೆಯ ಪ್ರಯೋಜನವಾಗಿದೆ. ಗಂಧಕದ ಶೋಧನೆಯಿಂದ ಆಗಿರುವ ಪ್ರಯೋಜನ ಅಲ್ಪವಲ್ಲ. "ನೀರನ್ನು ಗಂಧಕದ ಜ್ವಲನಕ್ಕೆಂತ ಹೆಚ್ಚಿನ ಉಷ್ಣಾಂಶಕ್ಕೆ ಕಾಯಿಸಿ ಗಂಧಕವನ್ನು ಪಡೆಯಲು ಸುಲಭೋಪಾಯವನ್ನು ಅಮೇರಿಕದ ಶಜ್ಞ ಹರ್ಮನ್ ಫ್ರಾಶ್ ತಮ್ಮ ಪ್ರಯೋಗಗಳ ಮೂಲಕ ವಿಜ್ಞಾನ ಲೋಕಕ್ಕೆ ಪರಿಚಯ ಮಾಡಿಕೊಟ್ಟಿದ್ದಾರೆ.

ರಾಂಬಿಕ್ಸ್, ಮೊನೊ ಕ್ಲಿನಿಕ್, ಪ್ಲಾಸ್ಟಿಕ್ ಸಲ್ಫರ್ ಮತ್ತು ಮಿಲ್ಕ್ ಆಫ್ ಸಲ್ಫರ್ ಎಂಬ ಹೆಸರಿನ ನಾಲ್ಕು ಮುಖ್ಯ ಸ್ವರೂಪಗಳಲ್ಲಿ ಗಂಧಕವು ಕಂಡು ಬರುತ್ತದೆ. ಗಂಧಕವನ್ನು ಗಾಜಿನ ಕೊಳವೆಯೊಂದರಲ್ಲಿ ಹಾಕಿ ಕಾಯಿಸಲಾರಂಭಿಸಿದರೆ ಒಳಗೊಳಗೆ ಅದು ಬಿಸಿಯೂದಂತೆ (ಕಾದಂತೆ) ಭಟ್ ಭಟ್ ಎಂದು ಸಪ್ಪಳವಾಗಿ ಅದು ಸಣ್ಣ ಸಣ್ಣ ಚೂರಾಗಿ ಪರಿಣಮಿಸುತ್ತದೆ. ಉಷ್ಣತೆಯು ೧೧೦°ಸೆಂಟಿಗ್ರೇಡ್ ತಲುಪಿದಾಗ ಅದರ ಆಕಾರ ರೂಪಗಳೇ ಬದಲಾಗುತ್ತದೆ. ಅದು ಕವ್ವಾಗಿ ಮುನ್ನೀ ಭೂತವಾಗಿ ಗಟ್ಟಿಯಾಗುತ್ತದೆ. ನೆಳಕೆಯನ್ನು ಬಾಗಿಸಿದರೂ ಅದು ಬೀಳುವುದಿಲ್ಲ.

ಔಷಧಿಗಳ ತಯಾರಿಕೆಯಲ್ಲಿ ಗಂಧಕ ಬಹು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ನಿಸೆಯಲ್ಲಿ ಅದರ ಉಪಯೋಗ ವಿಶೇಷ. ವೈಜ್ಞಾನಿಕ ಸಂಶೋಧನೆಗಳು ಬೆಳೆದಂತೆ ಗಂಧಕದ ಪ್ರಯೋಜನ ಮತ್ತು ಅದರ ಉಪಯೋಗದ ಮಹತ್ವ ಅರಿವಾಗುತ್ತಿದೆ. ಔಷಧಿಗಳ ತಯಾರಿಕೆ ಮತ್ತು ರೋಗ ಜಂತುನಿವಾರಣೆಯ(ಕ್ರಿಮಿ ಕೀಟಗಳ ನಾಶದಲ್ಲಿಯೂ ಸಹ) ರೂಪಗಳಲ್ಲಿ ಗಂಧಕ ಪ್ರಮುಖವಾಗಿ ಬೇಕಾಗುತ್ತದೆ. ಮಾನವ ಜನಾಂಗದ ಆರೋಗ್ಯ ರಕ್ಷಣೆಯಲ್ಲಿ ಗಂಧಕ ವಿಶೇಷ ಪಾತ್ರ ವಹಿಸುತ್ತದೆ. ಸಿಟಿ ರುತಾಲ, ಎಂ. ಬಿ. ಟಿ. ಮತ್ತು ಸಲ್ಫನೊ ಮೊಯಿಡ ಪಿಲ್ಸ ಮೊದಲಾದ ಔಷಧಿಗಳಲ್ಲಿ ಗಂಧಕದ ಪ್ರಮಾಣ ಅಧಿಕ. ಗಂಧಕದ ಮೂಲಕವೇ ಈ ಬಗೆಯ ಅನೇಕ ಔಷಧಿಗಳು ಜನ್ಮ ತಾಳಿವೆ. ಶಸ್ತ್ರ ಕ್ರಿಯೆಯಲ್ಲಿ ಸಲ್ಫನೊ ಮೊಯಿಡ ಔಷಧಿಗಳ ಪ್ರಯೋಜನ ವಿಶೇಷವಾಗಿದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಔಷಧಿ, ಚಿಕಿತ್ಸೆ, ರೋಗ ನಿವಾರಣೆ, ಕ್ರಿಮಿನಾಶಕಗಳಲ್ಲಿ ಹಾಗೂ ಶುದ್ಧೀಕರಣ ಮೊದಲಾದ ಕಾರ್ಯಗಳಲ್ಲಿ ಗಂಧಕದ ಉಪಯೋಗ ಗಣನೀಯವಾಗಿರುವಂತೆಯೇ ಸಿಡಿಮದ್ದು ಮೊದಲಾದ ಸ್ಫೋಟಕ ಹಾಗೂ ಮಾನವೀ ಮೂರಕ ಕಾರ್ಯಗಳಲ್ಲಿಯೂ ಗಂಧಕ ನಾಕಷ್ಟು ಸ್ಥಾನವನ್ನು ಪಡೆದಿರುತ್ತದೆ. ಉಜ್ವಲತೆಯಿಂದ ಗಂಧಕವು ಮಾನವ ಜನಾಂಗಕ್ಕೆ ತಾರಕವಾಗಿರಾಪಾಡಬಲ್ಲದು. ಹಾಗೆಯೇ ಮಾರಕವಾಗಿ ಕಾಡಬಲ್ಲದು. ಎರಡು ಬಗೆಯಲ್ಲಿಯೂ ಗಂಧಕವನ್ನು ಬಳಸಿಕೊಳ್ಳಬಹುದು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಗಂಧಕ ಮಾನವ ಜನಾಂಗಕ್ಕೆ ಮಾರಕವಾಗಿ ಪರಿಣಮಿಸಿದಂತೆ ಅದನ್ನು ತಾರಕ ಮಾರ್ಗದಲ್ಲಿ ಬಳಸುವ ಯೋಜನೆಯನ್ನು ವಿಜ್ಞಾನಿಗಳು—ಮಾನವರು ಮಾಡಬೇಕಾಗಿದೆ.

ಭಾರತದಲ್ಲಿ ಗಂಧಕದ ಉತ್ಪಾದನೆ ಅಪಾರ. ಮೈಸೂರು ರಾಜ್ಯದ ಚಿತ್ರದುರ್ಗ ಜಿಲ್ಲೆಯ ಇಂಗಳದ ಹುಳಿನ ಸಮೀಪದ ಗುಡ್ಡದಲ್ಲಿ ಗಂಧಕದ ಅದುರು ಇರುವುದನ್ನು ವಸ್ತಹಚ್ಚಿ ಅದನ್ನು ರಾಸಾಯನಿಕ ಕ್ರಿಯೆಗಳ ಮೂಲಕ ಶುದ್ಧಪಡಿಸಿ ಶುದ್ಧ ಗಂಧಕವನ್ನು ಪಡೆಯುವ ಯೋಜನೆ, ಪ್ರಯತ್ನ ಕಾರ್ಯಗತವಾಗಲಿದೆ. ಇದು ಪುರಾತನ ಗಂಧಕದ ಗಣಿ ಎಂಬ ಅಂಶ ಸ್ಪಷ್ಟವಾಗಿದೆ. ಇತ್ತೀಚಿನ ಸಂಶೋಧನೆಗಳಿಂದ ಇಂಗಳದ ಹಾಳಿನ ಗಂಧಕದ ಗಣಿಗಳು ಗಂಧಕದ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಬಲ್ಲವು ಎಂಬ ಸಾಕಷ್ಟು ಸ್ಪಷ್ಟವಾಗುತ್ತದೆ.

ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
(English Made Easy)
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?
ಮನೆ-ಮದ್ದು HOME REMEDIES
ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ
ಬರೆದವರು: ಡಾ। ಕೊಂಡ್ಲುಲ್ ವೆಂಕಟ್ರಾವ್, ಎಲ್. ಐ. ಎಮ್.
'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಶವನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.
ಮಕ್ಕಳು, ಹೆಂಗಸರು, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹಂಗ ವಿಧಾನ ಸರಳವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟ್ಯೆ ಖರ್ಚು ಬೇರೆ)
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26—4—1966.

Edited, Printed & Published by K. H. Shetty at the Navayuga Press, Udigi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ





ಕುಟುಂಬ ಯೋಜನಾ
ಪ್ರಚಾರಣೆ ಸಹಿತ
೧೬ ಪುಟಗಳು

8—12—1967

೨೦
ಪೈಸೆ

ಕಥಾ ಪ್ರಸಂಚ

ಅವರನ್ನು ಕರೆದವರಿಲ್ಲ ೧

ರಚನೆ: ಶ್ರೀ ವಿಶ್ವಂಭರ ಉಪಾಧ್ಯಾಯ

ಇಂದಿಗೆ ಮೂವತ್ತು ವರ್ಷಗಳ ಹಿಂದಿನ ಈ ಕಥೆಯನ್ನು ನನ್ನ ಗೆಳೆಯ ನಾಣು ಹೇಳಿದ. ಅದು ಅವರ ಸಾಂತಾನವರದಲ್ಲಿ ನಡೆದುದಂತೆ. ಅವನ ಮೊಕನ್ನು ಇಲ್ಲಿ ಹಾಗೆಯೇ ಇಡುತ್ತೇನೆ.

ಲಚ್ಚು ಬಾಗಿಲಲ್ಲೇ ನಿಂತಿದ್ದಳು; ರಾಮು ಶಾಲೆಯಿಂದ ಬರುತ್ತಾನೆಂದು.

ಎಣ್ಣೆ ತೋರಿಸದೆ ಎರಡು ದಿನವಾಗಿದ್ದ ಅವನ ಹಾರುವ ಕೂದಲು ಅವಳಿಗೆ ದೂರದಿಂದಲೇ ಕಾಡಿಸಿತು. ಕಪ್ಪು ಚಡ್ಡಿಯ ಮೇಲೆ ಕೆಂಪು ಕೋಟು, ಅದರ ಗಂಡಿ ಪುಡಿಯಾದುದರಿಂದ ಚಡ್ಡಿಯ ಲಾಡಿ ಒಳಗಿನಿಂದೇ ಇಣುಕುತ್ತಿತ್ತು; ಅವನ ಎದೆಗುಂಡಿಗೆಯೂ ಕೂಡ! ಆ ಕೋಟು ಅವನಿಗೆ ಅವನ ಅಜ್ಜ ಕೊಟ್ಟುದು. ಅಷ್ಟು ದಪ್ಪದ ಕೋಟು ಇದ್ದ ಮೇಲೆ ಅಂಗಿ ಬೇಡವೆಂದು ದೊಡ್ಡಪ್ಪ ಹೇಳಿದರು. ಶಾಲೆಯ ದಾರಿಯಲ್ಲಿ ಬಸ್ಸು ಸುಳಿದಾಗ ರಾಮು ಆ ಕೋಟನ್ನೇ ಜಂಭದಿಂದ ಪ್ರದರ್ಶಿಸುತಿದ್ದ. ಶಾಲೆಗೆ ಬರುವ ಬೇರಾವ ಮಕ್ಕಳಿಗೂ ಕೋಟು ಇರಲಿಲ್ಲ!

ಹೂಳೆಯುವ ಕಣ್ಣುಗಳಿಂದ ಲಚ್ಚಿ ನೋಡಿದಳು, ರಾಮು ಬಂದನು; ಅವನ ಕೂದಲನ್ನು ಅವಳೇ ಪಟ್ಟಿಯ ನೂಲಿನಿಂದ ಬಿಗಿದಿದ್ದಳು. ಅದರೂ ಅದು ಹಾರುತಿತ್ತು.

ರಾಮು ಬರುವಾಗ ಕಾಲಲ್ಲಿ ಧೂಳೆಬ್ಬಿಸುತ್ತಾ ಖಾಯಲ್ಲಿ ಢುರ್ರ್....ಎನ್ನುತ್ತಾ ಕೈಯನ್ನು ಡ್ರೈವರನಂತೆ ಚಲಿಸುತ್ತಾ ಬಸ್ಸಿನಂತೆ ಬಂದನು, ವೇಗವಾಗಿಯೆ. ಬಾಗಿಲಲ್ಲಿದ್ದ ಲಚ್ಚುವನ್ನೂ ಗಮನಿಸಲಿಲ್ಲ.

ಒಳಗೆ ಹೋಗುವ ಮೊದಲು ಅವನಿಗೊಂದು ಗುಟ್ಟು ತಿಳಿಸಬೇಕೆಂದು ಆಕಡೆಗಿದ್ದ ಅಹುರ ಅವನಿಗೇನು ಗೊತ್ತು? ಕರೆದರೂ ಫಿಲ್ಲದೆ, ಢುರ್ ಎನ್ನುತ್ತಾ ಒಳಗೆಗೆ ಓಡಿಯೇ ಬಿಟ್ಟ. ಲಚ್ಚು ನಿರಾಶೆಯುಳ್ಳೂ ಅವನ ಕೈ ಹಿಡಿದು ನಿಲ್ಲಿಸಿದಳು—'ತಿಂಡಿ ಕೊಡುಕ್ತಾರೆ....ಶಾಲೆಗೆ ಹೋದವರಿಗೆ ಮಾತ್ರ...ನನಗೂ ಕೊಡು....." ಆತ ತಲೆ ಅಡಿಸಿದನೋ ಇಲ್ಲವೊ ನಡೆದು ಬಿಟ್ಟ.

ಮನೆಯ ಹಿಂದೆ ಎರು ದಿನ್ನೆಯಲ್ಲಿರುವ ಹಲಸಿನ ಮರ ಒಂದು ಕೊಂಬೆಯನ್ನು ಚಾಚಿತ್ತು. ಅದರಲ್ಲಿ ರಾಮು ಕುಳಿತಾಗ ಮೇಲೆ ಕೆಳಗೆ ಅದು ತೂಗುತ್ತಿತು. ಅದೇ ಅವನ ವಿಹಾರ ಕೇಂದ್ರವಾಗಿತ್ತು.

ರಾಮು ಯಾವ ಮಕ್ಕಳ ಜತೆಯಲ್ಲೂ ಆಡುತಿದ್ದಿಲ್ಲ.

ಎಲ್ಲರೂ ಅವನಿಗೆ ಸಾಧ್ಯವಾದಷ್ಟು ತೊಂದರೆ ಕೊಡುತ್ತಿದ್ದವರೆ.ಅವನು ಇಟ್ಟ ಮೂವಿನಹಣ್ಣು ಅಲ್ಲಿ ಇರುತ್ತಿದ್ದಿಲ್ಲ. ಅವನ ಕಡ್ಡಿ, ಪೆನ್ಸಿಲು ಒಂದೂ ಇರುತ್ತಿದ್ದಿಲ್ಲ ಸ್ಲೇಟು ನಾಲ್ಕೇ ದಿನದಲ್ಲಿ ಒಡೆದಿರುತ್ತಿತ್ತು. ಪುಸ್ತಕ ಹರಿದಿರುತ್ತಿತ್ತು. ಆಥವಾ ಅದರ ಮೇಲೆ ಶಾಯಿ ಚೆಲ್ಲಿರುತಿತ್ತು.

ಅಷ್ಟು ದಪ್ಪದ ಕೋಟೂ ಒಮ್ಮೆ ಸೀಳಾಗಿ ಹೋಗಿತ್ತು. ಅದನ್ನು ಅವನೇ ಹರಿದನೆಂದು ಚೆನ್ನಾಗಿ ಏಟು ತಿಂದನು. ಅದರಿಂದ ಈ ಕೆಲಸ ಬೆಳಗಾಗುವಷ್ಟರಲ್ಲಿ ನಡೆದಿತ್ತು.

ದೊಡ್ಡಪ್ಪನು ಕೊಟ್ಟ ಏಟಿನ ಬಾಸುಂಡೆಯನ್ನು ತಿಕ್ಕುತ್ತಾ ರಾಮು ಬಕ್ಕಳಿಸುತ್ತಿದ್ದ. ಬೆನ್ನಿನ ಕೆಳಬದಿಯಲ್ಲಿ ಬರೆಯನ್ನು ಅವನು ನೋಡಿಕೊಂಡಾಗ ದುಃಖದ ಕಟ್ಟೊಡೆಯಿತು. ಒಳಗಿನಿಂದ ಬಂದ ಸಾದುವಿನೊಡನೆ—

"ನನ್ನ ಕೋಟು...ಹರಿ...." ಬಿಕ್ಕುತ್ತಲೇ ಹೇಳಿದ ರಾಮು.

"ನನಗೇನು ಗೊತ್ತು?" ಸಾದು ಬಿರುಸಿನಿಂದ ಕೇಳಿದ.

"ರಾತ್ರಿ ನೀನು ಜೂರಿ ಹುಡುಕುತಿದ್ದಿಯಲ್ಲ...?'

"ಹೇ....ಹೇ.... ಅದು ಪೆನ್ಸಿಲ್ ಕೆತ್ತಲಿಕ್ಕೆ"

"ಕೋಟನ್ನೂ ಜೂರಿಯಿಂದೇ ಹರಿದದ್ದು...."

'ಬೇಡ—ನನ್ನ ಸುದ್ದಿ ಬೇಡ. ಇನ್ನೂ ನಾಲ್ಕು ಬೀಳುತ್ತದೆ' ಗದರಿಸುತ್ತಾ ಸಾದು ಹರಾಜಾಪೂದ. ಸಾದುವಿನ ಮೇಲೆ ದೂರು ಹಾಕಿದರೆ ಹಾಗಾಗುವುದೆಂದು ರಾಮುವಿಗೇನೂ ತಿಳಿಯದಲ್ಲ.

ಅಂಗಳದ ಆಚೆಯ ಬದಿಯಲ್ಲಿ ಮೀನು ಬದನೆಗಳನ್ನು ನೆಟ್ಟಿದ್ದರು. ನಾಲ್ಕು ಪಪ್ಪಳೆ ಗಿಡಗಳೂ ಇದ್ದವು. ಅದಕ್ಕೆ ನೀರು ಎರೆಯುವ ಕೆಲಸ ಮುಖ್ಯವಾಗಿ ಲಚ್ಚುಗೆ. ಶಾಲೆಗೆ ಹೋಗುವ ಮಕ್ಕಳು ಆದಕ್ಕೆ ಬರಬೇಕಾಗಿರಲಿಲ್ಲ. ಸಾದು, ಸ್ವಭ, ಗಂಗು, ಶೃಂಗು ಯಾರೂ ಬರುವಂತಿರಲಿಲ್ಲ. ಶೃಂಗುವಿಗೆ ಮನೆ ಕೆಲಸವಿತ್ತು. ರಾಮುವಿಗೆ ಶಾಲೆಯ ಕೆಲಸ ಹೆಚ್ಚಲ್ಲದುದರಿಂದ ಅವನೂ ಸೇರಬೇಕಾಗಿತ್ತು. ಉದರಿ ಉದ್ದ ತರಗತಿಯ ಶಿತ ದುರ್ಬಲ ಸಾದುವಿನಿಂದ ಎನೂ ಕೆಲಸ ಮಾಡಬೇಕಾಗಿ ಇರಲಿಲ್ಲ. ಆ ದಿನ ರಾಮು ಒಲೆಗೆ ಮಣ್ಣು ತರುವುದಕ್ಕೆ ಹೋದುದರಿಂದ ಸಾದು ನೀರು ಹಾಕುವುದಕ್ಕೆ ಬರಬೇಕಾಯಿತು. ಲಚ್ಚು ತೀರ್ಥ ಕೂಡವನ್ನು ಅವನ ಕೈಗೆ ಕೊಡುತ್ತಾ-'ಕೋಟನ್ನು ಜೂರಿಯಿಂದ ಹರಿದಿದ್ದಾನೆ; ಅಜ್ಜ ಬರಲಿ ಹೇಳುತ್ತೇನೆ...."

"ಇನೆರಡಕ್ಕೂ ನನ್ನ ಮೇಲೆ ಕಣ್ಣಿಪ್ಪ! ಆಚ್ಚುನ ಹತ್ತಿರ ಹೇಳಿ ನಿನಗೆ ಮೊಡಿಸುತ್ತೇನೆ...." ಸಾದು ವ್ಯಗ್ರನಾಗಿ ಕೊಡಹಿಡಿಯುವಾಗ ಅದು ಜಾರಿ ಬಿತ್ತು. ಚೂರು ಚೂರಾಯಿತು.

"ಅಮ್ಮ.... ಲಚ್ಚು... ಕೊಡ ಒಡೆದ ಊ..." ಸಾದು ಕೂಗಿದ. ಕಸಗುಡಿಸುತ್ತಿದ್ದ ಅವ್ವ 'ಹಿಡಿ'ಯೊಂದಿಗೇ ಪ್ರತ್ಯಕ್ಷರಾದರು..

'ಕೊಡನನ್ನು ಅವನೇ ಒಡೆದುದು' ಲಚ್ಚಿ ಧೈರ್ಯದಿಂದ ಹೇಳಿದಳು. ಹೇಳುವುದಲ್ಲ ಬೊಬ್ಬೆ ಹೊಡೆದರೂ ಕೇಳುವವರಾರು? ಅವನ ತಾಯಿ ಕಂಗಿ ಶೃಂಗು— ಎಲ್ಲರದೂ ಧಾಟಿ ಒಂದೇ. ಲಚ್ಚುವಿನದೇ ತಪ್ಪು. ಸಾವೂನ್ನ ಬಲವಾದ ನಾಲ್ಕಾರು ಏಟುಗಳನ್ನೂ ಲಚ್ಚಿ ಸಹಿಸುತ್ತಿದ್ದಳು. ಆದರೆ, ಜೋಡಿಗೆ ಆರಾಣೆಯ ಕೊಡ ಒಡೆದುದಕ್ಕೆ ಇಷ್ಟು ಶಿಕ್ಷೆ ಸಾಕೆ! ಕೊನೆ ಕೊನೆಗೆ ಲಚ್ಚಿಗೆ ಅಳುವುದಕ್ಕೂ ಶಕ್ತಿ ಸಾಲಲಿಲ್ಲ?

ಆ ನೋವು ಸಂಜೆಯ ತನಕವೂ ಮಾಯವಾಗಲಿಲ್ಲ.

ಆಗಲೇ ಅವಳ ದೊಡ್ಡಪ್ಪ ಏನೋ ತಿಂಡಿ ಮಾಡುತಿದ್ದರು; ಕೋಣೆಯಲ್ಲಿ. ಲಚ್ಚಿ ಬಾಗಿಲಿನ ತನಕವೂ ಮೂರು ಬಾರಿಹೋದಳು. ಅವರಾಗಿ ಕೊಡಲಿಲ್ಲ. ಶೃಂಗು ಬಾಯಿ ಚಪ್ಪರಿಸಿದ್ದಳು. ಬಂದ ಸಾದು ತಿವು ಗಂಗು ಶಾಲೆಯಿಂದ ಬಂದವರೇ ತಿನ್ನ ತೊಡಗಿದರು. ಲಚ್ಚಿ ಅವರ ಬಳಿಗೆ ಹೋಗಿ "ನನಗೆ...." ಆಂಗಲಾಚಿದಳು.

ಅವರು ಅಷ್ಟೇ ನಿಷ್ಠುರವಾಗಿ, "ಆದು ಶಾಲೆಗೆ ಹೋದವರಿಗೆ ಮಾತ್ರ" ಎಂದರು.

ಪೆಚ್ಚು ಮೋರೆಯಿಂದ ಹಿಂದಿರುಗಿ ಅಕೆ ತಮ್ಮನಿಗಾಗಿ ಕಾದು ಕಳಿತಳು ಅವನು ಬಂದಾಯಿತು

ಅವನಿಗೆ ಇವಳ ಬೇರಾವ ಮಾತು ಕೇಳಿಸದಿದ್ದರೂ ತಿಂಡಿಯ ಸುದ್ದಿ ಬೇಗನೆ ಅರ್ಥವಾಯಿತು. ದೊಡ್ಡಪ್ಪನ ಬಳಿಗೆ ಹೋಗಿ"ದೊಡ್ಡಪ್ಪ.....ನನಗೆ..." ಎಂದ, ಅಂಜುತ್ತಾ

"ಶಾಲೆಯಿಂದ ಬರಲಿಕ್ಕೆ ಇಷ್ಟು ಹೊತ್ತೆ? ಮಕ್ಕಳಿಗೆಲ್ಲ ಕೊಟ್ಟು ಖರ್ಚಾಯಿತು"

ಅವನ ಬಾಯ್ ಆಲ್ಲಿಂದ ಥರ್ ಎಂದಿತು. ಹಲಸಿನ ಗೆಲ್ಲಿನತ್ತ.

ಲಚ್ಚಿ ಅಲ್ಲಿ ಅವನಿಗಾಗಿ ಕಾಯುತಿದ್ದಳು.

ಅವನ ಬರಿಗೈಯನ್ನು ದೂರದಿಂದಲೇ ನೋಡಿದಳು. ಅವನು ತಿಂದು ಉಂದಿರಿ ಬಹುದೆಂದು ಅವನ ಬಾಯನ್ನೇ ಸೂಕ್ಷ್ಮವಾಗಿ ನೋಡಿದಳು. ಅಲ್ಲಿ ಆ ಲಕ್ಷಣವೇನೂ ತೋರಲಿಲ್ಲ. ಹಾಗಾದರೆ ತನ್ನ ಮೊತೇ ಅವನಿಗೆ ಆರ್ಥವಾಗಲಿಲ್ಲವೆಂದು ಆತಂಕದ ಧ್ವನಿಯಲ್ಲಿ "ದೊಡ್ಡಪ್ಪ ಮಕ್ಕಳಿಗೆ

(ಹದಿನೈದನೇ ಪುಟ ನೋಡಿರಿ)



ನವಚೇತನ

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೧೭	೨೮—೧೨—೧೯೬೭	No. 17

ಕುಟುಂಬ ಯೋಜನೆ

ನಮ್ಮ ದೊಡ್ಡ ದೇಶದ ದೊಡ್ಡ ಜನ ಸಂಖ್ಯೆ ಯೂವ ರಾಜಕಾರಣಿಯನ್ನಾದರೂ ತಲೆ ತಿರಿಸಿಕೊಳ್ಳುವಂತೆ ಮಾಡುತ್ತದೆ. ನಮ್ಮ ಮಿತ್ರ ರಾಷ್ಟ್ರಗಳೇ ಈ ಬಗ್ಗೆ ಚಿಂತೆ ಮಾಡುತ್ತಿವೆ. ಆದರೆ, ನಾವು? ೧೯೫೨ರಲ್ಲಿ ಸುಮಾರು ೪೦ ಕೋಟಿಯಿದ್ದ ನಮ್ಮ ಸಂಖ್ಯಾಬಲವಿಂದು ೫೧ ಕೋಟಿ ದಾಟಿದೆ. ಇದೇ ಪ್ರಮಾಣದಲ್ಲಿ ನಾವು ಪ್ರಜಾಭಿವೃದ್ಧಿಯನ್ನು ಸಾಧಿಸುತ್ತ ಹೋದರೆ, ಈ ಶತಮಾನದ ಕೊನೆಗೆ ಆದು ೧೫೪ ಕೋಟಿಯನ್ನು ಮುಟ್ಟಿ, ಚೀನಾದ ಜನ ಸಂಖ್ಯೆಯನ್ನೂ ಮೆಟ್ಟಿ ನಿಲ್ಲುವುದು ಜಾಗತಿಕ ಜನ ಸಂಖ್ಯೆ ಆಗ ೭೦೦ ಕೋಟಿ. ಇದರಲ್ಲಿ ಸೇ ೫೪. ೩ ಆಸ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕೆಗಳದ್ದು. ಇದರ ಸೇ ೨೨. ೬ ಎಂದರೆ ಮೂರರಲ್ಲೊಬ್ಬ ಭಾರತೀಯ!

ಜನಸಂಖ್ಯೆಯ ಮಿತಿಮೀರಿದ ಹೆಚ್ಚಳವೇ ನಮ್ಮ ಯೋಜನೆಗಳ ಪೂರ್ಣ ಫಲಗಳಿಸುವುದಕ್ಕೆ ದೊಡ್ಡ ಅತಂಕ ದುಡಿಯುವ ಕೈಗಳು ಕಡಿಮೆ; ತಿನ್ನುವ ಬಾಯಿಗಳು ಹೆಚ್ಚು—ದುಡಿಯುವ ಅವಕಾಶಗಳಿಗೂ ಕೊರತೆ, ಈ ಬಗೆಯ ಸ್ಥಿತಿಯಿರುವಾಗ ಅತಿವೃಷ್ಟಿ—ಅನಾವೃಷ್ಟಿ ಮೊದಲಾದ ಪ್ರಾಕೃತಿಕ ವಿಕೋಪಗಳು, ಇದೀಗ ದೇಶದ ಮೂಲೆಮೂಲೆಗಳಲ್ಲಿ ನಡೆಯುತ್ತಿರುವ ಚಳವಳಿ, ಸತ್ಯಾಗ್ರಹ, ಕಾಯದ ಭಂಗ, ಪ್ರದರ್ಶನಾದಿ ರಾಜಕೀಯ ಪ್ರಕೋಪಗಳು ಸಂಪನ್ಮೂಲಗಳ ಹೆಚ್ಚುವರಿಗೆ ಬಲವಾದ ಆಘಾತಗಳನ್ನುಂಟುಮಾಡುತ್ತಿದೆ. ಜನಸಂಖ್ಯೆಯು ಒಂದಕ್ಕೆರಡಾಗಿ ಹೆಚ್ಚುವಾಗ, ಉತ್ಪಾದನೆ—ಸೌಲಭ್ಯಗಳು ವಿಶಪರಿಮಾಣದಲ್ಲಿ ಮಾತ್ರ ಹೆಚ್ಚುತ್ತವೆ. ಕಾರಣ, ಪ್ರಜೆಗಳಿಗೆ, ಪೌಷ್ಟಿಕವೆಲ್ಲಿ ಬಂತ, ಹೊಟ್ಟೆ ತುಂಬಿರುವುದಕ್ಕೇ ಆಹಾರವಿಲ್ಲ, ಶಿಕ್ಷಣ ಸೌಲಭ್ಯಗಳಿಲ್ಲ, ಆರೋಗ್ಯ ಸವಲತ್ತುಗಳಿಲ್ಲ, ಉದ್ಯೋಗಾವಕಾಶಗಳು ಇಲ್ಲ—ದುಡಿಮೆಯಿಲ್ಲ—ಆರೆಹೊಟ್ಟೆ, ಆರೆಬಟ್ಟೆ, ಆರೆಜೀವ ... ಈ ದಾರುಣ ದುಸ್ಥಿತಿಯಿಂದ ಭಾರತೀಯು ಬಿಡುಗಡೆ ಹೊಂದುವಂತಾಗಬೇಕಾದರೆ, ಭೂವಿ ತಾಯಿಯೂ ಒಂದಕ್ಕೆರಡು ಬೆಳೆಯುತ್ತ ಬರಬೇಕು ಇದು ಎಂದೆಂದಿಗೂ ಆಗದ ಪೂತು. ಆದುದರಿಂದ ಜನ ಸಂಖ್ಯಾ ನಿಯಂತ್ರಣವೊಂದೇ ನಮಗಿರುವ ಮಾರ್ಗ—ಅನಾಥ ರಕ್ಷಕ.

ಕೆಲವು ದಶಕಗಳಿಗೆ ಮೊದಲು ಪಂ. ನೆಹರು ಜೀಂದಿದ್ದರು "ಸಂತಾನ ನಿಯಂತ್ರಣದ ಬಗ್ಗೆ ಜನತೆಯಲ್ಲಿ ತಿಳುವಳಿಕೆ ಹೆಚ್ಚಬೇಕು. ಇದನ್ನು ಅಧಿಕಾಧಿಕವಾಗಿ ಪ್ರಚಾರ ಮಾಡಬೇಕು.' ಭಾಂತ ಸರಕಾರವಾದರೂ ಕುಟುಂಬ ಯೋಜನೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಅದರ ಪ್ರಚಾರ ಕಾರ್ಯದಲ್ಲಿ ಅಸಕ್ತವಾಗಿದೆ. 'ಸಂತಾನ ನಿಯಂತ್ರಣ' ದ ಬಗ್ಗೆ ನಾನಾ ಅಭಿಪ್ರಾಯಗಳು ಭಾರತದಲ್ಲಿವೆ. ಧರ್ಮ ವಿರೋಧಿ, ಸ್ವಧಾವ ವಿರೋಧಿ ಎಂದು ಮುಂತಾಗಿ ಇದನ್ನು ತೆಗಳುವವರು ಇದ್ದಾರೆ ಆದರೆ, ಆಪದ್ಧರ್ಮವನ್ನು ಮೀರಿದ ದೇವ ಧರ್ಮವಿಲ್ಲವೆಂಬುದನ್ನು ಭಾರತೀಯರು ಮರೆಯಬಾರದು. ಮಕ್ಕಳಿಗೆಲ್ಲಾ ಉತ್ತಮ ಆಶನ, ವಸನ, ವಸತಿ, ಶಿಕ್ಷಣ, ಆರೋಗ್ಯಗಳು ದೇಕಾಗಿದ್ದರೆ, ಹಿತಮಿತವಾದ ಕುಟುಂಬವೇ ಇರಬೇಕಾಗುತ್ತದೆ ಮಿತಿಮೀರಿದ ಕುಟುಂಬಗಳ ದಟ್ಟ ದಾರಿದ್ರ್ಯವನ್ನು ನೋಡಿದಾಗ, ಎದೆ ನಡುಗುತ್ತದೆ. ಆದುದರಿಂದಲೇ ಕುಟುಂಬ ಯೋಜನೆಯತ್ತ ನೋಡುವ ಭಾರತೀಯರ ದೃಷ್ಟಿಯು ಬದಲಾಗುತ್ತಿದೆ. ಯೋಜನೆಯನ್ನು ಸಂತೋಷದಿಂದ ಸ್ವಾಗತಿಸಿದ್ದಾರೆ, ಸ್ವೀಕರಿಸಿದ್ದಾರೆ

'ಕುಟುಂಬ ಯೋಜನೆಯು ಅತಿಕ್ಷಿಪ್ತ ಗಾತ್ರವಿರುವ ಜನತೆಯಲ್ಲಿ ಹೆಚ್ಚಿನ ಪ್ರಚಾರ ನಡೆಯ ಬೇಕು, ಏಕೆಂದರೆ, ಇಂದು ಪ್ರಚಾರತದ ಸವಸ್ಯ ಹುಟ್ಟುವುದು ಬೆಳೆಯುವುದು ಭಾರತದ ಹಳ್ಳಿ-ಹಳ್ಳಿಯಲ್ಲಿ. ಇದಕ್ಕಾಗಿಯೇ ಭಾರತ ಸರಕಾರವು ಈ ತಿಂಗಳ ದ್ವಿತೀಯಾರ್ಧದಲ್ಲಿ ಕುಟುಂಬ ಯೋಜನಾ ಪಕ್ಷವನ್ನು ಇಡಿ ದೇಶದಲ್ಲಿ ಆಚರಿಸುತ್ತಿದೆ ಜನತೆಗೆ ಕುಟುಂಬ ಯೋಜನೆಯ ಲಾಭಗಳನ್ನು ಸಾಮಾನ್ಯ ಜನತೆಗೆ ತಿಳಿಯ ಪಡಿಸುವುದ ಇದರ ಪ್ರಧಾನ ಲಕ್ಷ್ಯ. ಪ್ರತಿ ಕುಟುಂಬವೂ ಮಿತವಾಗಿದ್ದರೆ, ದೇಶದ ಪ್ರಜಾ ಸಂಖ್ಯೆಯೂ ಮಿತವಾದುತ್ತದೆ. ನಮ್ಮ ಸಂಪನ್ಮೂಲಗಳನ್ನು ಸರಿಯಾಗಿ ಉಪಯೋಗಿಸಿಕೊಂಡುಸುಖೀರಾಷ್ಟ್ರ ರಚನೆಯನ್ನು ಆಗ ನಾವು ನಿರ್ಮಿಸುವುದು ಸಾಧ್ಯವಾಗಿಬಹುದು. ದೇಶವನ್ನು ಕಟ್ಟುವವರು ಪ್ರಜೆಗಳು; ತಮ್ಮ ಹಿತವನ್ನು ಸಾಧಿಸುವವರೂ ಅವರೇ, ಅಹಿತಕ್ಕೆ ತಮ್ಮನ್ನು ದೂಡಿಕೊಳ್ಳುವವರೂ ಅವರೇ. ಆದುದರಿಂದಾಗಿ, ಇಂದು ದೇಶದ ಸಮಸ್ತ ಪ್ರಜೆಗಳೂ ತಂತಮ್ಮ ಪರಿವಾರಗಳನ್ನು ಪೌಷ್ಟಿಕವಾಗಿ ಸಾಕುವ ನಿರ್ಧಾರ ಮಾಡಿದರೆ ನಮ್ಮ ಹೆಚ್ಚಿನ ಸಮಸ್ಯೆಗಳು ಪರಿಹಾರವಾಗುತ್ತವೆ

ಮುಖಚಿತ್ರ

ಮೇಲ್ಗಡೆ— ಈ ದೊಡ್ಡ ಸಂಖ್ಯೆ ಸಂತಾರದ ಭಾಗ್ಯವೊ?

ಕೆಳಗಡೆ— ನಗರಾಸ್ಪತ್ರೆಯ ಡಾಕ್ಟರರು ತರುಣ ತಾಯಿಂದಿರಿಗೆ ಕುಟುಂಬ ಯೋಜನೆಯ ಕ್ರಮಗಳನ್ನು ವಿವರಿಸುತ್ತಿದ್ದಾರೆ.

ವಚನ ಸುಧೆ

ಆಧ್ಯಯೇ ಸಹಜಾ ವೃಕ್ಷಾಃ
ಸಂಗಯೂ ಸಾಪ್ರತಿಷ್ಠಿತಾಃ
ತೇ ಹಿ ಪೀಪ್ತ ಶವಾನಾ ವಾತಾನಾ
ಸಹಂಕೇನೋನ್ಮೂಲಯಂತ್ಯಯೋಕ್ಷಿ

ಸಮೂಹವಾಗಿ ಒಂದರೊಡನೊಂದು ಬೆಳೆದು ನಿಂತ ಮರಗಳು ಒಂದು ಇನ್ನೊಂದರ ಆಶ್ರಯದಲ್ಲಿರುವುದರಿಂದ ದೊಡ್ಡ ದೊಡ್ಡ ಬಿರುಗಾಳಿಯನ್ನೂ ಸಹಿಸಿಕೊಳ್ಳುತ್ತವೆ.



ಸಂಘಟಕ—ನಿಜಲಿಂಗಪ್ಪ

ಕರ್ನಾಟಕದ ಮುಖ್ಯ ಮಂತ್ರಿ ನಗುಮೊಗದ ಸಿದ್ಧವ್ವನಹಳ್ಳಿ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗುವ ಪ್ರಥಮ ಕನ್ನಡಿಗನೆನ್ನುವ ಹಿರಿಮೆಗೆ ಪಾತ್ರರಾದರು ಕಾಂಗ್ರೆಸ್ಸಿನ ಎಡ—ಬಲ ಯಾವ ಪಂಗಡಕ್ಕೂ ಸೇರದವರ

(ಪದಿನಾಲ್ಕನೇ ಪುಟನೋಡಿರಿ)

ಗೇಹ ರಾಜ್ಯದಲ್ಲಿ

ಸಹನೆಯ ಬೀಜ ಸಮಾಧಾನ

'ಹೌದ್ರಿ, ನಿಮ್ಮ ರಾಮರಾಜರು ಭಾಷಾ ವಿಧೇಯಕದ ಬಗ್ಗೆ ಏನೋ ಅಪಸ್ವರ ಏಳಿಸೋಕೆ ಆರಂಭಿಸಿದ್ದಾರಂತೆ...'

"ಯಾರು ಬೇಳಿದ್ರೆ?"

"ಯಾರು ಯಾಕೆ ಬೇಳ್ಬೇಕು? ಪ್ರಜಾ ಪ್ರಭುತ್ವದ ಮೂರನೆಯ ಬಲ ಪತ್ರಿಕೆಗಳು ತರದಿ ಮಾಡಿಸಿ."

"ಆಪ್ಪೇನೇಯ? ಅದ್ರಲ್ಲೇನು ವಿಶೇಷ?"

"ಕಾಂಗ್ರೆಸ್ ಅಧ್ಯಕ್ಷ ಪದವಿಯಿಂದ ಇಳಿಯುತ್ತಿರುವಾಗಲೇ ಹೀಗೆಲ್ಲಾ ಅಂದವು, ಇನ್ನು ಇಳಿದ ಮೇಲೆ ಮದ್ರಾಸಿನ ವಿದ್ಯಾರ್ಥಿಗಳೊಡಗೂಡಿ "ಹಿಂದೀ ಹಾಟಾವ್' ಚಳುವಳಿಯ ನಾಯಕರಾಗುತ್ತಾರೆಯೇಂಚ...."

"ನಿನಗೆ ಯಾವಾಗಲೂ ಸಂದೇಹ. ಮತ್ತೆ, ನಾಳೆಯ ಕಥೆ ನಮಗೆ ಈ ದಿನವೇ ತಿಳಿದಿದ್ದರೆ ನಾವು ಹೀಗೆ ಇರುತ್ತೇವೆಯೆ?'

'ನಮ್ಮ ಗಮನ ರಾಷ್ಟ್ರದ ಐಕ್ಯ ಹಾಗೂ ಭದ್ರತೆಗಳನ್ನು ಬಲಪಡಿಸುವುದು.'

"ಯಾರು ಅಲ್ಲಾಂತಾರೆ?"

"ಕೇಂದ್ರ ಸರಕಾರದ ಉದ್ಯೋಗಗಳಿಗೆ ಸೇರುವವರು ಹಿಂದಿ ಅಥವಾ ಇಂಗ್ಲಿಷ್ ಭಾಷೆಯ ಜ್ಞಾನವಿರಲೇ ಬೇಕು. ಕಲವು ಕಾಲಾನಂತರ ಹಿಂದಿ ಅಥವಾ ಇಂಗ್ಲಿಷಿನ ಜ್ಞಾನವಿಲ್ಲದೆಯೇ ಪ್ರಾದೇಶಿಕ ಭಾಷೆಗಳಲ್ಲಿ ಪ್ರವೇಶ ಪರೀಕ್ಷೆಗಳಿಗೆ ಅವಕಾಶ ಬೇಡುವ ಸಾಧ್ಯತೆಯಿದೆ ಎಂದು ರಾಮರಾಜರು ಹೇಳಿದ್ದಾರಂತೆ...."

"ಸರಿ. ಇದರಲ್ಲಿ ತಪ್ಪೇನು?"

"ಏನೂ ಇಲ್ಲವೆ?"

"ಉತ್ತರ ಭಾರತೀಯರು ಮಾತೃ ಭಾಷೆ ಹಿಂದಿಯ ಜ್ಞಾನವನ್ನು ಪಡೆದೇ ಇರುತ್ತಾರೆ. ದಾಕ್ಷಿಣಾತ್ಯರು ಮಾತೃ ಮಾತೃಭಾಷೆಯನ್ನು ತ್ಯಜಿಸಿ ಅಧಿಕೃತ ಭಾಷೆಯನ್ನೋ ವಿದೇಶೀ ಭಾಷೆಯನ್ನೋ ಕಲಿಯಲೇ ಬೇಕಾಗುತ್ತದೆ. ತನ್ನ ತಾಯಿನ್ನು ಬಿಟ್ಟು ಸುಲಭವಾಯಿಯನ್ನು ಇಲ್ಲವೇ ಪರತಾಯಿಯನ್ನು ಆಶ್ರಯಿಸಬೇಕಾಗುತ್ತದೆ--ಹೊಟ್ಟೆಪಾಡಿಗಾಗಿ. ಇದು ನ್ಯಾಯವಾಗುತ್ತದೆಯೆ?"

"ಆದಕ್ಕೇನು, ಮಾಡಬೇಕಿತ್ತು?'

"ರಾಮಣ್ಣಾಜರೇ ಅಂದಿದ್ದಾರೆ ನೋಡು, ಭಾಷಾ ವಿಧೇಯಕವನ್ನು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳ ಬೇಕಿತ್ತು.

"ಆದರೆ, ಔತ್ತರೇಯರ ಆಂಗ್ಲೇಜಿ ಹಟಾವೋ, ದಾಕ್ಷಿಣಾತ್ಯರ ಹಿಂದೀ ಹಟಾವೋಗಳ ಮುಂದೆ ಇಂದಿರಮ್ಮ ಸರಕಾರ ತಲೆ ಬಾಗಿತು ಅಂತಾಯಿತು...."

"ನಡ್ಡ ಖಂದ ಮೂರಿ ಸುಮ್ಮಗಾಗಲಿ ಅಂತ ಮಾಡಿತು. ಮುಖ್ಯ ಇಂಗ್ಲಿಷಿಗೂ ಸ್ಥಾನವಿದೆ-ಮದ್ರಾಸಿಗಳು ಕೃಪ್ತರಾದರು; ಹಿಂದಿಗೂ ಇದೆ. ಉತ್ತರೀಯರಿಗೆ ಸಮಾಧಾನ...'

"ನೋಡ್ರಿ...'

"ಏನು?'

'ನನ್ನ ಕೇಳಿದ್ರೆ, ಕೇಂದ್ರ ಸರಕಾರದ ಉದ್ಯೋಗಗಳಿಗೆ ಅಭ್ಯರ್ಥಿಗಳಿಗೆ ಒಂದು ಪರೀಕ್ಷೆ ಮಾಡಬೇಕು"

'ಅದು ಈಗ್ಲೂ ಇದೆಯಲ್ಲಾ...."

"ಈಗ ಇದೇನ್ರಿ. ಏನಿದೆ? ಪೋಲ್ಗಾನದಿಯೆಲ್ಲಿ ಹರಿಯುತ್ತಿದ ಅಂತ ಕೇಳಿದ್ರು ದಕ್ಷಿಣ ಅಮೆರಿಕೆಯಲ್ಲಿ ಅಂತ ಉತ್ತರ ಬರೀಕಾರೆ....ಮತ್ತೂ ತಮಾಶೆ ನೋಡಿ..."

"ಏನು?'

'ಏನೂಂತ ಅನ್ನೋದು? ಇಲ್ಲೇ ಯಾವುದೋ ಕಂಪನಿಯವ್ರು ಇಂತಹದ್ದೇ ಪರೀಕ್ಷೆಯೊಂದು ನಡಸಿದ್ರಂತೆ. ಅಲ್ಲಿ ಒಂದು ಪ್ರಶ್ನೆ ನಮ್ಮ ದೇಶದ ರಾಷ್ಟ್ರಪತಿ ಯಾರೂಂತ'

"ಹ್ಞೂಂ..."

"ಇದಕ್ಕೆ ಹೆಚ್ಚಿನವ್ರು ಉತ್ತರ ಏನಂತೆ ಗೊತ್ತೆ?"

"ಏನು?"

"ಬಾಬೂ ರಾಜೇಂದ್ರ ಪ್ರಸಾದ್ ಅಂತ...."

"ಇರಬಹುದು, ಪಾಪ, ಅವ್ರು ಹಿಂದಿರೋ ಪುಸ್ತಕ ೧೯೬೦ರ ಮುದ್ರಣವಿರಬಹುದು..."

"ಮೂರ್ಕಲ್ ಅರ್ಜುನ್ ಸಿಂಗ್, ರಾಬರ್ಟ್ ಕೆನ್ನೆಡಿ....ಹೀಗೆ ಏನೇನೋ ಬರೆದಿದ್ದಾರಂತೆ...."

"ಪಾಪ, ಅಧ್ಯಯನ ಆಳ ವಿರದಿರಬಹುದು. ಏನು ಮಾಡೋದು, ಕಾಲು ಜಾರಿದ್ರೆ ಆನೇನೂ ಬೀಳುತ್ತೆ..."

"ಅದು ಹೌದೂನ್ನಿ. ನೊನ್ನೆ ನೊನ್ನೆ ಬೆಂಗಳೂರ ಬಳಿಯ ಹಳ್ಳಿಯೊಂದಕ್ಕೆ ಹೀಗೆ ಕಾಲು ಜಾರಿ ಆನೆ ಪ್ರಪಾತಕ್ಕೆ ಬಿದ್ದುಪಾಪ, ಸತ್ತೇ ಹೋಯಿತಂತೆ. ಬದುಕಿದ್ದರೆ, ಆದಕ್ಕೆ ಮೂವತ್ತು—ನಲುವತ್ತು ಸಾವಿರ ರೂಪಾಯಿ ಸಿಗುತಿತ್ತಂತೆ...."

"ಅಂತೂ ಅದು ಸತ್ತು ಹೋಯಿತಲ್ಲಾ—"

'ಅದ್ರೆ ನೋಡಿ, ಇಂತಹ ಪರೀಕ್ಷೆನಮ್ಮ ದೇಶಕ್ಕೆ ಹೇಳಿಸಿದ್ದಲ್ಲಂತ ನನಗನಿಸುತ್ತೆ...."

'ಸರಿ, ದೋಷ ಪ್ರತಿಯೊಂದರಲ್ಲೂ ಇದೆ. ನಿರ್ದೋಷವಿರುವುದು ಯಾವುದು?'

'ಹಾಗಲ್ಲರೀ, ನೋಡಿ ನಮ್ಮ ದೇಶದಲ್ಲಿ ಸಂವಿಧಾನ ಮನ್ನೆ ಡಜನ್ನಿಗೂ ಹೆಚ್ಚು ಭಾಷೆಗಳು ಇವೆ. ಪ್ರತಿಯೊಂದು ಭಾಷೆಯೂ ಹುಟ್ಟಿದ್ದು ದೇವರ ಬಾಯಿಯಿಂದಲೇ. ಆದುದರಿಂದ ಎಲ್ಲ ಭಾಷೆಗಳೂ ದೈವಿಕ, ಪರಮ ಪವಿತ್ರ, ಪುನೀತ, ಪತಿತ ಪಾವನ ಶಕ್ತಿಯುರ್ವಂಥವು..."

"ನಿನಿದು, ಭಾಷಾ ವಿಜ್ಞಾನದತ್ಯ...."

"ಅದೇ ಅಂಡ್ರಿ, ನಾನನ್ನೋದನ್ನ ಕೇಳಿ...'

"ಹ್ಞೂಂ....ಏನಿದೆ, ಹೊರ ಬರಲಿ...'

"ನಮ್ಮ ಕೇಂದ್ರ ಸರಕಾರದ ನೌಕರಿಗಳಿಗೆ ಸೇರಬಯಸುವವರೆಲ್ಲರೂ ಸಂವಿಧಾನ ಮನ್ನಣೆಯ ಎಲ್ಲಾ ಭಾಷೆಗಳನ್ನೂ ಕಲಿತಿರಬೇಕು. ಎಲ್ಲಾ ಭಾಷೆಗಳಲ್ಲೂ ಒಂದೊಂದು ಪರೀಕ್ಷೆ ತೆಗೆದು ಕೊಳ್ಳ ಬೇಕು. ಆಗ ಅತ್ಯಧಿಕ ಅಂಕಗಳನ್ನು ಪಡೆದವರೇ ನೌಕರರಿಗೆ ಲಾಯಕ್ಕು"

"ಯೋಚನೆಯೇನೋ ಅಮೂಲ್ಯವಾದದ್ದೇ ಆದರೆ, ರಾಜ್ಯಸಂಖ್ಯೆಯಂತೆಯೇ ಭಾಷಾ ಸಂಖ್ಯೆಯೂ ಹೆಚ್ಚುತ್ತಹೋದರೆ ಅವನ್ನೆಲ್ಲಾ ಕಲಿಯುವುದು ಸಾಧ್ಯವಾದೀತೆ?'

"ಅಯ್ಯೋ, ಏನಂತೀರಾ.... ಕೆಲವರ ಮೇಲೆ ಮಾತ್ರ ಒಂದು ಭಾಷೆಯನ್ನು ಹೇರುವುದಕ್ಕಿಂತ ಎಲ್ಲರ ಮೇಲೂ ಎಲ್ಲಾ ಭಾಷೆಗಳನ್ನೂ ಹೇರಿದರೆ, ಸಮ

(ಹದಿಮೂರನೇ ಪುಟ ನೋಡಿರಿ)

SYNDICATE BANK TO FINANCE COCOA CULTIVATION.

Syndicate Bank has agreed to finance cultivation of Cocoa in South Kanara, North Kanara and Coorg.

Shri K. A. Muthanna, Chief Cocoa Adviser, Cadbury-Fry (India) Private Ltd., met the Bank's authorities and it has been agreed that Seeds and technical advice would be made available for the growers and the Syndicate Bank would provide finance against definite purchase agreement by the Cadbury-Fry (India) Private Ltd. from the Cocoa Grower.

Experiments have indicated that areas with an elevation of upto 2,000 feet M. S. L. in the districts of South Kanara, North Kanara and Coorg are ideal for the growing of Cocoa. The most important requirements of Cocoa are shade of trees like coconut, assured irrigation facilities and fairly fertile soil. The crop can be grown as an inter-crop in the coconut gardens. It is known that the cocoa trees yield within 3 years and the income from one acre would be around Rs 1,500/-



ಚತುರ್ದಶೀಯರಿಂದ ಕಾನೂನು ಭಂಗ

ಮಧುಗಿರಿ ಪ್ರಕರಣ. ಗೃಹ ಸಚಿವ ಎಂ. ವಿ. ರಾಮರಾಯರ ರಾಜಿನಾಮೆ—ಆದಷ್ಟು ಬೇಗನೇ ನನ್ನನ್ನು ಹೊಣೆಗಾರಿಕೆಯಿಂದ ಬಿಡುಗಡೆ ಮಾಡಿ ಎಂದು ಮುಖ್ಯಮಂತ್ರಿಯವರಿಗೆ ವಿನಂತಿ. ಮುಖ್ಯಮಂತ್ರಿ ನಿಜಲಿಂಗಪ್ಪನವರು ಪೇಚಿನಲ್ಲಿ—ನ್ಯಾಯೋಗ ವಿಚಾರಣೆಗೆ ಸರಕಾರ ಒಪ್ಪಿರುವಾಗ ರಾಜೀನಾಮೆ ಏಕೆ? ರಾಮರಾವ್ ಬಲ್ಲರು. ಅವರೊಬ್ಬ ಟೂ ಸೆಂಟ್ ಮೆಂಟಲ್ ಮನುಷ್ಯ! ಅದೇ ಇರಬೇಕು, ವಿಧಾನ ಸಭೆಗೂ ಅವರು ಗೈರುಹಾಜರು—ನಿಜಲಿಂಗಪ್ಪ ದೆಹಲಿಗೆ ಹಾರಿದರು—ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಪಾಲ್ಗೊಳ್ಳುವುದಕ್ಕೆ, ಮುಂದಿನ ವರ್ಷದ ರಾಜ್ಯ ಯೋಜನೆಗೆ ಹೊತ್ತ ಗೊತ್ತು ಮಾಡುವುದಕ್ಕೆ. ಬಂಗಳೂರಿನಲ್ಲಿ ಸವಾಲು—ಈಗ ಗೃಹ ಸಚಿವರು ಯಾರು?

ಶ್ರೀ ಎಂ. ವಿ. ರಾಮರಾಯರ ರಾಜೀನಾಮೆ ಸ್ವೀಕೃತವಾಗದಿರವಾಗ ಈ ಪ್ರಶ್ನೆಗೂ ಉತ್ತರ ಹೊಳೆಯದಷ್ಟು ಮೂರ್ಖರಿಂದರೆ ನಮ್ಮ ಶಾಸಕರು? ಯಾಗಲ್ಲ, ಸರಕಾರವನ್ನು ಹಂಗಿಸುವ ತಮ್ಮ ತಮ್ಮ ಪ ಬಾರಿಸುವ ಇನ್ನೊಂದು ಖೈಖುರಿಯದು. ಗೃಹ ಖಾಖೆಯ ಸಚಿವರಿಗೆ ಕಾಗದ ಬರೆಯಿ ಬೇಕಾದರೆ ಯಾರಿಗೆ ಬರೆಯಬೇಕು? ಇನ್ನೊಂದು ದೊಡ್ಡ ಸಮಸ್ಯೆ! ಗೃಹ ಖಾಖೆಯ ಸಚಿವರಿಗೇ ಬರೆಯಬೇಕೆಂದು ಹೇಳಲು ಸ್ವೀಕರರೇ ಬೇಕೆ?

೦ ೦ ೦ ೦

"ಮಹಾಜನ ಆಯೋಗ"ವು ಕರ್ನಾಟಕದ ಬೇಡಿಕೆಗಳನ್ನು ಮನ್ನಿಸಿ ಮಾಡಿರುವುದಿಲ್ಲ; ನಮ್ಮ ರಾಜ್ಯಕ್ಕೆ ಬಯಸಿದ್ದು ಅನ್ಯಾಯವಾಗಿದ್ದು ಆದರೂ ಪ್ರಶ್ನೆಗೊಂದು ಪೂರ್ಣ ವಿರಾಮವಿಕ್ಕಬೇಕು. ಇದಕ್ಕಾಗಿ ಆಯೋಗದ ವರದಿಯನ್ನು ಇದ್ದಕ್ಕಿದ್ದಂತೆ ಪ್ಪಬೇಕು—ಇದು ಕರ್ನಾಟಕ ಸಂಕಾದ, ಶಾಸಕರ, ಜನತೆಯ, ಏಕಕಂಠದನಾದ. ಈ ಅರ್ಥದ ಗೊತ್ತುವಳಿ ಸಾನ ಸಭೆಗಳಲ್ಲಿ ಅದ್ಭುತ ರೀತಿಯಲ್ಲೇ ಮಂಡಾಯಿತು.

ಕೇಂದ್ರ ಗೃಹಮಂತ್ರಿ ಚವನರು ತಮ್ಮ ರಾಗ ಬದಲಿಸಿ ರಾಜ್ಯಕೇಯ ಹಕ್ಷಪಡೆ ನಾಯಕರನ್ನು ಸವಾಲೋಚಿಸಿದ್ದಾರೆ—ಕಾರಣ ಮಹಾರಾಷ್ಟ್ರದ ಒತ್ತಡ—ಆದರೆ ಅಕ್ಷಷ್ಟ. 'ರಾಷ್ಟ್ರೀಯ ಅಭಿಮತ' ಅಂದರೇನು? ಮಂತ್ರಿ ಒತ್ತಡ ಹೇರುವವರು ಹೇಳಿದಂತೆ ಅಭಿಪ್ರಾಯ ರೂಪಿಸುವುದೆ? ಒಂದು ವೇಳೆ, ಇದನೇ ತಾರಕೋವಾಯವೆಂದಿದ್ದರೆ, ಆಯೋಗದ ನೇಮಕವಾದರೂ ಏಕೆ ಬೇಕಿತ್ತು? ಅಂದರೆ, ಅರ್ಥಮಂತ್ರಿಗಳನ್ನು ತೃಪ್ತಿ ಪಡಿಸಲು ಆಯೋಗ ರಚನೆಯಾಯಿತು—ಈಗ ರಾಜಕೀಯ ಅಭಿಪ್ರಾಯ ತಳೆದುಕೊಳ್ಳುವುದು—ಆದರಲ್ಲೂ ಮಂತ್ರಿ ಬೇಳೆ ಬೇಯುವೆ ಹೋದರೆ, "ಜನಮತ ಗಣನೆ". ಇದರಲ್ಲೂ ನಾಯಕರು ಸೋತರೆ — ಮತ್ತೆ ದಿಗ್ವಿದಯ [?]!

ಆಯೋಗ ನೇಮಕವನ್ನು ಆರಂಭದಿಂದಲೂ ವಿರೋಧಿಸಿದ್ದ ಮುಖ್ಯ ಮಂತ್ರಿ ನಿಜಲಿಂಗಪ್ಪನವರನ್ನು ಕೊನೆಗೂ ಒಪ್ಪಿಸಿಕೊಳ್ಳಲಾಯಿತು. ಕಾಂಗ್ರೆಸ್ ಅಧ್ಯಕ್ಷ ಗಾದಿಯ ಪೆಡ್ಡಾದಲ್ಲಿ ಅವರು ಅಸಹಾಯಕರಾಗಿಯೇ ಉರುಳಿದರು—ಚವನರ ಕರ್ನಾಟಕ ಭೇಟಿಗೂ ಇವರನ್ನು ಒಪ್ಪಿಸುವುದಿಲ್ಲನೆಂದೇನು ಗ್ಯಾರಂಟಿ? ಆಗ, ಮಂತ್ರಿಗಳೂ ಶಾಸಕರೂ ರಾಜಿನಾಮೆ ಕೊಡುವರೆ?—ಒಬ್ಬ ಕಾನಕರ ಸವಾಲು.

ಅದು ನಮಗೆ ಆದರ್ಶವಲ್ಲ. ಆದರೂ ಇನ್ನೊಬ್ಬರ ಸ್ವರ.

ರಾಜಿ ಕೊಡುವುದಕ್ಕಾಗಿಯೇ ಶಾಸಕ ರಾದುದೇ ಅವರು? ತಮ್ಮ ವೇತನ ಭತ್ತೆ ಪೆಚ್ಚಿಸಿ ಕೊಂಡುದೇ ಅವರು? ನಿಜಲಿಂಗಪ್ಪನವರನ್ನು ಚವನರು ನುಂಗಿದರೆ, ಆಗ ಶಾಸಕರು ಮಂತ್ರಿ—ಡಿಲ್ಲಿ ಸರಕಾರದ ವಿರುದ್ಧ ಕಾನೂನು ಭಂಗ (ಹೂವ ಕಾನೂನು?) ಕ್ರಮ ಕೈಕೊಳ್ಳಬೇಕು—ಆಗ ವೇತನವೂ ಉಳಿಯುತ್ತದೆ, ಕರ್ನಾಟಕ ನಿಸ್ಸೈಗೂ ಬಲ ಬರುತ್ತೆ (?)

೦ ೦ ೦ ೦

ಅದಯ ಮುಖರ್ಜಿಯವರನ್ನು ಮುಂದೆ ಮಾಡಿ ವಾಮ ಕಮ್ಯೂನಿಷ್ಟರ ಮೊಗರ್ದರ್ಶನದಲ್ಲಿ ಪಶ್ಚಿಮ ಬಂಗಾಳದ ಚತುರ್ದಶಿಕ್ಷೇಯರು ಕಾನೂನು ಭಂಗ ಚಳುವಳಿಯನ್ನು ಆರಂಭಿಸಿ, ರಾಜ್ಯಪಾಲರ ಕ್ರಮವನ್ನು ಪ್ರತಿಭಟಿಸುವ ಸತ್ಯಾಗ್ರಹಕ್ಕೆ ಹೂಸ ಅಭಿಪ್ರಾಯವನ್ನು ಕೊಟ್ಟಿರು. ಡಾ। ಪಿ. ಸಿ. ಘೋಷರು ರಾಜ್ಯದಲ್ಲಿ ಶಾಂತಿ-ಸುವ್ಯವಸ್ಥೆ ಗಳನ್ನು ಸಂರಕ್ಷಿಸಲು ಸೂಂಟ ಕಟ್ಟಿದ್ದಾರೆ—ಬಂಧಿಸಿ ಯಶವನ್ನೂ ಪಡೆಯುತ್ತಿದ್ದಾರೆ.

ಈಗ ಇರುವ ಪ್ರಶ್ನೆ ಸರಕಾರದ ಮುಂದೆ ಒಂದು—ವಿಧಾನ ಸಭೆಯನ್ನು ಬೇಗನೇ ಕರೆದು; ಅಲ್ಲಿ ವಿಶ್ವಾಸ ಮತಪಡೆಯುವುದು—ಅಗತ್ಯವಿದ್ದಲ್ಲಿ ಕ್ರಮವನ್ನೂ ಘೋಷಿಸಿ ಸಂಯುಕ್ತವೂ ಪ್ರಜಾಸತ್ತಾತ್ಮಕವಾಗಿ ಸುಸೂತ್ರವಾಗಿ ಸಾಗಿಸಿಕೊಂಡು ಹೋಗುವುದು. ಇದಕ್ಕಾಗಿ ಕೇಂದ್ರ—ರಾಜ್ಯ ಕಾನೂನು ತಜ್ಞರು ತಲೆ ತಿರಿಸಿ, ಇಲ್ಲಿಗೆ ಒಂದು ಯೋಜನೆ ರೂಪಿಸಿದ್ದರೆಯಂದೂ ಇಷ್ಟಲ್ಲೇ ವಿಧಾನಸಭೆಯನ್ನು ಕೂಡಲಿಸಿಯಂದೂ ತಿಳಿಯುತ್ತದೆ.

ಹೀಗಾಗಬೇಕೆಂದರೆ ಬಂದಿದ್ದೇ ಚತುರ್ದಶೀಯರ ಅಭಿಲಾಷ. ಏಕೆಂದರೆ, ಇದರಿಂದ ಜನಾಭಿಪ್ರಾಯ ಅವರಿಗೆ ವಿರುದ್ಧವಾಗಿ ಬಂದಿದ್ದಲ್ಲಿ ಅವರು ಸಂಪೂರ್ಣವಾಗಿ ಸಂಸ್ಥಾಧ್ಯಕ್ಷ ಬ್ಯಾನರ್ಜಿಯವರು ಘೋಷ ಸರಕಾರವನ್ನು ತಾನು ಮನ್ನಿಸುವುದಿಲ್ಲವೆಂದು ಮುಂದೂಡಿದ್ದರು. ಅವರಿಗೆ ಈ ಬಗೆಯ ಅಧಿಕಾರವಿನೆಯೇ ಇಲ್ಲವೇ ಎಂಬ ವಿಚಾರ ಬೇರೆ. ಆಂತೂ ಅಜಯ ಮುಖರ್ಜಿ ಸಂಪುಟವನ್ನು ಮತ್ತೆ ಪ್ರತಿಷ್ಠಾಪನೆ ಮಾಡಿಸದೆ ಜೋದರೂ ಮಧ್ಯಾವಧಿ ಚುನಾವಣೆಗಳನ್ನು ಏರ್ಪಡಿಸುವಂತೆ ಮಾಡಿ ತಮ್ಮ ಮೂಗಿಗೆ ತುಪ್ಪ ಸವರಿಕೊಳ್ಳುವುದೇ ಅವರಿಗಿಂದು ಬೇಕು. ಅದ ಕ್ಕಾಗಿಯೇ ಹಿಂಸಾತ್ಮಕ ಚಳುವಳಿಯಲ್ಲಿ ಅವರು ಈಗ ಇನ್ನು ಮುಂದೆ ನಿರತರು.

ಚತುರ್ದಶೀಯರ ಕಾನೂನು ಭಂಗ ಚಳುವಳಿ ಅರಾಜಕತೆಗೆ ಮೂಲ. ಮಹಾತ್ಮರು ಮಾಡಿದ್ದ ಸತ್ಯಾಗ್ರಹ—ಕಾನೂನು ಭಂಗ ಚಳುವಳಿ ದೇಶೀಯರ ಬಿಡುಗಡೆಗಾಗಿದ್ದರೆ, ಇವರದ್ದು ಕೆಂಪು ಚೀನೀಯರ ಬಡಲಿಗೆ ದೇಶೀಯರನ್ನು ಬಲಿ ನೀಡುವ ದಕ್ಕಾಗಿದೆ. ಎಂತಲೇ ಇದು ದುರಾಗ್ರಹ—ಹಿಂಸಾತ್ಮಕ. ಇಂತಹ ದೇಶದ್ರೋಹಿ ಚಟುವಟಿಕೆಗಳಿಗೆ ಮುಟ್ಟುಗೋಲು ಹಾಕುವುದು ದೇಶ ರಕ್ಷಣೆಯಲ್ಲಿ ಪ್ರಥಮ ಕಾರ್ಯ.

೦ ೦ ೦ ೦

ದಕ್ಷಿಣ ರೊ. ಆಸ್ಟ್ರೇಲಿಯಾದ ಪ್ರಧಾನ ಮಂತ್ರಿ ಹೆರಾಲ್ಡ್ ಹೋಲ್ಟ್‌ರವರು ಕೂಡಲು ನರೆತವರು, ಆದರೆ ದೃಢಕಾಯರು. ದೇಹದಾರ್ಢ್ಯಕ್ಕೆ ಪ್ರೋತ್ಸಾಹ ನೀಡಲು ಮುಂದಾದವರು. ಒಳ್ಳೆಯ ಈಜುಗಾರರು. ಅಂದು ಈಜಾಟಕ್ಕೆಂದು ನೀರಿಗಿಳಿದವರು ಮೇಲೆ ಬರಲೇ ಇಲ್ಲ. ಅವರಿಗಾಗಿ ನಾನಾ ರೀತಿಯ ಶೋಧನೆಗಳು ನಡೆದರೂ ಪತ್ತೆಯಾಗಲಿಲ್ಲ. ಜಲ ಸಮಾಧಿಯನ್ನೈದಿರಲೇ ಬೇಕು. ಕಳೆದ ವರ್ಷಾರಂಭದಲ್ಲಿ ಇವರು ಪ್ರಧಾನಿಯಾಗಿ ಅಧಿಕಾರಕ್ಕೆ ಸ್ವೀಕರಿಸಿದ್ದರು. ಅಲ್ಪ ಕಾಲದಲ್ಲಿಯೇ ಬಹಳ ಜನಪ್ರಿಯತೆಯನ್ನು ಗಳಿಸಿದ್ದರು.

ಜಂ ಶಾಸುಗಳ ಅವಿಶ್ರಾಂತ ಪರಿಶ್ರಮ ಧನೆಯಲ್ಲಿ ಅವರ ಬಗ್ಗೆ ಮಾಹಿತಿ ಪಡೆ
(ಪುಸ್ತರಡನೇ ಪುಟ ನೋಡಿ)

ಕೃಷಿ ರಾಷ್ಟ್ರವನ್ನು ಉಣಿಸುತ್ತಿದೆ
ಸಿಂಡಿಕೇಟ್ ಬ್ಯಾಂಕು ಕೃಷಿಯನ್ನು ಪೋಷಿಸುತ್ತಿದೆ

ಆಧುನಿಕ ಕೃಷಿಪದ್ಧತಿಯು ಬಳಕೆಯೇ ರಾಷ್ಟ್ರವನ್ನೆ
ಸ್ವಯಂಪೂರ್ಣಗೊಳಿಸಿ, ನಾಡಿನ ಆರ್ಥಿಕ ಬದುಕನ್ನು
ಸುಭದ್ರ ಅಡಿಪಾಯದ ಮೇಲೆ ನಿಲ್ಲಿಸಬಲ್ಲುದು.

ಹೊಲದ ನಾಗುವಳಿಯಲ್ಲಿ ಯಾಂತ್ರೀಕರಣ ಮತ್ತು ನವೀನ ವಿಧಾನದ ಅನುಸರಣೆಯನ್ನು ಸಾಧ್ಯಗೊಳಿಸಲು ಸಿಂಡಿಕೇಟ್ ಬ್ಯಾಂಕು ನಾಡಿನ ಕೆಲವೊಂದು ಆರಿಸಿಲಾದ ಪ್ರದೇಶಗಳ ಕೃಷಿಕರಿಗೆ ಸೀರಾವರಿ ಪಂಪು ಸೆಟ್ಟು, ಉಳುಮೆ ಯಂತ್ರ, ಟ್ರ್ಯಾಕ್ಟರು ಮತ್ತಿತರ ಕೃಷಿ ಉಪಕರಣಗಳನ್ನು ಕೊಂಡುಕೊಳ್ಳಲು ಹಣದ ನೆರವನ್ನು ನೀಡಿದೆ.

ಸಿಂಡಿಕೇಟ್ ಬ್ಯಾಂಕು ಕೃಷಿರಂಗಕ್ಕೆ ಇನ್ನೂ ಮಿಗಿಲಾಗಿ ಮತ್ತು ವ್ಯಾಪಕ ನೆಲೆಯಲ್ಲಿ ನೆರವನ್ನು ನೀಡಲು ಬಯಸುತ್ತದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ದಕ್ಷಿಣ ಕನ್ನಡ ಜಿಲ್ಲೆ

ಕುಂದಾಪುರ

ಮುನ್ಸಿಫ್ ಕೋರ್ಟಿನಲ್ಲಿ

S. C. 453/67

ವಾದಿ—ಶೀನಪ್ಪ ಸಟ್ಟಿ.

ಪ್ರತಿವಾದಿ—ಗೋವಿಂದ ಸಟ್ಟಿ.

ಕುಂದಾಪುರ ತಾಲ್ಲೂ ನಾಬ್ರಾಡಿಯ ಶಿರೂರು ಗ್ರಾಮದ ಉಮ್ಮಣ್ಣ ಸಟ್ಟಿ ಎನ್ನ ನಾಗಿ ಸೆತ್ತಿರುವಾಗ ಸದ್ರಿ ಪ್ರತಿವಾದಿ ಗೋವಿಂದ ಸಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯಿಂದ ವಾದಿಗೆ ಡಿಮಾಂಡ್ ನೋಟಿನ ಬಾಬ್ತು ಬರತಕ್ಕ ಹಣ ಬಡ್ಡಿ ಇ ಗ್ಗೆ ಬರಮಾಡಿಕೊಳ್ಳುವ ಬಗ್ಗೆ ವಾದಿ ದಾಕ್ಲು ಮಾಡಿದ ಮೇಲಿನ ದಾವಾ ಮೇಲ್ಕಾಣುವ ಕೋರ್ಟಿನಲ್ಲಿ ತಾರೀಕು 16-1-1968ನೇ ದಿನ ಬೆಳಿಗ್ಗೆ 11 ಗಂಟೆಗೆ ತಪ್ಪದೆ ಯಿಡೋಜಾಗಿದ ಎಂಬ ಸಂಗ್ತಿ ಈ ಸಮನ್ಸ್ ತಳಿಸೇ ಹಾಗಿದೆ.

B. S. SHETTY, B. A., B. L.,
Vakil for Plaintiff.

Goondapoor, 18-12-67.

In the Court of the Munsiff cum Magistrate,
Belthangady.

R. E. P. 162/67.

Between:—

V. Unhi Beary — Petitioner

and

Abbubakkar Beary — Respondent

To

The Respondent
Abbubakkar Beary
S/o Gulam Beary
Residing at Venoor Village,
Belthangady Tq.,
Post: VENOOR.

Please take notice that the above execution—petition stands posted to 4—1—1968 at 11 A. M. for your appearence either personally or through your advocate. If you fail to appear on the said date the petition will be heard exparte.

By order of the Court,

K. Chidananda,
Advocate for Petitioner.

Belthangady, 16—12—1967.

ಮೈಸೂರು ರಾಜ್ಯದಲ್ಲಿ ಕುಟುಂಬ ಯೋಜನೆಗೆ ಅಗ್ರ ಸ್ಥಾನ

'ಜನನ ನಿಯಂತ್ರಣದ ಬಗ್ಗೆ ವಿಶಾಲ ಲೆಕೆ ಹುಬ್ಬ ಬೇಕು. ವಿವಿಧ ಬಗೆಯ ಕುಟುಂಬ ನಿಯಂತ್ರಣ ವಿಧಾನಗಳ ಬಗ್ಗೆ ಪ್ರಚಾರ ಮಾಡಬೇಕು" ಎಂದು ಮೂರು ದಶಕಗಳ ಹಿಂದೆ ನುಡಿದರು ಜವಹರಲಾಲ್ ನೆಹರು.

ಇಂದಿನ ಭೀಕರ ಜನಸಂಖ್ಯಾ ಸ್ಫೋಟ ನೋಡಿರುವ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಕಳೆದ ಕುಟುಂಬ ಯೋಜನಾದ್ವಿಶಾಪ್ತಾಹಕ್ಕೆ ಸಂದೇಶ ನೀಡಿದ್ದು, 'ನಮ್ಮಲ್ಲಿ ಆರ್ಥಿಕ ಸಂಪನ್ಮೂಲಗಳ ಪರಿಮಿತವಾಗಿರುವುದರಿಂದ ಜನಿಸುವ ಪ್ರತಿ ಶಿಶುವೂ ಅಹ್ವಾನಿತ ಅತಿಥಿಯಂತಿರಬೇಕು ಹಾಗೂ ಆರೋಗ್ಯ, ಶಿಕ್ಷಣ, ಉದ್ಯೋಗಗಳಿಗೆ ಉತ್ತಮ ಸೌಲಭ್ಯ ಪಡೆಯುವ ಹಕ್ಕು ಮಗುವಿಗೆ ಇರಬೇಕು ಎಂದು ಹೇಳಿದರು.

ಈ ದಿಸೆಯಲ್ಲಿ ಮೈಸೂರಿನ ಕಾರ್ಯಪ್ರಗತಿ ಪ್ರಶಂಸನೀಯವಾಗಿದೆ. ಸಂತಾನ ಶಕ್ತಿಹರಣ ಶಸ್ತ್ರ ಚಿಕಿತ್ಸೆಯಲ್ಲಿ ಮೈಸೂರು ಗುರಿ ಮೀರಿಸಿದೆ. ಮೈಸೂರು ಸರ್ಕಾರ ಕುಟುಂಬ ಯೋಜನೆಗೆ ಅಗ್ರಸ್ಥಾನ ನೀಡಿರುವುದಲ್ಲದೆ, ಕೃಷಿ ಉತ್ಪಾದನೆಗೆ ಪೂರಕವಾಗಿರುವಂತೆ ಸ್ಥಾನ ಕಲ್ಪಿಸಿದೆ. ಅಧಿಕ ಸೇವೆಯ ಬೇಡಿಕೆಗಳನ್ನು ಪೂರೈಸಲು ಕುಟುಂಬ ಯೋಜನಾ ಕಾರ್ಯಕ್ರಮವನ್ನು ಎಲ್ಲ ಮಟ್ಟಗಳಲ್ಲೂ ಪುನರ್ವ್ಯವಸ್ಥೆಗೊಳಿಸಲಾಗಿದೆ.

ದಂಪತಿಗಳ ಇಷ್ಟ

ರಾಜ್ಯದ ಪ್ರತಿಯೊಂದು ಸಮೂಹ ವಿಕಾಸ ಬ್ಲಾಕಿನಲ್ಲಿಯೂ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಇದರಲ್ಲಿ ಒಂದು ಗ್ರಾಮ ಯೋಜನಾ ಕೇಂದ್ರವೂ ಸೇರಿರುತ್ತದೆ. ಈಗ ಇಂಥಹ ೨೬೫ ಕೇಂದ್ರಗಳಿವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ತಮ್ಮ ಸಿಬ್ಬಂದಿ ಬಲಕರಣೆಗಳೊಡನೆ ಕುಟುಂಬ ಯೋಜನೆಯ ಸಂದೇಶವನ್ನು ಮನೆಮನೆಗೆ ಸಾರುತ್ತವೆ ಸಂತಾನವಾಗಲು ಯೋಗ್ಯರಾದ ದಂಪತಿಗಳ ಕುಟುಂಬ ಯೋಜನೆಯ ವಿವಿಧ ಪದ್ಧತಿಗಳನ್ನು ಅಂಗೀಕರಿಸುವಂತೆ ಪ್ರೇರೇಪಿಸುತ್ತವೆ. ಆದರೆ ದಂಪತಿಗಳು ತಮಗೆ ಇಷ್ಟವಾದ ಪದ್ಧತಿಯನ್ನು ಅನುಸರಿಸಬಹುದು. ಈ ವಿಷಯದಲ್ಲಿ ಒತ್ತಾಯವಿಲ್ಲ. ಆದರೆ ಮೂರು ಅಥವಾ ಹೆಚ್ಚಿನ ಮಕ್ಕಳ ಪೋಷಕರು ಬೆಳ್ಳಮಿಲಥವಾ ವಾಸಿಕ್ಟಮಿಗಳಲ್ಲಿ ಒಂದನ್ನು ಅಂಗೀಕರಿಸುವುದು ಲೇಸು.

ಸಂಘ ಸಂಸ್ಥೆಗಳ ಪಾತ್ರ

ಕುಟುಂಬ ಯೋಜನೆಯ ಕಾರ್ಯಕ್ರಮವು ತೊಡಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗೆ ಸೇವಾವಧಿಯಲ್ಲಿ ತರಬೇತಿ ನೀಡಲೆಂದು ಹುಬ್ಬಳ್ಳಿ ಮತ್ತು ರಾಮನಗರಂ ಪಟ್ಟಣಗಳಲ್ಲಿ ಕುಟುಂಬ ಯೋಜನಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಇದಲ್ಲದೆ ಮಂಡ್ಯ ಮತ್ತು ರಾಮನಗರದ ತರಬೇತಿ ಕೇಂದ್ರಗಳು ಸೇನೆಯಲ್ಲಿರುವ ಸಿಬ್ಬಂದಿಗೆ ಪರಿವರ್ತನೆಯ ಅಭ್ಯಾಸಕ್ರಮದ ಅನುಕೂಲತೆಯನ್ನು ಒದಗಿಸಿವೆ. ಮೆಡಿಕಲ್ ಕಾಲೇಜಿನ ಅಭ್ಯಾಸ ಕ್ರಮದಲ್ಲಿ ಕುಟುಂಬ ಯೋಜನೆ ವಿಷಯವನ್ನು ಸೇರಿಸಲಾಗಿದೆ. ನರ್ಸು, ಹೆಲ್ತ ವಿಜಿಟರ್ ಗ್ರಾಮ ಸೇವಕ ಮತ್ತು ಹೆಲ್ತ ಇನ್ಸ್‌ಪೆಕ್ಟರ್ ಇವರ ತರಬೇತಿಯ ಪಠ್ಯ ಕ್ರಮದಲ್ಲಿಯೂ ಕುಟುಂಬ ಯೋಜನೆಯ ವಿಷಯವನ್ನು ಸೇರಿಸಲಾಗಿದೆ. ಬೆಂಗಳೂರಿನಲ್ಲಿ ಕುಟುಂಬ ಯೋಜನೆಯಕ್ಷೇತ್ರಭೆಟಿಗಳೊಂದನ್ನು ಭಾರತ ಸರಕಾರವು ಪ್ರಾರಂಭಿಸಿದೆ. ಈ ಇಲಾಖೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಅವರವರ ಕೆಲಸದ ಸ್ಥಳಗಳಲ್ಲಿಯೇ ತರಬೇತಿ ನೀಡಲು ಬೆಂಗಳೂರಿನ ಕ್ಷೇತ್ರ ಭೆಟಿಕವು ಶ್ರಮಿಸುತ್ತಿದೆ

ಸರಕಾರಿ ಆಸ್ಪತ್ರೆ, ದವಖಾನೆ, ಆರೋಗ್ಯ ಭೆಟಿಕ ಪ್ರಾಥಮಿಕ ಆರೋಗ್ಯಕೇಂದ್ರ, ಇ.ಎಸ್.ಐ ಆಸ್ಪತ್ರೆ, ಔದ್ಯೋಗಿಕ ಮತ್ತು ಪ್ಲಾಂಟೇಶನ್ ಆಸ್ಪತ್ರೆಗಳಲ್ಲಿ ಗರ್ಭನಿರೋಧಕ ಸಾಧನಗಳನ್ನು ಉಚಿತವಾಗಿ ಕೊಡಲಾಗುತ್ತಿದೆ. ಆರೋಗ್ಯ ಇಲಾಖೆಯ ಕ್ಷೇತ್ರ ಸಿಬ್ಬಂದಿಯವರು ತಮ್ಮ ಮನೆ ಮನೆಯ ಭೇಟಿಯ ಸಮಯದಲ್ಲಿ ಗರ್ಭನಿರೋಧಕ ಸಾಧನೆಗಳನ್ನು ಹೊಂಚುವರು. ಈ ಕ್ರಮಕ್ಕೆ ಜನರಿಂದ ಅಪಾರ ಸ್ವಾಗತ ಸಿಕ್ಕಿದೆ.

ಹುಬ್ಬಳ್ಳಿಯ ಕುಟುಂಬ ಯೋಜನಾ ಕೇಂದ್ರ, ಮೈಸೂರಿನ ಮೆಡಿಕಲ್ ಕಾಲೇಜು, ಬೆಂಗಳೂರಿನ ವಾಣೀ ವಿಲಾಸ ಆಸ್ಪತ್ರೆ ಮತ್ತು ಮಲೆಯಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸದ್ಯೋಛಿದ್ರವಿಚ್ಛಿದ್ರದಲ್ಲಿ ಪ್ರಾಯೋಗಿಕ ಯೋಜನೆಯೊಂದನ್ನು ಪ್ರಾರಂಭ ಮಾಡಲಾಗುವುದು. ಜನರು ಮೂರೈಗಳು ಮಂತಾದ ಗರ್ಭನಿರೋಧಕ ಸಾಧನಗಳನ್ನು ಸ್ವೀಕರಿಸಲು ಎಷ್ಟರ ಮಟ್ಟಿಗೆ ಸಿದ್ಧರಿದ್ದಾರೆ ಎಂಬ ವಿಷಯದ ಅಧ್ಯಯನವನ್ನು ಮಾಡುವುದೇ ಈ ಪ್ರಾಯೋಗಿಕ ಯೋಜನೆಯ ಉದ್ದೇಶ. ಈ ಅಧ್ಯಾಯವನ್ನು ಕೈಕೊಳ್ಳಲಿರುವ ಡಾಕ್ಟರರು ಈಗ ಮದ್ರಾಸಿನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಅವರ ಹದಿಮೂರು ಪ್ರತುಚಕ್ರದ ಅವಧಿಯುವರೆಗೆ ಐದರಿಂದ ಹತ್ತು ಸಾವಿರ ಮಹಿಳೆಯರನ್ನು ಪರೀಕ್ಷೆ ಮಾಡುವುದೇ ಈ ಪ್ರಾಯೋಗಿಕ ಅಭ್ಯಾಸದ ಗುರಿಯಾಗಿದೆ.

ಹಾಸನ ಜಿಲ್ಲೆಯ ಸಾಧನೆ

ಕುಟುಂಬ ಯೋಜನೆಯಲ್ಲಿ ಮೈಸೂರು ರಾಜ್ಯ ಸಾಧಿಸಿರುವ ವಿಕ್ರಮ ಅನುಪಮವಾದುದು. ಈ ವರ್ಷ ಸೆಪ್ಟೆಂಬರ್ ಮೊನಚಿನ ಅಂತ್ಯಕ್ಕೆ ಮುಕ್ತಾಯಗೊಂಡ ಮೂರು ತಿಂಗಳ ಅವಧಿಯಲ್ಲಿ ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆಯಲ್ಲಿ ಮೈಸೂರು ಶೇಕಡ ೧೮೫೦ ರಷ್ಟು ಗುರಿ ಸಾಧಿಸಿದೆ. ಇದೇ ಅವಧಿಯಲ್ಲಿ ಆಂಧ್ರಪ್ರದೇಶವು ಶೇಕಡ ೧೧೩, ಕೇರಳ ಶೇಕಡ ೧೧೦ ಹಾಗೂ ಮದ್ರಾಸ್ ಶೇಕಡ ೭೨ರಷ್ಟು ಗುರಿ ಸಾಧಿಸಿವೆ. ಈ ಅವಧಿಯಲ್ಲಿ ಹಾಸನ ಹಾಗೂ ಚಿತ್ರದುರ್ಗ ಜಿಲ್ಲೆಗಳು ಶೇಕಡ ೨೨೦ ಮತ್ತು ೪೪೧ ಪ್ರಮಾಣದಲ್ಲಿ ಗುರಿ ಸಾಧಿಸಿವೆ. ಅಲ್ಲದೇ ಇಡೀ ವರ್ಷದ ಗುರಿಗಿಂತಲೂ ಎಂಡರಷ್ಟು ವಿಕ್ರಮ ಸಾಧಿಸಿದೆ.

ಬಳ್ಳಾರಿ ಮತ್ತು ತುಮಕೂರು ಜಿಲ್ಲೆಗಳು ಶೇಕಡ ೩೦ರಷ್ಟು ಗುರಿ ಸಾಧಿಸಿವೆ. ಮೂರು ಜಿಲ್ಲೆಗಳು ಶೇಕಡ ೨೦೦ ಹಾಗೂ ಇತರ ನಾಲ್ಕು ಜಿಲ್ಲೆಗಳು ಶೇಕಡ ೧೦೦ ಗುರಿ ಸಾಧಿಸಿವೆ. ಇವು ಅದ್ಭುತ ಸಾಧನೆಯೇ ಸರಿ!

ಇಪ್ಪತ್ತು ಲಕ್ಷ ಮಹಿಳೆಯರ ನಿರ್ಧಾರ ತಪ್ಪಾಗಿರಲು ಸಾಧ್ಯವಿಲ್ಲ

ಗರ್ಭಧಾರಣೆಯನ್ನು ತಡೆಗಟ್ಟಲೂ ಮತ್ತು ತಮಗೆ ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯ ಬೇಕೆಂದೂ ನಿರ್ಧರಿಸಿ ನಮ್ಮ ದೇಶದ ಸುಮಾರು 2050000 ಮಹಿಳೆಯರು ವಂಕೀ ಧಾರಣ ಮಾಡಿಸಿ ಕೊಂಡಿದ್ದಾರೆ. ಪರಿಮಿತ ಸಂಸಾರವನ್ನು ರೂಪಿಸಲು ಈ ಮಹಿಳೆಯರಿಗೆಲ್ಲ ವಂಕಿ ನೆರವು ನೀಡಿದೆ. ವಂಕೆಯು ಸುರಕ್ಷಿತವೆಂದೂ ಮತ್ತು ಆಶ್ಚರ್ಯಕರವಾಗಿ ಪರಿಣಾಮಕಾರಿಯೆಂದೂ ಅದರ ಲಕ್ಷಗಟ್ಟಲೆ ಮಹಿಳೆಯರು ವಂಕೆಯನ್ನು ಸ್ವೀಕರಿಸಿದ್ದಾರೆ.

ವಂಕೆಯನ್ನು ಸ್ವೀಕರಿಸಿದ ಇಷ್ಟು ಬೃಹತ್ ಸಂಖ್ಯೆಯ ಮಹಿಳೆಯರ ನಿರ್ಧಾರ ತಪ್ಪಾಗಿರಲು ಸಾಧ್ಯವೇ ಇಲ್ಲ. ಚಿಕ್ಕ ಗಾತ್ರದ ಸುಖೀ ಸಂಸಾರವನ್ನು ಮಾಡಲು ಸಹಾಯಕವಾದ ವಂಕೆಯ ಸುಪರಿಣಾಮದ ಬಗ್ಗೆ ಈ ಸ್ತ್ರೀಯರೆಲ್ಲ ನಿಶ್ಚಯಂದೇಹದ ಸಾಕ್ಷಿಯಾಗಿದ್ದಾರೆ!

In the Court of the Munsiff of Udipi, S. Kanara.

R.I.A. No. 699/1967
in O. S. No. 53/1967.

Between—

Ananthrama Samaga and others—*Petitioners Plaintiffs.*

and

Manjunatha Palan, son of Horgekudru Kalappa, Employee of L. I. C. of India, residing in Tonse East Village, Udipi Taluk *Respondent-Defendant.*

To

The respondent-defendant.

Please take notice that the above petition is stand posted to 5-1-1968 for passing of final decree as per terms of the preliminary decree in the said O. S. No 53/1967. If the same is not resisted by the respondent-defendant on that date at 11 A.M. before the said Court, it will be heard and determined in his absence.

T. K. Kalkur.
Advocate for Petitioners-Plaintiffs.

Udipi, Daited 20-12-1967.



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ರವಿಂ ಪ್ರತಿಗಳಿಗೆ ವಿಶೇಷ ರಿಯಾಯಿತಿ

ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಶೇಷ ಲೇಖನ

ಜನತಾ ಯೋಜನೆ - ... ಕುಟುಂಬಯೋಜನೆ

ಕುಟುಂಬ ಯೋಜನಾ ದ್ವಿಸಪ್ತಾಹ
1967 ದಶಂಬರ 16ರಿಂದ 31

ಜನಸಂಖ್ಯೆ ಹೆಚ್ಚಿದರೆ ಕೇಡಲ್ಲ. ಅದು ವಿಧಾನವಾಗಿ ಹೆಚ್ಚಬೇಕು. ಕೈಗಾರಿಕೆ, ವ್ಯೇನಾಯ ಇವುಗಳ ತೀವ್ರ ಅಭಿವೃದ್ಧಿಗೆ ಅಪ್ಪದ ಮಾಡಿಕೊಡಬೇಕಲ್ಲವೆ? ಇದು ಅಪೇಕ್ಷಣೀಯ. ಈಗ ವಸ್ತುಸ್ಥಿತಿಯೇ ಬೇರೆ.

ಜನಸಂಖ್ಯೆ ಇವೆರಡನ್ನೂ ಹಿಂದೆ ಹಾಕಿ ನಾಗಾಲೋಟದಲ್ಲಿ ಹೆಚ್ಚುತ್ತಿದೆ. ಇದೇ ನಮ್ಮ ಮುಂದಿರುವ ಪ್ರಧಾನ ಸಮಸ್ಯೆ. ಜನಸಂಖ್ಯೆಯ ಹೆಚ್ಚಳ ನಮ್ಮ ಇಪ್ಪತ್ತು ವರ್ಷಗಳಲ್ಲಿನ ಸಾಧನೆಯನ್ನು ನಿರರ್ಥಗೊಳಿಸುತ್ತ ಬಂದಿದೆ

ದೇಶವು ಸ್ವತಂತ್ರವಾದ ಬಳಿಕ ಇಪ್ಪತ್ತು ವರ್ಷಗಳಲ್ಲಿ ಕೈಗಾರಿಕಾ ಉತ್ಪಾದನೆ ಶೇ.150ರಷ್ಟು ಹೆಚ್ಚಿದೆ. ಆಹಾರ ಉತ್ಪಾದನೆ ಶೇ. 70ರಷ್ಟು ಹೆಚ್ಚಿದೆ. ಉದ್ಯೋಗ ಸೌಕರ್ಯಗಳು ಮೂರು ಕೋಟಿಯಷ್ಟು ಹೆಚ್ಚಿದೆ. ಇಪ್ಪತ್ತು ವರ್ಷದಲ್ಲಿ ಈ ಸಾಧನೆ ಗಮನಾರ್ಹವಾಗಬೇಕಿತ್ತು. ಪ್ರತಿ ವರ್ಷ 130ಲಕ್ಷದಷ್ಟು ಹೆಚ್ಚುತ್ತಿರುವ ಜನಸಂಖ್ಯೆಯು ಈ ಸಾಧನೆಯನ್ನು ಮಸಕುಗೊಳಿಸಿದೆ. ಜನಸಂಖ್ಯಾಭಿವೃದ್ಧಿಯ ದುಷ್ಪರಿಣಾಮಗಳು ಅನೇಕ. 650 ಲಕ್ಷ ಮಕ್ಕಳಿಗೆ ಶಿಕ್ಷಣ ಸೌಕರ್ಯ ಲಭ್ಯವಿಲ್ಲ ಒಂದು ಕೋಟಿ ಜನ ನಿರುದ್ಯೋಗಿಗಳಿದ್ದಾರೆ. ನಮ್ಮ ತಲಾ ಆಹಾರ ಬಳಕೆಯ ಪ್ರಮಾಣ ಕಡಿಮೆಯಾಗಿದೆ. 7,41,00,000 ಜನರಿಗೆ ವಸತಿ ಸೌಕರ್ಯಗಳು ದೊರೆತಿಲ್ಲ.

ವಿಶೇಷ ಸಮಸ್ಯೆ

ಭಾರತದ ವಿಸ್ತೀರ್ಣ, ವಿಶ್ವದ ಒಟ್ಟು ಭೂ ಭಾಗದ ಶೇ. 2.4ರಷ್ಟು ಮಾತ್ರ. ಆದು ವಿಶ್ವದ ಜನಸಂಖ್ಯೆಯ ಶೇ 14ರಷ್ಟು ಜನರಿಗೆ ಆಹಾರವನ್ನು ಒದಗಿಸಬೇಕಾಗಿದೆ. ಇದೇ ಸಮಸ್ಯೆಯ ಒಂದು ವಿಲಕ್ಷಣ ಸಂಗತಿ. ದೇಶದ ಈಗಿರುವ ಗಂಜಿ ಕೇಂದ್ರಗಳು 515 ದಶಲಕ್ಷ ಜನರ ಅಗತ್ಯಗಳನ್ನು ಪೂರೈಸಲು ಸಾಕಾಗಲಾರವು. ಸಂಖ್ಯಾಸ್ಫೋಟಕ ಸ್ಥಿತಿಯ ಜೊತೆಗೆ ಇರುವಾಗ ಜನಜೀವನ ಸ್ಥಿತಿ ಸುಧಾರಿಸಲು ಸಾಧ್ಯವಾಗದು.

ದೇಶದಲ್ಲಿ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗಬೇಕು. ಈ ಅಭಿವೃದ್ಧಿ ಅರ್ಥಪೂರ್ಣವಾಗಲು ಜನಸಂಖ್ಯೆಯನ್ನು ಹತೋಟಿಗೆ ಒಳಪಡಿಸಬೇಕು. ಆಗಲೇ ಭಾರತ ಈ ಸಮಸ್ಯೆಯಿಂದ ಮುಕ್ತಿ ಸಾಧಿಸಬಲ್ಲುದು.

ಪ್ರತಿ ಒಂದು ಸಹಸ್ರ ಜನಸಂಖ್ಯೆಯಲ್ಲಿ ಜನನ ಪ್ರಮಾಣವನ್ನು 41ರಿಂದ 25ಕ್ಕೆ ಇಳಿಸುವುದೇ ನಮ್ಮ ಪ್ರಧಾನ ಗುರಿ. ಈ ಗುರಿ ಸಾಧ್ಯವಾದಾಗ ವಿವಿಧ ಬಿಕ್ಕಟ್ಟುಗಳು ಸುಖಾಂತ್ಯವಾಗುತ್ತವೆ. ದೇಶವು ಅಭಿವೃದ್ಧಿ ಸಾಧಿಸುತ್ತದೆ.

ದೇಶದಲ್ಲಿ ಜನನ ಪ್ರಮಾಣವನ್ನು ಕಡಿಮೆ ಮಾಡುವ ಕ್ರಮದಲ್ಲಿ ಅನೇಕ ತೊಡಕುಗಳಿವೆ. ಅಂಥ ಅಂತರಗಳ ಬಗ್ಗೆ ಸಾಧನೆ ಮಾತ್ರವಲ್ಲ, ಕುಟುಂಬ ಯೋಜನೆಯ ಬಗ್ಗೆ ಮೂಡುವ ಜನಾಂಗದ ನಿಡಿದೆಲೆಯ ಕೆಳ್ಳಿಲ್ಲಿ ಫಲಿಮೆಯ ಪ್ರಿ ಪರಿವರ್ತನೆಯನ್ನು ಸಾಧಿಸುವುದೇ ಕುಟುಂಬ ಯೋಜನಾ ವ್ಯವಸ್ಥೆಯ ಮಹತ್ಕಾರ್ಯವಾಗಿದೆ. ಈ ದಿಶೆಯಲ್ಲಿ ಪಾಲಕರ ಹೊಣೆ ಹೆಚ್ಚಿನದು. ಅವರು ತಮ್ಮ ಹೊಣೆಗಾರಿಕೆಯನ್ನು, ಇತಿ ಮಿತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಕ್ಕಳ ಸಂಖ್ಯೆಯನ್ನು ನಿರ್ಧರಿಸಿಕೊಳ್ಳಬೇಕು.

ವ್ಯಕ್ತಿಗಳಿಗೆ ಬದಲಾವಣೆ ಅಗತ್ಯವಾದಾಗ, ಅದು ಅವರ ಹಿತದೃಷ್ಟಿಯಿಂದ ಅವಶ್ಯ ಎಂದು ಕಂಡು ಬಂದಾಗ ಬದಲಾವಣೆಗೆ ಅವರು ಒಪ್ಪುತ್ತಾರೆ ಎಂಬ ಒಂದು ಮೂಲಭೂತ ನಂಬಿಕೆಯ ಮೇಲೆ ಕುಟುಂಬ ಯೋಜನಾ ಕಾರ್ಯಕ್ರಮ ಆಧಾರಿತವಾಗಿದೆ. ಇಂತಹ ಬದಲಾವಣೆ ಸಾಮೂಹಿಕವಾಗಿ ಅಪೇಕ್ಷಣೀಯ ವ್ಯಕ್ತಿಗಳ ಅಥವಾ ಅವರ ಪ್ರತಿನಿಧಿಗಳು ಯೋಜನೆಯ ಭಾಗವಾಗಿದ್ದರೆ ಇಂತಹ ಬದಲಾವಣೆ ಸುಲಭ.

ಕುಟುಂಬ ಯೋಜನಾ ಸಂಸ್ಥೆಯ ಕಾರ್ಯಮಾನವೀಯತೆಯ, ಕರ್ತವ್ಯ ಪ್ರಧಾನವಾದ ಒಂದು ಪವಿತ್ರ ಕಾರ್ಯ. ಈ ಸಂಸ್ಥೆಯ ಸಂದೇಶ ದೇಶದ ಒಂಭತ್ತು ಕೋಟಿ ದಂಪತಿಗಳನ್ನು ತಲುಪಬೇಕಾಗಿದೆ. ಸಂದೇಶ ಅವರನ್ನು ತಲುಪುವಲು ಪ್ರತಿಯೊಂದು ಹಂತದಲ್ಲೂ, ಕುಟುಂಬ ಯೋಜನಾ ಸಿಬ್ಬಂದಿ ಮತ್ತು ಸಮಾಜಗಳ ನಡುವೆ ಸಂಪರ್ಕ ಕಲ್ಪಿತವಾಗಬೇಕು. ಈ ಒಂದು ಸೂತ್ರದಿಂದಲೇ ಸಂದೇಶ ಜನತೆಯನ್ನು ತಲುಪಬೇಕು. ಜನತೆಯ ಪ್ರತಿಕ್ರಿಯೆ ಸಂಸ್ಥೆಗೆ ಮುಟ್ಟಬೇಕು.

ತರಬೇತಾದ ಸಿಬ್ಬಂದಿಯ ಕೊರತೆ, ಕುಟುಂಬ ಯೋಜನಾ ಸಂಸ್ಥೆಯು ಎದುರಿಸುತ್ತಿರುವ ಒಂದು ಸಮಸ್ಯೆ. ಸಂತಾನ ನಿರೋಧಕ ಉಪಕರಣಗಳನ್ನು ಕುಟುಂಬ ಯೋಜನಾ ಕೇಂದ್ರಗಳಿಗೆ ಸಕಾಲದಲ್ಲಿ ತಲುಪಿಸುವುದು ಇನ್ನೊಂದು ಸಮಸ್ಯೆ. ಸುಧೈವ ವಶಾಕ್ ವಂಕಿ (ಲೂಪ್), ಸಂತಾನ ನಿರೋಧಕ ಉಪಕರಣಗಳ ವಿಷಯದಲ್ಲಿ ದೇಶ ಸ್ವಾವಲಂಬಿಯಾಗಿದೆ. ವಂಕಿಗಳನ್ನು ತಯಾರಿಸುವ ಕಾರ್ಖಾನೆ ಕಾನ್ಪುರದಲ್ಲಿದೆ ಈ ಕಾರ್ಖಾನೆಯು ದೇಶಕ್ಕೆ ಬೇಕಾದ ಕುಟುಂಬ ಯೋಜನಾ ಸಾಧನಗಳನ್ನು ತಯಾರಿಸುತ್ತಿದೆ. ಆಲ್ಲದೆ ಈ ಉಪಕರಣಗಳನ್ನು ರಫ್ತು ಮಾಡುವ ಸ್ಥಿತಿಯಲ್ಲಿಯೂ ಇದೆ.



—ಡಾ। ದೀಪಕ್ ಭಾಟಿಯ
ಕುಟುಂಬ ಯೋಜನಾ ಕಮಿಷನರ್

ನಿರೋಧ ಸಾಧನದ ಕೊರತೆ ಮಾತ್ರ ಇದ್ದು, ಜಪಾನಿನಿಂದ ಆಮದುಗಳನ್ನು ತರಿಸಲಾಗುತ್ತಿದೆ 1965ರ ಜೂನ್ತಿಂಗಳಿಗೆ ತಿರುವನಂತಪುರದಲ್ಲಿರುವ ಸರ್ಕಾರಿ ಹಿಂದುಸ್ತಾನ್ ಲೆಟೆಕ್ಸ್ ಲಿಮಿಟೆಡ್, ಈ ಸಾಧನಗಳ ಉತ್ಪಾದನೆಯನ್ನು ಆರಂಭಿಸಲಿದೆ.

ತರಬೇತಿ ಹೊಂದಿದ ಸಿಬ್ಬಂದಿಯ ಕೊರತೆಯೇ ಅಲ್ಲದೆ, ಕುಟುಂಬ ಯೋಜನಾ ಸಂಸ್ಥೆಯು ಸಾಮೂಹಿಕ ಶಿಕ್ಷಣ ರೂಪಗಳ ವಿವರಣಾ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿದೆ ಇದು ಹೇಳುವಷ್ಟು ಸುಲಭವಲ್ಲ. ದೇಶದ ಜನಸಂಖ್ಯೆಯ ಶೇಕಡ 20ರಷ್ಟು ಮಾತ್ರ, ಸಾಮೂಹಿಕ ಸಂಪರ್ಕ ಮಾಧ್ಯಮಗಳ ಜೊತೆಗೆ ಒಳ್ಳೆಯ ಪಟ್ಟಿದ್ದಾರೆ ದೇಶದ ಹದಿನಾಲ್ಕು ಪ್ರಮುಖ ಭಾಷೆಗಳಲ್ಲಿ ಜಾವು ಪ್ರಚಾರ ಕೈಗೊಳ್ಳಬೇಕಾಗಿದೆ ಇದಕ್ಕಿಂದು ಗಮನಾರ್ಹವಾದ ಕಾರ್ಯ ಈ ದಿಶೆಯಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

27 ಲಕ್ಷ ಜನ ಸಂತಾನ ಹರಣ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಸರಿಸುಮಾರು 19 ಲಕ್ಷ ಮಂದಿ ಮಹಿಳೆಯರು ವಂಕಿಗಳನ್ನು ಧಾರಣಮಾಡಿ ಕೊಂಡಿದ್ದಾರೆ. ಗುರಿ ಸಾಧನೆಯ ದಿಸೆಯಲ್ಲಿ ಇದು ಆಶಾದಾಯಕ ಆರಂಭ.

ಕುಟುಂಬ ಯೋಜನೆಗೆ ಇದುಸಕಾಲ

ನಮ್ಮ ದೇಶದ ಜನಸಂಖ್ಯೆ ಈಗ 51 ಕೋಟಿಯಷ್ಟಿದೆ. ಇನ್ನು 27 ವರ್ಷಗಳಲ್ಲಿ ಅದು 100 ಕೋಟಿಯಷ್ಟಾಗುವುದು. ಜನಸಂಖ್ಯೆಯ ಹೆಚ್ಚಳವನ್ನು ಸಕಾಲದಲ್ಲಿ ನಿಯಂತ್ರಿಸದಿದ್ದರೆ, ಭಾವೀ ಜನಾಂಗ ಘೋರ ದುಃಖದಿಂದ ಉಪವಾಸದಿಂದ, ನರಳಬೇಕಾಗುತ್ತದೆ.

ಭಾರತದಲ್ಲಿ ಇಂದು ದಿನಂಪ್ರತಿ 55,000 ಮಕ್ಕಳು ಜನಿಸುತ್ತಿವೆ. ಈ ಪ್ರಕಾರ ನಮ್ಮ ದೇಶದ ಜನಸಂಖ್ಯೆ ಪ್ರತಿವರ್ಷ 130 ಲಕ್ಷಗಳಷ್ಟು ಹೆಚ್ಚುತ್ತಿದೆ. ಈ ಸಮಸ್ಯೆ ನವ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಎಂಬುದೇ ಒಂದು ಪ್ರಧಾನ ಅಂಶ.

ನಮ್ಮ ದೇಶದ ಜನಸಂಖ್ಯೆ 51.5 ಕೋಟಿಯಷ್ಟಾಗಲು ಸಹಸ್ರಾರು ವರ್ಷಗಳು ಹಿಡಿದವು ಏನೆಂದರೆ ವರ್ಷಗಳ ಹಿಂದಿನ ಮಾತು. ಜನನ ಪ್ರಮಾಣ ಪ್ರತಿ ಒಂದು ಸಹಸ್ರ ಜನ ಸಂಖ್ಯೆಗೆ 49ರಷ್ಟಿತ್ತು. ಮರಣ ಪ್ರಮಾಣ 18ರಷ್ಟಿತ್ತು. ಜನಸಂಖ್ಯೆಯಲ್ಲಾದ ನಿವ್ವಳ ಹೆಚ್ಚಳ ಒಂದು ವರ್ಷಕ್ಕೆ ಒಂದು ಸಾವಿರ ಜನಸಂಖ್ಯೆಗೆ 16ರಷ್ಟು ಮಾತ್ರ ಇದ್ದಿತು. ಇಂದು ಜನನ ಪ್ರಮಾಣ ಒಂದು ಸಾವಿರ ಜನಸಂಖ್ಯೆಗೆ 41 ರಷ್ಟಿದೆ. ಆರೋಗ್ಯ ಸುಧಾರಣೆಯಿಂದಾಗಿ ಮರಣ ಪ್ರಮಾಣ ಒಂದು ಸಾವಿರಕ್ಕೆ 16ರಷ್ಟಿದೆ.

ಜನಸಂಖ್ಯೆ ಹೆಚ್ಚುವಂತೆಲ್ಲ ನಮ್ಮ ಆರ್ಥಿಕ ಸಾಮಾಜಿಕ ಸ್ಥಿತಿ ಹದಗೆಡುತ್ತದೆ. ನಮ್ಮ ರಾಷ್ಟ್ರೀಯ ಅಭಿವೃದ್ಧಿ ಸಾಧನೆ ವ್ಯರ್ಥವಾಗುತ್ತದೆ. ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರ ಮಾತಿನಲ್ಲಿ ಹೇಳುವುದಾದರೆ, ಈ ಸಮಸ್ಯೆ ಸತತವಾಗಿ ಪ್ರಗತಿಪರವಾದ ಹಾಗಳಿಯಿರುವ ಪ್ರದೇಶದಲ್ಲಿ ನಿಂತುಬಿಟ್ಟಂತೆ.

ಹೆಚ್ಚುತ್ತಿರುವ ಜನಸಂಖ್ಯೆಗೆ ಉದ್ಯೋಗ ಸೌಕರ್ಯಗಳನ್ನು ಒದಗಿಸಲು ಅವರ ಜೀವನವನ್ನು ಸುಧಾರಿಸಲು ಯತ್ನಗಳು ನಡೆದೇ ಇವೆ. ಮೂರನೆಯ ಯೋಜನೆಯಲ್ಲಿ 3.1 ಕೋಟಿಯಷ್ಟು ಹೆಚ್ಚು ಉದ್ಯೋಗ ಸೌಕರ್ಯಗಳನ್ನು ಸೃಷ್ಟಿಸಬೇಯತ್ತು. ಆದಾಗ್ಯೂ ನಿರುದ್ಯೋಗಿಗಳ ಸಂಖ್ಯೆ 1 ಕೋಟಿಯಷ್ಟಾಗಿದೆ.

ದೇಶದ ಜನ ಸಂಖ್ಯೆ ಪ್ರತಿವರ್ಷ 1 ಕೋಟಿ 30 ಲಕ್ಷದಷ್ಟು ಹೆಚ್ಚುತ್ತಿದೆ. ಜನಸಂಖ್ಯೆ ಹೆಚ್ಚಿನಂತೆ ಧಾನ್ಯ ಆಹಾರ ಧಾನ್ಯ; 1880 ಕೋಟಿ ವಿಷಿಟರ್‌ಗಳಷ್ಟು ಬಟ್ಟೆ; 25ಲಕ್ಷ ಮನೆಗಳು, 40 ಲಕ್ಷದಷ್ಟು ಹೆಚ್ಚು ಉದ್ಯೋಗ ಸೌಕರ್ಯಗಳು ಬೇಕಾಗುತ್ತವೆ. ಜನ ಸಂಖ್ಯೆ ಮತ್ತು ಅವಶ್ಯಕತೆಗಳ ಪ್ರಮಾಣದಲ್ಲಿನ ಅಂತರವನ್ನು ವಿವರಿಸಬೇಕಾದರೆ, ಜನನ ಪ್ರಮಾಣ ಪ್ರತಿ ಒಂದು ಸಹಸ್ರಕ್ಕೆ 25 ರಷ್ಟಿರಬೇಕು.

ದೇಶದಲ್ಲಿ ಈದ ಸಂತಾನ ಶಕ್ತಿಯುಳ್ಳ 90ಲಕ್ಷ ಮಂದಿ ದಂಪತಿಗಳಿದ್ದಾರೆ ಇವರೆಲ್ಲರೂ ಸಣ್ಣ ಕುಟುಂಬದ ಆದರ್ಶವುಳ್ಳವರಾಗಬೇಕು. ಕೊನೆಯ ಪಕ್ಷ ಇವರಲ್ಲಿ ಅರ್ಧದಷ್ಟು ಜನರಾದರೂ ಕುಟುಂಬ ಯೋಜನಾ ವಿಧಾನಗಳನ್ನು ಅನುಸರಿಸಬೇಕು. 90 ಲಕ್ಷದಂಪತಿಗಳು ತಮಗೆ

(ಪೃಷ್ಠನೇ ಪುಟ ನೋಡಿರಿ)

ವಿಶೇಷ ಲೇಖನ

ಕುಟುಂಬ ಯೋಜನೆಯ ದ್ವಿಸಪ್ತಾಹ
1967 ದಶಂಬರ 16ರಿಂದ 31

ಭಾರತ ಜಯಿಸಬೇಕಾದ ಸವಾಲು

ಲೇಖಕರು:
ಶ್ರೀ ಜಯಪ್ರಕಾಶ ನಾರಾಯಣ

(ಈ ಲೇಖನದಲ್ಲಿ ಸರ್ವೋದಯ ನಾಯಕರಾದ ಶ್ರೀ ಜಯಪ್ರಕಾಶ ನಾರಾಯಣರು ಜನಸಂಖ್ಯಾ ಅಸ್ಫೋಟನೆಗೆ ವಿರುದ್ಧ ದೇಶಕ್ಕೆ ಎಚ್ಚರಿಕೆ ನೀಡಿದ್ದಾರೆ. ವಿದೇಶಿ ದಂಡಯಾತ್ರೆಗಿಂತಲೂ ಉಗ್ರವಾದ ಈ ವಿಪತ್ತಿನಿಂದ ಪಾರಾಗುವಂತೆ ಎಲ್ಲರಿಗೂ ಕಳಕಳಿಯಿಂದ ಪ್ರಾರ್ಥಿಸಿದ್ದಾರೆ. ಈ ಲೇಖನವನ್ನು ಅವರ ಇತ್ತೀಚಿನ ಭಾಷಣದಿಂದ ರೂಪಿಸಲಾಗಿದ.)

ನಮ್ಮ ದೇಶ ಎದುರಿಸುತ್ತಿರುವ ಜನಸಂಖ್ಯಾ ಸ್ಫೋಟದ ಬಗ್ಗೆ ನನಗೆ ತೀವ್ರ ಕಳವಳವಾಗಿದೆ. ನಮ್ಮ ಜನಸಂಖ್ಯೆ ಈಗಾಗಲೇ 50 ಕೋಟಿ ಮೀರಿದೆ. ನಮ್ಮ ಮೊಜಿ ರಾಷ್ಟ್ರಾಧ್ಯಕ್ಷ ಡಾ॥ ಎಸ್. ರಾಧಾಕೃಷ್ಣನ್ ವರ್ಣಿಸಿರುವಂತೆ, "ಈ ಜನಸ್ಫೋಟಹೆಯ ಅಪಾಯ ಸಂಕೇತವನ್ನು ಕಡೆಗಣಿಸಿದರೆ ಸರ್ವನಾಶ ಅನಿವಾರ್ಯವಾಗುತ್ತದೆ."

ಮರಳಿನ ಮನೆ

ನಮ್ಮ ಪ್ರಧಾನಿ ಹೇಳಿರುವಂತೆ, ಈ ಭೀಕರ ಜನಸಂಖ್ಯಾ ಬೆಳವಣಿಗೆಯ ವಿರುದ್ಧ ಯೋಜನೆಗಳನ್ನು ರೂಪಿಸುವುದೆಂದರೆ, ಸ್ವಲಾಹದಿಂದ ನಿರಂತರ ಕೊಚ್ಚಿ ಹೋಗುತ್ತಿರುವ ಭೂಮಿಯ ಮೇಲೆ ಮನೆಕಟ್ಟಲು ಆರಂಭಿಸಿದಂತಾಗುತ್ತದೆ. ಈ ರೀತಿ ಯೋಜನೆ ರೂಪಿಸಲು ಯತ್ನಿಸುವುದು ಮರಳಿನ ಮೇಲೆ ರಚಿಸಿದಂತೆಯೆ! ಯೋಜನೆ, ಕೈಗಾರಿಕ ಹಾಗೂ ಕೃಷಿರಂಗದಲ್ಲಿ ಸಾಧಿಸಿದ ಪ್ರಗತಿ, ಫಲಗಳು ಜನಸಂಖ್ಯಾ ವೈಪುಲ್ಯದಿಂದ ಕಮರಿ ಹೋಗುತ್ತವೆ; ಶಪ್ಪಂತಾಮವಾಗಿ ಜನತೆಯ ಜೀವನ ಮಟ್ಟದಲ್ಲಿ ಸ್ವಲ್ಪವೂ ಏರಿಕೆಯಾಗಿಲ್ಲ. ನಮ್ಮ ದೇಶದಲ್ಲಿರುವ ಸಾಮಾಜಿಕ ಮಟ್ಟದಲ್ಲಿ ಕೆಳಗಿರುವವರ ಜೀವನ ಮಟ್ಟ ಅಧೋಗತಿಯಾಗುತ್ತಿದೆಯೆಂದು ನನ್ನ ಆಂಜಿಕೆ.

ಅನೇಕ ಅಂಶಗಳಲ್ಲಿ ಈ ಸಮಸ್ಯೆಯು ಇತರ ಸಮಸ್ಯೆಗಳಿಗಿಂತ ವಿಪತ್ತು, ಅಪಾಯಗಳಿಂತ ವಿಷಮವಾದುದು. ವಿದೇಶಿ ದಂಡಯಾತ್ರೆಗಿಂತಲೂ ಭೀಕರವಾದುದು. ವಿದೇಶಿ ದಂಡಯಾತ್ರೆ ಸಂಭವಿಸಿದಾಗ ದೇಶದ ಜನರ ಭಿನ್ನಾಭಿಪ್ರಾಯ ಅಳಿದು ದೇಶ ಸಂರಕ್ಷಿಸಲು ನವಸ್ಫೂರ್ತಿ, ವೀರಾವೇಶ, ನಿರ್ಧಾರಗಳು ಹೊಮ್ಮುತ್ತವೆ. ಆದರೆ ವೇಗದಿಂದ ಬೆಳೆಯುತ್ತಿರುವ ಜನಸಂಖ್ಯೆಯ ಮಹಾ ವಿಪತ್ತು ಯಾರಿಗೂ ಗೋಚರಿಸದೆ ಮುನ್ನುಗ್ಗಿ ಹೋಗುತ್ತಿರುವುದು ಆಶ್ಚರ್ಯಕರ ದುರದೃಷ್ಟದ ಸಂಗತಿಯೂ ಆಗಿದೆ.

ದಂಡಯಾತ್ರೆಗಿಂತ ಭೀಕರ

ಅಧಿಕ ಸಂಖ್ಯೆಯ ಮಕ್ಕಳಿರುವ ಕುಟುಂಬ ಆರ್ಥಿಕವಾಗಿ ದಿವಾಳಿಯಾಗಿ ಅಂಚಿಕರವಾಗಿ ಕರುಣಾರ್ಹ ಸ್ಥಿತಿಯಲ್ಲಿದ್ದರೆಂಬ ಜನತೆ ಅವರ ಸಂರಕ್ಷಣೆಗೆ ಹೋಗುವುದಿಲ್ಲ. ವಿದೇಶಿ ದಂಡಯಾತ್ರೆ ಹುಟ್ಟಿಸುವಂತೆ ಈ ಪರಿಸ್ಥಿತಿ ಸಹಾನುಭೂತಿ ಹುಟ್ಟಿಸುತ್ತಿಲ್ಲ. ಜನಸಂಖ್ಯೆಯ ನಿಯಂತ್ರಣವಾಗದಿದ್ದರೆ ಇನ್ನು ಕಲವೇ ವರ್ಷದಲ್ಲಿ ನಮ್ಮ ಪರಿಸ್ಥಿತಿ ಭಗವಂತನ ರಕ್ಷಣೆಗು ಕೈಪೆಗೆ ಅಧೀನವಾಗುತ್ತದೆ. ಒಂದು ನೂರು ಕೋಟಿ ಪ್ರಜಾಸಂಖ್ಯೆಯ ಚಿತ್ರವನ್ನು ಕಲ್ಪಿಸಿಕೊಳ್ಳಿ!

ಭಗವಂತನ ನಂಬಿಕೆಯಿರುವ ಪ್ರಜೆಗಳಿದ್ದಾರೆ. ನುನುಜನನ್ನು ಸೃಷ್ಟಿ ಮಾಡಿದ ದೇವರೇ ಕಾಪಾಡುವನೆಂದು, ಆಹಾರ ನೀಡುವನೆಂದು ಅಂಕಹವರು ಹೇಳುತ್ತಾರೆ. ಆದರೆ ಭಗವಂತ ಆ ರೀತಿ ಮೂಡುತ್ತಿರುವಂತೆ ತೋರುತ್ತಿಲ್ಲ. ಜೀವರನ್ನು ನಂಬಿರುವವರು, ಭಗವಂತ ನೀಡಿರುವ ಬುದ್ಧಿವಂತಿಕೆಯನ್ನು ಬಳಸಿಕೊಳ್ಳುತ್ತಿಲ್ಲನೆಂದು ನನ್ನ ನಂಬಿಕೆ.

ನೈತಿಕ, ಆಧ್ಯಾತ್ಮಿಕ ಹಾಗೂ ಧಾರ್ಮಿಕ ಕಾರಣಗಳಿಗಾಗಿ ಸರ್ಕಾರದ ಕುಟುಂಬ ಯೋಜನಾ ಕಾರ್ಯಕ್ರಮವನ್ನು ವಿರೋಧಿಸುತ್ತಿರುವವರು ಜಾಗ್ರತರಾಗಬೇಕು. ಅದೃಷ್ಟವಶದಿಂದ, ನನ್ನ ಅನುಭವದಲ್ಲಿ ಅಗಾಧ ಸಂಖ್ಯೆಯ ಜನರು ಧರ್ಮ, ಭಾಷೆ, ಸಂಗಡಗಳ ಭೇದವಿಲ್ಲದೆ ಸರ್ಕಾರದ ಕುಟುಂಬ ಯೋಜನಾ ಕಾರ್ಯಕ್ರಮವನ್ನು ವಿರೋಧಿಸಿರುವುದು ಕಂಡು ಬಂದಿಲ್ಲ. ಬಿಹಾರ ರಾಜ್ಯ ಕ್ಷಾಮದ ದವಡೆಯಲ್ಲಿ ಸಿಲುಕಿದ್ದಾಗ, ಈಶಾನ್ಯ ರೈಲ್ವೆ ವಲಯ ಅತ್ಯಂತ ಹಿಂದುಳಿದ ಪ್ರದೇಶದಲ್ಲಿ ಏರ್ಪಡಿಸಿದ್ದ ವೈದ್ಯ ಪರಿಹಾರ ಕೇಂದ್ರಕ್ಕೆ ಬಹುದೂರದಿಂದ ನಡೆದು ಬಂದ ಮಹಿಳೆಯರು ಮಕ್ಕಳು ಹುಟ್ಟುವುದನ್ನು ತಪ್ಪಿಸುವ ಮಾರ್ಗವಿದೆಯೇ ಎಂದು ವಿಚಾರಿಸುತ್ತಿದ್ದರು.

ಮಹಿಳೆಯರ ಬವಣೆ

ಸಂಸ್ಕೃತ ಸೂಕ್ತಿಯೊಂದರ ಪ್ರಕಾರ, ಮಹಿಳೆಯರನ್ನು ಪೂಜಿಸುವ ದೇಶದಲ್ಲಿ ಭಗವಂತ ನೆಲೆಸಿರುತ್ತಾನೆ. ಆದರೆ ನಮ್ಮ ದೇಶದ ಮಹಿಳೆಯರ ಸ್ಥಿತಿ ನಮಗೆ ತಿಳಿದಿದೆ ನಮ್ಮ ಮಹಿಳೆಯರು ತಾಯಿಯಾಗಿ, ಮಡದಿಯಾಗಿ, ಅಡಿಗೆಯವಳಾಗಿ, ಬಟ್ಟೆ ಒಗೆಯುವವಳಾಗಿ, ಕಸ ಗುಡಿಸುವವಳಾಗಿ ಹಾಗೂ ಸೇವಕಿಯಾಗಿ ದುಡಿಯುತ್ತಾರೆ. ಪುರುಷರು ಮಹಿಳೆಯರ ಸಹಾಯಕ್ಕೆ ಬರುವುದಿಲ್ಲ. ಬೇಡದಿದ್ದರೂ ನಿರಂತರವಾಗಿ ಮಕ್ಕಳನ್ನು ಸೃಷ್ಟಿಸುತ್ತಿರುತ್ತಾರೆ, ರೋಗಪೀಡಿತರಾದ ಮಡದಿಯರಿಗೆ ಆಸಹನೀಯ ಹೊರೆಯನ್ನು ಹೊರಿಸುತ್ತಾರೆ.

ಸಂತಾನ ನಿಯಂತ್ರಣ ಭಾರತ್ರೀಮಹಿಳೆಯರಿಗೆ ನವಯುಗದ ನಾಂದಿಯಾಗುವುದೆಂದು ನರ್ಣಿಸಲಾಗಿದೆ. ಇವರಲ್ಲಿ ನನಗೆ ನಂಬಿಕೆಯಿದೆ. ಕುಟುಂಬ, ಪ್ರೇಮ, ಮಡದಿ, ತಾಯ್ತನಗಳ ದಾಸ್ಯ ಶೃಂಕಲೆಯಲ್ಲಿ ಮಹಿಳೆ ತೊಳಲಾಡುವ ಬದಲು ಉತ್ತಮ ಆರೋಗ್ಯ, ಆತ್ಮ ಗೌರವ ಹಾಗೂ ವಿಶ್ರಾಂತಿಯನ್ನು ಅನುಭವಿಸಬಹುದು. ಆದ್ದರಿಂದ ನಾನು ಕುಟುಂಬ ಯೋಜನಾ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

ವಿಶೇಷ ಲೇಖನ

ಕುಟುಂಬ ಯೋಜನಾ ದ್ವಿಸಪ್ತಾಹ
ದಶಂಬರ 16ರಿಂದ 31

ಮಿತ ಕುಟುಂಬದ ಆದರ್ಶ

ಸ್ವತಂತ್ರ ಭಾರತದ ಎರಡು ದಶಕಗಳ ಬಾಳ್ವೆಯಲ್ಲಿ ಪ್ರಗತಿಯೇ ತಾರತಮ್ಯವಾಗಿದೆ ಆರ್ಥಿಕ ಪ್ರಗತಿ ವರ್ಷಂಪ್ರತಿ ಶೇಕಡ 3.8 ವೃದ್ಧಿಸಿದೆ. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಆರ್ಥಿಕ ಪ್ರಗತಿ ಶೇಕಡ ಒಂದಕ್ಕಿಂತಲೂ ಕಡಿಮೆಯಾಗಿದ್ದಿತು.

ಕೈಗಾರಿಕಾ ಉತ್ಪಾದನೆ ಶೇಕಡ 130 ರಷ್ಟು ಏರಿದೆ. ಆಹಾರ ಉತ್ಪಾದನೆ ಶೇಕಡ 61·8 ಹೆಚ್ಚಿದೆ. ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಂಖ್ಯೆ 7 ಕೋಟಿ 20 ಲಕ್ಷಕ್ಕೇರಿ, ಮೂರು ಪಟ್ಟು ವೃದ್ಧಿಸಿದೆ ಈಗ ಹೆದಿನೈದು ವರ್ಷದ ಹಿಂದೆ 10 ಮಕ್ಕಳಲ್ಲಿ ನಾಲ್ವರು. ಶಾಲೆಗೆ ಹೋಗುತ್ತಿದ್ದರೆ ಇಂದು 6—11 ವಯೋಮಿತಿಯ ಪ್ರತಿರುವ ಪ್ರತಿ ಹತ್ತು ಮಕ್ಕಳಿಗೆ 8 ಮಂದಿ ಶಾಲೆಗೆ ಹೋಗುತ್ತಿದ್ದಾರೆ.

ಸಾರ್ವಜನಿಕ ಆರೋಗ್ಯ ಸೌಲಭ್ಯ ಹೆಚ್ಚಿದೆ. ಇಂದು ಎರಡುಪಟ್ಟು ಹೆಚ್ಚಾಗಿ ಆಸ್ಪತ್ರೆ, ವೈದ್ಯ ಶಾಲೆಗಳಿವೆ. ಆಸ್ಪತ್ರೆ ಹಾಸಿಗೆಗಳ ಸಂಖ್ಯೆ ವಾರುಪಟ್ಟು ಹೆಚ್ಚಾಗಿದೆ. ವೈದ್ಯರ ಸಂಖ್ಯೆ ದ್ವಿಗುಣ ಹೊಂದಿದೆ. ದಾದಿಯರ ಸಂಖ್ಯೆ ಆರುಪಟ್ಟು ಹೆಚ್ಚಾಗಿದೆ. ಪ್ರಮುಖ ಸಾಂಕ್ರಾಮಿಕ ರೋಗಗಳು ನಿರ್ಮೂಲವಾಗಿವೆ ಅಥವಾ ನಿಯಂತ್ರಣಗೊಂಡಿದೆ.

ಪ್ರಗತಿಯ ಫಲ

ಈ ಪ್ರಗತಿಯ ಫಲವಾಗಿ ಮರಣ ಸಂಖ್ಯೆ ಪ್ರತಿ ಸಹಸ್ರಕ್ಕೆ 27ರಿಂದ 16ಕ್ಕೆ ಇಳಿದಿದೆ. ಬಾಲ್ಯ ಮರಣದ ಪ್ರಮಾಣ 183 ರಿಂದ 109ಕ್ಕೆ ಇಳಿದಿದೆ. ಜೀವ ವಯೋಮಿತಿಯು 27 ವರ್ಷದಿಂದ 52 ವರ್ಷಕ್ಕೇರಿದೆ.

ಇಷ್ಟೊಂದು ಪ್ರಗತಿ ಸಾಧಿಸಿದರೂ ಪ್ರತಿಯೊಬ್ಬರೂ ಸೇವಿಸುವ ಆಹಾರ ಪ್ರಮಾಣ 12.8 ಔನ್ಸ್‌ನಿಂದ 12.4 ಔನ್ಸ್‌ಗೆ ಇಳಿದಿದೆ. 6—11 ವಯೋಮಿತಿಯ 6 ಕೋಟಿ 38 ಲಕ್ಷ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ ಒಂದು ಕೋಟಿ ನಿರುದ್ಯೋಗಿ ಯುವಕರಿದ್ದಾರೆ.

ನಾವು ಪ್ರಗತಿಯ ಫಲಗಳನ್ನು ಅನುಭವಿಸಲಾಗಿಲ್ಲ. ಏಕೆಂದರೆ 1947ನೇ ವರ್ಷದಿಂದ ಜನಸಂಖ್ಯೆ ಶೇಕಡ 43 ಏರಿದೆ (35 ಕೋಟಿಯಿಂದ 50 ಕೋಟಿಗೆ ಏರಿದೆ) 1947ರಲ್ಲಿ ವಿಭಜನೆಯಾದ ನಂತರ ಉಳಿದ ಜನಸಂಖ್ಯೆಗಿಂತಲೂ ಹೆಚ್ಚು ಜನರಿದ್ದಾರೆ. ಪ್ರತಿದಿನವೂ 55,000 ಶಿಶು ಜನನವಾಗುತ್ತಿದ.

ರಾಷ್ಟ್ರೀಯ ದುರಂತ

ಪ್ರತಿ ವರ್ಷ 80 ಲಕ್ಷ ಜನರು ಮರಣ ಹೊಂದಿದರೂ 1 ಕೋಟಿ 30 ಲಕ್ಷ ಹೊಸ ಜೀವಗಳು ಹುಟ್ಟುತ್ತಿವೆ. ಈ ಅಭೂತಪೂರ್ವ ಜನಸಂಖ್ಯಾ ಬಾಹುಳ್ಯದಿಂದ 1,26,500 ಹೆಚ್ಚು ಶಾಲೆಗಳೂ, 3,72,000 ಶಿಕ್ಷಕರೂ, 2,509,000 ಸ್ಥಾನಗಳೂ, 1,87,774,600 ಮೀಟರ್ ವಸ್ತ್ರವೂ, 12,54,300 ಟ್ವಿಂಟಲ್ ಆಹಾರಧಾನ್ಯವೂ 4,330,000ಉದ್ಯೋಗಗಳೂ ಅವಶ್ಯಕವಾಗಿವೆ.

ಆದ್ದರಿಂದ ನಾವು ಪ್ರಗತಿಯ ವೇಗವನ್ನು ತ್ವರಿತಗೊಳಿಸಬೇಕು. ಎರಡು ದಶಕಗಳಲ್ಲಿ ಸಾಧಿಸಿದ ಪ್ರಗತಿಯನ್ನು ಪ್ರತಿ ತಿಂಗಳಿನಲ್ಲೂ ಸಾಧಿಸಬೇಕಾಗಿದೆ. ಇದು ಸಾಧಿಸಲು ಅಸಾಧ್ಯವಾದ ಆದರ್ಶ.

ಈ ವೇಗದಲ್ಲಿ ಜನಸಂಖ್ಯೆ ಬೆಳೆಯುತ್ತಿದ್ದರೆ ಪ್ರಗತಿಯು ಫಲ ನಿಷ್ಪ್ರಯೋಜಕವಾಗುತ್ತದೆ. 1976ನೇ ವರ್ಷದ ವೇಳೆಗೆ ಅಧಿಕ ಸಂಪನ್ಮೂಲ ಸಹಾಯಗಳಿದ್ದರೂ ಭೀಕರ ಕ್ಷಾಮ ಎದುರಿಸಬೇಕಾಗುತ್ತದೆ. ನಾವು ರಾಷ್ಟ್ರೀಯ ದುರಂತವನ್ನು ಎದುರಿಸಬೇಕಾಗಿದೆ.

ಆನುಚಿತ ಆದರ್ಶ ತ್ಯಜಿಸಿ, ಉಚಿತ ಆದರ್ಶ ಅನುಸರಿಸಬೇಕಾಗಿದೆ. ಸಂಕುಚಿತ ಉತ್ಪಾದನೆ ಹೆಚ್ಚಿಸಿ, ಶೀಘ್ರದಲ್ಲೇ ಜನನ ಪ್ರಮಾಣ ಕಡಿಮೆ ಇರುವಂತೆ ಮಾಡಿದರೆ ಮುಂದೆ ಬರುವ ವಿಪತ್ತನ್ನು ತಡೆಯಬಹುದು.

ಎರಡು ಅಥವಾ ಮೂರು

9 ಕೋಟಿ ದಂಪತಿಗಳು ಕುಟುಂಬ ಯೋಜನೆ ಅನುಸರಿಸಿ ಎರಡು ಅಥವಾ ಹೆಚ್ಚೆಂದರೆ ಮೂರು ಮಕ್ಕಳನ್ನು ಹೊಂದುವುದಾದರೆ ಜನನ ಪ್ರಮಾಣ ಕುಗ್ಗಿಸಬಹುದು. ಪ್ರತಿ ಸಹಸ್ರ ಜನಸಂಖ್ಯೆಗೆ 41 ಶಿಶುಗಳು ಹುಟ್ಟುವುದರಲ್ಲಿ 9 ಶಿಶುಗಳು ಮೊದಲ ಮಕ್ಕಳಾದರೆ, 8 ಶಿಶುಗಳು ದ್ವಿತೀ

ಕುಟುಂಬ ಯೋಜನೆಯ ಸಾಧನೆಗೆ ಶ್ರಮಿಸುತ್ತಿರುವ ಒಂದು ಅತ್ಯುತ್ತಮ ಸೇವಾ ಕೇಂದ್ರ

ಮುಂಬೈ ನಗರವು ವಲ್ಲಭಭಾಯಿ ಪಟೇಲ ಮಾರ್ಗದಲ್ಲಿ ಹಳೆಯ ಮುಂಬೈ ಶೈಲಿಯ ಸಾಲ್ಕಂತಸ್ತಿನ ಕಟ್ಟಡವೊಂದು ಕೆಂಪು ತ್ರಿಕೋಣದ ಲಾಂಛನೊಂದಿಗೆ ನಿಲ್ಲಿಯುತ್ತಿದೆ. ಕಟ್ಟಡದ ಫಲಕದ ಬರಹ ಇಂತಿದೆ: "ಭಾರತ ಸರಕಾರದ ಕುಟುಂಬ ಯೋಜನಾ ತರಬೇತಿ ಮತ್ತು ಸಂಶೋಧನ ಕೇಂದ್ರ".

ಅನೇಕ ವಿದದಲ್ಲಿ ಮುಂಬೈಯ ಈ ಕೇಂದ್ರವು ಅನುಪಮವೆನಿಸಿದೆ. ಕುಟುಂಬ ಯೋಜನೆಗೆ ಸಂಬಂಧಿಸಿದ ಎಲ್ಲ ಮುಖಗಳ ಬಗೆಗೆ ಅಭ್ಯಾಸ ಕೈಕೊಂಡ ದೇಶದ ಪ್ರಥಮ ಕೇಂದ್ರವೇ ಇದಾಗಿದೆ. ಇಂದು ಕುಟುಂಬ ಯೋಜನೆಯ ಇಂತಹ ಸಂಸ್ಥೆಗಳಲ್ಲಿ ಈ ಸಂಸ್ಥೆಯೇ ಅತಿ ಮುಖ್ಯವಾದದ್ದು ಎಂದು ಜೆನರು ಗಳಿಸಿದ ಈ ಸಂಸ್ಥೆಯು ಮಹಶ್ವ ಅದರ ಖ್ಯಾತಿ ಗಾತ್ರದಲ್ಲಿ ಅಡಗಿರದೆ, ಕುಟುಂಬ ಯೋಜನೆಯ ಸಾಧನೆಗೆ ಶ್ರಮಿಸುತ್ತಿರುವ ಇತರ ಸಂಘಸಂಸ್ಥೆಗಳಿಗೆ ಇದು ಕೆಲಸದ ಮಾದರಿಗಳನ್ನು ಪಾಕೆ ಕೊಡುವುದರಲ್ಲಿ ಅಡಗಿದೆ; ಕುಟುಂಬ ಯೋಜನಾ ಪ್ರಯೋಗ ಶಿಕ್ಷಣ ಸಂಸ್ಥೆ, ಉಪನ್ಯಾಸಕೊರಡಿ, ಸಭಾಂಗಣ, ಮಕ್ಕಳ ಚಿಕಿತ್ಸಾ ಕೇಂದ್ರ, ಗ್ರಂಥಾಲಯ, ಪ್ರದರ್ಶನ ವಂದಿರ, ಪ್ರತೀಕ್ಷಾಲಯ, ಪ್ರಯೋಗಶಾಲೆ ಮತ್ತು ವಸತಿಗೃಹ ಇವುಗಳನ್ನೊಳಗೊಂಡಿದೆ— ಈ ಕೇಂದ್ರ.

ವೈಶಿಷ್ಟ್ಯ

ಸೇವೆಗಳನ್ನು ಒದಗಿಸುವುದು, ತರಬೇತಿ ನೀಡುವದು ಮತ್ತು ಸಂಶೋಧನೆಗೆ ಅನುಕೂಲತೆಗಳನ್ನು ಮಾಡಿಕೊಡುವದು ಈ ಕೇಂದ್ರದ ಕೆಲಸ. ವದುವೆ ಮತ್ತು ತಾಯ್ತನದ ಅನಶ್ಯಕತೆಗಳಿಗೆ ಅನುಸರಿಸಿ ಕುಟುಂಬ ಯೋಜನೆಯ ವಿಷಯವನ್ನು ಇಲ್ಲಿ ಅಭ್ಯಾಸಿಸಲಾಗುತ್ತದೆ. ಆಜ್ಞಾನದಿಂದ ಉಂಟಾಗುವ ಗಂಭೀರ ಸಮಸ್ಯೆ ಬಗೆಗೂ ಇಲ್ಲಿ ಅಧ್ಯಯನ ಧೈರ್ಯಗೊಳ್ಳಲಾಗುವದು. ಕಡಿಮೆ ಸಂಸತ್ಪಾಧನೆಗಳುಳ್ಳ ಕುಟುಂಬಗಳು ಬಹು ಬೇಗ ಬಡಕಷ್ಟ ಮಕ್ಕಳನ್ನು ಪಡೆಯುವುದರಿಂದ ಖೇದನೆಯು ವಾತಾವರಣ ಹುಟ್ಟುವದು ಸಹಜ. ಪತಿ ಪತಿಯರ ಶಾರೀರಿಕ, ಮಾನಸಿಕ ಮತ್ತು ಭಾವನಾತ್ಮಕ ಅಸ್ಥಿರತೆಗಳಲ್ಲಿದ್ದರ ಬಗೆಗೆ 'ಕುಟುಂಬ ಯೋಜನೆಯ ಸೇವೆ' ಸಂಬಂಧಿಸಿದೆ.

ಜನಸಂಖ್ಯೆಯ ಪ್ರಶ್ನೆಯ ಗಂಭೀರ ಸ್ವರೂಪದ ಅರಿವು ದೇಶಕ್ಕೆ ಇದೀಗ ಬಂದಿಲ್ಲಿ ಆಗದೆ ಎಂದೇನೂ ಅಲ್ಲ ಈ ಮಹಾನ್ ಸಮಸ್ಯೆಯ ಪರಿಹಾರದತ್ತ ಸಿದ್ಧತೆಗಳನ್ನು ಇಲ್ಲಿ ಪ್ರಾರಂಭಿಸಲಾಯಿತು. ರಾಷ್ಟ್ರೀಯ ಯೋಜನೆಯಲ್ಲಿ ಅಸಾಧಾರೋಪ್ಪಾದನೆಯ ನಂತರ ಕುಟುಂಬ ಯೋಜನೆಗೇ ಪ್ರಾಧಾನ್ಯತೆ ಕೊಡಲಾಗಿದೆ. 1957 ಜೂನ್ ತಿಂಗಳಲ್ಲಿ ಮುಂಬೈಯಲ್ಲಿ ಸ್ಥಾಪಿತವಾದ ಈ ಕೇಂದ್ರವು ರಾಷ್ಟ್ರೀಯ ಮಹತ್ಕಾರ್ಯದ ಅದಿಕಾಯವನ್ನು ಕಟ್ಟುವಲ್ಲಿ ಇದು ಪರಿಗೆ ಶ್ರಮಿಸಿದೆ.

ಮುಖ್ಯ ಸೇವೆ

ಕೇಂದ್ರದಲ್ಲಿ ದೊರೆಯುವ ಸೇವೆಗಳನ್ನು ಪರಿಶೀಲಿಸೋಣ. 'ಅಂತರ್--ಸೇವೆ'ಯಿಂದ ಈ ಕೇಂದ್ರದ ಕಾರ್ಯ ಸ್ವಾರಂಭವಾಗುತ್ತದೆಂದು ಹೇಳಬಹುದು.

ಕುಟುಂಬ ಯೋಜನೆಯ ಸೇವೆಯನ್ನು ಬಯಸಿ ಬಂದ ಜನರನ್ನು ಇಲ್ಲಿ ಬರಮಾಡಿಕೊಂಡು ಅವರು ಸೇವೆಯನ್ನು ಪಡೆಯಲು ಅರ್ಹರೇ ಎಂದು ಈ ವಿಭಾಗದಲ್ಲಿ ನಿರ್ಧರಿಸಲಾಗುವದು.. ಸ್ತ್ರಿಯು ಹೊಂದಲ್ಲಿ ಕುಟುಂಬ ಯೋಜನೆಯ ತತ್ವವನ್ನು ಒಂದಮ ಆವಶ್ಯಕತೆಗಳಿಗೆ ಅನುಸಾರವಾಗಿ ಹೇಳಿ ಕೊಡಲಾಗುವದು. ಬಂದವರ ಅನುಕೂಲತೆಗಳನ್ನು ಪರಾನಲ್ಲಟ್ಟುಕೊಂಡು ನಿವಿಧ ಗರ್ಭನಿರೋಧಕ ಸಾಧನೆಗಳನ್ನು ಬಳಸಲು ಇಲ್ಲಿ ಸಲಹೆ ನೂಡಲಾಗುವದು. ಯಂಕಿ ಅಥವಾ ವೈದ್ಯಕೀಯ ಗರ್ಭ ನಿರೋಧಕ ವಸ್ತುಗಳನ್ನು ಸ್ವೀಕರಿಸಿದ ಎಲ್ಲ ಮಹಿಳೆಯರ ದೇಹಾರೋಗ್ಯವನ್ನು ಅದ್ಯಂತವಾಗಿ ಇಲ್ಲಿ ಪರೀಕ್ಷಿಸಲಾಗುವುದು.

ಕೇಂದ್ರದ ಇನ್ನೊಂದು ವಿಭಾಗ ಮಾಡುವೆ ವಿಷಯದಲ್ಲಿ ಮಾರ್ಗದರ್ಶನ ನೀಡುವದು. ಅಜೀ ಮದುವೆಯಾದ ಅಥವಾ ಮದುವೆಯಾಗಲಿರುವ ದಂಪತಿಗಳಿಗೆ ಸಲಹೆಗಳನ್ನು ಕೊಡಲಾಗುವದು.

ತರಬೇತಿ

ಅಧಿಕ ಸಂಖ್ಯೆಗಳಲ್ಲಿ ಈ ಕೇಂದ್ರವು ಡಾಕ್ಟರರನ್ನು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ತರಬೇತಿಗೊಳಿಸಿದೆ. ಅವರಿಗೆ ಗರ್ಭ ನಿರೋಧಕ ಸಾಧನೆಗಳ ತಾಂತ್ರಿಕ ಜ್ಞಾನವನ್ನು ಮಾಡಿ ಕೊಡಲಾಗಿದೆ ಸಾಮಾಜಿಕ ಕೆಲಸದ ರೀತಿ ನೀತಿಗಳನ್ನು ನಗರ ಮತ್ತು ಗ್ರಾಮಾಂತರ ಪ್ರದೇಶದ ಶಿಕ್ಷಣ ತಾಂತ್ರಿಕ ಸ್ವರೂಪವನ್ನೂ ಮತ್ತು ಕಡವಳಿಕೆಯ ರೂಪರೇಖೆಗಳನ್ನು ತರಬೇತಿಗೆಂದು ಬಂದ ಅಭ್ಯರ್ಥಿಗಳಿಗೆ ತಿಳಿ ಕೊಡಲಾಗವದು ಇಲ್ಲಿ ದಾದಿಯರಿಗೂ ಶಿಕ್ಷಣ ನೀಡಲಾಗುವದು. ಬೇರೆ ಬೇರೆ ರಾಜ್ಯಗಳಿಂದ ಬಂದ ಜಿಲ್ಲಾ ವಿಸ್ತರಣಾ ಶಿಕ್ಷಕರಿಗೆ ಇಲ್ಲಿ ತರಬೇತಿ ನೀಡುವ ವ್ಯವಸ್ಥೆಯನ್ನು 1960ರಿಂದ ಮಾಡಲಾಗಿದೆ. ತರಬೇತಿಯ ಕಾಲದಲ್ಲಿ ಕುಟುಂಬ ಯೋಜನೆಗೆ ಒಂದಿಲ್ಲೊಂದು ಮಾರ್ಗವನ್ನು ಅನುಸರಿಸಲು ಜನರ ಮನವೊಲಿಸುವ ತಂತ್ರದ ಬಗ್ಗೆ ವಿಶೇಷ ಪ್ರಾಧಾನ್ಯತೆ ನೀಡಲಾಗಿದೆ. ಜನಸಮುದಾಯದ ಸಭೆ, ವಿಚಾರ ಸಂಕಿರಣ ಮೊದಲಾದವುಗಳ ಬಗೆಗೂ ಇಲ್ಲಿ ತರಬೇತಿ ನೀಡಲಾಗುತ್ತದೆ.

ಕೇಂದ್ರದ ಇನ್ನೊಂದು ವಿಭಾಗ ಸಂಶೋಧನೆಯದು. ಈ ವಿಭಾಗದಲ್ಲಿ ಕುಟುಂಬ ಯೋಜನೆಯ ಸಾಧನೆಗಳ ಬಗೆಗೆ ಸಂಶೋಧನೆ ನಡೆಸಲಾಗುತ್ತದೆ. ಈ ಸಂಶೋಧನೆಯ ಫಲಿತಾಂಶಗಳನ್ನು ಇಲ್ಲಿ ಪ್ರಕಟಿಸಲಾಗುತ್ತದೆ. ಈ ಸಂಶೋಧನೆಯ ಫಲಿತಾಂಶಗಳನ್ನು ಇಲ್ಲಿ ಪ್ರಕಟಿಸಲಾಗುತ್ತದೆ. ಈ ಸಂಶೋಧನೆಯ ಫಲಿತಾಂಶಗಳನ್ನು ಇಲ್ಲಿ ಪ್ರಕಟಿಸಲಾಗುತ್ತದೆ.

ಕೇಂದ್ರದ ಇನ್ನೊಂದು ವಿಭಾಗ ಸಂಶೋಧನೆಯದು. ಈ ವಿಭಾಗದಲ್ಲಿ ಕುಟುಂಬ ಯೋಜನೆಯ ಸಾಧನೆಗಳ ಬಗೆಗೆ ಸಂಶೋಧನೆ ನಡೆಸಲಾಗುತ್ತದೆ. ಈ ಸಂಶೋಧನೆಯ ಫಲಿತಾಂಶಗಳನ್ನು ಇಲ್ಲಿ ಪ್ರಕಟಿಸಲಾಗುತ್ತದೆ.

ಯ, ಶೃತೀಯ ಮಕ್ಕಳಾಗಿರುತ್ತವೆ. ಇತರ 16 ಶಿಶುಗಳು ನಾಲ್ಕರಿಂದ ಹನ್ನೆರಡನೆಯ ಮಕ್ಕಳಾಗಬಹುದು.

ಪ್ರತಿ ಕುಟುಂಬವೂ 2 ಅಥವಾ 3 ಮಕ್ಕಳನ್ನು ಮಾತ್ರ ಹೊಂದಿದ್ದರೆ, ಜನನ ಪ್ರಮಾಣ ಶೇಕಡ 43ರಷ್ಟು ಕುಗ್ಗಿ, ವರ್ಷಂಪ್ರತಿ 40ಲಕ್ಷ ಶಿಶು ಜನನ ತಡೆಯಬಹುದು.

ನಿಧಾನವಾಗಿ ವಿವಾಹವಾಗುವುದರಿಂದ ಹಾಗೂ ಕುಟುಂಬ ನಿಯಂತ್ರಣ ಸಾಧನ ಬಳಕೆಯಿಂದ ವಿಸ್ತರ ಕುಟುಂಬ ಹೊಂದಿರಬಹುದು. ದಂಪತಿಗಳಿಗೆ ಈಗಾಗಲೇ ಮೂರು ಮಕ್ಕಳಿದ್ದರೆ ಗಂಡ—ಹೆಂಡತಿಯರಲ್ಲಿ ಯಾರೊಬ್ಬರಾದರೂ ಸಂತಾನಶಕ್ತಿಹರಣ ಶಸ್ತ್ರಕ್ರಿಯೆ ಮಾಡಿಸಿಕೊಳ್ಳಬಹುದು.

ನಿಮಗೆ ಸನಿಹದಲ್ಲಿರುವ ಕುಟುಂಬ ಯೋಜನಾ ಕೇಂದ್ರಕ್ಕೆ ಹೋದರೆ ತಜ್ಞ ಸೇವೆ, ಸಲಹೆಗಳನ್ನು ಪಡಯಬಹುದು. ನಿಮಗೆ ಆರೋಗ್ಯ ಕೇಂದ್ರದ ವಿಳಾಸ ತಿಳಿಯದಿದ್ದರೆ ಆರೋಗ್ಯಾಧಿಕಾರಿ ಕೆಂಪು ತ್ರಿಕೋಣ ಪ್ರದರ್ಶಿಸಿರುವ ಕೇಂದ್ರಕ್ಕೆ ಹೋಗಿ. ಅಲ್ಲಿ ನಿಮಗೆ ಸರಿಯಾದ ಸಹಾಯ ದೊರಕುತ್ತದೆ. ಕೆಂಪು ತ್ರಿಕೋಣ ಜವತೆಯ ಆರ್ಥ ಪೂರ್ಣ ಜೀವನದ ಹಾಗೂ ರಾಷ್ಟ್ರ ಪ್ರಗತಿಯ ಆಶಾಕಿರಣವಾಗಿದೆ.

ವಿಶೇಷ ಲೇಖನ

ಕುಟುಂಬ ಯೋಜನಾ ದ್ವಿಸಪ್ತಾಹ
ದಶಂಬರ 16ರಿಂದ 31

ನಿಮ್ಮ ಅಮೂಲ್ಯ ನಿರ್ಧಾರ

ನೀವು ಅಮೂಲ್ಯ ನಿರ್ಧಾರ ಕೈಗೊಳ್ಳಬೇಕಾಗಿದೆ. ಅದು ನಿಮ್ಮ ಕುಟುಂಬದ ಸುಖಿಸಂತೋಷದ ನಾಂದಿಯಾಗಿರುತ್ತದೆ. ಆಲ್ಲದೆ ಸಮಾಜ ಪ್ರಗತಿಯ ಮುನ್ನುಡಿಯಾಗುತ್ತದೆ. ದೇಶವನ್ನು ಬಲಿಷ್ಠಗೊಳಿಸಿ, ಸುಖಸಂತೋಷ ನೀಡುತ್ತದೆ. ಎರಡು ಅಥವಾ ಹೆಚ್ಚೆಂದರೆ ಮೂರು ಮಕ್ಕಳನ್ನು ಹೊಂದಿರುವ ಮಿತಕುಟುಂಬವೇ ನಿಮ್ಮ ಅಮೂಲ್ಯ ನಿರ್ಧಾರವಾಗಲಿ. ಇವನ್ನು ಕಾರ್ಯಗತಗೊಳಿಸಿದ್ದರೆ ಜನಸಂಖ್ಯಾ ಸ್ಫೋಟ ಮತ್ತು ರಾಷ್ಟ್ರೀಯ ಕೊರತೆಗೆ ಅತ್ಯವಶ್ಯಕ ನೀಡಿದಂತಾಗುತ್ತದೆ. ನೀವು ಕೇವಲ ಎರಡು ಅಥವಾ ಮೂರು ಮಕ್ಕಳನ್ನು ಹೊಂದಿದ್ದರೆ ಜನನ ಪ್ರಮಾಣವು ಶೃತ ಸಹಸ್ರಕ್ಕೆ 41 ಇರುವದು ತಿರಿಕ್ಕೆ ಇಳಿಯುತ್ತದೆ.

ಅಪಾಯ ಸಂಕೇತ

ಈಗಿನ ಜನಸಂಖ್ಯೆಗೆ ವರ್ಷಂಪ್ರತಿ 1 ಕೋಟಿ 30ಲಕ್ಷ ನವಜಾತ ಶಿಶುಗಳು ಸೇರುತ್ತವೆ. ಈಗಾಗಲೇ ಭಾರತದ ಜನಸಂಖ್ಯೆ 51 ಕೋಟಿ 60ಲಕ್ಷವಾಗಿದೆ. ಈ ಪ್ರಮಾಣದ ಬೆಳವಣಿಗೆ ಮುಂದುವರಿದರೆ ಈಶತಮಾನದ ಅಂತ್ಯದೊಳಗೆ ಜನಸಂಖ್ಯೆ ದ್ವಿಗುಣಗೊಳ್ಳುತ್ತದೆ. ಸ್ವಾತಂತ್ರ್ಯ ದತರ್ಸಮಾಯ ಸಾಧಿಸಿದ ಪ್ರಗತಿಯೆಲ್ಲವೂ ಸಂಪೂರ್ಣವಾಗಿ ಕಮರಿ ಹೋಗುತ್ತದೆ ಅಂದು-ಇಂದಿನ ಸ್ಥಿತಿಯನ್ನು ಹೋಲಿಸಿ ನೋಡಿದಾಗ ವರ್ಷಂಪ್ರತಿ 3 ಕೋಟಿ 10 ಲಕ್ಷ ಹೆಚ್ಚಿನ ಉದ್ಯೋಗಾವಕಾಶಗಳು ಶೇಕಡ 300 ಶೈಕ್ಷಣಿಕ ಸೌಲಭ್ಯಗಳು ಹಾಗೂ 2ಕೋಟಿ ಟನ್ ಆಹಾರಧಾನ್ಯ ಉತ್ಪತ್ತಿ ಹೆಚ್ಚಿಸಿ. ಆದರೆ ನಿಯಂತ್ರಿತ ಜನಸಂಖ್ಯಾ ಬೆಳವಣಿಗೆಯಿಂದ ಈ ಸರ್ವ ಸೌಲಭ್ಯಗಳಿಗೂ ಕೊರತೆಯೊಗಿದೆ. ಇಂದು ಆಹಾರ ಕೊರತೆ, ಅತ್ಯಲ್ಪ ಉದ್ಯೋಗಾವಕಾಶಗಳು ಹಾಗೂ ಶಿಕ್ಷಣ ಪರಿಚಿತವಾಗಿರುವ ಮಕ್ಕಳ ಸಂಖ್ಯೆ ಹೆಚ್ಚಿನ. ಪ್ರತಿಶಿಕ್ಷಣವೂ ಜನಸಂಖ್ಯೆ ಬೆಳವಣಿಗೆಯಿಂದ ಸರ್ವಥಾ ಸಂಸ್ಥಾಲಗಳು ಪಟಕ್ಕಾವಾಗಿವೆ.

ಸ್ವಾತಂತ್ರ್ಯದ ಬೆಲೆ

ಜನವು ಭಯ ವಿನೋಜನೆ ಮಾಡಿ ಸ್ವಾತಂತ್ರ್ಯ ಹಾಗೂ ಸದವಕಾಶಗಳೇ ಸ್ವಾತಂತ್ರ್ಯದ ನೈಜ ಅರ್ಥ. ಹಸಿದ ಹೊಟ್ಟೆ, ನಿರುದ್ಯೋಗ ಹಾಗೂ ಯುಕ್ತ ಬೆಳವಣಿಗೆಯ ವಂಚನೆ ಸ್ವಾತಂತ್ರ್ಯದ ಶ

ವಿಶೇಷ ಲೇಖನ

ಕುಟುಂಬ ಯೋಜನಾ ದ್ವಿಸಪ್ತಾಹ
ದಶಂಬರ 16ರಿಂದ 31

ದೇಶ ಮನೆ ಮನೆಗೆ ಭೇಟಿ ಮುಂತಾದ ಜಪದ ಸಂಪರ್ಕ ಸಾಧನೆಗಳ ಬಗೆಗೆ ಶಿಕ್ಷಣ ನೀಡಲಾಗುವದು. ಅಲ್ಲದೆ ವಂಕಿ ಮತ್ತು ಇತರ ಗರ್ಭನಿರೋಧಕ ಸಾಧನೆಗಳ ಬಗೆಗೆ ತಾಂತ್ರಿಕ ಜ್ಞಾನ ಒದಗಿಸಲು ಡಾಕ್ಟರುಗಳಿಗೆ ಅಲ್ಪಾವಧಿಯ ತರಬೇತಿಯನ್ನು ನೀಡಲಾಗುವುದು. ಡಾಕ್ಟರು ಸಾಮಾಜಿಕ ಕಾರ್ಯಕರ್ತರು ಮತ್ತು ಶಿಕ್ಷಕರಿಗೆ ಕುಟುಂಬ ಜೀವನ ಶಿಕ್ಷಣದ ಬಗೆಗೆ ವಿಶೇಷ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಇಲ್ಲಿ ಮಾಡಲಾಗಿದೆ. ಕುಟುಂಬ ಯೋಜನೆ ವಿಷಯದಲ್ಲಿ ಕಾಮಗಾರರ ಶಿಕ್ಷಣ ವರ್ಗಗಳನ್ನು ನಡೆಸಲಾಗುತ್ತಿದೆ.

ಸಂಶೋಧನೆ

ಗರ್ಭವಾತದ ವ್ಯಾಪ್ತಿ ಮತ್ತು ಪರಿಣಾಮ, ಶೈಲ್ಪೆ ಕೆಲಸಗಾರರ ಕುಟುಂಬ ಜೀವನ, ದಾಂಪತ್ಯ ಜೀವನದ ಪ್ರಮುಖ ಅಂಶಗಳು ಮುಂತಾದ ವಿಷಯಗಳ ಬಗ್ಗೆ ಸಂಸ್ಥೆ ಅರಿತಿದ ಸವಿಸ್ತೃತ ಕೆಲಸವನ್ನು ಕೈಗೊಂಡಿದೆ.

ವಿವಿಧ ಗರ್ಭ ನಿರೋಧಕ ಸಾಧನೆಗಳ ಪರಿಣಾಮಗಳ ಬಗ್ಗೆ ಇತ್ತಿ ವಿಶೇಷ ಅಧ್ಯಯನವನ್ನು ಕೈಕೊಳ್ಳಲಾಗಿದೆ. ಗರ್ಭನಿರೋಧಕಗಳ ಒಗ್ಗೆ ಕೇಂದ್ರವು ಅಮೂಲ್ಯ ಅಭ್ಯಾಸವನ್ನು ಮಾಡಿದೆ. ಹೊಸ ಹೊಸ ಸಾಧನೆಗಳನ್ನು ರೂಪಿಸುವಲ್ಲಿ ಈ ಸಂಸ್ಥೆಯು ಕೊಡುಗೆ ಶ್ರೀಮಂತವಾಗಿದೆ!

ಜನಪ್ರಿಯವಾಗುತ್ತಿರುವ ವಂಕಿ

ತ್ಯುಗಳು ಈ ಏರಾಟ ಸಮಸ್ಯೆಗೆ ನಾವೇ ಕಾರಣರಾಗಿದ್ದೇವೆ. ಅಡೆತಡೆಯಿಲ್ಲದೆ ಜನಸಂಖ್ಯೆ ಹೆಚ್ಚಿಸಲು ಕಾರಣರಾಗಿ ಅಭಿವೃದ್ಧಿಯ ಲಾಭಗಳಿಂದ ವಂಚಿತರಾಗಿದ್ದೇವೆ.

ಅಭಿವೃದ್ಧಿ ಹೆಚ್ಚಾಗಿ, ಜನರಿಗೆ ಹೆಚ್ಚು ಸೌಲಭ್ಯ ಸಾಧನಗಳು ದೊರಕಿದರೆ, ಜನ ಸಂಖ್ಯೆ ಇಳಿಯುತ್ತದೆ. ಏಕೆಂದರೆ ಮಿತ ಕುಟುಂಬ ಮಿತವ್ಯಯಕಾರಿಯೂಗಿ, ಸುಖದ ನೆಲೆಗಟ್ಟಾಗುತ್ತದೆ.

ಆದರೂ ಭಾರತದಲ್ಲಿ ಜನನ ಪ್ರಮಾಣ ಪ್ರತಿ ಸಹಸ್ರಕ್ಕೆ 48 ಇದೆ. ಈ ಸಂಖ್ಯೆಯಲ್ಲಿ 9ಮಕ್ಕಳು ಪ್ರಥಮ ಶಿಶುಗಳು. 8 ಶಿಶುಗಳು ಎರಡನೆಯ ಮಕ್ಕಳು, ಆದೇ ರೀತಿ ಮತ್ತೆ 8ಶಿಶುಗಳು ಮೂರನೆಯ ಮಕ್ಕಳಾಗಿರುತ್ತವೆ. 16 ಶಿಶುಗಳು ತಾಲ್ಕಾರಿಂದ ಹನ್ನೆರಡನೆಯ ಮಕ್ಕಳ ವರೆಗೆ ಹಬ್ಬಿರುತ್ತವೆ. ಆದ್ದರಿಂದ ಪ್ರತಿ ಕುಟುಂಬವು ಎರಡು ಅಥವಾ ಮೂರು ಮಕ್ಕಳಿಗೆ ಮಿತಗೊಂಡರೆ ಜನನ ಪ್ರಮಾಣ ಶೇಕಡ 43 ಪ್ರಮಾಣದಲ್ಲಿ ಕಡಿಮೆಯಾಗುತ್ತದೆ. ಇಲ್ಲದಿದ್ದರೆ ಜನಸಂಖ್ಯೆಯು ಸ್ಫೋಟ ವಿಶ್ವತವಾಗುತ್ತದ.

ಮಿತ ಕುಟುಂಬದ ಪಾತ್ರ

ಮಿತಕುಟುಂಬವೇ ಭಾರತೀಯರ ಆದರ್ಶವಾದರೆ, 1976ನೇ ಇಸವಿಯ ವೇಳೆಗೆ ಶೇಕಡ 500ಷ್ಟು ಶಿಶು ಜನನ ಕಡಿಮೆಯಾಗುತ್ತದೆ. 1984ನೇ ವರ್ಷದ ವೇಳೆಗೆ ಕೇವಲ ಶೇಕಡ 25 ಶಿಶು ಜನನ ಪ್ರಮಾಣವಿರುತ್ತದೆ.

ಕುಟುಂಬದಲ್ಲಿ ಎರಡು ಅಥವಾ ಮೂರು ಮಕ್ಕಳಿದ್ದರೆ ಅವರು ಆರೋಗ್ಯವಂತರೂ, ದೃಢಕಾಯರೂ ಆಗಿದ್ದು, ಸಂಸಾರ ಜೀವನದ ಉಲ್ಲಾಸಕ್ಕೆ ಮೂಲಸ್ತೂರ್ತಿಯಾಗಿರುತ್ತಾರೆ. ಮಿತ ಕುಟುಂಬ ಯಾವೊಂದು ಆರ್ಥಿಕ ಮಟ್ಟದಲ್ಲಿದ್ದರೂ ಮಕ್ಕಳಿಗೆ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತದೆ. ಅಲ್ಲದೆ ಮಕ್ಕಳು ಹಾಗೂ ಕುಟುಂಬದ ಭವಿಷ್ಯದ ಅಗತ್ಯಗಳಿಗೆ ಸೂಕ್ತ ಏರ್ಪಾಟು ಮಾಡಿಕೊಳ್ಳಬಹುದು.

ವಿವಾಹ ವಯಸ್ಸನ್ನು ಮುಂದೂಡಿ, ಮಿತ ಕುಟುಂಬ ಹೊಂದಿರಬೇಕು. ಪುರುಷರೂ ಮಹಿಳೆಯರೂ ವಿದ್ಯಾಭ್ಯಾಸವನ್ನು ಸುಖ ಜೀವನಕ್ಕೆ ಅಗತ್ಯವಾಗುವ ವರಮಾನ ಪಡೆಯುತ್ತಿದ್ದಾಗ ವಿವಾಹ ಮಾಡಿಕೊಳ್ಳುವುದು ಉಚಿತ. ಇದರಿಂದ ಪ್ರಗತಿ ಹಾಗೂ ವಿಶ್ರಾಂತಿ ತಾನಾಗಿ ದೊರಕುತ್ತದೆ.

ಮಿತ ಕುಟುಂಬದ ಯೋಜನೆ ಸುಲಭ, ಸೂಕ್ತ ಅವಧಿಯ ನಂತರ ಮಕ್ಕಳನ್ನು ಪಡೆಯಬೇಕು. ಇದರಿಂದ ತಾಯಿಯು ಆರೋಗ್ಯ ಸುಧಾರಿಸುವುದಲ್ಲದೆ ಶಿಶು ಬೆಳವಣಿಗೆ ಉತ್ತಮವಾಗಿರುತ್ತದೆ. ಮಕ್ಕಳು ಆರೋಗ್ಯಶಾಲಿಗಳಾಗಿ, ಆದರ್ಶ ವಾತಾವರಣದಲ್ಲಿ ವಿಕಾಸ ಹೊಂದಲು ಮಿತಕುಟುಂಬ ಇಂಬುಗೊಡುತ್ತದೆ. ಮಿತಕುಟುಂಬಗಳಲ್ಲಿ ಬೃಹತ್ ಕುಟುಂಬದಲ್ಲಿರುವಂತಹ ಸಮಸ್ಯೆ, ಆತಂಕ, ಉದ್ವಿಗ್ನತೆಗಳಿರುವುದಿಲ್ಲ.

ಸುಖದ ದಾರಿ

ಮಿತ ಕುಟುಂಬ ಹೊಂದಿರಲು ಆಧೋಮುಖಿ ಕೆಂಪು ತ್ರಿಕೋಣ ಚಿಹ್ನೆ ಪ್ರದರ್ಶಿಸಿರುವ ಕೇಂದ್ರಕ್ಕೆ ಯೋಗಿ. ಅಲ್ಲಿ ಕುಟುಂಬ ಯೋಜನೆಯ ಬಗ್ಗೆ ಸಹಾಯ ಸಲಹೆ ನೀಡಲಾಗುತ್ತದೆ. ಈ ಚಿಹ್ನೆ ಮಿತ ಕುಟುಂಬಕ್ಕೆ ಆಹ್ವಾನ ನೀಡುತ್ತದೆ. ಇದರಿಂದ ರಾಷ್ಟ್ರಾಭ್ಯುದಯವಾಗುತ್ತದೆ.

ನಿಯೋಜಿತ ಸಂಸಾರವನ್ನು ರೂಪಿಸಲೂ ಮತ್ತು ಬಯಸಿದಾಗ ಮಕ್ಕಳನ್ನು ಪಡೆಯಲಿಕ್ಕೆ ಸಾಧ್ಯವಾಗಲೂ ವಂಕಿಯು ಉಪಯೋಗ ಬಹಳ ಪರಿಣಾಮಕಾರಿ ಎಂಬುದನ್ನು ಬಹುಜನರು ಗಮನಿಸಿದ್ದಾರೆ. ಇದು ವಿಶ್ವಕ್ಕೆ ನಮ್ಮ ದೇಶದಲ್ಲಿ 20,50,000ಕ್ಕೂ ಹೆಚ್ಚು ಸಂಖ್ಯೆಯ ಮಹಿಳೆಯರು ವಂಕಿಯನ್ನು ಸ್ವೀಕರಿಸಿದ್ದಾರೆ. ವಂಕಿಧಾರಣ ಮಾಡಿದ ಸುಮಾರು ಇಪ್ಪತ್ತು ಸಾವಿರ ಸ್ತ್ರೀಯರಿಂದ ವಂಕಿಯ ನಿಶ್ಚಿತ ಪರಿಣಾಮವನ್ನು ಕಂಡು ಹಿಡಿಯಲು ದೇಶಾದ್ಯಂತ ಹತ್ತೊಂಬತ್ತು ಕೇಂದ್ರಗಳಲ್ಲಿ ಅಭ್ಯಾಸವನ್ನು ಕೈಕೊಳ್ಳಲಾಗಿದೆ. ವಂಕೀ ಧರಿಸಿದ ಶೇಕಡ 54ರಷ್ಟು ಮಹಿಳೆಯರಿಗೆ ಯಾವದೇ ಬಗೆಯ ತೊಂದರೆ—ತಕರಾರು ಇಲ್ಲವೆಂದು ಅಭ್ಯಾಸದ ಸಮೀಕ್ಷೆಯಿಂದ ಸ್ಪಷ್ಟವಾಗಿ ವ್ಯಕ್ತವಾಗಿದೆ.

ನಮ್ಮ ದೇಶದಲ್ಲಿ ಮಹಿಳೆಯರು ಸಾಮಾನ್ಯವಾಗಿ ತಮ್ಮ 28 ಅಥವಾ 29 ವಯಸ್ಸಿನಲ್ಲಿ ವಂಕೀಧಾರಣೆಗೆ ಒಪ್ಪಿದ್ದುಕಂಡು ಬಂದಿದೆ. ಕೋರಿಯಾ, ತೈವಾನ ಅಥವಾ ಹಾಂಗ್‌ಕಾಂಗ್‌ಗಳಲ್ಲಿಯ ಸ್ತ್ರೀಯರ ಇಂತಹ ತುಲನಾತ್ಮಕ ವಯಸ್ಸಿನೊಡನೆ ಹೋಲಿಸಿ ನೋಡಿದಾಗ, ನಮ್ಮ ಮಹಿಳೆಯರು ಕಿರು ವಯಸ್ಸಿನಲ್ಲಿಯೇ ವಂಕಿಧಾರಣೆ ಮಾಡಿಸಿಕೊಂಡದ್ದು ಕಂಡು ಬರುತ್ತದೆ. ಇದು ಯೋಗ್ಯವೇ ಆಗಿದೆ. ಏಕಂದರೆ ಕಿರು ವಯಸ್ಸಿನಲ್ಲಿ ವಂಕೀ ಧಾರಣೆ ಮಾಡಿಸಿಕೊಳ್ಳುವುದರಿಂದ ಚಿಕ್ಕ ಸಂಸಾರವನ್ನು ರೂಪಿಸಿಕೊಳ್ಳಲು ಶಕ್ಯವಾಗುತ್ತದೆ.

ನಮ್ಮ ದೇಶದಲ್ಲಿ ವಂಕೀ ಧರಿಸಿದ ಮಹಿಳೆಯರಿಗೆಲ್ಲ ಒಂದು ಅಥವಾ ಎರಡು ಮಗು ಇವೆ. ಈ ರೀತಿಯಾಗಿ ಎರಡು ಮಕ್ಕಳು ಜನನದ ಫಲುವಿನ ಅಂತರವನ್ನು ತನ್ನಿಂತಾನೆ ಬಂದಂತೆ ಹೆಚ್ಚಿಸಲು ಧಾರಕತೆದ ಮಹಿಳೆಯರು ವಂಕಿಧಾರಣ ಮಾಡಿದ್ದಾರೆ.

ನಮ್ಮ ದೇಶದಲ್ಲಿ ಮತ್ತು ವಿದೇಶಗಳಲ್ಲಿ ಕೈಕೊಂಡ ಅಧ್ಯಯನದ ಬೆಳಕಿನಲ್ಲಿ ವಂಕೀಧರಿಸುವುದರಿಂದ ಬಂಜೆತನ, ಕ್ಯಾನ್ಸರ್ ಅಥವಾ ಇನ್ನಿತರ ಯಾವದೇ ರೋಗ ಬರುವುದಿಲ್ಲವೆಂದು ನಿಶ್ಚಿತವಾಗಿ ಸಿದ್ಧಗೊಂಡಿದೆ.

ಗರ್ಭಧಾರಣೆಯನ್ನು ತಡೆಗಟ್ಟಲು ವಂಕಿಯು ಸುಲಭ, ಸುರಕ್ಷಿತ ಮತ್ತು ಸರಿಣಾಮಕಾರೀ ಮಾರ್ಗವೆಂಬುದು ಸಿದ್ಧವಾದ ಮಾತಾಗಿದೆ. ವಂಕಿಧಾರಣ ಮಾಡುವುದೇನಂದರೆ, ಒಮ್ಮೇ ವಂಕಿಯನ್ನು ಧರಿಸಿದ ಮೇಲೆ ಮತ್ತೆ ಬೇರಾವ ಸಂತತಿ ನಿರೋಧಕಗಳನ್ನು ಸೇವಿಸುವ ಅಗತ್ಯವಿಲ್ಲ. ಅಲ್ಲದೆ, ಮಹಿಳೆಗೆ ಮಗು ಬೇಕು ಎಂದೆನಿಸಿದಾಗ ಅವಳು ವಂಕಿಯನ್ನು ಹೊರತೆಗೆಸಿ ಕೊಂಡು ಮತ್ತೆ ಸಹಜವಾಗಿ ಆರೋಗ್ಯವಂತ ಮಗುವನ್ನು ಪಡೆಯಬಲ್ಲಳು. ವಂಕಿಯನ್ನು ಧರಿಸಿದ ಮಹಿಳೆಯ ಗರ್ಭಧರಿಸಿದ ಉದಾಹರಣೆ ತೀರ ವಿರಳ. ಅಂತಹ ಸಂದರ್ಭದಲ್ಲಿಯೂ ಗರ್ಭಸ್ಥ ಶಿಶುವಿನ ಬೆಳವಣಿಗೆ ಯಥಾಕ್ರಮವಾಗಿ ಉತ್ತಮ ರೀತಿಯಲ್ಲೇ ಇರುತ್ತದೆ.

ವಂಕಿಧಾರಣೆ ಒಳಿತನ್ನೇ ಮಾಡುವದು, ಕೌಟುಂಬಿಕ ಜೀವನದ ಆನಂದಕ್ಕೆ ಭಂಗತರದು. ಆದುದರಿಂದಲೇ ನಮ್ಮ ದೇಶದಲ್ಲಿ ಹೆಚ್ಚು ಮಹಿಳೆಯರು ಮತ್ತು ಸುಬೀ ಸಂಸಾರವನ್ನು ಹೊಂದಲು ವಂಕಿಯನ್ನು ಧರಿಸಲು ಮುಂದೆ ಬಂದಿದ್ದಾರೆ

ಕುಟುಂಬ ಯೋಜನೆಗೆ ಇದು ಸಕಾಲ

(ನಿಳನೇ ಪುಟದಿಂದ)

ಮೂರಕ್ಕಿಂತ ಹೆಚ್ಚು ಮಕ್ಕಳಾಗ ಕೂಡದೆಂದು ನಿರ್ಧರಿಸಿದರೆ, ದೇಶದಲ್ಲಿ ಜನನ ಪ್ರಮಾಣ ಒಂದು ಸಾವಿರಕ್ಕೆ 25ರಷ್ಟಾಗುವುದು

ಕುಟುಂಬ ಯೋಜನೆ ಅನುಸರಿಸುವಂತೆ ದೇಶದ ಒಂದು ಕೋಟಿ ದಂಪತಿಗಳ ಮನವೊಲಿಸುವುದು ಸುಲಭವಾದ ಮಾತಲ್ಲ. ಕುಟುಂಬ ಯೋಜನಾ ಪ್ರಚಾರಕಾರ್ಯಾಗಿ ನಾವು ಮೂರು ಸಾವಿರ ಪಟ್ಟಣಗಳಿಗೆ 5ಲಕ್ಷ 60 ಸಾವಿರ ಹಳ್ಳಿಗಳಿಗೆ ಹೋಗುತ್ತಿದ್ದೇವೆ. ದೇಶದ 14 ಭಾಷೆಗಳಲ್ಲಿ ಪ್ರಚಾರ ಕಾರ್ಯ ಕೈಗೊಂಡಿದ್ದೇವೆ. ಕುಟುಂಬ ಯೋಜನೆಯ ಬಗ್ಗೆ ಕಂಡು ಬರುತ್ತಿರುವ ಸಾಂಪ್ರದಾಯಿಕ ವಿರೋಧವನ್ನು ಎದುರಿಸಬೇಕಾಗಿದೆ. ಇನ್ನು ಕೆಲವು ಪ್ರಧಾನ ತೊಂದರೆಗಳು ದೇಶದ ಭವಿಷ್ಯತ್ತು ಉಜ್ವಲವಾಗಬೇಕಾದರೆ. ಹೆಚ್ಚುತ್ತಿರುವ ಜನಸಂಖ್ಯೆ ನಿಯಂತ್ರಿಸಲು ಹೋರಾಡದೇ ಅನ್ಯಮಾರ್ಗ ಇಲ್ಲ. ಜನತೆ ಮನಸ್ಸು ಮಾಡಿದರೆ ಹಾಗೂ ಈಗಲೇ ಕಾರ್ಯನಿರತವಾದರೆ, ಈ ಹೋರಾಟದಲ್ಲಿ ಯಶಸ್ಸು ದುರ್ಲಭವೇನೂ ಇಲ್ಲ.

ಕೃತಿ ಪರಿಚಯ

ಪರ್ಯಾಯಕ್ಕಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ ಸ.

ಸತ್ಯ ಮತ್ತು ಸೌಂದರ್ಯ

ಲೇಖಕರು: ಶ್ರೀ ಎಸ್. ಎಲ್. ಭೈರಪ್ಪ.

ಪ್ರಕಾಶನ: ಸಾಹಿತ್ಯ ಭಂಡಾರ, ಹುಬ್ಬಳ್ಳಿ.

ಪುಟಗಳು: ೩೪೬. ಬೆಲೆ: ರೂ. ೭-೫೦

ಸತ್ಯ ಮತ್ತು ಸೌಂದರ್ಯಗಳನ್ನು ಸಮಸ್ತವ್ಯವಹಾರಗಳಿಗೆಳಿಸುತ್ತ ವಿಶ್ವಕವಿ ರವೀಂದ್ರನಾಥ ಠಾಗೋರರು ಒಂದೆಡೆ ಬರೆದಿದ್ದಾರೆ—"ಸೌಂದರ್ಯದಲ್ಲಿ ಸತ್ಯದ ಪೂಜೆ ನಡೆಯುತ್ತದೆ; ವಿಷ್ಣುವಿನ ಆಂಥಾನೆಯು ನಾರದನ ವೀಣೆಯುಂದಾಗುತ್ತದೆ" ಸಾಹಿತ್ಯ ಹಾಗೂ ಕಲೆಗಳ ಅಧಿದೇವತೆ ಸರಸ್ವತಿ ಪಂಸವಾಹನೆ ವೂತ್ರವಷ್ಣಿ, ವೀಣಾಪಾಣಿಯೆ. ನೀಲಾಕ್ಷೇರಗಳನ್ನು ವಿವೇಕಯುತವಾಗಿ ಪರಿಶೀಲಿಸುವ ಪುಂಸ್ತಿ ಸತ್ಯವನ್ನು ಪ್ರತಿಬಿಂಬಿಸಿದರೆ, ಸೌಂದರ್ಯವನ್ನು ವೀಣೆಯು ಪ್ರತಿನಿಧಿಸುತ್ತದೆ ಎನ್ನಬಹುದು. "ಸತ್ಯಂ ಶಿವಂ ಸುಂದರಂ" ಎಂಬುದು ಪ್ಲೇಟೋವಿನ ನುಡಿಯೊದರೂ ಸಚ್ಚಿದಾನಂದವೆಂಬ ಭಾರತೀಯ ತತ್ವದಲ್ಲಿ ಇದರ ಮೂಲವಿದೆ. ಸತ್ಯ, ಶಿವ ಮತ್ತು ಸುಂದರಗಳ ಮೌಲ್ಯ, ಪರಸ್ಪರ ಸಂಬಂಧ ವಿಶೇಷತೆಯು ಬಹಳ ಗಹನವಾದ ವಿಚಾರ, ಇವುಗಳಲ್ಲಿ "ಸತ್ಯ ಮತ್ತು ಸೌಂದರ್ಯಗಳ ಸಹ ಸಂಬಂಧವು ಯಾವ ರೀತಿಯದು" ಎಂಬ ಪ್ರಶ್ನೆಯನ್ನು ಪ್ರಕೃತ ಪುಸ್ತಕದಲ್ಲಿ ಸವಿವರವಾಗಿ ಡಾ| ಭೈರಪ್ಪನವರು ಚರ್ಚಿಸಿದ್ದಾರೆ. ಬುಳಿದವುಗಳ ಬಗ್ಗೆ ಪ್ರತ್ಯೇಕವಾಗಿಯೇ ಬರೆಯುವ ವಿಚಾರ ಲೇಖಕರಿಗಿರುವುದರಿಂದ ಇದು ಈ ಮಾಲಿಕೆಯ ಸೊದಲನೆಯ ಕುಸುಮವೆನ್ನಬಹುದು.

"ವಾಸ್ತವ ಸತ್ಯಗಳನ್ನು ಬುದ್ಧಿಯು ಅನುಕರಿಸಿ ಯುಕ್ತಾರ್ಥ ವಾನೋಭಿಂಬವನ್ನು ಸೃಷ್ಟಿಸಿದರೆ ಅದು ಸತ್ಯವೆನಿಸುತ್ತದೆ; ವಾಸ್ತವ ವಸ್ತುವೊಂದನ್ನು ನನ್ನು ಕಲ್ಪನೆಯು ಅನುಕರಿಸಿ ಒಂದು ವಿಶಿಷ್ಟ ವಸ್ತುವಿನ ಮೂಲಕ ಪ್ರತಿಬಿಂಬಿಸಿದರೆ ಅದು ಸೌಂದರ್ಯವೆನಿಸುತ್ತದೆ" ಅಥವಾ ಭೌದ್ಧಿಕ ಸೃಷ್ಟಿ ಸತ್ಯವಾದರೆ, ಕಾಲ್ಪನಿಕ ಸೃಷ್ಟಿ ಸೌಂದರ್ಯವಾಗುವುದು ಇದು ಅನುಭವಕ್ಕೆ ದೂರವಾದುದಲ್ಲ. ಇವೆರಡು ಸೃಷ್ಟಿಗಳ ನಡುವಣ ಸಾಂಗತ್ಯ, ಸಾಮರಸ್ಯ, ಸಂಬಂಧವೇ ಈ ಗ್ರಂಥದ ವಿಮರ್ಶೆಯ ಮೂಲವಸ್ತು.

ಈ ಗ್ರಂಥವು ಹತ್ತು ಅಧ್ಯಾಯಗಳಲ್ಲಿ ವಿಭಾಜಿತವಾಗಿದೆ ಅನುಕರಣವಾದ, ಸಾಧನವಾದ, ಸಾಂಗತ್ಯವಾದ, ಸಾಂಗತ್ಯ ಹಾಗೂ ಕಲಾ ವಿಮರ್ಶೆಯ ಶಬ್ದಗಳು, ವಿಷಯತಿ ಮತ್ತು ಸಂಬಂಧ, ಸಾಂಗತ್ಯ ಮತ್ತು ಕೆಲವು ಆಧುನಿಕ ಪಂಥಗಳು, ಕನ್ನಡ ಮತ್ತು ಜ್ಯೋತಿ, ಕಲಾತ್ಮಕ ಮತ್ತು ವೈಚಾರಿಕ ಸೌಂದರ್ಯ, ಕ್ರೂರ ಮತ್ತು ವಿದ್ಯೆ, ಸಾಂಗತ್ಯಾತೀತ ಸತ್ಯ ಮತ್ತ ಸೌಂದರ್ಯವೆಂಬುವೇ ಈ ಅಧ್ಯಾಯಗಳು. ಪ್ರತಿ ಅಧ್ಯಾಯದಲ್ಲೂ ತಪ್ಪಂಬಂಧಿತ ಕೂಲಂಕಷ, ಸಮರ್ಪಕ ವಿವೇಚನೆಯನ್ನು ನಾವು ಕಾಣಬಹುದು. ವಿವಿಧ ಗ್ರಂಥಗಳ ಉದ್ಧರಣೆಗಳಿಂದ ಗ್ರಂಥವನ್ನು ಅತ್ಯಂತ ಸಂಗ್ರಾಹ್ಯವೂ ಉಪಯುಕ್ತವೂ ಆಗುವಂತೆ ಡಾ| ಭೈರಪ್ಪನವರು ಮಾಡಿದ್ದಾರೆ.

ಡಾ| ಭೈರಪ್ಪನವರು ಸತತ ಅಧ್ಯಯನ ಪ್ರಿಯರು, ದಾರ್ಶನಿಕರು, ವಿವೇಚಕರು, ಸೌಂದರ್ಯೋಪಾಸಕರು. ತನ್ನ ಅಧ್ಯಯನದ ಲಾಭವನ್ನು ಕನ್ನಡಿಗರಿಗೂ ಒದಗಿಸುವ ಅವರ ಫಲೋದ್ದೇಶವೀಗ್ರಂಥದಲ್ಲಿ ಸಂಪೂರ್ಣ ಸಫಲವಾಗಿದೆ. ಪ್ರಾಧೇಶಿಕ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣವು ಒಲಿಯುತ್ತಿರುವಾಗ ಸಾಮಾಯಿಕ-ಸಹಾಯಕ ಪುಸ್ತಕಗಳ ರಚನೆ ಅತ್ಯಗತ್ಯ. ಸತ್ಯ ಸೌಂದರ್ಯಗಳ ಮೇಲೆ ಮೂಮೂಂ ಸಾತ್ವಿಕ ಗ್ರಂಥಗಳೇ ಕನ್ನಡದಲ್ಲಿ ಇಲ್ಲದಿರುವಾಗ ಡಾ|ಭೈರಪ್ಪನವರ ಈ ಉದ್ಗ್ರಂಥವು ಈ ಕೊರತೆ ನೀಗಿಸುವಲ್ಲಿ ಅರಂಭ ಪ್ರಯತ್ನ. ಅವರು ಯೋಜಿಸಿರುವ ಇತರ ಹೆಬ್ಬೊತ್ತಿಗೆಗಳು ಬೇಗನೇ ಪ್ರಕಟವಾಗಲಿ; ಅವರು ತುಳಿದ ದಾರಿಯಲ್ಲಿ ಹಿಜ್ಜೆಗಳು ಮುಂದುವರಿದು ಕನ್ನಡ ಸರಸ್ವತಿಯು ಮನದುಂಬಲಿಯೆಂದೂ ಹಾರೈಸುತ್ತೇವೆ

—ಗೋರಾ.

ಪುಡಿಗತೆಗಳು:

೧. ವಿಚಾರದ ಕಣ್ಣು ಬೇಕು

'ಕಣ್ಣಾರೆ ಕಂಡದ್ದೂ ಸುಳ್ಳು, ಕಿವಿಯಾರೆ ಕೇಳಿದ್ದೂ ಸುಳ್ಳು, ವಿಚಾರದಿಂದ ತಿಳಿದದ್ದೇ ಸತ್ಯ" ಎಂಬುದೊಂದು ಮುದಿ ಮಾತು.

ಮುದಿ ಮಾತುಗಳಿಗೆ ಈಗಿನವರು ಕೊಡುವ ಬೆಲೆ ಎಷ್ಟೆಂದರಷ್ಟೇ. ಒಂದೋ ಕಣ್ಣು ಮುಚ್ಚಿ ಅದನ್ನು ನಂಬೋದು; ಇಲ್ಲವೇ "ಅಜ್ಜ ನೆಟ್ಟ ಆಲದ ಮರ ಅಂತನೇನಾ ಹಾಕಿ ಕೊಳ್ಳೋದೇ?' ಅಂತ ತಿರಸ್ಕರಿಬಿಡುವುದು.

ಆದರೆ ಮೇಲೆ ಹೇಳಿದ ಮುದಿ ಮಾತನ್ನ ಕಣ್ಣು ಮುಚ್ಚಿ ತಿರಸ್ಕರಿಸುವ ಮೊದಲು ಸ್ವಲ್ಪ ನಿಮ್ಮ ಕುತ್ತು ಮತ್ತು ನೋಡಿ ಕೊಂಡರೇ ಸಾಕು. ಅದಕ್ಕಾಗಿ ಯೂರೂ ತಲೆ ಮಂಡೆ ಕೆರೆದು ಆಲೋಚನೆ ಮಾಡುವುದೂ ಬೇಡ. ನಿಮಗೊಂದು ಖುಟ್ಟೆಯೋ, ಕೊಡೆಯೋ, ತರಕಾರಿಯೋ, ಬೇಕಾಯಿತೂ ಅನ್ನಿ-ಅಂಗಡಿಗೆ ಹೋಗಿಕೇಳುತ್ತೀರಿ. ನೋಡುತ್ತೀರಿ. ನೀವು ಕೇಳುವ ವಸ್ತುವಿನ ಮೇಲೆ ಬೆಲೆ ಬರೆದಿದ್ದರೂ, ಇದ್ದೀತು ಅದನ್ನೆಲ್ಲ ನಿಜವೆಂದೇ ನಂಬಿದರೆ ನೀವು ದಡ್ಡರು, ದಾಕ್ಷಿಣ್ಯವಿದವರು, ಮೋಸ ಹೋಗಲಿಕ್ಕೆ ತಕ್ಕವರು ಎಂದು ಅರ್ಥ. ಅದು ವಿಚಾರ ಚರ್ಚೆಗಳನ್ನು ಪಡೆಸಿದ ಮೇಲೆ ಬೆಲೆಕಡಿಸಿಯೂಗಿಯೇ ನಿಮಗೆ ಸಿಕ್ಕೀತು.

ಡಜನಿಗೆ ಎಂಟಾಣೆ ಎಂದು ಕೆವಿಗೆ ಬಿದ್ದ ಮೂಲು ವಿಚಾರ ನಡೆಸಿದ ಮೇಲೆ ಕಾಲ್ಕಾಣೆಗೇ ಸಿಕ್ಕೀತು; ಏಕೆ, ಎರಡಾಣೆಗೂ ಸಿಕ್ಕೀತು.

ಸಿನಿಮಾ ನಟಿಯರು ಸ್ನಿಡಿಯೋದಲ್ಲಿಯೂ, ತೆರೆಯಲ್ಲಿಯೂ ಕಾಣಿಸುವ ಹಾಗೆ ಅವರ ಮನೆಯಲ್ಲಿರುವುದಿಲ್ಲ. ಇನ್ನೊಬ್ಬರು ನಮ್ಮ ಮುಂದೆ ವರ್ತಿಸುವ ಹಾಗೆ ಅವರ ಸ್ವಂತ ಮನೆಯಲ್ಲಿ ಇರುವುದಿಲ್ಲ.

ಒಂದು ಪುಸ್ತಕದ ಬೆಲೆ ನಾಲ್ಕಾಣೆ ಎಂದು ಬರೆದಿದ್ದರೂ ಅದರ ಬೆಲೆ ಹದಿನಾಲ್ಕಣೆಯೂ ಆದೀತು; ಒಂದಾಣೆಯೂ ಆದೀತು.

ಯಾವುದಕ್ಕೂ ವಿಚಾರದ ಕಣ್ಣು ತೆರೆದು ನೋಡಿದಾಗಲೇ ನಿಜವಾದ ಬೆಲೆ ಗೊತ್ತಾಗುತ್ತದೆ.

—"ನವಗಿರಿನಂದ"

ಶೆಟ್ಟಿ ಎಗ್ರಿಕಲ್‌ಚರಲ್ ಇಂಡಸ್ಟ್ರೀಸ್ ಉದ್ಘಾಟನೆ

ಉಪ್ಪೂರು-ಶೆಟ್ಟಿ ಎಗ್ರಿಕಲ್ಚರಲ್ ಇಂಡಸ್ಟ್ರೀಸ್, ಇದರ ಉದ್ಘಾಟನಾ ಸಮಾರಂಭವು ಶಾ. 19.12.1967ರಂದು ಉಡುಪಿ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎಲ್. ಮಧ್ವರಾಜರವರಿಂದ ಶ್ರೀ ಬಿ. ಜಗಜ್ಜೀವನದಾಸ ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಸಂಸ್ಥೆಯ ಮಾಲಕರಾದ ಶ್ರೀಯುತ ಕರುಣಾಕರ ಶೆಟ್ಟರು ಸ್ವಾಗತ ಭಾಷಣ ಮಾಡಿದ ನಂತರ ಶ್ರೀ ಸತೀಶ್ ಪೈಗೆ, ಪಂಚಾಯತ್ ಅಧ್ಯಕ್ಷೆ ಶೇಷಪ್ಪಯ್ಯ, ಕುಕ್ಕಿಲ್ಲಾಯ ಮತ್ತು ಎಸ್. ಎಲ್. ನಾರಾಯಣ ಭಟ್ಟರು ಮಾತನಾಡಿದರು.

ಶ್ರೀ ಮಧ್ವರಾಜರು ಉದ್ಘಾಟಿಸುತ್ತಾ, ಕೈಗಾರಿಕೆ ಬೆಳೆದರೆ ಜನರಿಗೆ ಉದ್ಯೋಗ ದೊರಕುತ್ತದೆ ಅದಾಗ ವಿಷಮ ದಲ್ಲಿ ನಾವಿನ್ನೂ ಪರಾವಲಂಬಿಗಳಾಗಿದ್ದೇವೆ. ಕೃಷಿ, ಕೈಗಾರಿಕೆ ಆಥವಾ ವಿಜ್ಞಾನಗಾರಿಕೆ-ಯಾವುದರಲ್ಲೂ ಸ್ವಾವಲಂಬನೆಯಾಗಿ ಮುಂದುಬೇಕಾಗುತ್ತದೆ ಮುಖ್ಯ ಇಂದು ಜನರು ತಮ್ಮ ಪತ್ತಿಯನ್ನು ಚೆನ್ನಾಗಿ ಉಪಯೋಗ ಮಾಡಿಕೊಳ್ಳಿ' ಎಂದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಲ್ಲಿಯ ಜನರಿಗೆ ಬೇಕಾದ ಸೌಕರ್ಯಗಳು ಇರುವುದರಿಂದ ಕೃಷಿಯಲ್ಲಿ ವಿಶೇಷ ಆಸಕ್ತಿಯಿಂದ ದುಡಿಯಲು ಸಾಧ್ಯವೆಂದು ಹೇಳಿದರು. ಇಲ್ಲಿದ ಇಂಥ ಇನ್ನೂ ಅನೇಕ ಉದ್ಯಮಗಳು ಇಲ್ಲಿಯ ಜನರಲ್ಲಿ ಉತ್ಸಾಹ ತರಲಿ ಎಂದು ಹಾರೈಸಿದರು.

ಕೊನೆಯಲ್ಲಿ ಶ್ರೀ ವಿಠಲದಾಸ ಕಾಮತ್ ಶೆಟ್ಟರು ಧನ್ಯವಾದ ಸಮರ್ಪಿಸಿದರು.

IN THE COURT OF THE MUNSIFF, UDIPI.

R.L.P. 222/68

Vagdevi —*Petitioner.*

vs

1. Vishalaxiamma, wife of Krishnamurthi Rao
2. Mohan Rao, son of 1st Respt. Marpalli of Korangrapady Village, Udipi Taluk—*Respts.*

The above Petition filed by the Petitioner is posted to 11—1—68 for settling the terms of the Sole Proclomation The Respondents may appear in Court on that date at 11 a.m and file their objections, if any, failing which the matter will be decided in their absence.

K. L. Aithal.
Vakil for Petitioner.

Udipi, 16.12.67.

Announcement

"NAVAYUGA" established in 1921 by a nationalist leader of South India, Sri A B Shetty proposes a sumptuous REPUBLIC DAY ISSUE on January 26, 1968 containing essays, skits and short stories by well-known authors of Karnataka

Ever since it was started amidst the din and bustle of our freedom struggle "NAVAYUGA" has been serving the nation by disseminating news and views without fear or favour. Rightly has it carved for itself a unique position in the field of Kannada journalism.

In Independent India, journals like "NAVAYUGA" perform a significant part in spreading the message of economic and industrial development among the people of the country. If democracy is to survive in India, it is necessary that a bridge of sympathy and understanding must be erected between the leaders on the one hand and the public on the other.

Successful salesmanship likewise depends on your goods and services being understood and their value appreciated by the consumer. The Republic Day Special of the "NAVAYUGA" is a fitting instrument to publicize your products in the wide countryside of Mysore State

Please permit us to serve you

ADVERTISEMENT RATES

Full Page	... Rs 200/-	Back Cover Page	...Rs 500/-
Half Page	... Rs 100/	Inside 1st Cover Page	...Rs 400/-
Quarter Page	.. Rs. 60/-	Inside 2nd Cover Page	..Rs. 300/-

MECHANICAL DATA

Paper size ... 15" × 1 Size of type page ... 13" × 8"
(37 5 Cm × 25 Cm) (32 5 Cm. × 20 Cm)

Date of Publication 25—1—1968

Kindly send the advertisement matter to reach us on or before 10—1—1968.

Advt. Manager.
Navayuga, Udipi.

ಚತುರ್ಥಶ್ರೇಯರಿಂದ ಕಾನೂನು ಭಂಗ

(ಐದನೇ ಪುಟದಿಂದ)

ಇಲ್ಲಿ ಅಸಫಲರಾದ ಮೇಲೆ, ಉಪ ಪ್ರಧಾನಿಯಾಗಿದ್ದ ಕಂಟ್ರೆ ಪಾರ್ಟಿಯ ನಾಯಕ ಜಾನ್ ಮೇಕೇವನ್ನರು ಹೊಸ ಪ್ರಧಾನಿಯೆಂದು ಪ್ರತಿಜ್ಞಾವಿಧಿ ಸ್ವೀಕರಿಸಿದರು. ಇಗರೊಂದಿಗೇನೇ ಶ್ರೇಮತಿ ಸಾರಾ ಹೋಲ್ಟರಿಗೆ ದಃಖಸೂಚಕ ಸಂದೇಶಗಳ ಹೊರೆಯೂ ಬರತೊಡಗಿತು.

ಶ್ರೀ ಹೋಲ್ಟರು ಮುಳುಗಿಹೋದ ಸಮುದ್ರ ಭಾಗದಲ್ಲಿ, ಅವರಿಗಾಗಿ ಶೋಧನೆ ನಡೆಸುತ್ತಿದ್ದ ಹಲಿಕಾಪ್ಟರು ಒಂದು ತಿಮಿಂಗಿಲವನ್ನು ಗುರುತಿಸಿರುವುದಾಗಿ ವರದಿ ಮಾಡಿದ. ಪ್ರಧಾನಿಯನ್ನು ಇದುವೇ ನುಂಗಿರುವ ಸಾಧ್ಯತೆ ಇದೆ. ಈ ಬಗ್ಗೆ ಆ ತಿಮಿಂಗಿಲವನ್ನು ಹಿಡಿದು, ಹರಿಶೋಧನೆಗೆ ಗುರಿಮಾಡುವುದು ಸಾಧ್ಯವಾದರೆ, ಸಂದೇಹ ನಿವಾರಣೆಯಾಗಬಹುದು. ಶ್ರೀ ಹೋಲ್ಟರ ದುರ್ಮರಣ ವಿಶ್ವದ ದುರಂತ ಚಿತ್ರಗಳಲ್ಲಿ ಒಂದು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O S. 334/1967

ವಾದಿಳು:- ಕೆ. ರತ್ನಾವತಿ ಸಡ್ತಿ.

ಪ್ರತಿವಾದಿ:- ಪಟೇಲ್ ಕೆ. ವಿಠಲಶೆಟ್ಟಿ, ಕೊಳ್ಕೆಬೈಲ್ ರಾಮಣ್ಣ ಶೆಟ್ಟಿ ಅಳಿಯ, ಹಾಲಿ ಕುಂದಾಪುರ ತಾಲ್ಲೂಕು ಡೊಲಿಡಗ್ರಾಮದ ಮುಯ್ಕಾಂಡ್ಲಿಯವನು—ಇವರಿಗೆ—

ಮೇಲ್ಕಂಡ ವಾದಿಗಳಿಗೆ ನೀವು ತಾ. 21.6.640ಲ್ಲಾ ಬರಸಿಕೊಟ್ಟ ದಿನಾಂಕ ನೋಟಿನ ಅನಲು, ಬಡ್ಡಿ ಕೂಡಾ ರೂ. 1897-00ನ್ನು ಬರವಾಡಿಯೊಳ್ಳುವರೇ ದಾಕಲು ಮಾಡಿದ ಮೇಲ್ಕಂಡ ದಾವಾ ಅಕ್ಕರೆ ಸಾರಿ ತನ್ನಾಗೆ ತಾ 19.1. 968ಕ್ಕೆ ಯಿಬ್ಬರೆ. ಈ ಕುಂತು ನಿಮ್ಮ ಅಪ್ಪೇಷಯಿಲ್ಲಿ ನೀವು ಸದ್ರಿ ದಿವಸ ಈ ಕೋರ್ಟ್ ಮುಂದೆ ಹಗಲು 11 ಗಂಟೆಗೆ ಸ್ವತಃ ಏ ಪ್ಲೀಡರ್ ಮೂಲಕ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು. ತಿಳಿದಿರಲಿ.

(By order of the Court)

G. Kushala Hegde,
B A, LL B.,
Advocate for Plff.

ಕುಂದಾಪುರ, 19.12.1967.

ಪಂಕುಸ್ಥಾಪನೆ

ಸುರತ್ಕಲ್— ಇಲ್ಲಿಯ ಗೋವಿಂದದಾಸ ವಿದ್ಯಾಸಂಯೋಜನೆ ಕಾಲೇಜಿನ ನೂತನ ಕಟ್ಟಡದ ಪಂಕುಸ್ಥಾಪನೆಯು ವಿದ್ಯಾದಾಯಿನೀ ಅವರಣದಲ್ಲಿ ತಾ ೧೭-೧೨-೧೯೬೭ರಂದು ಬೆಳಿಗ್ಗೆ ವಿದ್ಯುಕ್ತವಾದ ಸಂಗ ಸಮಾರಂಭದಲ್ಲಿ ಜರಿಗಿತು. ಪ್ರಾರಂಭದಲ್ಲಿ ಕಾಲೇಜಿನ ಆಡಳಿತ ಸಂಸ್ಥೆಯವರು, ಅಧ್ಯಾಪಕರು ಮತ್ತು ಇತರ ಊರ ಪರವೂರ ಗಣ್ಯರನ್ನು ಇಷ್ಟಕ್ಕೆ ಶ್ರೀ ಮಹಲಿಂಗೇಶ್ವರ ದೇವಳದಲ್ಲಿ ಪ್ರಾರ್ಥನೆ ನಡೆಸಿದ ದೇವರ ಪ್ರಸಾದದೊಂದಿಗೆ ಕಟ್ಟಡದ ಸ್ಥಳಕ್ಕೆ ಬಂದರು. ಸಂಘದ ಅಧ್ಯಕ್ಷ ಶ್ರೀ ಬಿ. ವಿ. ಕೃಷ್ಣಯ್ಯನವರು ಈ ಸುಸಮಯೋಚಿತ ಸಂಘಟನೆಗೈದವರು ಮಂಗಲವಾಚನ ಮತ್ತು ಫಲಹಾರ, ಸಿಹಿಕಿಡಿ ಹಂಚೋಣದೊಂದಿಗೆ ಸಮಾರಂಭವು ಕೊನೆಗೊಂಡಿತು.

ವರ್ಧಂತ್ಯುತ್ಸವ

ದೊಡ್ಡಬಾತಿ—ಇಲ್ಲಿಯ ಸಿದ್ಧಾಂತಶ್ರಮದಲ್ಲಿ ದಿನಾಂಕ ೧೫-೧೨-೬೭ರಂದು ಶ್ರೀ ಸಗ ಜ್ಯೋತಿ ಪರಮಹಂಸ ಸ್ವಾಮಿಜೀಯವರ ೪೫ನೇ ವರ್ಧಂತ್ಯುತ್ಸವವು ಶ್ರೀ ಡಿ. ಪಿ. ಜಿ. ತಾತಾವಾಲ್ಲಾ, ಬೊಂಬಾಯಿ, ಅವರ ಅಧ್ಯಕ್ಷತೆಯಲ್ಲಿ ವೈಭವಪೂರ್ಣವಾಗಿ ನೆರವೇರಿತು. ಪ್ರಾರಂಭದಲ್ಲಿ ಕುಮಾರಿ ಕೆ. ಎನ್. ವಸಂತಳಿಂದ ಪ್ರಾರ್ಥನೆ, ಶ್ರೀ ಜೆ. ಟಿ ದೇವೇಂದ್ರ ಅವರಿಂದ ಸ್ವಾಗತ ಭಾಷಣವಾದ ಬಳಿಕ, ಶ್ರೀ ಕೆ. ಎನ್. ಭಟ್ಟ ಶಿರಾಡಿಘಾಲ್, ಶ್ರೀ ಎಂ. ಮೋಹನರಾವ್, ಮಂಗಳೂರು, ಇವರುಗಳು ಭಾಷಣ ಮಾಡಿದರು. ಆಶ್ರಮದ ದಕ್ಷ ಸೇವಾ ಕರ್ತರಿಗೆ ಅಧ್ಯಕ್ಷರ ದಿವ್ಯಹಸ್ತದಿಂದ ಯಥೋಚಿತವಾದ ಬಿರುದುಮಾನಗಳನ್ನು ನೀಡಲಾಯಿತು. ಈ ವರ್ಧಂತ್ಯುತ್ಸವದ ಅಂಗವಾಗಿ ಶ್ರೀ ಎಚ್. ಅನಂತ ಹೆಬ್ಬಾರ್ (ಪೋಕಲ್) ಶ್ರೀ ಡಿ. ವಿಶ್ವನಾಥ ಘಾಟಕ್ (ವ್ಯಾಲಿನ್) ಶ್ರೀ ಎ. ರಾಮ ಭಟ್ (ಮೃದಂಗ) ಮತ್ತು ಶ್ರೀ ಶ್ರೀನಾಥ ಮಂಗಳೂರು ಅವರಿಂದ ಪಾಡುಗಾರಿಕೆ, ಇತ್ಯಾದಿ ಸಂಗೀತ ಕಛೇರಿ ನಡೆಯಿತು. ಇದಾದ ಬಳಿಕ ಶ್ರೀ ಎಂ. ಮೋಹನ ರಾವ್ ಮತ್ತು ಶ್ರೀ ಎಂ. ಸಿದ್ಧಾಥರ ರಾವ್, ಮಂಗಳೂರು ಇವರುಗಳಿಂದ ಹಿಂಗೂ ಶ್ರೀ ನಾರಾಯಣ ರಾವ್ ಮಿಂಚ್ಚಾರ್ ಮತ್ತು ಪಾರ್ಟಿ ಮೊದಲಾದವರಿಂದ ಉತ್ತರದಿ ಸಂಗೀತ ಹಾಗೂ ಭಜನೆ ಹೃದಯಸ್ಪರ್ಶಿಯಾಗಿ ನಡೆಯಿತು. ಸಾವಿರಾರು ಮಂದಿ ಬಡವರಿಗೆ ಅನ್ನದಾನ, ವಸ್ತ್ರದಾನ ಹಾಗೂ ಬಡಮಕ್ಕಳಿಗೆ ಊಟ, ಸಿಹಿ ಕಿಡಿ ವಿತರಣೆ ಇತ್ಯಾದಿಗಳಿಂದ ಈ ಸಮಾರಂಭವು ಸಂಭ್ರಮದೊಡನೆ ಸುಸಂಪನ್ನವಾಯಿತು.

ಸಾಂಸ್ಕೃತಿಕ ಚಟುವಟಿಕೆಗಳು

ಕಲ್ಯಾಣಪುರ—ಇಲ್ಲಿಯ ಮಿಲಾಗ್ರಿಸ್ ಕಾಲೇಜಿನಲ್ಲಿ ಇದೇ ದಶಂಬರ್ ತಿಂಗಳ ತಾ. ೧೦ರಂದು ಯು. ಜಿ ಯು. ಕೋಲೇಜಿನ ವೈವೃತ್ಯ ಸ್ಪಿನ್ನಿಷಾಲರಾದ ಯುಜ್. ಸುಂದರ ರಾಮಾರಾವ್ ಅಂಗ್ಲ ಭಾಷೆಯ ಕುರಿತಾಗಿ, ತಾ. ೧೪ರಂದು ಉಡುಪಿ ಆ ಕೋಲೇಜಿನ ಪ್ರಾಧ್ಯಾಪಕ ಅಮೀರ್ ಅಹಮ್ಮದರು "ಭಾರತದ ಭವಿಷ್ಯ" ಎಂಬುದರ ಕುರಿತಾಗಿ, ತಾ. ೧೫ರಂದು ಸಿಂಡಿಕೇಟ್ ಬ್ಯಾಂಕಿನ ಡಾ। ತಿಂಗಳಾಯರು "ಭಾರತದ ವೈನಸಾಯ ಸಮಸ್ಯೆ" ಯ ಕುರಿತಾಗಿ, ತಾ. ೧೬ರಂದು ಮಂಗಳೂರು ಸೈಂಟ್ ಅಲೋಸಿಯಸ್ ಕೋಲೇಜಿನ ಜರಿಕೆ ಪ್ರಾಧ್ಯಾಪಕರಾದ ಶ್ರೀ ಹೆಬ್ಬಾರರು "ಭಾರತದ ಇತಿಹಾಸದ ಘಟ್ಟಗಳು" ಎಂಬೀ ವಿಷಯದ ಕುರಿತೂ ಉಪನ್ಯಾಸಗಳನ್ನು ಮಾಡಿದರು. ಇವರೆಲ್ಲರೂ ಮೇಲೆ ಬರಿತಿರುವ ಕೋರೇಜಿನ ವಾತಾವರಣವನ್ನು ಮೆಚ್ಚಿ ಸಂಸ್ಥೆಯು ಅಭ್ಯುದಯವನ್ನು ಹೊಂದಲಿ ಎಂದು ಹರಸಿದರು.

ಅಂತ್ಯಕ್ರಿಯೆ

ಕಾಣಿಯಾಲ್ಬು, ಡಿ. ೧೮—ಮೊನ್ನೆ ಸಂಜೆ ಇಲ್ಲಿಗೆ ಸಮೀಪದಲ್ಲಿರುವ ಸುವರ್ಣಾ ನದಿಯಲ್ಲಿ ಆಕಸ್ಮಿಕವಾಗಿ ಮುಳುಗಿದ ಮುಡಿಪು ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಶ್ರೀ ಪಿ. ಸೀತಾರಾಮು ಶಾಸ್ತ್ರಿಯವರ ಅಂತ್ಯಕ್ರಿಯೆಯನ್ನು ಇಂದು ಸೈನ್ಯ ಠಾಣಾ ಎನ್. ಸಿ. ಸಿ. ಗೌರವಗಳೊಂದಿಗೆ ನಡೆಸಲಾಯಿತು.

ಸ್ಥಳೀಯ ಕಾಲೇಜು ಗಳ ಒಂದು ಸಾವಿರ ಕ್ಕೂ ಹೆಚ್ಚು ಶೋಕ ತಪ್ತ ವಿದ್ಯಾರ್ಥಿಗಳು ಶವದ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಎನ್ ಸಿ ಸಿಯ ಗ್ರೂಪ್ ಕಮಾಂಡರ್ ಅನಿಲ್ ಜೋಶಿ, ಉಡುಪಿಯ ಎ.ಎಸ್. ಪಿ. ಶ್ರೀ ಪಿ. ಕೆ. ರಾಮಯ್ಯ, ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಪಿ. ವೆಂಕಟ್ರಮಣ ಭಟ್ಟ ಮತ್ತಿತರ ಅಧಿಕಾರಿಗಳು ಅಂತ್ಯಕ್ರಿಯೆಯ ಸಂದರ್ಭದಲ್ಲಿ ಹಾಜರಿದ್ದರು.

೧೮ ವರ್ಷ ವಯಸ್ಸಿನ ಶ್ರೀ ಶಾಸ್ತ್ರಿ ಈ ವೈತ್ಯನಲ್ಲಿರುವ ಎರಿಕ್ಟ್ರಿಕಲ್ ಇಂಜಿನಿಯರಿಂಗ್ ಶ್ರೀ ಪಿ. ಯು. ಶಾಸ್ತ್ರಿಯವರ ಪುತ್ರರಾಗಿದ್ದರು.

ಹೊಸ ಗಾಳಿಗ

"ಡಾಕ್ಟರ್! ಹಸಿವೆಯಾಗದಂತಹ ಮಾತ್ರೆಗಳನ್ನು ಇತ್ತೀಚೆಗೆ ಯಾರೋ ಕಂಡು ಹಿಡಿದುದಾಗಿ ಪತ್ರಿಕಾ ವರದಿ ನೋಡಿದೆ. ಈಗಿನಂತಹ ಕಷ್ಟಮಯ ಕಾಲದಲ್ಲಿ ಈ ಸಂಶೋಧನೆಯು ಮಾನವ ಕೋಟಿಗೇ ಒಂದು ಅನುಗ್ರಹ....ಅದನ್ನು ಉಪಯೋಗಿಸುವ ವಿಧಾನ?...."

"ದನಕ್ಕೆ ನಾಲ್ಕೈದು ಬಾರಿ ಊಟ ಆಥವಾ ಫಲಾಹಾರವಾದೀತು"

—ಎಸ್. ಎಂ. ನಿಜವುನಾರಾಯಣ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 635/1967

ವಾದಿ: — ಮುತ್ತಯ್ಯ ಶೆಟ್ಟಿ.

ಪ್ರತಿವಾದಿರು:- ರಾಮಯ್ಯ ಶೆಟ್ಟಿ ಕೂಡಾ.

ಸದ್ರಿ ದಾವೆಯ ಪ್ರತಿವಾದಿರು—

1. ರಾಮಯ್ಯ ಶೆಟ್ಟಿ, 2. ಮಹಾಬಲ ಶೆಟ್ಟಿ —ಮೇಲಂಕಲ್ಲು ನಾಗಮ್ಮ ಸೆಟ್ಟಿರ ಮಕ್ಕಳು, ಕುಂದಾಪುರ ತಾಲ್ಲೂ ಹೊಸೂರು ಗ್ರಾಮ—ಇವರಿಗೆ—

ಮೇಲ್ಕಂಡ ವಾದಿಗೆ ನೀವು ತಾ 22-9-58ರಲ್ಲಿ ಬರಸಿಕೊಟ್ಟ ದಿನಾಂಕ ನೋಟಿನ ಬಾಬ್ತು ಬಾಕಿ ಸಲ್ಲತಕ್ಕ ಅನಲು ಬಡ್ಡಿ ಕೂಡಾ ರೂ. 372 68ನ್ನು ಬರವಾಡಿ ಕೊಳ್ಳುವರೇ ದಾಖಲು ಮಾಡಿದ ಮೇಲ್ಕಂಡ ದಾವಾ ಅಕ್ಕರೆ ಸಾರಿ ತನ್ನಾಗೆ ತಾ 8-1-1968 ಕ್ಕೆ ಯಿಟ್ಟಿದ ಈ ಕುಂತು ನಿಮ್ಮ ಅಪ್ಪೇಷಯಿರುವ್ದಲ್ಲಿ ನೀವು ಸದ್ರಿ ದಿವಸ ಈ ಕೋರ್ಟು ಮುಂದೆ ಹಗಲು 11 ಗಂಟೆಗೆ ಸ್ವತಃ ಏ ಪ್ಲೀಡರ್ ಮೂಲಕ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು. ತಿಳಿದಿರಲಿ.

G. Kushala Hegde,
B A, LL. B,
Advocate for Plff.

ಕುಂದಾಪುರ, 19.12.1967.



ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ರೇವಣಾತಿಗಳ ಮೇಲೆ 3% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಶಿ

ಏ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—೫

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ

ಹೊಟೆಲ್ ತಿಪ್ಪ ಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ರುಚಿ-ರುಚಿಯಾದ ಭೋಜನ, ಗರಿಷ್ಠ ಏಥದ ಕಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಸಹನೆಯ ಬೀಜ ಸಮೂಧಾನ

(ನಾಳ್ಕನೇ ಪುಟದಿಂದ)

ನತೆ ಬರುತ್ತದೆ. ಅಲ್ಲಿಗ ನಾವು, ಹೆಚ್ಚು, ಕಡಮೆಯೆಂಬ ಭೇದ ಅಳಿಸಿ ಹೋಗುತ್ತದೆ. ಇಲ್ಲವೂ ಅಧಿಕೃತ ಭಾಷೆಯ ಸ್ಥಾನ ಪಡೆಯುತ್ತವೆ. ಮತ್ತೆ ಪ್ರದರ್ಶನ—ಉಪವಾಸ—ಬಲಿದಾನ ಯಾವುದೂ ಇಲ್ಲ...'

"ಅದು ಸರೀನ್ನು. ನಿನ್ನ ಅಧ್ಯಕ್ಷತೇಲಿ ಒಂದು ಏಕ ಸದಸ್ಯ ಆಯೋಗ ರಚಿಸಿದರೆ ವಿವಾದ ಪರಿಹಾರವಾದೀತು. ಆದರೆ...."

"ಏನು?"

ಕುಂದಾಪುರ
ಮುನ್ಸಿಫ್ ಕೋರ್ಟಿನಲ್ಲಿ
O. S. No. 419/1967.

ವಾದಿ— ಶ್ರೀನಿವಾಸ ಪ್ರಭು.

ಪ್ರತಿವಾದಿ— ಕುಬ್ಪ.

ಸದ್ರಿ ವಾದಿಯು ಪ್ರತಿವಾದಿ ಕುಬ್ಪ, ಜಾಜ ಬೆಟ್ಟು ದುರ್ಗಿ ಹೆಂಗ್ಸಿನ ಮಗ, ಕುಂದಾಪುರ ತಾಲ್ಲೂ ತೆಂಕನಾಲಿ ಗ್ರಾಮ...ಇವರಿಗೆ.

ನೀವು ಪ್ರತಿವಾದಿಯಾಗಿ, ವಾದಿಗೆ ತಾರೀಕು 18-6-1965ರಲ್ಲಿ ರೂ. 600-00 ಕ್ಕೆ ಬರೆಕೊಟ್ಟ ಡಿಮಾಂಡ್ ನೋಟಿನ ಶ್ರಕಾರ ಬರಕಕ್ಕೆ ಅನಲು ಬಡ್ಡಿ ಹಣ ರೂ 675-00 ನ ನಂತ್ರದ ಬಡ್ಡಿ, ಕೋರ್ಟ್‌ಖರ್ಚು ವಗೈರೆಬಗ್ಗೆ ನಿಮ್ಮ ಮೇಲೆ ಹಾಡಿದ ಮೇಲ್ಕಂಡ ದಾವೆಯು ನಿಂವು ಹಾಜರಾತಿಯ ಬಗ್ಗೆ ತಾರೀಕು 3-1-1968ಕ್ಕೆ ಅಪ್ಪೆರೆ ಸಾಗಿ ತನ್ನಿಗೆ ಯಿಡೋದ್ರಾಗಿರುವುದು. ಈ ಕೋರ್ಟು ನಿಂವು ಅಪ್ಪೇಕ್ಷ ಇದ್ದಲ್ಲಿ ಸದ್ರಿ ತಾರೀಕಿನ ದಿವಸ ಪಗಲು 11 ಗಂಟೆಗೆ ಈ ಕೋರ್ಟು ಮುಂದೆ ಯಾಜ್ತಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)
K. Vittaldas Shenai,
Advocate.
ಕುಂದಾಪುರ, ತಾ. 19-12-1967.

'ಪ ಪಾ ಡನರೆ ವರದಿಯಂತೆಯೇ ಅದನ್ನೆ ಮೂಲೆಗೆ ಸರಿಯ ಬೇಕಾದ ಸಂದರ್ಭ ಬರುತ್ತೆಯೆ? ಆಂತ....'

"ರೂಕೆ?

"ಮೊಗಲಾಗಿ ಯಾವ ಭಾಷೆಯಲ್ಲಿ ವರದಿ ಬರಬೇಕು?'

"ಇಂಗ್ಲಿಷಿನಲ್ಲಿ..."

"ಅದನ್ನು ಹಿಂದೀವಾದಿಗಳು ಸುಟ್ಟು ಹಾಕಿದರೆ?"

'ಹಿಂದಿಯಲ್ಲೂ ಬರೆಯೋಣ...."

"ತಮಿಳು ವಿದ್ಯಾರ್ಥಿಗಳು ನಿನ್ನ ಸುಮ್ಮನೆ ಬಿಡುತ್ತಾರೆಯೆ?

'ಓ....ಸರೀನ್ನಿ ಯಾವುದಕ್ಕೂ ಆಯೋಗ ರಚಿಸೋಣಗಬೇಕಲ್ಲಾ....'

'ಆಯ್ತು, ಎಲ್ಲಾ ಭಾಷೆಗಳನ್ನೂ ವರದಿ ಒಪ್ಪಿಸಬಹುದೆನ್ನು ಆಗ, ಹಿಂದೀವಾದಿಗಳು ಸುರು ಮಾಡ್ತಾರೆ—ಹೊಸ ಚಳವಳ...."

"ಏನು?"

'ಈಗ ಮಹಾರಾಷ್ಟ್ರೀಯರು ಮಾಡುತ್ತಿದ್ದಿಲ್ಲವೆ?"

"ಏಂಥದು?'

'ಏಕ ಸದಸ್ಯ ವರದಿಯಿಂದ ನಮಗೆ ಅನ್ಯಾಯವಾಗಿದೆ. ಅದುದರಿಂದ ರಾಷ್ಟ್ರೀಯ ಅಭಿಪ್ರಾಯ ಹಡೆಯಬೇಕು, ಜನಸಾಗಣನೆ ಆಗಬೇಕು...."

"ನಡೆಯುಲಿ, ಯಾರು ಬೇಡಾಂತಾರೆ?'

"ರಾಷ್ಟ್ರೀಯ ಅಭಿಪ್ರಾಯಕ್ಕೆ ವಿರೋಧಿ ಪ್ಪಿದವರನ್ನು ಕರೆದರೆ, ಅಲ್ಲಿ ಬಹು ತ ವಾಗಿ ವಿರುದ್ಧವೇ ಬೀಳುತ್ತದೆ, ಹಿಚ್ಚಿನ ರಾಜಕೀಯ ಪಕ್ಷಗಳ ಅಭಿಪ್ರಾಯ ಕೂಡ ಇಂಥ ಸಂದರ್ಭದಲ್ಲಿ ಹಿಂದಿಯೇ ಆದ್ಯತ ಪಡಯಗಳಿ-ಎತ್ತದ. ನಮ್ಮೆ ವರದಿ ಮೂಲ ಪಾಲಾಗದೆ ಇರುತ್ತಿದೆಯೆ?'

"ಓ.....ಸಾಗೆ ...ಇದಕ್ಕೆ ಪರಿಹಾರವೇ ಇಲ್ಲವೆ?"

"ಇಲ್ಲವೆಂದೇನು? ಆದರೆ, ಭಾರತೀಯರು ಬಂಗಾಳದವರಂತೆ ಗಟ್ಟಿಗ, ದೊಂಬಿ ಎಬ್ಬಿಸುವುದನ್ನೇ ಫೋನೋದ್ದೇಶ ವಾಗಿಟ್ಟು ಕೊಂಡಿರುವವರೆಗೆ ನಮಗೆ ಪರಿಹಾರವೂ ಇಲ್ಲ. ತಾರಣವೂ ಇಲ್ಲ...."

'ಅಂದ್ರೆ, ರಾಷ್ಟ್ರೀಯ ಏಕೀಕರಣವೆಂಬುದು ಸಂಕುಚಿತತೆಯಿಂದ ದೂರವಿರಬೇಕ್ಕು. ದೊಡ್ಡ ಗಂದಾಂತರವನ್ನು ಹಡೆಯಲು ನಡೆಯ ಬಹುದಾದ ಪುಟ್ಟ ಅನ್ಯಾಯವನ್ನು ಸಹಿಸಬೇಕು. ಈ ಸಹನೆ ಇಂದು ಅಸಹನೆಯಾಗಿದೆ. ಭಾರತೀಯ ಸಹನತೆಯೇ ಅಸಹಕ್ಷೀಯ ಅಸಹನೆಯಿಂದ ತಂಬಿದೆ ..."

'ಅದು ಹೌದ್ರಿ.....ಇದಕ್ಕೆ?"

"ಇದಕ್ಕೇನು? ಯೋಜಿಸುತ್ತ ಕುಳಿತರೆ ಕಾರ್ಯವಾಗುವುದಿಲ್ಲ. ಕಾರ್ಯ ಕ್ಷ ತ್ಪರ ವಾಗಬೇಕು; ದುಡಿಯ ಬೇಕು..."

"ಅದು ಸರೀನ್ನಿ....ಆದರೆ ಹೇಗೇಂತಃ?"

"ಕಾಲವೇ ಅನಕ ರವನ್ನು ತಂದು ಕೊಡುತ್ತದೆ...."

'ಇನು ಸಮೂಧಾನ ವೂಕ್ಕ....."

'ಈ ಸಮೂಧಾನವೇ ಸಹನೆ ಯ ಬೀಜ ತಾನೆ?'

"ಹ್ಞೂಂ..."

'ಏನು?...ಏನಾಯಿತು?"

"...ಏನೂ ಇಲ್ಲಾನ್ನಿ. ಈ ಬಗೆಯ ಸಮೂಧಾನದಿಂದ ಇರುವುದಕ್ಕೂ ಒಂದು ಮಿತಿಯಿದ್ದೇ ಇದೆ!'

"ಹಾದು...ಆದರೆ,ಆ ಮಿತಿಯು ನಂತರವೂ ಸಮೂಧಾನದಿಂದಿರಬೇಕು. ಆಗಲೇ ಕಸದಲ್ಲಿಯೂ ರಸ ಕಾಣಬಹುದು; ದೇಶ ಉನ್ನತವಾಗಬಹುದು...'

'ಹ್ಞೂಂ.....ಕೈಲಾಗದವ ಮತ್ತೇನು ಮಾಡಿಯಾನು?'

"ನೋಡು, ಹಾಗೆಲ್ಲಾ ಬೇಸರಿಸಿಕೊಳ್ಳ ಬಾರದು. ನಾವು ಕೈಲಾದಷ್ಟಲ್ಲಾ ಮಾನವ ಪ್ರಯತ್ನಗಳನ್ನು ಮಾಡಬೇಕು; ಫಲ ಫೀಡುವವ ಭಗವಂತ ತಾನೆ? ಎಲ್ಲಿ, ಒನ್ಮ್ಮೆ...ಹ್ಞೂಂ ಹಾಗೆ....ಹಾಗೆ...'

"ಛೆ, ನಾಕು ಬಿಡೀಂದ್ರೆ...."

"ಯಾಕೇಂತಃ?"

"ಯಾಕೂ ಇಲ್ಲ..."

'ಹಾಗೆ...ಬಾ...'

—ಗೋರಾ

ನೆನಪಿರಲಿ

ನಿಮ್ಮ ರೇಡಿಯೋ ಲೈಸನ್ಸನ್ನು ನವೀಕರಿಸಬೇಕಾದ ಸಮಯವಿದು

- ತಡ ಮಾಡಿದಲ್ಲಿ ಪೋಸ್ಟ್ ಆಫೀಸಿನಲ್ಲಿ ಗಂಟೆಗಟ್ಟಲೆ ಕಾಯಬೇಕಾಗುವುದು.
- ಜನವರಿ 31ರ ನಂತರ ನವೀಕರಿಸಿದಲ್ಲಿ ದಂಡ ಕೊಡಬೇಕಾಗುವುದು.

ನಿಮ್ಮ ರೇಡಿಯೋ ಲೈಸನ್ಸನ್ನು ಮೂರರಿಂದ ಐದು ವರ್ಷದ ವರೆಗಿನ ಅವಧಿಗೆ ನವೀಕರಿಸಿದಲ್ಲಿ ರಿಯಾಯಿತಿ ಕೊಡಲಾಗುತ್ತದೆ.

ನೀವು ಬೇರೊಂದು ಊರಿಗೆ ವರ್ಗಾವಣೆ ಹೊಂದಿದ್ದಲ್ಲಿ, ನಿಮ್ಮ ಲೈಸನ್ಸನ್ನು ಈಗಲೇ ಅಲ್ಲಿಗೆ ವರ್ಗಾಯಿಸಿಕೊಳ್ಳಿರಿ. ಆ ಮೇಲೆ ಅದನ್ನು ನವೀಕರಿಸಿರಿ.

ಭಾರತೀಯ ಅಂಚೆ ಮತ್ತು ತಂತಿ ಇಲಾಖೆ.

DA 67/349

ಇದೀಗಲೇ ಹೊಸತಾಗಿ ತೆರೆಯಲ್ಪಟ್ಟಿದೆ.

ನೇತ್ರ ರಕ್ಷಣೆಗಾಗಿ— ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ
ಅತ್ಯಾಧುನಿಕ ಆಕರ್ಷಣ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)

Phone 261148

The only Qualified optometrist of South

Shetty's Optics & Contact Lens Clinic

London Qualified Optometrists

೭ ಈ'ಗೆನ್ಸ್ ಬೋಸ್ಟ್ರೀಟ್, ಬಾಕ್ಬೂರ್ ಗೇಟ್ ಪೋಸ್ಟ್ ಆಫೀಸಿನ ಎದುರು

ಬೊಂಬಾಯಿ - ೧.

ಲಂಡನ್ ತಂಜೇತಾದ ಹಾಗೂ ಜಗದ್ವ್ಯಾಪಿ ಅನುಭವಗಳ ನೇತ್ರ ತಜ್ಞರಿಂದ ನೇತ್ರ ಪರೀಕ್ಷೆ.

ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು.

ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವರಿನ ೧೪ ಅದೃಶ್ಯ ಭಾಗಗಳಿರುವ 'ಬೈಲೆಕ್ಸ್ ಲೆನ್ಸ್'ನ ತಜ್ಞರು.

Ask for

AZAD

nitbit

BISCUITS

Azad Industries, Mangalore-1

(ಮೂರನೇ ಪುಟದಿಂದ)

ರಿಂದಲೇ ಎಲ್ಲರೂ ಇವರ ಉನ್ನೋಗವಾ ರಿಕೆಯಿಂದ ಸೃಪ್ತರಾದರು. ಜನವರಿ ಪೂ ರ್ವಾರ್ಧದಲ್ಲಿ ಹೈದರಾಬಾದಿನಲ್ಲಿ ನಡೆಯ ಲಿರುವ ಕಾಂಗ್ರೆಸ್ ಅಧಿವೇಶನದಲ್ಲಿ ಶ್ರೀ ನಿಜಲಿಂಗಪ್ಪನವರು ಶ್ರೀ ಕಾಮರಾಜರಿಂ ದ ಅಧಿಕಾರ ಸ್ವೀಕರಿಸುವ ನಿರೀಕ್ಷೆಯಿದೆ. ಅದರೂ ಕೆಲವು ಕಾಲ ಅವರು ರಾಜ್ಯದ ಮುಖ್ಯಮಂತ್ರಿಯಾಗಿಯೂ ಮುಂದುವ ರಿಯುವ ಸಂಭವವೇ ಹೆಚ್ಚು.

ಶ್ರೀ ನಿಜಲಿಂಗಪ್ಪನವರದು ತೆರೆದ ಹೃ ದಯ; ಬಿಚ್ಚು ಮನಸ್ಸು. ಕಾಂಗ್ರೆಸ್ ಪಕ್ಷ ಕಟ್ಟುವಲ್ಲಿ, ಅದನ್ನು ಬೆಳೆಯಿಸುವ ಲ್ಲಿ ಅವರ ಜೀವನದ ಬಹುಭಾಗ ಕಳೆದಿ ದೆ. ಕರ್ನಾಟಕ ರಾಜ್ಯದ ಪ್ರಥಮ ಮು ಖ್ಯಮಂತ್ರಿಯಾದ ಇವರು ಆಗ ರಾಜ್ಯ ಕಾಂಗ್ರೆಸ್ಸಿನ ಗುಂಪುಗಾರಿಕೆಯ ಮನೋ ಭಾವನೆಯಿಂದ ತುಂಬ ನೊಂದಿದ್ದರು. ಆದರೆ, ಕ್ರಮೇಣ ಅವರು ಅತ್ಯಿತ್ಸ ಎಳೆ ದಾಡುತಿದ್ದ ರಾಜ್ಯಕಾಂಗ್ರೆಸ್ಸಿನಲ್ಲಿ ಏಕತೆ ಯನ್ನು ಸಾಧಿಸಿಯೇ ಸಾಧಿಸಿದರು. ಪ್ರಾ ದೇಶಿಕ ಕಾಂಗ್ರೆಸ್‌ನಲ್ಲೂ ಇವರ ಸಂಘ ಟನಾ ಪ್ರಿಯತೆಯು ವ್ಯಕ್ತವಾಗಿತ್ತು, ಸ ಫಲವಾಗಿತ್ತು. ಕರ್ನಾಟಕ–ಮಹಾರಾ ಷ್ಟ್ರ ಸೀಮಾ ವಿವಾದದಲ್ಲಿ ಮಹಾಜನ ಆಯೋಗ ವರದಿಗೆ ಬಲವಾಗಿ ಅಂಟಿ ಕೊಂಡ ಇವರ ನಿಲುಮೆ ಎಂದಿಗೂ ಬದ ಲಾಗದು. ಹಲವಾರು ಕಾರಣಗಳಿಂದ ದೇಶದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಶಿಥಿಲವಾಗಿರುವ ಇಂದಿನ ದಿನಗಳಲ್ಲಿ ಸಂ ಘಟನಾ ಪ್ರಿಯರೂ ಅಜಾತ ಶತ್ರುಗಳೂ ಆದ ಶ್ರೀ ನಿಜಲಿಂಗಪ್ಪನವರ ಒಮ್ಮತದ ಆಯ್ಕೆಯಲ್ಲಿ ಸಫಲತೆ ಲಭಿಸಿದಂತೆಯೇ ಅವರು ಪಕ್ಷದಲ್ಲಿ ಒಮ್ಮತ ಮೂಡಿಸುವು ದರಲ್ಲಿಯೂ ಸಫಲವಾಗಲಿ; ಪಕ್ಷದ ಸಂ ವರ್ಧನೆ—ಏಕರ್ಷಣೆ— ಕಾರ್ಯ ತತ್ಪರ ತೆ ನಿಷ್ಠೆಗಳು ದ್ವಿಗುಣವಾಗಲಿ.

ಕುಂದಾಪುರ
ಮುನ್ಸಿಫ್ ಕೋರ್ಟಿನಲ್ಲಿ

R.E.P. 646/1966
S. C. 118/1953

ಸೂರು ಸೆಡ್ತಿ ಕೂಡಾ — ಅರ್ಜಿದಾರರು.
ಕಮಲ ಸೇರೆಗಾರ್ತಿ — ಎದ್ರಿರು.

ಸದ್ರಿ ಎದ್ರಿಳು: ಕಮಲ ಸೇರೆಗಾರ್ತಿ, ನಾರಾಯಣ ಸೇರೆಗಾರರ ಹೆಂಡತಿ, ಕುಂದಾ ಪುರ ತಾಲ್ಲು ಪಡುವರಿ ಗ್ರಾಮ—ಇವರಿಗೆ,

ಮೇಲ್ಕಂಡ ಅಮಲ್ದಾರಿಯಲ್ಲಿ ಅರ್ಜಿದಾ ರರು ನಿಮ್ಮ ಬಾಬ್ತು ಸ್ಥಿರ ಆಸ್ತಿಯನ್ನು ಯೇ ಲಂಪಿಗೆ ಅಪೇಕ್ಷಿಸಿ ದಾಖಲು ಮಾಡಿದ ಯಿಸ್ತಿ ಹಾರಿನ ಶರತ್ತಿಗಳ ನಿರ್ಣಯದ ಬಗ್ಗೆ ಇದೇ ತಾರೀಕು 30.1.1968ಕ್ಕೆ ಯಿಟ್ಟರ್ತದೆ. ಈ ಕುಂದು ಕಮ್ಮ ಅಜ್ಞೇಪಣೆಯಿರುವಲ್ಲಿ ಸದ್ರಿ ದಿವಸ ಈ ಕೋರ್ಟು ಮುಂದೆ ಬಗಲು 11 ಗಂಟೆಗೆ ನೀವು ಸ್ವತಹ ವ ಪ್ಲೀಡರ್ ಮೂಲಕ ಹಾಜರಾಗಿ ಜ್ಯಾಹೀರು ಮಾಡಿ ಕೊಳ್ಳತಕ್ಕದ್ದು. ತಪ್ಪಿದಲ್ಲಿ ಮುಂದಿನ ಹು ಕುಂ ಕೊಡಲಾಗುತ್ತದೆಂದೆ ನಿಮಗೆ ಈ ನೂ ಟಿಸ ತಿಳಿಯಪಡಿಸಿರುತ್ತೆ.

(By order of the Court)
G. KUSHALA HEGDE,
B. A., LL. B.,
Advocate for Pet.

Coondapoor, 22-12-1967.

ಪಾ। ಕೆ. ನಾಗಪ್ಪ ಆಳ್ವರು

ತಾ. 22-12-67ರಂದು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟ ದ್ದಾರೆ.

ಕೆನ್ನಿಗೋಳಿಯಲ್ಲಿ ಪಶು ಪ್ರದರ್ಶನ

ಇದೇ ತಾ। ೧೫ರಂದು ಕೆನ್ನಿಗೋಳಿಯ ಹಾಲು ಉತ್ಪಾದಕರ ಸಹಕಾರ ಸಂಘದ ನೇ ತೃತ್ವದಲ್ಲಿ ಡಾ| ಆರ್. ಎಫ್. ಪಾಟೀಲ್ ಇ ವರ ಅಧ್ಯಕ್ಷತೆಯಲ್ಲಿ ಪಶುಪ್ರದರ್ಶನವೊಂದು ಸಂಭ್ರಮದಿಂದ ನೆರವೇರಿತು.

ಶ್ರೀ ರಾಮಪ್ಪನವರಿಂದ ಪ್ರಾರ್ಥನೆಯಾದ ಬಳಿಕ ಸಂಘದ ಅಧ್ಯಕ್ಷ ಡಾ। ಸಂಜೀವನಾಥ ಐಕಳರು ಸ್ವಾಗತಿಸಿ ದರು. ಕಾರ್ಯದರ್ಶಿ ಶ್ರೀ ಕೆ. ಅನಂತ ಪದ್ಮನಾಭ ಉಡುಪರು ಸಂಘದ ಪ್ರಗತಿಪರ ವರದಿಯೊಪ್ಪಿಸುತ್ತಾ ಸಂಘವು ಸದ್ಯದಲ್ಲಿ ಆ ದರ್ಶ ಗೋಶಾಲೆಯೊಂದನ್ನು ತೆರೆಯಲಿದೆ ಯೆಂದರು.

ಶ್ರೀ ಎಸ್. ಧರ್ಮಸಾಮ್ರಾಜ್ಯರು ಉದ್ಘಾ ಟನಾ ಭಾಷಣದಲ್ಲಿ ಸಂಘದ ಆಪೂರ್ವ ಪ್ರಗ ತಿಯನ್ನು ಪ್ರಶಂಸಿಸಿದರಲ್ಲದೆ ಗೋಸಂಪತ್ತಿನ ಮಹತ್ವವನ್ನು ವಿವರಿಸಿದರು ಶ್ರೀ ಕೆ. ಎನ್. ಮಲ್ಯರು ಶುಭಸಂದೇಶಗಳ ವಾಚನ ಗೈದರು.

ಶ್ರೀ ಪ್ರೇಮಾನಾಥ ಆಳ್ವರು ಕೋಳಿ ಸಾಕ ಣೆಯ ಮಹತ್ವದ ಕುರಿತು ಉಪನ್ಯಾಸವಿತ್ತರು.

ಅಧ್ಯಕ್ಷ ಶ್ರೀ ಪಾಟೀಲರು ಬಹುಮಾನ ವಿತರಣೆಗೈದು, ತಮ್ಮ ಭಾಷಣದಲ್ಲಿ ಮಾನ ವನ ಜೀವನಾವಶ್ಯಕವಾದ ಹಾಲನ್ನು ಕೊಡು ವ ಪಶುಗಳನ್ನು ಕಟ್ಟುವ ಜಾಗದ ವಿಷಯ ಹಾಗೂ ಒಳ್ಳೆಯ ಜಾತಿಯ ಹುಲ್ಲಿನ ಬೆಳೆ ಸುವ ವಿಷಯಗಳನ್ನು ವಿವರಿಸಿದರು.

ಬಳಿಕ ಮನರಂಜನಾ ಕಾರ್ಯಕ್ರಮಗಳಾ ದುವು.

ಕಟೀಲಿನಲ್ಲಿ ಶ್ರೀ ಪೇಜಾವರ ಸ್ವಾಮಿಗಳು

ಬರುವ ತಿಂಗಳಲ್ಲಿ ಪರ್ಯಾಯ ಸೀರೆಯನ್ನು ಅಲಂಕರಿಸಲಿರುವ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಇದೇ ತಾ. ೧೪ರಂದು ಕಟೀಲಿಗೆ ಚಿತ್ತೈಸಿದರು. ಪಾದ್ಯಪೂಜೆಗಳ ಮೂಲಕ ಶ್ರೀಗಳವರನ್ನು ಸ್ವಾಗತಿಸಿದ ಬಳಿಕ ನೆರವೇರಿದ ಸಮಾರಂಭ ದಲ್ಲಿ ಶ್ರೀ ಕೋ. ಅ. ಉಡುಪರು ಶ್ರೀಗಳವರ ಹಿರಿಮೆಯನ್ನು ವಿವರಿಸಿದರು.

ಶ್ರೀಗಳವರು ಪ್ರಭಾಷಣದಲ್ಲಿ ಯುತ್ತಾ ಸಜ್ಜನ ಭಕ್ತವೃಂದವುಳ್ಳ ಪವಿತ್ರ ಕ್ಷೇತ್ರಗಳಲ್ಲಿ ಭಗ ವಂತನ ಸಾನಿಧ್ಯ ಇರುವುದೆಂದರು. ಕಟೀಲು ಶ್ರೀ ದುರ್ಗಾಪರಮೇಶ್ವರಿಯು ದುರ್ಜನರಿಗೆ ಹೇಗೆ ದುರ್ಗೆಯಾಗಿರುವಳೋ, ಹಾಗೆ ಸಜ್ಜ ನರಿಗೆ ಅಭಯದಾತೆಯಾಗಿ ನಾಡನ್ನು ಹರಸು ತ್ತಿರುವಳೆಂದರು. ಅಲ್ಲದೆ ತಾನು ಬರುವ ಎರಡು ವರ್ಷಗಳಲ್ಲಿ ಪರ್ಯಾಯ ಪೀಠದಲ್ಲಿರು ವುದಾಗಿಯೂ ಸಾರ್ವಜನಿಕ ಭಕ್ತರೆಲ್ಲರೂ ಶ್ರೀ ಕೃಷ್ಣನ ದರ್ಶನಕ್ಕೆಯೆ ಅತನ ಅನುಗ್ರಹಕ್ಕೆ ಪಾತ್ರರಾಗಬೇಕೆಂದೂ ಹರಸಿದರು.

ಮಣಿಪಾಲದಲ್ಲಿ ಪ್ರದರ್ಶನ

ಮಣಿಪಾಲದ ನೆಹರು ಸ್ಮಾರಕ ಪುಸ್ತಕಾ ಲಯದಲ್ಲಿ "ಖಗಿಗಾಗಿ ಶೋಧ"ವೆಂಬ ಪ್ರದ ರ್ಶನವು ದಶಂಬರ ೩೦ರಂದು ಸಂಜೆ ಆರು ತಾಸಿಗೆ ಉದ್ಘಾಟಿತವಾಗುವುದು. ಭಾರ ತೀಯ ಜನತೆಯ ಲಕ್ಷ್ಯವನ್ನು ಪ್ರಮುಖ ಜಾಗತಿಕ ಸಮಸ್ಯೆಯಾದ ನೀರಾಶ್ರಯಗಳನ್ನು ಸರಿಯಾಗಿ ನೋಡಿಕೊಳ್ಳುವತ್ತ ಹರಿಸುವುದು ಇದರ ಉದ್ದೇಶ. ಸರಿಯಾದ ಯೋಜನೆ, ವೈಜ್ಞಾನಿಕ ಮತ್ತು ತಾಂತ್ರಿಕ ಪರಿಜ್ಞಾನಾದಿ ಗಳಿಂದ ಜಲಾಶಯಗಳನ್ನು ಉಳಿಸಿ, ನೀರಿನ ಜಾಗರಿತ ಬೇಡಿಕೆಯನ್ನು ಹೇಗೆ ಪೂರೈಸಾ ಬುದು ಸಾಧ್ಯವೆಂಬುದನ್ನು ಇಲ್ಲಿನ ಪ್ರದರ್ಶಿಕೆ ಗಳು ತೋರಿಸುವುವು.

ಇದೇ ಬಗೆಯಪ್ರದರ್ಶನವೊಂದನ್ನು ಅಮೆ ರಿಕನ್ ಸಾಂಸ್ಕೃತಿಕ ಕೇಂದ್ರವು ದಶಂಬರ ೧೮ರಿಂದ ೨೪ರ ತನಕ ಬೆಂಗಳೂರಿನಲ್ಲಿ ಏರ್ಪ ಡಿಸಿತ್ತು. ಮಣಿಪಾಲದ ಪ್ರದರ್ಶನವು ಅಮೆ ರಿಕನ್ ಸಾಂಸ್ಕೃತಿಕ ಕೇಂದ್ರ ಮತ್ತು ಎಕೆ ಡೆಮಿ ಆಫ್ ಜನರಲ್ ಎಜುಕೇಶನ್‌ಗಳ ಸಂ ಯುಕ್ತ ಆಶ್ರಯದಲ್ಲಿ ನಡೆಯುತ್ತದೆ.

ಮೈಸೂರಲ್ಲಿ ತುಳು ನಾಟಕಗಳು

ದಕ್ಷಿಣ ಕನ್ನಡ ಜಿಲ್ಲೆಯ ಗಡಿಕೇಶ ನಾಟಕ ಸಭಾದವರು ಮೈಸೂರು ನಗರದ ರಂಗಾ ಚಾರ್ಲು ಸ್ಮಾರಕ ಭವನದಲ್ಲಿ ಇದೇ ೧೫ ಮತ್ತು ೧೬ರಂದು "ತಮ್ಮಲೆ ಅರ್ತ್ತನ ಕೋಲ" ಮತ್ತು "ಏರ್ ಮಲ್ರಿನ ತಪ್ಪುಲ್" ಎಂಬ ಎರಡು ತುಳು ನಾಟಕಗಳನ್ನು ಯಶ ಸ್ವಿಯಾಗಿ ಅಭಿನಯಿಸಿದರು.

ಮೊದಲನೆ ದಿನದ ನಾಟಕಕ್ಕೆ ವಿಜಯ ಪತ್ರಿಕೆಯ ಸಂಪಾದಕರಾದ ಶ್ರೀ ಎ. ರಾ ಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಸಿನೇ ಮ ನಿರ್ದೇಶಕ ನಿರ್ಮಾಪಕ ಶ್ರೀ ಹಾಸ್ಯಸಾಮ್ರ ಟ್ ಕೃಷ್ಣಮೂರ್ತಿ ಮತ್ತು ಶ್ರೀ ಕೆ. ಪಿ. ಜಂ ಬು ರಾಜಿಣವರು ಮುಖ್ಯ ಅತಿಥಿಗಳಾಗಿದ್ದರು. ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ಶ್ರೀ ಮೋಹ ನ ಪುತ್ರನ್‌ರವರು ಸ್ವಾಗತ ಭಾಷಣ ಮಾಡಿ ದರು. ಶ್ರೀ ಬಿ. ಎಸ್. ರಾವ್‌ರವರು ವಂದ ನೆಗೆಳನ್ನರ್ಪಿಸಿದರು.

ಎರಡನೇ ದಿನದ ನಾಟಕಕ್ಕೆ ಜನತಾ ಸ ಕ್ಕದ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನ ವರು ಅಧ್ಯಕ್ಷರಾಗಿದ್ದರು. ಅರಸು ಗರ್ಲ್ಸ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ ಶ್ರೀಮ ತಿ ಲಲಿತರಾಜ್‌ರವರು ಮುಖ್ಯ ಅತಿಥಿಗಳಾ ಗಿದ್ದರು

ಕೆನರಾ ಬ್ಯಾಂಕಿನ ಜೆಯರ್ ಮ್ಯಾನ್

ಕೆನರಾ ಬ್ಯಾಂಕಿನ ಪ್ರಕೃತದ ಚಿಯರ್ ಮ್ಯಾನ್ ಆಗಿರುವ ಶ್ರೀ ಕೆ. ಪಿ. ಜಿ ಪ್ರಭು ಅವರನ್ನು ಪೂರ್ವಾವಧಿಯ ಚಿಯರ್ ಮ್ಯಾನ್ ರಾಗಿಯೂ ಮುಖ್ಯ ಆಡಳಿತಾಧಿಕಾರಿಯಾಗಿ ಯೂ ನೇಮಿಸಲಾಗಿದೆ ಎಂದು ತಿಳಿದು ಬರು ತ್ತದೆ

ಉಡುಪಿಯಲ್ಲಿ ಪರ್ಯಾಯ ಮಹೋತ್ಸವದ ಸಿದ್ಧತೆ

ಇದೇ ತಾ. ೧೪ರಂದು ಉಡುಪಿಯ ಶ್ರೀ ಪೇಜಾವರ ಮಠದಲ್ಲಿ ಪರ್ಯಾಯ ಮಹೋತ್ಸ ವಸಮಿತಿಯ ಸಭೆಯು ಜರಗಿತು ಮುಂದಿನ ಜ ನವರಿ ೧೪ರಂದು ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ಉಡುಪಿ ಯಲ್ಲಿ ಶ್ರೀ ಸರ್ವಜ್ಞ ಪೀಠಾರ್ಯರ ಪರ್ಯಾಯ ಪೀಠಾರೋಹಣ ಮಾಡುವ ಸಮಾರಂಭದ ಬಗ್ಗೆ ನಡೆಸಬೇಕಾದ ಕಾರ್ಯಕ್ರಮಗಳನ್ನು ಈ ಸಭೆಯಲ್ಲಿ ಪರ್ಯಾಲೋಚಿಸಲಾ ಯಿತು.

ಆರಂಭದಲ್ಲಿ ಸಮಿತಿಯ ಕನ್ವೀನರ್ ಶ್ರೀ ವಿಜಯನಾಥ ಶೆಣೈಯವರು ಸಮಾರಂಭಕ್ಕೆ ಈ ವರೆಗೆ ಕೈಕೊಂಡ ಕಾರ್ಯಕ್ರಮಗಳಾಗಿರುವ ತಿಳಿಸಿ, ಮುಂದೆ ನಡೆಸಬೇಕಾದ ಸಿದ್ಧತೆ ಗಳನ್ನು ಒಂದೊಂದಾಗಿ ಸಭೆಯ ಮುಂದಿರಿ ಸಿದರು.

ಪರ್ಯಾಯ ಜಾತ್ರೆಗೆ ಉಡುಪಿಗೆ ಬರಲಿ ರುವ ಸುಮಾರು ಹತ್ತು ಹದಿನೈದು ಸಹಸ್ರ ಮಂದಿ ಯಾತ್ರಿಕರ ವಸತಿಗಾಗಿ ನಗರದ ಹಾ ಗೂ ಅಸುಪಾಸಿನ ಸ್ಥಳಗಳ ಶಾಲೆ ಕಾಲೇಜ್ ಸುತ್ತು ಇತರ ಸಂಘಸಂಸ್ಥೆಗಳ ಕಟ್ಟಡಗಳ ನ್ನು ಸೂಸಲಾಗಿಡುವ ವ್ಯವಸ್ಥೆ ಮಾಡಲಾಗಿದೆ ಯೆಂದು ಅವರು ತಿಳಿಸಿದರು. ರಥಬೀದಿಯಲ್ಲಿ ಯಾತ್ರಿಕರ ಮಾಹಿತಿ ಕೇಂದ್ರವೊಂದನ್ನು ತೆರೆಯಲಾಗುವುದು. ಈ ಕೇಂದ್ರದಲ್ಲಿ ಉಡು ಪಿಯ ಮತ್ತು ಬಸ್ಸುರೈಲು ಮತ್ತಿತರ ವಾಹ ನಗಳ ಸಂಚಾರ ಸಮಯ ದೂರ, ಹಾಗೂ ಪ್ರ ಯಾಣದ ವೆಚ್ಚವನ್ನು ಸೂಚಿಸುವ ಫಲಕ ಗಳನ್ನು ಇರಿಸಲಾಗುವುದು. ವೈದ್ಯಕೀಯ ಸ ಹಾಯ್ಯವನ್ನು ನಡೆಸುವ ತಾತ್ಕಾಲಿಕ ಕೇಂದ್ರ ವೊಂದನ್ನು ರೂಪಿಸಲಾಗುತ್ತಿದೆ. ಯಾತ್ರಿಕರು ನಗದು ಹಣವನ್ನು ಭದ್ರವಾಗಿಟ್ಟುಕೊಳ್ಳಲು ಅದನ್ನು ಆಗಾಗ ಪಡೆಯಲು ಸೌಲಭ್ಯ ಕಲ್ಪಿ ಸಲಾಗುವುದು. ಸ್ವಯಂಸೇವಕರು ಮತ್ತು ವಿಶೇಷ ಟೆಲಿಫೋನ್ ವ್ಯವಸ್ಥೆಗಳ ಸಿದ್ಧತೆಗ ಳಾಗುತ್ತಿವೆ.

ಜನವರಿ ೨೬

ಭಾರತೀಯರಾದ ನಮಗೊಂದು ಪರಮ ಪವಿತ್ರ ದಿನ. ಪ್ರಜಾರಾಜ್ಯ ದಿನೋತ್ಸವದ ಸವಿ ನೆನಪನ್ನು ಚಿರಂತನವಾಗಿರಿಸಲು

ನವಯುಗವು

ನಾಡಿನ ಸುವಿಖ್ಯಾತ ಬರಹಗಾರರ ರಾಜಕೀಯ, ಹಾಗೂ ಸಾಂಸ್ಕೃತಿಕ ಮೌಲ್ಯವಿರುವ ಲೇಖನಗಳಿಂದ ಕೂಡಿದ

ಪ್ರಜಾರಾಜ್ಯ ವಿಶೇಷ ಸಂಚಿಕೆ

ಒಂದನ್ನು ಎಂದಿನಂತೆ ಹೊರಡಿಸುವುದು.

ಕರ್ನಾಟಕದಲ್ಲೂ ಕನ್ನಡಿಗರು ನೆಲಸಿರುವ ಪ್ರತಿಯೆಡೆಯಲ್ಲೂ ವಿಶಾಲ ವಾಗಿ ಪ್ರಚಾರವಾಗುವ ಈ ಸಂಚಿಕೆಯು ಜಾಹೀರಾತಿಗೆ ಉತ್ತಮ ಮೂಲ್ಯವಾನವಾಗಿದೆ.

ಬರಗಳಿಗೆ ಬರೆಯಿರಿ:
ಮೆನೇಜರ್, ನವಯುಗ, ಉಡುಪಿ, ದ. ಕ.

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಬಂಕೆ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯ ನ್ನು ದಯಮಾಡಿ ಆದಷ್ಟು ತ್ವರ್ಯ ಕಳು ಹಿಸಿ ಕೊಟ್ಟು ಸಹಕರಿಸುವಂತೆ ಕೇಳಿ ಕೊಳ್ಳುತ್ತೇವೆ. ಎಷ್ಟಕ್ಕೂ ಪತ್ರಿಕೆ ಬೇಡ ಹೆಂದಿರುವವರು ಹಾಗೆಯೇ ನಮಗೆ ತಿಳಿ ಸಿ, ಈ ವರೆಗಿನ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾಗುವುದು.

ಮನೇಜರ್, ನವಯುಗ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

ಅವರನ್ನು ಕರೆದವರಿಲ್ಲ

(ಎರಡನೇ ಪುಟದಿಂದ)

ಲ್ಲಾ ತಿಂಡಿ ಕೊಟ್ಟಿದ್ದಾರೆ. ನಿನಗೂ ಇಟ್ಟಿದ್ದಾರೆ....ನೋಡು...'

"ನನಗೆ?"

"ನನಗೆ ಕೊಡಲಿಲ್ಲ"

'ಏಕೆ?'

'ಶಾಲೆಗೆ ಹೋಗುವವರಿಗೆ ಮಾತ್ರ ವಂತೆ.'

'ಎಂಥಾ ತಿಂಡಿ?'

'ಏನೋ ಸಿಹಿಯೂಂಟು ಎನ್ನುವಿ'

"ಬಾಗಿಲಲ್ಲಿ ಬಿದ್ದ ಚೂರನ್ನು ತಿಂದೆ. ಸಿಹಿಯೂಂಟು ಎನ್ನುವಿ' ಹೋಗು ತೆಗೆದುಕೊಂಡು ಬಾ. ಇಬ್ಬರೂ ತಿನ್ನುವ'

'ಕೇಳಿದೆ—ಕೊಡಲಿಲ್ಲ.'

"ನೀನು ಶಾಲೆಗೆ ಹೋದವನಲ್ಲವೇನಕೆ ಕೊಡಲಿಲ್ಲ?' ಲಚ್ಚಿ ಕೆದಳಿ ಕೇಳಿದಳು.

"ನಾಮ ಬರುವಾಗಲೇ ಖರ್ಚಾಯಿತಂತೆ.'

"ಅವರ ಮಕ್ಕಳಿಗೆ ಹೇಗಾದರೂ ಕೊಡುತ್ತಾರೆ....ನವಗೇ ಇಲ್ಲ'

ಶೃಂಗಿಗೂ ಕೊಟ್ಟಿರಿ?

'ಹೂಂ" ಲಚ್ಚಿ ತಲೆ ತಗ್ಗಿಸಿದಳು. ಶೃಂಗಿ ಬಾಯಿ ಚಪ್ಪರಿಸಿದನದ್ದು ಇಮ್ಮೂ ಆಕೆಯ ಕವಿಯಲ್ಲಿ ಹಾಗೆಯೇ ಧ್ವನಿಸುತಿತ್ತು.

'ಅವಳು ಶಾಲೆಗೆ ಹೋಗಿದ್ದಳೆ?'

"ಇಲ್ಲ'

"ಮತ್ತೆ ಅವಳಿಗೆ ಹೇಗೆ ಕೊಟ್ಟರು?'

"ನಮಗೂ ಅಪ್ಪ ಇದ್ದಿದ್ದರೆ ಕೊಡುತ್ತಿದ್ದರು'

'ಅಜ್ಜನೂ ಬರಲಿಲ್ಲ...ಇನ್ನೂ....' ನಿರಾಶೆಯಿಂದ ಫಿಡುಸುಯ್ದು ರಾಮು.

"ಲಚ್ಚಿ ನವಗೆ ನೋವಾದರೆ ಯಾರ ಹತ್ತಿರ ಹೇಳಬೇಕು ಹೇಳು? ನೋವೆಲ್ಲ ಮರುಕಳಿಸಿದಂತಾಯಿತು. ಕಣ್ಣಲ್ಲಿ ನೀರು ತುಂಬಿತು. ಅವಳೂ ಬೆನ್ನ ಮೇಲಿನ ಏಡಿಯ ದುರುತನ್ನು ಅವಳಿಗೆ ತೋರಿಸಿದಳು.

"ನಮ್ಮ ಅಪ್ಪ—ಸತ್ತಿದ್ದು ನಿಜವೇ?"

'ಅಜ್ಜ ಪುನಃ ಮೊನ್ನೆ ಯಾರ ಹತ್ತಿರ ಪೋ—ಹೇಳುತಿದ್ದರಲ್ಲ"

ಲಚ್ಚಿ ಬೇಲಿಯ ಬದಿಗೆ ಹೋಗಿ ಮಣ್ಣು ಕೆದರಿದಳು. ಅವಳೇ ಹೂತಿಟ್ಟ ಎರಡು ಗೇರು ಬೀಜಗಳು ದೊರೆತವು. ಎರಡು ಕಡ್ಡಿಗಳಿಂದ ಅದನ್ನು ಸುಲಿದು ರಾಮುವಿಗೆ ಒಂದನ್ನು ಕೊಟ್ಟಳು. ಹದ್ದಿನಂತೆ ಸಾದು ಎಲ್ಲಿಂದ ಬಂದನೊ, ಲಚ್ಚಿಯ ಕೈಯ್ಯನ್ನು ಕಟ್ಟೆ ಹಾರಿಸಿದ. ಬೀಜ ದೂರಕ್ಕೆ ಸಿಡಿಯಿತು. ಕೆಕ್ಕೆ ಕೊಂಡು ಮಾಯವಾಗಿ ಬಿಟ್ಟ.

ಅವನನ್ನು ನೋಡಿದೊಡನೆ ರಾಮು ಬೀಜವನ್ನು ಬಾಯಿಗೆ ಹಾಕಿ ಕೊಂಡುದರಿಂದ ಉಳಿಯಿತು. ಅದನ್ನು ಅಗಿಯುವ ಧೈರ್ಯವೂ ಇಲ್ಲದೆ ಹಾಗೆ ಇಟ್ಟುಕೊಂಡಿದ್ದ. ಬಾಯೆಲ್ಲ ಸೊನೆಯೊಗಿತ್ತು ಬೇರೆ.

ಅವನು ಮರೆಯೂದ ಮೇಲೆ ಬೀಜದ ಕಟ್ಟು ಹೊರತೆಗೆದು, ಎಂಜಲನ್ನು ಉಗಿದು ಸೊಪ್ಪೆಯನ್ನು ಅಂಗೈಯಲ್ಲಿ ತಿಕ್ಕಿ ಒರೆಸಿದ. ಲಚ್ಚಿ ಅದನ್ನೇ ಆಶಾಪೂರ್ಣ ನೋಟದಿಂದ ನೋಡುತಿದ್ದಳು. ರಾಮು ಅದನ್ನು ಭಾಗಮಾಡಿ ಅವಳಿಗರ್ಧ ಕೊಟ್ಟ ತಾನರ್ಧ ತಿಂದನು.

ಅಷ್ಟು ಹೊತ್ತಿಗಾಗಲೇ ಅವನ ಬಸ್ ಹೊಲಸಿನ ಗೆಲ್ಲಿನಲ್ಲಿ ಸ್ಟಾರ್ಟ್ ಆಗಿತ್ತು.

ಒಳಗೆ ಹೋದವಳೇ ರಾಮುವನ್ನು ಲಚ್ಚಿ ಕೂಗಿ ಕರೆದಳು.

"ಅಜ್ಜ ಬಂದಿದ್ದಾರೆssss" ಅವಳ ಬಾಯೆಲ್ಲ ಗೇಣು ಅಗಲವಾಗಿತ್ತು.

"ಅಜ್ಜ ವಿರಾಯಿ ತಂದಿದ್ದಾರೆ."

ಎಲ್ಲ ಮಕ್ಕಳಿಗೂ ಸಂಭ್ರಮವೇ ಸಂಭ್ರಮ. ಎಲ್ಲರಿಗೂ ಎರಡೆರಡು ಸಿಕ್ಕಿತ್ತು. ರಾಮು ಮಾತ್ರ ಗಟ್ಟಿನಲ್ಲಿ ಮೂರು ಪಡೆದಿದ್ದ. ಬಾಯಲ್ಲಿಟ್ಟ ಮಿಠಾಯಿ ಕ್ಷಣಕ್ಷಣಕ್ಕೂ ಕರಗುತ್ತಿತ್ತು. ರಾಮುವಿಗೆ ಅದೇ ಚಿಂತೆ. ಇದ್ದಕ್ಕಿದ್ದಂತೆ ಅದು ಖರ್ಚಾಗುವುದು ಎಂದು ಕೆಲ ಹೊತ್ತು ಅದನ್ನು ಕೈಯ್ಯಲ್ಲೇ ಹಿಡಿದು ಕೊಂಡ. ಆದರೆ ನಾಲಗೆ ಕೇಳುವುದೆ?

ಪುನಃ ಬಾಯಿಗೆ ಹಾಕಿಕೊಂಡ.

ಇದುವರೆಗೂ ಇಂಥ ರುಚಿಕರವಾದ ತಿಸಿನನ್ನು ಅವನು ತಿಂದುದೇ ಇಲ್ಲ. ಅವರಿಗೆ ತನ್ನ ಮೈಯ ಬರೆಯನ್ನೂ ತೋರಿಸಬೇಕೆಂದಿದ್ದ. ಆದರೆ ರಾತ್ರಿ ಊಟವಾದ ಬಳಿಕ ಅವನಿಗೆ ಹೇಗೆ ನಿದ್ರೆ ಬಂದಿತೊ ಏನೋ- ಅವನು ಅಜ್ಜನ ಹಾಸಿಗೆಯಲ್ಲೇ ಮಲಗಿದ್ದ. ಅವರು ರಾತ್ರಿ ಅವನ ಬೆನ್ನ ಮೇಲೆ ಕೈ ಸವರಿದಾಗ ಬೆನ್ನಲ್ಲಿದ್ದ ಬರೆಯನ್ನು ಮುಟ್ಟಿ ಅನಕ್ಕಾದರು. ತಾನು ಇಲ್ಲದಾಗ ಈ ಅನಾಥರ ಗತಿ ಏನಾದೀತು ಎಂದು ಚಿಂತಿಸಿ ಅವರಿಗೆ ನಿದ್ರೆಯೇ ಬರಲಿಲ್ಲ. ಕಿರಿಯ ಮಗ ಸತ್ತ ಎಂಟೇ ದಿನದಲ್ಲಿ ಕಿರಿಯ ಸೊಸೆಯೂ ಸತ್ತಿದ್ದಳು. ಅವಳಿಗಾ ತಂದೆತಾಯಿ ಇರಲಿಲ್ಲ. ಅಂದ ಮೇಲೆ ಇವನನ್ನು ಯಾರು ಕಾಯಬೇಕು? ಹಿರಿಯ ಎಗನಲ್ಲಿ ದಯಾದ್ಷಿಣವೇನೂ ಇರಲಿಲ್ಲ-ನಿಜ. ದೇವತಾ ಮನುಷ್ಯ. ಆದರೂ ಕರುಳಿನ ಕುಡಿಯಲ್ಲವೆ ಒಂದಾಗಿ ಏನಾದೀತು ಎಂದು ಊಹಿಸುವುದು ಅವರಿಂದ ಸಾಧ್ಯವಾಗಲಿಲ್ಲ. ಈ ಆರು ವರ್ಷದ ಕಾಲದಲ್ಲಿ ಹಿರಿಮಗ ಸೊಸೆಯರ ನಡತೆಯನ್ನು ಸೂಕ್ಷ್ಮವಾಗಿ ವಿಮರ್ಶಿಸಿ, ಮುಕ್ಕಳ ಭವಿಷವನ್ನು ನೆನೆದು ಚಿಂತಾಕ್ರಾಂತರೇ ಆದರು.

ಆದರೆ ಮಾಡುವುದೇನು?

ಅವನಾದರೂ ಹುಡುಗ, ಲಚ್ಚಿಯ ಮುಖವಿನೋರೆ, ಮದುವೆ ಬದುಕು ಸರಿಯಾಗಬೇಡವೆ? ಹೋರಿಯು ವ್ಯಾಪಾರಕ್ಕಾಗಿ ಮನೆಬಿಟ್ಟು ಅವರು ಹೋಗಿ ವಾರು ದಿನವಾಗಿತ್ತು. ಹೊತ್ತುಹೊತ್ತಿಗೆ ಅನ್ನ ನೀರಿರಲಿಲ್ಲ. ಊರೆಲ್ಲ ಅಲೆದಾಟ ಬೇರೆ.

ಮಗನನ್ನು ಬೆಳಗ್ಗೆ ಕರೆದು, ಅವರು ತಾನು ಕೊಂಡುಕೊಂಡ ಹೋರಿಗಳನ್ನು ತರಬೇಕೆಂದರು. ಒಕ್ಕಲು ಗಣಪನನ್ನು ಮಗನ ಜತೆಗೆ ಕಳುಹಿಸಿದರು. ಏಳೆಂಟು ಮೈಲು ದೂರದಿಂದ ಹೋರಿ ಬರಬೇಡವೆ? ಎರಡು ರೂಪಾಯಿಯನ್ನು ಹೆಚ್ಚಾಗಿಯೇ ಕೊಟ್ಟರು.

ಲಚ್ಚಿ ರಾಮನ ಕವಿಯಲ್ಲಿ "ಇವತ್ತು ದೊಡ್ಡಪ್ಪ ಹೋರಿಗೆ ಹೋಗಿದ್ದಾರೆ" ಅವನಿಗೂ ದೊಡ್ಡ ಬಂಧನದಿಂದ ಬಿಡುಗಡೆಯಾದಂತಾಯಿತು.

ಆದರೆ,

ವ ಧ್ಯಾಹ್ನವಾಗುವುದರ ಒಳಗೇ ಅಜ್ಜನವರು ಏಳೆಂಟು ಸಾರಿ "ಹೋರಿಗೆ"ಹೋಗಿ ಬಂದಿದ್ದರು. ಹೊತ್ತು ಇಳಿದಂತೆ ಅವರ ಶಕ್ತಿಯೂ ಇಳಿಯಿತು ಸಂಜೆ ಮಲಗಿದಲ್ಲೇ—ಅವರ ಅವಸ್ಥೆಯಾಗಿತ್ತು, ದೊಡ್ಡಪ್ಪ ಬರುವಾಗ.

ಅವರು ಹೋರಿಯನ್ನು ಹಟ್ಟಿಯಲ್ಲಿ ಕಟ್ಟದವರೆ, ಕೈಯ್ಯಲ್ಲಿ ಲಾಟಾನು ಹಿಡಿದು "ಗಣಪ, ಅಯ್ಯನಿಗೆ ಹುಶಾರು ಇಲ್ಲ. ಬಾರಕೂರಿಗೆ ಹೋಗಿ ಬರುವ. ಶಾಮಯ್ಯನ ಔಷಧ ತಂದರೆ ತಕ್ಷಣ ಗುಣವಾಗುತ್ತದೆ" ಎಂದರು. ಹಗರಿಡೀ ನಡೆದು ದಣಿದಿದ್ದರೂ ಗಣಪ, ಚಕಾರ ಶಬ್ದವೆತ್ತದೆ ಅವರ ಜತೆಯಲ್ಲಿ ಹೊರಟ.

ಶಾಮಯ್ಯನಿಗೆ ಅರ್ಧರಾತ್ರಿ ಕರೆದು ಎಬ್ಬಿಸಿ,

"ನಮ್ಮ ಅಪ್ಪಯ್ಯನಿಗೆ ಆಮಶಂಕೆ" ಎಂದು ಪೀಠಿಕೆ ಹಾಕಿ, ನಡೆದುದೆಲ್ಲವನ್ನೂ ವಿವರಿಸಿದರು.

ಶಾಮಯ್ಯನವರು ಬಹುಹೊತ್ತುಯೋಚಿಸಿ, ಮೂರ್ನೆ ರಷಾಯಗಳನ್ನು ಕೊಟ್ಟರು

"ಲಿಂಬೆಯ ಚಿಳಿಯ ರಸದಲ್ಲಿ ಈ ಬೇರನ್ನು ತೇದಿ ನೆಕ್ಕಬೇಕು." ಎಂದರು. ಅರೆನಿಮಿಷವೂ ನಿಲ್ಲದೆ ಗಣಪನೆ ಜತೆಯಲ್ಲಿ ಅವರು ಮನೆಗೆ ಬಂದರು. ಮನೆಯಲ್ಲಿ ಸದ್ದೇ ಇರಲಿಲ್ಲ.

"ಅಮ್ಮಾ....ಅಮ್ಮಾ..." ಗಣಪ ಕೂಗಿದನು.

ಹೆಂಗಸು ಎದ್ದು ಬಂದು ಬಾಗಿಲು ತೆಗೆದಳು.

"ಅಪ್ಪಯ್ಯ ಹೇಗಿದ್ದಾರೆ?"

ಅವಳ ಉತ್ತರವನ್ನು ಕಾಯದೆ ಅವನು ತಂದೆಯ ಬಳಿಗೆ ಹೋದನು. ತಂದೆ ನಿಶ್ಚಿಂತೆಯಿಂದ ಮಲಗಿದ್ದರು.

ಆನತಿ ದೂರದಲ್ಲಿ ನುಲಗಿದ್ದ ರಾಮು ವಿನ ಎದೆಯ ಮೇಲೆ ಅವರ ಕೈಯಿತ್ತು. ಅದರಿಂಚೆ ಲಚ್ಚಿ ನಿದ್ರಿಸಿದ್ದಳು.

ಅವರ ತೆರೆದ ಬಾಯನ್ನು ಕಂಡೇ ಮಗನು ಗಾಬರಿಯಾದ.

ಮುಚ್ಚಿದರೆ ಕೊರಡಾಗಿದ್ದರು.

ಮಗ ಒಂದೇ ಸಾರಿ ಚೀರಿ ಬಿಟ್ಟನು.

ಗಣಪ ಹೊರಗಿನಿಂದೇ "ಅಯ್ಯಾ—" ಎಂದ

ಆದರೆ ಅವರ ಕಥೆ ಮುಗಿದಿತ್ತು.

o o o o

ಸಾದು ಶೃಂಗಿಯೊಡನೆ ಹೇಳಿದನು 'ಅಜ್ಜ ತೀರಿದ ಮೇಲೆ ಈ ಮಕ್ಕಳು ಬೆಕ್ಕಿನ ಮರಿಯಂತಾಗಿದ್ದಾವೆ. ನಮ್ಮ ಹತ್ತಿರ ವೂಕನಾಡುವುದಕ್ಕೆ ಹೆದರುತ್ತಾವೆ!"

"ನಿನ್ನೆ ರಾತ್ರಿಯಿಡೀ ಲಚ್ಚಿಯಂತೂ ಅಜ್ಜ—ಎಂದು ಕನವರಿಸುತಿತ್ತಂತೆ"

"ಇನ್ನು ಬಲಿ ನಮ್ಮ ಸುದ್ದಿಗೆ...."

ಶಕ್ರವಾರ ಅಜ್ಜ ತೀರಿದ್ದರು. ಸೋಮವಾರ ಬೆಳಗ್ಗೆ ಮನೆ ಮುಂದಿಗೆಲ್ಲ ಎಚ್ಚರಾಗುವಾಗ ಮನೆಯ ಬಾಗಿಲು ತೆಗೆದುಕೊಂಡಿತ್ತು. ದೊಡ್ಡಪ್ಪ ನೊಡ್ಡಮ್ಮ ಗಾಬರಿಯಿಂದ ಮನೆಹುಸ್ಸೆಲ್ಲ ಶೋಧಿಸಿದರು. ಎಲ್ಲ ಸಾಮಗ್ರಿಗಳೂ ಇದ್ದಲ್ಲೇ ಇದ್ದವು.

"ಅಪ್ಪರಲ್ಲಿ ಹೊರಗಿನಿಂದ ಗಣಪ ಕರೆದಂತಾಯಿತು.

"ಅಯ್ಯ ಆ ಮಕ್ಕಳೆರಡೂ ರಸ್ತೆಯಲ್ಲಿ ಓಡುತ್ತಿದ್ದಾವಲ್ಲ....

'ಯಾಯ?

'ಲಚ್ಚಮ್ಮ ಮತ್ತು ರಾಮಯ್ಯ...'

"ಎಲ್ಲಿಗೆ?

"ಎಲ್ಲಿಗೋ ಅಪ್ಪ....ನಮ್ಮ ಹಡೆಬರೂ ಬರಲಿಲ್ಲ. ಓಡುತ್ತಾರೆ...'

"ನಿನ್ನೆ ಲಚ್ಚಿ 'ತಾವು ಓಡಿಹೋಗುತ್ತೀವೆ' ಎಂದಿದ್ದಳು. ನಾವೆಲ್ಲೇ ಹೋದೆವಾ!' ಶೃಂಗಿ ದಬ್ಬಗೂಡಿಸಿದಳು.

'ಹೋಗಿ ಅಯ್ಯ, ಕರೆತನ್ನಿ....' ಗಣಪ ಹೇಳಿದ.

"ಓಡಿ ಶಾಲು ನೋತಾಗ ವಾಪಾಸು ಬರುತ್ತಾವೆ. ಕರೆಯುವುದೇಕೆ?" ಒಳಗಿನಿಂದ ಗುಡುಗು ಮೊಳಗಿತು.

'ನಾನಾದರೂ ಕರೆದು ತರುತ್ತೇನೆ." ಎಂದು ಗಣಪ 'ಬಿಟ್ಟಿದ್ದೇ ತಪ್ಪಾಯಿತು ಆವರೆನ್ನು" ಎಂಬಂತ್ತಲ್ಲ ರಸ್ತೆಯ ತಡೆಗೆ ಓಡಿದ.

ಅಪ್ಪರಲ್ಲಿ ಅವರು ಬಹುದೂರ ಓಡಿಯಾಗಿತ್ತು.



READ & ADVERTISE IN NAVAYUGA WEEKLY

ಹದಿನೈದು

NAVAYUGA 28--12--1967
Registered with the Registrar of News Papers for India under No. K. N. 3546/'67

REGD. No. B. G. 176
LICENCE No. 31
Licensed to Post without Prepayment

ಆರೋಗ್ಯವೇ ಭಾಗ್ಯ

ತುಳಸೀ ಮಹಾತ್ಮ್ಯ

ಬರೆದವರು: ಶ್ರೀ ಎಚ್. ಎಂ. ನಾರಾಯಣ ಭಟ್.

ಹಿಂದೂಧರ್ಮದೇವಾಲಯಗಳಲ್ಲೆಲ್ಲಾ ಪೂಜೆಗೆ ಅನಿವಾರ್ಯವಾದುದೂ ಹಿಂದೂಗಳಿಂದ ಪೂಜಿಸಲ್ಪಡುವುದೂ ಆದ ಒಂದು ಸಸಿ ತುಳಸಿ. ಕ್ಷಯ ಮತ್ತಿತರ ಕಫ ಸಂಬಂಧ ಕಾಯಿಲೆಗಳಿಗೆ ಪೂರ್ವಿಕರು ಉಪಯೋಗಿಸುತ್ತಾ ಬಂದುದು ತುಳಸಿಯನ್ನೇ! ಹೀಗಾಗಿ ಈ ಸಸಿಯ ಎಲೆ ಹಾಕಿದ ನೀರು ತೀರ್ಥವೆಂದೂ ಅದನ್ನು ಕುಡಿದರೆ ಮೋಕ್ಷ ಸಿದ್ಧಿಯೆಂದೂ, ಪೂಜಿಸಿದರೆ ವೈಕುಂಠ ಸಿದ್ಧಿಯೆಂದೂ ಪ್ರಚಾರವಾದುದು. ಆ ಪ್ರಚಾರ ಶಕ್ತಿಯಿಂದಾಗಿ ಇಂದೂ ಹಿಂದೂಗಳು ತುಳಸೀ ಗಿಡಗಳನ್ನು ರಕ್ಷಿಸುತ್ತಾರೆ —ಪೂಜಿಸುತ್ತಾರೆ.

ತುಳಸೀ ಗಿಡಗಳಲ್ಲಿ ಆರು ವರ್ಗಗಳಿವೆ. ಸಾಮಾನ್ಯವಾಗಿ ಪ್ರತಿ ವರ್ಗದಲ್ಲಿಯೂ ಆಡಗಿರುವ ಔಷಧ ಗುಣ ಸಮಾನವಾದರೂ ಬಿಳಿ ತುಳಸಿ, ಕೃಷ್ಣ (ಕರಿ) ತುಳಸಿ, ಕರ್ಪೂರ ತುಳಸಿಗಳನ್ನು ಮೂಶ್ಯವೇ ಯಜ್ಞಾದಿ ಪೂಜೆಗೆ ಉಪಯೋಗಿಸುವುದೂ ಪೂಜಿಸುವುದೂ! ಆದರೆ ವೈದ್ಯರು ಈ ತುಳಸಿಗಿಡಗಳಲ್ಲಿ ವಿಭಿನ್ನ ಔಷಧ ಗುಣಗಳನ್ನು ಕಂಡಿರುವರು.

ಜಲಶುದ್ಧಿಗೆ

ಪೂರ್ವಿಕರು ಜಲ ಶುದ್ಧಿ ಮಾಡಲೂ ಶರೀರದಲ್ಲಿನ ಜಲಾಂಶವನ್ನು ಶುದ್ಧೀಕರಿಸಲೂ ಜಲದೋಷದಿಂದಾಗಿ ಕಫವಾಗಿ ಖಾಸ ಭೇದವಾಗಿ, ಕ್ಷಯವಾಗಿ ವಾಸಿಯಾಗುವ ರೋಗಾಣುಗಳ ಸಂಹಾರ ಮಾಡಲು ಪ್ರಥಾಪವಾಗಿ ತುಳಸಿಯನ್ನು ಉಪಯೋಗಿಸುತ್ತಾ ಬಂದರು ಈಗಲೂ ವೈದಿಕ ಸಂಸ್ಕಾರಗಳಲ್ಲೂ ಪೂಜೆ ಅರ್ಚನಾದಿಗಳಲ್ಲೂ ಉಪಯೋಗದಲ್ಲಿದೆ. "ತುಳಸಿಯಿಲ್ಲದ ಪೂಜೆಯಿಲ್ಲ; ಶುಂಠಿಯಿಲ್ಲದ ರಸಾಯವಿಲ್ಲ" ಎಂಬುದು ಹಳೆಯ ನಾಣ್ಣುಡಿ. 'ಶ್ರೀ ವಿಷ್ಣುವೆ ಸದಾ ತುಲಸೀ ಮೂಲಧಾರಿ"ಯಾಗಿದ್ದನು; ತುಲಸೀ ಮಣಿಗಳ ಮಾಲೆಗಳನ್ನು ಈಗಲೂ ಹಲವರು ಧರಿಸುತ್ತಿದ್ದಾರೆ. ದಾನ, ದಕ್ಷಿಣೆಗಳನ್ನು "ದತ್ತ" ನೂಡುವಾಗಲೂ ತುಳಸಿ ಬೇಕು. ಕೊನೆಯುಸಿರೆಳೆವಾಗ ಅನೇಕ "ತುಳಸೀ ನೀರು" ಕುಡಿಸುವರು.

ದೇವಸ್ಥಾನದಿಂದ ನೀಡುವ ಪ್ರಸಾದ ತೀರ್ಥಗಳಲ್ಲಿ ತುಳಸಿಯಿರುತ್ತದೆ.

ಪುನರ್ಜನ್ಮವಿದ್ದಿಗೆ— ಅದರಲ್ಲಿ ನೋಶ್ಯ ಸಾಧನೆಗಾಗಿಯೂ ತುಳಸಿಗೆ ಪ್ರಥಾಪ ಸ್ಥಾನ ಕಲ್ಪಿಸಲಾಗಿದೆ. ಪುನರ್ಜನ್ಮವು ಸಂತತಿಯು, ಸ್ವರ್ಗ ಕುಟುಂಬವು ಆದ್ದರಿಂದ ಸಂತಾನಾಭಿವೃದ್ಧಿಗೂ ತುಳಸಿ ಸಹಾಯಕವೆಂದು ನಂಬಲಾಗಿದೆ.

ಒಂದು ವಿಶ್ವಾಸ

ಮನೆಯಂಗಳದಲ್ಲಿ ತುಳಸೀ ಗಿಡವಿದ್ದರೆ ಆ ಮನೆಗೆ ಸಿಡಿಲು, ಮಿಂಚುಗಳ ಬಾಧೆಯಿರದೆಂದೂ ಹಲವರ ವಿಶ್ವಾಸವಿದೆ. ವರುಣನಿಂದ ಬರಬಹುದಾದ ಎಲ್ಲಾ ವಿಪತ್ತುಗಳನ್ನೂ ತಡೆಯುವ ದಿವ್ಯ ಶಕ್ತಿ—ಅದ್ಭುತಶಕ್ತಿ ತುಳಸಿಗಿದೆಯೆಂದೂ ಹೇಳುವರು. ಹಳ್ಳಿ ಪಟ್ಟಣಗಳೆಂಬ ಭೇದವಿಲ್ಲದೆ ಹೆಚ್ಚಿನ ಮನೆಗಳಿದಿರಲ್ಲೂ (ಅಂಗಳಗಳಲ್ಲಿ) ತುಳಸೀ ಕಟ್ಟೆಗೆ ಪ್ರಾಧಾನ್ಯತೆ ಕಲ್ಪಿಸಲಾಗುತ್ತಿದೆ.

ಅನೇಕ ವಿಧದ ಸಾಂಕ್ರಾಮಿಕ ರೋಗಾಣುಗಳನ್ನೂ ಸಂಹರಿಸುವ ಶಕ್ತಿಯಿದೆಯೆಂದೇ ತುಳಸೀ ಗಿಡಗಳಿಗೆ ಮನೆಗಳ ಸವಿಾಪದಲ್ಲೇ ಆಶ್ರಯ ನೀಡುವುದೂ ಅವನ್ನು ಬೆಳೆಸುವುದೂ!

ಪ್ರಾಣ ವಾಯುವನ್ನು ಉತ್ಪಾದಿಸುವ ಶಕ್ತಿ 'ತುಪ್ಪ ದೀಪ'ಕ್ಕಿದೆ. ಅದೇ ಶಕ್ತಿ ತುಳಸಿಗೂ ಇದೆ. ಆದ್ದರಿಂದಲೇ ತುಳಸಿಗೆ ದೀಪವಿರಿಸಿ ಕಟ್ಟೆಗೆ ಪ್ರದಕ್ಷಿಣೆ ಬರುವ ಸಂಪ್ರದಾಯ ಬೆಳೆದಿದೆ. ಸಾಧಾರಣವಾಗಿ ಇಳಿ ವಯಸ್ಸಿನವರಿಗೆಯೇ ಅತಿ ಹೆಚ್ಚು ಪ್ರಾಣವಾಯು ಸೇವನೆ ಅಗತ್ಯವಾದುದರಿಂದಾಗಿ ಪ್ರಾಯಸ್ಥರೇ ಹೀಗೆ ತುಳಸೀ ಕಟ್ಟೆಯಲ್ಲಿ ದೀಪ ಇರಿಸಿ ಪ್ರದಕ್ಷಿಣೆ ಬರುವರು.

ಆಯುರ್ವೇದದಲ್ಲಿ

ಜ್ವರಗಳಿಗೂ ಕವಿ ಸೋರುವಿಕೆಗೂ, ಮಲ ಬದ್ಧತೆಗೂ, ಮೂತ್ರ ಬದ್ಧತೆಗೂ ತುಳಸಿಯನ್ನು ಔಷಧವಾಗಿ ಆಯುರ್ವೇದ ವೈದ್ಯರು ಉಪಯೋಗಿಸುತ್ತಾರೆ. ವಾಂತಿಯನ್ನೂ ತಡೆಗಟ್ಟುವ ಶಕ್ತಿ ತುಳಸಿಗಿದೆ. ಆಂಗ್ಲ ವೈದ್ಯರೂ ತುಳಸಿಯು ಈ ಪ್ರಯೋಜನಗಳನ್ನು ತಿಳಿದಿರುವರೆಂದು ಓರ್ವ ವೈದ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ನಮ್ಮ ಪೂರ್ವಿಕರು ದೀರ್ಘಾಯುಸ್ಸಿನ ರಹಸ್ಯವನ್ನು ಕಂಡು ಹಿಡಿಯಲು ಹಲವು ಪರಿಶ್ರಮಗಳನ್ನೂ ಮಾಡಿದ್ದರು. ರಕ್ತ ಶೀಡಿ ಹಲವು ರೋಗಗಳನ್ನೂ ಅವರು ನಿವಾರಿಸಿದ್ದರು. ಮನುಷ್ಯನಿಗೆ ನೀಡಲು ಮನುಷ್ಯನ ರಕ್ತದ ಬದಲು ಮೃಗಗಳ —ಪಕ್ಷಿಗಳ ರಕ್ತಗಳ ಪ್ರಯೋಗದ ಬಗ್ಗೆ ಹಲವು ಸಂಶೋಧನೆಗಳನ್ನು ಕೈಗೊಂಡಿದ್ದರು.

ಅರಸಿವನ್ನೂ ಸುಣ್ಣವನ್ನೂ ಬೆರೆಸಿ (ಕುರುದು) ಪ್ರಾಚೀನ ತಯಾರಿಸಿ ಅದನ್ನೂ ಮನುಷ್ಯ ಶರೀರಕ್ಕೆ ಹೊಗಿಸಿ ಪರಿಶೋಧಿಸಿದ್ದರು. ಮೃತಪಟ್ಟವರ ತಲೆ, ಕಣ್ಣು, ಮೂಗು, ಎಲುಬು ಇತ್ಯಾದಿ ಅವಯವಗಳನ್ನು ಬೇರ್ಪಡಿಸಿ ಜಾಗರೂಕತೆಯಿಂದ ತೆಗೆದಿರಿಸಿ ಅಂಡವಿಕಲರಾದ (ಅವಘಡಗಳಿಂದಾಗಿ)ವರನ್ನು ರಕ್ಷಿಸಿದ್ದರು.

ಈಗ ನಾವು ಕಾಣುವ "ಕಾಲೇಜ್ಗೇಶ್ಯ"ಗಳು ಆ ಹಳೆಯ ಕಾಲದ "ಸಂಶೋಧನಾಲಯ"ಗಳೋ "ಪ್ರಯೋಗಶಾಲೆ"ಗಳೋ 'ಅವಯವ ಶಾಲೆ"ಗಳೋ ಆಗಿದ್ದಿರಲೂ ಬಹುದೆಂದು ಸಂಧಾನಗಾರ ವೈದ್ಯ ಒಬ್ಬ ವೈದ್ಯರು ಹೇಳಿದ ನೆನಪಿದೆ.

ವಿವಿಧ ಪ್ರಯೋಜನಗಳು

ತುಳಸೀ ದಳ ಹಾಕಿ ಕುದಿಸಿದ ನೀರಿನ ಅವಿಯನ್ನು ಮುಖಕ್ಕೆ ಒದ್ದಿದರೆ 'ಜಲದೋಷ' ಬಾಧೆಹರ. ತುಳಸೀ ಕಷಾಯವನ್ನು ಬಿಡದೆ ಸೇವಿಸಿದರೆ ಅನೇಕ ವಿಧದ ಖಾಸ ರೋಗಗಳ ನಿವಾರಣೆ. ಎಲೆಗಳನ್ನು ಬಿಳುಕಿ ಮೂಸಿದರೆ ಶೀತಬಾಧೆ ಕಡಿಮೆಯಾಗುವುದು.

ತುಳಸೀ ದಳವನ್ನೂ ಬಿದಿರ ಸೊಪ್ಪನ್ನೂ (ನೆಲ್ಲಿಕಾಯಿ ಗಾತ್ರದಲ್ಲಿ)ಅರೆದು ಸೇವಿಸಿದರೆ 'ಕೇನ್ಸರ್' (ಅರ್ಬದ) ರೋಗ ಶಮನವೆಂದೂ 'ಕೇನ್ಸರ್' ಹುಣ್ಣಿಗೆ ತುಳಸಿಯನ್ನು ಅರೆದು ಲೇಪಿಸುವುದು ಹಿತಕರವೆಂದೂ ವೈದ್ಯರ ಅಭಿಪ್ರಾಯ. ತುರಿಕಜ್ಜಿ, ಹುಳುಕಡಿಗೂ ಹಿತ.

ತಲೆ ದಿಂಬಿನ ಮೇಲೆ ತುಳಸೀ ದಳಗಳನ್ನು ಚದರಿ ಬಿಳಿ ವಸ್ತ್ರ ಮುಸುಕು ಅದರ ಮೇಲೆ ತಲೆಯಿಟ್ಟು ಮಲಗುತ್ತಿದ್ದರೆ ಕೆಲವೇ ದಿನಗಳಲ್ಲಿ ತಲೆ ಕೂದಲುಗಳೆಡೆಯಲ್ಲಿನ ಹೇನಿನ ಮೊಟ್ಟೆಗಳೂ ಮರಿಗಳೂ ಹೇನುಗಳೂ ನಾಶವಾಗುವವಂತೆ.

ತುಳಸೀರಸವನ್ನ (ಸ್ವಲ್ಪ) ದಿನಾಲೂ ಕೊಟ್ಟರೆ ಸಣ್ಣ ಮಕ್ಕಳ ಕಫ ಧಾಳೆ ಹರಿಹಾರವಾದೀತು. ಮಕ್ಕಳೂ ಆರೋಗ್ಯವಂತರಾಗುವರು.

ಎಳ್ಳು, ಗರಿಕೆ, ಶ್ರೀಗಂಧ, ತುಳಸಿ ಇವುಗಳ ರಸಾಯವನ್ನು ಸೇವಿಸಿದರೆ ಶ.ಕ್ಲ ದೋಷ ಪರಿಹಾರ, ಗರ್ಭಾಶಯದ ಕೆಲವು ಅಸ್ವಸ್ಥಿತಗಳಿಗೂ ಗುಣ.

ತುಳಸೀ ಕಷಾಯ ಹಲವು ವಿಧದ ಜ್ವರಗಳಿಗೂ "ರಾಮಬಾಣ' ವೆನ್ನಲಾಗಿದೆ.

ತುಳಸೀ ಕಷಾಯದಲ್ಲಿ ತೃಫಲ ಚೂರ್ಣ ಬೆರೆಸಿ ದಿನಕ್ಕೆ ಮೂರಾವರ್ತಿ ಸೇವಿಸಿದರೆ ಆರಂಭದಸೆಯ ಕ್ಷಯ ರೋಗವೂ ನಿವಾರಣೆಯಾಗುವುದಂತೆ.

ತುಳಸೀ ದಳಗಳನ್ನು ಅರೆದು (ನೆಲ್ಲಿಕಾಯಿ ಗಾತ್ರದಲ್ಲಿ) 'ಅನ್ನ ಭೇದಿ' ಯೆಂದಿಗೆ ಬೆರೆಸಿ ಸೇವಿಸಿದರೆ, ಅರಸಿವ ಮಂಡಿಗೆ ರೋಗವೂ ಬಲು ಬೇಗನೇ ನಿವಾರಣೆಯಾಗುವುದಂತೆ. ರಕ್ತ ಶುದ್ಧಿಗೂ ಹಿತಕರ. ತುಳಸೀ ರಸವನ್ನು ಕವಿಗೆ ಎರೆದರೆ ಕವಿ ಸೋರುವಿಕೆ ಶಮನವಾದೀತು.

ಪ್ರಾತಃ ಸ್ನಾನವಾದೊಡನೆಯೇ ಬಾಯಿ ತೊಳೆದಾಗ ನಾಲ್ಕೈದು ತುಳಸೀ ಎಲೆಗಳನ್ನು ತಿಂದರೆ ಉದರ ರೋಗಗಳೇ ಉಂಟಾಗದೆನ್ನುವರು.

ತುಳಸೀ ದಳವನ್ನು ತಲೆ ಕೂದಲುಗಳೆಡೆಯಲ್ಲಿರಿಸಿದರೆ (ಮುಡಿದರೆ) ಹೇನುಗಳು ನಾಶವಾಗುವುದಂತೆ.

ತುಳಸೀ ತೀರ್ಥ ಮತ್ತು ತುಳಸೀದಳ ಸೇವನೆ ತುರಿ, ಕಜ್ಜಿ, ವ್ರಣ ಮತ್ತು ಸಾಂಕ್ರಾಮಿಕ ರೋಗಗಳಿಗೂ ಪ್ರತಿಬಂಧಕ.

ಇಷ್ಟೆಲ್ಲಾ ಔಷಧ ಗುಣಗಳುಳ್ಳ ತುಳಸಿಯ ಮಹತ್ವವನ್ನು ತಿಳಿದರೆ ಯಾರು ತಾನೇ ತುಳಸಿಯನ್ನು ಪೂಜಿಸದಿರುವರು?

(—ಸಾಗ್ರಹ)

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ ರೂ. ೨-೦೦ [ಟ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ॥ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

'Ably written- Quite up-to-date valuable service'

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಸಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹಪಯೋಗಿ.

ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨-೦೦ (ಟ್ಯಾಕ್ಸ್ ಬೇರೆ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Printed & Published by K. H. Shetty at the Navayuga Press, Udipi, S. India.